# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೨೮

## ಶುಭ ಸಂದೇಶ

**ಬಿ.ಎಸ್. ಯಡಿಯೂರಪ್ಪ**
ವಿಧಾನ ಸೌಧ
ಮುಖ್ಯಮಂತ್ರಿ

ಬೆಂಗಳೂರು - ೫೬೦ ೦೦೧
ದಿನಾಂಕ : ೧೬-೦೯-೨೦೦೯

**ಶುಭ ಸಂದೇಶ**

ಸಾವಿರಾರು ವರ್ಷಗಳ ಇತಿಹಾಸವಿರುವ, ಎಲ್ಲ ವಿದ್ಯೆಗಳ ತೊಟ್ಟಿಲಾಗಿರುವ, ಕನ್ನಡ ಸಂಸ್ಕೃತಿಯ ಖಜಾನೆಯಾಗಿರುವ ಜಾನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **"ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯವರು ಹೊರತರುತ್ತಿರುವುದು ಸಂತಸದ ಸಂಗತಿ.

**"ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್"** ಎಂಬ ವ್ಯಾಖ್ಯಾನ ನಮ್ಮ ಜಾನಪದ ಸಾಹಿತ್ಯದ ಸಾರವಾಗಿದೆ. ಕನ್ನಡ ನೆಲ-ಜಲ-ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು, ನಿಜಕ್ಕೂ ನಾಡಿನ ಸಾಹಿತ್ಯಕ ಹಾಗೂ ಜಾನಪದ ಲೋಕಕ್ಕೆ ಒಂದು ಕೊಡುಗೆಯಾಗಲಿವೆ.

ಈ ಯೋಜನೆಗೆ ಶ್ರಮಿಸಿರುವ ಎಲ್ಲರಿಗೂ ಅಭಿನಂದನೆಗಳು. "ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ" ಯೋಜನೆಗೆ ಶುಭ ಹಾರೈಕೆಗಳು.

**(ಬಿ.ಎಸ್. ಯಡಿಯೂರಪ್ಪ)**

## ಅನುಬಂಧ : ಸಂಪುಟ ಸಂಪಾದನೆಯ ಆಕರ ಕೃತಿಗಳು


೧.ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಸಂ : ಕ್ಯಾತನಹಳ್ಳಿ ರಾಮಣ್ಣ
ಪ್ರ : ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨.ಜೀವನ ಸಂಗೀತ, ಸಂ : ಸಿಂಪಿ ಲಿಂಗಣ್ಣ ಮತ್ತು ಪಿ. ಧೂಲಾ
ಪ್ರ : ಸಮಾಜ ಪುಸ್ತಕಾಲಯ, ಧಾರವಾಡ

೩.ಸರ್ವೋದಯ ಗ್ರಾಮೀಣ ಜನಪದ ಗೀತೆಗಳು : ಹುಲಕುಂದ ಭೀಮಕವಿ
ಪ್ರ : ಕರ್ನಾಟಕ ಸರ್ವೋದಯ ಸಾಹಿತ್ಯ ಮಂದಿರ, ಬೆಂಗಳೂರು.

೪.ಕವಿ ಬಾಳಗೋಪಾಲನ ಲಾವಣಿಗಳು, ಸಂ : ನಿಂಗಣ್ಣ ಸಣ್ಣಕ್ಕಿ
ಪ್ರ : ಸಮಾಜ ಪುಸ್ತಕಾಲಯ ಧಾರವಾಡ

೫.ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ, ಸಂ : ನಿಂಗಣ್ಣ ಸಣ್ಣಕ್ಕಿ
ಪ್ರ : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಜಯೋತ್ಸವ ಸಮಿತಿ, ಬೆಳಗಾವಿ.

೬.ಲಿಂಗರಾಜ ವಿಜಯ ಕಾವ್ಯ ಹಾಗೂ ಕೆಲವು ಲಾವಣಿಗಳು, ಸಂ : ಲಕ್ಕ್ ಅ.ಶಿರಹಟ್ಟಿ
ಪ್ರ : ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

೭.ಚಾಪ ಹಾಕತೀವಿ ಡಪ್ಪಿನ ಮ್ಯಾಲ : ಡಾ.ಸಂಗಮೇಶ ಬಿರಾದಾರ
ಪ್ರ : ಗೆಳೆಯರ ಬಳಗ, ತುಂಗಳ ತಾ. ಜಮಖಂಡಿ

೮.ಜಾನಪದ ಝೇಂಕಾರ, ಸಂ : ಎ.ಜಿ. ನೀಲಗಾರ
ಪ್ರ : ಜಾಗೃತ ಭಾರತ, ಧಾರವಾಡ

೯.ಕ್ರಾಂತಿವೀರ ಬಾಬಾಸಾಹೇಬ ಸಂ : ಎ.ಎಸ್. ಹೂಗಾರ
ಪ್ರ : ಬಾಬಾಸಾಹೇಬ ಗ್ರಂಥ ಪ್ರಕಾಶನ, ನರಗುಂದ

೧೦.ರಾಷ್ಟ್ರ ಗೀತಾವಳಿ : ನಲವಡಿ ಶ್ರೀಕಂಠಶಾಸ್ತ್ರಿ
ಪ್ರ : ಪಿ.ಸಿ. ಶಾಬಾದಿಮಠ ಬುಕ್ ಡಿಪೋ, ಗದಗ

೧೧.ಹೈದ್ರಾಬಾದ್ ರಜಾಕಾರ ಲಾವಣಿ : ನಲವಡಿ ಶ್ರೀಕಂಠಶಾಸ್ತ್ರಿ
ಪ್ರ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨.ಧರ್ಮದ್ರೋಹ : ನಲವಡಿ ಶ್ರೀಕಂಠಶಾಸ್ತ್ರಿ
ಪ್ರ : ಪಿ.ಸಿ. ಶಾಬಾದಿಮಠ ಬುಕ್ ಡಿಪೋ, ಗದಗ

೧೩.ಮರಿಕಲ್ಲ ಕವಿಯ ಗೀಗೀ ಪದಗಳು, ಸಂ : ಡಾ. ಬಸವರಾಜ ಮಲಶೆಟ್ಟಿ
ಪ್ರ : ಬಸವೇಶ್ವರ ಪ್ರಕಾಶನ, ತಿಗಡೊಳ್ಳಿ, ಜಿ. ಬೆಳಗಾವಿ

೧೪.ಶರಣ ಸ್ಮೃತಿ, ಸಂ : ಡಾ. ಎಂ.ಎನ್.ವಾಲಿ
ಪ್ರ : ಭುವನೇಶ್ವರಿ ಪ್ರಕಾಶನ, ಬಿಜಾಪುರ

೧೫.ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ : ಡಾ.ಶಿವಾನಂದ ಗುಬ್ಬಣ್ಣವರ
ಪ್ರ : ಅಕ್ಷಯ ಪ್ರಕಾಶನ, ಧಾರವಾಡ

೧೬.ಜಾನಪದ ವ್ಯಾಸಂಗ : ಸೋಮಶೇಖರ ಇಮ್ರಾಪುರ

೧೭.ಜಾನಪದ ಸಾಹಿತ್ಯ ದರ್ಶನ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೮.ಲಾವಣಿ - ಡಾ. ಶ್ರೀರಾಮ ಇಟ್ಟಣ್ಣವರ

೧೯.'ಲಾವಣಿ ಸಾಹಿತ್ಯ' - ಡಾ. ಶ್ರೀಕಂಠ ಕೂಡಿಗೆ.

# ನೀತಿ

## ೧. ಆಧ್ಯಾತ್ಮದ ಪದ-೧

ಆಧ್ಯಾತ್ಮ ವಿಚಾರಗಳ ಉದ್ದೇಶಗಳ ಸರಳ
ಶ್ರದ್ಧಾದಿಂದ ಕೂತ ಕೇಳಬೇಕ
ಬುದ್ಧಿವೃದ್ಧಿಯಾಗುದಕ್ಕ ಶುದ್ಧಾಚರಣೆ ಮುಖ್ಯ
ಮುದ್ದಾಂ ತಿದ್ದಿ ನೋಡ ಚೊಕ್ಕ || ಪ ||

ಪ್ರತಿನಿತ್ಯ ತಪ್ಪದಲೆ ಸ್ವತಾ ಏಳಬೇಕ
ಪ್ರಾಥಃಕಾಲ ನಾಲ್ಕ ಘಂಟೇಕ
ಅತಿ ಉತ್ತಮನಾದ ಪ್ರಾರ್ಥನೆ ಸಮಯ ಅದು
ಚಿತ್ತ ಶುದ್ಧಿಯಾಗುವದಕ್ಕ ||
ಪೂರ್ವಾಭಿಮುಖವಾಗಿ ಸರ್ವಾಂಗ ಆಸನ ಹಾಕ
ಸರ್ವೇಶನ ಧ್ಯಾನಕ ಠೀಕ
ಸರ್ವ ವಿಧದಿಂದ ಪ್ರಾಣಾಯಾಮ ಮಾಡ
ಭರಪೂರ ಶರೀರ ರಕ್ಷಣಕ ||
ಶ್ರೀರಾಮ ಹರಿ ಓಂ ನಮಃ ಶಿವಾಯ
ಯಾವದಾದರು ¡ಂತ್ರ ಜಪಿಸುದಕ್ಕ
ನೂರಾ ಎಂಟರಿಂದ ಎಪ್ಪತ್ತೋಂದ ಸಾವಿರದಾ
ಆರನೂರ ಲೆಖ್ಖ ಆಗಲಿ ಪಕ್ಕ ||

**||ಚಾಲ||**

ವ್ಯಾಯಾಮ ಜಪತಪ ಮಾಡುದಕ
ಖಾಯಮ ಪರಭಾರ ಖೋಲಿ ಬೇಕ ||
ಮಿತ ಆಹಾರ ಇರಬೇಕ ಸಾತ್ವಿಕ
ಅತಿ ಉಂಡರ ತಟ್ಟುದು ಪಾಪದ ಶಕ ||
ಪ್ರತಿ ತಿಂಗಳ ಪ್ರತಿ ದಿವಸಕ
ಶಕ್ತ್ಯಾನುಸಾರ ದಾನಕೊಟ್ರ ಸುಖ ||

**||ಏರ||**

ಶುದ್ಧ ವಿಚಾರದಿಂದ ಗ್ರಂಥ ಅಧ್ಯಯನ ಮಾಡ
ದಿನಂಪ್ರತಿ ಅರ್ಧಘಂಟೆಯಾದರು ಸಾಕ|| ೧ ||

ಬ್ರಹ್ಮಚರ್ಯವೇ ಜೀವನ ವೀರ್ಯ ನಾಶವೇ ಮೃತ್ಯು
ಸಾರುವದು ಹಿಂಗ ಶಾಸ್ತ್ರದೊಳಗ
ಬ್ರಹ್ಮಜ್ಞಾನಿಯಾಗುದಕ್ಕ  ವೀರ್ಯ ಕಾಪಾಡಬೇಕ
ಸರ್ವ ಸುಖ ದೊರಿಯುದು ಅವಗ ||
ದುರಾಚಾರ ದುರ್ಘಟ ದುರ್ಗುಣ ದುರಭ್ಯಾಸ
ಇರಬಾರ್ದ ಕೆಟ್ಟ ದುಸ್ಸಂಗ
ಪರೋಪಕಾರ ಸುವಿಚಾರ ಸದಾಚಾರ ಬರೋಬರಿ
ಪರಿಶುದ್ಧವಾದ ಸತ್ಸಂಗ ||
ಪ್ರಾರ್ಥನ ಸ್ತೋತ್ರ ಶ್ಲೋಕ ಬಾಯಿಪಾಠ ಮಾಡಿಕೊಂಡ
ಅರ್ಥ ತಿಳಿಕೊಂಡು ಆರಂಭವಾಗಲಿ
ಆಸನ ಮೇಲೆ ಕುಳತಾಗ ||

**||ಚಾಲ||**

ದರವಂದ ಏಕಾದಶಿ ದಿವಸ
ನಿರಾಹಾರ ಇದ್ದರ ಫಾಸ
ಹಾಲು ಹಂಣ ತಕ್ಕೊಂಡರ ತುಸ
ಚಲೋ ಆಗುದು ಸರಳ ಮನಸ ||
ದಿನ ಎರಡ ಘಂಟೆ ಮೌನ ಪಾಲಿಸ
ಏನೇನು ಆಗುದಿಲ್ಲ ತ್ರಾಸ ||

**||ಏರು||**

ಸದಾ ಸತ್ಯ ನುಡಿ ಮಧುರ ವಚನಗಳಾಡಿ
ಉದಾರತನದಲ್ಲಿ ಮನ ನೂಕ  || ೨ ||

ಸಾಮಾನ್ಯ ಜೀವನ ಪಾಡ ಸಾದಾ ಅರಿವಿ
ಉಡತೊಡ ಭಾವನೆ ಸ್ವಚ್ಛ ಇರಬೇಕ ತ್ಯಾಗಿ
ಪ್ರೇಮ ದಯ ಕ್ಷಮೆಯಿಂದ ಕಾಮ ಕ್ರೋಧವ
ತಡದ ಅಹಿಂಸಾ ಮಾರ್ಗಕೆ ಹೋಗ ಸಾಗಿ ||
ಸೇವಾ ಮಾಡಿಸಿಕೊಳ್ಳುವ ಅವಲಂಬನೆಯ ಬಿಟ್ಟು
ಕಾಯಕ ಸ್ವಾವಲಂಬನೆಯಾಗಿ
ದೇವರ ಧ್ಯಾನ ನಿವಳ ಮಲಗುವಾಗ ಏಳುವಾಗ

ಕಾಯುವನು ಭಕ್ತರ ಆಳಾಗಿ ||
ಮಾಡಿದಂಥ ಕಾರ್ಯಗಳು ಮಲಗುವಾಗ ಡಾಯರಿ ಬರಿ
ಪ್ರಾಯಶ್ಚಿತ ಹೊಂದ ತಪ್ಪಿಗಾಗಿ
ನೋಡಿಕೊಂಡ ಅಪರಾಧ ಮೊದಲಿನಂತೆ ಮತ್ತೊಮ್ಮೆ
ಆಗದಂತೆ ಇರ ಎಚ್ಚರಾಗಿ ||

**||ಚಾಲ||**

ಸ್ಮರಣೆ ಇರಲಿ ಮರಣ ತಪ್ಪಿದ್ದಲ್ಲಾ
ಶರೀರಿರುದರೊಳು ಅರಿತರ ಮೇಲಾ ||
ಮನಸ್ಸಿಗೆ ಸಲಿಗಿ ಕೊಡುದಲ್ಲಾ
ಜ್ಞಾನಿಗಳು ಹೇಳ್ಯಾರ ಈ ಕುಶಲಾ ||
ಕನ್ನಡ ನಾಡಿನಲ್ಲಿ ಹುಲಕುಂದ ಮಿಗಿಲಾ
ಭೀಮೇಶ ಹೇಳಿದ ಅಖಲಾ ||

**||ಏರು||**

ಸಾಧ್ಯವಿದ್ದ ಅನುಭವ ಪದ್ಯರೂಪದಿಂದ ಕೇಳಿ
ತಜ್ಞರಿಗೆ ಆಯ್ತು ಮನಸಿನ ತಕ್ಕಾ|| ೩ ||

***ರಚನೆ :* ಹುಲಕುಂದ ಭೀಮಕವಿ**
***ಕೃತಿ :* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು**

## ೧. ಆಧ್ಯಾತ್ಮದ ಪದ - ೧

ಜಗದ್ವ್ಯಾಪಿ ಜಗದ್ಗುರು ಜಗದ್ರಕ್ಷಕಾ
ಸಾಂಬನಿಂದ ಆತ ಜಗದ ಉತ್ಪತ್ತಿ
ಸರ್ವ ಜೀವರಾಶಿಗಳಿಗೆ ಪರಮಾತ್ಮಗತಿ
ಸದಾ ನೆನಿಯಬೇಕ ಶಿವನಾಮ ಸ್ತುತಿ ॥
ಗುರುವಿನ ಧ್ಯಾನಾ ಮರಿಬ್ಯಾಡೊ ಮಾನವಾ
ಗುರುವಿನಿಂದ ಆಗೋದು ಮುಕ್ತಿ
ಹೀಂಗ ಹೇಳತೈತಿ ಶಾಸ್ತ್ರದ ರೀತಿ ॥
ಎಂಭತ್ತ ನಾಲ್ಕ ಲಕ್ಷ ಯೋನಿ ತಿರಗಿ ಬಂದಿ

ಆಗ ಜ್ಞಾನ ಇದ್ದಿದ್ದಿಲ್ಲ ನಿನ್ನಹಂತಿ
ಈಗ ಮತ್ತ ಮಾನವ ಜನ್ಮ ಬಂದೈತಿ ಹಿಂದಿಂದ ಮರತಿ
ತಿಳದನೋಡೊ ಸ್ಥಿರವಲ್ಲ ಮಂದಮತಿ ॥

ಸಾಧು ಸಂತರು ಸಾರಿ ಸಾರಿ ಹೇಳತಾರ
ಹುಟ್ಟೋದು ಸಾಯೋದು ನಡದೈತಿ
ಎಂದ ಬಿಟ್ಟsತಿ ॥
ಆಸೇಕ ಬಿದ್ದ ಸುಳ್ಳ ಗಾಸಿ ಆಗಬ್ಯಾಡ
ಸಂಸಾರಂಬೋದು ಮೂರದಿನದ ಸಂತಿ
ಮಂದಿ ಬಳಗಲ್ಲಾ ನನ್ನವರಂತಿ
ಮೆಚ್ಚಿಕೊಂಡ ನೀ ಕುಂತಿ ॥
ಯಮನ ದೂತರು ಬಂದು ಎಳದ ಒಯ್ಯುವಾಗ
ಯಾರೂ ಎಲ್ಲ ನಿನ್ನ ಸಂಗಾತಿ
ಯಮನ ಮುಂದ ಕೊಡಬೇಕ ಜಡತಿ ॥

ಅರುವಿನ ಜನ್ಮ ಇದು ಅರಿತಾಂವ ಬ್ರಹ್ಮಾ
ಅರಿಯದವಗ ಇಲ್ಲ ಸದ್ಗತಿ
ನಾನೇ ನಾನೇ ಅನ್ನೋದು ನರಕದ ಪ್ರಾಪ್ತಿ
ನಂದು ತಂದು ಅಂತ ಸುಳ್ಳ ಹೆಣಿಗ್ಯಾಡತಿ ॥
ಬಾಳ ಹೇಳೋದೇನ ಗೋಳತಿ ಪೂರ್ತಿ
ಆಗೋದ ಶಾಂತಿ ॥

**ಒಂದನೆ ಚಾಲ**

ದುಡದುಡದ ಗಳಿಸಿ ಜಿಂದಗಾನಿ ದೊಡ್ಡ ಹೊಲಾಮನಿ

ಅಂತೀಯೋ ನಂದಾ
ಎಲ್ಲಾ ಬಿಟ್ಟು ನಡದ್ಯೋ ಇಲ್ಲಿಂದಾ ॥

ಇದರೊಳಗ ಕಳದಿ ಆಯುಷ್ಯ ಆದಿ ಬಲುಗಾಸಿ
ನೋಡಿಕೋ ತಿಳದಾ
ಸುಖ ಆಗಲಿಲ್ಲೊ ಎಂದೆಂದಾ

ಹಗಲಿರುಳು ಇಲ್ಲ ಮನಶ್ಯಾಂತಿ ಬಿಡದ ಬಯಲ ಭ್ರಾಂತಿ
ತುಂಬೇತಿ ಅಭಿಮಾನ ಮದಾ
ನಿಂದಾ ಆಡತೀಯೋ ಮಂದೀದಾ

ಸ್ವರ್ಗ ಮರ್ತ್ಯ ಪಾತಾಳ ಇರೋದು ತನ್ನ ಮನದೊಳು
ನಡದಕೋ ನೀ ತಿಳದಾ
ಇದರಿಂದ ಶಾಂತಿ ದೊತಕುವದಾ ॥

**ಎರಡನೆ ಚಾಲ**

ಮರಿಯ ಬ್ಯಾಡೊ ಗುರುವಿನ ಚರಣಾ
ಇದರಿಂದ ಮುಕ್ತಿಯ ಸೋಪಾನಾ ॥

ಆದದ್ದೆಲ್ಲಾ ಆತೊ ಇಲ್ಲಿತನಾ
ಸಾಕ ಮಾಡೊ ಭವ ಬಂಧನಾ॥

ನಾಡೊಳು ತಿಗಡೊಳ್ಳಿ ಠಿಕಾಣಾ
ಮಾರುತಿ ಒಲದ ಮರಿಕಲ್ಲಗ ಪೂರ್ಣಾ ॥

ಪದಾ ಮಾಡಿ ಹಾಡತೇವ ಹಸನಾ
ನಾಡೊಳು ಆದೀತ ವಾಹೀನಾ ॥

**॥ಏರ॥**

ಬ್ರಹ್ಮಾನಂದ ಆನಂದ ಸ್ವರೂಪ ನೀನೆ
ತಿಳದ ನೋಡೋ ಮಂದಮತಿ
ನಿತ್ಯಾನಂದ ರೂಪ ನಿನ್ನೊಳಗೈತಿ
ಹಂತಿ ಎತ್ತಿನ್ಹಾಂಗ ಸುಳ್ಳ ಸುತ್ತ್ಯಾಡತಿ ॥

ಗುರುವಿನ ದ್ಯಾಸಾ ಮರಿಬ್ಯಾಡೊ ಮಾನವಾ
ಗುರುವಿನಿಂದ ಆಗೋದು ಮುಕ್ತಿ
ಹೀಂಗ ಹೇಳತೈತಿ ಶಾಸ್ತ್ರದ ರೀತಿ ॥

***ರಚನೆ :*** **ಮರಿಕಲ್ಲಕವಿ**
***ಕೃತಿ :*** **ಮರಿಕಲ್ಲಕವಿಯ ಗೀಗೀಪದಗಳು**

## ೩. ಗುರು ವಸ್ತಾದಿ ನಮಗ ಹೇಳತಾನ

ಗುರು ವಸ್ತಾದಿ ನಮಗ ಹೇಳತಾನ
ಪಟಂಗರ ಗೆಳೆತನ ಮಾಡಬಾರದು
ಮಾಡಿದರ್ಯಾಕ ಮಾಡವಲ್ಲರಿ ಮತ್ತೊಂದ ಹೇಳತೇನ
ಹೊಟ್ಟ್ಯಾನ ಮಾತ ಯಾರ ಮುಂದ ಹೇಳಬಾರದು । ಖೊಟ್ಟಿ ಆಗಬಾರದು ॥

ಹರ್‍ಯಾಗ ಎದ್ದು ಹಾಳಮಾರೀಲೆ
ಬಾವಾನ ಮಠಕ ಹೋಗಬಾರದು
ಹೋದರ್‍ಯಾಕ ಹೋಗವಲ್ಲರಿ ಮತ್ತೊಂದ ಹೇಳತೇನ
ಗಾಂಜಿ ತಂಬಾಕ ಸೇದಬಾರದು । ಹುಚ್ಚ ಆಗಬಾರದು ॥

ಗೌಡರು ಮಠದವರು ಹೊಲಾ ಹಚ್ಚ್ಯಾರಂತ
ಊರ ಮುಂದಿನ ಹೊಲಾ ಹಿಡದ ಮಾಡಬಾರದು
ಮಾಡಿದರ್‍ಯಾಕ ಮಾಡವಲ್ಲರಿ ಮತ್ತೊಂದ ಹೇಳತೇನ
ಮಂದಿಗೆ ಅಚ್ಚಾ ವಿಚ್ಚಾ ಬೊಗಳಬಾರದು । ಶ್ವಾನ ಆಗಬಾರದು ॥

ದೇವರ ಪುಣ್ಯೇದಿಂದ ನೀವು ಎಂಟ ಎತ್ತಾ ಕಟ್ಟೇವಂತ
ಅದರಾಗ ಒಂದ ಕೋಣಾ ತಂದ ಕಟ್ಟಬಾರದು
ಕಟ್ಟಿದರ್‍ಯಾಕ ಕಟ್ಟವಲ್ಲರಿ ಮತ್ತೊಂದ ಹೇಳತೇನ
ಕೋಣಿನ ಹಿಂಬಾಲಿ ಎತ್ತಾ ಹೂಡಿ ಹೊಡಿಬಾರದು । ನಾಶ ಮಾಡಬಾರದು ॥

ದೇವರ ಕೊಟ್ಟ ಕಾಲಕ್ಕ ಹೊಲಾ ಬೆಳೆದಃದಂತ
ಹೊತ್ತ ಮುಳಗಿ ರಾಶಿ ನೀವು ತುಂಬಬಾರದು
ತುಂಬಿದರ್‍ಯಾಕ ತುಂಬವಲ್ಲರಿ ಮತ್ತೊಂದ ಹೇಳತೇನ
ದಾನ ಕೊಡದಃ ರಾಶಿ ಮನಿಗಿ ತರಬಾರದು । ತುಡಗ ಆಗಬಾರದು ॥

ಮದವಿ ಹೇಣತಿ ತಾ ಗರತೆಂತ
ತವರ ಮನ್ಯಾಗ ಆರ ತಿಂಗಳ ಬಿಡಬಾರದು
ಬಿಟ್ಟರ್‍ಯಾಕ ಬಿಡವಲ್ಲರಿ ಮತ್ತೊಂದ ಹೇಳತೇನ
ಎಂಟ ದಿನಕ್ಕೆ ಒಮ್ಮೆ ಹೋಗೋದು ಮರಿಬಾರದು । ಡೀಲ್ಯಾ ಆಗಬಾರದು ॥

ಉಗರಲೆ ಹೋಗೋ ಕೆಲಸಕ್ಕ ಕೊಡ್ಲಿ ಹಚ್ಚಿ
ನೀವು ಸುಳ್ಳ ಒಣಾ ಖಟ್ಲೆ ಮಾಡಬಾರದು
ಮಾಡಿದರ್‍ಯಾಕ ಮಾಡವಲ್ಲರಿ ಮತ್ತೊಂದ ಹೇಳತೇನ
ನಡಕ ರಾಜಿ ಆಗಿ ಮನಿಗಿ ಬರಬಾರದು । ಸುಮಾರಾಗಬಾರದು ॥

ಸೊಕ್ಕಿನ ಜನರು ಬಾಳ ರೊಕ್ಕಕ ಆಸೆ ಮಾಡಿ
ಸುಳ್ಳಸೊಟ್ಟ ಸಾಕ್ಷಿಯ ಹೇಳಬಾರದು
ಹೇಳಿದರ್‍ಯಾಕ ಹೇಳವಲ್ಲರಿ ಮತ್ತೊಂದ ಹೇಳತೇನ
ಲಂಚಾ ತಿಂದ ನಡಕ ಸಾಕ್ಷಿ ಒಡಿಬಾರದು । ಲುಚ್ಚ್ಯಾ ಆಗಬಾರದು ॥

ತಿಗಡೊಳ್ಳಿ ಊರಾ ನಾಗಣ್ಣಬಾವಿ ನೀರಾ
ಗುರುವಿನ ಸ್ಮರಣಿ ಮರಿಬಾರದು

ಮರತರ್ಯಾಕ ಮರಿವಲ್ಲರಿ ಮತ್ತೊಂದ ಹೇಳತೇನ
ನಿತ್ಯ ಜಳಕಾ ಮಾಡೋದು ಬಿಡಬಾರದು । ಹೇಸಿ ಆಗಬಾರದು ॥

***ರಚನೆ :*** ರುದ್ರಪ್ಪ ಮಲಶೆಟಿ (ಮರಿಕಲ್ಲಪ್ಪನವರ ತಂದೆ)
***ಹಾಡಿದವರು :*** ಮರಿಕಲ್ಲಪ್ಪ ಮಲಶೆಟಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೪. ಮಾಡೊ ಮನುಜಾ ಭಕ್ತಿ

ಮಾಡೊ ಮನುಜಾ ಭಕ್ತಿಯ ಮಾಡೊ
ಭಕ್ತಿಯ ಮಾಡೊ ಮುಕ್ತಿಯ ಬೇಡೊ ॥
ಸಿರಿಬಂದ ಸಮಯದಿ ಕರೆದು ದಾನವ ಮಾಡೊ
ಅನ್ನವ ನೀಡಿ ಪುಣ್ಯವ ಬೇಡೋ ॥

ಮೂರು ದಿವಸದ ಸಂತಿ ವಿಷಮ ಸಂಸಾರ
ಹೆಂಡರು ಮಕ್ಕಳು ಮಾಯದವರಾ
ಯಮದೂತರ ದಾಳಿ ತಪ್ಪಿಸುವವರ್ಯಾರಾ
ಇದ್ದದ್ದು ತೀರುತನಕಾ ಪ್ರೀತಿ ಮಾಡವರಾ ॥

ಬಂಧು ಬಳಗದವರು ಯಾರಿಲ್ಲ ಕಡಿತನಕ
ಸತ್ತಾಗ ಬರುವರೊ ಸುಡಗಾಡತನಕ
ನಿಂದ ನೀ ತಿಳದು ಹಾಕಿಕೊ ಲೆಕ್ಕ
ಮಾಯಾ ಭ್ರಾಂತಿ ಬಿಡದ ಬಳಲುವಿಯಾಕ ॥

ದುಷ್ಟ ದುರ್ಜನರ ಸಹವಾಸ ಬ್ಯಾಡೊ
ಸಜ್ಜನರ ಸಹವಾಸ ತಪ್ಪದೆ ಮಾಡೊ
ತಿಗಡೊಳ್ಳಿ ಮಾರುತಿ ಸೇವೆಯ ಮಾಡೊ
ಮರಿಕಲ್ಲ ಹೇಳಿದ್ದ ಮರಿಯಲು ಬ್ಯಾಡೊ ॥

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

# ೫. ನಿನ್ನ ಹೊರತು ದೇವರೇ ಇಲ್ಲ

೧

ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥
ನಿನ್ನ ಬಿಟ್ಟು ಯಾವ ದೇವರು ಇಲ್ಲ ।
ಕಲ್ಲು ಮಣ್ಣು ಕಟಗೀವೇ ಎಲ್ಲಾ ।
ಜನನ ಮರಣ ನಿನಗೆರಡೂ ಇಲ್ಲ ।
ತಾಯಿ ತಂದಿ ನಿನಗ್ಯಾರ‍್ಯಾರಿಲ್ಲ ।
ನಿನಗ ಯಾರೂ ಹಡದಿಲ್ಲ।

ಕಲ್ಲ ಇರುವರು ಮಡ್ಡ್ಯಾಗ
ಕಲ್ಲ ದೇವರು ಹುಟ್ಟೂದು ಒಡ್ಡರ ತಿಮ್ಮಯ್ಯನ ಕೈಯಾಗ ।
ತಾಮ್ರ ಹಿತ್ತಾಳಿ ದೇವರ ಹುಟ್ಟುವದು ಪತ್ತಾರನ ಮನಿಯಾಗ ।
ಕಟ್ಟಗಿ ದೇವರ ಹುಟ್ಟುವದು ಬಡಿಗ್ಯಾನ ಕೈಯಾಗ ।
ಮಣ್ಣ ದೇವರ ಹುಟ್ಟುವದು ಕುಂಬಾರ ಗುಂಡಯ್ಯನ ಮನೆಯಾಗ ।

ಇಂಥ ದೇವರ ಆಗುವದಿಲ್ಲ ।
ಈ ಮಂದಿಗಿ ತಿಳಿಯುವದಿಲ್ಲ ।
ಸುಳ್ಳೆ ಆಗತಾರ ಖರ್ಚಿಗೆ ಮೂಲ ।
ದೇವರಂಬವ ಒಬ್ಬ ಹಾನ ಮ್ಯಾಲ ।
ಅವನ ಹೊರತು ದೇವರೇ ಇಲ್ಲ ।
ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥

೨

ಕಲಬುರ್ಗಿ ಕಲ್ಯಾಣ ಹಂಪಿ ಹದರಿಯ ಪೀರಾ
ಹುಲಜಂತಿ ಉಮರ್ಜಿ ಸೊಲ್ಲಾಪುರ ಸಿದ್ರಾಮೇಶ್ವರ ।
ಇವರು ದೇವರೇ ಅಲ್ಲ । ಇವರು ಹಾರೊ ಮಾನೂ ಮನುಸ್ಯಾರ ।
ದುಡಕೊಂಡು ದುಡಕೊಂಡು ಇವರು ಆಗ್ಯಾರ ದೊಡ್ಡ ದೊಡ್ಡ
ಶರಣರ ।

ಸಾವು ಹೊತ್ತಿಗಿ ಯಾವ ದೇವರಿಲ್ಲ ।
ಏನು ಮಾಡತಾವ ಗುಡಿಯಾನ ಕಲ್ಲಾ ।
ಕೊರಳಿಗೆ ಕೊರಳ ಬಿದ್ದು ಅಳತಾವ ಎಲ್ಲಾ ।
ಅಲ್ಲಾನ ಹೊರತು ಬಿಗಿ ಹರಿಯುದಿಲ್ಲ ।
ಅವನ ಹೊರತು ದೇವರೇ ಇಲ್ಲ ।
ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ।

೩
ಸೃಷ್ಟಿಯೊಳಗೆ ಶ್ರೇಷ್ಠಾಗಿ ಮೆರೆವುದಾ ।
ಈ ಕರ್ನಾಟಕದಾಗ ಹಲಸಂಗಿ ಈಶನ ಬಿರದ ।
ಈ ಅಂತರಂಗದ ಗುರುಮಾರ್ಗ ಅವನೇ ತಿಳಿಸಿದ ।
ಶಿಶ್ಯಾರ ಜೋಡಿ ರಾಮಚಂದ್ರ ಮೌಲ ।
ಕವಿ ಖಾಜಾ ಹೀಂಗ ಹೇಳಿದ ಅಕಲ ।
ಎಷ್ಟು ಹೇಳಲಿ ನನ್ನ ಗುರುವಿನ ಲೀಲಾ ।
ಹಲಸಂಗಿ ಈಶಾ ತಾನೇ ಬಲ್ಲಾ ।
ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ।

***ರಚನೆ :* ಖಾಜಾಭಾಯಿ**
***ಕೃತಿ :* ಜೀವನ ಸಂಗೀತ**

## ೬. ಸಾಲಿ ಹುಡಗೋರು

ಸಾಲಿ ಹುಡಗೋರ ಲೀಲಾ ಹೇಳತೇನ
ಕುಂತಕೇಳರಿ ಈಗ
ಕೆಲಸವಿಲ್ಲದೆ ಇವರು ಕಾಲಿ ತಿರಗತಾರ
ಸಿಕ್ಕಾಂಗ ಊರಾಗ ॥

ಬಣ್ಣ ಬಣ್ಣದ ಲುಂಗಿ ಸುತ್ತಿಕೊಂಡ
ಮಾಡತಾರ ಇವ್ರು ಸೋಗ
ಅಯಿಟ ಕಾಣುವಂತೆ ಬೂಟ ಮೆಟ್ಟಕೊಂಡ
ಜುಟ್ಟಲ ತೆಲಿಮ್ಯಾಗ ॥

ಕರೆ ಹೇಳತೇನ ಕಣ್ಣ ಇಟ್ಟ ಇವರು
ಹೆಣ್ಣ ಹುಡಗೋರ ಮ್ಯಾಗ
ಬುದ್ಧಿ ಹೇಳಿದರ ಗುದ್ದ್ಯಾಡತಾರ
ಬುದ್ಧಿಬಂತ ನನಗ ॥

ಸಾಲಿ ಕಲಿತೆವಂತ ಖಾಲಿ ತಿರಗಾಡವರಿಗೆ
ಚಾಲ ಬಿದ್ದಿತೊ ಹಿಂಗ
ಕೆಟ್ಟ ಮ್ಯಾಲ ಇವರ ಗಮಜ ಇಳೀತೈತಿ
ಗಜ್ಜ ತಿಂದ ಮ್ಯಾಗ ॥

ತಿಳಿಗೇಡಿ ಜನರ ಕಳಾ ತಿಳದೀತು
ತಿಗಡೊಳ್ಳಿ ಬಲಭೀಮಗ
ನೀತಿವಂತರಾಗಿ ಖ್ಯಾತಿ ಹೊಂದಿರೆಂತ
ಮರಿಕಲ್ಲ ಹೇಳಿದೀಗ ||

**ರಚನೆ : ಮರಿಕಲ್ಲಕವಿ**
**ಕೃತಿ : ಮರಿಕಲ್ಲಕವಿಯ ಗೀಗೀ ಪದಗಳು**

## ೭. ಕಾಲೇಜ ಜೀವನ

ಕಾಲೇಜ ಜೀವನದ ಲೀಲ ಹೇಳುವೆನು ಆಲಿಸಿ ಕೇಳರಿ ಯಲ್ಲಾರ
ಮೂಲ ವಿಶ್ವ ವಿದ್ಯಾಲಯದ ವಿಸ್ತಾರ
ಹಾಲ ಮೇಲಿನ ಕೆನಿಯಂಥ ಮಜಕೂರ ||
ಮಾಲಿನಂಥ ವಿಶಾಲ ಕಟ್ಟಡದೊಳು ಕಾಲ ಕಳೆಯದೆ
ಕಲಿತರ ಮೇಲಾದ ಪದವಿಗೆ ಹೋಗುವರ || ಪ ||

ಎಲ್ಲ ರೀತಿಯಿಂದ ಎಲ್ಲ ತರಹದ ಜ್ಞಾನಮಾಡಿ ಕೊಡುವ
ಗ್ರಂಥ ಭಾಂಡಾರ ಬಲ್ಲಿದ ಎಂಥೆಂಥ ಕವಿ ಪುಂಗವರ
ಮಿಲ್‌ಟನ್ ಬೈರನ್ನ ಶೆಲ್ಲಿ ಶೆಕ್ಸಪೀಯರ
ಟಾಲಸ್ಟಾಯನ ಲೆನಿನ್ನ ಮಾರ್ಕ್ಸ ಎಂಜೆಲ್ಸರ
ರಶಿಯಾ ದೇಶದ ಸಾಹಿತ್ಯ ಪೂರ
ಇಂಗ್ರೇಜಿಗೆ ತರ್ಜಿಮ ಮಾಡಿ ಇಟ್ಟಾರ ||

ಜರ್ಮನಿ ಗ್ರೀಕ ರೋಮ ದೇಶದ ಅರಿಷ್ಟಾಟಲ
ಪಾಶ್ಚಿಮಾತ್ಯ ವೇದಾಂತಗಳಸಾರ
ಮಾರ್ಮಿಕವಾದ ಇತಿಹಾಸ ಅರ್ಥಶಾಸ್ತ್ರ
ಕ್ರಮ ಕ್ರಮವಾಗಿ ವತ್ತಟ್ಟಗಿಟ್ಟಾರ
ಪ್ರೇಮದಿ ಓದವರಿಗೆ ಕಥೆ ಕಾದಂಬರಿ ಏನೇನ ಬೇಕ ಎಲ್ಲ ತಯ್ಯಾರ
ಕಾಮಿಕ ಫಲ ಸರಸ್ವತಿ ಮಂದಿರ ||

ಕನ್ನಡ ನಾಡಿನ ಕನ್ನಡ ಕವಿಗಳಾದ
ಜೈನ ಲಿಂಗಾಯತ ಬ್ರಾಹ್ಮಣ ಕುರುಬರ
ರನ್ನ ಪೊನ್ನ ಪಂಪ ರಾಘವಾಂಕ ಹರಿಹರ
ಕುಮಾರವ್ಯಾಸ ಲಕ್ಷ್ಮೀಶ ಷಡಕ್ಷರ ||

ಕನ್ನಡ ಕಂಪಿನ ನುಡಿ ಕರ್ಣಕ್ಕ ಇಂಪಾದ ನುಡಿ ಧನ್ಯ ಧನ್ಯ
ಬರದಿಟ್ಟ ಕವಿಗಾರ ಅದನ ಉಂಣುವಂಥವರು ಬೇಕ ರುಚಿಗಾರ ||

**||ಚಾಲ||**

ಇಂಥ ಜ್ಞಾನದ ರಾಶಿಯನು ನೋಡಿ
ಕುಂತ ಓದದವನು ಬುದ್ಧಿ ಗೇಡಿ ||
ತಂದಿ ಕಳಿಸಿದ ಹಣಾ ಖರ್ಚು ಮಾಡಿ
ತಿಂದ ತಿರಗವನ ಹಣೆಬಾರ ಖೋಡಿ ||

**||ಶ್ಲೋಕ||**

ಕೇಳಿರಿ ಜಗತ್ತಿಗೆ ಸುಖ ಕೊಡುವ ಗೆಳೆಯನೆಂದ್ರ ಪುಸ್ತಕ
ಗುಡ್ ಬುಕ್ಸ್ ಆರ್ ಗುಡ್ ಫ್ರೆಂಡ್ಸ ಅಂತ ಹೇಳಿದ
ಮಾತ ನೆನಪ ಇಟಕೊಂಡ ಕಾಲೇಜದೊಳಗ
ಕಾಲ ಇಟ್ಟವರಿಗೀಗ ಚಲೋ ಅಭ್ಯಾಸ ಮಾಡಿರೆಂದು ಹೇಳುವೆ ನಾ ||

**||ಏರು||**

ಸ್ವಲ್ಪ ಘಂಟಿ ಹೊಡದ ಕೂಡಲೆ ಅಚ್ಚುಕಟ್ಟನಲ್ಲಿ ಚೊಣ್ಣ
ಪ್ಯಾಂಟ ಪಾಟ್ಲೋನ ನೆಕ್‌ಟಾಯ ಬಿಗಿಯೂರ
ತರ ತರ ಬಣ್ಣ ಹಾಕಿಕೊಂಡ ಹುಡುಗರ ಹಣ್ಕೆ ಹಾಕುತ
ಕ್ಲಾಸಿನೊಳಗೆ ಹೋಗಿ ಕೂಡ್ರುವರ || ೧ ||

ಒಳ್ಳೇ ಸಿಸ್ತಿಲೆ ಗಂಭಿರರಾಗಿ ಹ್ಯಾಟ ಬೂಟ ಪ್ಯಾಂಟ ತೊಟ್ಟ
ಐಟಬಾಳ ಆಗಿರತಾರ ಪ್ರೊಪೆಸರರ
ಕೈಲೆ ನೆಕ್ಟಾಯ ಜಗ್ಗುತ ಕಾಲಿಡತಾರ ಆ ಮೇಲೆ ಕ್ಲಾಸಿನೊಳಗ
ಸ್ತ್ರೀಯರ ಬರವುರ ಕಾಮನು ಕಾಲಸೋತ
ಕಾಲ ಮುರಕೊಂಡ ಇಲ್ಲೆ ಇರುವಂಗ ಸೌಂದರ್ಯದ ಕಾಮಿನಿಯರ
ಕಾಮನ ಬಿಲ್ಲಿನ ಬಣ್ಣ ತರ ತರ ಸೀರಿ ಉಟ್ಟವರ ||
ಶನಿವಾರಕ್ಕೊಮ್ಮೆ ಇಲ್ಲೆ ಅಸೋಸಿಯಶನ ಇರತದ
ಆಗ ನೋಡಬೇಕ ಇವರ ಶಡಗರ
ಮನಿಸಿಗಿ ಬಲ್ಲಾಂಗ ಚಲ್ಲಾಟ ಹುಡಗ ಹುಡುಗಿಯರ
ಆನಂದ ಸ್ವರ್ಗದ ಸುಖ ಇಲ್ಲದೂರ ||
ಅನುಮಾನವಿಲ್ಲದೆ ಕೇಕೆ ಹೊಡೆಯುತ ನಗನಗತ ಚೇಷ್ಟಾ ಮಾಡುತ
ಬರದೂರ ಕಣ್ಣ ಹುಬ್ಬಿಂದ ಆವಾಗ ಒಳೆ ವ್ಯಾಪಾರ ||
ಕನ್ನಡ ಇಂಗ್ಲೀಷ ಮರಾಠಿ ಗಣಿತ ನಾಟಕ ಇತಿಹಾಸ
ಅರ್ಥಶಾಸ್ತ್ರ ನಾನಾ ಬಗೆಯ ಸಂಸ್ಥೆಯ ಸಭಿಕರ
ಪಂಡೀತ ಪ್ರೋಪೆಸರರ ಲಕ್ಚರ ಒಂದೊಂದ ವಿಷಯಗಳು

ಚಂದಾಗಿ ನಡೆಯುವವು ಇಂದ್ರ ಭವನದಂಗ ಸುಂದರ
ಸಂಧಿ ಸಾಧಕರಿಗೆ ಬಹುರುಚಿಕರ ||

**||ಚಾಲ||**

ಅಲ್ಲಿ ಮಿಟಂಗ ನಡಿತೈತಿ ಅಂದರ
ಚಲ್ಲಾಟ ವಿದ್ಯಾರ್ಥಿ ವಿದ್ಯಾರ್ಥಿನಿಯರ ||
ಒಳೆ ಹುರಪಿನ ಹಾಸ್ಯದ ಜೋರ
ನೃತ್ಯ ಮಾಡಿದಂಗ ರಂಬಾ ಊರ್ವಸಿಯರ ||

**||ಶ್ಲೋಕ||**

ಕೇಳಿರಿ ಕಾಲೇಜ ವೈಭವ ವಿಲಾಸ ಸ್ವರ್ಗದಾಗ
ಇಂಥ ಸುಖ ಸಾಧ್ಯವಿಲ್ಲಾ ಚಿಂತಿ ಇಲ್ಲದ ಕಾಲ
ಅಂದರ ಕಾಲೇಜ ವಿದ್ಯಾರ್ಥಿಯ ಕಾಲ
ತರುವ ಚಿಂತೆ ಇಲ್ಲಾ ಬರುವ ಚಿಂತಿ ಇಲ್ಲಾ ಬೀಸಾಕ
ಜೋಳ ಇಲ್ಲಾ ಹುಡುಗರ ನೆತ್ತಿಗೆ ಯಣ್ಣಿ ಇಲ್ಲಾ
ಸಾಲ ಕೇಳವರಿಲ್ಲಾ ಯಾರ ಕಾಟ ಇಲ್ಲಾ ಇಂಥಾ
ನಿಶ್ಚಿಂತ ಜೀವನ ನಮ ಯೌವನ ತುಂಬಿರತೈತಿ
ಸೌಂದರ್ಯ ಮುಖದ ಮೇಲೆ ವಿದ್ಯಾ
ಬುದ್ಧಿ ಜ್ಞಾನ ಭಾಂಡಾರ ತಲಿಯಾಗ ಜಗತ್ತಿನ ಎದುರಿಗೆ
ಇದರ ಹೊರತ ಮತ್ತೇನಿರುವದಿಲ್ಲಾ ||

**||ಏರು||**

ಭಾಷಣ ಮುಗಿದ ಕೂಡ್ಲೆ ಖುಷಿಯಾಗಿ ಕೋಟಿನ
ಕಿಸೇದೊಳಗಿನ ಕರವಸ್ತ್ರ ತಗಿಯುವರ ತುಸು
ಮುಖ ವರಿಸುತ ಹಾದಿ ಹಿಡಿಯುವರ
ಬಿಸಿ ಬಿಸಿ ರಕ್ತದ ತರುಣರ || ೧ ||

ಒಬ್ಬೊಬ್ಬನ ತಲೆಯೊಳು ಉಬ್ಬುಬ್ಬಿ ಹೊರಡುವವು
ಅಬ್ಬರಲೆ ಹೊಸ ಹೊಸ ಕಲ್ಪನ ಅಭ್ಯಾಸ ಮಾಡ
ತೀನ ಪರಿಪೂರ್ಣ ಅಭ್ರಾಟ ಕೊಡಾಂವ ನಾ ವ್ಯಾಖ್ಯಾನ
ಸರೋಜಿನಿ ನಾಯ್ಡು ಸಿ. ಆರ್. ದಾಸ
ಮತ್ತ ಶ್ರೀನಿವಾಸ ಐಯ್ಯಂಗಾರನ
ಮೀರಿಸುವೆನು ಅಂತ ಮನದಾಗಂತಾನ ||
ಇನ್ನೊಬ್ಬ ಹುಡುಗನ ಆಶೆ ನಾ ಇನ್ನ ಮುಂದ

ಖರೋ ಖರ ಬ್ಯಾರಿಷ್ಟರ ಆಗತೇನ
ಆದ ಮೇಲೆ  ಮರಸತೀನ ಹಿಂದಿನವರನ್ನ
ಬಿರ್ಲಾ ಬುಲಾಭಾಯಿ ಜಯಕರ ಸೆಟಲ್ ವಾಡರನ ||
ಗಣಿತ ವಿಷಯ ತಗೊಂಡ ವಿದ್ಯಾರ್ಥಿ ಅಂತಾನ
ರಾಂಗ್ಲರ ಪರೀಕ್ಷೆ ಕಟ್ಟಿ ಹೊಡಿತೇನ ಬಿಡುದಿಲ್ಲ
ಟ್ರಾಯ ಪಾಸ ಪರೀಕ್ಷೆಯ ನಾ ||
ಆರ್ಥಿಕ ವಿಷಯ ತಕ್ಕೊಂಟ ಸಾಮರ್ಥ್ಯವಾನ ತರುಣನು
ನನ್ನ ಮುಂದ ಯಾರು ಇಲ್ಲ ಅಂತಾನ
ಯಾರು ಕೊಡದ ಆರ್ಥಿಕ ಯೋಜನೆ ಕೊಡತೇನ
ಕೇಂದ್ರ ಸರಕಾರ ತಜ್ಞ ಮಂತ್ರಿ ಯಾಗತೇನ
ಕವಿಯಾಗ ಬೇಕೆನ್ನುವ ಹಂಬಲಿದ್ದಾಂವ ಸೇಕ್ಸ
ಪೇಯರ ಕೀಟ್ಸ ಕಾಳಿದಾಸರನ
ಮೀರಿ ಬರೆಯ ಬೇಕಂತಾನ ಕವಿತೆಯನಾ ||

**||ಚಾಲ||**

ಅಖಲ ಹಾಕುದಕ್ಕ ಇಲ್ಲ ಘೋರ
ಶೇಖ ಮಮ್ಮದನ ವಿಚಿಯಾರ ||
ಸಾಕಾಗಿ ಇಷ್ಟೆಲ್ಲ ವ್ಯಾಪಾರ
ಬೇಕಂತಾನ ವಿಶ್ರಾಂತಿ ವಿಹಾರ ||

**||ಶ್ಲೋಕ||**

ಕೇಳಿರಿ ಅಲ್ಲಿಂದ ಸಿನೇಮಾ ಚತ್ರ ತೂಗ ಹಾಕಿದ
ಗೋಡಿಯ ಮೇಲಿನ ಚಿತ್ರ ನೋಡಿ ಅಂತಾನ
ಸುರೈ ಕಾಮಿನಿ ಕೌಸಲ್ಯ ಇವರೇನು ಸೌಂದರ್ಯದ
ಹುಡುಗಿಯರು ಅಲ್ಲಾ ತನ್ನ ಕ್ಲಾಸಿನ ವಳಗಿನ
ತನ್ನ ಪ್ರೀತಿಯ ಹುಡಿಗಿನ್ನ ತಲಿಯಲ್ಲಿ ನೆನಪ ಮಾಡಿಕೊಂಡ
ಚಿತ್ರದಲ್ಲಿ ನಟ ನಟಿಯರು ಆಕೆಯಷ್ಟು
ಸೌಂದರ್ಯ ಅಲ್ಲ ಅಂತಾನ ಮನದಾಗ ಆಕಸ್ಮಾತ
ಕ್ಲಾಸಿನ ಹುಡುಗಿ ಇವನ್ನ ನೋಡಿದ ಕೂಡ್ಲೆ
ಮುಗಿಲ ಮೂರಗೇಣ ಉಳದ ಆನಂದದಿಂದ
ಕುಣದಾಡತಾನ ತನ್ನ ಗೆಳೆಯನ ಚಹಾ ಕುಡ
ಸತಾನ ಯಾಕಂತ ಕೇಳಿದರ ಮುಂಜಾನೆ
ಎದ್ದ ರತ್ನ ಪಕ್ಷಿ ನೋಡೀನ ಅದಕ ಚಹಾ ಕುಡಿ

ಅಂತಾನ ಇಂಥ ಕಾಲೇಜ ಜೀವನ
ತುಲನೆಗೆ ಮೀರಿದ ಜೀವನಾ ॥

**॥ಏರು॥**

ಖಾಲಿ ವಿಷಯ ಸುಖ ಬಿಟ್ಟ ಅನುಭವ ತಕ್ಕೊಂಡ
ಸೋಸಿ ನೋಡಿಕೊಳ್ಳಿ ಜ್ಞಾನ ಭಾಂಡಾರ
ಕಾಲ ಕಳೆಯದೆ ಇದ್ಯಾಗಳಿಸಿರೆಲ್ಲಾರ
ಹುಲಕುಂದ ಭೀಮೇಶ ಹೇಳಿದ ಶಾಹೀರ ॥ ೩ ॥

***ರಚನೆ :*** **ಹುಲಕುಂದ ಭೀಮಕವಿ**
***ಕೃತಿ :*** **ಸರ್ವೋದಯ ಗ್ರಾಮೀಣ ಜನಪದ ಗೀತೆಗಳು**

## ೮. ಶಿಕ್ಷಣದ ನೀತಿ

ಪ್ರಸ್ತಾವನೆಯಲ್ಲಿ ವಿಸ್ತಾರ ಪೂರ್ವಾಕವಾಗಿ
ಮಸ್ತ ಹೇಳುವ ನಾನು ಮನಕರಿಗಿ
ಸುಸ್ತಿ ಮಾಡದೆ ಮಾಸ್ತರ ಜನರಿಗೆ
ಸಿಸ್ತಾಗಿ ತಿಳಿಸುವೆ ಸಿರಬಾಗಿ ॥ ಪಲ್ಲ॥

ಸಾಧಾರಣ ವ್ಯಕ್ತಿಗಳಲ್ಲ ಆದರ್ಶ ಗುರುಗಳು
ಬುದ್ಧಿ ಕಲಿಸುವವರು ಕೂಸುಗಳಿಗಿ
ಬಾದ ಹುಡುಗರನ್ನ ಬೋಧಾಮೃತದಿಂದ
ಹಾದಿಗೆ ತರುವದು ನಿಮ್ಮ ಪಾಲಿಗಿ ॥
ಶಾರೀರಿಕ ಬೌದ್ಧಿಕ ನೈತಿಕ ಅಧ್ಯಾತ್ಮಿಕ
ಶಿಕ್ಷಣ ಕೊಡಬೇಕ್ರಿ ಚನ್ನಾಗಿ
ಸರ್ವಾಂಗ ಸುಂದರವಾದ ಧೈರ್ಯವಂತರನ್ನ
ಮಾಡ್ರಿ ಹೊಸ ರಾಷ್ಟ್ರ ನಿರ್ಮಾಣಕ್ಕಾಗಿ ॥
ಮನೆತನದಲ್ಲಿ ಶಾಲೆಯಲ್ಲಿ ಸಮಾಜದಲ್ಲಿ ಸರಕಾರದಲ್ಲಿ
ಪ್ರಪಂಚದಲ್ಲಿ ಪ್ರಗತಿ ಪರರನ್ನಾಗಿ
ಮನಸಿನ ಒಲವಿನಂತೆ ಕಲಿಸಿ ವಿದ್ಯಾರ್ಥಿಗಳು
ನೆನಸುವಂತೆ ಮಾಡ್ರಿ ದೇಶ ಹಿತಕಾಗಿ ॥

**॥ಚಾಲ॥**

ನೌಕರಿ ಅಂತ ತಿಳಿಕೊಳ್ಳತಕ್ಕದ್ದಲ್ಲಾ
ಮಕ್ಕಳ ಹೊಣೆ ಐತಿ ನಿಮ್ಮ ತಲಿಮ್ಯಾಗ

ಚೌಕಾಸಿ ಮಾಡಿರಿ ಇದನ್ನೆಲ್ಲಾ
ರಕ್ಷಕರು ನೀವೆ ಸರ್ವಕೆಲ್ಲಾ ||

**||ಏರು||**

ಹೆತ್ತ ಮಾತೆ ಕಲಿಸಿದ ಊಟ ತಾತ ಕಲಿಸಿದ ಬುದ್ಧಿ
ಶಿಕ್ಷಕ ಕಲಿಸಿದ ವಿದ್ಯಾ ಸರ್ವರಿಗಿ || ೧ ||

ಕಲಿಸುವಂಥವರಿಗೆ ಚಲೋ ಗುಣಬೇಕ
ಮೂವತ್ತಕ್ಕಂಥ ಮೇಲ್ಪಟ್ಟಾಗಿ
ಕಲಿಸತಕ್ಕಂತ ಧ್ವನಿಯ ಗಾಂಭೀರ್ಯ
ಸರಳತೆ ಸತ್ಯ ದಯಾನಿಧಿಯಾಗಿ ||
ಪರೋಪಕಾರ ಬುದ್ಧಿ ಸಮಯ ಚಿತ್ತತೆ
ನಿರ್ಮಲ ಮನಸ್ಸು ಸೌಜನ್ಯ ತ್ಯಾಗಿ
ಗೌರಾಭಿಲಾಸೆಯನ್ನು ಕಾಯ್ದುಕೊಳ್ಳುವ ಗುಣ
ಪ್ರಾಮಾಣಿಕ ನಿಷ್ಟುರತೆ ಸ್ಥಿರವಾಗಿ
ಚೊಕ್ಕಟವಾದ ವೇಷ ಆಶಾವಾದಿತ್ವ
ಅಚ್ಚುಕಟ್ಟುತನ ಒಳ್ಳೇ ಸರಿಯಾಗಿ
ಮಕ್ಕಳ ಮೇಲೆ ಮಮತೆ ಆಳಿಕೆಯ ಸಾಮರ್ಥ್ಯ
ಸದ್ವರ್ತತನ ಮಿತವ್ಯಯ ಮೊದಲಾಗಿ ||

**||ಚಾಲ||**

ಸಮಾಜಕ್ಕೆ ಸಹಾಯ ಮಾಡಬೇಕ
ನ್ಯಾಯ ಮೂರ್ತಿಯಂತೆ ವರ್ತಿಸುವದು ಸುಖ ||
ಪಾರ್ಟಿ ಪಂಗಡಗಳ ಸನಿಯಕ್ಕ
ಖೊಟ್ಟಿ ಜನರ ಸಹವಾಸದಲ್ಲ್ಯಾಕ ||

**||ಏರು||**

ಕತೃತ್ವ ಶಕ್ತಿ ದೀರ್ಘ ಸಾಹಸ ನಿರಪೇಕ್ಷ
ಬುದ್ಧಿ ಸೀಲವಂತರಾಗಿ || ೨ ||

ಒಳ್ಳೆ ಚಟಗಳುಳ್ಳಂಥ ಗುರುಗಳು
ಥಳಥಳಿಸುವ ಸದ್ಗುಣಿಯಾಗಿ
ಎಳಿ ವಯಸ್ಸಿನಲ್ಲಿ ಬೆಳೆಯುವ ಮಕ್ಕಳಿಗೆ
ತಿಳಿಸಿ ಹೇಳುವರು ಒಳಿತಾಗಿ ||

ಕೀಳ ಚಟಕ್ಕೊಳಗಾದ ಮನುಜರು
ಹಾಳ ಮಾಡುವ ಶಾಲೆ ಹಸನಾಗಿ
ಕೂಳಬಕ್ಕ ಉಢಾಳ ಹುಡುಗರ ಮ್ಯಾಳ ತಯ್ಯಾರ ತಾಳಾ ಭ್ರಷ್ಟಾಗಿ ||
ಇಳೆಯೊಳು ದೇಶದ ಏಳಿಗೆ ಆಗುದಕ್ಕ
ಕಳಕಳಿ ಬೇಕ ನಿಮ್ಮ ಮನಸಿಗಿ
ಗಳಿಸಿದ ಜ್ಞಾನಾ ಬಳಿಸಿ ವಿದ್ಯಾರ್ಥಿ ಮಾನ
ಉಳಿಸಿಕೊಳ್ಳಿರಿ ಪುಣ್ಯವಂತರಾಗಿ ||

**||ಚಾಲ||**

ನಿಮ್ಮಿಂದ ಜಗದ ಕಲ್ಯಾಣ
ಸುಮ್ಮ ಮಾಡಬ್ಯಾಡ್ರಿ ಕಾಲಹರಣ ||
ಒಮ್ಮನಸ್ಸಿನಿಂದ ನೀಡ್ರಿ ವಿದ್ಯಾದಾನ
ದಾನವಂತಗ ದೇವರಲ್ಲಿ ಸ್ಥಾನ ||

**||ಏರು||**

ವಾಸ್ತವ್ಯ ಕವಿಯಾದ ವಸ್ತಾದಿ ಹುಲಕುಂದ
ಮುತ್ಸದ್ದಿ ಭೀಮ ಹೇಳಿದ ಯೋಗಿ|| ೩ ||

***ರಚನೆ :*** **ಹುಲಕುಂದ ಭೀಮಕವಿ**
***ಕೃತಿ :*** **ಸರ್ವೋದಯ ಗ್ರಾಮೀಣ ಜನಪದ ಗೀತೆಗಳು**

## ೯. ಅಕ್ಕತಂಗಿಯರಿಗೆ

ಅಕ್ಕ ತಂಗೇರ ಮುಂದ ಹೇಳುವೆನು ಕೈಮುಗದ
ಗುರ್ತ ನಿಮ್ಮ ಗಂಡಂದ ಕುಂಕುಮ ಬಟ್ಟ ಒಂದ
ಹಚ್ಚರೆವ್ವಾ ಹಣಿಯ ಮ್ಯಾಲಾ ||
ಮುಖ ಬೇಕ ಮುತ್ತೈದೆಯರಿಗಾ ನಸಲಾ ||
ಮುತ್ತೈದೇರು ಮುಂಜಾನೆದ್ದ ಗಂಡಂದಿರ ಕಾಲ ಬಿದ್ದ
ಮನಸ ಇರಬೇಕ ಸುದ್ದ
ವಿಶ್ವಾಸ ಇಡರಿ ಜನ್ಮದ ಮ್ಯಾಲಾ ||
ತಗೀವದು ಮೋಕ್ಷದ ಬಾಗಿಲಾ ||
ಗಂಡನಿಂದ ಗತಿ ಅಂತ ಹೇಳತಾರ ಗಾದಿ ಮಾತ
ಕುಂಕುಮಾ ಚೆಂದ ಹಚ್ಚರೆಂತ ಹೇಳಿದ್ರ ಸಿಟ್ಟ ಬಂತ
ಇದು ಎಂಥಾ ಕೆಡಗಾಲಾ ||
ನೀತಿವಂತಗ್ಯಾಗರೆವ್ವ ಅನುಗಾಲಾ ||

ತಿಗಡೊಳ್ಳಿಯಲ್ಲಿ ನಮ್ಮ ವಸ್ತಿ ಪದಾಮಾಡತೇವ ಭರ್ತಿ
ಸ್ವಾಮಿ ಬಲಭೀಮನ ಸ್ತುತಿ
ಮಾಡತೇವ ಅನುಗಾಲಾ ॥
ಮಂದಮತಿ ಮರಿಕಲ್ಲ ಹೇಳಿದ ಅಕಲಾ ॥

**ರಚನೆ : ಮರಿಕಲ್ಲಕವಿ**
**ಕೃತಿ : ಮರಿಕಲ್ಲಕವಿಯ ಗೀಗೀ ಪದಗಳು**

## ೧೦. ಅಕ್ಕತಂಗಿಗಳಿಗೊಂದು ಮಾತು

ಹೆಣ್ಣು ಮಕ್ಕಳೆಲ್ಲ ನೀವು ಚೆನ್ನಾಗಿ ಕೇಳಿರೆವ್ವಾ
ಸಣ್ಣ ಬಾಲಕ ನನ್ನ ವಚನವನಾ ।
ಅಣ್ಣ ತಮ್ಮ ಭಾವ ಮೈದ್ನ ಗಂಡಂದಿರಿಗೆ ।
ಕಿವಿ ಗಡ್ಡ ಹಿಂಡಿ ಕೇಳ್ರಿ ತಾಯಿ ಬುದ್ಧಿಯನಾ ॥ ಪಲ್ಲ ॥

ಹೇಳಿದಾಂಗ ನಿಮ್ಮ ಗಂಡಸರು ಕೇಳತಾರ ।
ನಿಮ್ಮ ಕೈಯಾಗೈತ್ರಿ ಮಹಾಮಂತ್ರಾ ।
ಮಹಾಮಂತ್ರ ಅಂದರೇನ ಮಹತ್ವದ ಮಾತಲ್ಲ ।
ಅಡಿಗಿ ಮನಿಬಂದ ಮಾಡಬೇಕ್ರಿ ಜರಾ ।
ಪರದೇಶಿ ಮಾಲ ತರಬಾರದಂತ ಬುದ್ಧಿ ಹೇಳ್ರಿ ।
ಬಿಡಿಸ ಬೇಕರೆವ್ವಾ ನನ್ನ ತಾಯಿಗಳಿರಾ ।
ತಂದರ ಸುದ್ಧಾ ಅದನ ಕೈಲೆ ಹಿಡಿಯದಿರ ।
ಮತ್ತೊಮ್ಮೆ ತರುದಿಲ್ರಿ ಗಂಡಸರಾ ॥
ಚಹಾ ಕುಡಿಯುವರಿಗೆ ಛೀ ಹಾಕಿ ನೀವೆಲ್ಲಾ ।
ನ್ಯಾರಿ ಮಾಡಲಾಕ ಕೊಡಿರಿ ರೊಟ್ಟಿ ಮಸರಾ ।
ನ್ಯಾರಿ ಮಾಡಿ ಚಹಾದಂಗಡಿ ದಾರಿಹಿಡಿದ ।
ಹೋಗುವರ ಮಾರಿ ನೋಡಿ ಆಗರೆವ್ವಾ ಬೆಂಕಿಚಾರಾ ।
ಮಾತ ಕೇಳದಿರ ನಮ್ಮನ್ಯಾತಕ ತಂದಿಯೋ ।
ಬ್ಯಾಸರೇನೊ ನಮಗ ನಮ್ಮ ತವರೂರಾ ।
ತವರೂರ ಕಡೆ ನಾವಿ ಜಾವ ಬಡಿತೇವ ಅಂದ್ರ ।
ನಾಯಿ ಹಂಗ ಚಾದಂಗಡಿ ಬಿಡುವವರಾ ॥

**||ಚಾಲ||**

ನೀವ ಇದ್ದಲ್ಲೆ ಅವರ ಮನಿತಾನ ।
ಇಲ್ಲದಿದ್ದರ ಅವರನ್ನ ಕೇಳುವದಿಲ್ಲ ಯಾರಾ ।

ಗಂಡಗಿಚಡಿ ಹೊಡದದ ಕುಂದ್ರವರಾ ।
ಚಹದಂಗಡಿ ಪೂರೋಸುದಿಲ್ಲ ಹೊಟ್ಟಿ ತುಂಬುದಿಲ್ಲ
ಹಾಕತಾರ ವುಸರಾ ।
ಎಷ್ಟ ಕುಡುತಾರ ಬರೆ ಬಿಸಿನೀರಾ ॥
ಉಂಡಿ ತಿಂದರ ಉದ್ರಿ ಕೊಡುದಿಲ್ಲ ।
ರೊಕ್ಕ ಇರುದಿಲ್ಲ ।
ಬಂತ್ರೆವ್ವಾ ಘೋರಾ ।
ಹೊಲಾ ಇದ್ದವಗ ಉದ್ರಿ ಕೊಡತಾರ ॥
ಹೊಲಾ ಹೋದರು ತಮ್ಮ ಚ್ಯಾಲ ಬಿಡುದಿಲ್ಲ ।
ಮದಲಿಗೆ ಇರುವದಿಲ್ಲ ಶಾಣೆತನಾ
ಪರದೇಶದಿಂದ ಬಂದ ಅಂದ ಚಂದವಾದ ।
ಬಳಿ ಹೊಂದಿಸಿ ಕಳಿವ್ಯಾರ ನಾನಾತರಾ ।
ಹಗಲಚಿಕ್ಕಿ ಮುಗಲ ಬಣ್ಣ ಶ್ರೀಮಂತ ಕಾಫಿ ।
ಕೊಳವಿಬಳಿ ರಾಣೆಗೋಟ ಬಿಲಾವರ ಅಂತ ಹೆಸರಾ ।
ಚೌಲಕೊಂದ ಆದರಸುದ್ದಾ ಡೌಲ ಅಂತ ಇಡತೇರವ್ವಾ
ವಲತ್ತದಿಂದಾ ರೊಕ್ಕಾ ಸುಲಿಯುವರಾ ।
ನಮ್ಮ ದೇಶದಲ್ಲಿ ಬಳಿ ನಾ ತರಾ ಮಾಡತಾರ ।
ಮುರಗೋಡ ಮತ್ತು ಘೋಡಗೇರಿ ಯವರಾ ॥
ಕೈ ತುಂಬ ಬಳಿ ಇಟ್ರ ಶೋಭಾ ಕಾಣುದತೆವ್ವಾ ।
ಈಗಿನವರ ಇಡತಾರ ಎರಡ ಮೂರಾ ।
ಲಗ್ನ ಆಗುವಾಗ ಉಡಿ ತುಂಬುವಾಗ ।
ಇಡಸತಿದ್ರ ಕಾಜಿನ ಬಳಿ ಕೈತುಂಬಾ ಹಸರಾ ॥
ಹಸರ ಬಳಿ ಇಟ್ಟ ದೇಶದ ಹೆಸರ ತರಬೇಕರೇವ್ವಾ
ಖುಸೆ ಆಗತಾರ ವಿನೋಬಾಭಾವೆಯವರಾ ।
ಹಸಗೇಡಿ ಗಿರಿಣಿ ಹೊಸತರ ಬಂದಂಥ ಭಾಂಡ ।
ಉಡಬ್ಯಾಡ್ರಿ ಹಡದವ್ವಗಳಿರಾ ॥
ಹೇಳಿ ಸೀರಿ ನೇಸರಿ ಉಟ್ಟತರಾ ।
ಬಾಳ ಘಟ್ಟಿ ತರಾ ಬಣ್ಣ ಒಳೆಪಕ್ಕಾ
ಅಂದ್ರ ಉಳಿತತಿ ನಿಮ್ಮ ರೊಕ್ಕ ।
ನಿಬ್ಬ ಜಾತ್ರಿ ಹೋದಲ್ಲಿ ಹುಡುಗೋರಿಗಿ ।
ಕೊಡಬ್ಯಾಡ್ರಿ ಸಲಗಿ ।
ಬೇಡತಾವ ರೊಕ್ಕ ಪರದೇಶಿ ಮಾಲ ಕೊಳ್ಳುದಕಾ ।
ಕಪ್ಪರದ ಚಾಳಿಸ ತಕ್ಕೊಂಡ ।
ಕಣ್ಣಿಗಿ ಹಾಕಿಕೊಂಡ ಕೊಡತಾರೆವ್ವಾ ರೊಕ್ಕಾ ।
ತಾಸಿನೊಳ ಮುರದ ಹಸನ ಚೊಕ್ಕಾ ॥

**||ಏರ||**

ಇಂಥ ಮಾಲಿಗೆ ಸ್ವಂತ ರೊಕ್ಕಾ ಕೊಡಬ್ಯಾಡಿರೆಂತ ।
ಕರುಹರ ಭೀಮಸಿಂಗ ಹೇಳಿದನು

***ರಚನೆ* – ಹುಲಕುಂದ ಭೀಮಕವಿ**
***ಕೃತಿ* – ಸರ್ವೋದಯ ಗ್ರಾಮೀಣ ಜನಪದ ಗೀತೆಗಳು**

# ೧೧. ಪತಿದೇವರ ಪೂಜೆ

ಹಡದ ತಾಯಿಗಳ ಮುಂದ ಧೃಡವಾದ ಮಾತೊಂದ
ಜಡದ ಹೇಳತೇನ ಕೇಳ್ರಿಸರ್ವೆಲ್ಲಾ ।
ಭಾಗ್ಯದ ಲಕ್ಷ್ಮಿ ನೀವೆ ವಿಧಿಲಕ್ಷಿ ನೀವೆ
ನಿಮ್ಮಿಂದ ನಡದದ ಜಗವೆಲ್ಲಾ ॥ ಪಲ್ಲ ॥

ಗಂಟ ಮಾರಿ ಹಾಕಿದವರು ಎಂಟ ದಿನ ತೆಗೊದಿಲ್ಲ
ಬಂಟ ಗಂಡಸರು ಮಾಡತಾವ ಚಿಂತಿ ।
ತಿಂದ ಕೂಳ ಅವರಿಗೆ ಎಂದು ಮೈಗೆ ಹತ್ತುದಿಲ್ಲ
ನೊಂದಿ ನೊಂದಿ ಆಗತಾವ ಫಜೀತಿ ॥
ಹುಳು ಹುಳು ಮಾರಿ ನೋಡಿ ಹೇಳತಾವ
ಯಾರ ಮುಂದ ಗಳೀಕೊಗತಾವ ಎತ್ತಿನ ಬೆನ್ಹತ್ತಿ ।
ಗಳೇದಿಂದ ಬಂದ ತೊಲಿಬಾಗಿಲದಾಗ
ಕಾಲಯಿಟ್ಟ ಮೇಲೆ ಹೇಣತಿಯ ಮೋತಿ ನೆನಪಾತಿ ॥
ಎತ್ತ ಕಟ್ಟಿ ತುದಿಕಟ್ಟಿಗೆ ಕೂಡ್ರುದರೊಳು
ವಟವಟ ಪಿಟಿಪಿಟಿ ಸುರುವಾತಿ ।
ಚಟಗಿ ಮುಚ್ಚಳಕೆಲ್ಲಾ ಶಟಕಿಬೇನಿ ಬಂತ ನೋಡ್ರಿ
ಘಟಪಟ ವಡುತಾಳ ದುರ್ಗದೇವತಿ ॥
ನಮ್ಮಪ್ಪ ಕೊಟ್ಟ ಕೂತ ಈ ಮನಿ ಯಾವಲ್ಲಿತ್ತ
ಸಾಯುತನಕ ಅವನ ಹೆಣಕ ಅಳಳುದಾತಿ ।
ಬಾವಾನ ಮನಿಯಾಗ ಒಂದ ಭಾಂಡೆಯಿರಬಾರದೇನ ।
ಮಣ್ಣ ಕೊಡ ಕೂಡ ನನ್ನ ಜಲ್ಮಾತಿ ॥

**||ಚಾಲ||**

ಹಿಂಗ ವದರ್ಯಾಡಿ ನೀವೆಲ್ಲ ತಗಿ ಬಾರದರೆವ್ವಾ ಜಗಳಾ ।
ಯಿದರಿಂದ ಆಗುವದು ನಿಮ್ಮ ಮನಿತಾನೆಲ್ಲಾ ಹಾಳಾ ॥
ಮೂಲಿ ಮೂಲಿಗೆ ಒಟ್ಟರತಿರಿ ಕಸದ ಗುಂಪಿಗಳಾ ।

ಅದರಿಂದ ಹುಟ್ಟುವವು ನಾನಾ ಪ್ರಕಾರದ ಹುಳಾ ||
ಆರೋಗ್ಯವಿಲ್ಲದ ಆಗಿಂದಾಗ ರೋಗ ಬಹಳಾ |
ಕಸಾ ತುಂಬಿ ಒಗದ ಸಾರಿಸಿ ಮಾಡ್ರಿ ಝುಳ ಝುಳಾ ||
ಮಣ್ಣ ಮಡಿಕಿಯಿದ್ದರೇನ ಬಿಳಿಭಾಂಡೆಯಿದ್ದರೇನ
ತೊಳದ ಸ್ವಚ್ಛ ಮಾಡಬೇಕ್ರಿ ಅವನ್ನೆಲ್ಲಾ ||
೨
ಹೊರಗಿನಿಂದ ಗಂಡಬಂದರ ಜರಾ, ನಕ್ಕ ಬಿಡರೆವ್ವಾ
ಹಲ್ಲ ತೆಗೆದ ನಿಮ್ಮ ಕೂಡಲಗ್ಗ |
ಹೇವಕಾಗಿ ಸುಮ್ಮನಿದ್ದರ ತಾವ ಮಾತಾಡಸತಾರ
ಕರುಣವಿರಬೇಕರಿ ತಾಯಿ ಅವರ ಮೇಲ ||
ಊಟಕ ಕೂತಗ ಎಟುತ್ರಾಸ ಮಾಡಬಾರದ
ಪ್ರೇಮದಿಂದ ನೀಡಬೇಕರಿ ತಾಯಿಯಂಗ ||
ಗಂಡ ಉಣ್ಣದಕ್ಕಿಂತ ಮೊದಲ ನೀವ ಉಂಡ ಕೂತರ
ಆಯುಷ್ಯ ಕಡಿಮಿ ನಿಮ್ಮ ಗಂಡಗ ||
ಗಂಡಗ ನಿಂದಾ ಮಾಡಿದವರು ಹಂದಿಯಾಗಿ
ಹುಟ್ಟಿತಾರ, ಎಂದ ಅಂದ್ರೆ ಮುಂದಿನ ಜಲ್ಮದಾಗ |
ಮದವಿ ಗಂಡ ಮರ ಮರ ಮರಗಿದರ
ತಿರಕೊಳ್ಳುದ ಅಕಿ ಭೋಗದಾಗ ||
ಪತಿಯಿಂದ ಈ ಲೋಕ ಪತಿಯಿಂದ ಪರಲೋಕ
ಪತಿ ಸೇವೆಯ ಮಾಡಿರಿ ಕ್ಷಿತಿ ಮೇಗ |
ಹುಚ್ಚ ಗಂಡನ ಕೂಡ ಮೆಚ್ಚಿ ನಡಕೊಂಡಲ್ಲಿ
ಕೀರ್ತಿ ಬಂತ ಹೇಮರಡ್ಡಿ ಮಲ್ಲಮ್ಮಗ ||

**||ಚಾಲ||**

ನಿಮಕ್ಕಿಂತ ಹಿರಿಯರಿಗಿ ನಡಿಯಬೇಕ್ರಿ ಶಿರಬಾಗಿ |
ಅತ್ತಿ ಮಾವ ಬಾವ ಅತ್ತಿಗಿ ನಾದಿನಿಯರಿಗಿ ||
ಗುರು ಹಿರಿಯರ ಬೀಗರ ಬರತಿರತಾರ ಮನಿಗಿ |
ಸರಳ ಸ್ವಭಾವದಿಂದ ಮರ್ಯಾದಿ ಕೊಡರಿ ಎಲ್ಲರಿಗಿ ||
ನೆರೆ ಹೊರೆಯಿದ್ದವರ ಕೂಡ ಪ್ರೀತಿ ಗಳಿಸಿರಿ ಹೊಸದಾಗಿ |
ಸಮಾಧಾನ ಗುಣದ ಮೇಲೆ ಪೂರ್ಣಯಿರಲಿ ನಂಬಿಗಿ ||

**||ಏರ||**

ಅನ್ನದಾನ ಕನ್ಯಾದಾನ ಚಿನ್ನದಾನ ವಸ್ತ್ರ ದಾನ
ಎಲ್ಲ ದನಕಿಂತ ಸಮಾಧಾನ ಮೇಲಾ ||

ತಾಯಿಯಂತೆ ಮಕ್ಕಳಂತ ಹೇಳತಾರ ಗಾದಿಮಾತ ।
ನೋಡಿಕೊಂಡ ಹಡಿರೆವ್ವಾ ಕೂಸಿನ್ನ ।
ವರುಷ ತುಂಬುದರೊಳಗ ಎರಡ ಹಡಿಯಬೇಡಿರಿ
ಶಗಣಿ ಮುದ್ದ್ಯಾಗಿನ ಹುಳಗಳನಾ ॥
ಹತ್ತ ಹಡಿಯದೆ ಒಂದ ಮುತ್ತ ಹಡಿಯಬೇಕ ।
ಜವಾಹರಲಾಲ ನೆಹರುನಂಥ ಪಂಡಿತನಾ ॥
ಬಯಕಿ ಹತ್ತಿದಾಗ ಊಟ ಚಲೋ ಆದರ
ಹುಟ್ಟತಾವ ಸಕಲ ಗುಣ ಸಂಪೂರ್ಣ॥
ಬೂದಿ ಕರಣಿ ಶೋಧಮಾಡಿ ದಾದಯಿಲ್ಲ ತಿಂತಿರಿ
ಗೋದಿ ಒಳಗಿನ ಹರಳ ಹುಡಿಕಿ ಎರಿಮಣ್ಣಾ ।
ಬಾದ ಹುಡುಗರ ಹುಟ್ಟ ಹಾದಿ ಬಿಟ್ಟ ತಿರಗತಾವ
ಖಾದಿ ಹಾಕುದಿಲ್ಲ ಆಗತಾವ ಕೋಣಾ ।
ಶ್ರೇಷ್ಠತ್ವ ಇರುದಿಲ್ಲ ಹುಟ್ಟಿದಾಗ ಖೊಟ್ಟಿ ಗುಣ
ತೊಟ್ಟಿಲದಾಗ ಕಲಿತಾವ ಘಟಿಂಗತನಾ ।
ರೊಟ್ಟಿ ಕೆಡಿಸುವ ಆಳಯಿವ ನಿಷ್ಠಾವಂತರಲ್ಲರೆವ್ವಾ
ಭ್ರಷ್ಟರಿಂದ ರಾಷ್ಟ್ರದ ಅಪಮಾನಾ ॥

**||ಚಾಲ||**

ಇಂಥ ರಾಷ್ಟ್ರ ಘಾತರಿದ್ದ ದೇಶವೆಲ್ಲಾ ಅಳಗಾಲ ।
ಗಾಂಧಿ ಯಂಥವರ್ನ ಹಡದರ ಬೀಳತೇವ ಕಾಲಾ ॥
ಕಿತ್ತೂರ ಚನ್ನಮ್ಮನಂಥ ಹೆಣ್ಣ ಮಕ್ಕಳು ಈಗ ಇಲ್ಲ ।
ನೆನಿಸಿ ಕೋತ ಕೂಡ್ರುದಾತ ಹಿಂದಿನ ಹಿರಿಯರನೆಲ್ಲ ।
ಈಗಿನವರು ಕಲತಾರ ಮಾಡಲಿಕ್ಕೆ ಬಾಳ ಡೌಲ ।
ಡೌಲ ಬಿಡಿರಿ ಇನ್ನ ಮೇಲ ಹಾಳಾತ ಹಿಂದುಸ್ತಾನವೆಲ್ಲ ॥

**||ಏg**||

ಮಂದಿಗೆ ಬುದ್ಧಿ ಹೇಳಿತಂದ ಹಾದಿಗೆ
ಹುಲಕುಂದ ಭೀಮರಾಯನ ಅಕಲ ॥

***ರಚನೆ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

# ೧೨. ಮಗನ ತೂಗುವ ತಾಯಿ

ಮಗನ ತೂಗುವ ತಾಯಿ ಜಗವ ತೂಗುವಳೆಂದು ।
ತಗದ ಹೇಳುವೆ ಕಲಿಯುಗದ ಕಥಾ ।
ಗಲಿರುಳೆನ್ನದೆ ತಗಬಗಿಸುವ ಮನ
ಬಿಗಿ ಹಿಡಿದವರಿಗೆ ಲಗು ಒಳಿತಾ ॥ ಪ ॥

ಬಾಲಕಿಯರು ಮನಿ ಮಾಲಕರಾಗಿ ದೇಶ ।
ಪಾಲಕರಾಗುದ ತಾವೇ ಸ್ವತಾ ।
ಪಲ್ಲಕ್ಕಿಯೊಳು ಕೂತ ಲೋಲಾಡುವದಕ್ಕೆಲ್ಲಾ ।
ಮೂಲ ಇವರೇ ಕಾರಣ ಭೂತಾ ॥
ತ್ಯಾಗಿ ಯೋಗಿಗಳು ಜೋಗಿ ಜಂಗಮರು ।
ಆಗುದು ಇವರಿಂದ ಉತ್ಪತ್ತಾ ।
ಕವಿ ವಚನ ಶಿವ ವಾಙ್ಮಯಗಾರ ।
ಇವರೆಲ್ಲಾ ಸ್ತ್ರೀಯರಿಂದ ಪ್ರಖ್ಯಾತಾ ॥
ಮೆರೆವ ಅರಸು ತಿರುಕ ಹರಿಜನರು ।
ಸಿರಿವಂತರಿಗೆಲ್ಲಾ ಇವರೇ ಮಾತಾ ।
ಭರತ ಖಂಡದಲ್ಲಿರುವ ನಾರಿಯರನ್ನ ।
ವರ್ಣಿಸುವದು ಆಗದ ಮಾತಾ ॥

**||ಚಾಲ||**

ಸ್ವಾಮಿ ರಾಮಕೃಷ್ಣ ಪರಮಹಂಸ ವಿವೇಕಾನಂದ ಪುರುಷ ।
ಇವರನ್ನ ಹಡದವರಾ ಅಂಥವರಿಂದ ದೇಶದುದ್ಧಾರಾ ॥
ಶಿವಾಜಿ ಮಹಾರಾಜ ತಾಯಿ ಅನಬೇಕ ಜೀಝಾಬಾಯಿ ।
ಮನಸ ನಿರ್ಧಾರಾ ಧೈರ್ಯವಂತಿ ಇದ್ಲ ಭರಪೂರಾ ॥
ಮೋತಿಲಾಲ ನೇಹರು ಅವರ ಸತಿ ಸ್ವರೂಪರಾಣಿ ।
ಹೆತ್ತ ಕುವರಾ ಜವಹರಲಾಲ ನೋಡ್ರಿ ಸತ್ಪುತ್ರಾ ॥

**||ಏರು||**

ಧೀರ ಮಾತೆಯರ ವೀರರಕ್ತದಿಂದ ಶೂರ ।
ಪುರುಷರು ಜನಿಶಾರ ಮಸ್ತಾ
ಸತ್ಯವಂತ ಸತ್ಪುರುಷ ಗಾಂಧಿಜಿ ತಾಯಿ ।
ಪುತಳಾಬಾಯಿ ಅಂತ ಆಕಿ ಹೆಸರಾ ।
ನಿತ್ಯ ನೇಮದ ವೃತಾ ತಪ್ಪದೆ ಇದ್ದಲ್ಲೆ ।

ಹುಟ್ಟಿದ್ದನು ಅಂಥ  ಕುವರಾ ॥
ಸೂರ್ಯ ನಾರಾಯಣನ ಮಾರಿ ನೋಡಿದಲೆ ।
ಬಾಯಾಗ ಹಾಕತಿದ್ದಿಲ್ಲ ನೀರಾ ।
ಮೂರ ದಿವಸ ಮಾಡ ಮುಚ್ಚಿದರು ।
ಸುದ್ದಾ ಉಪವಾಸ ಇರತಿದ್ಲ ನಿರ್ಧಾರಾ ॥
ಬಿಸಲ ಬಿದ್ದತಿ ಅಂತ ಚೇಷ್ಟಾ ಮಾಡಿದರ ।
ಹೊರಟ ನಕ್ಕ ಮಾತಾಡಿ ಹೋಗತಿದ್ಲ ।
ಸಿಟ್ಟಿಗೇಳತಿದ್ದಿಲ್ಲ ಚೂರಾ ॥

**॥ಚಾಲ॥**

ಇಂಥಾ ಭಾವನಾದಿಂದ ಇದ್ದಲ್ಲೆ ಅಕಿಯ ಹೊಟ್ಟಲಿ ।
ಬಾಪೂಜಿ ಜನಸಿದನು ಕಲಿಯುಗದಿ ಕೀರ್ತಿ ಹೊಂದ್ಯಾನು ॥
ಹೊಟ್ಟೆಯೊಳಗ ಪಿಂಡ ಮೂಡಿದಾಗ ತಾಯಿ ಮನಸಿನಾಗ ।
ಇದ್ದಂಥ ಗುಣವನ್ನು ಕೂಸ ಅನುಕರಣ ಮಾಡುವದು ತಾನು ॥
ಇದನ ತಿಳಿದ ನೋಡಿ ಅನಗುಣ ಬಿಟ್ಟ ಸಂಪೂರ್ಣ ।
ಹಿಡಿರಿ ಶಾಂತಿಯನು ಮುಂದ ಪಡಿರಿ ಮುಕ್ತಿ ಮಾರ್ಗವನು ॥

**॥ಏರು॥**

ಭಾವದಂತೆ ಭಕ್ತಿ ಜೀವ ಇದ್ದಂತೆ ಶಿವ ।
ಮನ ಇದ್ದಂತೆ ಘನವೆಂಬ ಗಣಿತಾ
ವ್ಯಾಳೆ ವ್ಯಾಳೆಕ ಫಾಳಿ ಬಿಟ್ಟಂತೆ ।
ಹಾಳ ಮಾಡುದು ನಿಮ್ಮನೀ ಮನಸಾ ।
ಬುದ್ಧಿಯಿಂದ ತಿದ್ದಿ ಬದ್ಧ ಮಾಡಿದರ
ಶುದ್ಧವಾಗಿ ಕಾಂಬುದು ಹಸಾ
ಬುದ್ಧಿವಾಗಿ ಕಾಂಬುದು ಹಸಾ ॥
ಮನಸ್ವಚ್ಛ ಆಗುದಕ್ಕ ಮೈ ಸ್ವಚ್ಛ ಇರಬೇಕ ।
ನಿತ್ಯ ಸ್ನಾನದಿ ಕಳಿಬೇಕ ಹೊಲಸಾ ।
ಹೊಲಸ ಇರವರಿಗೆ ಕೆಲಸ ನೀಗುದಿಲ್ಲ ।
ಆಲಸ್ಯತನದಿಂದ ಕುಲನಾಶಾ ॥
ಕುಲಾ ಚಲು ಮನಿ ಹೊಲಾ ಗಳಿಸಿ ಹೊಟ್ಟಿ ।
ಫಲಾ ಇದ್ದರ ಅತಿ ಹರುಷಾ ।
ಹರುಷ ಮಾತ ಸಂವಿ ಬೆರಸಿ ಆಡಿದರ ।
ಸರಸದಿಂದ ವಲಿಯಾಂವ ಪುರುಷಾ ॥

**॥ಚಾಲ॥**

ಹಿಂದಾಡಿ ಕೋತಿರಿ ಗಂಡಗ ನಾನು ದುಡದಾಗ ।
ನನ್ನ ಬಾಳ್ವೆ ಸರಳಾ ಇವಗೆಷ್ಟ ಬಡೀಲಿ ಮೂರ ಕೂಳಾ ॥
ಮಾಡಿದಾಗ ಬಂದ ತಿನ್ನಾಂವ ಹೊರಗ ಹೋಗಾಂವ ।
ಇವಗ ಇಲ್ಲಾ ಕಳ್ಳಾ ಕರಕೊಳ್ಳುವದಿಲ್ಲ ಮಕ್ಕಳಾ ॥
ತನ್ನ ಮನಿಯಾಗ ಇಟಕೊಂಡ ರಾಡಿ ಹಿರೇತನ ಮಾಡಿ ।
ಬರತಾನಿವ ಕಳ್ಳಾ ನನ್ನ ಮುಂದ ಹೇಳತಾನ ಸುಳ್ಳಾ ॥

**॥ಏರು॥**

ಅನಕ ಆಡುದು ಬಿಡರೆಂತ ಹುಲಕುಂದ ।
ಭೀಮೇಶ ಹೇಳಿದ ಮಾತಾ

***ರಚನೆ :*** **ಹುಲಕುಂದ ಭೀಮಕವಿ**
***ಕೃತಿ :*** **ಸರ್ವೋದಯ ಗ್ರಾಮೀಣ ಜನಪದ ಗೀತೆಗಳು**

## ೧೩. ನೀತಿವಂತ ಸ್ತ್ರೀ

ನೀತಿವಂತ ಹೆಣ್ಣ ಮಕ್ಕಳು ಅಂತ ಯಾರಿಗೆ ಅನಬೇಕು
ತುರ್ತಾ ಹೇಳುವೆನು ಕೇಳಿರಿ ಕೂತಾ ॥ಪಲ್ಲ॥

ಪತಿಗಿಂತ ಮೊದಲು ಸೂರ್ಯ ಉದಯದೋಳು ಏಳಾಕ್ಕಿ
ಪ್ರತಿದಿನದ ಕೆಲಸವನು ನಿತ್ಯನೇಮ ಮಾಡಾಕ್ಕಿ ॥
ದೇವರಲ್ಲಿ ಇಡುವ ಭಕ್ತಿ ಗಂಡನಮೇಲೆ ಇಟ್ಟಾಕಿ ದುರ್ವೆಶನಕಾಗಿ
ದುರ್ವೆಶನಕಾಗಿ ಆಕಿ ಮನಸನು ಹಾಕಬಾರದಂತಾ॥ ೧ ॥

ಮನೆತನದ ಆದಾಯನೋಡಿ ಹೆಚ್ಚು ಕಡಿಮಿ ಆಗದಂತೆ
ಪ್ರಪಂಚಮಾಡುವ ಹಿಡಿತಾ ಮನದೊಳು ಇದ್ರ ಸಿದ್ಧಾಂತಂ ॥
ಒನಪ ಒಯ್ಯಾರ ಮೋಸತನ ಗೊತ್ತ ಇಲ್ಲದಂತಾಕ್ಕಿ
ಚಹಾ ಕಾಫಿಯ ಚಟವನು ಕಟ್ಟಾಮಾಡಿ ಬಿಟ್ಟಾಕ್ಕಿ
ಕಡುನಿದ್ರೆ ಆಲಸ್ಯತನ ಪೂರ್ಣ ಆಳಿದು ಬಿಟ್ಟಾಕ್ಕಿ
ದಾನಮಾಡುವ ದಾನಾಮಾಡುವ ಕೈಯ್ಯಾ ಇದ್ದರ ಇರಬೇಕಂತಾ॥ ೨ ॥

ಪರಪುರುಷರ ಕಂಡರ ಅಣ್ಣ ತಮ್ಮರನ್ನುವಾಕಿ
ಅತ್ತಿ - ಮಾವ ಭಾವಂದಿರನ ಪ್ರೇಮದಿಂದ ನೋಡಾಕ್ಕಿ ॥
ಪತಿ ಭಂಗಾರಕ್ಕಿಂತ ಆಡಂಬರ ಮನದೊಳು ತರಬಾರದಂತಾ
ಹಿಂಗ ಹೇಳತದ ವೇದಾಂತಾ ॥

ಯೌವ್ವನಕಾಲಕ್ಕ ಪತಿಯ ಆಜ್ಞೆ ಮೀರದಾಕ್ಕಿ
ವೃದ್ಧಾಪ್ಯದೊಳಗ ಮಕ್ಕಳಾಜ್ಞೆದಾಗ ಇರಾಕ್ಕಿ
ಸಿರಿ ಬಡತನವೆಂಬುವದು ಸುಂಟರಗಾಳಿ ಎನ್ನಾಕ್ಕಿ ॥
ಚೆಂದ ಹುಲಕುಂದ ಚೆಂದ ಹುಲಕುಂದ
ಕಂದ ಭೀಮ ಮಾಡಿ ಹೇಳಿದ ಕವಿತಾ॥ ೪ ॥

***ರಚನೆ :*** **ಹುಲಕುಂದ ಭೀಮಕವಿ**
***ಕೃತಿ :*** **ಸರ್ವೋದಯ ಗ್ರಾಮೀಣ ಜನಪದ ಗೀತೆಗಳು**

## ೧೪. ಯಾರ್ಯಾರು ಕಮ್ಮ (ಕಡಿಮೆ)

ಬರಿಯಲಿಕ್ಕೆ ಕಲಿಯದೆ ಓದೇವ ಕಮ್ಮ
ಕರಿಯದವರ ಮನಿಗೆ ಹೋಗಾವ ಕಮ್ಮ ॥
ಏನು ತಿಳಿಯದೆ ಗೋಣ ಹಾಕಿಕೊಂತ
ಶಾಸ್ತ್ರಪುರಾಣ ಕೇಳಾಂವ ಕಮ್ಮ ॥

ಜಂಬ ಪೋಷಕಗಳ ಹಾಕಾವ ಕಮ್ಮ
ಕೆಲಸವಿಲ್ಲದೆ ಖಾಲಿ ತಿರಗಾಂವ ಕಮ್ಮ ॥
ಸಾಧುಸಂತರ ಸಂಗವ ಮರತು
ವೇಶೇರ ಸಹವಾಸ ಮಾಡುವ ಕಮ್ಮ ॥

ಸುಳ್ಳ ಖರೆ ಚಾಡಿ ಹೇಳಾವ ಕಮ್ಮ
ಜಗಳಾ ಬೆಳಿಸಿ ಮೋಜ ನೋಡಾವ ಕಮ್ಮ ॥
ವಿಶ್ವಾಸ ಇದ್ದಲ್ಲಿ ನಂಬಿ ನಡೆಯಬೇಕ
ಕದ್ದಿಲಿ ಕಾಯಕಾ ಮಾಡಾವ ಕಮ್ಮ ॥

ನೀತಿ ನೇಮ ಬಿಟ್ಟ ನಡ್ಯಾವ ಕಮ್ಮ
ಜಾತಿ ಭೂತ ಬೆನ್ನ ಹತ್ತಾಂವ ಕಮ್ಮ
ಜನಿಸಿ ಬಂದವರೆಲ್ಲಾ ಒಂದೇ ಸ್ವರೂಪಾ
ನಾವು ನೀವಂತ  ಅನ್ನಾಂವಾ ಕಮ್ಮ

ತರಕ ತಪ್ಪಿ ಪದಾ ಮಾಡಾಂವ ಕಮ್ಮ
ಸುರತಿ ನಾದ ಬಿಟ್ಟ ಹಾಡಾಂವ ಕಮ್ಮ
ಅಬ್ಬರದಿಂದ ಬಂದ ಸಭಾದೊಳಗ ನಿಂತ
ಅಗ್ಗ ಆಗಿ ಮನಿಗಿ ಹೋಗಾಂವ ಕಮ್ಮ ॥

ತಿಗಡೊಳ್ಳಿ ಮರಿಕಲ್ಲಗ ಅಹಂಕಾರ ಕಮ್ಮ
ಪ್ರಾಸ ಇಲ್ಲದೆ ಪದಾ ಮಾಡೋದ ಕಮ್ಮ ||
ಬಲಭೀಮನ ಶಿಷ್ಯರಾಗಬೇಕ ಆಗದಿದ್ದರ
ನಿಮ್ಮ ದೈವಾನ ಕಮ್ಮ ||

**ರಚನೆ : ಮರಿಕಲ್ಲಕವಿ**
***ಕೃತಿ :* ಮರಿಕಲ್ಲಕವಿಯ ಗೀಗೀ ಪದಗಳು**

## ೧೫. ನಮ್ಮವರಂತ ತಿಳಿ ಹೇಳಾಂವಾ

ನಾ ನಮ್ಮವರಂತ ತಿಳಿ ಹೇಳಾಂವಾ
ಕೇಳದಿದ್ದರ ಕಾಲ ಬೀಳಾಂವಾ ||
ಒದ್ದ ಹೋದರ ಸುದ್ದಾ ಬುದ್ಧಿ ಹೇಳಾಂವಾ
ಬೈಯ್ಯಾವರ ಬೆನ್ನಹತ್ತಿ ಬರಾಂವಾ
ಸಾಯೂತನ ಜೀವಾ ಅರದ ಕುಡ್ಯಾಂವ
ಸತ್ತ ಹ್ವಾದರೂ ದೆವ್ವ ಆಗಿ ಕಾಡಾಂವಾ ||

ಕೆಟ್ಟ ಕೆಲಸ ಬಿಟ್ಟಬಿಡಿರಿ ಅನ್ನಾವಾ
ಅಷ್ಟೂ ಮೀರಿ ಮಾಡಿದರ ಕೆಟ್ಟೀರೆ ಅನ್ನಾವಾ
ಖಾಲಿ ತಿರಗಾವರನ್ನ ಕಂಡ ಬೆಂಕಿ  ಕಾಣಾಂವಾ
ಕೇಳದಿದ್ದರ ಹಾಳಾಗಿ ಹೋಗ್ರಿ ಅನ್ನಾಂವಾ ||

ದುರ್ವೆಸನ ದೂರ ಮಾಡಿರಿ ಅನ್ನಾಂವಾ
ಸತ್ಕಾರ್ಯಕ್ಕೆ ಸದಾ ದುಡಿರಿ ಅನ್ನಾಂವಾ
ಸಾದೂರ ಸಂಗ ಮಾಡಿರೆಂತ ಹೇಳಾಂವಾ
ತತ್ವಜ್ಞಾನ ಗೊತ್ತ ಹಿಡೀರಿ ಅನ್ನಾಂವಾ

ಚಾಡಾ ಹೇಳೂ ಚಟಾ ಬಿಡರಿ ಅನ್ನಾಂವಾ
ಸುಳ್ಳಕರೆ ಕಂಡ ಹಿಡಿರಿ ಅನ್ನಾಂವಾ
ತಿಗಡೊಳ್ಳ್ಯಾಗ ನಾನು ಇರಾಂವಾ
ಬಲಭೀಮನ ಪಾದಾ ಹೊಂದಾವಾ ||

**ರಚನೆ : ಮರಿಕಲ್ಲಕವಿ**
**ಕೃತಿ : ಮರಿಕಲ್ಲಕವಿಯ ಗೀಗೀ ಪದಗಳು**

## ೧೭. ನಿನ್ನದು ನನ್ನದು

ನಾದ ನಿಂದ ಬಿಂದು ನಂದ
ಪಾವನಿಂದ ಕಾವನಂದ
ತಂತಿನಿಂದ ಕಡ್ಡಿನಂದ
ತೂತನಿಂದಾ ಗೂಟನಂದಾ ॥

ಗುಡಿನಿಂದ ಗುರುನಂದ
ಮರವನಿಂದ ಅರವನಂದ
ಗುಳದಾಳಿ ಗುರುಪಂದ
ಬ್ರಹ್ಮಸ್ವರೂಪ ನಂದಾ ॥

ದವತಿನಿಂದ ಟಾಕನಂದ
ಕಾಗದೆನಿಂದ ಮಸಿನಂದ
ಬರಿ ಎಂದ ನಿಂತ ಪದಾ
ಅವನಿಂದ ಆಗೋದ ಸದ್ಬೋಧಾ ॥

ತಿಗಡೊಳ್ಳಿ ಊರ ಚಂದ
ಕಲ್ಮೇಶ್ವರ ಗುಡಿಮುಂದ
ಹಾಡತೇವಿ ನಿಮ್ಮ ಮುಂದ
ಕುಂತ ಕೇಳರಿ ಚಂದಾ ॥

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೧೮. ಏನೇನು ಚಂದ

ಸಾದೂರ ಸಂಗ ಚೆಂದಾ ಸದ್ಗುರುವಿನ ಧ್ಯಾನ ಚೆಂದಾ
ಭಕ್ತಿ ಇದ್ರ ಭಜನಾ ಚೆಂದಾ ಶಕ್ತಿ ಇದ್ರ ಕುಸ್ತಿ ಚೆಂದಾ ॥
ಯುಕ್ತಿಲಿಂದ ರಾಜ್ಯ ಆಳೋದು ಚೆಂದಾ ॥

ಗಡ್ಡ ಇದ್ರ ಮಕಾ ಚೆಂದಾ ಗುಡ್ಡಕ್ಕ ಕಡ್ಡ ಚೆಂದಾ
ವಡ್ಡಗಿ ನೀರ ಚೆಂದಾ ಮಡ್ಡಗಿ ದಡ್ಡಿ ಚೆಂದಾ ॥
ದಡ್ಡರ ಕೂಡ ಗುದ್ದ್ಯಾಡೋದಲ್ಲ ಚೆಂದಾ ॥

ಮೀಸಿ ಇದ್ದ ಮಾರಿ ಚೆಂದಾ ಕುಂಕುಮ ಇದ್ದ ನಾರಿ ಚೆಂದಾ
ವಾರಿಗುಳ್ಳ ವಗತಾನ ಚೆಂದಾ ಸರಿ ಇದ್ದ ನೆರಿ ಚೆಂದಾ ||
ಹಿಂದಮುಂದ ನಿಂದಾ ಆಡೋದಲ್ಲ ಚೆಂದಾ ||

ಕೈಯೊಳು ಬಳಿ ಚೆಂದಾ ಮಮತೇವ ಮಾತ ಚೆಂದಾ
ಮಾತಿನಂತೆ ಕೃತಿ ಚೆಂದಾ ಮಕ್ಕಳಿದ್ರ ಮನಿ ಚೆಂದಾ ||
ಹಡ್ಯಾವರಿಗೆ ಚೇಷ್ಟಾ ಆಡೋದಲ್ಲ ಚೆಂದಾ ||

ತಿಗಡೊಳ್ಳಿ ಊರ ಚಂದಾ ಗ್ರಾಮದೇವಿ ಗುಡಿ ಚೆಂದಾ
ಬಲಭೀಮನ ದರ್ಶನ ಚೆಂದಾ ಮರಿಕಲ್ಲನ ಕವಿ ಚೆಂದಾ ||
ಯುಗಾದಿಗೇ ಕಲ್ಮೇಸೂರ ಜಾತ್ರಿ ಚೆಂದಾ ||

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೧೮. ಜೈನರಾಗಿ ಜನಿಸಿದ ಬಳಿಕ

ಜೈನ ಧರ್ಮದ ಕ್ರಿಯಾ ಹೇಳತೇವ ತಗದ ಬಾಯಾ
ನನ್ನ ಮ್ಯಾಲ ನಿಮ್ಮ ದಯಾ ಇರಬೇಕ ಪೂರ್ಣ
ಶಾಂತದಿಂದ ಕೇಳರಿ ಸರ್ವಜನಾ ||

ಜೈನರಾಗಿ ಜನಿಸಿದ ಬಳಿಕ ಕ್ರಮ ನೋಡಿ ನಡಿಬೇಕ
ಪಾಪಪುಣ್ಯ ಅರಿಬೇಕ ತಿಳದ ನುಡಿ ಆಡಬೇಕ
ಆಹಾರ ನೋಡಿ ಮಾಡಬೇಕ ಭೋಜನಾ
ನೀರ ಸೋಸಿ ಕುಡೀರಿ ಪ್ರತಿದಿನಾ ||

ಪಾತಾಳ ಬಟ್ಟಿ ತಗೋಬೇಕ ಜೋಡೊಪದರ ಮಾಡಬೇಕ
ಬಾಂವಿಯಲ್ಲಿ ಸೋಸಬೇಕ
ಅರವಿ ತೊಳದ ಮಾಡಬೇಕ ಹಸನಾ
ಇದರಂತ ಮಾಡ್ರಿ ಹಾಲುಹೈನಾ ||

ಮೈಲಿಗಿ ಬಟ್ಟಿ ಇರಬಾರದ ಉಪಯೋಗ ಮಾಡಿರಬಾರದ
ಚಿದ್ರ ಪದ್ರ ಆಗಿರಬಾರದ
ನಿಮ್ಮ ಮುಂದ ಮಾಡುವೆ ವರ್ಣನಾ
ಇಲ್ಲದಿದ್ರ ಕೊಲ್ಲುವಿರಿ ಕ್ರಿಮಿಗಳನಾ ||

ಮಲಿನ ಬಟ್ಟಿ ಇರಬಾರದಂತ ಹೇಳತೇನ ನಾನಿಂತ
ಕೇಳಬಹುದ ಯಾಕಂತ
ಭಗವಂತಗ ನೈವೇದ್ಯೆ ಆಗೋದ ಅನ್ನಾ
ಗುರುಗಳಿಗೆ ಕೊಡತೇರಿ ಆಹಾರವನ್ನಾ ॥

ನೀರ ಸೋಸಿ ಕುಡಿದಿದ್ದರ ಆಹಾರ ನೋಡಿ ಉಣದಿದ್ದರ
ದಾರಿ ನೋಡಿ ನಡಿದಿದ್ದರ
ಊರ ಸುಟ್ಟ ಮಾಡಿದಂತೆ ದಹನಾ
ತಟ್ಟುವದು ಪಾಪದ ಬಂಧನಾ
ತಿಗಡೊಳ್ಳಿ ಊರಸಿಸ್ತ ಬಸ್ತಿಯಲ್ಲಿ ಭಗವಂತ
ಜಿನೇಶ್ವರ ಅರಿಹಂತ
ಮಾಡತೇನ ನಾವು ಧ್ಯಾನಾ
ಇದು ಮರಿಕಲ್ಲನ ಕವನಾ ॥

***ರಚನೆ :*** **ಮರಿಕಲ್ಲಕವಿ**
***ಕೃತಿ :*** **ಮರಿಕಲ್ಲಕವಿಯ ಗೀಗೀ ಪದಗಳು**

## ರಾಷ್ಟ್ರೀಯ

## ೧. ದೇಶಭಕ್ತಿ

ಜನನಿ ಜನ್ಮಭೂಮಿ ಸೇವಾ ಮಾಡಿದರ
ಹುಟ್ಟಿ ಬಂದದ್ದಕ ಸಾರ್ಥಕ
ಜನ್ಮಭೂಮಿ ಸೇವಾ ಮಾಡದಿದ್ದರ
ಆಗೂದು ಘಟ್ಟಿ ಅವಗ ನರಕಾ
ಹುಟ್ಟಿ ಬಂದವಗ ಸಾವು ತಪ್ಪುದಿಲ್ಲರಿ
ಸಾವುದು ಒಂದಿನ ನಿರಕ |
ದೇಶ ಸೇವೆಗೆ ದೇಹದಾನ ಮಾಡಿದವ
ವಂದ್ಯನಾಗುವ ಲೋಕಕ್ಕ||೧||

ಭಾರತದ ಕೆಚ್ಚೆದೆಯ ವೀರ
ಪುರಾಣ ತೆಗದು ನೋಡು ಧೀರೆ
ಹಿಮಾಲಯ ಗೌರಿಶಂಕರ
ಶಿಖರದಲ್ಲಿ ಇರತಾನೋ ಶಿವಹರಾ
ಹೇಳತೈತೇ ಧರ್ಮ ಶಾಸ್ತರಾ
ಭಾರತೀಯರ ಪುಣ್ಯಕ್ಷೇತ್ರ

ಮಲಗಿದ ಭಾರತ ಸ್ವಾತಂತ್ರ್ಯ ಸಿಂಹಕ
ಚುಚ್ಚಿ ರೊಚ್ಚಿಗೆಬಿಸ್ಯಾರೋ||೨||

ನಾಡ ಸ್ವಾತಂತ್ರ್ಯಗಿಂತ ಹೆಚ್ಚಿನದ್ಯಾವುದಿಲ್ಲ
ನಾಡ ಗುಡಿಯ ಮಾನ ಕಾಯಬೇಕ
ತನುಮನಧನ ನೀವು ಅರ್ಪಣ ಮಾಡಿ
ಭಾರತಕೆಲ್ಲರು ದೇಶಕ್ಕೆ
ಕಲಾದಗಿ ಊರ ಕವಿಗಾರ ಇನಾಮದಾರ
ಭಾರತ ನಾಡಿನ ಸೇವಕ
ರಾಷ್ಟ್ರ ಮಾನಾ ಕಾಯಿರಂತ ಕೈಮುಗಿದು
ಹೇಳತಾನ ಹಿಂದು ದೇಶದ ಜನಕ್ಕ||೩||

***ರಚನೆ:*** ಕಲಾದಗಿ ಇನಾಮದಾರ
***ಕೃತಿ:*** ಜಾನಪದ ಝೇಂಕಾರ

## ೨. ಭಾರತದ ಗತ ವೈಭವ ಲಾವಣಿ

೧
ಪುಣ್ಯ ಭೂಮಿ ಅಂದರೆ ಹಿಂದುಸ್ಥಾನ
ಕೇಳರಿ ಸರ್ವ ಜನ ಹೇಳುವೆನು ಪೂರ್ಣ
ಇರಲಿ ನಿಮ್ಮ ಚಿತ್ತ
ಧನ್ಯ ಧಾನ್ಯ ತುಂಬಿ ತುಳುಕುವದು ಸರ್ವ ಸಂಪತ್ತು||ಪ||

ಕನ್ಯಾಕುಮಾರಿಯಿಂದ ಹಿಮಾಲಯ ತನಕ
ದಕ್ಷಿಣೋತ್ತರಕ ಉದ್ದಳತಿ ಲೆಖ್ಖ
ಎರಡು ಸಾವಿರ ಮೈಲ
ಪೂರ್ವ ಪಶ್ಚಿಮದಡ್ಡಾಲಗಲಿರುವದು ೧೮೦೦ ಮೈಲ
ರಾಷ್ಟ್ರದ ಕ್ಷೇತ್ರಫಲ
ಒಟ್ಟುಗೂಡಿ ಎಲ್ಲಾ ೧೫ ಲಕ್ಷ ಮೈಲ
ಚಚೌಕು ಇರುವದಲ್ಲಾ
ಭರತಖಂಡದ ಉತ್ತರದಲ್ಲಿ ಪರ್ವತದ ಸಾಲ
ಅದರಲ್ಲಿ ಎತ್ತರವಾದ ಶಿಖರ
ಗೌರಿಶಂಕರ ಎಂಬ ಹೆಸರ
ಎಲ್ಲಾಕ್ಕಿಂತ ಮೇಲ
೨೯ ಸಾವಿರದ ೨೫ ಅಡಿ ಇರುವದಲ್ಲ

**||ಚ್ಯಾಲ||**

ಪಶ್ಚಿಮಕ ಅರಬೀ ಸಮುದ್ರ
ದಕ್ಷಿಣಕ ಹೆಸರ ಹಿಂದುಮಹಾಸಾಗರ
ಇದು ಅಲ್ಲದೆ ಪೂರ್ವಕ ಬಂಗಾಲ ಉಪಸಾಗರ
ಇವು ಪಸರಿಸುವವು ಪೂರ

**ಶ್ಲೋಕ**

ಕೇಳರಿ ನಮ್ಮ ರಾಷ್ಟ್ರದಲ್ಲಿ ಸಿಂಧು ಬ್ರಹ್ಮಪುತ್ರ
ಯಮುನಾ ಕೃಷ್ಣ ಗೋದಾವರಿ ಸಮುದ್ರ
ಕಾವೇರಿ ಹರಣಕಾಶಿ ತುಂಗಭದ್ರ
ವೇದಗಂಗ ದೂದಗಂಗ
ಪಂಚಗಂಗ ಘಟಪ್ರಭ ಮಲಪ್ರಭ
ಮುಂತಾದ ಶ್ರೇಷ್ಠವಾದ ಹೊಳಿ ಇಲ್ಲಿ ಹರಿಯುವವು

**||ಏರು||**

ಮುತ್ತು ಮಾಣಿಕ ಬಂಗಾರ ಖಣಿ
ವಜ್ರದ ಮಣಿ ಚಿಮಣಿ ಎಣ್ಣಿ ಕಬ್ಬಿಣ ಸಹಿತ||೧||
ಇಲ್ಲಿ ಧಾನ್ಯ ಬೆಳೆಯುತಾವ ನಿವಳ
ಗೋಧಿ ಹತ್ತಿ ಜೋಳ
ಕಡ್ಲಿ ಅಡಗಾಳ ಮೊದಲಮಾಡಿ ಎಲ್ಲ
ಭತ್ತ ರಾಗಿ ನವಣಿ ಉದ್ದು ಸಜ್ಜೆ ಹಿಡಿದ ಸರ್ವೆಲ್ಲ
ಔಡ್ಲ ಅಗಸಿ ಸೇಂಗಾ ಪುಂಡಿ ಎಳ್ಳ
ಕುಸಬಿ ಗುರೆಳ್ಳು ಮುಂತಾದ ಎಂಣಿಕಾಳ
ಬೆಳೆಯುದ ಅಳತಿಲ್ಲ
ಸಿಂದಿಗಿಡದಿಂದ ಹೊಸೂರಾಗ ತಯಾರಾಗತೈತಿ ಬೆಲ್ಲ
ಬೇಕಾದಷ್ಟು ಹಣ್ಣು ಹಂಪಲ ಔಷಧ ತಪ್ಪಲ
ಯಾವದು ಕಡಿಮಿಲ್ಲ ದೊರೆಯತತಿ ಎಲ್ಲ
ಶ್ರೇಷ್ಠ ಅರಣ್ಯ ಇರುವದು ನೀಲಗಿರಿಯ ಎಡ ಬಲ

**||ಚ್ಯಾಲ ||**

೧೨೧ ಅಂಸ ಉಷ್ಣತಾ ಇಲ್ಲಿಯ ಹವಾ
೩೪ ಅಂಸ ತಂಪ ಹವಾ
ಹಿಂದುಸ್ಥಾನದ ಜನಸಂಖ್ಯೆ ಚಿತ್ತಿಟ್ಟ ಕೇಳರಿ ನೀವ
ಕೈಮುಗದ ಹೇಳುವೆ ಸಣ್ಣಾಂವ
ಕೇಳರಿ ನಮ್ಮ ದೇಶದಲ್ಲಿ

ಹತ್ತೊಂಬತನೂರಾ ನಾಲವತ್ತೊಂದರಲ್ಲಿ
ನಾಲವತ್ತು ಕೋಟಿ ಜನಸಂಖ್ಯೆ ಇರುವದಲ್ಲ

||ಏರು||

ಪಾರಸಿ ಸೀಖ ಯಹೂದಿ ಬೌದ್ಧ ಜೈನ ಹಿಂದು ಮುಸಲ್ಮಾನ
ಮರಾಠಿ ಕ್ರಿಶ್ಚಿಯನ್ ಧರ್ಮದ ಮಂದಿ ಸಹಿತ||೨||
ಎಲ್ಲಾ ಮಂದಿ ಆಗಿ ಒಕ್ಕಟ್ಟ
ಖಾದಿ ಉಟ್ಟ ತೊಟ್ಟ ಪರದೇಶಿ ಮಾಲ ಬಿಟ್ಟ
ಕೂಡಿರಿ ಕಾಂಗ್ರೆಸ್‌ಕ
ಜೋಡ ನಮಸ್ಕಾರ ಹಾಕತೇನಿ ನಾನು ನಿಮ್ಮ ಪಾದಕ
ಪಕ್ಕಾ ಖಾದಿ ಅರಿವಿ ತೊಟ್ಟವರ
ಗಾಂಧಿ ನೆಹರು ಅಝಾದರ ಅದಾರ
ಬಾಳ ಚೊಕ್ಕ ಇಂಥಾವರ
ಹೋಗೂದಿಲ್ಲ ಪರದೇಶಿ ಮಾಲಿನ ಸನಿಕ
ಅವರ್ಹೇಳಿದ್ಹಂಗ ಕೇಳರಿ
ಮುಕ್ತಿ ಪಡೆಯಿರಿ ನೂಲು ತಗಿಯಿರಿ
ಆಶ್ರಮದಾಗ ಹೊಕ್ಕ
ಹುಲಕುಂದ ಭೀಮಸಿಂಗ ಕವಿ ಹೇಳ್ಯಾನ ಕೌತುಕ||೩||
೭
ಬಿಳಿಯ ಟೊಪ್ಪಿಗೆಯವರ ತಿಳಿಹೇಳಲಿಕ್ಕೆ ಬಂದರ ದುಡಿಯಲಾರದ ತಿರಗತಾವ   ಅನ್ನುವರ
ಕಬ್ಬಿಣಬುಟ್ಟಿಯಂಥ ಟೊಪ್ಪಿಗೆ ಮಾಂವಗಳ ಬಂದರ ಬೇಕಾದ್ದ ಕರಕರದ
ಕೊಡುವುವರ ||ಪ||

ಬಂಗ್ಲೆದೊಳಗ ಸಾಬ ಬಂದಾನಂತ ಹೇಳಿದರ ಕಲ್ತವರ ಹೋಗತಾರ ಓಡೋಡಿ |
ಇಂಗ್ಲೀಷ ಮಾತಿಲೆ ಟಿಸ್‌ಪಿಸ್ ಮಾತನಾಡಿ ಉಪಕಾರ ಮಾಡತಾರ ಲಗುಮಾಡಿ
ಮಸರಬೆಣ್ಣಿ ತುಪ್ಪ ಕಾಸಿ ಮಜ್ಜಿಗಿ ಹಾಲ ಓದ ಕೊಡತಾರ ಹಿಂಡಿಂಡಿ
ಗೆಣಸಿ ಗಂಜಾಳ ತೆನಿ ತಿನಸತಾರ ಓದ ಕಬ್ಬ ಬಾಳಿಹಣ್ಣ ಮೊದಲಮಾಡಿ
ಅದನ್ನು ನೋಡಿ ಅಂಜಿ ಸಾಯಿತೀದ ಹಿಂದುಸ್ಥಾನದವರ ನಾವು ಎಂಥಾ ಖೋಡಿ
ಅಂಜಿದ್ಹಾಂಗ ಅವರು ಮೈಮೇಲೆ ಬಂದು ತಿನಲಿಕ್ಕೆ ಹತ್ಯಾರ ಬುಂದೇದ ಉಂಡಿ

||ಚ್ಯಾಲ||

ದುಡದ ಆಗತೀವ ನಾವು ಸಣ್ಣ
ಅವರ ಹೊಡೆಯುತಾರ ಹಾಲು ಬಾನ
ಅವರಿಗೆ ಒಯ್ದು ಕೊಡತಾರ ನಮ್ಮ ಜನ
ಇಲ್ಲದಿದ್ದರ ತಿಂತಾರ ಏನ ಮಣ್ಣ

||ಏರು||

ಮೊಸಳೆ ತಿನ್ನುವರೆಲ್ಲ ಬಿಸಿ ಅಡಗಿ ಉಂಡ ಕಸುವು ಆಗೇರ ಪರದೇಶದವರ||೧||
ದುಡಿಯದಲೆ ಚೈನಿಹೊಡೆಯುವ ಪರಕೀಯರ ಬಡಿವಾರ ಎಷ್ಟು ಹೇಳಲಿ ನಾನ  ಹಿಡದತಂದ ಅಡವಿಯೊಳಗ ದುಡಿಯಲಿಕ್ಕ ಹಚ್ಚಿದರೆ
ಸಿಡಿಯುತದ ಬುಡಕಿನ ಶಗಣ
ನಟ್ಟ ಕಡಿಯುವದಿಲ್ಲ ನೇಗಿಲ ಹೊಡೆಯುವುದಲ್ಲ ಟಾಕ ಹಿಡದ ಮಾಡತಾರ ಹಗಣ
ಶರಾ ಬರದ ಅವರು ಪೂರಾ ಪಗಾರ ತಿಂದ ಹಿಂದಗಡೆ ತಗೋತಾರ ಪೇನಸೇನ
ಭಾರಿ ಪಗಾರದ ನೌಕರಿ ಇದ್ದರ ತಮ್ಮ ಜನರಿಗೆ ಕೊಡತರ ಅದನ
ರಾವ್‌ಸಾಹೇಬ್ ಸರ್ ರಾವ್‌ಬಹದ್ದೂರಂತ ನಮ್ಮವರಿಗೆ ಕೊಡತಾರ ಪದವಿಯನ

||ಚ್ಯಾಲ||

ವಾಯಿಸರಾಯರದ ಕೇಳರಿ ಪಗಾರ
ತಿಂಗಳಿಗಿಪ್ಪತ್ತೊಂದು ಸಾವಿರ
ಗವ್ಹರ್ನರದು ಹತ್ತು ಸಾವಿರ
ಚೀಫ್ ಸೆಕ್ರಟರಿದು ಮೂರು ಸಾವಿರ

||ಏರು||

ಇಷ್ಟೆಲ್ಲ ಅಲ್ಲದೆ ಭತ್ತೇದ ಹಣ ಪುಕ್ಕಟ ವಸೂಲ ಮಾಡುವರ||೨||
ಕೆಲಸಕ್ಕೆ ಅವರು ನೇಮಣೂಕಿ ಆದ ಮೇಲೆ ಪಗಾರ ಅಲ್ಲದೆ ಬೇರೆ ಸುಲಿಯುವರ
ಇಂಗ್ಲೇಂಡದಿಂದ ಹಿಂದುಸ್ಥಾನಕ ಬರುವುದಕ ಹಾದಿ ಖರ್ಚು ಮೂವತ್ತ ಸಾವಿರ
ಕಛೇರಿ ಒಳಗ ಖುರ್ಚೆ ಮಾಡಿಸಲಿಕ್ಕೆ ಪ್ರತಿಯೊಂದು ಪ್ರಾಂತಕ್ಕೆ ಇಪ್ಪತ್ತೈದು ಸಾವಿರ
ಮಿಲ್ಟ್ರಿ ಸೆಕ್ರೆಟರಿ ಅವರ ಕಚೇರಿ ಖರ್ಚಿಗಾಗಿ ಒಂದ ಲಕ್ಷ ಮೂವತ್ತಾರ ಸಾವಿರ
ಇಂಗ್ಲಂಡದೊಳಗ ಅವರ ಹೆಂಡರು ಹಡೆದರ ಬಾಣೇತನಕ ಕೊಡಬೇಕು ನೀವೆಲ್ಲ
ಒಂದು ಲಕ್ಷ ಎಂಟು ಸಾವಿರ ಮೋಟರಕ್ಕ ಕೊಡಬೇಕು ಅದರಾಗ ಕೂತಕೊಂಡ   ಮೆರೆಯುವರ

||ಚ್ಯಾಲ||

ರಜೆದ ಭತ್ತಾ ಬೇರೆ ತಗೊಳ್ಳುರ
ತಿಂಗಳಿಗೆ ನಾಲ್ಕು ಸಾವಿರ
ಪ್ರವಾಸದ ಖರ್ಚು ಕೊಡಬೇಕ ಪರಭಾರೆ
ವರಷಕ್ಕ ಇಪ್ಪತ್ತೈದು ಸಾವಿರ

||ಏರು||

ಪಗಾರ ಅಲ್ಲದ ಚೈನಿ ಖರ್ಚು ಐದಲಕ್ಷ ಮೂವತ್ತೆಂಟಸಾವಿರ ನಾಲ್ಕುನೂರ||೩||
ನಾಲ್ವತ್ತೈದು ಕೋಟಿ ಅರವತ್ತು ಲಕ್ಷ ರೂಪಾಯಿ ಯುರೋಪಿಯನ್ನರ

ಒಯ್ಯತಾರ ಪುಕ್ಕಟ್ಟ
ಇಷ್ಟ ಪಗಾರ ನಿಮಗ್ಯಾಕಂತ ಕೇಳಿದರ ನಮ್ಮ ಮೇಲೆ ಆಗ ಅವರ ಸಿಟ್ಟ
ಅವರ ದೇಶದೊಳಗ ಪ್ರತಿಯೊಬ್ಬನ ಪಗಾರ ವರುಷದ ಕೇಳರಿ ಚಿತ್ತಿಟ್ಟ
ಒಂದು ಸಾವಿರದ ಎರಡುನೂರ ನಾಲ್ವತ್ತು ಒಬ್ಬೊಬ್ಬರಿಗೆ ಬೀಳತದ ಇಷ್ಟ
ಹಿಂದುಸ್ಥಾನದೊಳಗ ಪ್ರತಿಯೊಬ್ಬನ ಪಗಾರ ಎಪ್ಪತ್ತನಾಲ್ಕು ಬೀಳತದ ಸ್ಪಷ್ಟ
ದುಡಿಯುವವರಿಗೆ ಕೂಳು ಇಲ್ಲ ದುಡಿಯದವರು ಹೊಡೆಯತಾರ ಎಂಥಾದ
ನೋಡರಿ ಅದೃಷ್ಟ

**||ಚ್ಯಾಲ||**

ಹಿಂದುಸ್ಥಾನ ಖಜಾನಿ ಖಾಲಿ ಮಾಡಿ
ಇಂಗ್ಲಂಡಕ ಒಯ್ಯತಾರ ಓಡೋಡಿ
ಬ್ರಿಟಿಶ್ ಪಾರ್ಲಿಮೆಂಟಿನೊಳು ಕೂಡಿ
ಕಾಯ್ದೆ ತಗಿತಾರ ಬಹಳ ಅಡ್ನಾಡಿ

**||ಏರು||**

ಕಾಯ್ದೆ ತೆಗೆಸಿ ಗಾಂಧಿ ಫಾಯ್ದೆ ಮಾಡತಾನಂತ
ಭೀಮರಾಯ ತಿಳಿಸಿದ ಮಜಕೂರ||೪||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

---

**ಸನಿಕ – ಸಮೀಪ, ಹೊಕ್ಕ – ನುಸುಳಿ, ಸಾಬ – ಸಾಹೇಬರು, ಅಧಿಕಾರಿ**

**ಪೇನಸೇನ – ಪಿಂಚಣಿ**

## ೩. ಕನ್ನಡ ನಾಡಿನ ವೈಭವ

ಕನ್ನಡಿಯಂಥ ಕನ್ನಡ ತಾಯಿಗೆ ಮನ್ನಣೆ ಕೊಡಬೇಕ ಮನಸಿಟ್ಟ
ವರ್ಣನ ಮಾಡುವಂಥ ಪೂರ್ಣ ಕರ್ನಾಟಕ ಜೀರ್ಣೋದ್ಧಾರ
ಮಾಡ್ರಿ ದಯವಿಟ್ಟ||ಪ||

ಕನ್ನಡ ಭಾಷಾ ಇದು ಮಣ್ಣು ಪಾಲಾಗುವದು ಕಣ್ಣ ತೆರದ
ನೀವು ನೋಡವಲ್ಲರಿ
ಛಿನ್ನ-ವಿಚ್ಛಿನ್ನವಾಗಿ ಅನ್ಯರ ಆಕ್ರಮಿಸಿ ಉನ್ನತ ನಾಡನ್ನು ಉಳಿಸಿಕೊಳ್ಳಿರಿ
ಸರಳವಿದ್ದ ಮಾತೃಭಾಷಾ ಹೊರಳಿನೋಡವಲ್ಲರಿ ಪರಭಾಷೆಯೊಳು

ಸಿಲ್ಕಿ ಮರುಳಾದಿರಿ
ಹೆರವರ ಮಾತಿಗೆ ಹೆಗ್ಗಣ ಕಡಿದಾಡಿದಂತೆ ತರ ತರದ ಶಬ್ದಗಳ
ಬೆರಸಿ ಇಟ್ಟಿರಿ
ಲಾಯಿಟ್ ಅನ್ನುವಂಥ ಶಬ್ದ ಐಟದಿಂದ ಅನ್ನು ದಾತ ಬೆಳಕು ಅಂಬು
ಶಬ್ದ ಈಗ ಬೇನೆ ಬಿತ್ತರಿ
ಬ್ರೆಡ್ ಅನ್ನುವಂಥಾದ್ದು ಶಹರದೊಳಗೆ ಉಳದೈತಿ ಹಳ್ಳಿಗೆ ಒಯ್ದು
ರೊಟ್ಟಿ ಅಂಬುದ ಕೊಂದ ಇಡುತಿರಿ

||ಚ್ಯಾಲ||

ಮಾತನಾಡುವದು ಕನ್ನಡ
ಕಾಗದ ಪತ್ರ ಇರಬಾರದು ಅಡ್ನಾಡ
ಪತಿ ಸತ್ತರ ಸತಿ ಚಿತೆಯೊಳಗ ಧುಮುಕುವ
ವೃತ ಪಾಲಿಸುರ ಪೂರ್ವಜರ
ಮಹಾಸತಿ ಕಲ್ಲಂತ ಮಸ್ತ ಹುಗದಾರ ಗುರ್ತ ಹಿಡಿದ ಬರ್ರಿ ಬಲ್ಲವರ
ಕಲಾಕೌಶಲ್ಯದ ಶಿಲಾಲಿಪಿಯಿಂದ ಚಲೋ ಹಂಪಿ ಗುಡಿಗೋಪುರ
ಬಲಾಢ್ಯವಾದ ಪ್ರಾಂತ ಬಲ್ಲಿದ ಅನಿಸಿಕೊಂತ
ಎಲ್ಲದರಿಂದ ಬಹಳ ಶಡಗರ
ಹಾಳ ಆಗಿ ಹೋತ ಕೇಳವರಿಲ್ಲದ ವೇಳೆ ಹತ್ತಿತ ನಮಗ ಸುಮಾರ
ಬೆಳಗಾಂವದೊಳಗ ಸಹಿತ ಅಳಗಾಲ ತಂದಾರ ನಮಗ
ಬೆಳಸಬೇಕ ಕನ್ನಡ ಜೋರ

||ಚ್ಯಾಲ||

ನಮ್ಮ ಭಾಷಾ ಅಭಿಮಾನ ಇರಬೇಕ
ಅನ್ಯ ಭಾಷೆಗೆ ನಿಮ್ಮ ಮನಶ್ಯಾಕ
ತಾಯಿ ನಾಡಿನ ಸೇವ ಠೀಕ ಠೀಕ
ಅರವ ಇಲ್ಲದವರೇನು ಸುಡಬೇಕ
**ಭೀಮೇಶನ** ಕವಿ ಹಸನ ಚೊಕ್ಕ
ತನ್ನ ಜನ್ಮ ಭೂಮಿಯ ಸೇವಕ

||ಏರು||

ಹಳ್ಳಿಯೊಳಗ ರಾಷ್ಟ್ರ ಬಳ್ಳಿ ಹಬ್ಬಲೆಂದು ಮಳ್ಳ
ಜನರಿಗೆಲ್ಲ **ಭೀಮ** ಬೋಧಕೊಟ್ಟ

*ರಚನೆ:* ಹುಲಕುಂದ ಭೀಮಾಕವಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೪. ಕರ್ನಾಟಕ ಏಕೀಕರಣ ಲಾವಣಿ

**||ಚ್ಯಾಲ||**

ಸೃಷ್ಟಿಯೊಳಗ ಬಹು ಶ್ರೇಷ್ಠ ಅನಿಸಿಕೊಂಡ ರಾಷ್ಟ್ರ ನಮ್ಮ ಕನ್ನಡ ನಾಡ
ಕರುಣೆಯಿಲ್ಲದ ಬ್ರಿಟಿಶರ ಕರದಿಂದ ಕಡಿಸಿಕೊಂಡ ಆಗೇತಿ ತುಂಡ
ಹೆಮ್ಮೆ ಮಾತ ಕೇಳ ನಮ್ಮ ನಾಡಿನೊಳು ಕಮ್ಮ ಇಲ್ಲ ಬೆಳ್ಳಿ ಬಂಗಾರ
ಕಬ್ಬಿಣ ಕಲ್ಲಿದ್ದಲಿ ಮುತ್ತು ರತ್ನ ಸಹಿತ ವಜ್ರ ವೈಡೂರ್ಯದ ಆಗರ
ಬಾಳ ಬೆಳಿತಾವ ಜೋಳ ಗೋದಿ ಕಡಲಿ ಹೇಳಿದಷ್ಟು ಅಲಸಂದಿ ಹೆಸರ
ಅಕ್ಕಿ ಹತ್ತಿ ಬೆಳೆ ಲೆಕ್ಕ ಹತ್ತುವದಿಲ್ಲ ದಿಕ್ಕ ದೇಶಕ ಜಾಹೀರ
ಹಣ್ಣು ಹಂಪಲಗಳ ಕಂಪ ಮಾವಿನಗುಂಪ ಅದಾವ ಬಾಳ ಸಂಪ ಟೆಂಗಿನಮರ
ಸೃಷ್ಟಿ ಸೌಂದರ್ಯಕ ದೃಷ್ಟಿ ಆಗುವ ಹಾಂಗ ಶ್ರೇಷ್ಟ ಅನಿಸೇತಿ ನಮ್ಮ ಕಾರವಾರ
ಕಟ್ಟಡಗಳೇನು ಇಲ್ಲಿ ಅಷ್ಟ ಇಷ್ಟ ಇಲ್ಲಾ ಎಷ್ಟೋ ಕಟ್ಸ್ಯಾರ ಜಕಣಾಚಾರ್ಯರ
ಅಷ್ಟುದರೊಳಗೆ ಒಂದ ಶ್ರೇಷ್ಠ ಕುರುಹ ಉಳದೈತಿ
ಪ್ರತ್ಯಕ್ಷ ನೋಡಬಹುದು ಗೊಮ್ಮಟೇಶ್ವರ
ಶಿಲ್ಪಿ ಕಲೆಗಳಿಗೆ ಸಿರಿಯು ಸಂಪನ್ನರಿಗೆ ಬುದ್ಧ ಬಸವರಿಗೆ ತವರೂರ
ಮೂರು ಧರ್ಮಗಳ ಸಾರಿದ ವೀರರಿಗೆ ಸ್ಥಾನ ಕೊಟ್ಟ ಸಲುಹಿತ ಪೂರ

**||ಚ್ಯಾಲ||**

ಮೈಸೂರದವರನ ನೋಡಿರಿ ಕೆನಾಲ ಕಟ್ಟಿಸ್ಯಾರ ತುಂಗಭದ್ರಾ ನದಿಗೆ
ನೀರಕೊಡತಾರ ಅಲ್ಲಿಯ ಭೂಮಿಗೆ
ಘಟಪ್ರಭ ಕೃಷ್ಣಾ ಕಾವೇರಿ ಭೀಮಾ ಮಲಪಹಾರಿ ನರ್ಮದಾ ನದಿಗೆ
ಒಡ್ಡ ಹಾಕುವರ ದಿಕ್ಕ ಇಲ್ಲ ನಮಗ

**ಚಲತಿ ಚ್ಯಾಲ**

ಸಿರಿಯ ಸಂಪತ್ತು ಕಡಿಮೆ ಇಲ್ಲ ಭರಪೂರ ಬೆಳೆಯುಳ್ಳ ಭೂಮಿ ವಿಸ್ತಾರ
ಹೊಳೆ ಹಳ್ಳ ಹರಿತಾವ ಭರರರಾ ಕೆನಾಲ ಮಾಡಿಕೊಂಡರ ನಮ್ಮದು ಉದ್ಧಾರ

**||ಏರು||**

ಒಡಕ ಕನಡಿಯೊಳಗ ಮುಖವ ನೋಡುವವರ್ಹಾಂಗ
ಆತ ನಮ್ಮ ಪ್ರಾಂತದ ಹಾಡ ||೧||
ಒಕ್ಕಟ ಆಗದ ಬಿಕ್ಕಟ್ಟ ಬಿಡುವದಿಲ್ಲ ಇಕ್ಕಟ್ಟಿನಿಂದ ಪಾರಾಗುದಕ
ಮುಕ್ಕಟ್ಟ ಕನ್ನಡಿಗರೆಲ್ಲ ಒಕ್ಕಟ ಅದರ ಲಗು ಬಿಡತೈತಿ ಈ ಕ್ಷಣಕ
ನೀತಿವಂತರಾಗಿ ಜಾತಿ ಜಗಳ ಬಿಟ್ಟು ಖ್ಯಾತಿವಂತರಾಗಿ ಮೆರೆಯುದಕ

ಹರದ ಹಂಚಿಹೋದ ಮೆರೆದ ಕರ್ನಾಟಕದ ಬಿರದವನ್ನು ನೀವು ತರಬೇಕ
ಕಳೆದು ಹೋದ ನಮ್ಮ ಕರಿನಾಡಿನ ಕೀರ್ತಿ ಮರಳಿ ನೀವೆಲ್ಲಾರು ಪಡೆಯುದಕ
ಸಪ್ಪಳ ಇಲ್ಲದೆ ಆದ ಇಪ್ಪತ್ತೆರಡ ಭಾಗ ಜಪ್ಪಿಸಿ ನೀವೀಗ ಹಿಡಬೇಕ
ಏಕೀಕರಣ ಆದ್ರ ಸಾಕ ಆಗುವ ಹಾಂಗ ಬೇಕಾದ್ದೆಲ್ಲ ಸಿಗತೈತಿ ಜನಕ
ಊಟ ಉಡಿಗಿಗೆ ಏಟು ಕಡಿಮೆ ಇಲ್ಲ ಎರಡು ಕೋಟಿ ಉಳಿಯುವದು ನಿರಕ
ಹತ್ತುಕೋಟಿ ಹಣ ನಮಗೆ ವೆಚ್ಚ ಮಾಡಿಬಿಟ್ರ ವಿಲಕ್ರರಿ ಆಗತೈತಿ ನಮ್ಮ ಪ್ರಾಂತಕ
ಅನುಕೂಲ ಇದ್ದರ ಸುದ್ದ ಪ್ರತಿಕೂಲ ನಡದೈತಿ ಚಿಮಣಿ ಎಣ್ಣಿ ಸಿಗವಲ್ದ ಹಣಿಬಾರಕ

**||ಚ್ಯಾಲ||**

ನಿಮ್ಮಲ್ಲಿ ಸ್ವಾಭಿಮಾನ ಇದ್ದರ ನಿಮ್ಮನ್ನ ಯಾರ ಕಾಡತಿದ್ದರ ಪರರ ಸ್ವಾಧೀನ
ಕನ್ನಡ ತಾಯಿಯನ್ನು ನೀವು ಮಾಡಿ ಇಟ್ಟದಿರಪೂರ್ಣ
ಎಚ್ಚರಾಗಿ ನೀವೆಲ್ಲಾರು ಎದ್ದರ ವಿದ್ಯಾ ಬುದ್ಧಿ ಇದ್ದರ ನೋಡಿ ನಿಮ್ಮನ್ನು
ಕಾಲಬಿದ್ದ ಕೈಮುಗದ ಕೊಟ್ಟು ಬಿಡತಾರ ನಾಡನ್ನ

**ಚಲತಿ ಚ್ಯಾಲ**

ಗಡಿ ನಿರ್ಣಯ ಮಾಡು ಕಾಲಕ ಎಚ್ಚರಾಗಿರಿ ಬಂದೈತಿ ಸನಿಯಕ
ಸುಮ್ನ ಕುಂತ್ರ ನಿಮ್ಮ ಹೆಣಕ ಗುದ್ಲಿ ಸಲಿಕಿ ತರತಾರ ಹುಗಿಯಾಕ
ಶಿಷ್ಟಮಂಡಳ ಒಯ್ಯಬೇಕ ದಿಲ್ಲಿತನಕ ಸ್ವದೇಶ ಸ್ವತಂತ್ರ ಪಡೆಯುದಕ

**||ಏರು||**

ಎಚ್ಚರಾಗಿ ನೀವು ಬಿಚ್ಚ ಮನಸಿನಿಂದ ನೋಡ ಅಂದ ಭೀಮ ಕಣಗಂಡ||೨||

**ಕೆನಾಲ – ಕಾಲುವೆ**

*ರಚನೆ:* ಹುಲಕುಂದ ಭೀಮಕವಿ
*ಕೃತಿ :* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೫. ನಾಡಿನ ಏಕೀಕರಣ

ತನ್ನ ತಾಯಿ ಅಭಿಮಾನ ತನ್ನದೆಂದೆನ್ನುವ ಸುಧೆಸೂಕ್ತಿಯನಾ |
ತಿಳಿಯುವುದೆ ಧರ್ಮ ಮಾನವನಾ ||
ಕನ್ನಡ ನಾಡಿನ ಉನ್ನತಿ ಬಯಸುವ ಸನ್ನುತ ಶರಣರ ವಚನಾ |
ಕೃತಿಗಿಳಿಯುವ ಹಿತ ಬಯಸುವೆನಾ ||ಅ.ಪ||

ನೂರಾರು ಜಾತಿಯಲಿ ಹುಟ್ಟಿದ ಕನ್ನಡ ಜನ |
ಭಾರತದಿ ಬೆಳಗಿಹ ಇಂದಿನ ಕನ್ನಡ ತನ |
ಹೋರಾಡಿ ಕೂಡಿಸಿದ ಈ ಕನ್ನಡ ಕುಲವನ್ನ | ಒಡೆಯದಿರಿ |
ಒಡೆಯದಿರಿ ಒಡೆದು ಮಡಿಯದಿರಿ ಅನ್ನುವ ಕನ್ನಡಕವಿ ಕಹಳೆಯನ |
ತಿಳಿಯುವದೆ ಧರ್ಮ ಮಾನವನ ||೧||

ತಾಯಿ ಅನ್ನುವ ಭಾವ ಬೆಳೆದರೆ ತಾಯಿಯ ಸ್ತನ ತೊರೆಯುವವು |
ಕ್ಷೀರಾಮೃತ ಪಾನ ಮಾಡುವೆವು ||
ಕನ್ನಡಕ್ಕಾಗಿ ಕೈಯೆತ್ತಿ ಕಲ್ಪತರು ಪಡಿ |
ಕನ್ನಡಕ್ಕಾಗಿ ಕೊರಳೆತ್ತಿ ಅಮೃತವ ಕುಡಿ |
ಕನ್ನಡಕ್ಕಾಗಿ ಕಿರಿಬೆರಳಾದರು ಎತ್ತಿ ಹಿಡಿ | ಕನ್ನಡಕೆ |
ಕನ್ನಡಕೆ ತನು-ಮನ ಸೇವೆ ಸಲ್ಲಿಸಿ ಸಾಧಿಸಿ ಏಕೀಕರಣ
ತಿಳಿಯುವದೆ ಧರ್ಮ ಮಾನವನಾ ||೨||

ಕನ್ನಡ ನಾಡಿಗೆ ಸಣ್ಣಾಗುವ ನಮ್ಮ ಗೀಗೀ ಮೇಳ ವಾಲಿ ಶರಣ
ಆತನ ಪದವ ಕೇಳ್ರಿ ಮುನ್ನಾ ||

*ರಚನೆ:* ಶರಣಪ್ಪವಾಲಿ
*ಕೃತಿ:* ಶರಣ ಸ್ಮೃತಿ

## ೬. ಕನ್ನಡಾಂಬೆ

ಧನ್ಯಧನ್ಯ ಭೋ ಭಾರತ ಮಾತೆಯ ಧೀರವೀರ ತನುಜಾತೆ |
ಜಯ ಜಯ ಕರ್ನಾಟಕ ಮಾತೆ ||ಪ||

ಅಂದವಾದ ನದಿ ಸುಂದರ ಬನಗಳ ಬೀಡು |
ಶ್ರೀಗಂಧ ಬಿದಿರು ಮತ್ತಿ ದೇವದಾರ ಗಿಡಕಾಡು |
ದಿವ್ಯೌಷಧಿ ಅಮೃತ ವನಸ್ಪತಿ ಗುಡ್ಡಗಾಡು | ನಿಸರ್ಗದಿ |
ನಿಸರ್ಗದಿ ಶೋಭಿಸಿ ದೇವಿ ಧರಿಸಿದ ಹೊಳೆವ ಮಕುಟಮಣಿಯಂತೆ |
ಜಯ ಜಯ ಕರ್ನಾಟಕ ಮಾತೆ ||೧||

ಅನ್ನ ಹೊನ್ನ ಖನಿಜಾದಿ ರಸಾಯನ ಮುತ್ತ ರತ್ನ ಸೇರಿದಾತೆ |
ವಿಸ್ತೀರ್ಣ ದೇಹ ಪ್ರಖ್ಯಾತೆ |
ಬುದ್ಧ ಬಸವ ಮಧ್ವ ಶಂಕರ ವಿದ್ಯಾರಣ್ಯರು |
ಮುದ್ದಣ್ಣ ಹರಿಹರ ರನ್ನ ಪೊನ್ನ ಪಂಪರು |
ರುದ್ರಮ್ಮ ಚೆನ್ನಮ್ಮ ಮಲ್ಲಮ್ಮ ಮಾದೇವಿಯರು | ನಿನ್ನಲ್ಲಿ |

ನಿನ್ನಲ್ಲಿ ಜನಿಸಿ ಜಗದಲ್ಲಿ ಮೆರೆದ ಮಹಾಮಾನ್ಯರನ್ನು ಹಡೆದಾತೆ |
ಜಯ ಜಯ ಕರ್ನಾಟಕ ಮಾತೆ ||೨||

ಪರಮೇಶ್ವರಿ ನಿನ್ನ ಪವಿತ್ರ ಅಡಿಯಲಿ ಮೆರೆದ ಮಹಾಜನರನ್ನಾ |
ಪರಿಪಾಲಿಸಿದೆವ್ವ ಸಂಪೂರ್ಣ |
ಕನ್ನಡ ಭೂಮಿಯ ಮಣ್ಣಿನಲ್ಲಿ ಜನ್ಮವಿಟ್ಟು
ಕನ್ನಡ ನಾಡಿನ ಅನ್ನ ಅರಿವೆ ಉಂಡುಟ್ಟು |
ಕನ್ನಡ ತಾಯಿಯ ರಕ್ತಶರೀರವ ತೊಟ್ಟು || ಕನ್ನಡದ |
ಕನ್ನಡದ ತಾಯಿಯ ಸೇವೆಗಾಗಿ ನಿಂತ ವಾಲಿ ಶರಣರ ದಾತೆ |
ಜಯ ಜಯ ಕರ್ನಾಟಕ ಮಾತೆ ||೩||

*ರಚನೆ:* ಶರಣಪ್ಪವಾಲಿ
*ಕೃತಿ:* ಶರಣ ಸ್ಮೃತಿ

## ೭. ಕರ್ನಾಟಕದ ರಜತೋತ್ಸವ ಕೊಡುಗೆ

ಗಳಿಸಿ ಸ್ವಾತಂತ್ರ್ಯವ ಪಂಚವಿಂಶತಿ ವರ್ಷ ಬೆಳೆಸಿತಂದ ಕನ್ನಡವನ್ನು |
ಹಳ್ಳಿಹಳ್ಳಿಗೆ ಮುಟ್ಟಲೆಂದು ಜನ ಬೆಳ್ಳಿ ಹಬ್ಬ ಮಾಡಿ ಆಚರಣ||೧||

ನಾಲ್ವತ್ತೇಳು ಅಗಷ್ಟ ಹದಿನೈದರ ಹಿಂದೆ ಮರೆಯಾಗಿದ್ದ ಸಾಹಿತ್ಯವನ್ನು
ಬಯಲಿಗೆಳೆದು ತೋರಿಸಲು ಬಯಸಿದರು ಕನ್ನಡಾಭಿಮಾನಿ ನಮ್ಮ ಜನ||೨||
ಎಲ್ಲ ಮುಖಗಳಿಂದ ಬೆಳೆದ ಸಾಹಿತ್ಯವ ತಿಳಿಯಲೆಂದು ಹಳ್ಳಿ ಹಳ್ಳಿಯಲಿ |
ಕಲೆಯ ನೆಲೆಯ ತಿಳಿದಂಥ ಬಲ್ಲವರ ಎಲ್ಲ ಬಗೆಯ ಪುಸ್ತಕವನ್ನು||೩||

**||ಚಾಲ||**

ಲೇಖಕ ಪ್ರಕಾಶಕರನು | ಮುದ್ರಕರನು | ಮಾರಾಟಗಾರರನು |
ವಿಚಾರಿಸಿ ಕುಂದುಕೊರತೆಯನು ಪ್ರಕಟನೆಗೆ ಹಣವಿಲ್ಲದವರನು |
ಸರಕಾರವೆ ಕೊಟ್ಟು ಹಣವನು | ಓದುವವರಿಗೆ ಪ್ರೋತ್ಸಾಹವನು |
ಉನ್ನತ ಸಂಸ್ಕೃತಿಯ ರೀತಿ | ಆಧ್ಯಾತ್ಮದ ಪ್ರಗತಿ | ಧಾರ್ಮಿಕ ಉನ್ನತಿ |
ಈ ಬಗೆಯ ಗ್ರಂಥಗಳನೊಂದೆಡೆ ಪ್ರದರ್ಶಿಸಿ ||

**||ಏರು||**

ಊರಿಗೊಂದು ಗ್ರಂಥಾಲಯ ಕೇರಿಗೊಂದು ವಾಚನಾಲಯ |
ಸರ್ವರಮನೆಯಲ್ಲಿ ಪುಸ್ತಕ ದೊರೆಯುವ ಭಾಂಡಾರವನು ||೧ನೆಯ ಚೌಕ||
ಕನ್ನಡ ಭಾಷೆಯ ಶ್ರೇಷ್ಠ ಸಾಹಿತ್ಯ ಪರರಾಳಿಕೆಯಲಿ ಮರೆಯಾಗಿತ್ತು |
ಸ್ವಾತಂತ್ರ್ಯೋತ್ತರ ಕಾಲದಲದು ಉನ್ನತಿಗೇರಲು ಅನುವಾಯ್ತು||೧||

ಎಪ್ಪತ್ತೆರಡರ ಅಗಷ್ಟ ಹದಿನೈದಕೆ ಇಪ್ಪತ್ತೈದು ವರ್ಷ ಕಳೆದಾಯ್ತು |
ಸರ್ವತೋಮುಖ ಅಭಿವೃದ್ಧಿ ಸಾಧಿಸಿ ಕನ್ನಡ ಸಾಹಿತ್ಯ ಮೆರೆದಾಯ್ತು||೧||

ಮಾನ್ಯರೆಲ್ಲ ಸಂಭ್ರಮದಿ ಆಚರಿಸಿ ಯುನೆಸ್ಕೋವನ್ನು ಘೋಷಿಸಿತು |
ಎಪ್ಪತ್ತೆರಡರ ಇಡೀ ಸಂವತ್ಸರ ಸಾಹಿತ್ಯ ಪ್ರಸಾರ ನಡೆಯಿಸಿತು||೨||

**||ಚಾಲ||**

ಕನ್ನಡದ ಶಕ್ತಿಯ ಬೆಳೆಸಿ | ಅನ್ಯರಿಗೆ ತಿಳಿಸಿ ಸರ್ವರಿಗೆ ಉಣಿಸಿ |
ಆಸೇತು ಹಿಮಾಚಲ ಪಸರಿಸಿ | ಸಣ್ಣ ದೊಡ್ಡ ಹೊತ್ತಿಗೆಗಳ ಕೂಡಿಸಿ |
ಬೆಲೆ ನಿಲುಕುವಂತೆ ಇಳಿಸಿ | ಮನೆಮನೆಗೆ ಪುಸ್ತಕಗಳನಿಡಿಸಿ |
ಓದುವ ಹವ್ಯಾಸ ಬೆಳೆಸಿ || ಹೆಣ್ಣು ಮಕ್ಕಳನು ಯೋಜನೆಗೆ ತೊಡಗಿಸಿ |
ಸ್ಪರ್ಧೆ ಏರ್ಪಡಿಸಿ ಬಹುಮಾನಗಳನು ವಿತರಿಸಿ ಉಚಿತ ಪುಸ್ತಕಗಳ ಕೊಡಿಸಿ ||

**||ಏರು||**

ದಾನ ಧರ್ಮ ಮಾಡುವಾಗ | ಮದುವೆ-ಮುಂಜಿ ನಡೆಯುವಾಗ
ಒಬ್ಬರಿಗೊಬ್ಬರು ಕಾಣಿಕೆ ಕೊಡಿರಿ ಪುಸ್ತಕಗಳನು || ೧ನೆಯ ಚೌಕ||

ಕರುನಾಡಿನ ಸಾಹಿತ್ಯವ ಬೆಳೆಸಿ ರೀತಿ ನೀತಿ ಸಮನ್ವಯಗೊಳಿಸಿ
ಭಾರತದೊಳು ವರಕೀರ್ತಿಯ ಗಳಿಸಲು ರಜತ ಮಹೋತ್ಸವ ಆಚರಿಸಿ||೧||

ಪರಿಷತ್ತಿನ ಹಿರಿತನದಲ್ಲಿ ಕಾಯಂ ಪುಸ್ತಕ ಪ್ರದರ್ಶನ ಏರ್ಪಡಿಸಿ |
ಮಾರುವ ಪುಸ್ತಕ ಮೂಟೆಕಟ್ಟಿಕೊಂಡು ಹಳ್ಳಿಹಳ್ಳಿಗೆಲ್ಲ ಸಂಚರಿಸಿ||೨||

ಕರ್ನಾಟಕದ ಜಿಲ್ಲೆ ತಾಲೂಕಿನ ಜನರನು ಸಭೆ ಮಾಡಿ ಕೂಡಿಸಿ |
ಚಿತ್ರಪ್ರದರ್ಶನ ಕಾವ್ಯವಾಚನ ಮೊದಲಾದ ಲಾವಣಿ ಹಾಡಿಸಿ||೩||

ಮೊದಲೊಂದು ಪ್ರಕಟಣೆ ಹೊರಡಿಸಿ | ಎಲ್ಲರಿಗೂ ಮುಟ್ಟಿಸಿ |
ಸಿಗುವಂಥ ಗ್ರಂಥ ಬೆಲೆ ತಿಳಿಸಿ | ಬೆಲೆಯಿಳಿಸಿದ್ದನ್ನು ತೋರಿಸಿ||೧||

ಓದುಗರಿಗೆ ಕೂಪನ್ ಕೊಡಿಸಿ | ಸ್ತ್ರೀ ಪುರುಷರೆಲ್ಲ ಭಾಗವಹಿಸಿ
ಒಂದು ವರ್ಷ ಕಾರ್ಯನಡೆಸಿ | ಜಯಗಳಿಸಿ | ಜಗದೊಳಗೆ
ನಾಡ ಕೀರ್ತಿತೋರಿಸಿ ||೨||

ಕನ್ನಡ ಸಾಹಿತ್ಯ ಪ್ರಚಾರ ಯೋಜನೆ | ಉನ್ನತಗೊಳಿಸಲು ಮಾಡಿ ಪ್ರಾರ್ಥನೆ
ರಜತಮಹೋತ್ಸವ ಮಹತ್ಕಾರ್ಯಕೆ | ಕೂಚೆತ್ತಿ ಹಾಡುವರು ವಾಲಿ ಶರಣರು||೩||

*ರಚನೆ:* ಶರಣಪ್ಪ ವಾಲಿ

*ಕೃತಿ:* ಶರಣ ಸ್ಮೃತಿ

## ೮. ನಮ್ಮ ಪತಾಕೆ

ವಿಷಯ ಗುಣವೆಲ್ಲ ಬಿಸುಟಿದ ಮನುಜರು ಕೂಡ್ಯಾರ
ಹಸನುಳ್ಳ ಕಾಂಗ್ರೆಸ್‌ಕ
ವಸುಧೆಯೊಳಗ ಹೆಸರಾದ ಹಸರು ಕೇಸರಿ ಬಿಳಿಯ ಬಣ್ಣದ ಝೇಂಡ ವಂದನಕ
ಮುನಸೀಪಾಲಿಟಿ, ಸೊಸಾಯಿಟಿ ಲೋಕಲ್ ಬೋರ್ಡ
ಕೋರ್ಟ ಕಚೇರಿ ಮೇಲೆ ಮೆರೆಯುವದ
ಮೋಟರ ಸಾಯಕಲ್‌ಕ ಪ್ರೀತಿಲಿ ಹಚ್ಚುವರ ದೇಶಭಕ್ತರು ಬಿಟ್ಟು ಬಿಡದ
ಖಾದಿ ಭಾಂಡಾರಕ ಚರಕಾ ಸಂಘಕ ಹುರುಪಿಲಿ ಏರಸುವ ತ್ವರಿತದಿಂದ
ಸ್ವಯಂಸೇವಕರ ಕೈಯಾಗ ಮೆರಿವದು ಭರದಿ ಝೇಂಡ ಬಹುಚಂದ
ರಾಷ್ಟ್ರಧ್ವಜಕ ಬಹಳ ಕಷ್ಟಪಟ್ಟಲ್ಲೆ ಮೆಟ್ಟಿಗ್ಹತ್ತಿತ ಇಲ್ಲಿಗೆ ಬಂದ
ವಂದೇಮಾತರಂ ಗೀತೆ ಅಂದ ಮೇಲೆ ಅದು ಚಂದದಿಂದ ಹಾರಾಡುವದ

**||ಚ್ಯಾಲ||**

ಕೇಸರಿ ವರ್ಣವು ಸ್ವಾರ್ಥ ತ್ಯಾಗ ಚಿಹ್ನ
ಬಿಳಿಯ ಬಣ್ಣವು ಸತ್ಯಶಾಂತಿ ಕೂನ
ಹಸಿರು ಬಣ್ಣವು ವಿಶ್ವಾಸ ಗುರ್ತ ಪೂರ್ಣ
ಮೂರು ಗುಣಗಳದು ತೋರುವ ಚಿಹ್ನೆ

**||ಏರು||**

ಮೂರು ಬಣ್ಣದ ಮೇಲೆ ತೋರುವ ಚರಖ
ದೊರಕಿಸುವದು ಸ್ವರಾಜ್ಯ ಸುಖ||೧||
ಸುರುವ ಅದರ ಬರುವೆನು ಹೇಳದೆ ಸರ್ವರಿಗೆಲ್ಲ ಆಧಾರ ಚರಕ
ಕಂಬಾರ ಬಡಿಗರ ಪಿಂಜಾರರಿಗೆಲ್ಲ ಕೆಲಸ ಹಚ್ಚುವದು ಈ ಚರಕ
ಗಿರಣಿ ಬಂದಾಗಿನಿಂದ ಬರಲಿಲ್ಲ ಮುಂದಕ ಮೂಲಿಗಿ ಬಿದ್ದಿತ ನಮ್ಮ ಚರಕ
ಗಾಂಧಿ ಮಹಾರಾಜರು ತಂದಾರ ಬೈಲಿಗೆ ಚಾಲೂ ಮಾಡಲಾಕ ಈ ಚರಕ
ನೇಕಾರ ಜನರಿಗೆ ತವರೂರ ಇದ್ಹಾಂಗ ಬೇಕಾದ ಕೊಡುವದು ಈ ಚರಕ
ರೈತರ ಮನಿಯಾಗ ಸ್ಥಿರವಾಗಿ ನಡೆದರೆ ಪಕ್ವಾನ್ನ ಉಣಿಸುವದು ಈ ಚರಕ

**||ಚ್ಯಾಲ||**

ದುಡ್ಡು ಕೊಡುವದು ದುಡಿದರೆ ಚರಕ
ಬಡಜನರ ಕಾಯ್ದದು ಚರಕ
ಪೊಡವಿಗೆ ಒಡೆಯ ಚರಕ
ಕಡುದಾರಿದ್ರ್ಯ ಬಿಡಿಸುವದು ಚರಕ

||ಏರು||

ಚರಖಾ ಅಂದರೆ ರಾಟಿ ಜಂತ್ರ ನಾಮಕರಣ ಇರುವವು ಅದರ||೧||
ಗಿರಣಿ ನೂಲ ಗಿರಣಿ ಅರಿವೆ ಬಂದಾಗಿನಿಂದ
ಕೌದಿಗ್ವಚ್ಚಾಕ ಉಳಿಯಲಿಲ್ಲ ತುಣಕ
ನಾಲ್ಕನೂರಾಅರವತ್ತಾರ ಕೋಟಿ ಗಜ ಅರಿವೆ
ಪ್ರತಿವರ್ಷ ಬೇಕ ನಮ್ಮ ಹಿಂದುಸ್ಥಾನಕ
ಅಷ್ಟ ಅರಿವೆ ನಮ್ಮ ರಾಷ್ಟ್ರದಾಗ ಹುಟ್ಟಿದರ ಅಷ್ಟೂರ
ಕೈಯಾಗ ಆಗತತಿ ರೊಖ್ಖ
ಅಗ್ಗ ಇಲ್ಲ ಕೈಮಗ್ಗದ ಖಾದಿ ನೂಲುವವರ ಬಾಳ ಇಲ್ಲದಕ
ನೂಲಿನ ಯೋಜನೆ ಪೂರ್ಣ ಆದಮ್ಯಾಲ ತಾನು
ಸೋಯಿ ಆಗುವದು ನಿರಕ

||ಚ್ಯಾಲ||

ನಿಮ್ಮ ಹತ್ತಿ ನೀವ ಅರೆಸಿರಿ
ರಾಟಿಯಿಂದ ನೂಲ ತೆಗೆಯಿರಿ
ನಿಮ್ಮ ನೇಕಾರ ಕೈಯಿಂದ ನೇಯಿಸಿರಿ
ಖಾದಿಬಟ್ಟೆ ತೊಟ್ಟಕೊಳ್ಳಿರಿ

||ಏರು||

ಅಂಗೈ ಹುಣ್ಣಿಗೆ ಕನ್ನಡಿ ಯಾತಕೆ ಭೀಮಸಿಂಗ ನೋಡಂದ ಪ್ರತ್ಯಕ್ಷ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೬. ೧೯೪೨ ರ ಚಳವಳಿ

ದೇಶಭಕ್ತಿಯದು ರಾಜದ್ರೋಹವೆಂದು ಸಾರಿ ಕಾಯ್ದೆಯಲಿ ಸರಕಾರ
ವೈಸರಾಯರು ಆರ್ಡರು ಕೊಟ್ಟರು ಗಾಂಧಿ ಸಹಿತ ಹಿಡಿಯಿರಿ ಜನರ
ಮುಂಬೈನಗರದಿ ಸೇರಿದ ಕಾಂಗ್ರೆಸ್ ಮಂದಿಯ ಹಿಡಿಯಿತು ಸರಕಾರ
ದೊಂಬಿಹಚ್ಚಿತದು ಜನತೆ ರೊಚ್ಚಿನಲಿ ಕಿಚ್ಚುಹಚ್ಚಿತದು ದೇಶ ಪೂರ

ಹಳಿಯು ಹಾರಿದವು ಗಾಡಿ ಉರಳಿದವು ಬೋಟು ಮುಳುಗಿದವು ಭರಪೂರ
ಪೋಲಿಸರಲ್ಲಿಯ ಬಂದೂಕ ಕಸೆದರು ತೆರಿಗೆ ಹಣವ ಲೂಟಿ ಮಾಡಿದರ
ಕೈಕಂಬಗಳು ಮಾಯವಾದವೋ ಸುಟ್ಟು ಹೋದವೊ ದಪ್ತರ
ಸಾಯ್ಬರ ಚೊಣ್ಣವು ಸೈಲಾತಪ್ಪ ಜೀವ ಹಿಡಿದುಕೊಂಡು ಓಡಿದರ
ಬಂಗ್ಲೆ ಸಾಲಿ ಚಾವಡಿಗೆ ಬೆಂಕಿ ಹಚ್ಚಿ ಸ್ಟೇಷನ್ ಸುಟ್ಟರೋ ಎದುರೆದುರ
ಆಂಗ್ಲರಾಳುಗಳು ಕಾವಲು ನಡಿಸಿರೆ ಕಣ್ಣುಕಟ್ಟಿ ಕೆಲಸಮಾಡಿದರ
ತಾರುಕಂಬಗಳ ಕತ್ತರಿಸಿತು ಜನ ಟಪಾಲು ಹೊಡೆದರೊ ಸರಸರಾ
ಮಾರಿ ಗುರ್ತಿ ಸಹ ಹತ್ತಲಿಲ್ಲರಿ ಗತ್ತ ತಿಳಸಲಿಲ್ಲ ಬಹದ್ದೂರ
ಮಿಲ್ಟ್ರಿ ಜನ ತಾ ಯುದ್ಧಕ್ಕೆ ಹೋಗದೆ ಮನೆಯ ಕಳ್ಳರನು ಹುಡಕಿದರ
ಸಿಕ್ಕಲಿಲ್ಲರಿ ಸಂಶಯದಿಂದಲಿ ಬಡಿದು ದಂಡವನು ಹೇರಿದರ

**||ಇಳವು||**

ಸಿಕ್ಕಾರ್ರೆ ಊರ ಜನ ಸೇರಿ ಹೊಕ್ಕಾಡಿ ಮಾಡತ್ತಿದ್ದರೊ ಸೋರಿ
ರೊಕ್ಕಕ್ಕ ಕಡಿಮೆ ಆಗಲಿಲ್ಲ ಸರಕಾರಕ ತೊಂದರೆ ಬಹಳಾತ್ರಿ

**||ಏರು||**

ರಾಜ್ಯ ನಡೆಸಿದಾರೊ ಜಿಲ್ಲೆ ಜಿಲ್ಲೆಯಲ್ಲಿ ಇಂಗ್ಲೇಜಿ ಸರಕಾರ ಉಳಿತೇನು ?||೧||

*ರಚನೆ :* ಮಾರನಬಸರಿ ಮೋದಿನಸಾಬ
*ಕೃತಿ :* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೦. ತುರಂಗದ ಮರ್ಮ

ತುರಂಗದೊಳು ಜರುಗುವ ಮರ್ಮ ಕೇಳರಿ ನಿರ್ಮಲ ಮನಸ್ಸಿನಿಂದ ನೀವೆಲ್ಲ
ವೈರಾಗ್ಯ ಬಂದ ಮೇಲೆ ಆರಾಮ ಇರತಾರ ಯಾರ್‍ಯಾರ ಅಂಜಿಕಿ ಇರುವದಿಲ್ಲ
ಜೇಲಿನೊಳಗೆ ಹೋಗಿ ಕಾಲ ಹಾಕುದರೊಳಗ ಗಾಬ ಮಾಡುರ ಮೊದಲ ಪೋಲಿಸರ
ಮೇಲ್ಮಾಳಿಗಿಯ ಮೇಲೆ ಕರಕೊಂಡ್ಹೋಗಿ ಮಾಲ ಜಪ್ತಿ ಮಾಡುವರು
ಕಾರಕೂನರ
ಮರಳಿ ಗುದಾಮ ಶೋಧಿಸಿ ಅರವಿ ತಗಸಿ ತಮ್ಮ ಅರವಿ ಕೊಡುವರು
ವಾಚಮನ್‌ರ
ಎರಡ ಅಂಗಿ ಎರಡ ಚೊಣ್ಣ ಲಂಗೂಟಿ ಟೊಪ್ಪಿಗಿ ಮ್ಯಾಲ ಒಂದ
ಮಫ್ಲರ್
ಥಂಡಿ ಸಲುವಾಗಿ ಗರಮ್‌ಬಂಡಿ ಎಂಬುವ ಕಂಬಳಿ ಅಂಗಿ ಒಂದು
ಕೊಡುವುವರ
ಹಾಸಿಕೊಳ್ಳಲಿಕ್ಕೆ ದಪ್ಪ ತಟ್ಟಗೊಂಗಡಿ ಹೊತ್ತಕೊಳ್ಳಲಿಕ್ಕೆ ರಗ್ಗ ಚಾದರ

ಊಟಕ್ಕಾಗಿ ತಾಲಿಪಾಟ ಅಂಬುವವು ಪರ್ಯಾಣದಷ್ಟ ಅದರ ಆಕಾರ
ನೀರು ಕುಡಿಯುವ ಅಳಿಯು ಸೇರಿನಂಥವು ತಗಡಿನವು ಇರತಾವ ತಯ್ಯಾರ

||ಚ್ಯಾಲ||

ಏಳ ಕೀಲಿ ಒಳಗ ಓದ ಇಟ್ಟ ವ್ಯಾಳೆ ವ್ಯಾಳ್ಯೇಕ ಗಸ್ತಿಯವರದು ಕಾಟ
ಲೆಕ್ಕ ಹೇಳುವುದು ವಾಚಮನ್ನರ ಸೃಷ್ಟ ತಾಸಿಗೊಬ್ಬಬ್ರು ಎದ್ದೆದ್ದ ನಿದ್ದಿಗೆಟ್ಟ
ಎರಡು ಅಂತಸ್ತಿನಾಗ ಮಲಗುದು ಐಟ ಬರಾಕ ಅಂತ ಅದಕ ಹೆಸರಿಟ್ಟ

||ಏರು||

ಶಿಕ್ಷಾ ಆಗುವುದಕಿಂತ ಮೊದಲ ಅಪರಾಧಿಯ ಓದ ಇಡುವುದು
ಅಂಡರ್ ಟ್ರಯಲ್||೧||

ಮುಂಜಾನೆ ಎದ್ದ ಸ್ನಾನ ಸಂಧ್ಯಾವಂದನ ತೀರಿಸಿ ಗಂಜಿಯ ಕುಡಿಯಬೇಕ   ಬಿಸಿಬಿಸಿದ
ಹನ್ನೊಂದು ಘಂಟೇಕ ಇನ್ನೇನ ಹೇಳಲಿ ಉಣ್ಣುದಕ ಬ್ಯಾಳಿರೊಟ್ಟಿ ಬರುವುವದ
ಹದಿನಾಲ್ಕು ಅಂಶ ತೂಕ ಒಂದೊಂದ ರೊಟ್ಟಿ ಎರಡ ರೊಟ್ಟಿ ಬ್ಯಾಳಿ ಹಾಕಿ   ಕಲಸುವದು
ಒಂದ ಸೌಟ ಉಪ್ಪ ತಂದ ಒಗದರ ಕಣ್ಣಮುಚ್ಚಿಕೊಂಡು ಅಷ್ಟು ನುಂಗುವುದ
ಸಂಜೆ ಐದ ಘಂಟೆಕ ಸಜ್ಜಿ ಭಕ್ರಿ ಕೂಡ ಕಾಯಿಪಲ್ಲೆ ಬಾಜಿ ಅಂಬು ಹೆಸರಿನದ
ಎಪ್ಪತ್ತ ತರದ ತೊಪ್ಲ ಪಪ್ಪಾಯಿಕಾಯಿ ಎಳಿ ಎಳಿ ಕಟಗಿ ಹುಳ ಒಂದೊಂದ
ಹೆಸರಬ್ಯಾಳಿ ಕಡ್ಲಿಬ್ಯಾಳಿ ಚನ್ನಂಗಿಬ್ಯಾಳಿ ತೊಗರಿಬ್ಯಾಳಿ ದಿವಸಕೊಂದ ಚಂದ ಚಂದ
ಆದಿತ್ಯವಾರ ಗೋಧಿರೊಟ್ಟಿ ಬೆಲ್ಲ ಕೊಟ್ರ ಮಾದಲಿ ಮಾಡುವದು ಏನ ಹದ

||ಚ್ಯಾಲ||

ವಾರದಾಗೆರಡ ಸಾರೆ ಉಳ್ಳಾಗಡ್ಡಿ ಹಲ್ಲ ಇಲ್ಲದವರಿಗೆ ಅಕ್ಕಿಯ ಕಿಚಡಿ
ಸೀತ ಆದರ ಡಾಕ್ಟರ ನೋಡಿ ಎಲ್ಲಾ ರೋಗಕ್ಕೆಲ್ಲ ಒಂದ ಔಷಧ ಕುಡಿ
ದಿವಸಕೆರಡ ಸಾರೆ ಲೆಖ್ಖ ಮಾಡಿ ಕೂಡ್ರಸೂರ ಇಬ್ಬರ ಜೋಡಿ ಜೋಡಿ

||ಏರು||

ನಳದ ನೀರಿನ ಜಳಕ ಪರಸಿನ ಮ್ಯಾಲ ಪಾಯಖಾನೆಗೆಲ್ಲ ಸಂಗಮರಿ ಕಲ್ಲ||೨||
ವಾರಕ್ಕೊಮ್ಮೆ ಅರವಿ ನೀರಾಗ್ಹಾಕುದಕ ಸರ್ವರಿಗೆ ಬರುವದು ಸೋಡಾಪುಡಿ
ಪೂರಾ ಎಂಟ ಘಂಟೇಕ ಕ್ಷೌರದವರ ಬಂದರ ನೀರಹಚ್ಚಿಕೊಳ್ಳುದೊಳೆ ಗಡಿಬಿಡಿ
ತಿಂಗಳಿಗೊಮ್ಮೆ ಭೆಟ್ಟಿ ಸಂಗಡ ವಾಚಮನ್‌ರು ರಂಗ ಕಾಮದಲಿ ದಾಖಲಮಾಡಿ
ಸಿಪಾಯಿಗೋಳ ಬಂದ ಪುಕಾರ ಮಾಡಿದಮ್ಯಾಲ ಆಫೀಸತನಕ ಬೇಗ ನಡಿ
ಮಾಸಕೊಂದ ಪತ್ರ ಖಾಸಗೀದ ಬರದರ ಹಕ್ಕಿನ ಪತ್ರ ಬಂದ ಹಿಂದಗಡಿ
ಟಿಪಾಲುಗಳ ಎಲ್ಲಾ ತಪಾಸ ಮಾಡಿದಮ್ಯಾಲ ಕಳಿಸುದಕ ಸುಪರಿಂಟೆಂಡೆಂಟ   ಸಹಿಮಾಡಿ

ಬಂದ ಪತ್ರಗಳು ತಂದಕೊಡುವರು ಒಂದೊಂದ ಅವರ ನಂಬರ ನೋಡಿ
ಹದಿನೈದ ದಿವಸಕ್ಕೊಮ್ಮೆ ಬಂದ ಡಾಕ್ಟರ ತೂಕಕ ಕಟ್ಟಸತಿದ್ದ ತಕ್ಕಡಿ

**||ಚ್ಯಾಲ||**

ತೂಕ ಕಡಿಮೆ ಅದರ ಚಪಾತಿ ಎಂಟ ಔಂಸ ಹಾಲ ಅನ್ನ ಪೂರ್ತಿ
ಸೀತ ಅದರ ಪಲಂಗ ಮ್ಯಾಲ ವಸ್ತಿ ಗಾದಿ ತಲಗಿಂಬ ಪರ್ಯಾಣ ಅವರ ಹಂತಿ
ವಾರದಾಗೆರಡ ಸಾರೆ 'ಸಿವಿಲ್ ಸರ್ಜನ್' ಸರತಿ ಬಂದ
ತಗೊಂಡ ಹೋಗಾಂವ ಎಲ್ಲಾ ಮಾಹಿತಿ

**||ಏರು||**

ಬಾಯಮಾತಿನ ಮ್ಯಾಲ ರಿಪೋರ್ಟ ಪೋಲಿಸರದು
ಭೀಮಶೇಂದ ಯಾವ ಮಾತಿಗೆ ಕಡಿಮಿಲ್ಲ||೩||

*ರಚನೆ:* ಹುಲಕುಂದ  ಭೀಮಕವಿ
*ಕೃತಿ:*  ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೧. ನಮ್ಮ ಮನೆ ಹಿರಿತರ ನಮಗ ಕೊಡಿರಿ

ಭರತಖಂಡದೊಳು ಹಿರಿತನ ಮಾಡಿ ಮೆರೆಯಬೇಕಂತ ಫಿರಂಗೇರ
ನಮ್ಮ ಮನೆ ಹಿರಿತನ ನಮಗೆ ಕೊಡರಿ ಅಂತ ಸೌಮ್ಯದಿಂದ ಕೇಳತಾರ ಗಾಂಧಿಯವರ
ಹಿಂದೂಸ್ಥಾನದೊಳಗಿಂದ ತಿಂದ ಸಾಕಾಗಿಲ್ಲೇನ ಎಂದ ಬಿಡತೀರಂತ ಜವಾಹರಲಾಲರ
ಇದ್ದರ ಪಾಡಲ್ಲ ಇವರ್‍ನ ಸಧ್ಯದ ಕಾಲದೊಳು ಒದ್ದ ಕಳಸುನಂತಾರ ಸುಭಾಸಚಂದ್ರರ
ಸ್ವಾತಂತ್ರ್ಯ ಸಲುವಾಗಿ ಅಧಿಕಾರ ಸ್ವೀಕಾರ ಮಾಡಿ ಆಡಳಿತ ಸಾಗಸಿದ್ರ ಮಂತ್ರಿಯವರ
ಇದ್ದಷ್ಟ ಬಳಕೊಂಡು ಮತ್ತು ಯುದ್ಧಕ್ಕೆ ಸಹಾಯಮಾಡಿರಂತ ಗುದ್ದ್ಯಾಟ
ನಡೆಸಿದರ ವಾಯಿಸರಾಯರ
ಮೊದಲ ಸ್ವರಾಜ್ಯ ಕೊಟ್ಟ ನಂತರ ಸಹಾಯ ಅಂತ ಠರಾವು ತಗದರ ಕಾಂಗ್ರೆಸ್‌ದವರ
ಯಾರ ಸಲುವಾಗಿ ಘೋರಯುದ್ಧ ಹೂಡಿದಿರಿ ಪೂರ ತಿಳಿಸಿರಿ ಇದರ ಮುಜಕೂರ
ಹಿಂದಿನ ಕಾಲದೊಳು ಹೀಂಗ ಮಾಡಿ ನಮಗೆ ಟಂಗ ತಿನಿಸಿದರ ಭರಪೂರ
ಸ್ವರಾಜ್ಯ ಕೊಡತೀವಂತ ಸುಲಕೊಂಡ ಹೋಗಿ ಎಲ್ಲಿತನಕ ನಡಸಿರಿ ತಕರಾರ
೧೯೧೪ನೆಯ ಇಸ್ವಿಯೊಳು ಮಹಾಯುದ್ಧ ನಡದಿತ್ತ ಭಯಂಕರ
ಹದಿನಾರಕೋಟಿ ಪೌಂಡ ಧನ ಹತ್ತು ಲಕ್ಷ ಜನರ ಸಹಾಯ ನೈತಿಕ ಬೆಂಬಲ
ಕೊಟ್ಟರು ಮೋಹನದಾಸರ

**||ಚ್ಯಾಲ||**

ಹಿಂದೂಸ್ಥಾನದೊಳಗಿನ ಶೂರರು ಯುದ್ಧ ಮಾಡಿದರು ಹೊಟ್ಟೆಗಿಲ್ಲದ
ತೃಣ ಹರದ ತಿಂದ ನೀರ ಕುಡದ
ಸಾಮ್ರಾಜ್ಯಶಾಹಿ ದಶಿಯಿಂದ ನಡಾಕಟ್ಟಿ ದುಡದ
ಹೊಟ್ಯಾಗ ಗುಂಡ ಬಡದ ಸತ್ತ ಹೋದರು ಹಲ್ಲ ಹೊರಬಿದ್ದ
ಎಷ್ಟೋ ಜನರ ಪ್ರಾಣ ಹೋದಮ್ಯಾಗ ಜಯಾ ಆತ ಆಗ ಬ್ರಿಟಿಶರ ಗೆದ್ದ
ಸ್ತುತಿ ಮಾಡ್ಯಾರ ಹಿಂದೂಸ್ಥಾನದ

||ಏರು||

ಸ್ವರಾಜ್ಯ ಕೊಡತೀವಂತ ಖರೇ ಮಾತಾಡುವುದಿಲ್ಲ ಬರೆ ಬಾಯಿಲಿ ಒದರ್‍ಯಾಡುವರ||೧||
ಲಡಾಯದಕಿಂತ ಮೊದಲು ಬಡಾಯ ಹೇಳಿದ್ದನ್ನ ಕೊಡುವಾಗ ಬಂದಿತ ಬಾಳ ಕಷ್ಟ
ಬಡಿವಾರ ಹೇಳಿದರ ಇವರ ಬಿಡುದಿಲ್ಲಂತ ತಿಳದ ಆಡತಾರ ಕಾಯ್ದೆ ತಗದಾರಪ್ಪ ಸ್ವಷ್ಟ
೧೯೧೯ನೆ ಇಸ್ವಿ ಫೆಬ್ರುವರಿ ತಿಂಗಳ ಎರಡ ಬಿಲ್ ಹೊರಟ
ರಾಜದ್ರೋಹ ಪತ್ರಕ ಸಭೆ ಕೊಡುಸುದಕ ನಿರ್ಬಂಧವಾದಿತ ಸರ್ವಸಗಟ
ಕಾಯ್ದೆಗಳು ನಿಷೇಧಮಾಡಿ ಸಾವಿರ ಜನರು ಸತ್ತ್ರ ಗಾಯ ಆಗಿ ಬಿದ್ದವ ಗುಂಡಿನೇಟ
ಪಂಜಾಬದೊಳಗ ಇಂಥ ಗೊಂದಲವಾದಿತು ಮುಂದ ಕೇಳರಿನ್ನ ಚಿತ್ತಿಟ್ಟ
ಜಾಲಿಯನ್ ವಾಲಾಭಾಗ್ ಎಂಬು ಮಿಗಿಲ ಜಾಗದೊಳು
ಜಾತ್ರಿಗಿ ಬಂದಾರ ಜನರ ಹೊಂಟೊಂಟ
ಹೆಣ್ಣು ಮಕ್ಕಳು ಸಣ್ಣ ಹುಡುಗರ ಗಂಡಸರು ಘನವಾದ ಜಾತ್ರಿಯ ಆರ್ಭಾಟ
ವಿಸ್ತಾರವಾದ ಬೈಲಸುತ್ತ ಕಟ್ಟಡ ಸಾಲ ಒಂದೇ ದಾರಿ ಮತ್ತೊಂದಿಲ್ಲ ಎಳ್ಳಷ್ಟ
ನಾಲ್ಕು ಘಂಟೇಕ ಅಲ್ಲಿ ವ್ಯಾಖ್ಯಾನ ಆಗುವದೆಂದು ಜನರಲ್ ಡಾಯರ್
ದೈವಯೋಗದಿಂದ  ಚಿಲಕತ್ತಿನ ಮೋಟರ ಒಳಗ ಹೋಗಲಿಲ್ಲ ಆದಿತ ಕಟ್ಟ
ದಾರಿಯೊಳಗ ತರುಬಿ ಗೋಳಿಬಾರ ಮಾಡುವಾಗ ಹೆಣ ಬಿದ್ದುವರಿ ಪಟ ಪಟ

||ಚ್ಯಾಲ||

೧೬೫ ಗುಂಡಿನೇಟ ಹಾರಿಸಿದ ಮ್ಯಾಲ ಬಿಟ್ಟ ಅಲ್ಲಿ ತನಕ ಹೊಡದ
ಎಂಥಾ ಕಾಯ್ದೆ ನೋಡರಿ ಅವರದ
ಹರದೀತ ರಕ್ತಕಾವಲಿ ಕೂಸುಗಳ ತೇಲಿಹೋದವು ಒಂದೊಂದ
ಮುಳಮುಳಗಿ ಸತ್ತವು ಅಳತಿಲ್ಲದ
ನಿಂತಲ್ಲೆ ಸತ್ತಾವ ನೂರಾರು ಓಡಿ ಹೋಗವರ ಮ್ಯಾಲ ಗುಂಡು ಬಡದ
ನೆಲಕಬಿದ್ದ ಸತ್ತಾವ ತೆರಪಿಲ್ಲದ

||ಏರು||

ವಿನಾಕಾರಣ ಅನಾಹುತ ಹೆಣದ ರಾಶಿ ಆತ ಅಮೃತಸರ
ಉಪಕಾರ ಮಾಡಿದವರ್‍ನ ಉಪರಾಟೆ ಕೊಲ್ಲುರ ಕಪಟದಿಂದ ರಾಜ್ಯವಾಳುದಕ
ಸಲ್ಲಾದಿಂದ ಇಲ್ಲಿದೆಲ್ಲ ಹೇಳಿದವರ್‍ನ ಗಲ್ಲಿಗೇರಿಸುರು ಆ ಕ್ಷಣಕ

ಕತ್ತಿ ಕಠಾರಿ ಬಂದೂಕ ಕೊಟ್ಟರ ತಾಂವ ಸಿಕ್ಕೀವಂತಾರ ಹೊಡತಕ್ಕ
ವೀರ್ಯ ಸಹಿತ ನೀರ ನೀರ ಆಗುವಂಥ ಚಟಗಳ ಕಲಿಸ್ಯಾರ ನಮ ದೇಶಕ್ಕ
ರೊಕ್ಕ ಎಲ್ಲ ಮೊದಲ ಚೊಕ್ಕ ಸಲುದಾರು ಕಾಯ್ದೆ ತಗ ತಗದ ಕಾಲ ಕಾಲ ಕಾಲಕ್ಕ
ಸಿರಿ ಹೋಗಿ ನಾವು ಕುರಿಗಳಾದರೂ ಅರವ ಇಲ್ಲ ಹಿಂದು ಕುಲಕ
ಸೈನ್ಯ ಖಾತೇದನ ಅನ್ಯಾಯ ಕೇಳರಿ ಚೆನ್ನಾಗಿ ಹೇಳುವೆ ಉಳಿದ್ದಂಗ ಶಿಲ್ಕ
೧೯೧೦-೧೧ನೇ ಇಸ್ವಿಯೊಳು ಇಪ್ಪತ್ತೆಂಟ ಕೋಟಿ
ರೂಪಾಯಿ ಖರ್ಚು ಇತ್ತು ಆ ಖಾತೇಕ
ಅದಃಖಾತೇಕ ಅರವತ್ತ ಕೋಟಿ ರೂಪಾಯಿ ಖರ್ಚು ಈಗ
ಹೀಂಗ್ಯಾಕ ಅಂತಾನ ನಮ್ಮ ಮುದುಕ
ಅರ್ಧ ಖರ್ಚಿನೊಳಗ ಆಡಳಿತ ನಡಸರಿ ಹಿಂದು ಜನರ ಉನ್ನತಿಯಾಗಬೇಕ
ನಾಲ್ಕುನೂರಾ ಮೂವತ್ತಮೂರು ರೂಪಾಯಿ ಪಗಾರ
ಹಿಂದಿ ಸಿಪಾಯಿಗೆ ಪ್ರತಿವರ್ಷಕ
ಬ್ರಿಟಿಶ್ ಸಿಪಾಯಿಗೆ ಒಂದು ಸಾವಿರದ ಎರಡನೂರು ಮೂವತ್ತೇಳು ಯಾಕ

||ಚ್ಯಾಲ||

ನಮ್ಮ ಜನರಿಗೆ ನಮ್ಮ ಅರವ ಇಲ್ಲ ನಮ್ಮ ದೇಶದ ಪರವಿ ನಮಗಿಲ್ಲ
ನಮ್ಮ ರೂಪಾಯಿ ಶಿಪಾಯಿ ನಮ್ಮ ಎಲ್ಲ
ನಮ್ಮ ನಮ್ಮವರ ನಮ್ಮನ್ನಹಾಕತಾರ ಜೇಲ ನಮ್ಮ ಜನರದ ಆತಿ ಅನಾನುಕೂಲ
ನಮ್ಮಿಂದ ಆಗಿದಾರ ಮೇಲ

||ಏರು||

ನಮ್ಮವರೆಲ್ಲಾರು ಒಮ್ಮನಸಾಗಿರೆಂದು ಭೀಮರಾಮ ನಿತ್ಯ ತಿಳಿಸುವರ||೩||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೭. ಸಿಂಗಾಪುರದ ಸೈನ್ಯ

ಸಿಂಗಾಪುರದಿಂದ ಸೈನ್ಯವು ಹೊರಟಿತು ದಿಲ್ಲಿಗೆಂದು ಗುರಿಸಾಧಿಸುತ
ಸಂಗ್ರಾಮದ ಘನ ಸಿದ್ಧತೆ ಮಾಡಿತು ಜಯಹಿಂದ್ ವಂದನೆ ಮಾಡುತ
ತನ್ನ ಕಾಲಮೇಲೆ ನಿಲ್ಲುತೆ ಬಗ್ಗದ ವೈರಿಯ ದಂಡನು ಜಯಿಸುತ್ತ
ಘನ ಹಿಂದುಸ್ಥಾನ ಸ್ವತಂತ್ರ ಸರಕಾರ ತತ್ವವ ಜನರಲಿ ತಿಳಿಸುತ್ತ
ಹೆಣ್ಣು ಮಕ್ಕಳೊಳು ಸೈನ್ಯವ ಕಟ್ಟುತೆ ಶೋಭಿಸಿದಳು ಲಕ್ಷ್ಮೀ ವನಿತ
ಕಣ್ಣು ಮುಚ್ಚಿ ಕಣ್ತೆರೆಯುವದರೊಳಗೆ ಸುರಿಸಿ ರಕ್ತ ಸಹಿ ಮಾಡುತ್ತ
ದೇಶಸೇವೆಯಲಿ ದೇಹವಿಡುವೆವು ಸುಖ ಸಂಪದಗಳನೊದೆಯುತ್ತ

ಈ ಶರೀರವು ಭಾರತ ಸೇವೆಗೆ ಮುಡುಪಾಗಿರುವದು ಜೀವಿಸುತ
ಯುದ್ಧ ಮಾಡಿ ನಿಜಪುರುಷರ ತರದಲಿ ಹಿಂದುದೇಶವನು ಗಳಿಸುತ್ತ
ಬದ್ಧ ಮನದಿ ನಾವ್ ಸೈನ್ಯದ ಸಂಗಡ ಕೂಡಿ ತೋರುವೆವು ಕಸರತ್ತ
ಹೇಡಿಗಳಾಗದೆ ಬೇಡಿರಿ ದೇವರಿಗೆ ಹಿಂದುದೇಶಕ್ಕೆ ಸ್ವಾತಂತ್ರ್ಯ
ಕೂಡಬನ್ನಿ ಶೂರರಾದರೆ ಸ್ವತಂತ್ರ ಸೈನ್ಯಕ್ಕೆ ಓಡುತ್ತ
ಹೀಗೆ ನುಡಿಯುತಲಿ ಶಿಕ್ಷಣ ಪಡೆಯುತ  ಬಂದರು ಸ್ತ್ರೀಯರು ನಗುನಗುತಾ
ಬಾಗಿ ಕೇಳತಾರ ನೇತಾಜಿ ದೊರೆಯೆ ಕಳುಹಬೇಕು ನಮ್ಮ ಸರದಿ ತಾ

||ಇಳವು||

ಹೆಣ್ಣಾಳು ಎದ್ದ ಮಹಾಯುದ್ಧ ಇನ್ನೆಲ್ಲಿ ಕೇಳಿಲ್ರಿ ಜಗಶಬ್ದ
ಮುನ್ನೇಳತಾರ ಜಿಗದೆದ್ದ ಇನ್ನಾದ್ರು ಏಳ್ರಿ ಹುರಪೆದ್ದ

||ಏರು||

ಗಂಡಸರೆಂಬುವರಿರುವಿರ್ಯಾರು ದೇಶದಿ ಆಣಿ ಮಾಡಿ ಹೇಳ್ತೇವಿ ನೀವಿನ್ನು||೧||
ರೊಕ್ಕ ಸುರಿದನು ಸುಭಾಸ ಚಂದ್ರನು ಅಳತೆ ಮೀರಿದಪರಂಪಾರ
ಬೊಕ್ಕಸ ತುಂಬಿತು ಬ್ಯಾಂಕನು ಮಾಡಿದ ಸ್ವತಂತ್ರ ಭಾರತ ಸರ್ಕಾರ
ಬರ್ಲಿನ್ ಬರ್ಮಾ ಇಂಡೋಚೀನದಿ ಜಪಾನ ದೇಶದಿ ಕಾರಭಾರ
ಸಾರಿ ನಡೆಯಿತು ಸಾವಿರಗಟ್ಲೆ ಕೊಡುವ ತೆಗೆದುಕೊಳ್ಳ ವ್ಯವಹಾರ
ಕೂಡಬೀಳತಿತ್ತು ಸಭೆಯಲಿ ರೊಕ್ಕವು ಮಾಲ ಲಿಲಾವಿಗೆ ಭರಪೂರ
ಕೂಡಿಸಿ ಕೊಡತಿದ್ರು ದುಡ್ಡಿದ್ದವರು ದೇಣಿಗೆಯಿಂದಲಿ ಸಾವಿರಾರ
ಸಾಲ ಮಾಡದಲೆ ಹಣವು ಸೇರಿತದು ದೇಶಭಕ್ತರಗೇನು ದರಕಾರ
ಕಾಲ ಊರಿದಾಂಗ್ಲರ ತಾ ಕಳಿಸಲು ಗಾಳಿ ದುರ್ಗವ್ವ ಗುಡಿತುಂಬಿದರ
ಟ್ಯಾಂಕ ತೋಪು ಬಂದೂಕು ವಿಮಾನವ ಕೊಂಡು ಕೊಂಡನಪ್ಪ ಬಹದ್ದೂರ
ಬ್ಯಾಂಕಿನಿಂದ ಚಕ್ಕು ಹೋಗಿ ಮುಟ್ಟತಿತ್ತೋ ಮೋಸವಿಲ್ಲ ಹಣ ಸರಸರ
ಭೆಟ್ಟಿಕೊಟ್ಟ ಹಿಟ್ಲರದೊರೆ ತಾ ಸೈನ್ಯ ನೋಡಿದನು ದುರಂಧರ
ದಿಟ್ಟ ಸುಭಾಸರು ಸಾರ್ವಭೌಮರೆಂದು ಗೌರವಿಸಿದನ್ಯೆ ಹಿಂದಿಯರ
ರೋಮೇಲ ಸೇನಾಪತಿಯು ಬಂದು ಸಂತೋಷವ ಪಡೆದನು ಸೈನಿಕರ
ಭೀಮ ಪರಾಕ್ರಮ ನೋಡುತ ಕೇಳಿದ ಹಿಂದ-ಮುಸಲ್ಮಾರ್ಯಾರ್ಯಾರ
ಶಿಸ್ತು ಸೈನ್ಯದಲಿ ಮೇಲೆನಿಸಿತ್ತು ಜಾತಿ ಭೂತ ಇದ್ದಿಲ್ರಿ ಜರ
ಮಸ್ತಿಖೋರ ಜನಕಾಗುತಲಿತ್ತು ಪಾರುಪತ್ಯವದು ಭಯಂಕರ

||ಇಳವು||

ಹೀಗಾಗಿ ಸೈನ್ಯದಲ್ಲಿ ನೀತಿ ಉಳಿದಿತ್ರಿ ತಮ್ಮ ಜನ ಪ್ರೀತಿ
ಆಗಾಗ ಸುಭಾಸರ ಸ್ಫೂರ್ತಿ ಸಿಗತ್ತಿತ್ರಿ ಸೈನ್ಯಕದು ಭರ್ತಿ

||ಏರು||

ದೇಶದ ದಾಸ್ಯ ಹರಿದು ಚಲ್ಲಿ ಕೇಕೆಹೊಡೆದು ಸೈನ್ಯವೆಲ್ಲ
ಹೊಕ್ಕುಬಿಟ್ಟಿತು ಸಮ ಸೀಮೆಯನು||೨||

*ರಚನೆ:* ಮಾರನಬಸರಿ ಮೋದಿನಸಾಬ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೩. ಭಾರತ ಸ್ವತಂತ್ರವಾದ ದಿನ

ಸನ್ ಹತ್ತೊಂಭತ್ತನೂರ ನಾಲವತ್ತೇಳನೆ ಆಗಸ್ಟ್ ಹದಿನೈದನೆಯ ತಾರೀಖ
ಶುಕ್ರವಾರ ಉದಯಕ್ಕ ದೊರಕೀತು ಸ್ವಾತಂತ್ರ್ಯ
ಹರದ ಹೋತು ಪಾರತಂತ್ರ್ಯ
ಹಳ್ಳಿಗಳ ಸಡಗರ ನಗರಗಳ ಶೃಂಗಾರ ನಾರಿ ಪುರುಷರೆಲ್ಲಾರ
ಧರಿಸ್ಯಾರ ಹೊಸ ವಸ್ತ್ರ ತರಸಿ ಪುಷ್ಪದ ಹಾರ
ಕುಸುಮ ವೃಷ್ಟಿ ಸುರಿಸ್ಯಾರ ಊರೂರ
ಮಹಾತ್ಮಾಗಾಂಧಿಯವರ ಪಂಡಿತ ನೆಹರೂರವರ
ಸುಭಾಸಚಂದ್ರ ಬೋಸರ

ಮೂರ್ತಿ ಪೂಜೆ ಮಾಡ್ಯಾರ ಭಕ್ತಿಯಿಂದ ಜನರ
ಸಕಲ ವಾದ್ಯ ಜಯಘೋಷ ಜಯಕಾರ
ಮದ್ದುಗುಂಡಿನ ಆರ್ಭಾಟ ತಾರ ಉಳಗಿ ಹಾರ್‍ಯಾಟ ಭಾಷಣಗಳ ತೂರ್‍ಯಾಟ
ಜಯಘೋಷದ ಚೀರಾಟ ನಡದೀತು ಭಯಂಕರ
ರಾಷ್ಟ್ರಗೀತ ಅನ್ನುವರು ಬಾಲಕರ
ಗ್ರಾಮದೇವರಿಗೆ ಬಂದ ಕ್ಷೀರ ಘೃತ ಸುಗಂಧ ಉದಕ ನೀಡಿ ಮುದದಿಂದ
ತೊಳೆದಾರ ದೇವರಪಾದ ಬೆಳಗ್ಯಾರ ಕರ್ಪುರ
ಮಂಗಲಮಾಡಿ ಅನ್ನುವರು ಹರಹರ
ಅನಾಥರಿಗೆ ಆನಂದ ಅನ್ನಸಂತರ್ಪಣದಿಂದ ಚಂದ ಗ್ರಾಮ ಹುಲಕುಂದ
ಹಿರೇಮಠೇಶನ ಕಂದ ಶಿವಲಿಂಗ ಸುಕುಮಾರ
ಮಾಡಿದಂಥ ಕವಿ ಕನಕ ಶಿಖರ

————————

**ಕಟಿಪಟಿ – ಪ್ರಯತ್ನ,**

*ರಚನೆ:* ಹುಲಕುಂದ ಶಿವಲಿಂಗಸ್ವಾಮಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೪. ಕಲಂ

ಸರ್ವರಿಗೆಲ್ಲ ಶಿರಬಾಗಿ ಹೇಳತೇನಿ ಕರುಣಿಸಿ ಕೇಳರಿ ಕುಂತ ಜನರ
ಸ್ವರಾಜ್ಯ ಅಂದರೇನ ಪರ್ವತದ ಹಂಗಯಿಲ್ಲ ಸರಳ
ಹಾದಿ ತಗದಾರ ಮಹಾತ್ಮರ ||ಪ||

ಹನ್ನೊಂದ ಕಲಂ ಬಿಟ್ಟ ಇನ್ನೊಂದರಾಗ ಇಲ್ಲ
ಚೆನ್ನಾಗಿ ಹೇಳ್ಯಾರ ಪುಣ್ಯಾತ್ಮರ

ಮಾನ್ಯಮೂರ್ತಿ ವಚನಕ ಧನ್ಯ ಆತಿ ನನ್ನ ಮನ
ಅನ್ನ ಹಾಕಲಿಕ್ಕೆ ಅವನೇ ಆಧಾರ

ಮೊದಲಿನ ಕಲಂದಾಗ ಸದ್ಯಕ್ಕ ಮದ್ಯಪಾನ ಬಂದ ಆಗಬೇಕ ಅನ್ನುತ
ಬಂಡಮಾತ ಅಲ್ಲ ಹುಂಡಾವಳಿ ಭಾವ ಕಮ್ಮಿ
ಮಾಡಬೇಕ ಅಂತ ಅನ್ನುವರ

ಮಳೆಹೋಗಿ ಬೆಳೆ ಇಲ್ಲ ಅನ್ನುವಂಥ ರೈತಗ
ಬಿರಾಡ ಬಿಡುವದಿಲ್ಲ ಸರಕಾರ

ತೆರಿಗೆ ಕೊಟ್ಟ ಬಾಳ ಮರಗುತ ಕುಂತಾರ ಮನಿಯಾಗ ಉಳಿಯಲಿಲ್ಲ ಬಂಗಾರ
ಅರ್ಧ ತೆರಿಗೆ ಇಳಸಂತ ಹೇಳತಾರ ಮೂರನೆ ಕಲಂದಾನ ಮಜಕೂರ
ಸದರೀ ಖಾತೆದ ಮ್ಯಾಲ ಕಾಯ್ದೆ ಮಂಡಲದ ಅಧಿಕಾರವಿರಬೇಕು ಭರಪೂರ

||ಚ್ಯಾಲ||

ಮುಪ್ಪಿನವರ ಹೇಳಿದ ಕೌತುಕ ಉಪ್ಪಿನ ಮ್ಯಾಲಿನ ಕರ ತೆಗಿಬೇಕ
ಸೈನ್ಯ ಖಾತೇದ ಖರ್ಚು ಇಷ್ಟಯಾಕ ಈಗ ಇದ್ದರೊಳಗ ಅರ್ಧ ತೆಗಿಬೇಕ

||ಏರು||

ಬಾಳ ದಿವಸ ಆತಿ ಇವರು ಹೇಳಿಕೊಂತ ಬರತಾರ ಕೇಳವಲ್ರ
ಹಾ ಗೋಷ್ಠಿ ಸರಕಾರ ||೧||

ಬಡಬಗ್ಗರು ಕೂಲಿಕಾರ ದುಡದ ದುಡದ ಸಾಯತಾರ ಏಳು
ದುಡ್ಡ ಸಿಗುದಿಲ್ಲ ಪಗಾರ
ಹೋಳಗಿ-ತುಪ್ಪ ಹೊಡದ ಮೇಲ್ಮಾಳ್ಗಿ ಮ್ಯಾಲ ಮಲಗತಾರ
ದೊಡ್ಡ ದೊಡ್ಡ ನೌಕರಿ ಮಾಡವರ
ಸರ್ವರಿಗೆಲ್ಲ ಸರಿಯಾಗಿ ದೊರಿಯಬೇಕ ಇವರಿಗ್ಯಾಕ ಮೂರು ನಾಲ್ಕು ಸಾವಿರ

ಐದನೂರ ಮ್ಯಾಲ ಕೊಡಬಾರದಂತ ಸ್ವಚ್ಛವಾಗಿ ಹೇಳ್ಯಾರ ಅಚ್ಯುತರ
ಪರದೇಶಿ ಬಟ್ಟೆ ಮ್ಯಾಲ ಕರಾ ಹೇರುವುದು ರೈತರ ಹಕ್ಕಿನ ವಿಚಾರ
ನಮ್ಮ ಸಮುದ್ರ ದಂಡೆಯ ಮ್ಯಾಲ ನಡೆಯುವದು ನಮ್ಮ ಕೈಯಾಗಿರಬೇಕ ವ್ಯಾಪಾರ
ತಾಪತ್ರಯ ಬಿಡಿಸಾಕ ವ್ಯಾಪ ಹಾಕಿದರ ಭೂಪಾಲಗ ಬಾಪೂಜಿಯವರ
ಬಾಪೂಜಿಯವರಿಗೆ ತಾಪಪಡಿಸಿದ ಪಾಪಿಗಳು ಲೋಪಾಗುವರ
ಗುಪ್ತ ಪೋಲಿಸ ಖಾತೆ ಕಿತ್ತ ಹಾಕುವದು ಹತ್ತನೇಯ ಕಲಂದ ಆಧಾರ
ಇದ್ದರ ಸುದ್ಧ ಸರಿಹೋದಿತ ಅದರ ಮೇಲೆ ಜನರದ ಇರಬೇಕ ಅಧಿಕಾರ
ಕತ್ತಿ ಕಠಾರಿ ಬಂದೂಕದ ಪ್ರಯೋಗ ಹಿಂದುಸ್ಥಾನಕ ಬೇಕಾದರ ಉಪಯೋಗ
ಮಾಡುವ
ಪರವಾನಿಗಿ ಬೇಡಿದಾರ ವರವೀ ಪುರುಷ ಗಾಂಧಿಯವರ
ಬೇಕಾದವರ ಚೌಕಾಸಿ ಮಾಡಿರಿ ನಿಕಾಲಾದುವ ಇಲ್ಲಿಗೆ ಆಕಾರ
ಮಕ್ಕಳ – ಮರಿಗಳಿಗೆ ಸುಖ ದೊರಿಯತದ ಪಕ್ಕಾ ಸ್ವರಾಜ್ಯ ದೊರಕಿದರ

**||ಚ್ಯಾಲ||**

ಕಷ್ಟ ಬಿಟ್ಟ ಕಡಿ ಅಕರಕ ಮೆಟ್ಟಿಗ್ಹತ್ತುದ ಬಂತ ಸನಿಯಕ
ಎಲ್ಲ ಜನರದು ನಜರಿರಬೇಕ ಸುವರ್ಣಮಯ ಕಾಂಗ್ರೆಸ್‌ಕ

**||ಏರು||**

ಪ್ರೇಮ ಕಾಂಗ್ರೆಸ್‌ಕ ಭೀಮಸಿಂಗಗ ನೇಮದಿ ಮಾಡುವೆ ನಮಸ್ಕಾರ

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೫. ಕಾಂಗ್ರೆಸ್ ಮರ್ಮ

ಕೂತ ಕೇಳರಿ ಸಜ್ಜನ ಮಾಡುವ ಮೊದಲು ನಿಮಗೆ ವಂದನ
ಹಿಂದುಸ್ಥಾನದೊಳು ನಡೆದ ಕಾಂಗ್ರೆಸ್ ಮರ್ಮವನ ||ಪ||

ಕಾಂಗ್ರೆಸ್ಸಿನ ಕಾಯ್ದೆ ಇರುವದು ಬಹು ಹಸನ
ನಾವು ನೆನೆಯಬೇಕು ಮಹಾತ್ಮಾಗಾಂಧಿಯನ
ಜಗತ್ತಿನೊಳು ಜಾಹೀರ ಮಾಡಿದಾನೊ ತಾನಾ
ತಿಳಸಿ ಹೇಳಿದ್ದನೊ ದಿನ ದಿನ
ಒಂದೇ ಮಾತಿನಿಂದ ನಡೆಯುಬೇಕರಿ ಎಲ್ಲ ಜನ
ಅಂದರೆ ಸಿಗುವದು ಸ್ವರಾಜ್ಯ ನಮಗಿನ್ನ
ನಾವೆಲ್ಲರೂ ಏಕಾಗಿ ಕೇಳಬೇಕು ರಾಜನ್ನ

ನಮಗೆ ನೀ ಕೊಡು ಸ್ವರಾಜ್ಯವನ
ಕೊಡದಿದ್ದರೆ ಬಿಡುವುದಿಲ್ಲ ನಾವು ಇನ್ನ

||ಇಳವು||

ಈ ಪ್ರಕಾರ ಬೋಧ ಮಾಡತಿದ್ದ ಗಾಂಧಿ ಮಹಾರಾಜ ದಿನ
ಈ ಮಾತು ಕೇಳಿ ಹಿಂದುಸ್ಥಾನದೊಳಗಿನ ಜನ
ಕೂಡಿ ಮಾಡಿತೊ ಕಾಂಗ್ರೆಸ್ ಎಂಬುವ ಸ್ಥಾನ
ಅದರೊಳಗೆ ಮುಂದಾಳಾಗಿ ನಡೆದಾರೊ ಸುಭಾಸ ಬೋಸ ಎಂಬ ಇನ್ನೂ
ಕೆಲವು ಮುಖ್ಯ ಮುಖ್ಯ ಜನ
ಮನಿಮಾರು ಬಿಟ್ಟು ಅಧಿಕಾರ ತೊರೆದು ಹೊಂಟಾರೊ
ದೇಶದ ಮೇಲೆ ನೆನೆಯುತ ಮಹಾತ್ಮಾಗಾಂಧಿಯನ

||ಏರು||

ಲಕ್ಚರ ಹೇಳುತ ಹೊಂಟಾರೊ ಅಲ್ಲಲ್ಲಿಗಿನ್ನ
ಇನ್ನು ಮುಂದ ಕಾಣುವದಿಲ್ಲರಿ ಅವರಂಥ ಧೈರ್ಯಶಾಲಿಗಳನ
ನೀವು ಕೇಳರಿ ಕಾಂಗ್ರೆಸ್‌ದ ಮರ್ಮವನ||೧||
ಕಾಂಗ್ರೆಸ್ ಪ್ರಚಾರ ಮಾಡಿದರೊ ಹಿಂದುಸ್ಥಾನದೊಳಗ
ಸರಕಾರಿ ನಜರ ಬಿತ್ತರಿ ಕಾಂಗ್ರೆಸ್‌ದ ಮೇಗ
ಕಾಂಗ್ರೆಸ್ ಮುರಿಯಬೇಕೆಂದು ಮನಸಿನ್ಯಾಗ ಹುಟ್ಟಿತು ಆಗ
ಲಕ್ಚರ್ ಹೇಳಬಾರದು ನಾಲ್ಕು ಜನ ಕೂಡಿದಾಗ
ಕಾಯ್ದೆ ಹೊರಡಿಸ್ಯಾನೋ ವಾಯ್ಸರಾಯ ಹಿಂದುಸ್ಥಾನದಾಗ
ಮತ್ತ ಬಿಕ್ಕಟ್ಟು ಇಟ್ಟಾನೊ ದಂಡ ಶಿಕ್ಷೆಯನ್ನು ಬಹುಬೇಗ

||ಇಳವು||

ಕಾಯ್ದೆ-ಗೀಯ್ದೆ ಕೇಳಲಿಲ್ಲರಿ ಕಾಂಗ್ರೆಸದ ಜನ
ತಯಾರಾಗಿ ನಿಂತರು ಬಂಟ ಜನ
ಎಲ್ಲಿಬೇಕು ಅಲ್ಲೆ ನಿಂತು ಸಭೆಗೂಡಿಸಿ ಹೇಳುತ ಹೊಂಟರು ಲಕ್ಚರನ
ಬಂಧು ಜನಗಳೇ ನಾವು ನೀವು ಕೂಡಿ ಮಾಡೂನು ಒಂದು ಸಂಘವನ
ಕೊಡು ಎಂದು ನಮಗೆ ಕೇಳೂನು ನಮಗ ಸ್ವರಾಜ್ಯವನು
ಹೀಗೆಂದು ಹೇಳುತ ಹೊಂಟರು ಬಂಟ ಜನ
ನಿಷ್ಠೆಲಿಂದ ನಡೆದು ನಾವು ಸ್ವರಾಜ್ಯವನ||೨||

ಎಲ್ಲಿ ನೋಡಿದಲ್ಲಿ ಧರಿಸಿತು ಜನ
ಕೈ ನೂಲಿನ ಖಾದಿ ಅರಿವಿಯನ
ಕೈಯೊಳು ಪಿರಕಿ ಮನೆಯೊಳು ರಾಟಿಯ

ಗಿರಾಕಿ ಹೆಚ್ಚಾಗುತ ನಡೆದಿತು ದೇಶದೊಳಗಿನ್ನ
ಇದನ್ನೆಲ್ಲ ಕಣ್ಣಿಲೆ ನೋಡಿ ಕಿವಿಯಿಂದ ಕೇಳಿ
ಗಾಂಧಿ ಮಹಾತ್ಮನಾದನು ಮನಸ್ಸಿನೊಳು ಖುಸಿ ತಾನ
ಸ್ತ್ರೀಯರು ಮೊದಲಾಗಿ ಉಟ್ಟರು ಖಾದಿಯ ಬಟ್ಟೆಯನ
ಸ್ತ್ರೀ-ಪುರುಷರೆಲ್ಲರು ಕೂಡಿ ಕಾಂಗ್ರೆಸ್‌ದ ತತ್ವಕೆ ಒಪ್ಪಿ ನಡಿತೈತರಿ ಜನ
ಕಾಂಗ್ರೆಸ್‌ದ ಜನರನ್ನು ಹಿಡಿಯಬೇಕೆಂದು ತಯಾರಾಗಿ ಹೊರಟಿತು
ಸರಕಾರದ ಜನ
ಕಾಂಗ್ರೆಸ್‌ದ ಜನರನ್ನು ಎಲ್ಲಿಬೇಕು ಅಲ್ಲಿ ಹಾಕಿತು ಜೇಲಿಗಿನ್ನ
ಅನ್ಯಾಯವೆಂಬುದು ತುಂಬಿ ತುಳಕುತ ಹೊರಟಿತು ಸರಕಾರದೊಳಗಿನ್ನ
ಹಿಡಿದ ಕೂಡಲೆ ಅನ್ನುದು ಜನ ಮಹಾತ್ಮಾಗಾಂಧೀಕಿ ಜೈ ಜೈ
ಭಾರತ ಮಾತಾಕಿ ಜೈ ಜೈ ಎಂದು ಅನ್ನುತ್ತ ಖುಸಿಲಿಂದ ಹೋಗುತ್ತಿದ್ದರು
ಜೇಲಿಗೆ ಜನ
ಶಿಕ್ಷದ ಅವಧಿ ಮುಗಿದ ಮರುದಿನ ಸರಕಾರಕ ಹೇಳಿ ಬರತಿತ್ತ ಜನ
ಪುನಃ ನಾವು ಬರತೇವಿ ಇಲ್ಲೆ ಇರತೇವಿ ನಮ್ಮ ತಂಬಿಗಿ
ತಾಲಿ ಮೊದಲಾದ ಸಾಮಾನ ಜೋಪಾನ
ಎಂದು ಹೇಳಿ ದೇಶದೊಳಗೆ ಹರೆಬಿದ್ದು ಹೆಚ್ಚಾಗಿ
ಮಾಡಿತು ಕಾಂಗ್ರೆಸ್‌ವನ
ಪುನಃ ಪುನಃ ಹಿಡಿದು ಜೈಲಿಗೆ ತರತಿತ್ತು ಸರಕಾರದ ಜನ
ಜೇಲಿನೊಳಗೆ ಎಷ್ಟೋ ಮುಖಂಡ ಜನ ಮಾಡಿತು ಉಪವಾಸವನ
ಸರಕಾರಕ್ಕೆ ಹೆದರಲಿಲ್ಲರಿ ತಮ್ಮ ಹಟ ಬಿಡಲಿಲ್ಲರಿ ಕಾಂಗ್ರೆಸ್‌ದ ಜನ॥೩॥

ದಿನ ದಿನಕ್ಕೆ ಹೆಚ್ಚಾಗುತ್ತ ಹೊರಟಿತು ಕಾಂಗ್ರೆಸ್ ಹಿಂದುಸ್ಥಾನದೊಳಗಿನ್ನ
ಹಿಡಿದು ಹಿಡಿದು ಜೇಲಿಗೆ ಹಾಕಿ ಬೇಸತ್ತು ಹೋಯಿತು ಸರಕಾರದ ಜನ
ಕೂಡಿ ನಡೆಸಿತು ಐರ್ಲಂಡದೊಳಗೆ ಮುಖ್ಯ ಮುಖ್ಯ ಜನ
ಹಿಂದುಸ್ಥಾನಕ ಸ್ವರಾಜ್ಯ ಕೊಡಬೇಕು ನಾವು ಇನ್ನ
ಕೊಡದಿದ್ದರೆ ಮೂರಾಬಟ್ಟೆಯಾದೀತು ಎಂದು
ನಿರ್ಣಯ ಮಾಡಿತು ಆ ಮುಖ್ಯ ಜನ
ಕಾಂಗ್ರೆಸ್‌ದ ಮೇಲಿನ ಬಿಕ್ಕಟ್ಟು ತೆಗೆದು ಹಾಕಿ ಹೇಳಿತ ಲಗಿಬಿಗಿನ
ವೋಟರ್ ಲಿಸ್ಟಿನಿಂದ ಆರಿಸಿ ಬಂದರೆ ಸ್ವರಾಜ್ಯ ಕೊಡಿಸುವೆವು ಕಾಂಗ್ರೆಸ್ಸಿಗೆ ಇನ್ನ
ಅದೇ ಪ್ರಕಾರ ವೋಟಿನಿಂದ ಅರಿಸಿ ಬಂತರಿ ಕಾಂಗ್ರೆಸ್ ತಾನ
ಮುಖ್ಯ ಮುಖ್ಯ ಸ್ಥಾನದೊಳಗೆ ಕಾಂಗ್ರೆಸ್ ಅಧಿಕಾರ
ಆಯ್ತು ಹಿಂದುಸ್ಥಾನದೊಳಗಿನ್ನ
ಬುದ್ಧಿವಂತ ಸಣ್ಣ-ದೊಡ್ಡ ಜನರ ನಿಮಗೆ ನಾನು ಮಾಡುವೆ ವಂದನ
ನಾವು ನೀವು ಕೂಡಿ ಮಹಾತ್ಮಾಗಾಂಧಿಯನ್ನು ನೆನೆಯಬೇಕು ದಿನ
ಅನ್ನುನು ಒಂದೇ ಮಾತರಂ ಮಹಾತ್ಮಾಗಾಂಧೀಕಿ ಜೈ

ಭಾರತ ಮಾತಾಕಿ ಜೈ
ಎಂಬ ಹೆಸರು ಭಜಿಸಿ ಸ್ತೋತ್ರ ಮುಗಿಸೋಣ ದಿನ ದಿನ||೪||

*ರಚನೆ:* ಮೋದಿನಸಾಬ ಮಾರನಬಸರಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೧೬. ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬ

ಇಪ್ಪತ್ತೈದು ವರ್ಷ ಸ್ವಾತಂತ್ರ್ಯೋತ್ತರ | ಬೆಳ್ಳಿ ಹಬ್ಬದ ಸಡಗರ |
ಕನ್ನಡ ಸಾಹಿತ್ಯ ಪ್ರಸಾರ |
ಶ್ರೀ ಅರವಿಂದ ಶತಮಾನದ ಇಸ್ವಿ ಬಂದೈತಿ ಬಾ ಹತ್ತರ
ಮೂರು ಮುಖದ ಮೂರ್ತಿಯ ಮಹೋತ್ಸವ  ಇದರರ್ಥ ಮಾಡ್ರಿ ವಿಚಾರ
ತಿಳಿದು ಆಚರಿಸಿರೆಲ್ಲರು |
ಭಾರತ ಹಿರಿಮೆಯ ಪರ್ವಕಾಲವಿದು ಎನಿಸುವ ಸಂವತ್ಸರ||೧||

ಸ್ವರಾಜ್ಯ ದೊರೆತರೂ ಸುಖವಿಲ್ಲಂತ | ಪ್ರತಿಯೊಬ್ಬರು ಅಂತಾರ |
ಸರ್ವರು ಸ್ವಾರ್ಥ ಬಯಸ್ಯಾರ |
ಜ್ಞಾನದಿ ನವಮನ್ವಂತರಗೊಳಿಸಲು ಅರವಿಂದರ ಅವತಾರ||೨||

**||ಚಾಲ||**

ಆತ್ಮಾಹುತಿ ಮಾಡಿ ಸ್ವಾತಂತ್ರ್ಯವ ತಂದಾರ |
ಸತ್ಯ ಶಾಂತಿ ಅಹಿಂಸೆಯ ಮೂಲ ತಂತ್ರ ಕಲಿಸ್ಯಾರ |
ಬಂಧನವ ಹರಿದೊಗೆದು ಎಲ್ಲರಿಗೆ ಸುಖವನು ತಂದಿಟ್ಟಾರ |
ಜನತೆಯ ಪ್ರತಿನಿಧಿಯಾಗಿ ಅಧಿಕಾರವನು ಪಡೆದಾರ |
ಜಾತ್ಯಾತೀತ ಎಂಬ ತಂತ್ರದಡಿಯಲಿ ಜಾತಿ ಜಗಳಕ್ಕೆ ಆಸರ |
ಸ್ವಾರ್ಥಲಾಲಸೆಗೆ ಆಶೆ ಮಾಡುವ ದೇಶವ ಹದಗೆಡಿಸ್ಯಾರ |

**||ಏರು||**

ಸಿಂಡಿಕೇಟ ಇಂಡಿಕೇಟ ಅಂದಾರ ಪಕ್ಷ ಇಬ್ಭಾಗ ಮಾಡ್ಯಾರ |
ಸಂಸ್ಥೆಯ ಹೆಸರ ಕೆಡಿಸ್ಯಾರ ಶ್ರೀ ಅರವಿಂದ ಶತಮಾನದ
ಇಸ್ವಿ ಬಂದೈತಿ | ಬಾ ಹತ್ತಿರ||೧ನೆಯ ಚೌಕ||

ಜನತೆಗಾಗಿ ಹಣ ಖರ್ಚುಮಾಡಿ ಪರದೇಶಿ ಸಾಲ ತಂದಾರ |
ಕೋಟಿಗಟ್ಟಲೆ ಖರ್ಚು ಮಾಡ್ಯಾರ |
ತಳದತನಕಹಣ ಬರೂದರಾಗ | ಖಾಲೆ ಕಾಗದ ಪ್ರಚಾರ||೧||

ನೀರಾವರಿ ಕೆರೆಕಾಲವೆ ಕಟ್ಟಿ | ಬೆಳೆಸಿ ಧಾನ್ಯದ ಆಗರ |
ಸರ್ವರಿಗೆ ಸಾಲ ಕೊಟ್ಟಾರ |
ದುರಪಯೋಗ ಮಾಡಿ ದೂರುಕೊಟ್ಟರ ಏನೈತಿ ಸ್ವಾತಂತ್ರ್ಯ||೨||

ಬಡವ ಬಲ್ಲಿದರ ಸಮತಾವಾದಕೆ ಭೂಪರಿಮಿತಿ ತೆಗೆತಾರ |
ಬಡ ಜನತೆಯ ಉದ್ಧಾರ |
ಸರಿಯಾಗಿ ಸರಕಾರ ಅರಿತು ನಡೆದರೆ ಬೆಳ್ಳಿಹಬ್ಬ ಸಾರ್ಥಕ ನೋಡ್ರಿ||೩||

**||ಚಾಲ||**

ಸರಿಯಾಗಿ ಬಂದ ಸುಖ ಸರ್ವರ ಸ್ವತ್ತೆನಬೇಕು |
ಈ ಪರಿಯ ಅರವಿಗೆ ಸುಸಂಸ್ಕೃತಿ ಬರಬೇಕು |
ಪೂರ್ವದ ಭಾರತವು ಪುನಃ ನಿರ್ಮಾಣವಾಗಬೇಕು||೧||
ದಿಲ್ಲಿಯಿಂದ ಹಳ್ಳಿಯತನಕ ಸಾಹಿತ್ಯ ಹೊನಲು ಹರಿಬೇಕು |
ಒಳ್ಳೊಳ್ಳೆ ಪುಸ್ತಕ ಎಲ್ಲರು ಓದಿ ತಿಳಿಯಬೇಕು |
ವರ್ಷವಿಡೀ ಪುಸ್ತಕ ಪ್ರಸಾರವು ನಡಿಯಬೇಕು |||೨||

**||ಏರು||**

ರಾಜ್ಯದ ಜಿಲ್ಲೆ ತಾಲೂಕ ಹಳ್ಳಿಗೆ ಪುಸ್ತಕಗಳ ತರತಾರ |
ಸಾಹಿತ್ಯದ ಪ್ರಸಾರ ಮಾಡುವರು ||
ಶ್ರೀ ಅರವಿಂದರ ಶತಮಾನದ ಇಸ್ವಿ ಬಂದೈತಿ ಬಾ ಹತ್ತರ |(೨ನೆಯ ಚೌಕ)

ರಾಜಕಾರಣ ಸಮಾಜ ಸುಧಾರಣ ನಿಸ್ವಾರ್ಥದಿಂದ ದುಡಿದರ |
ಸಹಕಾರದಿಂದ ನಡೆದರ |
ತಾತ್ವಿಕ ಶಾಂತಿಯ ನೆರವು ಇರಬೇಕು ಭಗವಾನ್ ಶ್ರೀ ಅರವಿಂದರ||೧||

ಯೋಗದಿಂದ ವಿಜ್ಞಾನವ ಗಳಿಸಿ ಜಗಕೆ ತಂದು ಬಿರ‍್ಯಾರ ಜನತೆಗೆ
ದಾರಿ ತೋರ‍್ಯಾರ
ಮಾನವನಲಿ ಅತಿಮಾನವತೆಯನಿಳಿಸಿ ಜಗಪಾವನಗೊಳಿಸ್ಯಾರ||೨|

ಸತ್ಯ-ಮಿಥ್ಯೆ ಹಳೆಭಾವನೆಯಳಿಸಿ ಸರ್ವಸತ್ಯವೆಂದಾರ ಸತ್ಯದ ಮೂಲ ತಿಳಿಸ್ಯಾರ
ಸರ್ವಯೋಗ ಸಮನ್ವಯಗೊಳಿಸಿ ಪೂರ್ಣಯೋಗವೆಂದು ಸಾರಿದರು||೩||

**||ಇಳುವು||**

ಬಂಗಾಲದಲ್ಲಿ ಭಗವಾನರು ಹುಟ್ಟಿ ಬಂದರೊ |
ಕಂಗಾಲ ಭಾರತದ ಸ್ಥಿತಿಯ ನೋಡಿ ನೊಂದರೊ |
ಆಂಗ್ಲರನು ಓಡಿಸಲು ಕಷ್ಟದಲ್ಲಿ ಬೆಂದಾರೊ||೧||

ಪರಿವರ್ತನೆಗೊಳಿಸುತ ನವಮನ್ವಂತರವೆಂದಾರೊ ಚಿರಕಾಲ ಸ್ಥಿರ
ಶಾಂತಿಯ ಪಡೆಯಲು ಶ್ರಮಿಸ್ಯಾರೊ |
ಈಗವರ ಜನ್ಮಶತಾಬ್ದಿಯ ಆಚರಿಸುವರೊ||೨||

ರಜತೋತ್ಸವ ಭಾರತಮಾತೆಗೆ ನಮಿಸಿದರು ಶಿರಬಾಗಿ ವಾಲಿ ಶರಣರು
||೩ನೆಯ ಚೌಕ||

*ರಚನೆ:* ಶರಣಪ್ಪವಾಲಿ
*ಕೃತಿ:* ಶರಣಸ್ಮೃತಿ

## ೧೭. ಭಾರತೀಯರ ಕೀರ್ತಿಪತಾಕೆ

ಭಾರತಿಯರ ಕೀರ್ತಿ | ಬಹುಕಾಲ ಬೆಳಗುತ ಬಂದೈತಿ ||ಪ||

ವಿಂಧ್ಯ ಹಿಮಾಚಲ ನೆಲಸಿದ ದೇಶ | ಗಂಗಾ ಸಿಂಧು ಸಂಚಲಿಸಿದ ದೇಶ
ಸುತ್ತು ಸಾಗರಾ ಮುತ್ತಿಡುತಿರುವವು ಧಾನ್ಯ ಖನಿಜ ಶ್ರೀಗಂಧದ ಕೋಶ||೧||
ಭಾರತೀಯರ ಕೀರ್ತಿ.........

ರಾಮಕೃಷ್ಣ ಆ ಬುದ್ಧರ ಬೀಡು | ಬಸವ ಮಧ್ವ ಚೈತನ್ಯರನಾಡು
ಗಾಂಧಿ ತಿಲಕ ಆ ಬೋಸರ ನೋಡು | ಘೋಷ ರಮಣ ಮಹರ್ಷಿಯರ ಬೀಡು||೨||
ಭಾರತೀಯರ ಕೀರ್ತಿ..........

ಪಾರತಂತ್ರ್ಯನೊಗ ಕಳಚಿದ ಮೋಡಿ | ಸರ್ವಧರ್ಮ ಸಮರಸತೆಯ ನಾಡಿ |
ಪೂರ್ಣಯೋಗ ದಿವ್ಯ ಜನ್ಮಕೆ ಜೋಡಿ | ಪರಜನ ಅಚ್ಚರಿ ಪಡೆವರು ನೋಡಿ||೩||
ಭಾರತೀಯರ ಕೀರ್ತಿ.........

ಆಗಬೇಕು ನಾವು ಭಾರತೀಯರು | ಜಾತಿಪಂಥ ಕುಲ ಮೀರಿದ ಜನರು
ಆತ್ಮಯೋಗದಲ್ಲಿ ನೆಲೆ ನಿಂತವರು | ಅಗ್ನಿಲಿಂಗವನ್ನೆಬ್ಬಿಸಿದವರು||೪||
ಭಾರತೀಯರ ಕೀರ್ತಿ........

*ರಚನೆ:* ಶರಣಪ್ಪವಾಲಿ
*ಕೃತಿ:* ಶರಣಸ್ಮೃತಿ

## ೧೮. ವಯಸ್ಕರ ಶಿಕ್ಷಣ

ಸಾಲಿಕಲಿ ನಿತ್ಯ ಸಾಲಿಕಲಿ ಮತ್ತ
ಸಾಲಿಕಲಿ ಚಿತ್ತಗೊಟ್ಟಿ ಕಲಿ

ಸಾಲಿಕಲಿ ಮಿತ್ರ ಸಾಲಿಕಲಿ ಖಾತ್ರಿ
ಸಾಲಿಕಲಿ ರಾತ್ರಿ ಸಾಲಿ ಕಲಿ || ಪಲ್ಲ ||

ಮಳ್ಳತನಕ ಹಗಲಗಳ್ಳರು ಸುಲಿಯತಾರ
ಒಳ್ಳೆ ಮನಸ್ಸಿನಿಂದ ಸಾಲಿಕಲಿ
ಡೊಳ್ಳಹೊಟ್ಟಿ ಪಳ್ಳಗಚ್ಚಿ ಜನರ ಕಾಟ
ತಳ್ಳಲಿಕ್ಕೆ ಮದಲ ಸಾಲಿಕಲಿ ||
ಗ್ಯಾಸ ಹಚ್ಚಿವಳೆ ತ್ರಾಸ ತಗೊಂಡ ಮೇಲೆ
ಬೇಸ್ಯಾಗಿ ಕೂತಕೊಂಡ ಖಾಸಕಲಿ
ಹಾಸಿಕೊಂಡ ಚೀಲ ಪಾಟಿ ಪೇನಸೀಲ
ನೀಟಾಗಿ ಹಿಡದ ರ ಠ ಈ ಕ ಕಲಿ ||
ಕೋರ್ಟ ಕಚೇರಿಯೊಳಗ ಕುಟಿಲ ಜನರು
ನಿನ್ನ ಫಸಾಸದಂತೆ ಹಸನಾಗಿ ಕಲಿ
ಪೇಟೆಯೊಳಗಿನ ಥೇಟ ದಲಾಲರ ಆಟ
ನಡೆಯದಂತೆ ನೀಟ ಕಲಿ ||

**||ಚಾಲ||**

ಶಹರದೊಳಗ ಬೋರ್ಡ ಹಚ್ಚಿದರ ಓದಿ ವತ್ತರ
ಮಾಡಲಿಕ್ಕೆ ಕೆಲಸಾ ಸಾಲಿ ಕಲಿತರ ಆಗತದ ಪಾಸಾ ||
ಊರಿಗ್ಹೊರಟ ಲೈನ ಹಿಡಿದರ ಊರ ಎಷ್ಟು ದೂರ
ನೋಡಲಿಕ್ಕೆ ತುಸಾ ಓಟ ಮೈಲಿಗಲ್ಲಿನಕ್ಷರ ಖಾಸಾ ||

**||ಏರು||**

ಕಲಿತವಗ ಇಲ್ಲ ಘೋರ ಹೋಗತಾನ ಭರರರ
ಅರಿದಂವಗ ಹೈರಾಣ ಇಲ್ಲ ನೆಲಿ||೧||

ಮುದುಕರಾಗಿ ನಮಗ ಯದಕ ಬೇಕಂತ
ಹುದಿಗ್ಯಾಡ ಬೇಡ ಮದಲ ಓದ ಕಲಿ
ಬದುಕಿ ಬಾಳಂವಗ ಶರೀರ ಮುದಕ ಆದ್ರು
ಜ್ಞಾನ ಮುಪ್ಪ ಅಲ್ಲ ಹೆಚ್ಚಬೆಲಿ ||
ಗಾಂಧೀಜಿ ಸಾಯುವ ಮುಂದ ಕಲಿಯತಿದ್ರ
ಒಂದೊಂದು ಭಾಷೆಯ ಬರೆಯುತಲಿ
ಒಂದೇ ಒಂದ ಚಂದವಾದ ಕನ್ನಡ
ಕಲಿಯವಲ್ರಿ ನಿಮ್ಮದೆಂಥ ತಲಿ ||
ಗುಲಾಂಗಿರಿ ಹೋಗಿ ಫಲಾ ಇಲ್ಲ ನೋಡ
ಅರಿಯದವನು ಬೀಳತಾನ ಬಲಿ

ಕಲಿಯುಗದೊಳಗಿನ ಕಲೆಯ ತಿಳಿಯುದಕ
ಸರಳ ಮಾರ್ಗ ಓದುಬರ ಕಲಿ ||

**||ಚಾಲ||**

ಸಜ್ಜನರ ಕೂಡ ಸಹಕಾರ ದುರ್ಘಟ ದೂರ ಮಾಡಂವನೆ
ಧೀರಾ ಅವಗ ಒಲಿಯುವನು ದೇವರಾ ||
ಸದ್ಗುರುವಿನಲ್ಲಿಟ್ಟ ಭಕ್ತಿ ಪಡಿರಿ ನಿಜ ಮುಕ್ತಿ ಕಲಿತ
ಅಕ್ಷರಾ ಮುಂದ ಓದಿಕೊಳ್ಳಿರಿ ಮಂತರಾ ||

**||ಏರು||**

ಕಾಳಿದಾಸ ಕವಿಯಾದದ್ದ ಕೇಳಿಕೊಂಡ
ಹುಲಕುಂದ ಭೀಮ ಅಂದ ತೀವ್ರ ಕಲಿ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೯. ಪ್ರೌಢ ಶಿಕ್ಷಣ

ಸ್ವಚ್ಛ ಮಾತ ಒಂದ ಬಿಚ್ಚಿ ಹೇಳತೀನಿ
ಮುಚ್ಚಿ ಇಡುವದಿಲ್ಲ ಇನ್ನ ಮ್ಯಾಗ
ಎಚ್ಚರಿಲ್ಲದ ಕಣ್ಮುಚ್ಚಿ ಕೂತರ
ಹುಚ್ಚರಾಗತೀರಿ ಜಗದೊಳಗ ||ಪ||

ಖಾಲಿ ಕೂತಾಗ ಸಾಲಿ ಕಲಿಯಿರಿ
ಕೈ ಕಾಲ ಬಿದ್ದ ಹೇಳುವೆ ನಿಮಗ
ಕೂಲಿಕಾರ ರೈತರು ಎಲ್ಲಾರು
ಕಲಿಯ ಕಾಲ ಬಂದತಿ ಈಗ ||

ಬಯ್ಯತಾರ ಜನ ಬಟ್ಟ ಒತ್ತವರನ್ನ
ಮರ್ಯಾದಿಲ್ಲ ಸಂಸಾರದೊಳಗ
ಸಹಿ ಮಾಡಂದ್ರ ಅಸಯ್ಯ ಅಗತ
ಅಯ್ಯಯ್ಯೋ ಅಂತೀರಿ ಆವಾಗ ||

ಪತ್ರ ಬಂದರ ಮತ್ತೊಬ್ಬರ ಹತ್ತರ
ವತ್ತರ ಹೋಗುದು ನಿಮ್ಮ ಭೋಗ

ಉತ್ತರ ಬರಿಸಲಿಕ್ಕೆ ಮತ್ತು ಮಂದಿಯ
ಬೆನ್ಹತ್ತಿ ತಿರಗುವ ಪ್ರಸಂಗ

**||ಚಾಲ||**

ಕಲಿತವನೇ ಓದಾವ ಪುರಾಣಾ
ಎಲ್ಲ ದೇಶದಲ್ಲಿಯ ವರ್ತಮಾನಾ
ಅರಿದವನು ಹಾಕುವದು ಗೋಣಾ
ಬಲ್ಲವನಿಗೆ ಹೆಚ್ಚಿನ ಜ್ಞಾನಾ ||

**||ಏರು||**

ಗಚ್ಚಿನ ಗುಡಿಯೊಳು ಅಚ್ಯುತ ಇದ್ದಂತೆ
ಅಕ್ಷರ ಜ್ಞಾನ ಇದ್ದವಂಗ||೧||
ಕಂಣು ಇದ್ದು ನಾವು ಕುರುಡರಾಗಿವೆಂತ
ನೀವೆ ಅನ್ನತಿರಿ ಈ ಮಾತಾ
ಸಣ್ಣ ಮಕ್ಕಳನ್ನ ದನಾ ಕಾಯಕ ಹಚ್ಚಿ
ವಿನಾಕಾರಣ ಮಾಡತೀರ ಘಾತಾ ||

ಹೆಣ್ಣು ಮಕ್ಕಳಿಗೆ ಶಾಣೆತನ ಯಾಕ ಬೇಕ
ಅನ್ನುವವರು ತುಂಬ್ಯಾರ ಮಸ್ತಾ
ಮಣ್ಣಿನೊಳಗ ಮಾಣಿಕ ಹುಗಿದಂತೆ
ಕೋಣೆಯೊಳಗ ಇಡುವ ಬೇತಾ ||

ತನ್ನ ಮನಿ ಹಿರಿತನಾ ತಾನೆ ನಡಿಸುವಷ್ಟು
ಜ್ಞಾನ ಬಂದರಾಗುವದು ಒಳಿತಾ
ಅನ್ಯರು ಮಾಡುವಂಥ ಅನ್ಯಾಯ ತಿಳಿಯುದಕ
ಸಾಲಿಕಲಿಕರಾಗತದಿ ಸಿಸ್ತಾ ||

**||ಚಾಲ||**

ಖೊಟ್ಟ ಕಾಗದ ಪತ್ರ ಇದ್ದರಾ
ಸ್ವಚ್ಛ ಓದತೀರಿ ಕಲಿತವರಾ ||
ಅಷ್ಟೂರ ಸಾಲಿಕಲತರಾ
ನಿಚ್ಚಳಾತ ನಿಮ್ಮ ಸಂಸಾರಾ ||

**||ಏರು||**

ಅಚ್ಚ ಕನ್ನಡ ನಾಡ ಉಚ್ಛ ಸ್ಥಿತಿಗೆ ಒಯ್ದು
ಹೆಚ್ಚು ಕೀರ್ತಿ ಪಡಿಯಿರಿ ಬೇಗ||೧||

ನಿರಕ್ಷರರಿಗೆ ದೊರೆಯುದಿಲ್ಲ ಮಾನಾ
ಮರತ ಕೂಡ್ರದೆ ತಿಳಕೊಳ್ಳರಿ
ಪರ ರಾಷ್ಟ್ರದವರು ದಡ್ಡರಂತಾರ ನಿಮಗ
ಗುರ್ತಾ ಹಿಡಿದು ಸಾಲಿ ಕಲಕೊಳ್ಳಿರಿ ||

ಬರಿಲಿಕ್ಕೆ ಬಂದರ ಸರ್ವ ಅಧಿಕಾರ
ಇಲ್ಲದಿದ್ದರ ಇಲ್ಲಿ ನೋಡಿಕೊಳ್ಳಿರಿ
ಸರಕಾರ ಪರಿಪರಿ ಯೋಚನೆ ನಡಿಶಾರ
ರಾತ್ರಿ ಸಾಲಿಗೆ ಹೋಗಿ ಕಲಕೊಳ್ಳಿರಿ ||

ಅರಿದವರ ಹರಿಯದವರ ಗುರು ಹಿರಿಯರು
ಮರಿ ಮಕ್ಕಳೆಲ್ಲರು ಕೂಡಿಕೊಳ್ಳಿರಿ
ಶಾರೀರಿಕ ಶಿಕ್ಷಣ ಪ್ರೌಢ ಶಿಕ್ಷಣ
ವರ್ದಾ ಶಿಕ್ಷಣ ಪಡಕೊಳ್ಳಿರಿ ||

**||ಚಾಲ||**

ವಿದ್ಯೆಯಿಂದ ರಾಷ್ಟ್ರದುದ್ದಾರಾ
ಬುದ್ಧಿಯಿಂದ ರಾಜ್ಯಕಾರಭಾರ ||
ಶುದ್ಧ ಶ್ರದ್ಧೆಯಿಂದ ಸಂಸಾರ
ಇದ್ದವನೆ ಆಗತಾನ ಪಾರಾ ||

**||ಏರು||**

ಸಚ್ಚಿದಾನಂದ ಹುಲಕುಂದ ಭೀಮನ
ಇಚ್ಛಾ ಇದ್ದಂತೆ ಅಗಲಿ ಬೇಗ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೦. ಮೂಲ ಶಿಕ್ಷಣದ ಮಹತ್ವ

ಮಾನವಜೀವನದ ಮೂಲ ಶಿಕ್ಷಣದ
ಮಾತ ಹೇಳುವೆ ಈ ಸಭೆಯೊಳಗ

ಹೀನರಾಗಿ ನೀವು ಹಿಂದ ಉಳಿಯುವದಲ್ಲ
ದಿವಸ ಕಾಲಮಾನ ನಾಜುಕದೊಳಗ ||ಪಲ್ಲ||

ಕಲಿತಂವಗಮಾನಾ ಕಲಿದಂವಗೇನಾ
ಹಾನಿನೋಡ ಪ್ರಪಂಚದೊಳಗ
ಕೂಲಿ ಮಾಡಿ ಹೊಟ್ಟಿ ತುಂಬಿಕೊಂಡರೇನಾತ
ವಿದ್ಯಾ ಇರಬೇಕ ಬಾದ ಆಗದ್ಹಂಗ ||
ವಿದ್ಯಾ ಇದ್ದವರನ್ನ ಮುಂದಕ್ಕ ತರುತಾರ
ವಿದ್ಯಾ ಇಲ್ಲದಂವ ಕೇಳ್ರಿ ಹದ್ದಿನಂಗ
ಬಂದ ಎಡರು ತೊಡರ ಸರಿಸುದಕ್ಕ
ವಿದ್ಯಾ ಇರಬೇಕ ದರ ಒಬ್ಬಗ ||
ಮೂರ್ಖತನ ಮಾಡಿ ಹಿಂದ ಉಳದರ
ಪಶುಪಕ್ಷಿಯಂಗ ಇದ್ದ ಬಾಳ್ವೆ ಮಾಡಿದ್ಹಂಗ
ಅಕ್ಷರ ಜ್ಞಾನಾ ಪರಿಪೂರ್ಣ ಇದ್ದಂವಗ
ಕೀರ್ತಿಗೆ ಕಡಿಮಿಲ್ಲ ಜನದಾಗ ||

**||ಚಾಲ||**

ಅರಿತುಕೊಂಡು ಶಿಕ್ಷಣ ಪಡಿಬೇಕ
ಸರಳ ವ್ಯವಹಾರ ಸಂಸಾರ ಅನುಕೂಲಕ ||
ಅಜ್ಞಾನಿಗಳಿಗೆ ಎನ ದೊರಿಬೇಕ
ಸುಜ್ಞಾನಿಗಳಿಗೆ ಯಾವಾಗಲು ಸುಖ ||

**||ಏರು||**

ವಿನ್ಹಾ ಕಾರಣ ನೀವು ಹಾಳಾಗತೀರಿ
ತಿಳಿದ ನೋಡರಿದನ ಮನದಾಗ||೧||

ಮಹಾತ್ಮಾ ಗಾಂಧೀಜಿ ಮುದಕ ಆದ್ರಸುದ್ಧಾ
ಕರಿತಿದ್ರ ಒಂದೊಂದು ಭಾಷೆಯನು
ಸಹಾನುಭೂತಿಯಿಂದ ಜ್ಞಾನಜ್ಯೋತಿ ಬೆಳಗುತ
ಕಣ್ಮರೆಯಾಗಿ ಕಂಡ್ರ ಮುಕ್ತಿ ಮಾರ್ಗವನು ||

ಪ್ರಧಾನ ಮಂತ್ರಿವರ್ಯರಾದ ಇಂದಿರಾ ಗಾಂಧಿಯವರು
ಹ್ಯಂಗನಡಿಸ್ಯಾರ ಹಿಂದುಸ್ತಾನವನು
ಸಂದೇಹವಿಲ್ಲದೆ ಪರರಾಷ್ಟ್ರದೊಳು ಹೋಗಿ
ಬಿಢೆಯಿಲ್ಲದೆ ಮಾಡತಾರ ಚರ್ಚೆಯನು ||

ಇಂದಿನ ಭಾಗ್ಯಾ ಕಂಡವರ ಸೌಭಾಗ್ಯ
ಮಾಹಿತಿ ಮಾಡಿಕೊಳ್ಳಿರಿ ಇದನು
ಕುಂದು ಕೊರತೆಗಾಗಿ ವೇಳ್ಯೆಗಳಿಯದೆ
ಕಲಿಯಬೇಕ ಪ್ರೌಢ ಶಾಲೆಯನು ||

**||ಚಾಲ||**

ವಿದ್ಯಾದಿಂದ ಸರ್ವ ಸಂಪತ್ತಾ
ಆದಿ ಬುನಾದಿ ಕಾಲದ ಮಾತಾ ||
ಹುಲಕುಂದ ಕಂದ ಭೀಮನ ಕವಿತಾ
ಹಾಲು ಸಕ್ರಿ ಕಾಸಿ ಕುಡದಂತಾ ||

**||ಏರು||**

ಮಾನ್ಯವಂತ ಜನಸೇವಕನಾಗಿ
ತಿಳದಷ್ಟ ಹೇಳಿದ ಜನದಾಗ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೨೧. ಸಹಕಾರ

ಮಹತ್ವದ ಮಾತಿನ ಮಹಿಮೆ ಹೇಳುವೆವು
ಮಾಹಿತಿ ಮಾಡಿಕೊಳ್ರಿ ಎಲ್ಲ ಜನರಾ
ಸಹಕಾರ ಅಂದರೇನ ಸಹಜ ತಿಳಿಕೊಂಡರ ಸರಳ
ಸಾಗುವದು ಸಂಸಾರಾ || ಪಲ್ಲ ||

ಮಿತವ್ಯಯ ಸ್ವಾರ್ಥತ್ಯಾಗ ಸಮಾಜ ಸೇವೆ
ಸ್ವಾವಲಂಬನ ಇದರ ಆಧಾರಾ
ಜಾತ್ಯಾತೀತ ಪ್ರತಿಯೊಬ್ಬರ ಕಲ್ಯಾಣಕ್ಕಾಗಿ
ಶ್ರಮವಹಿಸುವ ಸಾಧನ ಶಿಖರಾ ||

ಆತ್ಮವಿಶ್ವಾಸ ಆತ್ಮಾರ್ಪಣೆ ಸಮಗ್ರತೆ
ಪ್ರಾಮಾಣಿಕತನವೆ ಅದರ ತಾಯ್ ಬೇರಾ
ಉತ್ತಮ ಬೇಸಾಯ ಉತ್ತಮ ವ್ಯವಹಾರ
ಉತ್ತಮ ಜೀವನ ಕಲಿಸುದು ಪೂರಾ ||
ಆರ್ಥಿಕ ಸಾಮಾಜಿಕ ನೈತಿಕ ವಿಷಯದಲ್ಲಿ
ಪ್ರೀತಿ ಗಳಿಸಿಕೊಳ್ಳುವ ಶಿಬಿರಾ

ಸಾತ್ವಿಕತನ ಸತ್ಯತೆಯಿಂದ ಸಾಗಿದರ ಕೀರ್ತಿಗೆ
ಬರುವದು ಊರಿಗೆ ಊರಾ ||

**||ಚಾಲ||**

ಪ್ರತಿ ನಿಮಿಷಕ್ಕೆ ಬೇಕ ಸಹಕಾರಾ |
ಅತಿ ಮಹತ್ವದ ಮಾತ ಖರೋಖರಾ ||
ಬಾಯಿ ಕೈಯಿಗಿ ಬೇಕ ಸಹಕಾರಾ |
ಕೈ  ಮೈಗೆ ಇರುವುದು ಸಹಕಾರಾ ||
ಒಂದಕೊಂದ ಸಂಬಂಧ ತಪ್ಪಿದರಾ |
ಮುಂದ ಬಂದ ಶರೀರದ ವ್ಯಾಪಾರಾ ||

**||ಏರು||**

ಬಹಳ ವಿಚಾರ ಮಾಡಿ ಸಹನ ಶೀಲತೆಯಿಂದ |
ಸಹವಾಸ ಮಾಡಿದರಿಲ್ಲ ಘೋರಾ ||೧||
ಒಳ್ಳೆ ಜನರನ ಒಂದ ಗೂಡಿಸುವದು |
ಬಂದು ಪ್ರೇಮದ ಸಹಕಾರಾ ||
ಕಳ್ಳ ಸುಳ್ಳತನ ತಳ್ಳಿ ಹಾಕುವದು |
ಹಳ್ಳಿಯೊಳಗಿನ ಸಹಕಾರ ||
ನಿರುದ್ಯೋಗಿಗಳಿಗೆ ಉದ್ಯೋಗ ಹಚ್ಚುವ |
ಪ್ರಯತ್ನ ಮಾಡುದು ಸಹಕಾರಾ ||
ಭಾರಿ ಬಡ್ಡಿಯಿಂದ ನರಳುವ ಜನರಿಗೆ |
ದಾರಿ ತೋರಿಸುವದು ಸಹಕಾರಾ ||
ಎಲ್ಲ ಉದ್ದಿಮಿ ವ್ಯಾಪಾರ ಉದ್ಯೋಗಗಳಿಗೆ |
ಉತ್ತೇಜನ ಕೊಡುವದು ಸಹಕಾರಾ ||
ಬಲ್ಲಿದ ಒಕ್ಕಲಿಗರಿಗೆ ಬೆಲ್ಲದ್ಹೇರಿನಂತೆ |
ಸಂಘರೂಪದ ಸಹಕಾರ ||

**||ಚಾಲ||**

ಬಗಿ ಬಗಿಯ ಸಂಘ ಉದಯಾಗಿ |
ಪ್ರಗತಿಯಾಗ ಬೇಕ ನಿಜವಾಗಿ ||
ಅಗಣಿತ ಐಶ್ವರ್ಯ ಜನತಿಗಿ |
ಉಗಮಾಗಲಿದರ ನೆರಳಿಗೆ ||
ಸುಗಮಾಗಿ ಪ್ರಪಂಚವು ಸಾಗಿ |
ಜಗದೊಳಗ ತತ್ವಕೆ ಜಯವಾಗಿ ||

**||ಏರು||**

ಬಹು ಮುಖವಾಗಿ ಕಾರ್ಯ ಸಾಗಲೆಂದು |
ಹುಲಕುಂದ ಭೀಮನ ಕವಿಸಾರಾ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೨೨. ಸಹಕಾರಿ ತತ್ವದ ಉದ್ದೇಶಗಳು

ಪರಸ್ಪರ ಸಹಕಾರ ತತ್ವದ ಉದ್ದೇಶಗಳು ಇರುವವು ಹತ್ತು
ಸರಿಯಾಗಿ ತಿಳಕೊಂಡವರಿಗೆ ಗೊತ್ತು
ಅರಿದವರು ಅರಿತು ಕೊಳ್ಳಿರೀ ಹೊತ್ತು
ಬರೋಬರಿ ಗುರಿ ಹಿಡಿದ ಸಾಗಿದರ ಸರ್ವರಿಗಾಗುದು ಸವಲತ್ತು ||

ಜನರಿಗೆ ಹಣದ ಉಳಿತಾಯ ಮಾಡುವಂತ ಉತ್ತೇಜನ
ಕೊಡುವದು ಸಿಸ್ತು
ಅನ್ಯಾಯದ ಬಡ್ಡಿ ಬಿಡಿಸುವ ಬೇತು
ಪೂರ್ಣ ಹಳೇ ಸಾಲ ಹಾಕುದು ಕಿತ್ತು
ಮುನ್ನ ಯೋಗ್ಯ ಬಡ್ಡೀಯ ಕರಾರಿನಿಂದ ಸಾಲಕೊಟ್ಟ
ಬೆಳೆಸುದು ಪತ್ತು ||

ಮೆಂಬರರಲ್ಲಿ ಒಬ್ಬರೊಬ್ಬರ ಪರಿಚಯ ತುಂಬಾ
ಇದ್ದರಾಗುದು ಒಳಿತು
ಸಂಭಾವಿತರಿಗೆ ಬಹು ಕಿಮ್ಮತ್ತು
ನಂಬಿಗಸ್ತರಿಂದ ಮುಂದರದೀತು
ಡಾಂಭಿಕತನದ ಕೆಟ್ಟ ಗುಣದವರನ್ನ ಬಿಟ್ಟ ಬಿಡಬೇಕೆನ್ನುವ ಶರ್ತು ||

ಹೊರಗಿಂದ ಅಥವಾ ಠೇವುದಾರರಿಂದ ಸಂಘ ಸಾಲ ತಂದದ್ದು ಮಾತು
ಸರ್ವ ಮೆಂಬರರಿಗೆ ಇರಬೇಕ ಗೊತ್ತು
ಪೂರ ತಮ್ಮ ಜವಾಬದಾರಿಯ ಹೊತ್ತು
ಯಾರಲ್ಲಿ ಮುದ್ದತ ಮೀರಿ ಬಾಕಿ ಉಳಿಯದಂತೆ
ಮಾಡಬೇಕ ಬಂದು ಬಸ್ತು ||

**||ಚಾಲ||**

ಭಾಂಡವಲ ಕೂಡಿಸಿ ಇಟ್ಟಾ |
ಮೇಂಬರರಿಗೆ ಸಾಲವು ಕೊಟ್ಟಾ ||

ಹಸನಾಗಿ ಲೆಕ್ಕ ಪತ್ರಿಟ್ಟಾ |
ವಸೂಲಿ ಮಾಡುವದು ಸಗಟಾ ||

ಇವನ್ನೆಲ್ಲ ತಿಳಕೊಳ್ಳುವ ಗುಟ್ಟಾ |
ವ್ಯವಸ್ಥಾಪಕ ಕಮೀಟಿ ಶ್ರೇಷ್ಠಾ ||

||ಏರು||

ತಾರೀಖವಾರ ಸರಳ ವಸುಲಾಗಿ ಜಮಾ ಮಾಡಿದರ
ಮುಗದೋಯ್ತು
ಪೂರ ಸುಳ್ಳ ಜಮಾ ಖರ್ಚು ಮಾಡಬಾರದಂತು
ಆರನೆ ಕಲಮದೊಳಗ ಹೀಗ ಸಾರೀತು
ಬರೋಬರಿ ಸರಿಯಾಗಿ ನಡದರ ಸರ್ವರಿಗಾಗುದು ಸವಲತ್ತು||೧||

ಪ್ರತಿ ವರುಷ ಒಂದು ವ್ಯವಸ್ಥಾಪಕ ಕಮೀಟಿಯನ್ನು
ನೇಮಿಸುವುದು
ವಾರ್ಷಿಕ ಅಥಾವೆ ಚರ್ಚೆಗಿಡವುವದು
ಮತ್ತು ಸೆಕ್ರೆಟರಿಯನ್ನು ಆರಿಸುವದು
ಅತೀ ಬಯಲಿಗೆ ಬಂದ ತಪ್ಪುಗಳ ಬಗ್ಗೆ
ನಿರ್ಣಯ ಮಾಡುವದು ||

ಸಂಘದ ಎಲ್ಲ ಲಾಭಗಳನ್ನು ರಿಝರ್ವ
ಫಂಡಿಗೊಯ್ಯ ತಕ್ಕದ್ದು
ಸಂಘದ ಪತ್ತು ಸುಧಾರಿಸುವದು
ಹೀಗ ಮೆಂಬರ ಜವಾಬದಾರಿ ಪಾಲಿಸುವದು
ಸಂಘಟನೆಯಿಂದ ಸಂಯುಕ್ತವಾಗಿ ಸರ್ವ
ಆಸ್ತಿ ಕಾಪಾಡುವದು ||

ಸದಸ್ಯರಿಂದ ಮತ್ತು ಅನ್ಯರ ಕಡೆಯಿಂದ
ಬಂಡವಲನ್ನು ಕೂಡಿಸುವದು
ಮಧ್ಯವರ್ತಿ ಬ್ಯಾಂಕಿನಲ್ಲಿ ಕೇಳುವುದು
ಅದು ಠೇವಿನ ರೂಪದಿಂದ ತರವುವದು
ಸೆಂಟ್ರಲ್ ಬ್ಯಾಂಕಿನ ಆಡಳತೆಯು
ಭಾಗಿದಾರರ ಕೈಯಲ್ಲಿರುವುವದು ||

ಅದರಲ್ಲಿ  ಸಂಘವು ಸೇರಕೊಂಡದರಾಡಳತೆ ಹಕ್ಕ ಬರವುವದು
ಇದನ್ನೆಲ್ಲಾ ಮೆಂಬರರು ನೆನಪಿಸುವುವದು
ಸದಾಕಾಲ ಲಕ್ಷಗೊಟ್ಟ ನಡೆಯುವದು

ಮೊದಲೇ ಹೇಳುವೆವು ಸಹಕಾರಕಿಂತ
ನಿಮ್ಮ ಹೊಣೆಗಾರಿಕೆ ಹೆಚ್ಚಿನದು ||

**||ಚಾಲ||**

ಸಾಲ ಒಯ್ಯುವವರು ನೆನಪಿಡಿರಿ
ಮೂಲ ಮಾತ ಮರಿಯ ಬೇಡಿರಿ ||
ಏತಕಾಗಿ ಸಾಲ ಒಯ್ಯುವಿರಿ
ಅದೇ ಕೆಲಸಕ್ಕದನ ಬಳಿಸಿರಿ ||
ಚಾಲ್ತಿ ಶೇತ್ಕಿ ಖರ್ಚಿಗೆ ಸಾಲ ತಗಿರಿ
ಸಾಲ ಮುದ್ದತ ಒಂದು ವರುಷರಿ ||

**||ಚಾಲ||**

ದನಗಳ ಕೊಳ್ಳಲಿಕ್ಕೆ ಮನೀ ಖರ್ಚಿಗೆ ಸಾಲ ತಂದ್ರ
ಮೂರು ವರ್ಷ ಮುದ್ದತು
ಹಳೇ ಸಾಲ ತೀರಿಸುದಕ ಐದು ವರುಷಂತು
ಹುಲಕುಂದ ಭೀಮಕವಿ ಹೇಳಿದ ನಿಂತು
ಬರೋಬರಿ ಸರಿಯಾಗಿ ನಡದರೆ ಸರ್ವರಿಗಾಗುದು ಸವಲತ್ತು||೧||

*ರಚನೆ :* ಹುಲಕುಂದ ಭೀಮಕವಿ
*ಕೃತಿ :* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೩. ರೈತ ಮತ್ತು ಸಹಕಾರಿ ಚಳವಳಿ

ರೈತರ ಹಿಂದಿನ ಇತಿಹಾಸ ನೋಡಿದರ ಪ್ರತಿಯೊಬ್ಬರಿಗೆ ಎಲ್ಲ ತಿಳದೀತ
ಸ್ವತ ಶಿಕ್ಷಣ ಇಲ್ಲದಕ ಹಿಂಗಾತ
ಅತಿ ಅಜ್ಞಾನ ತನದಿಂದ ಹಾಳಾತ
ಸತತ ಅಡಚಣಿ ಮಿತಿ ಮೀರಿದ ದೇಣಿ ಅತಿ ಬಡ್ಡಿಯನು ಕೊಡವುತ
ಸೋತ ಮತಿ ಹೀನನಾಗಿ ತಿರಗುದು ವ್ಯರ್ಥ ||ಪಲ್ಲ||

ಪುಷ್ಕಳ ಸಾರೆ ದುಷ್ಕಾಳ ಬಿದ್ದ ತುಸು ಕಾಳ ಇರುದಿಲ್ಲ ತಿನ್ನುದಕ
ನಿಸರ್ಗದ ಹೊಡತಕ್ಕ ಸಿಕ್ಕ ಸಿಕ್ಕ
ನಿಸ್ಕಾಳಜಿ ಉದ್ಯೋಗ ಮಾಡುದಕ
ಆಸರ ತಪ್ಪಿ ಫಾಸಿಯಾದಾಗ ಚಿಂತಿ ಬಂತ ಸರಕಾರಕ್ಕ
ಹೊಸ ಯೋಜನೆ ತಗದಾರ ಕಾಲ ಕಾಲಕ್ಕೆ ||

ಹಣದ ಸಹಾಯ ಋಣ ವಿಮೋಚನ ಬಿಲ್ಲ ಟೆನೆನ್ಸಿ
ಕಾಯ್ದೆ ತಗದಾರ ಖಡಕ
ಕ್ಷಣ ಕ್ಷಣಕ ಒಕ್ಕಲಿಗರ ರಕ್ಷಣಕ
ಜಾಣತನದ ಉಪಾಯಗಳು ಅನೇಕ
ಏನ ಮಾಡಿದರೇನು ಋಣಭಾರದ ಮುಂದ ಹಾನಿ
ಆದವು ಕಡಿ ಆ ಕರಕ
ಜ್ಞಾನವಂತರು ಕೂಡಿ ಹಾಕ್ಯಾರ ತೂಕ ||

ಪರದೇಶದೊಳಗ ಸಹಕಾರಿ ಚಳವಳಿ ಜೋರ ನಡದಿತ್ತ ಆ ವ್ಯಾಳೇಕ
ಜರ್ಮನಿ ಆಯರ್ಲಂಡ ಇಟ್ಲಿ ಡೆನ್ಮಾರ್ಕ
ಯುರೋಪ ಖಂಡದೊಳಗ ರೈಫೇಷಿಯನ್ರು ಪ್ರಚಾರಕ
ಭಾರತ ದೇಶಕ ಲಾರ್ಡ ಕರ್ಝುನ್ನರವರ ಪ್ರಯತ್ನ
ಹತ್ತೊಂಬತ್ತನೂರಾ ನಾಲ್ಕಕ
ಪೂರ ಕಾಯ್ದೆ ಫಾಸ ಆದೀತ ಚೊಕ್ಕ ||

**||ಚಾಲ||**

ರೈತನ ಆರ್ಥಿಕ ಉನ್ನತಿಯಾಗಲೆಂತಾ
ನೈತಿಕ ಮಟ್ಟ ಸುಧಾರಿಸುವ ಬೇತಾ ||
ಕಳ ಕಳಿಯ ಗೆಳೆತನ ಬೆಳೆಯಲೆಂತಾ
ಚಳವಳಿಯ ಧೇಯ ಸಿದ್ಧಾಂತಾ

**||ಏರು||**

ತತ್ವ ಪ್ರತಿ ವರುಷ ಉತ್ತಮ ಪ್ರಗತಿಯಾಗಿ
ವರುಷ ತುಂಬಿದವಿಲ್ಲಿಗೆ ಐವತ್ತ
ಸಿಸ್ತ ಸುವರ್ಣ ಮಹೋತ್ಸವ ನಡದೀತ
ಸತ್ಸಂಗದ ಜನರಿಂದ ಸತ್ಫಲವಾಯ್ತು
ಸತತ ಅಡಚಣಿ ಮಿತಿ ಮೀರಿದ ದೇಣಿ ಅತೀ ಬಡ್ಡಿಯನು ಕೊಡವೂತ
ಸೋತ ಮತಿಹೀನನಾಗಿ ತಿರುಗುದು ವ್ಯರ್ಥ||೧||

ಪರರಾಷ್ಟ್ರದಲ್ಲಿ ಸಹಕಾರ ಚಳವಳಿ ಜನರಲ್ಲಿಯೇ ಹುಟ್ಟಿ ಬೆಳೆಯುದ
ಸರಕಾರದಿಂದ ಮನ್ನಣೆ ಹೊಂದುವದು
ಸಂರಕ್ಷಣೆಯನ್ನು ಪಡೆಯುವದು
ಭರತ ಖಂಡದಲ್ಲಿ ವಿಪರೀತ ಸಂಗತಿ ಸರಕಾರದವರೇ ಸುರು ಮಾಡುದ |
ಸರಿಯಾಗಿ ನಡಸಿಕೊಂಡ ಹೋಗುವದ ||

ಕಲಿತ ಜನರು ಒಳೆ ಚಳವಳಿ ಮಾಡಿದಲ್ಲೆ
ಬೆಳೆದವು ಈಗ ನಾನಾತರ ಸಂಘ
ಹಾಲು ಹೈನ ಸಂಘ ಗೊಬ್ಬರ ಸಂಘ
ಕೂಲಿಕಾರ ನೇಕಾರ ಬೇಸಾಯದ ಸಂಘ
ತಾಲೂಕ ಡೆವ್ಹಲ್‌ಪಮೆಂಟ ಅಸೋಸಿಯನ್ನಗಳು
ಶೇತ್ಕಿ ಸಂಘ ಗ್ರಾಮೋದ್ಯೋಗ ಸಂಘ
ಸೇಲ ಸೊಸಾಯಿಟಿ ಅಂದರ ಮಾಲು ಮಾರುವ ಸಂಘ ||

ಹೇಳಿಕೊಂತ ಹೋದರ ಬಹಳ ಅದಾವ ಖರೆ
ವೇಳೆಗಳೆಯುದಲ್ಲರಿ ಹಿಂಗ
ತಾಳಿ ಬಾಳ ಬೇಕ ಎಲ್ಲಾ ಸಂಘ
ಕಾಳಜಿ ಇರಬೇಕ ಅದರಲ್ಲಿ ದುಡಿಯಂವಗ
ಉಳಿದವರೆಲ್ಲಾ ಅಳಲಿ ಭಕ್ತಿ ಅಂತ ಚಳವಳಿಯಲಿ ವಹಿಸಲಿ ಭಾಗ
ಕಳಿಗುಂದದೆ ಬೆಳೆಯುವದು ಇಳೆಯೊಳಗೆ ||

**||ಚಾಲ||**

ಆರ್ಥಿಕ ಶೈಕ್ಷಣಿಕ ಲಾಭವ ಪಡಿಯಿರಿ
ನೈತಿಕ ರಾಜಕೀಯ ಉನ್ನತಿ ಹೊಂದಿರಿ ||
ಉತ್ಸಾಹ ದಿಟ್ಟತನ ಹಿಡಿಯಿರಿ
ಮಿತವ್ಯಯದಿಂದ ನೀವು ನಡಿರಿ

**||ಏರು||**

ಮಾತಾ ಪಿತ್ರರಂತೆ ಆತುಕೊಂಡಿದ್ದರ ಮಾನವ
ಪ್ರಾಣಿಗೆ ಆಗುದು ಹಿತ
ಪ್ರೀತಿಗಳಿಸಿ ಕೊಳ್ಳುವವನ ಬುದ್ಧಿವಂತ
ನಾಥ ಹುಲಕುಂದ ಭೀಮ ಹೇಳಿದ ಕವಿತ
ಸತತ ಅಡಚಣಿ ಮಿತಿ ಮೀರಿದ ದೇಣಿ
ಅತೀ ಬಡ್ಡಿಯನು ಕೊಡವೂತ
ಸೋತ ಮತಿಹೀನನಾಗಿ ತಿರಗುದು ವ್ಯರ್ಥ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

# ೨೪. ಒಕ್ಕಲಿಗ – ೧

(ಧಾಟಿ – ಮೈಸೂರ ಲಾವಣಿಯಂತೆ)
ಭೂಮಿಯ ಕೆಲಸನೇಮದಿ ಮಾಡುವ
ರಾಮನಂಥ ನನ್ನ ಒಕ್ಕಲಿಗಾ
ಧರ್ಮನಂಗದಯಾ ಗುಣದ ಒಕ್ಕಲಿಗಾ
ಭೀಮನಂಥ ಸಾಮರ್ಥದಂವ ಒಕ್ಕಲಿಗಾ ||

ಕರ್ಮಯೋಗಿ ನಿನ್ನ ವರ್ಣಿಸಲಾರೆನು
ಸರಿಯಾಗಿ ಕಾಪಾಡೋ ಒಕ್ಕಲಿಗಾ||೧||

ಕೋಟಿ ಉದ್ಯೋಗದೊಳೆ ಮೇಟಿ ಉದ್ಯೋಗಮೇಲ
ರಾಷ್ಟ್ರ ರಾಷ್ಟ್ರಕ್ಕೆಲ್ಲಾ ಒಕ್ಕಲಿಗಾ
ರಾಟೆ ಮೂಲಾಧಾರವೆಂದ ಒಕ್ಕಲಿಗಾ ||
ಶ್ರೇಷ್ಠ ಪದವಿಯ ಪಡೆದಂವ ಒಕ್ಕಲಿಗಾ ||
ಧಿಟ್ಟ ಶ್ರೀಮಂತಾ ಬಡವ ಕೂಲಿಕಾರ
ಹೊಟ್ಟೆಗೆ ಕೊಟ್ರಾಂವ ಒಕ್ಕಲಿಗಾ||೨||

ಎತ್ತಿನ ಕೂಡ ತೊತ್ತಾಗಿ ದುಡಿಯುತ
ನಿತ್ಯ ಹೊಲದೋಳು ಒಕ್ಕಲಿಗಾ
ಬಿತ್ತಲಿಕ್ಕೆ ಭೂಮಿಹದಮಾಡು ಒಕ್ಕಲಿಗಾ
ವ್ಯರ್ಥ ಹೊತ್ತ ಗಳಿಯದಂವ ಒಕ್ಕಲಿಗಾ
ಆತ್ಮರಾಮನ ಸ್ಮರಿಸಂದ ಸೃಷ್ಟಿ ಕರ್ತನು ಒಕ್ಕಲಿಗಾ||೩||

ಮೇಘ ರಾಜಗಾಗಿ ಹಗಲಿ ರಾತ್ರಿಯೋಳು
ನಿದ್ರಿ ಮಾಡದಂವ ಒಕ್ಕಲಿಗಾ
ಜಗದೊಳಗಯೋಗ ಸಿದ್ಧಿ ಒಕ್ಕಲಿಗಾ
ಯುಗ ಯುಗಾಂತರದ ನಮ್ಮ ಒಕ್ಕಲಿಗಾ
ಆಗ ಈಗಲ್ಲ ಸೃಷ್ಟಿ ಹುಟ್ಟಿದಾಗ ಬಂದವನು ಒಕ್ಕಲಿಗಾ||೪||

ತಿನ್ನುವ ಹಂಣ ಧನ ಧಾನ್ಯಗಳನು
ಪೂರ್ಣ ಒದಗಿಸುವ ಒಕ್ಕಲಿಗಾ
ದನಕರುಗಳ ಜೋಕೆ ಮಾಡು ಒಕ್ಕಲಿಗಾ
ತನುಮನಗಳನ ಅರ್ಪಿಸಾಂವ ಒಕ್ಕಲಿಗಾ ||
ಹೈನ ತನಗಲ್ಲದೆ ಅನ್ಯರಿಗೂ ಸಹಿತ
ಉಣಿಸಾಂವ ದೀನ ದಯಾ ಒಕ್ಕಲಿಗಾ||೫||

ಸರ್ವರ ಸಲುವಾಗಿ ಅರವಿ ಆಂಚಡಿಗಾಗಿ
ಹತ್ತಿ ಬಿತ್ತಿ ಬೆಳೆಯಾವ ಒಕ್ಕಲಿಗಾ
ಸಿರಿವಂತರನ್ನು ಮಾಡಂವಾ ಒಕ್ಕಲಿಗಾ
ಭಾರಿ ಗುಣದಲ್ಲಿ ಧೀರ ಒಕ್ಕಲಿಗಾ ||
ತರ ತರ ಐಶ್ವರ್ಯದಿಂದ ಮೆರೆಲಿಕ್ಕೆ ಹಚ್ಚಿದ
ಗ್ರಾಮದ ಒಡೆಯಾ ಒಕ್ಕಲಿಗಾ||೬||

ನಿನ್ನ ಉಪಕಾರದಿಂದ ಧನ್ಯರಾಗುವೆವು
ಮುನ್ನ ಮರಿಯಲಾರೆ ಒಕ್ಕಲಿಗಾ
ದಾನಧರ್ಮ ಮಾಡುವಂಥ ಒಕ್ಕಲಿಗಾ
ತನು ಆನಂದಗೊಳಿಸುವ ಒಕ್ಕಲಿಗಾ ||

ಕ್ಷೋಣಿಯೋಳು ಹುಲಕುಂದ ಭೀಮಕವಿ
ಪದಮಾಡಿ ಹೇಳಿದ ಒಕ್ಕಲಿಗಾ

*ರಚನೆ:* ಹುಲಕುಂದ ಭೀಮಕವಿ
*ಕೃತಿ :* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೫. ಒಕ್ಕಲಿಗ – ೧

ಸಣ್ಣವನಲ್ಲ ನೀ ಪುಣ್ಯವಂತನು
ಕಣ್ಣತೆರೆದು ನೋಡ ಒಕ್ಕಲಿಗಾ
ಮಣ್ಣಿನ ಸೇವಕ ಬಣ್ಣಿಸಲಾರೆನು
ಚೆನ್ನಾಗಿ ಕಾಪಾಡು ಒಕ್ಕಲಿಗಾ || ಪಲ್ಲ ||

ಹಣ್ಣುಹಂಪಲಾ ಧಾನ್ಯದವಸಗಳು
ನಿನ್ನಿಂದ ಜಗಕೆಲ್ಲಾ ಒಕ್ಕಲಿಗಾ
ಹುಣ್ಣಿವಿ ಅಮವಾಸಿ ಸಣ್ಣ ದೊಡ್ಡ ಕಾರ್ಯಗಳಿಗೆ
ಅನ್ನದಾತ ನೀನೆ ಒಕ್ಕಲಿಗಾ
ಎಣ್ಣೆ ಹೋಳಿಗಿ ದೊಣ್ಣೆ ದೊಣ್ಣೆ ತುಪ್ಪ
ಉಣ್ಣುದು ನಿನ್ನಿಂದ ಒಕ್ಕಲಿಗಾ
ಸಣ್ಣನ್ನ ಶಾಂವಿಗಿ ಚಿನ್ನಿ ಸಕ್ಕರಿ
ಗಿಣ್ಣದೂಟ ಕೊಡುವ ಒಕ್ಕಲಿಗಾ
ಸಣ್ಣಕ್ಕಿ ಸವಿ ಅನ್ನ ಬೆಣ್ಣೆಕೆನಿಮಸರ
ತಿನ್ನುವುದು ದಯ ನಿಂದು ಒಕ್ಕಲಿಗಾ
ತಣ್ಣನ್ನ ಮಜ್ಜಿಗಿ ನುಣ್ಣಗ ಉಂಡು
ದನಗಳ ಕಾಪಾಡು ಒಕ್ಕಲಿಗ

||ಚಾಲ||

ಧನ್ಯವಂತ ದಯಾಸಾಗರ
ನಿನ್ನ ಉಪಕಾರ
ಮರೆಯುವದ್ಹೆಂಗ ರೈತಾ
ನಿನ್ನಿಂದ ವಿಶ್ವ ಸಂಪತ್ತಾ
ಅನ್ನ ಧಾನ್ಯ ಒದಗಿಸುವ ಭಾರ
ಪೂರ್ಣ ಹೊತ್ತ ಧೀರ
ಕಷ್ಟ ಸಹಿಸುತಾ
ಮುನ್ನ ಮಾನಕಾಯುವ ಶಮರಂತಾ

||ಏರ||

ಉನ್ನತ ಕೃಷಿ ಕರ್ಮವನ್ನು ಮಾಡುವ
ಕನ್ನಡ ನಾಡಿನ ಒಕ್ಕಲಿಗ
ಮಣ್ಣಿನ ಸೇವಕ ಬಣ್ಣಿಸಲಾರೆನು
ಚನ್ನಾಗಿ ಕಾಪಾಡು ಒಕ್ಕಲಿಗ||೧||

ನಿನ್ನ ದೇಶದೊಳು ಏನೇನ ನಡದದ
ಮುನ್ನ ತಿಳಿಯಬೇಕ ಒಕ್ಕಲಿಗ
ಅನ್ಯ ದೇಶದ ಅನುಭವ ತಕ್ಕೊಂಡ
ಅನುಕರಣ ಮಾಡಬೇಕ ಒಕ್ಕಲಿಗ
ಪೂರ್ಣ ಓದಿಕೊಂಡ ಜ್ಞಾನಿಯಾಗುವದಕ್ಕ
ಶಿಕ್ಷಣ ಪಡಿಬೇಕ ಒಕ್ಕಲಿಗ
ನಿನಗ ತಿಳಿಯದಕ ಹಾನಿಯಾಗತದ
ಜಾಣತನ ಕಲಿ ಒಕ್ಕಲಿಗ
ನಿನ್ನ ಅನ್ನಾ ಉಂಡ ನಿನಗ ಮೋಸ ಮಾಡುವ
ಜನರು ಹೆಚ್ಚಾಗ್ಯಾರ ಒಕ್ಕಲಿಗ
ಮನಿಮುಟ್ಟ ಬಂದ ಮನಸ ಒಲಿಸುವಾಗ
ಬಹಳ ಎಚ್ಚರಿರಬೇಕ ಒಕ್ಕಲಿಗ

||ಚಾಲ||

ಅನ್ಯಾಯ ತಿಳಿದುಕೊಳ್ಳುವ ಬುದ್ಧಿ
ಕಲಿತರಾತ ಸಿದ್ಧಿ
ಸರಳ ಸಂಸಾರಾ
ಈ ಯುಗದೊಳಗಾಗತಿಯೊ ಪಾರಾ
ತನು ಮನ ಗುಣದಲಿ ಶುದ್ಧ

ಇದ್ರ ಪ್ರಸಿದ್ಧ
ನೀನೆ ಸರಕಾರಾ
ನಿನ್ನ ಕೈಯೊಳಗೆಲ್ಲಾ ಅಧಿಕಾರಾ ||

**||ಏರ||**

ಮಾನ್ಯವಂತ ಜನಸೇವಕ ಹುಲಕುಂದ
ಭೀಮೇಶ ಹೇಳಿದ ಒಕ್ಕಲಿಗ
ಮಣ್ಣಿನ ಸೇವಕ ಬಣ್ಣಿಸಲಾರೆನು
ಚೆನ್ನಾಗಿ ಕಾಪಾಡು ಒಕ್ಕಲಿಗ

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೨೬. ಗ್ರಾಮದಾನ-೧

ಗ್ರಾಮ ದಾನವ ಮಾಡಿರ್ರೆಯ್ಯಾ ಜನರೇ |
ಗ್ರಾಮ ಶಾಂತಿಗೆ ಜನರೇ ವಿಶ್ವಶಾಂತಿಗೆ || ಪಲ್ಲ||

ಗ್ರಾಮ ದಾನದಿಂದ ಮುಂದೆ ನೇಮ ವಿಶ್ವಶಾಂತಿಯಾಗಿ |
ಕಾಮಿತಾರ್ಥ |
ದೊರಿಯುದ್ರೆಯ್ಯಾ ಗ್ರಾಮ ಶಾಂತಿಗೆ |
ಜನರೇ ವಿಶ್ವಶಾಂತಿಗೆ||೧||

ಭೂಮಿತಾಯಿ ಮಕ್ಕಳು ಎಲ್ಲಾ |
ಭೂಮಿಗೊಡಿಯರ್ಯಾರ್ಯಾರಿಲ್ಲಾ |
ಸ್ವಾಮಿಮಾತ್ರ ಒಬ್ಬನೆ ಒಡಿಯಾ |
ವಿಶ್ವಶಾಂತಿಗೆ ಜನರೇ ಗ್ರಾಮಶಾಂತಿಗೆ||೨||

ಭೂಮಿತಾಯಿ ಮಾರುವದಲ್ಲಾ |
ಭೂಮಿತಾಯಿ ಕೊಳ್ಳುವದಲ್ಲಾ |
ಗ್ರಾಮದವರು ಒಪ್ಪಿರಿ ಮೊದಲಾ |
ಗ್ರಾಮ ಶಾಂತಿಗೆ ಜನರೇ ವಿಶ್ವಶಾಂತಿಗೆ||೩||

ಇಪ್ಪತ್ತರಲ್ಲಿ ಒಂದ ಪಾಲಾ |
ತಪ್ಪದೆ ಕೊಡಿರಿ ಬಡವರಿಗೆಲ್ಲಾ |

ಸುಲಭ ಗ್ರಾಮದಾನವಯ್ಯಾ |
ಗ್ರಾಮಶಾಂತಿಗೆ ಜನರೇ ವಿಶ್ವಶಾಂತಿಗೆ||೪||

ಗ್ರಾಮ ಸ್ವರಾಜ್ಯ ಮಾಡಿಕೊಳ್ಳಿರಿ |
ನಿಮ್ಮ ಸೌಖ್ಯ ನೀವೆ ಪಡಿರಿ
ಭೀಮ ಕವಿಯ ಪದಗಳ ಕೇಳ್ರಿ |
ಗ್ರಾಮ ಶಾಂತಿಗೆ ಜನರೇ ವಿಶ್ವಶಾಂತಿಗೆ||೫||

*ರಚನೆ:* ಹುಲಕುಂದ ಭೀಮಕವಿ
*ಕೃತಿ :* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೭. ಗ್ರಾಮದಾನ-೧

ಕಮುನಿಷ್ಟ ಚೀನ ತತ್ವ ಗ್ರಾಮ ಗ್ರಾಮದೊಳಗ ಹೊಕ್ರ
ಶ್ರೀಮಂತಿಕಿದಾಗತದ ಸಂಹಾರಾ |
ಪ್ರೇಮದಿಂದ ಸುಲಭವಾದ ಗ್ರಾಮದಾನ ಮಾಡಿಕೊಳ್ರಿ
ನೇಮ ಹೇಳತಾರ ವಿನೋಬಾಜಿಯವರಾ ||ಪ||

ನಿಮ್ಮ ಭೂಮಿಯೊಳಗಿನ ಇಪ್ಪತ್ತರಲ್ಲಿ ಒಂದ ಪಾಲ
ನಿಮಗ ಬೇಕಾದ ಭೂಹೀನಗಕೊಡ್ರಿ ಮೊದಲಾ |
ಭೂಮಿಯನ್ನು ಮಾರುವುದಲ್ಲ ಒತ್ತಿ ಸಹೀತ ಹಾಕುವದಲ್ಲ
ಮತ್ತೊಬ್ಬರದು ಕೊಂಡುಕೊಳ್ಳುವದಲ್ಲಾ ||

ಉಳಿದ ಜಮೀನ ನಿಮ್ ವಂಶ ಪರಂಪರ ಉಪಭೋಗ
ಮಾಡುವುದಕ್ಕೆ ಅಡ್ಡಿ ಇಲ್ಲಾ |
ತಿಳದ ನೋಡ್ರಿ ಅದನ ಕಳೀಲಿಕ್ಕೆ ಬರುವದಿಲ್ಲ ಗ್ರಾಮ ಹೆಸರ್ಲೆ
ಮಾಡ್ರಿ ದಾಖಲಾ ||

ಪ್ರತಿಯೊಂದ ಮನಿಗೆ ಒಬ್ಬ ಸದಸ್ಯರಿದ್ದರ ಗ್ರಾಮ ಸಭೆಯು
ಆಗುದು ಸಫಲಾ |
ಜೊತೆಗೂಡಿ ಮಾತಾಡಿ ಪ್ರೀತಿಲೆ ತೀರ್ಮಾನ ಮಾಡ್ರಿ
ಹಿತ ಆಗುದನ್ನ ಸರ್ವರಿಗೆಲ್ಲಾ ||

**||ಚಾಲ||**

ಗ್ರಾಮಸಭೆಯ ಮುಂದಿನ ಕೆಲಸಕ್ಕ |
ಪ್ರಗತಿಗೊಯ್ಯುದಕ |
ನಿಧಿಯು ಅನುಕೂಲಾ

ಪ್ರತಿಯೊಬ್ಬರದಿರಬೇಕು ಪಾಲಾ
ನೌಕರದಾರ ಕೂಲಿಯ ಮನುಷ್ಯ
ತಿಂಗಳಿಗೊಂದ ದಿವಸ
ದುಡಿಮೆಯ ಫಲಾ |
ಗ್ರಾಮಸಭೆಗೆ ಕೊಡಬೇಕ ಖುಷಿಯಾಲಾ ||
ಉತ್ಪನ್ನದ ಒಂದ ನಾಲ್ವತ್ತಂಸ |
ಕೊಡಬೇಕ ಬಿಟ್ಟ ಸಂಶಯ |
ಮನಸಮಾಡಿ ಖುಲ್ಲಾ |
ಸ್ವಲ್ಪ ತ್ಯಾಗ ಮಾಡುದ ನಿರ್ವಾ ಇಲ್ಲಾ ||

**||ಏರು||**

ಗ್ರಾಮದ ನಿಧಿಯಿಂದ ಗ್ರಾಮೋದ್ಯೋಗ ಬೆಳಿಸಿ
ಗ್ರಾಮದೇಳ್ಗೆಯನ್ನು ಮಾಡಿಕೊಳ್ರಿ ಪೂರಾ||೧||

ಕ್ರಾಂತಿಕಾರ ಪ್ರಾಮಾಣಿಕ ಶಾಂತಿ ಸೈನಿಕರಾಗ್ರಿ ಸಂತರ್ಧೇಳ್ಯಾರ
ಮತ್ತೊಂದ ಮಾತಾ |
ಎಂಥ ಬೇಕಾದಂಥ ನ್ಯಾಯ ಸ್ವಂತ ಬಗೆ ಹರಿಸಿಕೊಳ್ರಿ
ಶಾಂತಿದಲದಿಂದ ಮಾಡಿ ಬಂದೊ ಬಸ್ತಾ ||

ಕೋರ್ಟ ಕಚೇರಿ ಪೋಲೀಸ ಫೌಜದಾರ ಮೋಟರ ಕಾಟ
ಏಟು ಇಲ್ಲದ ಊರಿಗೊಳೆ ಸಿಸ್ತಾ |
ಪ್ಯಾಟಿ ಸಾವಕಾರ ಮಂದಿ ಆಟ ನಡಿಯುದಿಲ್ಲ ಶೋಷಣೆ
ರಹಿತ ಸಮಾಜದ ವೆವಸ್ತಾ ||

ಉದ್ಯೋಗ ವಿಕೇಂದ್ರಿಕರಣ ಆದಾಯ ಊರಿಗೆ ಪೂರ್ಣ
ವಿಧಾಯಕ ಕಾರ್ಯದಿಂದ ಸಂಪತ್ತಾ |
ಸದಾ ಹಳ್ಳಿಯ ಶಾಂತಿ ಉದಯ ಸಮಾಜ ಕ್ರಾಂತಿ
ಹೃದಯ ಪರಿವರ್ತನದಿಂದ ಖಚಿತಾ ||

**||ಚಾಲ||**

ನಿರುದ್ಯೋಗ ಯಾರ್‍ಯಾರು ಇರಬಾರ್ದ |
ಉಪವಾಸ ಬೀಳಬಾರ್ದ |
ಬೇಡಬಾರ್ದ ಭಿಕ್ಷಾ
ಗ್ರಾಮ ಸಭೆಯವರದಿರಬೇಕ ಲಕ್ಷಾ ||

ಸಾಮೂಹಿಕ ಶಕ್ತಿ
ಸಮಗ್ರ ಸಮಾಜವಾದ ಕ್ರಾಂತಿ
ವಿಕಾಸ ಹೊಂದುವದಕ್ಕ
ಜನಶಕ್ತಿಯೆ ಇರುವದು ಮುಖ್ಯ ||

ಇಷ್ಟಾದ್ರ ಗ್ರಾಮಗಳದಿಲ್ಲ ಚಿಂತಿ
ರಾಷ್ಟ್ರಕಿಲ್ಲ ಭ್ರಾಂತಿ
ಪ್ರಪಂಚಕ ಸುಖ
ಪ್ರೇಮ ರಾಜ್ಯದ್ದು ತೋರುದು ಬೆಳಕ ||

||ಏರು||

ಭೂಮಿಯೊಳು ಹುಲಕುಂದ ಭೀಮಕವಿ ಹೇಳಿದ
ಗ್ರಾಮ ಸ್ವರಾಜ್ಯದ ಮಜುಕೂರ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೨೮. ಗ್ರಾಮ ಇಕಾಯಿ

ನಯಾ ಮೋಡದದ ಪಾಯಾ ಹೇಳುವೆನು |
ದಯವಿಟ್ಟು ಕೇಳಿರಿ ಸರ್ವಜನರಾ |
ಬಾಯಿಲೆ ಅನ್ನುವದನ್ನ ಕೈಯಲ್ಲಿ ಮಾಡುವದಕ್ಕ |
ನಯಾ ಮೋಡ ಅಂತ ಇಟ್ಟಾರ ಹೆಸರಾ ||ಪ||

ಐದು ಸಾವಿರ ಜನಸಂಖ್ಯೆ ಇರುವ ಕ್ಷೇತ್ರ ಆರಿಸಿ |
ಗ್ರಾಮ ಇಕಾಯಿ ಅಂದಾರ ಅದಕ |
ಅದೇ ಸ್ಥಾನದಲ್ಲಿ ಖಾದಿ ಉತ್ಪತ್ತಿ |
ಗ್ರಾಮೋದ್ಯೋಗ ಬೆಳೆಸುವದಕ್ಕ ||

ಸಹಕಾರಿ ಸಂಘಗಳು ಪಂಚಾಯಿತಿ ಬೇರೆ ಬೇರೆ |
ಸಂಸ್ಥಾ ಇದ್ರು ಅಡ್ಡಿ ಇಲ್ಲ ನಡಿಸುದಕ |
ಮಹತ್ತದ ಮಾತು ಇದು ಸರ್ವರೆಲ್ಲಾ ಕೂಡಿ |
ಒಂದೆ ಕುಟುಂಬದವರಂತೆ ನಡೀಬೇಕ |
ಎಲ್ಲರಿಗೆ ಬೇಕಾಗುವ ಎಲ್ಲ ಸಾಮಾನುಗಳು |
ಅಲ್ಲೆ ತಯಾರಿಸುವದು ಬಹುತೇಕ |

ಎಲ್ಲರಿಗೆ ಉದ್ಯೋಗ ಎಲ್ಲರಿಗೆ ಸಂಪತ್ತು |
ಸಮೃದ್ಧ ಜೀವನ ನಡಿಸುದಕ |

**||ಚಾಲ||**

ತಮಗೆ ಬೇಕಾದದ್ದನ್ನೆಲ್ಲ ಹುಟ್ಟಿಸಬೇಕ |
ಹೆಚ್ಚಾದ್ರ ಹೊರಗ ಕಳಿಸಬೇಕ ||
ಇಲ್ಲದ್ದು ಹೊರಗಿಂದ ತರಬೇಕ |
ಇದು ಗ್ರಾಮ ಇಕಾಯಿ ತೂಕ ||

**||ಏರು||**

ಪ್ರಯೋಗ ಮಾಡಿ ನೋಡ್ರಿ ಫಾಯ್ದೆಯಾಗುವದು |
ಖಾದಿ ಆಯೋಗದವರು ಸಹಾಯ ನೀಡುವರಾ ||
ಬಾಯಿಲೆ ಅನ್ನುವದನ್ನ ಕೈಯಲ್ಲಿ ಮಾಡುವದಕ್ಕ |
ನಯಾ ಮೋಡ ಅಂತ ಇಟ್ಟಾರ ಹೆಸರಾ||೧||

ಮೊದಲನೇ ವರ್ಷ ಪ್ರತಿಯೊಬ್ಬರು ಒಂದವಾರ |
ಖಾದಿಬಟ್ಟೆ ಉಪಯೋಗ ಮಾಡುವ ಸಂಕಲ್ಪ ಬೇಕ |
ಇದೇ ಪ್ರಕಾರ ಗ್ರಾಮೋದ್ಯೋಗ ಸಾಮಾನ |
ಉಳಿಸಬೇಕ ದೇಶದ ರೊಕ್ಕ |
ಐದು ವರ್ಷ ಅವಧಿಯಲ್ಲಿ ಹನ್ನೆರಡುವಾರ ಖಾದಿಬಟ್ಟೆ |
ಉಪಯೋಗಿಸಬೇಕ ತಮ್ಮ ಸ್ವಂತಕ್ಕ |
ಸ್ವತಃ ನೂತ ನೂಲ ಕೊಟ್ರ ನೇಗಿ ಕೂಲಿಯನ್ನೆ |
ಸಂಘದವರು ಕೊಡತಾರ ಸ್ವಾವಲಂಬನಕ ||

ನಮ್ಮವರಿಗೆ ಉದ್ಯೋಗ ದೊರೆತು ನಮ್ಮ ರೊಕ್ಕ |
ನಮ್ಮಲ್ಲುಳಿದು ನಮ್ಮ ಹಳ್ಳಿ ಉದ್ಧಾರಾತ ಕಡಿತನಕ |
ನಮ್ಮ ಹಳ್ಳಿಗಳಿಂದ ನಮ್ಮ ದೇಶದುದ್ಧಾರಂತ |
ನಮ್ಮ ಗಾಂಧಿ ಹೇಳಿದರು ಸಾಯುವತನಕ ||

**||ಚಾಲ||**

ತತ್ವ ತಿಳಕೊಳ್ರಿ ತಲಿಯೊಳಗ ಸರಿಯಾಗಿ |
ಮತ್ತು ತಿಳಿಯದಿದ್ರ ಕೇಳ್ರಿ ಮುಖಂಡರಿಗೆ ||
ಚಿಂತಿ ಮಾಡತಾರ ಹಿರಿಯರು ನಿಮಗಾಗಿ |
ಕ್ರಾಂತಿ ನಡಿಶಾರ ಪ್ರಾಂತ ಪ್ರಾಂತಗಳಿಗಾಗಿ ||

**||ಏರು||**

ನಯಾ ಮೋಡ ಆಗದಿದ್ರ ನಾವೇ ಮೋಡ |
ಆಗತೀವಂತ ಹುಲಕುಂದ ಭೀಮೇಶ ಹೇಳಿದ ಸಾರಾ |
ಬಾಯಿಲೆ ಅನ್ನುವದನ್ನ ಕೈಯಲ್ಲಿ ಮಾಡುವದಕ್ಕ |
ನಯಾ ಮೋಡ ಅಂತ ಇಟ್ವಾರ ಹೆಸರಾ||೨||

*ರಚನೆ :* ಹುಲಕುಂದ ಭೀಮಕವಿ
*ಕೃತಿ :* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೯. ಗ್ರಾಮ ಪಂಚಾಯತಿ

ಗ್ರಾಮ ಸುಧಾರಣೆ ಗ್ರಾಮ ರಾಜವಾಗುದಕ್ಕ
ಗ್ರಾಮ ಪಂಚಾಯತಿಗಳು ಮುಖ್ಯ ಕಾರಣಾ ||
ಪ್ರಾಮಾಣಿಕತನ ಪ್ರೇಮ ಸಹಕಾರ ಜೀವನ |
ನೇಮ ಪಾಲಿಸ ಬೇಕ ಸರ್ವ ಜನಾ ||ಪಲ್ಲ||

ಹಿಂದುಸ್ತಾನದೊಳಗ ಹಿಂದಿನ ಕಾಲದಿಂದ |
ಬಂದಾವ ಪಂಚಾಯತಿ ಇಂದಿನ ತನಾ ||
ಬುದ್ಧ ಬಸವಂಣನವರು ಇದ್ದ ಕಾಲದಿಂದ |
ಮುಂದವರಿಯುತ ಬಂತ ಸುಧಾರಣಾ ||

ಇಂಗ್ಲೀಷರು ಬಂದ ಮೇಲೆ ಜಂಗ ಹತ್ತಿದಂಗ ಆಗಿ |
ಹಂಗು ಹಿಂಗು ಬಂದವು ಇಲ್ಲ ಉತ್ತೇಜನಾ ||
ಕಾಂಗ್ರೆಸ ಸರಕಾರ ಬಂದ ಸಂಘ ಸಂಸ್ಥೆಗಳಿಗೆ |
ಯೋಗ್ಯವಾಗಿರುವದು ಸನ್ಮಾನಾ ||

ಹೆಚ್ಚ ಅಧಿಕಾರ ಕೊಟ್ಟ ಉಚ್ಚ ಸ್ಥಿತಿಗೆ |
ವಯ್ಯಲಿಕ್ಕೆ ಸತತ ನಡದಿರುವದು ಪ್ರಯತ್ನಾ ||
ಸ್ವಚ್ಛ ಸ್ವಭಾವದ ಪಂಚರಿದ್ದಲ್ಲೆ ಸುಖವಾಗಿ |
ಇರತದ ಊರ ಜನಾ ||

**||ಚಾಲ||**

ನೀರಿನನುಕೂಲ ಆರೋಗ್ಯ ಒಕ್ಕಲುತನ |
ಊರ ಸ್ವಚ್ಛತೆ ಮಕ್ಕಳ ಶಿಕ್ಷಣಾ ||
ಕೋರ್ಟ ಕಚೇರಿಗ್ಹೋಗದಂತೆ ಜನಾ |
ನಿಷ್ಪಕ್ಷಪಾತ ಬೇಕ ನ್ಯಾಯದಾನಾ ||

**||ಏರು||**

ಸಾಮಾನ್ಯ ಮಾತಲ್ಲ ಗ್ರಾಮ ಪಂಚಾಯತಿಗಳಿಗೆ |
ಹೆಚ್ಚ ಕೊಟ್ಟಾರ ಅಧಿಕಾರ ಸ್ಥಾನಾ||೧||

ಒಂದೊಂದ ಪಂಚಾಯತಿಗಳು ಮುಂದುವರಿದು ಕೆಲಸಾ ಮಾಡಿ
ಅಂದವಾಗಿ ಅಧಿಕಾರ ನಡಿಶಾವನಿವಳಾ
ಬಂಧೂರ ಆಡಳಿತ ಊರ ಮಂದಿಗೆ ಸಮಾಧಾನ
ಹಿಂದುಸ್ತಾನಕ ತರುವವು ಕಳಾ

ಕೆಲವು ಪಂಚಾಯಿತಿ ಕಲಹದ ತವರೂರಾಗಿ
ಹೊಲಸುತನ ತುಂಬ್ಯಾವ ಬಹಳಾ
ತಮಗೂ ತಿಳಿಯೋಣಿಲ್ಲ ಹೇಳಿದ್ರ ಕೇಳೋಣಿಲ್ಲ
ಸುಮ್ಮ ಸುಮ್ಮನೆ ಮಾಡತಾವ ಜಗಳಾ

ಪಾರ್ಟಿ ಪಂಗಡ ಕಟ್ಟಿ ಊರ ಮೂರಾ ಬಟ್ಟಿ
ಉತ್ತಮ ಜನರಿಗೆ ಬರತದ ಗೋಳಾ
ಸತ್ಯದ ಕೊಲೆಯಾಗಿ ಅಸತ್ಯಕ್ಕೆ ಜಯವಾಗಿ
ನಿತ್ಯದ ಜೀವನವೆಲ್ಲಾ ಹಾಳಾ

**||ಚಾಲ||**

ಅಧಿಕಾರ ಆಸೇಕ ಅನೇಕ ಹುಂಬರಾಗಿ
ಬಾಧಾ ಕೊಡಬಾರ್ದ ಸರ್ವ ಜನರಿಗಿ
ಗ್ರಾಮದಾನ ಮಾಡಿಕೊಳ್ರಿ ಅದಕ್ಕಾಗಿ
ಗ್ರಾಮ ಸ್ವರಾಜ್ಯ ಆದ್ರ ಸುಖ ಎಲ್ಲರಿಗಿ

**||ಏರು||**

ಹಮ್ಮ ದಮ್ಮ ಬಿಟ್ಟ ಶಾಂತಿ ಮಾರ್ಗ ಹಿಡಿರೆಂತ
ಹುಲಕುಂದ ಭೀಮೇಶ ಹೇಳಿದ ಕವನಾ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

# ೩೦. ಕೂಲಿಕಾರರ ಪದ

ಕಡಿಮಿ ಅಲ್ಲ ನೋಡ್ರಿ ಪೊಡವಿ ಪಾಲಕರು |
ದುಡಿಯುವಂಥ ಬಡವ ಕೂಲಿಕಾರರು |
ಶಡಗರ ಸಂಪತ್ತ ಭೂಮಿ ಒಡೆಯರನ್ನ ಮಾಡಲಿಕ್ಕೆ |
ಅಡಿಪಾಯವಿದ್ದಂತೆ ಬಡವ ಕೂಲಿಕಾರರು || ಪ ||

ಮೊಟ್ಟ ಮೊದಲಿಗೆ ರಾಷ್ಟ್ರದ ಉತ್ಪನ್ನ ಮಾಡಲಿಕ್ಕೆ |
ಶ್ರೇಷ್ಠರು ಕೇಳ್ರಿ ಬಡವ ಕೂಲಿಕಾರರು |
ನಟ್ಟ ಕರಿಕಿ ಕಟ್ಟೀ ಕಡದ ಒಡ್ಡ ಹಾಕಿ ಕಷ್ಟಪಡವರು |
ಬಡವ ಕೂಲಿಕಾರರು |
ಹುಟ್ಟಿದ ಪೀಕ ಮನಿಗೆ ಮುಟ್ಟುವರೆಗೆ ರೈತಗೆಷ್ಟ |
ಸಹಾಯ ಬಡವ ಕೂಲಿಕಾರರು |
ಹೊಟ್ಟ ಮೇವ ಬಣಿವಿ ಒಟ್ಟುವಾಗ ಸಹೀತ |
ಬಿಟ್ಟರ ನಡೆಯುವುದಿಲ್ಲ ಕೂಲಿಕಾರರು ||

ಖಡಿ ರೋಡ ಸಿಮೆಂಟ ರೋಡ ದೊಡ್ಡ ದೊಡ್ಡ ಮೇನ ರೋಡ |
ದುಡದ ಮಾಡಿದವರು ಬಡವ ಕೂಲಿಕಾರರು |
ದೊಡ್ಡ ನದಿಗಳಿಗೆ ಅಡ್ಡ ಆಣೆಕಟ್ಟ ಕಟ್ಟಿ ನೀರ ವದಗಸವರು |
ಬಡವ ಕೂಲಿಕಾರರು ||

**||ಚಾಲ||**

ಗಿರಣಿ ಕಾರಖಾನೆ ನಡೆಯುವವು ಅವರಿಂದ |
ವರ್ಕ್‌ಶಾಪದಲ್ಲಿ ದುಡದ |
ಶರೀರ ಸಂವಿಸುದಾ | ಅರಹೊಟ್ಟಿ ಬರಿ ಮೈಯ್ಯಿಂದ ಇದ್ದ ||
ಖಣಿ ಖನಿಜ ಸಂಪತ್ತ ಅಗಿಯುವದ |
ಪ್ರಾಣದ ಭಯ ಇಲ್ದ | ರೇಲ್ವೆದಲ್ಲಿ ದುಡದಾ |
ಮನಿ ಇಲ್ಲದೆ ಗುಡಿಸಲದೊಳಗಿದ್ದಾ ||

**||ಏರು||**

ರೂಢಿಯೊಳಗ ಇವರು ಧಡ್ಡರೆಂದು ಹಿಂದಾಡಿ ಕೊಳ್ಳವರು |
ಹಲವ ಕೆಲವ ಜನರು||೧||
ಕಡಲೊಳಗ ಹಡಗ ಬಂದ ಧಡಕ ಹತ್ತಿದಾಗ ಸಾಮಾನ |
ಕಡೀಕ ತಗದ್ಹೇರವರು ಬಡವ ಕೂಲಿಕಾರರು |

ಗಾಡಿಯಿಂದಿಳಿಯುವಾಗ ಟ್ರಂಕ ಬೆಡ್ಡಿಂಗ ಕೈ ಚೀಲಗಳನ |
ನಡಕಟ್ಟಿ ಹೊರವರು ಬಡವ ಕೂಲಿಕಾರರು ||

ಜಂಗಲ ಹೋಗಿ ಅದನ ಮಂಗಲ ಮಾಡುವಾಗ ಹಂಗಿಲ್ದ |
ದುಡಿಯವರು ಬಡವ ಕೂಲಿಕಾರರು |
ಜಂಗಿ ಬಿಲ್ಡಿಂಗ ಮತ್ತೆ ಬಂಗ್ಲೆಗಳಾಗುವುದಕ್ಕೆ ಕಂಗೆಟ್ಟ |
ದುಡಿಯುವರು ಬಡವ ಕೂಲಿಕಾರರು ||

ವಾರಟಾಯಿಮು ಸರಕಾರ ಪುಕಾರಿಸಿದಾಗ ಸೈನ್ಯ ಸೇರವರು |
ಮದಲ ಬಡವ ಕೂಲಿಕಾರರು |
ಆರಾಮ ಹರಾಮ ಅನ್ನುವ ನೆಹರೂ ಅವರ ವಾಕ್ಯವನ್ನು |
ಪೂರಾ ಪಾಲಿಸವರು ಬಡವ ಕೂಲಿಕಾರರು ||

**||ಚಾಲ||**

ಜಗದೇಳ್ಗೆಯಾಗುವದು ದುಡಿಯವರಿಂದ |
ಸಮಾಜಕಾನಂದ | ವಿಶ್ವಕೆಲ್ಲಾ ಶಾಂತಾ |
ಪ್ರತ್ಯಕ್ಷ ಅನುಭವದ ಮಾತಾ ||
ದುಡಿಯದೆಲೆ ಉಂಣವ ಕಳ್ಳಂತ | ಹೇಳ್ಯಾನ ಭಗವಂತ |
ಬರದ ಇಟ್ಟ ಗೀತಾ |
ಗೀತಾ ಓದಂವಗಾಗುದು ಗೊತ್ತಾ ||

**||ಏರು||**

ನಾಡೊಳು ಹುಲಕುಂದ ಪಾಡ ಭೀಮೇಶ ಅಂದ |
ಎಚ್ಚರಾಗ ಬೇಕ ಬಡವ ಕೂಲಿಕಾರರು||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೧. ರಾಷ್ಟ್ರೀಯ ಯೋಜನೆ

ಜನಸಂಖ್ಯೆ ಹೆಚ್ಚಾಗಿ ತಿನಲಿಕ್ಕೆ ಅನ್ನ ಕಡಿಮಿ |
ಘನ ವಿಚಾರ ಮಾಡುವದು ಸರಕಾರಾ |
ಅನ್ಯ ರಾಷ್ಟ್ರದಿಂದ ಧಾನ್ಯ ತರಿಸುದು ಬಿಟ್ಟ |
ತನ್ನಲ್ಲಿ ಬೆಳೆಯ ಬೇಕಂತ ಪೂರಾ ||ಪ||

ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ನಿರುದ್ಯೋಗ |
ದರಿದ್ರತನದ ಸಂಹಾರಾ |
ಸರಕಾರ ಕೂಡ ಜನರು ಸಹಕಾರ ಮಾಡಿದರ |
ಬರೋಬರಿ ಆಗುವದು ಇಲ್ಲ ಘೋರಾ ||

ಸಮಾಜವಾದದ ಸಮಾಜ ರಚನೆಯು |
ಸಮಾಧಾನದಿಂದ ತಯ್ಯಾರಾ |
ಪ್ರಾಮುಖ್ಯವಾಗಿ ಜೀವನ ಮಟ್ಟ ಎತ್ತಿರಿಸಿ |
ಆರ್ಥಿಕ ಸಮಾನತೆ ತಾಯಿಬೇರಾ ||

ಬೌದ್ಧಿಕ ಸಾಂಸ್ಕೃತಿಕ ಸಾಧನ ವೃದ್ಧಿಯಾಗಿ |
ಉದ್ದೇಶ ಸಾಧಿಸುವದು ನಿರಂತರಾ |
ಆದಾಯ ಮತ್ತು ಸಂಪತ್ತುಗಳ ಅಸಮಾನತೆಯು ನೀಗಿ |
ಉದ್ಯೋಗವಕಾಶಗಳು ಬಲು ಜೋರಾ ||

ಗ್ರಾಮೋದ್ಯೋಗದಿಂದ ವಿಮಾನ ಸಾರಿಗಿವರೆಗೆ |
ಯಂತ್ರ ತಂತ್ರ ಶಿಕ್ಷಣ ಶಿಬಿರಾ |
ಕ್ರಮ ಕ್ರಮವಾಗಿ ಪ್ರಮಾಣಕ್ಕನುಸರಿಸಿ ಸಮಗ್ರ |
ಸಮಸ್ಯ ಆಗುವವು ಹಗರಾ ||

**||ಚಾಲ||**

ಪಶು ಪೋಷಣೆ ಬೇಸಾಯ ಕೆಲಸ |
ವ್ಯವಸಾಯ ವೆವಸ್ತ | ಇವಕೆಲ್ಲಾ ಹಣಾ |
ಸರಕಾರ ಕೊಡುವದು ನೋಡಿರಣ್ಣಾ ||

ಸಮಾಜ ಕಲ್ಯಾಣ ಸೇವೆ | ವಸತಿ ಸೌಕರ್ಯ
ವದಗಿಸುವದು ತಾನಾ |
ನಿರಾಶ್ರಿತರ ಪುನರ್ನಿ ವೇಶನಾ ||

ಸಹಕಾರ ಬೇಸಾಯ ಪದ್ಧತಿ | ಮಹತ್ವದ ಸಂಗತಿ |
ಬಹಳ ಪ್ರಯೋಜನಾ |
ಮಾಡಬೇಕಂತ್ಹೇಳಾರ ಅನುಕರಣಾ ||

**||ಏರು||**

ಸಂಣ ಕೈಗಾರಿಕೆ ಮೀನುಗಾರಿಕೆ ಪೂರ್ಣ |
ಸಹಾಯ ಯೋಜನೆ ಸಾರಾ||೧||

ಶ್ರೇಷ್ಠವಾದ ರಾಷ್ಟ್ರೀಯ ವಿಸ್ತರಣ ಯೋಜನೆಯಿಂದ |
ಎಷ್ಟೋ ಲಾಭವಾಗುವದು ಹಳ್ಳಿಗಳಿಗಿ |
ಕೆಟ್ಟ ವ್ಯಸನ ಬಿಟ್ಟ ಮನ ಮುಟ್ಟ ಕೆಲಸ ಮಾಡಿದರ |
ರಾಷ್ಟ್ರ ಸೇವೆಯಾಗುವದು ನಿಜವಾಗಿ ||

ಸರಕಾರ ಸಾಕಷ್ಟ ಈಗ ಸಹಾಯ ವದಗಿಸುವಾಗ |
ಮೂಕರಂತೆ ಕೂಡ್ರಬಾರದ ನೀವಾಗಿ |
ಸರಿಯಾಗಿ ತಿಳಕೊಂಡ ಬರೋಬರಿ ನಡಕೊಂಡ್ರ |
ಸರಳವಾಗುವದು ಬಾಳ್ವೆ ಸುಖವಾಗಿ ||

ಆರೋಗ್ಯ ವ್ಯವಸಾಯ ಗ್ರಾಮೋದ್ಯೋಗ ಶಿಕ್ಷಣ |
ಸಹಕಾರಕ್ಕೆ ಸಹಾಯ ಮೊದಲಿಗಿ |
ದರಿದ್ರ ಬಡತನ ನಿರುದ್ಯೋಗ ಪರಿಪೂರ್ಣ |
ನಷ್ಟವಾಗುದು ಮುಖ್ಯ ತತ್ವಾಗಿ ||

ಗ್ರಾಮ ಗ್ರಾಮಗಳಲ್ಲಿ ಸಮಾಜ ಶಿಕ್ಷಣಾ ಕ್ರಮದಿಂದ |
ದೊರೆಯುವದು ಸರ್ವರಿಗಿ |
ನಮ್ಮ ಭಾಷೆ ನಮ್ಮ ದೇಶ ನಮ್ಮ ಉದ್ಯೋಗದ |
ಜ್ಞಾನವಾಗುವದು ನಿರಕ್ಷರಿಗಳಿಗಿ ||

**||ಚಾಲ||**

ರೈತರಿಗೆ ಸರ್ವ ಗೊಬ್ಬರ | ಮಾಹಿತಿ ಕೊಟ್ಟ ಪೂರ | ನೀರಿನ ಪುರವಠಾ |
ಉಳಿದ ಸವಲತ್ತ ವದಗಿಸಿ ಕೊಟ್ಟಾ ||
ಹೆಚ್ಚಾಗಿ ಆಹಾರ ಬೆಳೆಯಿರಿ | ಸ್ವಚ್ಛತೆ ಕಲಿಯಿರಿ |
ಅಂತ ಹೇಳಿ ಸ್ಪಷ್ಟಾ |
ಇದು ಯೋಜನೆ ಯೊಳಗಿನ ಗುಟ್ಟಾ ||
ಪ್ರಾಮಾಣಿಕರಾಗಿ ಬಾಳಿರಿ | ಪ್ರೇಮಬೆಳಿಸಿರಿ |
ಪ್ರಪಂಚ ಉತ್ಕೃಷ್ಟಾ |
ಸಮಾಧಾನ ಸಮಾಜದಿಂದ ರಾಷ್ಟ್ರಾ ||

**||ಏರು||**

ಕನ್ನಡ ನಾಡಿನ ಚನ್ನ ಹುಲಕುಂದದ ಮಾನ್ಯ |
ಭೀಮೇಶ ಹೇಳಿದ ವಿವರಾ||೨||

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೨. ಬ್ಯಾಂಕಿನ ಪ್ರಯೋಜನ

ಗಳಿಸಿದಷ್ಟು ಹಣ ಬಳಸಿ ಉಳಿಸುವ ಮಾದರಿ ಸಂಸಾರ |
ಮಾಡುವ ಹಾದಿಯ ತೆಗೆದಾರ ಬ್ಯಾಂಕಿನ ನೀತಿನಿಯೋಜಕರು | ||ಪ||

ಮೊಟ್ಟ ಮೊದಲು ನಾವು ದುಡಿಯಲುಬೇಕು | ಅಷ್ಟರಲ್ಲೆ ಖರ್ಚು ಮಾಡಲು ಬೇಕು |
ಒಟ್ಟು ನಾಲ್ಕು ದುಡ್ಡು ಉಳಿಸಿ ಇಟ್ಟರ | ನಮಗೆ ಮುಂದಿನ ಬಾಳಿಗಾಸರ||೧||

ಹಾದಿಯ ತೆಗೆದಾರ ಬ್ಯಾಂಕಿನ ನೀತಿನಿಯೋಜಕರು ||
ಬಡತನವಿದ್ದರೂ ಹೊಟ್ಟೆಗೆ ಬೇಕು | ಕಡೆತನ ನಮಗ ಬಟ್ಟೆಯು ಬೇಕು
ಎಲ್ಲಕೆ ಮೊದಲು ದುಡ್ಡಿರಬೇಕು | ದುಡ್ಡಿರದಿದ್ದರೆ ಬಾಳುವೆ ಸಾಕು||೨||

ಹಾದಿಯ ತೆಗೆದಾರ ಬ್ಯಾಂಕಿನ ನೀತಿನಿಯೋಜಕರು ||
ಒಟ್ಟಿಗೆ ಇದ್ದಾಗ ದುಂದ ಮಾಡತಾರ | ಹೊಟ್ಟೆಗಿಲ್ಲದಾಗ ಬಿಕ್ಕೆಬೇಡತಾರ
ಇಲ್ಲದಿದ್ದರ ಸಾಲ ಮಾಡತಾರ | ಅದೇ ಶೂಲದಾಗ ಸತ್ತು ಹೋಗತಾರ||೩||

ಹಾದಿಯ ತೆಗೆದಾರ ಬ್ಯಾಂಕಿನ ನೀತಿನಿಯೋಜಕರು ||
ಹೊಟ್ಟೆತುಂಬ ಸಹ ಅನ್ನ ತಿನ್ನದೆ | ಗಂಟುಕೂಡಿಸಿ ಖರ್ಚು ಮಾಡದೆ |
ಖೊಟ್ಟಿ ಜನರಿಗೆ ಸಾಲಕೊಟ್ಟರೆ ತಿರುಗಿ ಬಾರದ್ದಕ್ಕ ಮರುಗಿ ಸಾಯತಾರ||೪||

ಹಾದಿಯ ತೆಗೆದಾರ ಬ್ಯಾಂಕಿನ ನೀತಿನಿಯೋಜಕರು ||
ತಮ್ಮಲ್ಲಿದ್ದ ಹಣ ಬ್ಯಾಂಕಿನಲಿಟ್ಟರ ಸಾವಕಾರ ಸಾಲಗಾರ ಇಬ್ಬರಿಗಾಸರ
ಇಬ್ಬರೂ ಬದುಕುವ ದಾರಿ ಮಾಡ್ಯಾರ ಪತ್ತಿನ ಸಾಲದ ಅನುಕೂಲ ನಿಡ್ಯಾರ||೫||

ಹಾದಿಯ ತೆಗೆದಾರ ಬ್ಯಾಂಕಿನ ನೀತಿನಿಯೋಜಕರು ||
ಇದ್ದಾಗ ಇಟ್ಟರ ಇಲ್ಲದಾಗ ಬೇಡಿದರ ಬ್ಯಾಂಕಿನ ಮೂಲಕ ವ್ಯವಹಾರ ಮಾಡಿದರ
ಸುಖಸಂಸಾರದ ದಾರಿ ಸುಸೂತ್ರ ವಾಲಿ ಶರಣರು ಹೇಳಿ ತಿಳಸತಾರ||೬||

ಹಾದಿಯ ತೆಗೆದಾರ ಬ್ಯಾಂಕಿನ ನೀತಿನಿಯೋಜಕರು ||

*ರಚನೆ:* ಶರಣಪ್ಪವಾಲಿ
*ಕೃತಿ:* ಶರಣಸ್ಮೃತಿ

## ೩೩. ಕುಟುಂಬ ಯೋಜನಾ-೧

ಕಲಿಯುಗದಾಟಾ ನೋಡಿ ಕಲಿವಿಲಿ ಆತ ಮನಸಿಗಿ
ಕಳಕಳಿಯಿಂದ ನಿಮ್ಮ ಮುಂದ ತಿಳಸೂದಕ
ಈಗ ಹೊಳದೈತಿ ಹಿಂಗ ನನ್ನ ಧ್ಯಾಸಕ್ಕ ||
ಅತಿಯಾದ ಸಂತಾನ ಮಿತಿಗೊಳಿಸಿರೆಂದು
ಹಿತವಾದ ಸಂಗತಿ ಹೇಳುದಕ
ಬಂದೇನ ಇಲ್ಲಿಯತನಕ ||

ಹಿಂದಿನ ಕಿಂತ ಈಗ ಮುಂದ ವರಿತ ಹಿಂದುಸ್ತಾನ
ಯಾತಕ್ಕಂದರ ಮಕ್ಕಳನ್ನು ಹಡಿಯೋದಕ
ಗಣತಿ ಮಾಡೋದು ಬ್ಯಾಸರಾತಿ ಸರಕಾರಕ ||
ಸೊನ್ನಿಗೆಟ್ಟ ವಂದಸವನ ಗೊಣ್ಣೆ ತಗದ ಒಗದಾಂಗ
ವರ್ಷಕ ಒಂದೊಂದರಂತೆ ಬಿಡುದಿಲ್ಲ ನಿರಕ
ಈಗ ಒಬ್ಬೊಬ್ಬರಿಗದಾವ ಮಕ್ಕಳು ಹತ್ತನಾಕ ||

ಸಣ್ಣ ಸಂಸಾರಾ ಸರಿಯಾಗಿ ಸಾಗತದ
ಕೊರತಿ ಯಾಗೋದಿಲ್ಲ ಯಾತ್ಯಾತಕ
ಎರಡ ಮಕ್ಕಳಾದ್ರ ಸಾಕ ಒಂದ ಕುಟುಂಬಕ ||
ಹೆಚ್ಚಾಗಿ ಹಡದರ ಪೇಚ ಆಗತsದ
ಒದ್ದಾಡೋದು ಸಿಕ್ಕ ಬಡತನಕ
ಅಡ್ಡಿ ಆತಂಕ ಮಕ್ಕಳ ಶಿಕ್ಷಣಕ ||

**||ಏರು||**

ಪ್ರಾಯ ಆಗಬೇಕ ಪೂರ್ತಿ ಲಗ್ನದ ರೀತಿ
ಹೆಣ್ಣಿಗೆ ಇಪ್ಪತ್ತಾ
ಗಂಡಿಗೆ ಆಗಿರಬೇಕ ಮೂವತ್ತಾ ||
ವಯಸ ಇರತsತಿ ಎಳಕ ಹುಟ್ಟತಾವ ಕೊಳಕ
ಜೀವ ಜರಿಜರಿತಾ
ಹಡಹಡದ ಆದ್ರ ಅಶಕ್ತಾ ||
ಹಿರಿಯರು ಅಂತಾರ ಸಣ್ಣಮಗಳ ಮಕ್ಕಳಾದುವ ನಿನಗ ಒಂದ ಏಳ
ಮತ್ತ ಏಸರಾಗಂತಾ
ನಾಲ್ಕರೊಳಗ ಐತಿ ಈಗ ತುರ್ತಾ ||
ನಮ್ಮ ಕೈಯಾಗಿರುವುದೇನ ದೇವರ ಹಾಕಿದ ಮಣ್ಣ
ಕೊಡಾಂವ ಭಗವಂತಾ
ಹೆಂಗಸರ ಮಾತಾಡತಾರ ಹಿಂಗ ನಗನಗತಾ ||

||ಏರು||

ಹತಿಬಿದ್ದ ಒಂದ ಸವನ ಹತ್ತೆಂಟ ಹಡದರ
ವಿಪತ್ತ ತಪ್ಪೋದಿಲ್ಲ ಕಡಿತನಕ
ಮುದಿ ಮಾರಿ ಮೂವತ್ತ ವರ್ಷಕ್ಕ ||

ಅತಿಯಾದ ಸಂತಾನ ಮಿತಿಗೊಳಿಸಿರೆಂದು
ಹಿತವಾದ ಸಂಗತಿ ಹೇಳುದಕ
ಬಂದೇನ ಇಲ್ಲಿಯತನಕ ||||೧||

ಬಾಳ ಮಕ್ಕಳಿದ್ರ ಗೋಳ ಆಗತೈತಿ
ಸರಿಯಾಗಿ ಸಾಗೋದಿಲ್ಲ ಜೀವನ
ಹೆಚ್ಚಾದೀತ ಖರ್ಚಿನ ಪ್ರಮಾಣ ||
ಕಷ್ಟಪಟ್ಟ ಬೇಕಾದಷ್ಟು ದುಡಿದರು ದೂರ
ಆಗೋದಿಲ್ಲ ಬಡತನಾ
ಹೊಟ್ಟೆತುಂಬ ಸಿಗವಲ್ತ ಅನ್ನಾ ||

ಮೊದಲ ಇದ್ದ ಭೂಮಿ ಇದ್ದಷ್ಟ ಇರುವುದು
ಉದ್ದ ಅಗಲ ಆಗಿಲ್ಲ ಏನೇನಾ
ಹ್ಯಾಂಗ ಪುರೋಸೀತ ಉತ್ಪನ್ನ
ಕಾಳಕಮ್ಮಿಯಾಗಿ ಗೋಳಾಟ ನಡದೀತ
ಜಡಾ ಬಂತ ಸಲಹುವದು ಮಕ್ಕಳನ
ಸಾಕ ಮಾಡರಿ ಆಗ್ಯಾವ ಒಂದ ಡಜನ ||

ಏನಗಂಟ ಬಿದ್ದ್ಯೋ. ನಿನ್ನ ಹೊಟ್ಟಿ ಹೆಂತದಂತ
ಸಿಟ್ಟಿಗೆದ್ದ ಬೈತಾರ ಮಕ್ಕಳನ್ನ
ವಟಾವಟಾ ಪಿಟಿಪಿಟಿ ವಂದsಸವನ ||
ಹುಳುಹುಳು ಮಾರಿ ನೋಡಿ ಗುಳುಗುಳು ಅತಗೊಂತ
ಹೊಡಕೊಂಡ ಹೋಗತಾವ ದನಗಳನ್ನ
ದಾರಿ ನೋಡತಾವ ಊಟಾ ಓದ ಕೊಡವುದನ ||

ಹಿಂದಮುಂದ ಏನೂ ಇಲ್ಲ ಒಂದೇ ರೊಟ್ಟಿ ಊಟಾ ಮಾಡಿ
ಹೊತ್ತಗಳದ ಬರತಾವ ಸಂಜಿತನ
ತಿಂದೇವ ಅಂತಾವ ಸಿಗೋದಿಲ್ಲ ಮತ್ತೇನ ||
ಸಂಜಿಕ ಮನಿಗಿ ಬಂದ ಸಪ್ಪಾನ ಗಂಜಿ ಕುಡದ
ಸೊಗಸ ಇಲ್ಲದ ಮಲಗತಾವ ಸುಮ್ಮನ
ನಿದ್ರಿ ಹತ್ತೋದಿಲ್ಲ ಬೆಳತಾನ ||

||ಚಾಲ||

ತಟ್ಟುವದು ಮಕ್ಕಳ ಮರಗ ತಗಲೀತ ಕೆಟ್ಟರೋಗ
ಆರೋಗ್ಯಕ್ಕ ಇಲ್ಲ ಸಿಸ್ತಾ |
ಬೀಳುವುದು ಬ್ಯಾನಿ ಬಳಲೂತಾ ||

ಹುಡಗೋರಿಗೆ ಇರೋದಿಲ್ಲ ಜ್ಞಾನ ಬೇಡತಾನ ಅನ್ನ
ನುಚ್ಚವಲ್ಲಿನಂತಾ
ಸುಳ್ಳ ಹೇಳತಾರ ನಾಳೆ ಮಾಡೋಣಂತಾ ||

ತಿನ್ನ ಉಣ್ಣ ಬಾಯಲಿ ಮಣ್ಣ ಮಾರತಾರ ಹೈನ
ಮಕ್ಕಳು ಮರಗುತಾ
ಆಸೆ ಮಾಡಿ ನೋಡತಾವ ನಿಂತಾ ||

ಮೈಯೊಳಗ ಮತ್ತೊಂದಿಲ್ಲ ಬಟ್ಟೆ ಅಷ್ಟಕ್ಕಷ್ಟ ಚಾಟಿಮಿಟಿ
ಊಟ ಸಿಗೋದಿಲ್ಲ ಒಪ್ಪತ್ತಾ
ಬೆಲ್ಲದ ಚಾ ಕುಡದ ಹೊತ್ತಗಳಿಯುತಾ ||

||ಏರು||

ಉಂಡ ಆಡೊ ಹಿಂಡ ಮಕ್ಕಳು ಅಂಗಡಿ ಮುಂದ ಹೋಗಿ ನಿಂತ
ಕಂಡದ್ದನ್ನ ಬೇಡತಾವ ತಿಳಿಲಾರದಕ
ನೀವು ತಗದ ಕೊಡತೇರಿ ಎರಡ ಕಪಾಳಕ ||

ಅತಿಯಾದ ಸಂತಾನ ಮಿತಿಗೊಳಿಸಿರೆಂದು
ಹಿತವಾದ ಸಂಗತಿ ಹೇಳುದಕ
ಬಂದೇನ ಇಲ್ಲಿಯತನಕ ||||೨||

ಹತ್ತ ಹಡಿಯೋದ ಯಾಕ ಬೇಕ ಮೂರ ಮುತ್ತ ಹಡದರ ಸಾಕ
ಸರಿಯಾಗಿ ಸಾಗತದ ಸಂಸಾರ
ಮಕ್ಕಳ ವಿದ್ಯಾಭ್ಯಾಸಕ್ಕೆ ಒಳ್ಳೆ ಸಸಾರ ||
ಅತಿಯಾದ ಹಡದ ತಾಯಿ ಅಶಕ್ತಳಾಗತಾಳ
ಮೈಯೊಳಗ ಕಮ್ಮಿ ಆತ ನೆತ್ತರ
ಬಾಣತಿ ರೋಗ ಕ್ಷಯಾ ಹತ್ತಿ ಬಳಲುವರ ||

ಒಂದ ಹಡದ ಮ್ಯಾಲ ಮತ್ತೊಂದ ಹಡಿಯೋದಕ್ಕ
ಮೂರ್ನಾಲ್ಕ ವರ್ಷ ಇರಬೇಕ ಅಂತರ
ದಷ್ಟಪುಷ್ಟ ಹುಟ್ಟತಾವ ಹುಡಗೋರ ||

ಇಂದಿನ ಬಾಲಕರು ನಾಳಿನ ನಾಗರಿಕರು
ನಾಡಿಗಾಗಿ ನಡಾಕಟ್ಟಿ ನಿಲ್ಲವರಾ
ಇವರಿಂದ ದೇಶದ ಉದ್ಧಾರಾ ||

ಬಗಲಾನ ಕೂಸ ಬಗಲಾಗ ಇರತ ಬೈಕಿ ಸುರು ಆಗತಾವ
ಬಾಯಿ ಕೆಟ್ಟ ಬೇಕಾದ್ದ ತಿನ್ನುವರ
ಹುಣಶಿಕಾಯಿ ಹುಳಿ ಮಜ್ಜಿಗಿ ಹಸಿಖಾರಾ ||
ಕೆಟ್ಟ ಉಷ್ಣ ಬಲಿಷ್ಣಾತಿಂದ ದುಷ್ಟದುರ್ಗುಣ ಹುಡಗೋರ ಹುಟ್ಟಿ
ಭ್ರಷ್ಟರಾಗಿ ನಾಡಮ್ಯಾಲ ತಿರುಗುವರಾ
ರಾಷ್ಟ್ರಕ್ಕೆ ಅಪಕೀರ್ತಿ ತರಾವರಾ ||

ಅತ್ತಿಸೊಸಿ ಬಾಣಂತನಾ ನಡದಿರತೈತಿ ಒಂದೆ ಕ್ಷಣ
ಗಂಡಸರಿಗಿ ಗಂಟ ಬಿದ್ದುವ ಹುಡಗೋರ
ಊಳಗಾ ಮಾಡಿ ಮಾಡಿ ಬಂದೀತಿವಗ ಬ್ಯಾಸರ ||
ದುಡಿದಿದ್ರ ನಿರ್ವಾ ಇಲ್ಲ ಮೊದಲ ಮನಿಯೊಳಗೇನಿಲ್ಲ
ಕಡ್ನಾ ಕಟ್ನಾ ಕೇಳಿದರ ಕೊಡೊದಿಲ್ಲ ಯಾರ
ಆಜು ಬಾಜು ಕೈಬಡದ ನಗವೂವರಾ ||

ನಮ್ಮ ಬಾಳ್ವೆ ಠೀಕ ಇದ್ರ ನಮಗ್ಯಾರ್ಯಾಕ ನಗತಿದ್ರ
ಇಬ್ರು ಒಮ್ಮೆ ಹಡದ ಆತಿ ಇಷ್ಟ ಅಡತಾರ
ನಮಗ ಹಿಂದ ಮುಂದ ಕೊಡಬಾರದೇನ ದೇವರ
ಮನಿಯಾನ ದೇವರನ್ನ ವಿನಯದಿಂದ ಕೇಳಿಕೊಂಡ
ನಿಮಗಾಗಿ ಕುಟುಂಬ ಯೋಜನಾ ತಯ್ಯಾರ
ಅಲ್ಲಿ ಹ್ವಾದ್ರ ಆಗತೇರಿ ಉದ್ಧಾರ ||

**||ಚಾಲ||**

ಡಾಕ್ಟರ ಸಲ್ಲಾ ಪಡಕೊಂಡ್ರ ಅದ್ರಂತೆ ನಡಕೊಂಡ್ರ
ಸುಖಾ ಐತಿ ಮುಂದಾ
ಏನೂ ದೋಕಾ ಇಲ್ಲ ಅದರಿಂದಾ ||

ತಿಳಿಸಿ ಹೇಳತಾರ ಜಳಜಳ ನಿತ್ಯ ವ್ಯಹಾರಕ್ಕ ಸರಳ
ಸಂತತಿ ನಿರೋಧಾ
ನಮ್ಮ ಸಲುವಾಗಿ ಮಾಡ್ಯಾರ ಶೋಧಾ ||

ನಿಮ್ಮದೇನ ಹೋಗೋದಿಲ್ಲ ಗಂಟ ಎಲ್ಲಾ ಪುಕ್ಕಟ್ಟ
ಬತ್ತೆ ಕೊಡಲಾರ ಗಂಡಸರಿಗೆ ಹದಿನೆಂಟ
ಹೆಂಗಸರಿಗಿ ಇಪ್ಪತ್ತೈದಾ

ಹೆಣ್ಣ ಮಕ್ಕಳಿಗಿ ಇಡಸತಾರ ವಂಕಿ ಆರೋಗ್ಯಕ್ಕೆ ಇಲ್ಲ ಧಕ್ಕಿ
ಆಪ್ರೆಶನ್ ಇಬ್ಬರ ಪೈಕಿ ಒಬ್ಬರದಾ ||

ಗರ್ಭಧಾರಣ ಆಗುವದು ಬಂದಾ
ಸದ್ಧೇದ ಪರಿಸ್ಥಿತಿ ತಿದ್ದಿ ಪದ್ಯ ಬರಿತಾನ
ತಿಗಡೊಳ್ಳಿ ಮಾರುತಿ ಸೇವಕ
ಮಲಶೆಟ್ಟಿ ಮರಿಕಲ್ಲನ ಪದಾ ಠೀಕ ||

ಅತಿಯಾದ ಸಂತಾನ ಮಿತಿಗೊಳಿಸಿರೆಂದು
ಹಿತವಾದ ಸಂಗತಿ ಹೇಳುದಕ
ಬಂದೇನ ಇಲ್ಲಿಯತನಕ ||||೩||

*ರಚನೆ:* ಮರಿಕಲ್ಲಕವಿ
*ಕೃತಿ:* ಮರಿಕಲ್ಲಕವಿಯ ಗೀಗೀ ಪದಗಳು

## ೩೪. ಕುಟುಂಬ ಯೋಜನಾ – ೨

**(೧)**

ಎರಡು ಹಡಿರಿ ಮುಂದ ತಡಿರಿ | ಮೀರಿ ಮೂರಾದರ ಬಿಡಿರಿ || ಪ ||

ಭಾರತದಲ್ಲಿ ಹೆಸರಾದ ಶ್ರೀಮಂತರು | ಪಂಡಿತ ಜವಾಹರಲಾಲ ಅವರು |
ಹೆಣ್ಣೊಂದೇ ನಮಗ ಸಾಕು ಅಂದರು | ಅವರೇ ಈಗ ಪ್ರಧಾನಿಯವರು||೧||

ಪಾಂಡುರಾಜಗ ಇಬ್ಬರ್ಹೆಂಡರು | ಇಬ್ಬರ ನಡುವೆ ಮಕ್ಕಳೈವರು |
ಸತ್ಯದಿಂದ ಅವರು ನಡೆದು ತೋರಿಸ್ಯಾರ | ಇನ್ನೂ ಸಾರತಾದ
ಪಾಂಡವರ್ಹೆಸರು ||೨||

ಅದೇ ಗಾಂಧಾರಿ ನೂರು ಹಡೆದರ | ದುಷ್ಟತನದಿ ದುಷ್ಕಾರ್ಯ ಮಾಡ್ಯಾರ |
ಇಂದಿನತನಕ ಸರ್ವರುಗಳತಾರ | ಕೌರವರೆನ್ನುವ ಹೆಸರ ತೆಗೆದರ||೩||

ದಶರಥರಾಜಗ ಮೂರ್ಹೆಂಡಿರು | ಮೂವರ ನಡುವೆ ಮಕ್ಕಳು ನಾಲ್ವರು |
ರಾಮಾಯಣ ಎಂಬ ಕಾವ್ಯ ಬರದಾರ | ಇನ್ನು ಕೇಳತಾದ ರಾಮನ ಹೆಸರ||೪||

ಹಿಂದಿನ ಇತಿಹಾಸ ತೆಗೆದನೋಡಿದರ | ಎರಡು ಮೂರು ಅವರಿಷ್ಟೇ ಹಡದಾರ |
ಹಂದಿಯಂತೆ ಹತ್ತತ್ತು ಹಡದರ | ನಮ್ಮ ನಿಮ್ಮ ಪುರಾಣ ಬರೆಯವರಾರು||೫||

ವಾಲಿ ಶರಣರು ಪದಾ ಮಾಡತಾರ | ಬಸಯ್ಯ ಹಾಡಿ ತೋರಿಸತಾರ |
ನಿಂಗಪ್ಪ ರೇವಣಸಿದ್ಧ ಜೋಡಿ ಇರುವರು | ನಾಲ್ವರು ಎಲ್ಲಾ
ಸಾಲುಟಗಿಯವರು ||೬||

(೨)
ಗಂಡ ಹೆಂಡತಿ ಕೂಡಿ ಮಾತಾಡತಾರ ಹಡೆದಮಕ್ಕಳ ಗತಿ |
ಬಡತನವೆ ಬೆನ್ನ ಹತ್ತೈತ್ತಿ | ಹಡೆದು ಹಡೆದು ನನ್ನ ಶಕ್ತಿ ಕಡಿಮೆಯಾಗಿ
ಟಿ.ಬಿ.ರೋಗ ಆಗೈತಿ | ದುಡಿಯಲಾರದಂತೆ ಮಾಡೈತಿ || ಪ ||

ಎರಡಾದ ನಂತರ ಸಾಕೆಂದರೆ ಕೇಳಲಿಲ್ಲ | ಆರು ಮಕ್ಕಳಿಗೆಲ್ಲ ಹೊಟ್ಟೆ
ತುಂಬ ಅನ್ನ ಇಲ್ಲ |
ದುಡಕೊಂಡು ತಿಂದೇನಂದರ ಮಲಗಲಿಕ್ಕೆ ಜಾಗ ಇಲ್ಲ | ಸಾಕಾಗಿ |
ಸಾಕಾಗಿ ಜೀವ ಸಣ್ಣಾಗಿ ಹೋಗೈತಿ | ಬದುಕುವದು ಹೇಗೆ ಏನಂತಿ |
ಬಡತನವೆ ಬೆನ್ನ ಹತ್ತೈತಿ ||೧||

ಕಡಿಮೆ ಮಕ್ಕಳನ ಹಡೆಯಿರಂತ ಸರಕಾರದವರು ಹೇಳತಾರ |
ಇನ್ನಿಲ್ಲ ಮೂರರ ನಂತರ | ಹೆಚ್ಚು ಮಕ್ಕಳಾಗಿ ಶಿಕ್ಷಣ ದೊರೆಯದಾಗ್ಯಾದ |
ದುರ್ನೀತಿ ಮಾರ್ಗ ತೆರದಾದ ||
ಎರಡಾದರೆ ಅವರು ಶಿಕ್ಷಣ ಪೂರ್ಣ ಪಡೆಯುವರು ಜಾಣರಾಗಿ ಮನೆತನ
ತಾಯಿ ತಂದೆ ಅನ್ನುವರು |
ಸೃಷ್ಟಿಯಲ್ಲಿ ಹುಟ್ಟಿ ಸಂಸಾರ ಸುಖ ಕಂಡರ | ಈ ಜನ್ಮ |
ಈ ಜನ್ಮ ಸಾರ್ಥಕ ಇಂದೆ ಆಗುವದು | ಹಳಹಳಿಸಿದರೇನೈತಿ |
ಬಡತನವೆ ಬೆನ್ನ ಹತ್ತೈತಿ ||೨||

ಅಕ್ಕರತೆಯ ನನ್ನ ಅಕ್ಕ ತಂಗಿಯರೆ ಹೆಚ್ಚು ಹಡೆಯಬೇಡಿರಿ |
ಎರಡಾದ ಬಳಿಕ ಬಿಡಿರಿ || ಹೆಚ್ಚು ಮಕ್ಕಳಾಗಿ ಕಷ್ಟ ಕೊಡುವರು
ಲಕ್ಷಗೊಟ್ಟು ನಡೆಯಿರಿ | ಸರಕಾರದ ನೀತಿ ನೀವು ತಿಳಿಯಿರಿ ||
ಮಕ್ಕಳಾಗದಂತೆ ಶಸ್ತ್ರಕ್ರಿಯೆ ಮಾಡುವರು |
ಊಟೋಪಚಾರಕ ಹಣವಕೊಟ್ಟು ಕಳಿಸುವರು | ಮಿತಸಂತಾನ |
ಮಿತ ಸಂತಾನದ ಲಾಭ ಪಡೆಯಿರಂತ ಹೇಳುವೆ ಕೈ ಮುಗಿಯುತ್ತ |
ವಾಲಿ ಶರಣನ ಪದವ ಕೇಳಂತ ||೩||

ಹತ್ತು ಮಕ್ಕಳ ಹಡೆದು ಗೊತ್ತಿ ಸೋಸುದಕಿಂತ ಮುತ್ತಿನಂಥ
ಮಗು ಬೇಕಾಯ್ತು |
ಕೀರ್ತಿಗೊಂದು ಮಗು ಆರತಿಗೊಂದು ಮಗಳು ಎರಡೇ ಸಾಕು
ಸಾಕಾಯ್ತು ||೧||

ಹತ್ತು ವರ್ಷದ ಹಿಂದ ಮೂವತ್ತು ಕೋಟಿ ಜನ ಈಗ ಅರವತ್ತು
ಕೋಟಿಗೂ ಹೆಚ್ಚಾಯ್ತು |
ಮತ್ತೆ ಹತ್ತು ವರ್ಷ ಮರೆತು ಕುಳಿತರ ನೂರುಕೋಟಿಗೆ ಮುಟ್ಟತಿತ್ತು||೨||
ಭಾರತ ದೇಶದ ಜನನ ಸರಾಸರಿ ಒಂದೂವರೆ ಸೇಕಂದಿಗೊಂದಾಯ್ತು |
ಮೀರಿ ತಾಸಿಗೆ ಎರಡೂವರೆ ಸಾವಿರ ಹಗಲುರಾತ್ರಿ ಹಡಿಯುವದೇ |
ಆಯ್ತು ||೩||

ಅನ್ನ ನೀರು ಹೊನ್ನ ಕೊಡುವ ಭೂದೇವಿಯ ಬೆಳಿಸಲಿಕ್ಕೆ ಬಾರದ ಮಾತು |
ಮಿತ ಸಂತಾನದ ಶಸ್ತ್ರ ಚಿಕಿತ್ಸೆಯು ಜನತೆಯಲ್ಲಿ ತರಬೇಕಾಯ್ತು||೪||

**||ಚಾಲ||**

ಬಹಳ ಹಡೆಯುವ ಕಾಲ ಹಿಂದಿತ್ತು | ಧನ ಧಾನ್ಯ ಹೈನು ಸಂಪತ್ತು||೧||

ಜನಕಡಿಮೆ ಸರ್ವಸುಖ ಇತ್ತು | ಸುಖ ಸಂಸಾರವು ಅನಿಸಿತ್ತು||೨||

**||ಏರು||**

ದುಡಿಯುವದು ಕಡಿಮೆ ಆಯ್ತು ಹಡೆಯುವದು ಹೆಚ್ಚಾಯ್ತು |
ಬಡತನದಿಂದ ಬಳಲುವದಾಯ್ತು||೧ನೆಯ ಚೌಕ||
ನಿಯೋಜಿತ ಸಂಸಾರ ಸುಖ ಸಾಗರದ ಆಧಾರ ಮಿತ ಸಂತಾನವ
ತೆಗೆದಿಹರು |
ಸಿವ್ಹಿಲ್ ಸರ್ಜನರೆಲ್ಲ ಶಿಬಿರ ತೆಗೆಯುತ ಶಸ್ತ್ರ ಚಿಕಿತ್ಸೆಯ ಮಾಡುವರು||೧||

ಆಪರೇಷನ್ ಅಂದರ ಅಂಜುವ ಕಾರಣವಿಲ್ಲ ಮಕ್ಕಳಾಗದಂತೆ ಮಾಡುವರು |
ಗರ್ಭದಿ ಬೀಜಾಣು ಸೇರಿಕೊಳ್ಳದ್ಹಾಂಗ ಸೂಕ್ಷ್ಮನಳಿಕೆ ಕಟ್ ಮಾಡುವರು||೨||

ಆಪರೇಶನ್ ಆದಮೇಲೆ ಮೂರು ತಿಂಗಳ ಸತಿಪತಿ ಸಂಬಂಧ ಬಿಡಬೇಕರಿ |
ಲೈಂಗಿಕ ಸುಖಕೆ ಮುಂದ ಹಾನಿಯಿಲ್ಲ ಮಾಡಿ ಮೊದಲಿನಾಗ ಸಂಸಾರ||೩||

ವಿಚಾರ ಮಾಡಿ ದಂಪತಿಗಳೀರ್ವರಲ್ಲಿ ಒಬ್ಬರು ಆಪರೇಶನ್ ಮಾಡಿಕೊಂಡರೆ |
ವೀರ್ಯ ಕರಗದೆ ರಕ್ತ ಹೆಚ್ಚಾಗಿ ಆಯುಷ್ಯ ವೃದ್ಧಿಯಾಗುವದು||೪||

**||ಚಾಲ||**

ನಾಲ್ವತ್ತು ಹನಿಗೂಡಿ ರಕ್ತ | ವೀರ್ಯದ ಒಂದು ಹನಿಯಂತೆ||೧||

ವೀರ್ಯಾಣು ಕಟ್ ಮಾಡುವರು | ಹೆಣ್ಣಿಗಿಂತ ಗಂಡಿನದೆ ಬಲು ಹಗುರು||೨||

**|ಏರು||**

ಮಿತ ಸಂತಾನ ಅತ್ಯಂತ ಸುಖವೆಂದು ವಾಲಿ ಶರಣರು ಸಾರಿ
ಹೇಳುವರು   ||೨ನೆಯ ಚೌಕ||

**(೪)**
ಮಿತಿಮೀರಿದ ಅತಿಸಂತಾನದ ಸ್ಥಿತಿಗತಿಯನು ನೋಡೂನು ಬಾ |
ಪ್ರತಿಯೊಂದು ಹಳ್ಳಿಗಿ ಹೋಗೂನು ಬಾ | ಜನತೆಯ ಸುಖ ದುಃಖ
ಕೇಳೂನು ಬಾ  ||ಪ||

ಅತಿವೃಷ್ಟಿ ಅನಾವೃಷ್ಟಿಯ ಕಾಲ | ಬಿತ್ತಿದಷ್ಟು ಸಹ ಬರುವದಿಲ್ಲ ಕಾಳ |
ಸತಿಪತಿಗಳಿಗೇ ಸಾಲುವದಿಲ್ಲ | ಐದಾರು ಹಡೆದರ ಅವರಿಗೆ ಬೇಕಲ್ಲ||೧||

ಹಡೆದು ನಿಮ್ಮ ಶರೀರವೆಲ್ಲ | ಸಡಿಲ ಆಗಿ ರಕ್ತ ಉಳಿಯುವುದಿಲ್ಲ |
ನುಡಿಯಲು ಶಕ್ತಿ ಉಳಿಯುವದಿಲ್ಲ | ದುಡಿಯದೆ ಹೊಟ್ಟೆ ತುಂಬುವದಿಲ್ಲ||೨||

ಶಕ್ತಿ ಉಳಿಯುವುದಿಲ್ಲ ಮಕ್ಕಳು ಹೆಚ್ಚಾದರ | ದಿಕ್ಕು ಇರುವದಿಲ್ಲ ಬಡಿದು ಹೇಳಲು |
ಸಿಕ್ಕ್ಯಾಂಗ ಸೊಕ್ಕಿಲೆ ಕುಡಿದು ತಿರಗತಾರ | ರೊಕ್ಕ ಆಡಿ ಆಸ್ತಿ ಹಾಳ ಮಾಡುವರು||೩||

ನೀವೆ ನೋಡತೀರಿ ಜನರ ಅವಸರ | ಮಾಡಿ ನೋಡ್ರಿ ಮನದೊಳಗ ವಿಚಾರ |
ತಿಳಿದು ತಿಳಿದು ನೀವು ಬಹಳ ಹಡೆದರ | ಮುಂದಿನ ಗೋಳಿಗಿ ನೀವೆ
ಹೊಣೆಗಾರ ||೪||

ಮಿತ ಸಂತಾಸ ಸಿರಿಯ ಆಗರ | ಅತೀ ಅಂದರ ಎರಡಿಲ್ಲ ಮೂರ |
ಸತಿ ಪತಿಯರು ನೀವು ಇಬ್ಬರು | ಅತೀ ಪ್ರೀತಿ ಮಕ್ಕಳೆರಡೇ ಇದ್ದರ||೫||

ಹಡೆಯಲು  ನಿಮಗ ಸಾಕೆನಿಸಿದರ | ದಾರಿ ಹೇಳತಾರ ಸರಕಾರದವರು |
ಎರಡು ಮೂರು ತಿಂಗಳ ಆಗಿ ಇದ್ದರ | ಗರ್ಭಪಾತ ಸಹ ಮಾಡಿ ಬಿಡುವರು||೬||

ಇಷ್ಟವಿಲ್ಲದೆ ನೀವು ಹೊಟ್ಟಿಲಾದರ | ಕೆಟ್ಟ ಅನಿಸಿ ಗರ್ಭಪಾತ ಬಯಸಿದರ |
ಕೊಟ್ಟು ಗುಳಿಗಿ ಮುದಕಿ ಹಳ್ಳಿ ವೈದ್ಯರು | ಕಟ್ಟಕಡೆಗೆ ನಿಮ್ಮ ಲಾಗ
ಹೊಡಸತಾರ ||೭||

ರಾಷ್ಟ್ರಕೆ ಕಡಿಮೆ ಹುಟ್ಟುದು ಬೇಕು | ಇದ್ದ ಜನಕೆ ಸುಖ ಅದರ ಸಾಕು |
ಸಾಲುಟಗಿಯವರು ನಿಂತಾರ ಪ್ರಚಾರಕ | ಬಿಚ್ಚಿ ಹೇಳತಾರ ತಿಳಿಮಾಡಿ ಚೊಕ್ಕ||೮||

---

**ನೇದ – ನೆಯ್ದು, ಓದ – ಒಯ್ದು, ತುಡುಗತನ – ಕಳ್ಳತನ**

*ರಚನೆ:*  ಶರಣಪ್ಪ ವಾಲಿ
*ಕೃತಿ:*  ಶರಣಸ್ಮೃತಿ

# ೩೫. ಪಾನನಿರೋಧದ ಲಾವಣಿ

ಗದ್ದಲ ಮಾಡಬ್ಯಾಡ್ರಿ ವೃದ್ಧ ತರುಣರೆಲ್ಲ ನೀವು ಸ್ಥಬ್ಧಾಗಿ
ಕೇಳಬೇಕು ಸಂಪೂರ್ಣ
ಶುದ್ಧವಾದ ಮನಸಿನಿಂದ ಮದ್ಯಪಾನವನು ಬಿಟ್ಟು ಬುದ್ಧಿವಂತರಾಗಬೇಕು
ಎಲ್ಲ ಜನಾ
ಖೋಡಿ ಸರಾಯದ ಸಂಗ ಮಾಡುವದಷ್ಟೇ ತಡ ಪಾಡಾಗಿ ಕಲಿಸುವದು
ತುಡಗತನ
ಹೆಂಡರ ಮಕ್ಕಳನ ಬಿಡಿಸಿ ಖಂಡಾ ತಿನ್ನಲಿಕ್ಕೆ ಹಚ್ಚಿ ಖಂಡಿತ
ಮಾಡತದ ಅಪಮಾನ
ಒಟ್ಟಿಗೇಳುದೇನೈತಿ ದುಷ್ಟಗುಣದ ಮೆಟ್ಟ ಇದು ಬಿಟ್ಟು
ನಾವು ದೂರ ಇರಬೇಕು ಅದನ
ಬೆರಿಕಿ ಬಹಳ ಬ್ರಿಟಿಶರು ಬ್ಯಾಡ ಅಂತ ಹೇಳಲಿಲ್ಲ ನೋಡಿ
ನೋಡಿ ನಗತಿದ್ರು ಕುಡಕರನ
ನೀಚ ಸರಾಯದ ಚಟ ಹಚ್ಚಿ ನಮಗ ಹುಚ್ಚ ಹಿಡಿಸಿ ಹೆಚ್ಚ
ಮಾಡಿಕೊಂಡ್ರು ತಮ್ಮ ಉತ್ಪನ್ನ
ಸಿಂದಿ ಸರಾಯದಿಂದ ಬರುವ ಒಂಭತ್ತು ಕೋಟಿ ರೂಪಾಯಿ
ಚೀಲಾ ತುಂಬಿ ತುಂಬಿ ಒಯ್ಯುತ್ತಿದ್ರು ಎಲ್ಲ ಹಣ

||ಚ್ಯಾಲ||

ಹಿಂದುಸ್ಥಾನ ಬಂಧುಗಳು ದುಃಖ ಪಡೆಯುವ ರೊಕ್ಕ ಎಲ್ಲ ಬಳದ್ಹೋತಿ
ಬೇರೆಯವರ ರಾಜ್ಯಾಡಳಿತೆಯಲ್ಲಿ ಹಿಂಗಾತಿ
ಹಿಂದುಸ್ಥಾನ ಎಲ್ಲಾ ಹಾಳುಮಾಡಿ ಹೋದರು ಓಡಿ
ಅತಿ ಬಹುಶಾಂತಿ ಈಗ ಜನತಾ ಸರಕಾರಾಗಿ ಸ್ವಾತಂತ್ರ್ಯ ಬಂದಿತ ಪೂರ್ತಿ
ದುಷ್ಟವ್ಯಸನಗಳೆಲ್ಲ ಅಳಿದು ನಡೆಯಬೇಕು ತಿಳಿದು ಮುಳಗಬೇಕ ಕ್ರಾಂತಿ
ಬಂದ ಸ್ವಾತಂತ್ರ್ಯ ಸ್ಥಿರವಾಗಿ ನಿಲ್ಲುವದು ನಮಗ ಇಲ್ಲ ಚಿಂತಿ

||ಏರು||

ಜನತಾ ಸರಕಾರಂದಮ್ಯಾಲ ಜನರೆಲ್ಲ ಮುಂದೆ ಬಂದು
ಮನಮುಟ್ಟಿ ಕಲಿಯಬೇಕು ಶಾಣೇತನ ಶುದ್ಧವಾದ ಮನಸಿನಿಂದ
ಎಷ್ಟ ಹೇಳಿದರ ದುಷ್ಟ ಚಟ ಬಿಡದ ಹೊರ್ತು ರಾಷ್ಟ್ರ
ಹ್ಯಾಂಗ ಆಗಬೇಕು ಉದ್ಧಾರ
ರಾಷ್ಟ್ರವೆಂಬು ಅಭಿಮಾನ ಹುಟ್ಟಬೇಕು ಎಲ್ಲರಲ್ಲಿ
ಗಟ್ಟಿಯಾಗಿ ನಿಲ್ಲುವದು ಸ್ವತಂತರ
ಮದ್ಯಪಾನದಿಂದ ಮೊದಲಿದ್ದ ಜ್ಞಾನ ಎಲ್ಲಾ ಹೋಗಿ

ಬುದ್ಧಿ ಗೇಡಿಯಾಗತೀರಿ ಇಲ್ಲ ಖಬರ
ಕುಡುಕತನದಿಂದ ನಾವು ನಡಕ ಬಿದ್ದು ಸಾವುತೇವಿ ದಡಕ್ಕ
ಹತ್ತೂದಿಲ್ಲ ನಮ್ಮ ವಿಚಾರ
ಪಂಡಿತ ನೆಹರು ಸರಕಾರ ಕಂಡು ಹಿಡಿದು ಇದನೆಲ್ಲ
ಖಂಡತುಂಡ ಹೇಳಿದಾರ ಕಾಯ್ದೆಸೀರ
ಫಾಯ್ದೆ ನಮಗ ಬ್ಯಾಡ ಅಂತ ಒಂಬತ್ತ ಕೋಟಿ
ಉತ್ಪನ್ನಕ ನೀರ ಹಣಿಸಿ ನಿಂತಾರ ಪಂಡಿತರ
ಪಾನಪ್ರತಿಬಂಧ ಆಗೂತನ ಸುಖಾ ಇಲ್ಲ ಜನಕ ಎಂಬುವ ಮಾತ
ನಿರ್ಣಯಮಾಡಿಕೊಂಡು ಪ್ರಚಾರ ನಡಿಸ್ಯಾರ ಸತತ
ಸೌಮ್ಯ ರೀತಿಯಿಂದ ಹಗಲೆಲ್ಲ ಹೇಳತಾರ ಮೊದಲ ಕುಡಿಬ್ಯಾಡರೆಂತ
ಕೇಳದವರ್ನ ಹಿಡದ ಮಾಡತಾರ ಬಂದೋಬಸ್ತ
ಆಗಬುದ್ಧಿ ಬರುವದು ಎಲ್ಲರಿಗಿ ಸರಾಯಿ ಕೂಡ ಕರಗಿ
ಆಗತದ ಶಾಂತಿ ಜ್ಞಾನ ಉದಯವಾಗಿ

||ಏರು||

ಸ್ವಲ್ಪ ಹೇಳಿದರೆ ಸಾಕ ಗಪ್ಪಚಿಪ್ಪ ಮಾಡಿದಂಥ ತಪ್ಪು
ಒಪ್ಪಿಕೊಂಡು ಬಿಡಬೇಕ ವ್ಯಸನ
ಇಚ್ಛೆಯಿಂದ ಸುರಾದೇವಿ ಮೆಚ್ಚಿದವನ ಸ್ವಚ್ಛ ಮಾಡಿ
ಹಚ್ಚತಾಳ ಹೊಲಮನಿ ಚಕ್ಕಬಂದಿಗಿ
ಬೋಳ್ಸಿ ಮತ್ತ ಮದ್ದ ಹಾಕಿ ಮುಂದೆ ಹುಚ್ಚ ಹಿಡಿಸಿ
ಕೊಡತಾಳ ಕಸಬರಿಗಿ
ಮರೆಯದ ಮಾತಲ್ಲ ಸುರೆವ್ವನ ವಂಶಾವಳಿ
ಬರದಿಟ್ಟುಕೊಳ್ಳರೆಪ್ಪ ಹಸನಾಗಿ
ಸುಳ್ಳ-ಕಳ್ಳರೆಂಬುವಂಥ ಮಕ್ಕಳನ್ನು ಹಡದಾಳು
ತಳ್ಳಿಕೋರರಿಗೆ ಆಗಬೇಕು ತಂಗಿ
ಪರದೇಶಿಯರ ಸಹಾಯದಿಂದ ಟೋಳಿಕಟ್ಟಿ ದೇಶದೊಳು
ದಂಗೆ ಎಬ್ಬಿಸಿ ಮಾಡತಿದ್ದಳ ಕೊಲೆ ಸುಲಿಗಿ
ಕಾಂಗ್ರೆಸ್ ಸರಕಾರ ಬಂದು ಕಂಡು ಈಕಿ ಅತ್ಯಾಚಾರ
ಬೇಡ ಅಂತ ಹೇಳತಾರ ಈಕಿ ಸಲಗಿ

||ಚ್ಯಾಲ||

ದೇಶ ಹಾಳಾಗತದ ಇವಳಿಂದ ಬಿಗವಿಗ್ಹಾಕಿ ತಂದ ಒಯ್ಯಬೇಕ ದೂರ
ಹೊರಗ ಹಾಕರೆಂತಾರ ನಮ್ಮ ನೆಹರು ಸರಕಾರ
ಸುರಾದೇವಿ ಭಕ್ತರಿಗೆ ಹಾದಿ ಹೇಳತಾರ ಬದ್ಧಿ ಮಾಡಿ ಜೋರದಾರ
ಸುರಾಪಾನಬಿಟ್ಟು ನೀವು ಆಗಬೇಕ ಉದ್ಧಾರ

ಶಾಣ್ಯಾರಾಗಿ ದೇಶಕ ಹಿತ ಮಾಡುದಕ ಸ್ವತಃ ದುಡಿಯರೆಲ್ಲರ
ನಡಾಕಟ್ಟಿ ನಿಲ್ಲಿರಿ ರಾಷ್ಟ್ರೋನ್ನತಿಗೋಸ್ಕರ

**||ಏರು||**

ಕ್ಷೋಣಿಯೊಳು ಹುಲಕುಂದ ಜಾಣ ಹಿರೇಮಠೇಶನು
ಪಾನನಿರೋಧಕ್ಕ ಮಾಡಿದ ಕವನ

**ನೇದ – ನೆಯ್ದು, ಓದ – ಒಯ್ದು, ತುಡುಗತನ – ಕಳ್ಳತನ**
**ಸ್ವತಂತರ – ಸ್ವತಂತ್ರ, ಖಬರ – ಎಚ್ಚರ, ನಡಕ – ನಡುವೆ**

*ಕರ್ತೃ:* ಶಿವಲಿಂಗಸ್ವಾಮಿ ಹಿರೇಮಠ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೩೬. ಪಾನನಿರೋಧ

ಅರಿವಿನ ಜಲ್ಮ ಅರಿತವ ಬ್ರಹ್ಮ ಅರಿಯದವಗತಿ ಬಿಕ್ಕಟ್ಟ
ಸುರಾಪಾನದಿಂದ ಶರೀರ ಕೆಡುವದು ಸಿರಿಯ ಸಂಪತ್ತು ಆಗುದು ನಷ್ಟ

ಚಿತ್ತವಿಕಾರವಾಗಿ ಉತ್ತಮರೆಂಬುವ ನಾಮಶೇಷ ಉಳಿದಿಲ್ಲ ಜನರ
ಹೆತ್ತ ತಾಯಿ ಹೆಂಡರ ಮಕ್ಕಳಿಗೆ ಭಿಕ್ಷಾಪಾತ್ರೆ ಕೊಡುವದು ಪೂರ

ಕುಡದ ಬಂದವರ್‍ನ ತಡವಿ ನೋಡಿದರ ದೃಢವಾಗಿ ಕೊಡುವರ ತಕರಾರ
ಒಡವಿ-ವಸ್ತ ಒತ್ತೆ ಇಡತಾರ ಕಣಗಂಡ ಮಡದಿ ಕೊರಳಾನ ಮಂಗಳಸೂತ್ರ

ದೇವಿಪುರಾಣ ಓದಿ ಭಾಮನ ಮಾಡತಾರ ನಾಮ ಮುಕ್ತಿಪದಕ್ಹೊಂದದವರ
ಹ್ಯಾವಕ್ಕಾಗಿ ತಮ್ಮ ಜೀವನ ಖಬರಿಲ್ಲದ ಕುಡದ ಮಾಡತಾರ ಎತ್ತಾರ

**||ಚ್ಯಾಲ||**

ಸಿಂದಿ ಶರೆ ಅಪು ಸೇವನ
ಮಂದಿಯೊಳಗ ಮಾಡತಾವ ಅಪಮಾನ
ಚಹ ಕಾಫಿ ಗಾಂಜಿ ವ್ಯಸನ
ದೇಹಮಾಡತಾವ ಬಾಳ ಕ್ಷೀಣ

**||ಏರು||**

ಪರಪೀಡೆ ಪರನಿಂದೆ ಸ್ಥಿರವಾಗಿ ನೆಲೆಗೊಂಡು ಗುರು
ಹಿರಿಯರ ದರಜಿಲ್ಲ ಏಟ ||೧||

ಇಷ್ಟ ಚಟದೊಳಗ ಕೆಟ್ಟ ಬಾಳನೋಡ್ರಿ ಚುಟ್ಟ ಸಿಗರೇಟು ಸೇದುವದ
ಬಿಟ್ಟ ಬಿಡಿರಿ ಆಡು ಮುಟ್ಟುದಿಲ್ಲ ಅದನ ಬತ್ತಿ ಒಳಗ ಹಾಕಿ ಯಾಕ ಸೇದುವದ
ಊಟದ ರುಚಿ ಹೋಗಿ ನೋಟಗುಂದಿ ಪೊಡುಪೋಟ ಮುಂದ ಆಗುವದ
ಘಟ್ಟಿಕಫ ಲೊಟ್ಟಿ ಲೊಟ್ಟವುಗಳಕೂಡಿ ಕೆಟ್ಟ ರೋಗ ಉತ್ಪನ್ನವಾಗುವದ
ಆತ್ಮ ಇರುವ ಸ್ಥಾನ ಸ್ವಚ್ಛ ಇದ್ದರೆ ಅಂವಗ ಆಗುವದ ಆನಂದ
ಆನಂದದೊಳಗ ಆತ್ಮ ಇದ್ದರ ಅಲ್ಲಿಂದ ಶಾಂತಿ ಉತ್ಪನ್ನವಾಗುವದ

**||ಚ್ಯಾಲ||**

ಶಾಂತಿಯಿಂದ ಸರ್ವೆಲ್ಲ ಅಧೀನ
ಅಂತಃಕರಣ ಶುದ್ಧ ಆಗತದ ಪೂರ್ಣ
ಅಂತಃಕರಣ ಶುದ್ಧ ಆದವನ
ಅವನೇ ಲೋಕ ಪೂಜ್ಯನಾಗುವನ

**||ಏರು||**

ಸರ್ವರ ಶರೀರದಿ ಪರಮನು ಇರುವನು ಮರೆಯಾಗಿ ತೋರದೆ
ತನು ಮೆಟ್ಟ ||೨||

ಪ್ರಾಣರಕ್ಷಕ ಅನ್ನ ನೀರ ಬೇಕು ಇವೇ ಮನುಷ್ಯನಿಗೆ ಚಟ
ಉಳಕಿ ಚಟ ಬಿಟ್ರ ಉಳಿಯತತಿ ಅನ್ನಾ ಬಿಟ್ರ ಹೋಗತೈತಿ ಜೀವ
ಆತ್ಮಜ್ಞಾನದಿಂದ ಅದನ್ನಾದರೂ ಬಿಟ್ಟಾರ ಸಾಧುಗಳಾಗಿ ಸೇರ್ಯಾರ ಬೆಟ್ಟ
ಸಾಧುಗಳು ಇದಕ ಬಾದ ಶರೀರ ಅಂತ ಭೇದಮಾಡಿ ಹೇಳುವರು ಸ್ಪಷ್ಟ
ಬೇಧ ಅಲ್ಲ ತತ್ವದ ಹಾದಿ ತಿಳಕೊಳ್ಳಾಕ ಸಾಧನಾಗೇತಿ ಇದ ಮುಕ್ಕಟ್ಟ

**||ಚ್ಯಾಲ||**

ತಿಳಕೋಳ ಬಿಡಿರಿ ಅವಗುಣ
ಸುಖ ದೊರಿತದ ಸಂಪೂರ್ಣ
ಸಿಂದಿ ಶರೆದೊಳಗಿಲ್ಲ ಬ್ರಹ್ಮಜ್ಞಾನ
ಮಂದಿಯೊಳಗ ಮಾಡತಾವ ಅಪಮಾನ

**||ಏರು||**

ಧರೆಯೊಳು ಹುಲಗುಂದ ದೊರಿ ಭೀಮಸಿಂಗನ ಕವಿಯೊಳು ಕಸರಿಲ್ಲ
ಏಟೇಟ ||೩||

*ರಚನೆ :* ಹುಲಕುಂದ ಭೀಮಕವಿ

*ಕೃತಿ :* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೩೭. ಖಾದಿ ಪ್ರಚಾರದ ಲಾವಣಿ

ಮೂಲ ಮಾತು ನಿಮಗ ಕಾಲಬಿದ್ದ ಹೇಳತೇನಿ
ಕೇಳಿಕೊಂಡು ನಡಿಬೇಕ್ರಿ ಸರ್ವಜನ
ದೇಶದಭಿಮಾನಕ್ಕಾಗಿ ತ್ರಾಸ ಆದರೂ ಚಿಂತಿಯಿಲ್ಲ
ಮೀಸಲಿದ್ದ ಖಾದಿಯ ವಸ್ತ್ರವನ ಧರಿಸಿರಿ ಇನ್ನ
ಮೂವತ್ತೇಳು ಕೋಟಿ ಮಂದಿ ಇಂದ
ಖಾದಿ ಧರಿಸಿದರ ಭರತಖಂಡ ಆಗತೈತಿ ಸ್ವಾಧೀನ
ಗೋಳಾಡಿ ಇಂಗ್ಲೀಷರು ಹಾಳಾಗಿ ಹೋಗತಾರ
ಕೂಳ ಇಲ್ಲದ ಸಾಯತಾರ ಗಿರಣಿ ಜನ / ಇಲ್ಲ ಅನಮಾನ

ಗಿರಣಿ ಸಹಾಯದಿಂದ ನಿಮಗ ವರ್ಣಿಸಲಿಕ್ಕೆ
ಬಾರದಂಥ ಅರಿವೆ ನೆಯ್ಯಿತಾರ ಇಂಗ್ಲೀಷ ಜನ
ಅಗ್ಗದಿಂದ ಅರಿವೆ ಮಾರಿ ಜಗ್ಗಿ ಹಣ ಒಯ್ಯಿತಾರ
ನುಗ್ಗ ಮಾಡಿ ಬಿಟ್ಟಾರಲ್ಲೊ ಹಿಂದುಸ್ಥಾನ / ಉಳಿಯಲಿಲ್ಲ ಏನ

ಅರಿವೆ ಮಾರಿ ನಿಮ್ಮಿಂದ ಅರವತ್ತು ಕೋಟಿ ಒಯ್ಯಿತಾರ
ಅರುವಗೆಟ್ಟ ಕೂತಿರೆಪ್ಪ ಎಲ್ಲ ಜನ
ಜಂತ್ರ ತಿರುವಿ ನೀವೆಲ್ಲರು ಸ್ವಂತ ನೂಲ ನೂತರ
ನಿಂತ ಹೊಯ್ಯಿಕೋತಾರ ಪರದೇಶಿ ಜನ / ಸಿಗಲಿಲ್ಲ ಅನ್ನ

ನಾಚಕಿಲ್ಲದವರು ನೀವು ನಾಡಿಗೆ ದೊಡ್ಡವರಪ್ಪ
ಹೇಸವಲ್ಲದ್ಯಾಕ ಹೇಳ್ರೋ ನಿಮ್ಮ ಮನ
ದೇಶಾಭಿಮಾನ ಬಿಟ್ಟ ಖಾಸ ದ್ರೋಹಿಗಳ ಅರಿವೆ
ಬ್ಯಾಸರಿಲ್ಲದ ತೊಡತೀರಲ್ಲೊ ಎಲ್ಲ ಜನ / ಇಲ್ಲ ಸುಜ್ಞಾನ

ಜ್ಞಾನದಿಂದ ನಿಮ್ಮಲ್ಲಿಯ ಹೀನ ಗುಣ ತೆಗೆದು ಹಾಕಿ
ಮಾನವಂತರಾಗಿ ಖಾದಿ ವಸ್ತ್ರವನ
ಶ್ರೇಷ್ಠ ಅಂತ ಧರಿಸಿದರ ಸಾಷ್ಟಾಂಗ ಹಾಕತೇನಿ
ಕೋಟ್ಯಾವಧಿ ರೈತರ ಉಪಜೀವನ / ಆಗತತಿರಣ್ಣ

**||ಚ್ಯಾಲ||**

ರೈತರ ಹಿತದಗೋಸ್ಕರ ಖಾದಿ ಪ್ರಚಾರ
ಚಳವಳಿ ಮಾಡುವರ ಕಾಂಗ್ರೆಸ್ ಜನ
ಅವರು ಹೇಳಿದ್ಹಂಗ ನೀವು ಕೇಳಿಕೊಂಡು ನಡಿರಿನ್ನ
ಬಡತನದಿಂದ ಬಳಲೂರ ರೈತ ಜನರ ಕಷ್ಟ ಸೋಸೂರ ಹೊಟ್ಟೆಗಿಲ್ಲ ಅನ್ನ
ಸರಕಾರದ ಜನರು ತೆರೆದ ನೋಡವಲ್ಲರ ಕಣ್ಣ
ಸತ್ಯ ಶಾಂತಿ ತತ್ವಬೋಧಿಸುವರು ಹುಟ್ಟಿ ಬಂದರೆ
ತೊಟ್ಟ ಅವತಾರ ಗಾಂಧಿ ಭಗವಾನ
ಅನ್ನಹಾಕಿ ರೈತರನ್ನ ಸಾಕಿ ಸಲವುತಾನ ಪೂರ್ಣ

||ಏರು||

ಅಜ್ಜ ಗಾಂಧಿ ಮಾತಿನಂತೆ ಸಜ್ಜಾಗಿ ನಡೆದರ
ಲಗ್ಗ ಬಗ್ಗಬಡುತಾನ ದುಷ್ಟರನ||೧||

ಒಂದೇ ಮನಸ್ಸಿನಿಂದ ಕೂತ ವಂದೇ ಮಾತರಂ ಅನ್ನುತ
ಚಂದದಿಂದ ತಿರುವಿರೆವ್ವ ಜಂತ್ರವನ

ಜಂತ್ರದ ಅರಿವೆ ಉಟ್ಟ ತೊಟ್ಟ ದೇಶೀ ಹಸರಬಳಿ ಇಟ್ಟ
ಸ್ವಂತ ಹಿಂದುದೇಶದ ಅಭಿಮಾನ / ಹಿಡಿರೆವ್ವ ಇನ್ನ

ಒಂದುವರಿ ತಿಂಗಳ ನೀವು ಒಂದೇ ಮನಸ್ಸಿನಿಂದ ಕೂತು
ಚಂದದಿಂದ ಅರೆಯಿರೆವ್ವ ಹತ್ತಿಯನ
ಬೆಸೆಕಟ್ಟಿ ನೀವೆಲ್ಲರು ಕುಸಿಲಿಂದ ಕುತಗೊಂಡ
ಕಸರಿಲ್ಲದ ಹೊಡದ ಅರಳಿಯನ / ಹಾಕರಿ ಹಂಜಿಯನ

ಇಷ್ಟೆಲ್ಲ ಕೆಲಸ ನೀವು ಕಷ್ಟಪಟ್ಟು ಮಾಡಿದರ
ಶ್ರೇಷ್ಠ ಆಗತತಿ ನಿಮ್ಮ ಮನೆತನ
ಸಾಲ ಹರದ ನೀವೆಲ್ಲಾರು ಹಾಲು-ಬಾನ ಉಣತಿರಿ
ಖಾಲಿ ಕುಂಡ್ರ ಬ್ಯಾಡಿರವ್ವ ಎಲ್ಲ ಜನ / ಸಿಗತೈತಿ ಹಣ

ಹಣ ಇಲ್ಲದಕ್ಕ ನೀವು ಹೆಣದಂಗ ಕಾಣತೀರಿ
ಕೊರಳಾನ ಬಂಗಾರ ಸಾಮಾನ
ಒತ್ತೆ ಇಟ್ಟ ನೀವೆಲ್ಲರು ಕಟ್ಟತೀರ ಕರಿಮಣಿ
ನಷ್ಟಮಾಡಿ ಬಿಟ್ಟೆರೆವ್ವ ಮನಿತಾನ / ಎಂತ ದಡ್ಡತನ

ಶಾಂತಿಯಿಂದ ಶ್ಯಾಣ್ಯಾರಾಗಿ ಭ್ರಾಂತಿ ಬಿಟ್ಟ ಕೇಳಬೇಕ
ಸತ್ಯವಂತ ಮಹಾತ್ಮರ ವಚನವನ

ಬಂಗಾರೇನು ಕಮ್ಮಿಯಿಲ್ಲ ಬಾಳ ದಿವಸ ಹೋಗುದಿಲ್ಲ
ಹೇಳಿದ್ಹಂಗ ಕೇಳಿದರ ಎಲ್ಲ ಜನ / ಸಿಗತತಿ ಪುನಃ

||ಚ್ಯಾಲ||

ಬಂಗಾರದಿಂದ ಶೃಂಗಾರ ಮೊದಲಿನವರ ಜಂತ್ರ ತಿರವಿ ದಿನ
ಬಂಗಾರ ಘಳಿಸಿ ಮಾಡಿಸಿಕೊಂಡಿದ್ದರ ಸಾಮಾನ
ಕೊಡಿ ಅರವಿ ಅಂತ ತೊಡತಿದ್ರ ನೂಲ ತಗಿತಿದ್ರ ರೂಪಾಯಿ ಘಳಸತಿದ್ರ
ಮೊದಲಿನ ಜನ ಹಿಡಿರೆಂತ ಬಿರಾಡಕ್ಕ ತೆಗೆದುಕೊಡತ್ತಿದ್ರ ಹಣ
ಈಗಿನವರು ಚೈನಿ ಮಾಡತರ ಬೈತಲಿ ತಗಿತಾರ
ಎಣ್ಣಿ ಹಚ್ಚಿ ದಿನ ಅಳಗಾಲ ಬಡದರೂ ಉಳಿಯಲಿಲ್ಲ ಉತ್ಪನ್ನ

|ಏರು||

ಚರಖಾ ತಿರವಿ ನೀವೆಲ್ಲಾರು ದೊರಕಿಸಬೇಕ ಉತ್ಪನ್ನ
ತರಕಮಾಡಿ ಬಿಡರೆವ್ವ ಚೈನಿ ಗುಣ||೨||

ಇಷ್ಟಲ್ಲ ಕೇಳಿ ನೀವು ನಿಷ್ಠಾದಿಂದ ನಡೆದರ
ಶ್ರೇಷ್ಠವಾಗತೈತಿ ನಮ್ಮ ಹಿಂದುಸ್ಥಾನ
ಯಾವದೇನು ಕಡಮಿಯಿಲ್ಲ ಎರಡನೇಯವರು ಬೇಕಾಗಿಲ್ಲ
ಸ್ವಾವಲಂಬಿಯಾಗಿ ನಮ್ಮ ಎಲ್ಲ ಜನ / ದುಡಿಯಬೇಕು ದಿನ

ರಾಟಿ ಮೇಟಿ ಉದ್ಯೋಗ ನೀವು ರಾತ್ರಿ ಹಗಲ ನಡಿಸಿದರ
ಖಾತ್ರಿಯಿಂದ ಹೋಗತತಿ ಬಡತನ
ಕಂಬಾರ ಬಡಿಗೇರ ಪಿಂಜಾರ ನೇಕಾರ
ತಟಗಾರ ಬಣಗಾರ ಉಪಜೀವನ / ಸಾಗತತಿ ದಿನ

ಖಾದಿಕೇಂದ್ರ ಗ್ರಾಮೋದ್ಯೋಗ ಚರಖಾ ಸಂಘ
ಮೊದಲ ಮಾಡಿ ಎಷ್ಟೋ ಸಂಘ ಮಾಡಿದಾರ ಸ್ಥಾಪನ
ಪೊಡವಿಯೊಳಗಿನ ಕೂಲಿಕಾರ ದೃಢದಿಂದ
ಇದರೊಳಗ ದುಡದರ ಪ್ರತಿದಿನ / ಸಿಗತತಿ ಹಣ

ಹನ್ನೊಂದು ಸಾವಿರದ ಐದನೂರ
ಎಂಬತ್ತೊಂದ ಮಂದಿ ನೇಕಾರ ಜನ
ಒಂದ ಲಕ್ಷ ನಾಲ್ವತೊಂಭತ್ತು ಸಾವಿರದ
ಒಂದನೂರ ಇಪ್ಪತ್ತೊಂಬತ್ತು ಜನ / ನೂಲತಾರ ದಿನ

ಹತ್ತುಲಕ್ಷ ಹತ್ತು ಸಾವಿರದ ಒಂಬೈನೂರಾ ತೊಂಭತ್ತೇಳು
ವರ್ಷ ಉಳಸತಾರ ಇಷ್ಟ ಹಣ
ಕೋಟಿ ಮಂದಿ ನೂಲವರು ತೊಂಬತ್ತ ಲಕ್ಷನೆಯ್ಯುವರು
ಬಿಟ್ಟುಬಿಡದೆ ದುಡದರ ಎಷ್ಟೋ ಹಣ / ಉಳುತತಿ ದಿನ

**||ಚಾಲ||**

ಕಷ್ಟ ಪಟ್ಟ ನಿತ್ಯ ದುಡಿಬೇಕ ಕೈಕೆಲಸದಕ
ನೂಲ ತೆಗಿಬೇಕ ಖಾದಿ
ನೆಯ್ದು ದಿನಾ ಚರಖಾ ಸಂಘಕ್ಕೆ
ಓದ ಕೊಡಬೇಕ ನೇಕಾರ ಜನ
ಮೆಂಬರಾಗಬೇಕು ಖಾದಿ ತೊಡಬೇಕ
ಬೆಂಬಲ ಕೊಡಬೇಕ ಕಾಂಗ್ರೆಸಕ ಪೂರ್ಣ
ಅಂದ್ರ ಸ್ವರಾಜ್ಯ ಆಗತತಿ ಸ್ವಾಧೀನ
ಹಿಂಸಾ ಬಿಡಬೇಕ ಸತ್ಯ ನುಡಿಬೇಕ
ಕೊಳ್ಳುದ ಬಿಡಬೇಕ ಪರದೇಶಿ ಸಾಮಾನ
ಇದರಂತೆ ನಡೆದು ನೀವು ಫಳಿಸಬೇಕು ಉತ್ಪನ್ನ

**||ಏರು||**

ದೋಷರಹಿತ ಗಾಂಧಿಯವರ ದಾಸನಾದ
ಹುಲಕುಂದ ದೇಶಭಕ್ತ ಭೀಮರಾಯರ ಕವನ||೩||

**ಕೂಳ – ಆಹಾರ, ಜಗ್ಗಿ – ಅಪರಿಮಿತ, ನುಗ್ಗ ಮಾಡು – ಹಾಳುಮಾಡು,**

**ಬಳಲೂರ – ಬಳಲುವರು, ಲಗ್ಗ – ಬೇಗನೆ, ಬಗ್ಗಬಡುತಾನ – ಸಂಹಾರ ಮಾಡುವನು, ಜಂತ್ರ – ಕೈರಾಟೆ**

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೩೮. ಅಸ್ಪೃಶ್ಯತಾ ನಿವಾರಣೆ ಲಾವಣಿ

೧೮
ಎಲ್ಲಿ ಕೂತಿತ್ತು ಯಾವ ಕಡಿಂದ ಬಂತ ಏನೇನ ಮಾಡತೈತಿ ಚಳವಳಿ
ಎಲ್ಲಾ ಜಾತಿ ಕೂಡಿ ಏಕ ಆಗುದಂತ ನಮಗ ಬಂದತರಿ ಎಂಥಾ ಬಗಳಿ
ಹೀಂಗ ಅನ್ನುವರು ತುಂಬ್ಯಾರ ನಾಡಿನ್ಯಾಗ ಧರ್ಮದ ಅಭಿಮಾನ ಅವರಿಗೆ ಹೆಚ್ಚ
ಹ್ಯಾಂಗ ಮಾಡುದು ಕಾಂಗ್ರೆಸದವರ ಮಾಡಿ ಇಟ್ಟರಂತಾರ ಪೇಚ

ಹರಿಜನರ ಕಂಡರ ದೂರ ಸರಿಯತಾರ ಮುಟ್ಟಬ್ಯಾಡಂತ ಹೇಳತಾರ ಸ್ವಚ್ಛ
ಹೊರಗ ಹೋದರ ಮರತಿರತಾರ ಕುಲ ಮನಿಗಿ ಬಂದರ ಆಗತದ ಉಚ್ಚ
ಮೋಟಾರದವರು ಇವರನ್ನ ಒಳಗ ತುರುಕಿ ತುಳಲಿಕ್ಕೆ ಹತ್ತಿರತಾರ ಕಚಪಚ
ಏಟು ಉಳಿಯುವದಿಲ್ಲ ಕೈಯಾನ ರೊಕ್ಕ ಕೊಟ್ಟು ಮೈಯೆಲ್ಲ ಆಗತದ
ನುಚ್ಚ ನುಚ್ಚ

||ಚ್ಯಾಲ||

ಚಂಹದಂಗಡ್ಯಾಗ ಹೊಕ್ಕು ಏಕಾಗಿ ಮನ್ಯಾಗ ಆಗಿರತಾರ ದೊಡ್ಡ ಯೋಗಿ
ಹೇಳಿದರ ಬರತೈತಿ ನಗಿ ಸೂಳ್ಯಾರ ಮನ್ಯಾಗ ಅವರ ಗುಂಡಗಡಿಗಿ
ಎಲ್ಲಾ ಜಾತಿಯವರು ಕೂಡಿ ಏಕಾಗಿ ಸಿಂದಿಮಗಿ ಹಚ್ಚುವರು ಬಾಯಿಗಿ

||ಏರು||

ಹೊಲ್ಯಾರನೆಲ್ಲ ನೆಲದ ಮ್ಯಾಲ ಇಟ್ಟ ಉಳದವರು ಅದಾರ ಅಂತರಾಳಿ||೧||

ಖಂಡಾ ತಿನ್ನುವ ಕುಲ ಕಡಿಮಿ ಅಂತ ನಮ್ಮವರಿಗೆ ನುಡಿಯುವದು
ಹಂದಿ ತಿನ್ನುವ ಇಂಗ್ಲಂಡದವರಿಗೆ ಒಳಗೆ ಖುರ್ಚಿ ಹಾಕಿ ಕೂಡ್ರುಸುವದು
ಹದಿನೆಂಟು ಪುರಾಣ ಬರೆದ ವಯಾಸ ಋಷಿ ಹೊಲೆಯರ ಹೊಟ್ಟಿಲಿ ಹುಟ್ಟಿದ್ದ
ಮಾದಗಿತ್ತಿಯ ಮಗ ಮಾತಂಗ ಋಷಿ ಅರುಂಧತಿ ಜಾತಿ ಹೊಲೆಯರದ
ಹರಳಯ್ಯ ಸಮಗಾರ ಕಕ್ಕಯ್ಯ ಡೋಹರ ಚನ್ನಯ್ಯ ಮಾದಿಗರಂವ ಇದ್ದ

||ಏರು||

ಎಲ್ಲ ಜಾತಿ ಒಳಗ ಇದ್ದವರ ಬಲ್ಲಿದರು ಬಹಳ ಹರಿಜನರ
ಅದರಿಂದ ಅನಿಸ್ಯಾರ ಮುನೇಶ್ವರ ಮುದದಿಂದ ಬಸವನ ಶರಣರ
ಹೃದಯದಲ್ಲಿ ಮಲಿನ ಇಲ್ಲದವರು ಪದವಿಗೇರತಾರ ಎತ್ತರ
ಅಲ್ಲದ ಕೆಲಸಮಾಡಿ ಊರಾನ ಹೊಲೆಯರಿಗೆ ಯಾರ ಅನ್ನಬೇಕ್ರಿ
ಛೀ ಹಳಿ ||೨||

ಹೊಲ್ಯಾರ ಕುಂತ ನಿಮಗ ಸಲಾಮ ಮಾಡಿದರ ದಾದ ಮಾಡದ
ಮುಜರಿ ಹೋಗತೀರಿ
ಇಲಾಖೆ ಸಾಹೇಬ ಬಂದ ದರ್ಪ ಮಾಡಿದರ ಅಡರಾಸಿ
ಮುಜರಿ ಮಾಡತೀರಿ
ಕಾಲಾನ ಕೆರವ ಮಾಡುವವರಿಗೆ ಅಂಜ ಅಂದರ್ಥೆಂಗ ಅಂಜತೀರಿ
ಪೋಲೀಸ ಕೋರ್ಡ ತಕ್ಕೊಂಡರ ಅಡರಾಸಿ ಅಡ್ಡಿ ಹಾಕತೀರಿ
ಅಂಜುದು ಅಂಜುಸುದು ಎರಡೂ ಪಾಪ ಅಂತ ಗಾದಿ ಮಾತಿನೊಳಗ ಹೇಳತೀರಿ

ಸಲಾಮ ಮಾಡಿದವರಿಗೆ ಸಹಾನುಭೂತಿ ತೋರಿಸಿ ಅವರನ್ನು
ಉದ್ಧಾರ ಮಾಡಬೇಕರಿ

**||ಚ್ಯಾಲ||**

ಅಸ್ಪೃಶ್ಯರಿಗಾಗಿ ಗಾಂಧಿಯವರು ಉಪವಾಸ ಹಿಡಿದಿದ್ದರ
ಬಂದ ಹೇಳ್ಯಾರ ಅಂಬೇಡ್ಕರ ಗಾಂಧಿಯವರ ಉಪವಾಸ ಬಿಡಿಸ್ಯಾರ
ಸರ್ವರೆಲ್ಲ ಕೂಡ ವತ್ತರ ಹರಿಜನರ ಮಾಡಿರಿ ಉದ್ಧಾರ

**||ಏರು||**

ಮೂಲ ಪುರುಷನ ಮಾತು ಪಾಲಿಸಿರೆಂದು ಭೀಮನ ಶಿಷ್ಯ ಹೇಳಿದ

*ರಚನೆ:* ಹುಲಕುಂದ ಭೀಮಕವಿ
*ಕೃತಿ:* ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೩೯. ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಕ್ರಮ

ಗ್ರಾಮಸೇವಾ ನಿಗದಿ ಸಹಕಾರ ತತ್ವ ಸಂಘದ ನಾ |
ಗರಿಕರಲ್ಲಿ ನನ್ನದೊಂದು ಸವಿನಯ ಪ್ರಾರ್ಥನಾ
ಭಾರತ ಪ್ರಧಾನಮಂತ್ರಿ ಶ್ರೀಮತಿ | ಸಾರಿದ ಸಮತಾವಾದದ ಕೃತಿ |
ಸಾರುವೆ ಇಪ್ಪತ್ತಂಶದ ಆರ್ಥಿಕ ಕಾರ್ಯಕ್ರಮವನು ||೧||

ಸರ್ವರ ಹೃದಯದಲ್ಲಿ ಇರುವ ಸರ್ವಾತ್ಮನೊಬ್ಬನೇ ಇದ್ದು |
ಓರ್ವ ಓರ್ವರಲ್ಲಿ ಇರುವ ಅಸಮಾನತೆಯನು |
ಸರಿಬಾರದಕ್ಕ ಶ್ರೀಮತಿ ಅರಿತು ತೆಗೆದು ತುರ್ತಪರಿಸ್ಥಿತಿ |
ಅಪತ್ಕಾಲ ತೆಗೆಯಲು ಇಪ್ಪತ್ತಂಶದ ಕಾಯ್ದೆಯನು ||೨||

ಖರೇ ದುಡಿಯುವ ಬಡವರತನಕ ಸರಕಾರ ಸಹಾಯ ಬರೂದರಾಗ |
ಸಿರಿವಂತರೇ ನುಂಗುವರು ಎಲ್ಲಾ ಹಣವನು |
ಸಂಪತ್ತೆಲ್ಲಾ ಶ್ರೀಮಂತರಿಗೆ | ಬರೇಕಾಗದ ಬಡವನ ಕೈಗೆ |
ಬರಿಮೈ ಅರಹೊಟ್ಟೆ ಸಾಯುವತನಕ ಕೇಳುವರಾರಿಲ್ಲ ||೩||

**||ಚ್ಯಾಲ||**

ಆರ್ಥಿಕ ವಿಷಮತೆ ಬಿಡಿಸಿ ಸಮಾನತೆ ಗಳಿಸಿ |
ಬಡವರನು ಮೇಲೆತ್ತಿ ಸರ್ವರ ಸುಖದ ಸಲುವಾಗಿ||೧||

ಎಲ್ಲರೂ ಓದಿ ಜಾಣರಾಗಿ ಸ್ವಂತ ಸುಖಕ್ಕಾಗಿ ಸರ್ವರ |
ಸಹಕಾರ ಬಯಸುತಲಿ ತಾನಿರಬೇಕು ಎಲ್ಲರಿಗಾಗಿ||೨||

ಹನಿಹನಿ ಕೂಡಿ ಹಳ್ಳವಾಗಿ | ತೆನೆಗಳಿಂದಲೇ ರಾಸಿಯಾಗಿ |
ಎಳೆಗಳು ಕೂಡಿಯೇ ಹಗ್ಗವಾಗಿ | ಆ ಶಕ್ತಿಯೇ ಅಮಿತವಾಗಿ||೩||

**||ಏರು||**

ಈ ಜನತಾ ಸಹಕಾರ ಶಕ್ತಿಯ ತಿಳಿಸಿ ಸ್ಥಾನಿಕ ಸಂಘ ಸಂಸ್ಥೆಯ ಬೆಳೆಸಿ |
ಹಳ್ಳಿ ಹಳ್ಳಿಗೆ ಬೆಳೆಸುತರಲಿರುವರು ಗ್ರಾಮೋದ್ಯೋಗವನು ||೧ನೆಯ ಚೌಕ||

ಭಾರತ ಪ್ರಧಾನಮಂತ್ರಿ ಶ್ರೀಮತಿ ಸಾರಿದ ಸಮತಾವಾದದ ಕೃತಿ
ಸಾರುವೆ ಇಪ್ಪತ್ತಂಶದ ಆರ್ಥಿಕ ಕಾರ್ಯಕ್ರಮವನು ||
ಬಡವರೆಲ್ಲ ಕೂಡಿಕೊಂಡು ಹಲವು ರೀತಿ ಮಾತಾಡತಾರ ಸ್ವರಾಜ್ಯ
ಸಿಕ್ಕರೂ ಸುಖವಿಲ್ಲಂತ ತಮ್ಮತಮ್ಮೊಳಗ |
ಸರಕಾರ ಹೊರಡಿಸಿ ತರತರ ಯೋಜನೆ ಮಾಡಿದ ಮಹಾಕಾರ್ಯ ಸಾಧನೆ
ಅರಿತರೆ ಬರತೈತಿ ತಪ್ಪಿನ ತಿರುಳು ನಮ್ಮ ಮನದಾಗ ||೧||

ಪೂರ್ವದಲ್ಲಿ ಬದುಕಿದ ಜನಕ | ಸಂಖ್ಯಾ ಕಡಿಮಿ ಇದ್ದ ಮೂಲಕ |
ಅನ್ನ ಅರಿವೆ ಹೈನುಶಕ್ತಿ ಬಲ ಹೆಚ್ಚಾಗ
ಮೀರಿ ಬೆಳೆದ ಜನಕ್ಕಿಂದು ಹೆಚ್ಚು ಅನ್ನ ಅಭಾವ ಬಂದು |
ಎಷ್ಟು ಬೆಳೆದರು ಸಾಲುವಲ್ಲದು ಎಲ್ಲರಿಗಿ ಈಗ ||೨||

ಗರೀಬರಲ್ಲಿ ವರ್ಷಂಪ್ರತಿ ಹದಿಮೂರು ದಶಲಕ್ಷ ಅಂದಾಜ ಹೆಚ್ಚಿಗೆ
ಸಂತಾನ ಹುಟ್ಟತಾವ ದೇಶದೊಳಗ |
ನೂರಾಹನ್ನೆರಡು ಸಾವಿರಸಾಲಿ ಮುನ್ನೂರಾ ಅರವತ್ತು ಸಾವಿರ ಇಲ್ಲಿ |
ಮಾಸ್ತರರು ಬೇಕು ಹೆಚ್ಚಿನ ಜನಕ ಇದ್ದ ಗಳಿಕ್ಯಾಗ ||೩||

**||ಚ್ಯಾಲ||**

ಇಪ್ಪತ್ತು ಲಕ್ಷ ಮನಿಬೇಕು ವಸತಿ ಸೌಕರ್ಯಕ |
ಕೋಟಿಗಟ್ಲೆ ಅರವಿ ಅಂಚಡಿ ತೊಡಲಾಕ | ಉದ್ಯೋಗ ಅನ್ನ ಎಲ್ಲ ಬೇಕು||೧||
ಅತಿವೃಷ್ಟಿ ಅನಾವೃಷ್ಟಿಯಿಂದಲೆ | ಬೆಳೆಯು ಕಡಿಮೆಯಾಗಿ
ಕಾಳುಕಡಿ ಸಾಲದಾಯ್ತು ಸರ್ವಜನರಿಗಿ | ಅದಕೆ ಸಾಲಕಾಗಿ ಬ್ಯಾರೆ
ದೇಶಕ ತಲೆಬಾಗಿ ||೨||

ಕುಟುಂಬ ಯೋಜನೆಗಾಗಿ | ಸರ್ವರಿಗಿ ತಿಳಿಸುವದಕಾಗಿ |
ಮಿತ ಸಂತಾನದರಿವಿಗಾಗಿ | ಮಾಡುವರು ಖರ್ಚು ಮಿತಿಮೀರಿ||೩||

ಶ್ರೀಮತಿಯವರ ತತ್ವತಿಳಿದು | ಭಾರತೀಯರ ಭಾವಬೆಳೆದು
ಸೂಕ್ತ ಕಾಯ್ದೆ ತಿಳಿದು ತರಬೇಕು ಕಾರ್ಯಾಚರಣಾ ||೨ನೆಯ ಚೌಕ||

ಭಾರತ ಜನರ ಬದುಕಿಗಾಗಿ | ಅನ್ನಾಹಾರ ಅಭಿವೃದ್ಧಿಗಾಗಿ ತರತರ
ತೆಗೆದು ಸರಕಾರ ಕೊಡುವದು ಸಾಲವನು |
ಹೊಸ ಹೊಸ ತಳಿಯ ಬೀಜಗಳನ್ನು ನೂತನ ಯಾಂತ್ರಿಕ ಉಪಕರಣವನು
ರಸಗೊಬ್ಬರ ಕೀಟನಾಶಕ ಪುಡಿಗಳು ಎಣ್ಣೆಯನು ||೧||

ನೀರಾವರಿ ಭೂಮಿಯಲ್ಲಿ ಬೋರ ಮಾಡಿ ನೀರು ತೆಗೆದು ನೀರೆತ್ತುವ
ಯಂತ್ರ ಕೂಡಿಸಿ ಅನುದಿನಾ |
ಹರಿದು ಹೋಗುವ ಹೊಳೆಹಳ್ಳಕ್ಕೆ ನೀರಕಟ್ಟಿ ನೀರಾವರಿಗೆ |
ನೀರು ಕೊಡುವರು ಸೂರೆಮಾಡಿ ಸರಕಾರದ ಹಣ ||೨||

ಭೂಮಿಯಿಲ್ಲದ ಬಡರೈತರಿಗೆ ಭೂಮಿ ಹಂಚಿಕೊಟ್ಟು ಅವರಿಗೆ |
ಮನೆ ಕಟ್ಟಲು ಕೊಡುವರು ಮತ್ತೆ ಹೆಚ್ಚಿನ ಸಾಲವನು |
ಕೃಷಿ ಕಾರ್ಮಿಕ ಬಾಂಧವರಿಗೆ ದುಡಿಸಿಕೊಂಡು ಸರಿವೇಳೆಗೆ |
ದುಡಿತಕೆ ಸರಿಯಾಗಿ ಕೂಲಿಕೊಡುವಂತೆ ತೆಗೆವರು ಯೋಜನೆ ||೩||

**||ಚ್ಯಾಲ||**

ಸಿರಿವಂತರ ಭೂಮಿಯನು | ಹೆಚ್ಚು ಇದ್ದುದನು
ಬಡವರಿಗೆ ಹಂಚಿ ಹೇಳುವರು | ಕಂತಿನಲಿ ಕೊಡಿರಿ ಹಣವನ್ನು||೧||

ಹರಿಜನ ಗಿರಿಜನರೆಲ್ಲರಿಗೆ | ನಿರ್ಗತಿಕರಾದವರಿಗೆ |
ಕೊಡುತಿಹರು ಸಾಲ ಕರುಣೆಯಲಿ | ಸುಲಭ ಕಂತಿನಲಿ ಪಡೆಯುತ||೨||

ಆವಶ್ಯ ವಸ್ತುಗಳನೆಲ್ಲ | ಕಡಿಮೆ ಬೆಲೆಯಲ್ಲಿ |
ಸರ್ವರಿಗೆ ಮುಟ್ಟಿಸುವರ | ಎಲ್ಲರ ಕ್ಷೇಮ ಬಯಸುವರು||೩||

**||ಏರು||**

ದುಡಿಯುವ ಶಕ್ತಿ ಇಲ್ಲದವರಿಗಿ | ಅಂಗಹೀನ ಊನರಿಗೆಲ್ಲ
ಮಾಶಾಸನವ ನೀಡುತ ಅವರ ಸುಖವನು ಬಯಸುವರು ||೩ನೆಯ ಚೌಕ||

ಭಾರತಪ್ರಧಾನಮಂತ್ರಿ ಶ್ರೀಮತಿ | ಸಾರಿದ ಸಮತಾವಾದದ ಕೃತಿ |
ಸಾರುವೆ ಇಪ್ಪತ್ತಂಶದ ಆರ್ಥಿಕ ಕಾರ್ಯಕ್ರಮವನು ||

ಹಿರಿಯರ ಹಳೆಯ ಸಾಲಗಳಿಗೆ | ಕಿರಿಯರು ದುಡಿವ ಜೀತಪದ್ಧತಿಗೆ |
ನಿರ್ಮೂಲನದ ಸೂಕ್ತ ಕ್ರಮವನು ಜಾರಿಗೆ ತಂದಿಹರು ||

ಬಡವರಿಗಾದ ತೊಂದರೆಗಳಿಗೆ ಊರೊಳಗಿನ ಮೀರಿದ ಸಾಲಕೆ
ಸರಕಾರದಿದಲೇ ಸಣ್ಣ ಕಂತಿನ ಸಾಲವನೀಯುವರು||೧||

ಏರಿಕೆ ಬೆಲೆಯ ಪರಿಸ್ಥಿತಿಗೆ ಸಣ್ಣ ಸಾಲಸಿಗದವರಿಗೆ  ಲಾಯಸನ್ಸ ಇಲ್ಲದ
ಸಿರಿವಂತರು ಸಾಲಕೊಟ್ಟಿಹರು |
ನೂರಕ್ಕನೂರು ಬಡ್ಡಿಕೂಡಿ ಮೀರಿ ರೊಕ್ಕದ ಲೆಖ್ಖ ಮಾಡಿ
ವತ್ತಿ ಹಿಡಿದ ವಸ್ತು ಒಡವಿ ಮರಳಿ ಕೊಡಿಸುವರು  ||೨||

ಕುರಿಕೋಳಿ ಸಾಕುವವರಿಗೆ ಕಂಬಾರ ಕುಂಬಾರ ಪತ್ತಾರರಿಗೆ ಕೈಮಗ್ಗದ
ನೇಕಾರರಿಗೆ ಸಾಲ ಕೊಡಿಸುವರು |
ಕಿರಿಬೆಲೆಯ ಮಾಲು ಕೊಡಿಸಿ ಯೋಗ್ಯಬೆಲೆ ನಿಗದಿಪಡಿಸಿ
ಸರ್ವರಿಗೆ ಮುಟ್ಟುವಂತೆ ನೋಡಿಕೊಳ್ಳುವರು  ||೩||

**||ಜ್ಯಾಲ||**

ನೀರೆತ್ತುವ ಮೋಟಾರವ ಕೊಡಿಸಿ ವಿದ್ಯುತ್ ಒದಗಿಸಿ |
ನೀರಾವರಿಯ ಪ್ರಸಾರ | ಹಳ್ಳಿಹಳ್ಳಿಗೆ ಬೆಳಕಿನುಪಕಾರ||೧||

ಊರ ಹೊರಗಿನ ಮರಡಿಯಲ್ಲಿ | ಪ್ಲಾಟುಗಳ ನಿರ್ಮಿಸಿ |
ಯೋಗ್ಯಬೆಲೆಗೆ ಕೊಡಿಸುವರು | ಮಾರಿದರೆ ಶಿಕ್ಷೆ ವಿಧಿಸುವರು||೨||

ಸರಕಾರದ ತೆರಿಗೆ ತಪ್ಪಿಸಿ | ಮಾಲು ಸಾಗಿಸುವ |
ಕಳ್ಳ ಕದೀಮ ವರ್ತಕರ | ಲಾಯಸನ್ಸ  ಕಸಿದುಕೊಳ್ಳುವರು||೩||

ವಂಚಕ ವ್ಯವಹಾರ ಮಾಡುವವರಿಗೆ | ಲಂಚ ತಿನ್ನುವ ನೌಕರರಿಗೆ |
ಹೊಂಚು ಹಾಕಿ ಹಿಡಿದು ದಂಡ ಶಿಕ್ಷೆ ವಿಧಿಸುವರು  ||ಆನೆಯ ಚೌಕ||

ಭಾರತ ಪ್ರಧಾನಮಂತ್ರಿ ಶ್ರೀಮತಿ | ಸಾರಿದ ಸಮತಾವಾದದ ಕೃತಿ |
ಸಾರುವೆ ಇಪ್ಪತ್ತಂಶದ ಆರ್ಥಿಕ ಕಾರ್ಯಕ್ರಮವನು ||

ಆದಾಯದ ಆಸ್ತಿ ಬೆಳೆಸಿ ಆಡಳಿತೆಯ ಖರ್ಚುತಗ್ಗಿಸಿ | ಅಧಿಕ
ಉತ್ಪಾದನೆಯ ಕಾರ್ಯ ಮಾಡುತಿರುವರು |
ಸಾಮಾನ್ಯ ಜನರನುದ್ಧರಿಸಿ | ಹಿಂದುಳಿದವರನೆತ್ತಿ |
ಉದ್ಯೋಗಕ್ಕೆ ಅವಕಾಶಕೊಡುವ ಉದ್ದಿಮೆ ತೆಗೆದಿಹರು  ||೧||

ಜಾಣರಾದ ಬಡಹುಡುಗರಿಗೆ | ಉಚಿತ ಊಟ ಬಟ್ಟೆ ಕೊಟ್ಟು
ಅಗತ್ಯ ವಸ್ತು ಅಗ್ಗದರದಲಿ ದೊರಕಿಸಿ ಕೊಡುವರು |
ವಿದ್ಯಾಕಲಿಯುವ ವಿದ್ಯಾರ್ಥಿಗಳಿಗೆ | ಕಲಿಸುವ ವಿದ್ಯಾಮಂದಿರಗಳಿಗೆ |
ಅನುದಾನ ನೀಡಿ ವಿದ್ಯಾ ಕ್ಷೇತ್ರಕೆ ಉಪಕಾರ ಮಾಡುವರು  ||೨||

ಬುದ್ಧಿವಂತ ಬಾಲಕರಿಗೆ ಉದ್ಯೋಗದಲ್ಲಿ ತೊಡಗುವವರಿಗೆ
ವೃತ್ತಿ ಶಿಕ್ಷಣ ಕೇಂದ್ರದಿಂದ ಶಿಕ್ಷಣ ನೀಡುವರು |
ಹಿಂದಿನ ಬದುಕಿನ ಬದಲಾವಣೆ ಇಂದಿನ ಬಂದಿಹ ನವಚೇತನಕೆ |
ಹೊಂದಿಕೊಳ್ಳುವ ಭಾರತೀಯರೆ ಭಾಗ್ಯವಂತರು ||೩||

**||ಚ್ಯಾಲ||**

ಗರೀಬ ಶ್ರೀಮಂತರೆನ್ನುವ | ಭಾವ ತಿಳಿಯುವ |
ಸಾರ್ವಜನಿಕ ಸಮತಾವಾದಕ | ಸಹಕಾರ ಬೇಕು ನಡೆಸುದಕ||೧||
ಸ್ವಾತಂತ್ರ್ಯ ಸಿಕ್ಕ ಭಾರತಕ್ಕ | ಬೇಕು ಸರ್ವವಿಧ ಹಕ್ಕು |
ಸಾರ್ವಜನಿಕ ಶಾಂತಿ ಸುಖ ಬೇಕು | ವಿಷಮತೆ ಮೊದಲು ಅಳಿಬೇಕು||೨||

*ರಚನೆ:* ಶರಣಪ್ಪವಾಲಿ
*ಕೃತಿ:* ಶರಣಸ್ಮೃತಿ

# ಶೃಂಗಾರ

## ೧. ಶೂರ ಸಿಪಾಯಿ

ಖಡಕ ಶಡಕ ಸಿಪಾಯಿ ಭಡಕ
ಆಗಿ ಹೊಂಟಾನ ಖಾಸ ಪೋಷಾಕ
ತೊಟ್ಟಾನ ಮುತ್ತಿನ ಬಾವಲಿ
ಇಟ್ಟಾನ ಕುದರಿ ಕುಣಿಸುತ ಹೊಂಟಾನ
ಯಾವ ದೇಶದ ಧೊರಿಯೋ ಇವಾ
ನೋಡಿ ಹರುಷವಾಯಿತು ನನ್ನ ಜೀವಾ |
ಥೇಟ ಥಾಟ ಗಾಟ ಮಾಟ ಗಜೇಂದ್ರ ಬಂದಾ
ಹುಣ್ಣಿವಿ ಚಂದ್ರ ಇಳಿದು ಬಂದ ದೇವೇಂದ್ರಾ |
ರೂಪದಲ್ಲಿ ಸುಂದರಾ ಹ್ಯಾಂಗ ಬಂದಾನವ್ವ ಇಲ್ಲೆ
ಕಾಮ ಭೀಮನ ರೂಪ ಉಳ್ಳಾವಾ
ರೂಪ ನೋಡಿ ದೀಪ ಕತ್ತಲ
ಮನಿಯಾಗ ಹಚ್ಚಿದ್ಹಾಂಗ
ಬುಲ್ ತಾರೆ ಹೊಳಧಾಂಗ ಸುದ್ದ ಸೂರ್ಯ
ಮೂಡಿದ್ಹಾಂಗ ಕಸರಿಲ್ಲದ ಹುಟ್ಟಿಶ್ಯಾನ ಶಿವಾ
ಇವನ ಮ್ಯಾಗ ಆಯ್ತೆ ನನ್ನ ಮೋಹಾ |

||ಚಾಲ||

ಕೈಯಾಗಿಟ್ಟಾನ ಉಂಗುರಾ
ಕಂಠಿಸರ ಮುತ್ತಿನ ಹಾರಾ
ಸಿರಪೇಚ ಇಟ್ಟಾನ ಸುತ್ತ್ಯಾನ ಜರತಾರ
ಮುತ್ತೀನ ತುರಾಯಿ ವಜ್ಜರಾ |

||ಏರು||

ಕರೋಲಿ ಕೈಚೂರಿ ಬಾಕ ಹಿಡಿದು
ಪಟ್ಟೆ ಡಾಲ್ಲ ಬೆನ್ನ ಮ್ಯಾಲ ಮನಸಾತ ಇವನ ಮ್ಯಾಲ
ಹೋಗಿ ಹಿಡಿಯಲೇನ ಕಾಲ ಹ್ಯಾಂಗ ಬಂದಾನವ್ವ ಇವಾ
ನೋಡಿ ಹರುಷವಾಯ್ತು ನನ್ನ ಜೀವಾ||೧||
ಕೇಳಗರ್ತಿ ನೋಡಬೆರ್ತಿ ಮನಿಮಾರ ಮರ್ತಿ
ನಾವು ನೀವು ಯಾರಿಕ್ಯಾರ ಇಳಿದು ಹೋಗು ವಸ್ತಿಕಾರ
ನಮ್ಮ ನಮ್ಮ ಯಾತರ ಖೂನಾ
ಮಾಡಂತ ಕಟ್ಟಿ ಹಾಕತಿ ಎನ್ನಾ
ನಮ್ಮ ಧೊರಿ ಐಶ್ವರಿ ಮಸ್ತ ಕೊಟ್ಟಾನ
ದಂಡಿನ ಮ್ಯಾಳ ಇಟ್ಟಾನ ಸುದ್ದಿ ಕೇಳಿ ಸುಟ್ಟಾನ
ನಾವು ಮಾಡುವುದಿಲ್ಲ ಗೆಣತಾನ
ಹೆಣ್ಣಿಗಾಗಿ ಹೋಗ್ಯಾವ ಸಂಸ್ಥಾನ
ಸೊಟ್ಟ ಪಟ್ಟ ಕೆಟ್ಟ ಕೆಲಸ ಮಾಡವ ಅಲ್ಲ
ಶಿವ ಮೆಚ್ಚಲಾಕ ಇಲ್ಲ ಕೀರ್ತಿ ಬರುವ ಕೆಲಸ
ಹೊಂದದು ಹೋಗ ನಿನ್ನ ಒಗತಾನ
ಕೂಡಿಕೊಳ್ಳ ಮದುವಿ ಗಂಡನ್ನಾ |

||ಚಾಲ||

ಹಿಂಗ ಸಿಪಾಯಿ ಹೇಳ್ಯಾನ ಉತ್ತರ
ತಿಳಿಸಿದಾನ ನಾನಾತರಾ |
ಇದು ಮೂಲ ಕೆಟ್ಟ ಕಾರಭಾರಾ
ಬಹಳ ಘೋರಾ ಜನ್ಮ ಠಾರಾ |
ಸಿಟ್ಟಿನಿಂದ ಸಿಪಾಯಿ ಏರಿದ ಜನ
ನಿನ್ನ ಮಾತ ನಮ್ಮ ನಿಮ್ಮದೇನು ಗೊತ್ತು
ಪರ ಹೆಣ್ಣಿನ ಮ್ಯಾಲೆ ಚಿತ್ತ ಇಟ್ಟ ನೋಡಿದ್ದಿಲ್ಲ
ಹಿಂಗ ಹ್ಯಾಂಗ ಭಾವಕ್ಕ ಒಲಿದಾನ ಶಿವಾ||೨||
ಕೇಳ ಚದುರಿ ಮಾತಿನ ಮಧುರಿ ಅಂತಾಳ ಮನದಾಗ

ಇನ್ಮಾಡಬೇಕ ಹ್ಯಾಂಗ ಜೀವ ಇದ್ದು ಇಲ್ದಾಂಗ
ಆತ ಮಾರಿಗೆ ಬಡದಾಂಗ ಇವ ಮಾಡತಾನ ಬ್ಯಾಸರಾ
ಜನ್ಮ ಹೋಗವಲ್ಲದ್ಯಾಕ ನಂದ ಠಾರಾ
ನಮ್ಮ ನಿಮ್ಮ ಜೋಡ ಜತ್ತು ಕೂಡ್ಯೆತೊಳೆ
ಹ್ಯಾಂಗ ಮುತ್ತಿನೊಳಗಿನ ಕುಂದಣದಾಂಗ
ಉಂಗುರಕ್ಹರಳ ಹಚ್ಚಿದ್ದಾಂಗ
ನನ್ನ ಮಾತ ಕೇಳೋ ಸವಿಗಾರಾ
ನಿನಗೆ ಕೊಡುವೆನು ಮುತ್ತಿನ ಹಾರಾ
ನನ್ನ ಗಂಡ ಮನಿಯಲ್ಲಿ ದೊಡ್ಡ ಸಾವುಕಾರಾ
ತಂದೇನಿ ಬೆಳ್ಳಿ ಬಂಗಾರ ವಸ್ತಾ
ವಡವಿ ಅಲಂಕಾರಾ ಕೈ ಜೋಡಿಸಿ ನಿಂತಾಳ ಸುಂದರಾ
ಸಿಪಾಯಿ ಮನಸ ಆತ ಒಡದ ನೀರಾ |

**||ಚಾಲ||**

ಇಬ್ಬರು ಕೂಡ್ಯಾರು ಖುಷಿಯಿಂದಾ ಬಹುಚಂದಾ
ಆನಂದಾ ಕವಿ ಗುರಸಿದ್ಧನಕ್ಷರ ಚಂದಾ
ಕಟಿ ಬಂದಾ ಕೇಳೋ ಬಂದಾ

**||ಏರು||**

ಹುಬ್ಬಳ್ಳಿ ಶಹರ ಮೋಜೀನ ಊರ
ದೊಡ್ಡ ಪಟ್ಟಣ ಹಾರ್‍ಯಾಡ ಬ್ಯಾಡೋ
ಟಣಪಣ ಮುರದ ಚಲ್ಲೇನಿ ಗೋಣ
ಮೀಟಿ ತಗದೇನಿ ಕಣ್ಣು ಹಿಂದ
ಬಾಣ ಬಿಟ್ಟ ತುರೇದನೋ ಓಡಿ
ಹೋಗತಾನ ಹಿರೆ ಕಲಿಗಾಂವಾ

***ರಚನೆ:*** ಕವಿ ಗುರುಸಿದ್ಧ
***ಕೃತಿ:*** ಜಾನಪದ ಝೇಂಕಾರ

## ೨. ನಾಗರ ಪಂಚಮಿ

**೧ನೆಯ ಚೌಕ**

ಪಂಚಮಿ ಮುಂದ ಇರಟ್ಟೆಗಾಗಿ | ಹಂಚೇಕಿ ಹಾಕತಾಳ
ಸಂಜೀಗಿ ನಮ್ಮವರು ಬರತಾರೋ | ಏನು ಮಾಡತಾರೋ |

ಗೊಂಡ್ಯಾದ ಹಣಿಪಟ್ಟಿನ | ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ | ಇಂದ ಬರತಾರೋ ||

ನಾಗರ ಪಂಚಮಿ | ನಾಡೀಗಿ ದೊಡ್ಡದು
ನಾಗೇಶಿಗ್ಹಾಲಾ ಎರೆಯುವರು | ಒಂದ್ಹೊತ್ತಿರೂದು |

ಎಂದಿದ್ದರ ನಮ್ಮವರು | ಮುಂದಾಗಿ ಬರೂದಿಲ್ಲ
ಸಂಜೀಗಿ ನನ್ನ ಎರೆಯುವರು | ಅಳ್ಳ ಹುರಿಯುವರು |

ಹಬ್ಬದ ದಿನ ಹರೆಹೊತ್ತಿಲೆ | ಜತ್ತಾಗಿ ಗೆಳತೇರು
ಹೊತ್ತೇರಿ ನೀರಾ ತರುವದು | ಭಾಳ ಮೆರೆಯುವದು ||

ಇಳಿಹೊತ್ತಿನ ಕಡದಿಂದ | ಗೆಳತೇರ ಕೂಡಿ ಹೋಗಿ
ಜೋಕಾಲಿ ಅಡಿ ಬಂದು ದಣಿಯುವದು | ಭಾಳ ಉಣ್ಣುವದು ||

**||ಇಳುವು||**

ಹಸರ ಡಪಳಾ | ಸೀರಿ ಪಪ್ಪಳಾ ಜರಕಾಟೀ
ನಿತ್ತ ನಿಲಗಿ ತೀಡಕ್ಕಿ ತುದಿಗಟ್ಟಿ ||
ಮಗ್ಗಿ ತಗಿಸಿ | ಒಗಸಿದ ಕುಬಸ ಕರವತಕಾಟೀ
ಹಂಗೇ ಇಟ್ಟಿದಿನವ್ವ ಗಂಟಿನಾಗ ಕಟ್ಟಿ ||
ಚಂದ ಚಂದ ಒಂದೇ ವಾರೀಗಿ ಗೆಳತೇರು ಹೊಸ ಧಾಟಿ
ಅದರಾಗೊಬ್ಬಾಕಿ ನನ್ನ ಸವತಿ ಖೊಟ್ಟಿ ||

**||ಏರು||**

ಜೋಡಿಯವರು ಗೆಳತೇರು | ನೋಡುವರು ನನ್ನ ದಾರಿ
ನಾನಾ ತರದ ಸೀರಿ ಉಡುವವರು | ನನ್ನ ಕರೆಯುವರು ||
ಗೊಂಡ್ಯಾದ ಹಣಿಪಟ್ಟಿನ | ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ | ಇಂದ ಬರತಾರೋ ||

**೨ನೆಯ ಚೌಕ**

ಆಯಗಾರ್ರಿಗಿ ಅಳ್ಳಿಟ್ಟ | ಅವು ಬ್ಯಾರಿ ಮಾಡಿಟ್ಟ
ಹೋದ ಬಾರಿ ಇತ್ತು ನನ್ನ ಕಾರ್ಭಾರಾ | ಮಾಡಿದ ಪರಭಾರ

ತಂಬಿಟ್ಟಿನ ಉಂಡೀ ಒಳಗ | ಕಡಿಮಿ ಹಾಕಿ ಬೆಲ್ಲ ನಾ
ತಿನ್ನಾಕಿ ನೋಡಿ ಅದರ ಆಕಾರ | ಬೆಲ್ಲದ ಮಜಕೂರಾ ||

ಭಾಳ ಭಾಳ ಬೆಲ್ಲ ಹಾಕಿ । ಹಾಳ ಮಾಡ್ತಾರ ಮನಿಯಾಗ
ಹೇಳಕೇಳವರು ಯಾರಿಲ್ಲ ಹಿರಿಯರಾ । ತಮ್ಮ ಕಾರಭಾರ ।

ಅಣ್ಣನ ಹೇಣತಿ । ಆಕಿ ಭಾಳ ಘಾಲಗಡಕಿ
ಆಣಿ ಹಾಕಿ ತರಬಿಕೇರ ಕಲಿಸವರಾ । ಮನಸ ಒಡಸವರ ॥

**॥ಇಳುವು॥**

ಸಂಶಾ ಹೋಗಲಿಲ್ಲ ಮನಸಿನಂದು ತೀರಿ
ನೆನಸಿ ನೆನಸಿ ತವರ ಮನಿ ದಾರಿ ॥
ತವರಮನಿಯಾಗ ನನ್ನ ಐಸಿರಿ
ನೆಪ್ಪಾಗಿ ಭುಗಿಲೆಂದು ಎದಿ ಹಾರಿ ॥
ನನ್ನ ಹೊಟ್ಯಾಗ ಬಿದ್ದಂಗ ಕಿಚ್ಚ ಉರಿ
ದೆವ್ವ ಬಡಿದಂಗ ಬಿದ್ದೇನ್ರೆ ಖಬರ್ಹಾರಿ ॥

**॥ಏರು॥**

ಹೊತ್ತರೆ ಎಲ್ಲೈತಿ । ನಿತ್ತರ ಬರಲಿಲ್ಲ
ಎತ್ತರೆ ಆಗಿ ಹಾರಿತ ಖಬರು । ಉಳಿಲಿಲ್ಲ ಅಬರು ।
ಗೊಂಡ್ಯಾದ ಹಣಿಪಟ್ಟಿನ ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ । ಇಂದ ಬರತಾರೋ ॥

**೩ನೆಯ ಚೌಕ**

ಸೋದರತ್ತಿ ಮಗಳೊಬ್ಬಾಕಿ । ಹಾದರಗಿತ್ತಿ ಇದ್ದಾಳ್ರೆವ್ವ
ಬಂದವರೀಗಿ ಸೇರೂದಿಲ್ಲ ಘಾಲ್ಗಡಿಕಿ । ಇಂಥ ಕಾಲಗಡಕಿ ॥

ಚಿಗವ್ವ ನಮ್ಮ ಕಾಕಾನ ಹೇಣತಿ
ಬ್ಯಾಡಂತ ಅಂದಿದ್ದಾಳು ಬೆರಕಿ । ಮಾರಿ ಗಂಟ ಹಾಕಿ ॥

ಮತ್ತೊಬ್ಬಾಕಿ ಸ್ವಾದರತ್ತಿ । ಹೋದರಕೀಗಿ ಹತ್ತೂದು ಬಿಸಿ
ಎಲ್ಲಾರೊಳಗರಸಿ । ಉಂಡು ತಿರಗಕ್ಕಿ । ಇದೆ ಕೆಲಸದಾಕಿ ।

ಹೀನ ರಂಡಿ ಆಕಿ ಪುನಾ ಸೇರುವದಿಲ್ಲ
ದಿನಾ ನಾಕು ಮನಿ ತಿರಗಾಕಿ । ಇಂಥ ಬಾಯ್ಬಡಕೀ ॥

**॥ಇಳುವು॥**

ಮಾಳಿಗಿ ಏರಿ ದಾರಿ ನೋಡಿದ ಹಗಲೆಲ್ಲಾ
ನೂಸಿ ಹರುವತಾವರೆ ನನ್ನ ಕಾಲ ॥
ಮೂರುಸಂಜಿಲೆ ಎತ್ತೊಂದು ಕಂಡೇನ ದಾರಿ ಮ್ಯಾಲ
ನೋಡಿ ಮನಸೀಗಾದೆನ್ರೇ ಖುಸಿಯಾಲ ॥
ಸನಿಯಾಕ ಬಂದಾಂಗ ಖೂನ ಹತ್ತಿತ್ರೇ ನಮ್ಮದಲ್ಲ
ಎದಿ ಒಡದು ಬಡಿದಂಗ ದೊಡ್ಡ ಕಲ್ಲ ॥

**||ಏರು||**

ಅವ್ವ ಅಕ್ಕನ ಮುಂದ | ಏನು ಹೇಳಲಿ ಸುಖದುಃಖ
ಇಷ್ಟು ಕೇಳಿ ಮನಸಿನಾಗ ಮರಗುವರು | ದುಃಖ ಮಾಡುವರು ॥
ಗೊಂಡೇದ ಹಣಿಪಟ್ಟಿನ | ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ | ಇಂದ ಬರತಾರೋ ॥

**ಆನೆಯ ಚೌಕ**

ಹೋದ ಬಾರಿ ಪಂಚಮ್ಯಾಗ | ಬೇಕಾದ್ದು ಮಾಡಿದೆನವ್ವ
ನೆನಪಾಗಿ ಕಡುತೈತಿ ನನ್ನ ಹೊಟ್ಟಿ | ಅದು ಏನು ಸುಟ್ಟಿ |

ಅಣ್ಣತಮ್ಮರ ಒಳಗ ನಮ್ಮ | ಸಣ್ಣ ತಮ್ಮನ ಹೇಣತಿ
ಪಣತೀ ಮಾರಿಯಾಕಿ ಬಲುಖೊಟ್ಟಿ | ನಿಂದ್ರಸ್ಯಾಳ ಗಟ್ಟಿ ॥

ತಾಯಿ ತಂದಿ ಇವರು | ನಾಯೀ ಮರಿಯವರು
ಮಾಯಾಯಿಲ್ಲದೆ ಮರತಾರ ಬಿಟ್ಟಿ | ಹೊಡಿಸಬೇಕು ಕಟ್ಟಿ |

ಆಯಿ ಒಬ್ಬಾಕಿ ಇದಿ | ಮಾಯಿ ಕಡತಾಳ
ಎಂದ ಹರಿದೀತು ಇವಳ ರಗಟಿ | ಥಡಗಿಯ ಕಟ್ಟಿ ॥

**||ಇಳುವು||**

ಕೊಬ್ಬರಿ ಸರಾ ಗಲ್ಲಕ ಬಡಿವ ಜೋಕಾಲಿ
ಭಾಳ ಸನೀ ನಮ್ಮ ಮನಿ ಬಲ್ಲಿ ॥
ನೆಗವಿ ಕುಂಡರಸಾಗ ಸರದ ಬಿದ್ದಿತ್ರೇ ಜರದ ಶಾಲಿ
ಮ್ಯಾಲ ಹೊಚ್ಚಾಕಿ ಕರವತಕಾಟಿ ಒಲ್ಲಿ ॥
ಭಾಳ ಜಗ್ಗಿ ತೂಗಾಕೆಲ್ಲವ್ವ ಜೋಕಾಲಿ
ಸರ್ತಿಗೊಮ್ಮೆ ಕೈಯಿಡಾಕಿ ಜ್ವಾಕೀಲಿ ॥

**||ಏರು||**

ಸುಂದರ ಸಖಿಯರ ಮುಖ | ಎಂದಾರೆ ಕಂಡೇನೇನ
ಬಂದಾರೆ ಹೋಗಿರಬೇಕು ಎಲ್ಲಾರು | ನನ್ನ ಗೆಳತೇರು |
ಗೊಂಡೇದ ಹಣಿಪಟ್ಟಿನ | ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ | ಇಂದ ಬರತಾರೋ ||

**೫ನೆಯ ಚೌಕ**

ಚಂದರ ಗೊಂಬಿ ನಿನ್ನ | ಎಂದಾರೆ ಕಂಡೇನೇನ
ಬಂದ ಬಂದು ಹೋಗಿರಬೇಕು ಬಸಲಿಂಗಿ | ಜಾಡರ ಶಿವಲಿಂಗಿ ||

ಬೆಳದಿಂಗಳ ಆಡಲಾಕ | ಬ್ಯಾಸರಿಕಿ ಇಲ್ಲದಾಕಿ
ಬಂದ ಬಂದು ಕರಯಾಕಿ ನಮ್ಮ ರಂಗಿ ಆರೇರ ಗಂಗಿ ||

ಗುಳ್ಳವ್ವನ ಇಡುವಾಗ | ಅರ್ತಿಲೆ ಗೆಳೆತೇರು
ಬರತಿದ್ದರು ಬಟ್ಟಗುಲಗಂಜೀಗಿ | ಕೊಡುತಿದ್ದೆನ ಹೋಗಿ ||

ಮೂರುಸಂಜಿಲೆ | ಗುಳ್ಳವ್ವನ ಬೆಳಗಲಾಕ
ಮನಿ ಮನಿ ಕರೆಯಾಕಿ ನಮ್ಮ ಸಂಗಿ | ಮಾಲಗಾರ ನಿಂಗಿ ||

**||ಇಳುವು||**

ಎಲ್ಲಾ ಗ್ವಾಳಿ ಆಗವರ ಬಾಳಿಬಸಿ
ಪಂಚಮಿಗೊಮ್ಮೆ ಕೂಡವರ ಪುರಮಾನಸಿ ||
ಮೇಲ ಮಾಳಿಗೇರಾಕಿ ನನ್ನ ಕಾಸಿ
ಕೈಯ ಬೀಸಿ ಕರಿಯಾಕಿ ಹುಬ್ಬ ಹಾರ್ಸಿ ||
ನನ್ನ ಮಾತ ಮೀರವಳಲ್ಲವ್ವ ಕುಂಬಾರ ಶೇಷಿ
ಇಬ್ಬರು ಮುಂದ ಇರುವವರ ನೇಮಃಸಿ ||

**||ಏರು||**

ಕಡಲಿಲ್ಲ ಗೆಳತೇರ ಬಳಗ | ನೋಡಲಿಲ್ಲ ಒಂದಿನ
ಮಾಡಲಿಲ್ಲ ದಾದ ನನಗ ತವರವರು | ಯಾಕ ಮರೆತಿದಾರು |
ಗೊಂಡೇದ ಹಣಿಪಟ್ಟಿನ | ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ | ಇಂದ ಬರತಾರೋ ||

**೬ನೆಯ ಚೌಕ**

ಬರೂದಿದ್ರ ಬರೂದಿಂದ | ಹೋಗೂದಿದ್ರ ಹೋಗೂದಿಂದ
ಬರದಿದ್ದರ ನನ್ನ ಅದೃಷ್ಟ | ಇದು ಭಾಳ ಕೆಟ್ಟ |

ಹೀಂಗಂದು ನಿಂದ್ರೂದ್ರೊಳಗ | ಆಕಿ ಅಣ್ಣ ಬಂದಿದಾನ
ಹಂಡ ಹೋರಿಗ್ಹಾಕಿದಾನ ಮಗ್ಗಿ ಮುಟ್ಟ | ಹಿಗ್ಗಿದಾಳ ಎಷ್ಟ ||

ಅತ್ತೀ ಮಾವಗ ಹೇಳತಾಳ | ನಾ ಮಾತ್ರ ಹೋಗತೀನಿ
ನೀವು ಮಾತ್ರ ಕಳುಹಬೇಕು ಸಂಶ ಬಿಟ್ಟ | ಮನದಾನ ಸಿಟ್ಟ |

ನಾ ಮಾತ್ರ ಕಳುಹತೀನಿ | ನೀ ಮಾತ್ರ ಹಚಗೊಂಡು ಹೀಂಗ
ಹೇಳಿ ಆಕಿ ಮಾಂವ ಹಚಗೊಟ್ಟ | ಬುಗಡಿ ಸೀರಿ ಕೊಟ್ಟ ||

**||ಇಳುವು||**

ತೇರದಾಳ ಸಮೀಪ ಜನವಾಡ ಊರ
ಉಣುವ ಹೊತ್ತೀಗಿ ಬಂದಾರ ಅವಸರ ||
ಮಗಳು ಬಂದಾಳಂತ ತಾಯೀಗಿ ಆಯಿತ ಧೀರ
ತೆಕ್ಕೀಲಿ ಹೊಡೆದು ಸುರಸ್ಯಾಳೋ ಕಣ್ಣನೀರ ||
ಕರಿಲಾಕ ಬಂದಾರ ವಾರೀಗಿ ಗೆಳತೇರ
ಮಗಳೀಗಿ ಹೇಳತಾರ ಹೋಗವ್ವ ಉಂಡಕೇರಾ ||

**||ಏರು||**

ನಾನಾನ ತೋಡಿ ಮಾಡ್ಯಾರ ಜೋಡಿ | ವೈರಿ ನೋಡಿ ಹೋದಾಳ ಓಡಿ
ನಾಮಣ್ಣ ಮಾಡಿದ ಅಕ್ಷರಾ | ತೇರದಾಳ ಊರಾ
ಗೊಂಡ್ಯಾದ ಹಣಿಪಟ್ಟಿನ | ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ | ಇಂದ ಬರತಾರೋ ||

***ರಚನೆ:*** ನಾಮಣ್ಣಕವಿ
***ಕೃತಿ:*** ಜೀವನ ಸಂಗೀತ

## ೩. ಸಂಪಿಗಿ ತೆನಿಯಂಥ ಹುಡುಗ

**೧ನೆಯ ಚೌಕ**

ಸಂಪಿಗಿ ತೆನಿಯಂಥ ಹುಡುಗ | ಸಂತಾಗ್ಹಾಯ್ದು ಹೋಗ್ತಾನ
ಹಂತೀಲ್ಹೋಗಿ ಕೇಳಲೇನ ಹೆಸರ |

ನನ್ನ ಕಾಂತನ ರೂಪ ಹೊಂಟಂಗ ಹುಣ್ವಿ ಚಂದರ
ಇವನ ಚಿಂತಿಯೊಳಗೆ ಜೀವಕ್ಕಿಲ್ಲ ಸ್ಥಿರಾರ ।

ಕನಸಿನಾಗ ಕಂಡಂಗಾಯ್ತು । ಮನಸಿನಂದು ಹೋಗವೊಲ್ದು
ಹಲಸಂಗಿ ಊರಾಗಿಲ್ಲ ಇವನಂಥವರ ॥

ಇಂದ್ರಲೋಕದ ಪುರುಷ ಇವ । ಅರಸನ ಹೊಟ್ಟೀಲೆ ಹುಟ್ಯಾನೇನ
ಸರಸ ಕಾಮನಾಟಕ್ಞಾನ ದುರುಳ ।
ಇವಳ ತೋಳ ತೊಡಿ ಖ್ಯಾದಿಗಿ ಹೊಡಿ ಸರಳ ।
ನನ್ನ ಜೋಡಿ ಹಾನ ನೋಡಿ ಆದೆ ಮರಳ ।

ಇವನ ರೂಪ ಅಪರೂಪ । ಹಚ್ಚಿದಾಂಗ ಚಂದ್ರದೀಪ
ಏನು ತಿಳಪ ಹೊಟ್ಯಾಗಿನ ಕರಳ ॥

ಕುಂತ್ರ ನಿಂತ್ರ ಇವನ ಧ್ಯಾನ । ಜೀವಕಿಲ್ಲ ಸಮಾಧಾನ
ನಿದ್ದಿಯಿಲ್ಲ ಕಣ್ಣೀಗಿ ಹಗಲಿರಳ ।
ಇವನ ಹಸ್ತ ಏನ ಸಿಸ್ತ ಮಾವಿನ ತರಳ ।
ಮ್ಯಾಲ ಕಂದಲದ್ಧರಳ ಉಂಗರೊಪ್ಪೊ ಬೆರಳ ।

ಮನ ಸೋತು ನನ್ನ ಕೂಡ । ಮಾತ ಒಂದೂ ಆಡವೊಲ್ಲ
ಪ್ರೀತಿಯಿಟ್ಟು ನನ್ನ ಮ್ಯಾಲ ಸರಳ ॥

**||ಇಳುವು||**

ಹುರಪಿನವನಲ್ಲ ಇವನ । ಧುರಪ ಏನ್ಹೇಳಲಿ ನಾಗ
ಸರ್ಪ ಭೋರಾಡಿದಂಗ ನೋಡಿ ನಾ ಬೆರತ ।
ಇವನ ಚಿಂತಿಯೊಳಗ ಮನಿಮಾರ ಮರತ ।
ಹಲ್ಲಗಲ್ಲ ಏನ ತಿಳಪ । ಕುಂಕುಮ ಕನ್ನಡಿಯಂಥ ಹೊಳಪ
ಸೂರ್ಯನಂಗ ಅವ್ಹಾ, ಇವನ ಸುರತ ।
ಜೀವ ತಾಳಲಾರ್ದೆ ಕೂತೀನವ್ವ ಬ್ಯಾಸತ್ತ ॥

**||ಏರು||**

ಚಕ್ಕರಗಣ್ಣ ಕೊಕ್ಕರಮೀಸಿ । ನಕ್ಕರ ಚಂದ ನನ್ನ ಮುಂದ ।
ತೊಟ್ಟ ಅಂಗಿ ಹೊತ್ತ ಶಾಲಿ ಜರತಾರ ।
ಇಂವ ಹತ್ತು ಮಂದ್ಯಾಗ ಮುತ್ತಿನಂಥ ಸರದಾರ ।
ಇವನ ಚಿಂತೆಯೊಳಗ ಜೀವಕಿಲ್ಲ ಸ್ಥಿರಾರ ।

ಕನಸಿನಾಗ ಕಂಡಾಂಗಾಯ್ತು । ಮನಸಿನಂದು ಹೋಗವೊಲ್ದು
ಹಲಸಂಗಿ ಊರಾಗಿಲ್ಲ ಇವನಂಥವರ ॥

**೨ನೆಯ ಚೌಕ**

ಕೇಳ ಬಾಲಿ ಹೊಯಮಲ್ಲಿ । ಮನಸ ಯಾಕ ನನ್ನ ಮ್ಯಾಲಿ
ಸಾಕು ಮಾಡ ಯಾಕ ಹೇಳ್ತಿ ಬಡಿವಾರ ।
ಪ್ರತಿ ಪುರುಷರ ಮ್ಯಾಲ ಯಾಕ ನಿನ್ನ ನೆದರ ।
ಮನೀ ಗಂಡನ ಬಿಟ್ಟೂ ತಿರುಗೂ ರಂಡಿ ಮುಡದಾರ ।

ಕಂಡವರಿಗ್ಹೋಗಂವಲ್ಲ ನಾನ । ನಿನಗಿಲ್ಲ ಅಭಿಮಾನ
ಯಾಕ ನಿಂತ ಹೇಳ ನನ್ನ ಇದರ ॥

ಪಾರ್ವತಿ ಸರಸ್ವತಿ । ಅವರ ಮ್ಯಾಲಿ ಭಾಳ ಪ್ರೀತಿ
ಬ್ರಹ್ಮ ಕಳಕೊಂಡಾನ ತನ್ನ ಮಂತರಾ
ಪಂಚಮುಖ ಆದ ತೊಟ್ಟು ಹಂಕಾರಾ
ಒಂದು ತಲಿ ಕೊಯ್ದು ಬಿಟ್ಟದಾನ ಶಂಕರಾ ।

ಲೋಕದಲ್ಲಿ ಪೂಜಿ ಮಾಡಿ । ರೂಪ ಯಾರೂ ಕೇಳೂದಿಲ್ಲ
ಶಾಪ ಹತ್ತಿ ಆದ ಅಂವಾ ಧಿಕ್ಕಾರ ॥

ಪರಸ್ತ್ರೀಯರ ಸಂಗಮಾಡಿ । ಯಾವ ಸೂಳೀಮಗ ಈಗ
ದ್ರವ್ಯಗಳಿಸಿ ಆಗಿದಾನ ಸಾವಕಾರ ।
ಅಗ್ನಿ ದಿಕ್ಕಿನಲ್ಲಿ ಲಂಕಾ ಇತ್ತು ಬಂಗಾರ ।
ಪುಂಡರಾಮರ ದಂಡ ಕೆಂಡ ಬಡಿದು ಸುಟ್ಟಾರ ।

ಹೆಣ್ಣಿನ ಕಾಲಾಗ ಸತ್ತಿದಾರ । ಮಣ್ಣ ಮುಕ್ಕಿ ಭಾಳ ಮಂದಿ
ಯುದ್ಧ ಕಂಡು ಬಂದಾರ ದೇವ ದೈತ್ಯರ ॥

**||ಇಳುವು||**

ಮತಿ ಮಂದ ಸತಿಸ್ನೇಹ । ಎಂದಿಗಾದ್ರೂ ಮಾಡಬಾರದು
ಮುಕ್ತಿದಾರಿ ಕೆಡಸೂದು ತನ್ನ ಯುಕ್ತೀಲಿ ।
ಇಷ್ಟು ಖೊಟ್ಟಿ ಗುಣ ಆದ ಇದರ ಹಂತೀಲಿ ।
ಕಾಮ ವಿಷಯಕಾಗಿ ಇಂದ್ರ । ಗೌತುಮ ಋಷಿ ಮನಿಗ್ಹೋಗಿ
ಕೋಳಿಯಾಗಿ ಕೂಗಿದಾನ ಕಪಟೀಲಿ ।
ಅವರ ಶಾಪ ಹತ್ತಿ ಖಲಿ ಹತ್ತಿ ಕಪ್ಪೀಲಿ ॥

**||ಏರು||**

ಇಷ್ಟು ನನಗೆ ತಿಳಿಲಿಕ್ಕಾಗಿ | ಸ್ಪಷ್ಟ ನಿನಗ ಬರೂದಿಲ್ಲ
ಗಟ್ಟಿ ಹೇಳತೇನ ಕೇಳ ಸುಂದರಾ |
ಸಂಗವೊಲ್ಲ ದುಷ್ಟ ಚಾಲ ಖೊಟ್ಟಿ ಹೆಂಗಸರ |
ಇವನ ಚಿಂತಿಯೊಳಗ ಜೀವಕ್ಕಿಲ್ಲ ಸ್ಥಿರಾರ |
ಕನಸಿನಾಗ ಕಂಡಂಗಾಯ್ತು | ಮನಸಿನಂದು ಹೋಗವೊಲ್ದು
ಹಲಸಂಗಿ ಊರಾಗಿಲ್ಲ ಇವನಂಥವರ ||

**೩ನೆಯ ಚೌಕ**

ಯಾಕೊ ನಲ್ಲ ನಿನ್ನ ಮ್ಯಾಲ | ನನ್ನ ಖ್ಯಾಲ ರಾತ್ರಿ ಹಗಲ
ಎಂಥ ಬುದ್ಧಿ ಖೊಟ್ಟಿ ನಿಂದು ಕಡಿತನಕ |
ನೀವು ಸುಳ್ಳಂದ್ರ ಕೇಳೊ ಪುರಾಣ ಪುಸ್ತಕ |
ಇಂದ್ರನ ಭೆಟ್ಟೀಗರ್ಜುನ ಹೋದ ಸಹಜಃಕ |

ರಂಬಾ ಕುಂತು ಅವನ ಮ್ಯಾಗ | ಮನಸ ಮಾಡಿದಾಳ ಹ್ಯಾಂಗ
ಒಲ್ಲೇನಂದ್ರ ಶಾಪಕೊಟ್ಟಾಳ್ಯಾತಕ ||

ಶಾಪ ಹತ್ತಿ ಅರ್ಜುನಗ | ನಪುಂಸಕ ಆದಾನಾಗ
ವಿರಾಟರಾಯನ ಮನಿಯಾಗ ಬೇಲಾಸಕ್ಕ |
ಅಂವ ಹೆಂಗಸರ ಸಾಲೀ ಬರಿಸಿದಾ ಆ ಕಾಲಕ್ಕ |
ತಿರುಗಿ ಗಂಡರೂಪ ಬಂತು ಅವನ ಜನ್ಮಕ |

ಆದಿಶಕ್ತಿ ಅರ್ಧಾಂಗಿ ಶೋಕಿ | ದಾರೀಗಾದ್ರು ಬಿಟ್ಟಿಲ್ಲಾ ಕೀ |
ತಿಳಿದು ನೋಡಿ ಮುಂದ ನಡಿ ಮ್ಹಾಲಕ್ಕ ||

**||ಇಳುವು||**

ಭಕ್ತಿಯಿಟ್ಟು ಕರೀತಿನಿ | ನಗತ ಮಾಡೊ ನನ್ನ ಸಂಗ
ಒಲ್ಲೆನೆನ್ನುವ ಶಬ್ದ ಯಾಕ ಬಾಯೀಲಿ |
ನೀ ಗಂಡಸಾರೆ ಹೌದಲ್ಲೊ ಏನಲ್ಲೀ |
ಚಿಂತಿಯೊಳಗ ಚೈನಿಲ್ಲ | ಭ್ರಾಂತಿಗೆಟ್ಟು ತಿರುಗತೀನಿ
ಏನು ಕೊಟ್ರ ಬಂದಾ | ನನ್ನ ಹಂತೀಲಿ |
ಎಂದ ತೆಕ್ಕಿಮುಕ್ಕಿ ಹೊಡೆದು ಮಲಗೇನ ಪ್ರೀತೀಲಿ ||

**||ಏರು||**

ಆಲಪರೆದು ಚಾಲವರೆದು | ಕಾಲಬಿದ್ದು ಕರೀತೀನಿ
ಕರುಣಾ ಇಲ್ಲ ಏಳೊ ತುಸು ದರಕಾರ |
ನನ್ನ ಪ್ರಾಣಕೊಟ್ಟು ಕಾಣಸೇನು ಸರಕಾರ |
ಇವನ ಚಿಂತಿಯೊಳಗ ಜೀವಕ್ಕಿಲ್ಲ ಸ್ಥಿರಾರ |
ಕನಸಿನಾಗ ಕಂಡಾಂಗಾಯ್ತು | ಮನಸಿನಂದು ಹೋಗವಲ್ದು
ಹಲಸಂಗಿ ಊರಾಗಿಲ್ಲ ಇವನಂಥವರ ||

**೪ನೆಯ ಚೌಕ**

ಕಾಂತೀ ಮಾತ ಕೇಳಿ ಗೆಣ್ಯಾ | ಹಿಂದ ನೋಡ್ತಾನ ಎಂಥಾ
ವ್ಯಾಳೇ ತಂದಿ ಸ್ವಾಮಿ ಶಿವಶಂಕರ |
ಈ ರಂಡಿ ಅಬ್ಬುದ ಮ್ಯಾಲ ನಿಂತಾಳ ನಿರ್ಧಾರ |
ಇದಕ ನೆವನ ಮಾಡಬೇಕೊಂದು ಫಿತೂರ |

ಮನ್ಯಾಗ ನಿನ್ನ ಅತ್ತಿ ಮಾವ | ಅಂಜತಾದ ನನ್ನ ಜೀವ
ಧರ್ಮಸಾಲೀಗ್ಹೋಗೂನ್ನಡಿ ಪರಭಾರ ||

ಹೊತ್ತು ಮುಳುಗಿದ ಬಳಿಕ ಯಾರೀಗಿ | ಗೊತ್ತಿಲ್ದಾಂಗ ಮುಂದ್ಹೋಗಿ
ಕುಂದ್ರತೀನಿ ನೀ ಬಾರ ಬಿನ್‌ಘೋರ |
ನೀ ಆರು ತಾಸ ರಾತ್ರೀಗಿ ಬಾರ ಸುಂದರ |
ಬೆಚ್ಚ ಬೆಳಗಾನ ಮಾಡೂನಂತ ಗರ್ದಿಜುಮ್ಮರ |

ಘಂಟಾ ಹೇಳಿ ಹೊಂಟ ಹೋದಾ | ಗೆಣ್ಯಾ ತನ್ನ ಮನೀಕಡಿ
ತಿಳೀಲಿಲ್ಲ ಮುಂದಿಂದಿಕೀಗಿ ಹೂಣಾರ ||

ಹತ್ತು ಮಂದಿ ದಾರಿಕಾದ್ರು | ದಾರಿ ಹಿಡಿದು ಹೋಗುವಾಗ
ಕತ್ತಲಾಯ್ತು ಅವರೀಗಿ ಅಂಧಕಾರ |
ಅವರು ಊರು ನೋಡಿ ವಸ್ತಿ ಅಲ್ಲಿ ಇಳಿದಾರ |
ಊಟಾ ಮಾಡಿ ಅವರು ಧರ್ಮಸಾಲ್ಯಾಗ ಮಲಗ್ಯಾರ |

ಅತ್ತಿ ಮಾವ ಗಂಡಗುಣಿಸಿ | ಎಲ್ಲಾರೀಗಿ ಮಲಗಿಸಿ
ಆರು ತಾಸ ರಾತ್ರೀಗಿ ಹೊಂಟಾಳ ಅವಸರ ||

**||ಇಳುವು||**

ಅವಸರದಿಂದ ಅಡಾಡಿ ಮಾಡಿ | ತನ್ನ ಗೆಣ್ಯಾ ಹಾನಂತ
ಎಬ್ಬೂತನ ಇದ್ದ ಅಂವಾ ಹಾದಿಕಾರ |

ಅವನ ಬಾಯೀ ಕೇಳಿ ಎದ್ದು ಕುಂತ್ರು ಎಲ್ಲಾರ ।
ಅವರು ಎತ್ತಿ ಒಯ್ದರು ಬೆಳಗಾನ ತಮ್ಮ ಊರ ॥
ಗೆಣ್ಯಾ ಆಶೀ ಹಚ್ಚಿ ಘಾಸೀ ಮಾಡಿ । ಘಾಸೀ ಆಯ್ತು ನನ್ನ ಜೀವ
ಕೂತು ಅಳತಾಳ ಖೋಡಿ ಅದೃಷ್ಟಾ ।
ಆಕೀ ಗಂಡಗ ಸುದ್ದಿ ಹತ್ತಿ ಕೇಳ್ಯಾನ ಕಿವಿ ಮುಟ್ಟ ॥

**॥ಏರು॥**

ಹಲಸಂಗಿ ಊರ ಮೋಜಿನ ಶಾರಾ । ದಾದೇಪೀರನ ಮತಿ ಪೂರ
ಸಂಗೂ ವಸ್ತಾದ ರಾಯಪ್ಪನ ಹೆಸರ ।
ಖಾಜಾ ಲಾವಣಿ ಮಾಡಿದಾನ ಇಲ್ಲ ಕಸರ ।
ಇವನ ಚಿಂತಿಯೊಳಗ ಜೀವಕ್ಕಿಲ್ಲ ಸ್ಥಿರಾರ ।
ಕನಸಿನಾಗ ಕಂಡಾಂಗಾಯ್ತು । ಮನಸಿನಂದು ಹೋಗವಲ್ದು
ಹಲಸಂಗಿ ಊರಾಗಿಲ್ಲ ಇವನಂಥವರ ॥

***ರಚನೆ :*** ಖಾಜಾಭಾಯಿ
***ಕೃತಿ :*** ಜೀವನ ಸಂಗೀತ

## ೪. ಸ್ತ್ರೀ ವಂಚನೆ

ಕೈಲೆ ಕೊಟ್ಟ ಕಸಬೆರ್ನ ಹೋಗಬೇಕ ಖುಷಿಯಾಲಾ
ಗಂಡುಳ್ಳವರನ ಹೋಗುದು ಜೀವದ ಮ್ಯಾಲಾ ॥ ಪಲ್ಲ ॥

ಒಂದ ಮಾತ ಹೇಳತಿನಿ ಮಾಡಬ್ಯಾಡ್ರಿ ಗುಲ್ಲಾ
ನೆಲೆ ಬೆಲಿ ಹೆಣ್ಣಿನ ಬಲಿ ಯಾವಗ ತಿಳಿದಿಲ್ಲಾ
ಗಂಡ ಹೆಂಡ್ರಿದ್ರ ಒಂದ ಊರ ಒಳಗ ಖುಷಿಯಾಲಾ
ಅವರವರಲ್ಲಿ ಪ್ರೀತಿ ಕೂಡಿದ್ಧಂಗ ಸಕ್ಕರಿ ಹಾಲಾ
ಗಂಡ ಇಲ್ಲದಾಗ ಹೆಣತಿ ಜೀವ ಆಗುದ ಹಾಲ ಚಾಲಾ
ಬೇಕಾದ್ದ ತಿನಿಸಿ ಕೈ ಕೈ ಎಳಿವುಳ ಮಾರಿಮ್ಯಾಲಾ
ಗಂಡ ಕಾಯಿ ವ್ಯಾಪಾರ ಮಾಡೋಣು ಕಡಗಿನ ಕಾಲಾ
ಒಂದು ದಿನ ಬಂದಿ ಹೇರಿ ಘಟ್ಟಕ ಹೊಂಟಾನಲ್ಲಾ
ನೋಡಿ ಹೆಣತಿ ಅಳತ ಕೊರಳಿಗೆ ಬಿದ್ದ ಖಬರಿಲ್ಲಾ
ನೀವ ಹ್ವಾದ ಮ್ಯಾಲ ಒಬ್ಬಾಕಿ ಜೋಡಿ ಯಾರಿಲ್ಲಾ

**॥ಚಾಲ॥**

ಎಲ್ಲಿ ಹೋಗಲಿ ಎನ್ನುವ ಮನಾ ಮ್ಯಾಲ ಹಗಣ ಮಾಡುತಾ
ಗಂಡ ಊರಿಗೆ ಹೋಗಾನಾ ಖುಷಿಯಾಲಾ ನಗತಾ
ಒಬ್ಬ ಗೆಣ್ಯಾನ ಮಾಡಬೇಕಂತಾ ಮಾಡ್ಯಾಳ ಮಸಲತ್ತಾ
ಕಂಡಾಪಟಿ ತಿರುಗಿ ಭಂಡಾಗಿ ಬರುವ ಈ ಮಾಲಾ
ನಾಳಿ ಗಂಡಗ ಸುದ್ದಿ ಹತ್ತಿರ ಆದೀತ ಘಾತಾ
ಕಂಡ ಕಂಡಾವನ ಮಾಡಬಾರದ ಗೌಡ ಕುಲಕರ್ಣಿ ಹೊರ್ತಾ

**||ಏರು||**

ಈ ಊರಿಗೆ ಹಿರಿಯರನ ಹಿಡದಿಂದ ಕೇಳಾವರ್‍ಯಾರಿಲ್ಲಾ
ಕೈಲೆ ಕೊಟ್ಟ ಕಸಬೆರ್ನ ಹೋಗಬೇಕ ಖುಷಿಯಲಾ||೧ನೆಯ ಚೌಕ||

ಇಷ್ಟ ತಿಳದ ಓಣಿ ಹಿಡದ ಹೊಂಟಾಳಾಗ ಹೊಯ್ಮಾಲಿ
ದೂರ ನಿಂತ ಗೌಡನ ಕರದಾಳ ಕೈಯ ಸೊನ್ನಿಲಿ

ನೀವ ಬರ್‍ರಿ ಗೌಡ್ರ ಯಾರಿಲ್ಲ ನಮ್ಮ ಮನೆಯಲಿ
ನನ್ನ ಗಂಡ ಘಟ್ಟಕ ಹೋಗ್ಯಾನ ತಿಳಿರಿ ಮನದಲಿ

ಮಾತ ಕೇಳಿ ಮನಸಾತ ಆಕಿಯ ಮಾರಿಯ ನೋಡಿ
ನಸು ನಗುತ ಅಂತಾನ ಬರತೇನಿ ಮೂರು ಸಂಜೇಲಿ
ಗೌಡಗ ಹೇಳಿ ಘಟ್ಟಿ ಮಾಡಿ ಮುಂದಕ ನಡದಾಳ ಬಾಲಿ
ಒಳೇ ಡೌಲಾಗಿ ಕೂತಿದ್ದ ಕುಲಕರ್ಣಿ ಚಾವಡಿಯಲ್ಲಿ
ಮರಿಗೆ ಹೋಗಿ ಕೈಸೊನ್ನಿ ಮಾಡ್ಯಾಳ ಉಮ್ಮೇದದಲಿ
ಮಾರಿ ನೋಡಿ ಓಡಿ ಬಂದ ನಿಂತ ಆಕಿಯ ಹಂತೇಲಿ

**||ಚಾಲ||**

ಏನ ಬೇಡತಿ ಬೇಡ ಕೈಯಾಗ ಕೊಡತೇನ ಹಿಡಿ
ನೀವೇನ ಕೊಡ ಬ್ಯಾಡ್ರಿ ಇಂದ ಹಾಂಗ ಬರ್‍ರಿ ಮನಿಕಡಿ
ಇಷ್ಟ ತಜವೀಜ ಹೇಳಿ ಹೊಳ್ಳಿ ಬಂದಾಳ ಪ್ಯಾಟಿಗಿ ಓಡಿ
ದೂದಪೇಡೆ ಮಾಜುಮ್ಮಾ ತಗೊಂಡಾಳ ಬುಂದೇದುಂಡಿ
ಮನಿಗಿ ಹೋಗಿ ಮಂಚ ಹಾಕಿ ಮೆತ್ತಗ ಹಾಸಿಗಿ ಮಾಡಿ
ತಯಾರಾಗಿ ಕುಂತಾಳ ಗೌಡನ ಹಾದಿಯ ನೋಡಿ

**||ಏರು||**

ಅಷ್ಟರೊಳಗ ಗೌಡ ಬಂದ ನಿಂತ ಬಡದ ಬಾಗಲಾ
ಕೈಲೆ ಕೊಟ್ಟ ಕಸಬೆರ್ನ ಹೊಗಬೇಕ ಖುಷಿಯಾಲಾ||೨ನೆಯ ಚೌಕ||

ಗೌಡನ ಸಪ್ಪಳ ಕೇಳಿ ಎನ್ನ ದೊರಿ ಬಂದಂತಾ
ಪೇಡೆ ಬರ್ಪಿ ತಿನಸತಾಳ ಗೌಡನ ತೊಡಿಮ್ಯಾಲಿ ಕುಂತಾ
ಅಷ್ಟರೊಳಗ ಬಂದ ಕುಲಕರ್ಣಿ ಮಚ್ಚಿಯ ಬಡಕೋತಾ
ಅವನ ಸಪ್ಪಳಾ ಕೇಳಿಕ್ಯಾರ ಗೌಡ ಅಂಜಿ ನಡಗೂತಾ
ಇನ್ಯಾಂಗ ಮಾಡಲೆಂತಾ ಘಾಬರ್ಯಾಗಿ ಓಡಾಡುತಾ
ಹಾದರಗಿತ್ತೇರ ಹಗಣಾ ಯಾರಿಗೂ ತಿಳಿಯದು ಅಂತಾ
ಗೌಡಗ ಹೇಳ್ಯಾಳ ದೇವರ ಮನಿಯಾಗ ಕೂಡ್ರಂತಾ
ಅಡರಾಸಿ ದೇವರಮನ್ಯಾಗ ಹೊಕ್ಕ ಮೂಲ್ಯಾಗ್ಹೋಗಿ ಕುಂತಾ
ಕೈ ಹಿಡದ ಕುಲಕರ್ಣಿನ ಕರತಂದಾಳ ಅಂತಾಳ ಬಾ ಅಂತಾ
ಬುಂದೇದುಂಡಿ ಮಾಜುಮ್ಮಾ ಬರ್ಪಿ ಪೇಡೆ ತಿನಸೂತಾ

||ಚಾಲ||

ಇವರ ಗರ್ದಿ ಒಳಗ ಗಂಡ ಘಟ್ಟದಿಂದ ಬಂದಾ
ತನ್ನ ಹೆಣತಿಗಿ ಒದರಿ ಲಗು ಕದಾತಗಿ ಅಂದಾ
ಅಕಿ ಕಿಂವಿಗಿ ಸಪ್ಪಳ ಬಿದ್ದೀತ ಗಂಡ ಕರಿಯುದಾ
ಅಂಜಿ ಉಚ್ಚಿ ಹೋದಾಳ ಪಲಾಪಲಾ ಖಬರಿಲ್ಲದಾ
ಹೌಹಾರಿ ಕುಲಕರ್ಣಿ ದೇವರ ಮನಿಗಿ ಓಡಿದಾ
ನಡಗ ಹುಟ್ಟೀತ ಇಕಿಗಿ ಕೆಳತನಕ ಮ್ಯಾಲಿನಿಂದಾ

||ಏರು||

ಅವರಿಬ್ಬರನಡಗಿಸಿ ಬಂದ ತಗದಾಳ ಬಾಗಿಲಾ
ಕೈಲೆ ಕೊಟ್ಟ ಕಸಬೆರ್ನ ಹೊಗಬೇಕ ಖುಷಿಯಲಾ||೩ನೇ ಚೌಕ||

ಘಾಬರ್ಯಾಗಿ ಗಂಡಗ ಅಡಿಗಿ ಮಾಡ್ಯಾಳ ಓಡ್ಯಾಡುತಾ
ಉಂಡ ಮಲಗ್ಯಾರ ಇಬ್ಬರು ಮುಂದ ಕೇಳರಿ ಗಮ್ಮತಾ
ನೀರಡಿಸಿ ಕುಲಕರ್ಣಿ ತಾಳಲಾರದ ಒದರಿದಾ
ಅಯ್ಯಯ್ಯೋ ಸಾಯತೇನ ಲಗು ನೀರ ಕುಡಸೆಂದಾ
ಗಂಡ ಕೇಳತಾನ ಹೆಣತಿಗಿ ಏನ ಒದರತಾವಂತಾ
ಹೆಣತೆಂತಾಳ ಬಹಳ ದಿನಾ ಆದೀತ ದೇವರ ಹಸ್ತಾ
ಬೆಂಡ್ಲ ಹೆಣ್ಣ ಮಳ್ಳ ಗಂಡಗ ಹೇಳತಾಳ ಸನಮಂತಾ
ಗೆಣ್ಯಾಗ ಹೇಳ್ಯಾಳ ಜಗಲಿ ಮ್ಯಾಲ ಕಾಯಿ ಇಟ್ಟತಿ ಅಂತಾ

ಅದನೊಡದು ಕುಡಿ ನೀರ ಜೀವ ಮಾಡಿಕೊಳ್ಳೊ ಶಾಂತಾ
ಅಕಿ ಮಾತ ಕೇಳಿ ಕುಲಕರ್ಣಿ ಎದ್ದಾನ ಕಾಯಿ ಹುಡಕ್ಯಾಡುತಾ

**||ಚಾಲ||**

ಜಗಲಿ ಮ್ಯಾಲ ಇಟ್ಟ ಕಾಯಿ ಕುಲಕರ್ಣಿ ಕೈಯಾಗ ಹಿಡದಾ
ಕಾಯ ಒಡೀಲಾಕ ಕಲ್ಲ ಕಾಲಿಲೆ ಮನ್ಯಾಗ ಹುಡುಕಿದಾ
ಇದರಗಷ್ಟ ಮಾಡಿಸಿಕೊಂಡ ಗೌಡ ಮೂಲ್ಯಾಗ ಕೂತಿದ್ದಾ
ಹುಡಕ್ಯಾಡೂತ ಕುಲಕರ್ಣಿ ಅವನ ತೆಲಿಮ್ಯಾಗ ಕೈ ಊರಿದಾ
ಭಲೆ ಗುಂಡಗಲ್ಲ ದೊರಿತಂತ ಕಾಯಿ ಬಿರಿಸಿಲೆ ಒಡದಾ
ಘಾಬರ್‍ಯಾಗಿ ಗೌಡ ಗಡಬಡಿಸಿ ಲಬ್ಬಿ ಕೈ ಹೊಡದಾ

**||ಏರು||**

ಅಯ್ಯಯ್ಯೋ ಸಾಯತನಂತ ಗೌಡ ಮಾಡಿದಾನ ಗುಲ್ಲಾ
ಕೈಲೆ ಕೊಟ್ಟ ಕಸಬೆರ್ನ ಹೊಗಬೇಕ ಖುಷಿಯಾಲಾ||ಳನೇ ಚೌಕ||
ತೆಕಮುಕ್ಕಿ ಹಾದ ನೆಗನೆಗವಿ ಒಗದ್ರ ಬಲ್ಲಂಗ
ಖಬರಿಲ್ದ ಕುಸ್ತಿ ಹಿಡದಾರ ದೇವರ ಮನಿಯಾಗ
ಇವರ ಗದ್ದಲಕ ಅಕಿ ಗಂಡ ಎದ್ದಾನ ಹಾಸಿಗ್ಯಾಗ
ತನ್ನ ಹೆಣತಿಗಿ ಅಂತಾನ ದೀಪಾ ಹಚ್ಚ ಲಗುಬ್ಯಾಗ
ಎಂತಾ ದೇವ್ರ ನೋಡೋಣಂತ ಒನಕಿ ತಕ್ಕೊಂಡ ಕೈಯಾಗ
ಕುಲಕರ್ಣಿ ಮಾರಿ ನೋಡಿದ ಮನಿಯಾಗ
ದೊಡ್ಡವರಂತ ಮಾನದ್ಲೆ ಹಾಕಿದ ಹೊರಗ
ಕರಾಕರಾ ಹಲ್ಲತಿಂದ ಸಿಟ್ಯಾದ ಹೆಣತಿಮ್ಯಾಗ
ತುರಬ ಹಿಡದ ಜಗ್ಗಿ ಹಾಕಿ ನಾಕ ಹೊಡದ ಬೆನ್ನಮ್ಯಾಗ
ರಟ್ಟಿ ಹಿಡದ ಜಗ್ಗಿ ಬಡದ ಮನಿ ಬಿಡಸಿ ಹಾಕಿದ ಹೊರಗ

**||ಚಾಲ||**

ಮಾನಗೇಡಿ ಮಾಡುದುಕ ಸೀರಿ ಕುಬಸ ಕಳಸಿ
ಸುಣ್ಣ ಕ್ಯಾಮಣ್ಣ ಮುಸಡಿಗಿ ಬಡದ ಓಣ್ಯಾಗ ನಿಲ್ಲಿಸಿ
ಊರ ತುಂಬ ಮೆರಸಿದಾರ ಕತ್ತಿ ಮ್ಯಾಲ ಕೂಡ್ರಿಸಿ
ಒಳೆ ಗರತಿ ಹೆಣತಿನ ಮಾಡಿಕೊಂಡ ಪುರಮಾಸಿ
ಸುತ್ತ ನಾಡೊಳಗ ಬಾಗೋಡಿ ಊರ ಒಳೆ ಬೇಸಿ
ಕಲಗಿ ಇಟ್ಟ ಡಪ್ಪ ಒಡಿ ಹೋದಾಳ ನಾಗೇಸಿ

**||ಏರು||**

ಕವಿ ಬಾಳಗೋಪಾಲನ ಹಾಡ ಹೊಡದ್ಹಂಗ ಮುಂಗಾರಿ ಸಿಡ್ಲಾ
ಕೈಲೆ ಕೊಟ್ಟ ಕಸಬೆರ್ನ ಹೊಗಬೇಕ ಖುಷಿಯಾಲಾ||೫ನೇ ಚೌಕ||

*ರಚನೆ:* ಬಾಳಗೋಪಾಳ
*ಕೃತಿ:* ಬಾಳಗೋಪಾಳನ ಲಾವಣಿಗಳು

## ೫. ಚಂದ್ರುಣಿ

**೧ ನೆಯ ಚೌಕ**

ಚಂದ್ರುಣಿ ಚಂದನದ ಗೊಂಬಿ । ರತ್ನದ ಕಂಬಿ ।
ಆದಿ ಜಗದಂಬಿಹಂಗ ಡೌಲ ।
ನಿನ್ನ ಸರಿ ಈಗ ದೇವತೇರು ಯಾರೂ ಇಲ್ಲ ।
ಏನು ಬೇಡಿ ಬಂದೆ ಶಿವನಲ್ಲಿ ಎಷ್ಟು ಅಮಲ ।

ಮದವೇರಿಸಿ ಹೊಂಟಂಗ ಆನಿ ಜಾತ ಪದ್ಮಿನಿ ।
ಪಟ್ಟದಾ ರಾಣಿ ಗಾದಿ ಮ್ಯಾಲ ॥

ನಿನ್ನ ಪ್ರಾಯ ತುಂಬಿದಾ ಹೊಳಿ । ಬಾಳಿಯ ಸುಳಿ ।
ಚಂದ್ರನ ಕಳಿ ಕಸರಯಿಲ್ಲ ।
ಆದಿ ವಿಷ್ಣು ಪಿಂಡ ಮಾಡಿದಾನ ತೆಗೆದ ಹೊಯ್ಲಾ ।
ಬಿನ್ನ ಬ್ಯಾಸರಿಲ್ಲದೆ ತಿದ್ದಿ ಕೈ ಕಾಲ ।

ಮಹೇಶ್ವರ ಜೀವದ ಧನಿ । ಬ್ರಹ್ಮ ಬರೆದ ಫಣಿ ।
ಬೇಡಿ ಬಂದೆ ಜಾಣಿ ಸುಳ್ಳೇನಲ್ಲ ॥

ನಿನ್ನ ಮೂಗ ಸಂಪಿಗೀ ತೆನಿ । ಮುತ್ತಿನ ಗೊನಿ ।
ಕೋಗಿಲಂಗ ಧನಿ ಎಳಿಯ ಕಮಲ ।
ಓಣಿ ಹಿಡಿದ ಹೊಂಟ ಕುಣಿದಂಗ ಗಂಡನವಿಲ ।
ಮಂದಿ ದಂಗವರದ ನಿಂತನೋಡಿ ನಿನ್ನ ಮಜಲ ।

ನಿನ್ನ ಒನಪ ನೋಡಿ ನಾ ಬೆರೆತ । ಮನಿಯ ಮಾರ ಮರತ ।
ಹಾರಿತ ನನ್ನ ಸುರತ ಬಿದ್ದಂಗ ಸಿಡಲ ॥

**||ಇಳುವು||**

ಈ ಹೆಣ್ಣ ತೇಜಿಯ ಮರಿ । ಉಚ್ಚಿದಂಗ ವರಿ ।
ಅಲ್ಲ ಇಕಿ ಸರಿ ಶಿವನ ಮನಿ ರಂಬಾ ॥
ಉಟ್ಟ ಶಾಲಿ ಪಿತಾಂಬರ ಜರದ । ಕಣ್ಣ ನೋಡಿ ತೆರೆದ
ಹೊರಟ ಮೂಗ ಮುರದ ಎಷ್ಟ ನಿನ್ನ ಜಂಬಾ ॥
ನೀ ಹೆಣ್ಣ ರಾಧಿ ರುಕ್ಮಿಣಿ । ರತ್ನದಾ ಮಣಿ ।
ಮಾವಿನ ಗೊನಿ ಉಚ್ಚಿದಂಗ ತುಂಬಾ ।

**॥ಏರು॥**

ತುಂಬ ಉಚ್ಚಿದಂಗ ಮೈನರದಿ । ಭಾರದಾಗ ದೊರದಿ
ಕೇಳ ನನ್ನ ವರದಿ ಮಾಡಿ ಖುಲ್ಲಾ ।
ನಿನ್ನ ಕಂಡು ಮರತ ಮನಿಮಾರ ಜಿಂದಗಿ ಎಲ್ಲ ।
ಏನು ಬೇಡಿ ಬಂದೆ ಶಿವನಲ್ಲಿ ಎಷ್ಟು ಅಮಲ ।

ಮದವೇರಿಸಿ ಹೊಂಟಂಗ ಆನಿ, ಜಾತ ಪದ್ಮಿನಿ
ಪಟ್ಟದಾ ರಾಣಿ ಗಾದಿ ಮ್ಯಾಲ ॥

**೨ನೆಯ ಚೌಕ**

ಪರಸ್ತ್ರೀಯಳು ನಾ ಪತಿವರತಿ, ಗಂಡನುಳ್ಳ ಗರತಿ
ಮುಂದ ನಿಂದರತಿ ಯಾಕೊ ನಷ್ಟ ।
ನನ್ನ ಕಂಡು ಯಾಸಿ ದೀಡಿ ಮಾತನಾಡುದು ಎಷ್ಟಾ ।
ಅಣ್ಣಂತ ಕರೆದೆ ನಾ ಭಾಳ ಮಮತ ಇಟ್ಟಾ ।

ಬಾಳ್ವೆಗೇಡಿ ಅಲ್ಲ ನಿನ್ನ ರೀತಿ । ಇದ್ದಿನಿ ಪತಿವರತಿ
ವ್ಯರ್ಥ ತಿಂದಿ ಲತ್ತಿ । ಬಲವಿನೇಟಾ ॥
ಖಾನಖೂನ ಕೇಳತಿ ಗೊತ್ತ । ಬಂದ ಈ ಹೊತ್ತ
ಅಲ್ಲ ನಿನ್ನ ಮಾತ । ಇದ್ದೀ ಸೋಟ ।
ನನ್ನ ಒಗತನ ಹರಿಸೀ ನಿಂದೇನು ಹೋಗೂದು ಗಂಟ ।
ಜನದ್ದರಲಿ ಹೊರಸಿ ಒಣಮಾಡಿಯೊ ಬೊಬ್ಬಾಟ ।

ಮತಿಮಂದ ಮನಸ್ಯಾ ಪಾಮರ । ಎಲ್ಲಿ ಇಟ್ಟಿ ಖಬರ ।
ತಿಳಿದು ನೋಡು ಪೂರ ಮನಸಗೊಟ್ಟಾ ॥

ನಿನ್ನ ಎಲವು ಹಾಕಿಸೇನು ಗಾಳಿ । ಕಾಲ ಹಿಡಿದು ಸೀಳಿ
ಕಾಣಿಸ್ಯಾರು ಹೊಳಿ ಮಾಡಿ ಹಿಟ್ಟ ।
ನನ್ನ ಭಾವ ಮೈದುನ ಗಂಡ ಭಾಳ ಕೆಟ್ಟ ।

ಅವರು ಕೇಳಿದ್ರ ನಿನ್ನ ಪ್ರಾಣ ಕೊಂದಾರು ಸ್ಪಷ್ಟ ।
ಇನ್ನು ಸರದ ಬಂತು ನಿನ್ನ ಆಶಿ । ಆದಿಯೊ ಫಾಸಿ
ಭಾಳ ಮಂದಿ ಫಾಸಿ ಬಿದ್ದಾರೊ ಎಷ್ಟ ॥

**||ಇಳುವು||**

ನಿನ್ನ ಹೆಣ ಅಡವಿಯ ಪಾಲ । ಹಾದರಕ ಮೂಲ
ಒದಗಿ ಬಂತೊ ಕಾಲ ನಿನ್ನ ಸುತ್ತ ಕರ್ಮ ।
ತಂಗೆಂತ ಕರೆದಿ ಈಸು ದಿನ । ಗಂಡನ ಬೈ ಮಾನ
ಕೆಡಿಸಿದಿ ಮಾನ । ಬೆಳೆಸಿದ್ಯೋ ವರ್ಮಾ ॥
ಉಂಡಮನಿಗಳಾ ಎಣಿಸಾಂವ । ನಿಂದೆ ಆಡಾಂವ
ನಾಚಿಕಿಲ್ಲದಂವ । ಜೀವನಕ ತುಸು ಶರ್ಮಾ ॥

**||ಏರು||**

ನಾ ನಿನಗ ಹೇಳತಿನಿ ತಿಳಿಸಿ । ತಿಳಿಯೊ ಮನದಾಸಿ
ನೋಡೋ ನೀ ಸೋಸಿ ಇನ್ನು ಮ್ಯಾಲ ।
ಕಾಲೊದಗಿ ಬಂತು ನಿನ್ನ ಸುತ್ತ ಆಗಿ ಮೂಲ ।
ಏನು ಬೇಡಿ ಬಂದಿ ಶಿವನಲ್ಲಿ ಎಷ್ಟು ಅಮಲ ।
ಮದವೇರಿಸಿ ಹೊಂಟಂಗ ಆನಿ । ಜಾತ ಪದ್ಮಿನಿ
ಪಟ್ಟದ ರಾಣಿ ಗಾದಿ ಮ್ಯಾಲ ॥

**೩ ನೆಯ ಚೌಕ**

ಭಲೆ ಭಲೆರೆ ಹೆಣ್ಣ ಹೊಯಮಲ್ಲಿ । ಬಲ್ಲೆ ನಿನ್ನ ನೆಲಿ ।
ಮಾತ ನಿನ್ನಲ್ಲಿ ಎಷ್ಟು ಧಮಕಾ ।
ಇಷ್ಟು ಧಾಕ ಹೇಳಿದರ ಅಂಜಾವಲ್ಲ ಜೀವಕ ।
ಮುಂಚ ಮಲಗಂಟಿನೊಳೆ ಬರತಿದ್ದೆ ಮಂದಿರಕ ।

ಬಲ್ಲಂಗ ಹಾಕಿದೆ ಗುದಮುರಗಿ । ನಂದ ನಿಂದು ವಾರಗಿ
ಮಾಡಿಸೆಂದ ಸರಗಿ ಕೊಳ್ಳಾಗ ಪದಕ ॥

ಕುಚ ಹಿಡಿದರ ನಗತಿದ್ದ ಚಂದ । ಖುಷಿಯ ಮನದಂದ
ಅಕ್ಕರತಿಯಿಂದ । ಭಾಳ ಯಮಕ ।

ಮೈನರೆದಬಳಿಕ ಬರತೇನ ಅಂತ ಶಯನಕ ।
ಮುಂಚೆ ನೀನೆ ಹೇಳಿದಿ ತಿಳಿದು ನೋಡ ಮನಕ ।

ಕೇಳೂನಾ ಹಾರತಿ ಅಂತರಲಿ | ಎಷ್ಟು ನಿನ್ನ ಬಲಿ
ಎಳೆಯ ಕೋಮಲಿ ಸಾಕ ಮುರಕ ||

ನನ್ನ ಸುತ್ತ ಹಾಕತಿದ್ದಿ ಫೇರಿ | ಇದ್ದೆ ಸಣ್ಣ ಪೋರಿ |
ಕೊಂಡುಕೊಟ್ಟೆ ಕೊಬ್ಬರಿಯ ತಿನಲಾಕ |

ಸುಳ್ಳಂದ್ರ ಸಾಕ್ಷಿ ನಿನ್ನ ಗೆಳತಿ ಹಾಳ ಇದಕ |
ಮಾಡಲಾರ್ದೆ ಬೊಬ್ಬಾಟ ಸುದ್ದಿ ಆಯ್ತು ಜನಕ |

ನೀಸುಳ್ಳೆ ಹೊತ್ತಿ ಒಣಹರಲಿ | ಯಾಕ ಬರವೊಲ್ಲಿ
ತಿಳಿಯೆ ಮನದಲ್ಲಿ ನಿನ್ನ ಜೀವಕ ||

**||ಇಳುವು||**

ನಿನ್ನ ಭಾವ ಮೈದುನ ಯಾವ | ಇಲ್ಲ ಅರಿದಾವ
ಎಲ್ಲಿ ಕಡಿದಾವ ಹೇಳಬ್ಯಾಡ ಘಂದ ||

ಕುಡುವಚನ ಗಳಿಸ ಮನಸ್ಯಾನ | ಇರಲಯೀ ಖೂನ
ಭಾಳ ದಿನ ತಾನ | ತಿಳಿದು ನೋಡ ಮುಂದ ||

ನೀ ಬೆಳೆಸಬ್ಯಾಡ ಒಣ ಹಿರಸ | ಮಾತಿನಾ ತುರಸ
ಹೇಡಿ ನಿನ ಪುರುಷ | ನೋಡಿದೆನ ಇಂದ ||

**||ಏರು||**

ಈ ವ್ಯರ್ಥ ಜನ್ಮ ಒಣಭ್ರಾಂತಿ | ಮಾತ ಕೇಳ ಕಾಂತಿ
ಮಾಡಿಕೊ ಸಂತಿ | ಇನ್ನ ಮ್ಯಾಲ

ಈ ಪ್ರಾಯ ಮೀರಿದ ಮ್ಯಾಲ ಏನು ಮಾಡೂದು ತೊಗಲ |
ಏನು ಬೇಡಿ ಬಂದೆ ಶಿವನಲ್ಲಿ ಎಷ್ಟು ಅಮಲ |

ಮದವೇರಿಸಿ ಹೊಂಟಂಗ ಆನಿ | ಜಾತ ಪದ್ಮಿನಿ |
ಪಟ್ಟದ ರಾಣಿ | ಗಾದಿ ಮ್ಯಾಲ ||

**೪ ನೆಯ ಚೌಕ**

ನಾರಿ ಮರಳ ಆಗ್ಯಾಳ ತನ್ನ ಮನಕ | ಬರತ ಈ ಕ್ಷಣಕ |
ಬಂಗಾರಕ ತುಣಕ | ದೊರದಿ ನನಗ ||

ಕೈಹಿಡಿದು ಕರಿಯತಾಳ ರಂಗಮಾಲಿನೊಳಗ ।
ಗಾದಿ ಲೇಪ ಹಾಸಿದಾಳ ಚಪ್ಪರ ಪಲ್ಲಂಗ ।

ನನ್ನ ಉಪ್ಪರ ಕುಚ ಒತ್ತಿ ಹಿಡಿರಿ । ಮೆಲ್ಲಕ ಗಲ್ಲ ಕಡಿರಿ
ಅನ್ಮಾನ ಮಾಡಿಗಿಡಿರಿ । ಮನಸಿನೊಳಗ ।

ಮನ್ಮಥ ಸುರಿಸಿದಾಂಗ ಮಳಿ । ಕಾಮನಾಟ ಬಳಿ
ಚಿಕ್ಕ ಪ್ರಾಯ ಎಳಿ । ಕಮಲಿನಾಂಗ ।
ಮನಸೋತು ಮನಸ ಇಟ್ಟು ಮರಳ ಆಗ್ಯಾಳ ಅವಗ ।
ಮದವೇರಿ ಮನಿಗಿ ಹೋಗಿ ಕರಿತಾಳ ಗೆಣೆಯಾಗ ।
ಗೆಣ್ಯಾಅಂದ ಆಯ್ತು ನನ್ನ ಕೆಲಸ । ಕೆಟ್ಟವ ನಿನ್ನ ಪುರುಷ
ಯಾತರ ವಿಶ್ವಾಸ । ಅವಂದು ನನಗ ॥

ಸವಿ ಹಚ್ಚಿ ಗೆಣ್ಯಾಸರಕೊಂಡ ।ಗೆಳತಿ ಗಾಳಿಗೊಂಡ
ಎಂದ ಸತ್ತಾ ಗಂಡ । ಅಂತಾಳ ಆಗ ।
ಅವನ ಕೊಲ್ಲುವ ಯುಕ್ತಿ ಮಾಡ್ಯಾಳ ಮನಸಿನೊಳಗ ।
ವಿಷತಂದು ಕೂಡಿಸ್ಯಾಳ ಚಿನ್ನಿಯ ಸಕ್ಕರ್ಯಾಗ ।

ಹಾಲು ತುಪ್ಪ ನೀಡಿದಾಗ ಹಣಿಸಿ । ಸಕ್ಕರಿ ಸುರಿಸಿ
ಹೋಳಿಗಿ ಎಣಿಸಿ । ಕೊಟ್ಟಳವಗ ।

**॥ಇಳುವು॥**

ಗಂಡ ಹಸಿದ ಉಂಡ ಒಳಿತಾಗಿ । ವಿಷಬಿತ್ತು ಹೋಗಿ
ಜೀವ ತಗಬೀಗಿ । ಆಯ್ತು ಸಂಕಷ್ಟಾ ।

ನಿಮುಗಗ್ರ ಆಗ್ಯಾವ ಒಳೆನೇಟ । ನಂಜ ಆಯ್ತು ಊಟ
ಹೋಳಿಗಿದು ಅಷ್ಟ । ಹೊಡಿಯತಾಳ ಘಾಟಾ ॥

ಧಗಿ ಬಿದ್ದು ಪ್ರಾಣ ಬಿಟ್ಟ ಸವನ । ಕೊಂದಿದಾಳ ಮಾವನ
ಮಾಡಿ ಆಕಿ ನೆವನ । ಅಳುದು ಆರ್ಭಾಟಾ

**॥ಏರು॥**

ಬಡಕೊಂಡು ಅಳ್ತಾಳ ಹಾರಾಡಿ । ಜನ ಬಂತ ಓಡಿ
ಶಿವಾ ಕಿಡಿಗೇಡಿ । ಒಯ್ದಾನಲ್ಲ ।

ನನ್ನ ಗಂಡನ ಮ್ಯಾಲಿಂದು ನಾನೇಸಾಯಲಿಲ್ಲ।
ಅಳುವುದು ನೋಡಿ ಜನಗೋಳ ಹಿಡಿತ ಎಲ್ಲ।

ಮದವೇರಿಸಿ ಹೊಂಟಂಗ ಆನಿ। ಜಾತ ಪದ್ಮಿನಿ
ಪಟ್ಟದ ರಾಣಿ। ಗಾದಿ ಮ್ಯಾಲ॥

**೫ ನೆಯ ಚೌಕ –**

ಊರ ಮಂದಿ ಜನಾ ಆಯ್ತು ಗ್ವಾಳಿ। ಕಂಬಳಿ ಮಾಡಿ ಚಾಳಿ
ಬಂದಿದಾರ ಹುಗಳಿ। ಮುಗಿತ ಝಟ್ಟ।
ನಾರಿ ಮನಸಿನೊಳಗ ಖುಸಿಯಾಲ ಆಗ್ಯಾಳ ಎಷ್ಟ।
ಆ ಕ್ಷಣಕ ಗೆಣ್ಯಾನ ಮನಿಗಿಹೋಗಿ ಹಾಕ್ಯಾಳ ಗಂಟ।

ನನ್ನ ಗಂಡಂದು ಹೇಳತಿದ್ದಿ ಧಾಕ। ಕೊಂದ ನಾಠೀಕ
ಅನುಮಾನಿನ್ಯಾಕ। ನಡಿರಿ ಲಗಟ॥

ಗೆಣ್ಯಾ ವಿಚಾರ ಮಾಡಿದಾ ತಿಳಿದ। ವಿಶ್ವಾಸೇನಿಕಿದ
ತನ್ನ ಗಂಡಂದ। ಪ್ರಾಣ ನಷ್ಟ।
ಜೀವ ಹೊಡಿಲಾಕ ಹಿಂದ ಮುಂದ ನೋಡಲಿಲ್ಲ ಎಳ್ಳಷ್ಟ।
ಒಂದು ಘಳಿಗಿಗೆಣ್ಯಾನಾ ಏನು ಇಕಿಗಿ ಸ್ಪಷ್ಟ॥

ಏಳ ರಂಡಿ ಯಾತರಿಶ್ವಾಸ।ಕೊಂದಿ ಮನಿ ಅರಸ
ನನಗ ಮಾಡೀ ಮೋಸ। ಹೋಗ ಹೊಂಟ॥

ಕೈಯಂದು ಬಾಯಂದು ಕಳಕೊಂಡ। ಕೊಂದ ನನ ಗಂಡ
ಆಯಿತವ್ವ ಭಂಡ। ನನ್ನ ಅದೃಷ್ಟ।
ನನ್ನ ಗಂಡ ಇರೂತನಕ ಮಾನವಿತ್ತ ಎಷ್ಟಾ
ಕರೆನಾಯಿ ಕೇಳದಂಗ ಈಗ ಆಯ್ತು ಇಷ್ಟಾ

ಊನಾಗಿ ಕುಂತ ನಾ ರಂಡಿ। ಎರವು ಆಯ್ತು ದಂಡಿ
ಭಾಗ್ಯದಾ ಬಂಡಿ ಹೋಯಿತ ಹೊಂಟ॥

**॥ಇಳುವು॥**

ಹಾದರಕ ಬೆಂಕಿ ಹಚ್ಚಲೆಂದ। ಗಂಡನ ಕೊಂದ
ತಿಳಿಯಲಿಲ್ಲ ಮುಂದ। ಅಂತಾಳ ಸುಂದರಾ॥
ಕಲಿ ಮಹಾತ್ಮದೊಳಗ ಇಲ್ಲ ಅಳತಿ। ಹೆಂಗಸರ ಜಗಳ ಅತಿ।
ರಾಣಿ ಇಲ್ಲ ಗರತಿ। ಉಳಿಯಲಿಲ್ಲ ಯಾರಾ॥

ಇರು ಗ್ರಾಮ ಹಲಸಂಗಿ ಊರ ಪ್ರಸನ್ನ ದಸ್ತಗೀರ
ದಾದೇಸಾಬ ಪೀರ । ಮತಿಯ ಕೊಟ್ಟ ಪೂರಾ ॥

**||ಏರು||**

ಸಂಗುವಸ್ತಾದ ರಾಯಪ್ಪನ ಹೆಸರ । ಶಿಶಾ ಹಾನ ಶಿಖರ ।
ಖಾಜಾ ಕವೀಶ್ವರ । ಅನಿಸಿ ಮಿಗಲ ।
ಖಂಡೂನ ಸೂರ ವೈರೀಗಿ ಬಿತ್ತ ದಿಗಿಲ ।
ಏನು ಬೇಡಿ ಬಂದಿ ಶಿವನಲ್ಲಿ ಎಷ್ಟು ಅಮಲ ।
ಮದವೇರಿಸಿ ಹೊಂಟಂಗ ಆನಿ । ಜಾತ ಪದ್ಮಿನಿ
ಪಟ್ಟದ ರಾಣಿ । ಗಾದಿ ಮ್ಯಾಲ ॥

***ರಚನೆ :*** ಖಾಜಾಬಾಯಿ
***ಕೃತಿ :*** ಜೀವನ ಸಂಗೀತ

## ೬. ಅಸಲಜಾತ ಹೆಣ್ಣು

**೧ ನೆಯ ಚೌಕ**

ಹೆಣ್ಣಸಲಜಾತ ಪದ್ಮಿನೀ । ಸುರತ ಚಂದ್ರುಣೀ ।
ಹೊಂಟೆ ನಾಗಿಣೀ । ನೋಡ ತಿರುಗೀ
ಮರಿಗುದರಿ ಕುಣಿಸಿದಂಗ ನಾಜೂಕ ನಿನ್ನ ನಡಿಗಿ ।
ಹೊಳಿನೀರ ತೆರಿಯ ಹೊಡಿದಂಗ ಒದುತೆ ನಿರಗೀ ।

ತ್ರಿ ಲೋಕ ತಿರುಗಿ ಬಂದೆ ಹಾಡಿ । ಇಲ್ಲ ನಿನ್ನ ಜೋಡಿ ।
ರಂಬಿ ನಿನ್ನ ನೋಡಿ । ನಾಚ್ಯಾಳ ಕಡಿಗೀ ।
ಗರಗರಾ ತಿರವತೇ ಕಣ್ಣ । ಕೆಂಪ ಮೈ ಬಣ್ಣ ।
ಬೇತಲ ಸಣ್ಣ । ಕತ್ತಿಧಾರಿ ।
ನಿನ್ನ ಕಂಡು ಪಕ್ಷಿಗಳು ನಿಂತು ಹೌವ್ವಹಾರಿ ।
ನಿನ್ನ ನಡಿಗಿ ನೋಡಿ ನವಿಲ ಕುಣಿವುದ ಮರೆತಿತರಿ ।

ನಿನ್ನ ಶಬ್ದ ಕೇಳಿ ಆಗಿ ಲುಬ್ದ । ಕೋಗಿಲೆ ನಾಚಿ ಕದ್ದ ।
ವನಾ ಬಿಟ್ಟು ಎದ್ದ । ಹೋಯ್ತು ಹಾರಿ ॥

ನಿನ್ನ ಕಂಡು ಬಂತು ಭವಳೀಕಿ । ಕಡದಂಗಾಯ್ತು ಚಿಕ್ಕಿ ।
ಪಾರಿವಾಳದ್ಹಕ್ಕಿ । ಕೇಳ್ಯಾವ ಒದರಿ ।

ಆದಿವಿಷ್ಣುನರ್ಧಾಂಗಿ ಅಲ್ಲ ಇಕಿಯ ಸರಿ ।
ಇಕೀ ನಡಾ ನೋಡಿ ಸಿಂಹ ನಾಚಿ ತಿರುವಿತ ಮಾರಿ ।

ಏನು ತಪ್ಪಿ ಹುಟ್ಟಿದಿ ತರುಣಿ । ಬತ್ತಿಸ ಲಕ್ಷಣಿ ।
ಮಾತ ಕೇಳಿ ಗಿಣಿ । ನಾಚೇ ಬೆದರೀ ॥

**||ಇಳುವು||**

ನಿನ್ನ ಮೂಗ ನೋಡಿ ಚವಣಕ್ಕಿ । ನಾಚಿ ಜೀವಧಾಕಿ ।
ಇಲ್ಲ ಇಂಥಕ್ಕಿ । ಎಷ್ಟು ಇಕೀ ಝೋಕಾ ॥
ಹಾಲಕ್ಕಿ ನೋಡಿ ಆಯ್ತು ಗಪ್ಪ । ಏನು ಇಕೀ ರೂಪ ।
ಹಚ್ಚಿದಂಗ ದೀಪ । ಚಂದ್ರನ ಬೆಳಕ ॥
ತಿದ್ದಿ ತೀಡಿ ಗೊಂಬಿಹಾಂಗ ಮಾಡಿ । ರಂಬಿ ನಿನ್ನ ತಾಡಿ
ಗರುಡ ಪಕ್ಷಿ ನೋಡಿ ನಾಚಿ ತನ್ನ ಜೀವಕ ॥

**||ಏರು||**

ಭಲ್ಬಲಾ ಪಕ್ಷಿ ಹೋದು ಬೆರತ । ಹಾರಿತ ನನ್ನ ಸುರತ ।
ಬಾರ ನೀ ಅರತ । ನನ್ನ ಮನಿಗೀ ।
ನಾ ಬಿಟ್ಟೆನಿ ಅನ್ನ ನೀರ ನಿನ್ನ ಕಾಲಾಗ ಸೊರಗಿ ।
ಹೊಳಿ ನೀರ ತೆರಿಯ ಹೊಡಿದಂಗ ಒದುತ ನಿರಗಿ ।

ತ್ರಿಲೋಕ ತಿರುಗಿ ಬಂದೆ ಹಾಡಿ । ಇಲ್ಲ ನಿನ್ನ ಜೋಡಿ ।
ರಂಬಿ ನಿನ್ನ ನೋಡಿ । ನಾಚ್ಯಾಳ ಕಡಿಗೀ ॥

**೧ ನೆಯ ಚೌಕ –**

ಮಹಾ ಚತುರ ಕಾಣಿಸ್ತಿದಿ ಚದರ । ಎಲ್ಲಿ ಇಟ್ಟಿ ಖಬರ ।
ಬಂದು ನನ್ನ ಇದರ । ಕೇಳುದ್ಯಾಕ ।
ನಾ ಪಾತರದಾಕಿ ಅಲ್ಲ ಹಾದರ ಮಾಡುದಕ ।
ನನ್ನ ಒಗೆತನ ಹರಿಸೀರಿ ನಿಮ್ಮ ಸಲಗಿ ಸಾಕ ।

ಒಣ ಬಡವಾರ ಮಾತ ನಿಮಗ ಸಲುವಿ । ನಾ ಯಾವ ದೊಡ್ಡ ಚೆಲುವಿ ।
ರಂಬಿ ನನ್ನ ನಿಲುವಿ । ನಾಚ್ಯಾಳಾಕ ॥

ಸುಟ್ಟ ಹಂಚಿನಂಗ ಹೆಂಗಸ । ಮುಟ್ಟೆದರ ನಾಸ ।
ಆಗೂದು ಖಾಸ । ಸಾವುತನಕ ॥

ಯಾತಕ ಬಾರದಂಗ ಮಾಡೀನಂತಿರಿ ಮನಕ ।
ನಾ ಮಾರಿ ಎತ್ತಿ ಹ್ಯಾಂಗ ತೋರಿಸಲೆವ್ವ ಜನಕ ।

ನನ್ನಬರು ಹೋದೀತ ಕೈ ಮೀರಿ । ಬಿಡು ನನ್ನ ದಾರಿ ।
ಬೆಂಕಿ ಹಚ್ಚರಿ । ಹಾದರ ಮಾಡುದಕ ॥

ಗಂಡ ಜಾತಿ ಬ್ಯೆಲ ಬಂಗಾರ । ನಿಮಗ ಏನು ಘೋರ ।
ಕೇಳುವವರಾರ । ತಾಳಿರಿ ಬೆಳಕ ।
ಬೇಕಾದ್ದು ಮಾಡಿದರ ನಿಮಗ ಏನು ಧೋಕ ।
ಈ ಹೆಣ್ಣ ಜನ್ಮ ಶಿವ ಹುಟ್ಟಿಸಿದಾನ ಯಾಕ ।
ಪತಿವ್ರತಾ ಹೋದೀತು ನಂದು ಕರಗಿ । ಗಂಡನ ಸುರಗಿ ।
ಬರಲಾರದಂಗ ತಿರುಗಿ । ಹೋದ ಬಳಿಕ ॥

**॥ಇಳುವು॥**

ನಾ ಆದೇನು ಒಗೆತನಗೇಡಿ । ಜನದಾಗ ಖೋಡಿ ।
ಹಾದರ ಮಾಡಿ । ಹರಲಿ ತಲಿಮ್ಯಾಲ ॥
ಅಹಲ್ಯಾಂದು ಕೇಳಿಲ್ಲೇನು ಕತಿ । ಏನು ಆಯ್ತು ಗತಿ ।
ಗೌತುಮಾಕೀ ಪತಿ । ಶಾಪ ಕೊಟ್ಟರಾಗಿ ಬಿದ್ದಳ ಕಲ್ಲ ।
ಸೀತಾಗ ರಾವಣ ಒಯ್ದ ಇರ್ಷ । ರಾಮ ಆಕಿ ಪುರುಷ ।
ಗೆದ್ದು ತಂದ ಅರಸ । ಹೊಡೆದು ಅವನ ಶಿರಸ ।
ಸೀತಾಗ ಹೊಡಿ ಅಂತ ಹುಕಮ ಕೊಟ್ಟ ಖುಲ್ಲಾ ॥

**॥ಏರು॥**

ಲಕ್ಷ್ಮಣಗ ಹುಕುಮ ರಾಮ ಕೊಟ್ಟ ಸೀತಾನ ತಗೊಂಡಹೊಂಟ
ಅರಣ್ಯದಾಗ ಬಿಟ್ಟ । ಬಂದ ತಿರುಗಿ ।
ಸೀತಾಗ ವನವಾಸ ಸುಖ ಇಲ್ಲ ಘಳಗಿ ।
ಹೊಳಿನೀರ  ಥೆರಿಯ ಹೊಡಿದಂಗ ಒದುತೆ ನಿರಗಿ ।

ತ್ರಿಲೋಕ ತಿರುಗಿ ಬಂದೆ ಹಾಡಿ । ಇಲ್ಲ ನಿನ್ನ ಜೋಡಿ ।
ರಂಬಿ ನಿನ್ನ ನೋಡಿ । ನಾಚ್ಯಾಳ ಕಡಿಗೀ ॥

**೩ ನೆಯ ಚೌಕ**

ಗಂಡ ಜಾತಿ ಯಾತರಕ ಹೆಚ್ಚ । ಮಳ್ಳ ಆದ ಮುಂಚ ।
ಭಿಲ್ಲಣಿಗಿ ಹುಚ್ಚ ಆದ ನೋಡಿ ।

ಸಾಕ್ಷಾತ ಜಗದ್ಗುರು ಸಾಂಬ ತಿಳಿಯಗೇಡಿ ।
ಹೆಂಗಸ ಮಾಯಿ ಗಂಡಸ ಹುಚ್ಚ ಖೋಡಿ ।

ಇಬ್ಬರದು ಮಹತ್ವ ಆದ ಸವನ । ಸಿಂಪಗ್ಯಾನ ನೆವನ ।
ಹಾದರಕ ಕವನ । ಸಾಂಬ ಮಾಡಿ ॥

ನಿನ್ನ ಮಾತ ಅನುವದಿಲ್ಲ ಸುಳ್ಳ । ರತ್ನದ ಹಳ್ಳ ।
ಆದೆ ನಾ ಮಳ್ಳ । ನಿನಗೆ ಖೋಡಿ ।
ಈ ಹೆಣ್ಣಗಂಡ ಶಿವ ಹುಟ್ಟಿಸಿದಾನ ಜೋಡಿ ।
ಇರವಿ ಎಂಬತ್ತುಕೋಟಿ ಜೀವರಾಸಿ ಮೊದಲ ಮಾಡಿ ।

ಹೆಚ್ಚ ಕಮ್ಮ ಮಾಡಿಲ್ಲ ಗುರುರಾಯ । ತತ್ವದ ಕಾಯ ।
ಮನ್ಮಥಕ ಮಾಯ ಪ್ರೀತಿ ಕೂಡಿ ॥

ತಗದ್ಢೇಳ ಬ್ಯಾಡ ಒಣಕುಸಲ । ಜಾತಿಲಿದ್ದ ಮುಸಲ ।
ಶಾಸ್ತ್ರದ ಶಿಕಲ । ಹೇಳ್ತ ಝೂಡಿ ।

ಎಷ್ಟೆಂದು ದೃಷ್ಟಾಂತ ನಾ ಹೇಳಲಿ ಖೋಡಿ ।
ಪಾಂಡವರಿಗೆ ದ್ರೌಪದಿ ಪತಿವ್ರತಾ ಅನಸ್ಯಾಡಿ ।

ಐದು ಮಂದಿ ಪುರುಷರನು ಬಿಟ್ಟ । ದ್ರೌಪದಿ ಮಾಡಿ ಕಪಟ ।
ಕರ್ಣನಲಿ ಇಟ್ಟ । ಮನಸ ಮಾಡಿ ॥

**॥ಇಳುವು॥**

ಎಲ್ಲ್ಯಾದ ನಿನ್ನ ಸುಟ್ಟ ಹಂಚ । ಹೇಳತಿದಿ ಮುಂಚ ।
ಪತಿವ್ರತಾ ಅಂಚ । ಯಾವಾಕಿ ಹಾಳ ಗರತೀ ॥

ಕಲಿ ಬರುವಾಗ ಏರಿತ ಕಲ್ಲ । ಗುಡ್ಡದ ಮ್ಯಾಲ ।
ಕುಂಡಿಲೇ ಹುಲ್ಲ । ಮೇಯುತಿತ್ತ ಕತ್ತೀ ।
ಉಪರಾಟೆ ಕಲಿಯ ಕಾಲ । ಉಳಿಯಲಿಲ್ಲ ಶೀಲ ।
ಗರತಿಗಿಲ್ಲ ಮೋಲ । ಹಾದರಗಿತ್ಯಾಗಿ ಕುಂತಾಳ ಗರತೀ ॥

**॥ಏರು॥**

ಕಲಿಯಿದ್ದಾಂಗ ಮಾಡೂನು ರೀತಿ । ತಿನಿಸಬೇಡ ಗೊತ್ತಿ ।

ಬಿಟ್ಟು ಬಿಡು ಭೀತಿ । ತೊಳೆದು ಮನಸೀಗಿ ।
ಶಿವ ಜೋಡಿ ನೋಡಿ ಗಂಟ ಹಾಕ್ಯಾನ ಇಬ್ಬರಿಗಿ ।
ಹೊಳಿ ನೀರ ತೆರಿಯ ಹೊಡಿದಂಗ ಒದುತ ನಿರಿಗಿ ।

ತ್ರಿಲೋಕ ತಿರುಗಿ ಬಂದೆ ಹಾಡಿ । ಇಲ್ಲ ನಿನ್ನ ಜೋಡಿ ।
ರಂಬಿ ನಿನ್ನ ನೋಡಿ । ನಾಚ್ಯಾಳ ಕಡಿಗೀ ॥

**ಆನೆಯ ಚೌಕ**

ಕೇಳಿ ಮಾಯ ಬಂತ ಮನಕರಗಿ । ಹೇಳತಾಳ ತಿರಗಿ ।
ಇಬ್ಬರದು ವಾರಗಿ । ಒಂದೆ ಜುತ್ತಾ ।
ನಮನಿಮದು ಪಣಾ ಇಂದ ಕೂಡಿಬಂತು ವರತಾ ।
ನಮ್ಮ ಮನಿಗಿ ಬಂದ್ರ ಬೊಬ್ಬಾಟ ಆಗುದು ತುರ್ತ ।

ನಿಮ್ಮ ಮನಿಗಿ ಬರತ ನಡಿ ಚದರ । ಹಿಡಿದು ನಿಮ್ಮ ಪದರ ॥
ಹುಣ್ಣಿವಿ ಚಂದರ । ನಿಮ್ಮ ಸುರತ ॥

ಝೂಡಿ ಜಮಖಾನಿ ಜಾಜಮ ಹಾಸಿ । ಕುಂತಿದಾರ ಬೇಸಿ
ಯಾತರದ ಆಶಿ । ನಿಮ್ಮ ಹೊರತ ।
ದ್ರವ್ಯದ ಕೊಡ ಇಂದ ಸಿಕ್ಕಂಗ ದೌಲತ ।
ಕೈಲಾಸದಿಂದ ಶಿವ ಇಳದಂಗ ಈ ಹೊತ್ತ ।
ಬತ್ತೀಸ ಕಾಮನಾಟಕ್ಲಚ್ಚಿ । ಮನ್ಮಥ ಹೆಚ್ಚಿ
ಮಾಯಕ ಮೆಚ್ಚಿ । ನಿಮಗೆ ಬೆರೆತ ॥

ಕಮಲಾಕ್ಷಿ ಕಾಮಿನಿ ಕಸ್ತೂರಿ । ಉಲ್ಲಾಸ ಮಾಡಿ ಸೂರಿ ।
ಕಲ್ಗಿಯವರ ಪೋರಿ । ಹಾಳ ಪತಿವ್ರತಾ ।
ತುರಾಯ್ದವರ ಹುಡುಗನ ಕೂಡಿದಾಳ ಮರತ ।
ಒಣ ಇರ್ಷದಿಂದ ವಾದ್ಹಾಕಿ ಆಯ್ತು ವ್ಯರ್ಥ ।

ಪತಿವ್ರತಾ ಹೋಯ್ತು ಮಣ್ಣೂಡಿ । ಆಗಿ ಕುಂತ ಖೋಡಿ ।
ನಿನಗ ಏನು ಧಾಡಿ ಮಾನ ಹೋಯ್ತು ॥

**॥ಇಳುವು॥**

ಆಕಿ ಗಂಡಗ ಹತ್ತಿತ ಸುದ್ದಿ । ಕಳೆದೆ ರಂಡಿ ಬುದ್ಧಿ ।
ಹಾಕಿದಾನ ಗುದ್ದಿ । ಹೋಗ ಹಳಿನಾಯಿ ॥
ಸೆರಗ ಹರಿದ ಹೇಳ್ಯಾನೆಲ್ಲರಿಗಿ । ತವರ ಮನೀಗಿ ।

ಬೀಬಿ ಇಂಗಳಗಿ । ಅಲ್ಲಿ ಇಕೀ ತಾಯಿ ॥
ಗಂಡನಿಂದ ಇತ್ತು ನನಗ ಮಾನ । ಹೋಯ್ತು ಮುತ್ತೆಯ್ತನ ।
ಆಗಿ ಕುತ್ತ ಊನ । ಆದೆ ಕಿಸಬಾಯಿ ॥

**॥ಏರು॥**

ಕರನಾಟಕ ಹಲಸಂಗಿ ಊರ । ಮೆರಿಯತಾವ ತೂರ ।
ಮಲಿಕ ಮೈತರ । ಹಚ್ಚಿ ವರಿಗಿ ।
ಖಜ್ಯಾನ ಕವಿ ಸವಿ ಸಕ್ಕರಿ ಎಲ್ಲರಿಗಿ ।
ಖಂಡೂನ ಸೂರ ಕೇಳಿ ಕಲ್ಲ ಮನಸ ಕರಗಿ ।
ಹೊಳಿನೀರ ತೆರಿಯ ಹೊಡಿದಂಗ ಒದುತೆ ನಿರಗಿ ।
ತ್ರಿಲೋಕ ತಿರುಗಿ ಬಂದ ಹಾಡಿ । ಇಲ್ಲ ನಿನ್ನ ಜೋಡಿ ।
ರಂಬಿ ನಿನ್ನ ನೋಡಿ । ನಾಚ್ಯಾಳ ಕಡಿಗೀ ॥

***ರಚನೆ :*** ಖಾಜಾಬಾಯಿ
***ಕೃತಿ :*** ಜೀವನ ಸಂಗೀತ

## ೭. ಗಿಡ್ಡ ಪೋರಿ

**೧ ನೆಯ ಚೌಕ –**

ಗಿಡ್ಡಪೋರಿ ಮಡ್ಡ ಹರಿ ಮಕ್ಕರ್, ಕಣ್ಣ ತಿರುವಿ ಚಕ್ಕರ್
ನಿಂತು ನೀ ನಕ್ಕರ ಉಳ್ಳತಾವ ಮುತ್ತ ।
ವಸ್ತಕಾರಿಪಟ್ಟಿ ವಾಲಿಗಂಟಿ ಮೂಗನಾಗ ಸರಾಜಮನತ್ತ ।
ಶ್ರೀಸಾನಿಧಪ ಪಧನೀಸ ಸರಿಗಮ ನಾರಿ ನಿನ ಗತ್ತ ।
ನಮ್ಮ ಕಂಡು ಹೋಗ ಬ್ಯಾಡ ಚದರಿ । ಓಡಿದಾಂಗ ಬೆದರಿ ಕಾರ್ಝುಣವಿ ಎತ್ತ ॥

ಏನು ಮುಂಗಾರಿ ಮಳಿಹಾಂಗ ಸಿಡಲ್ । ಬಿದ್ದಿತು ಖಡಲ್
ಎದಿ ಅಂತು ಧಡಲ್ ಆಗಿ ನಿಂತೆ ಮೂಕ ।
ನಿನ್ನ ಸುರತ ಕಂಡು ಮೈ ಮರೆತ ಮಾತಾಡ ಧಾರಿತ ತರ್ಕ ।
ಮತ್ತ ಯಾದ ಹಚ್ಚಿ ಶೋಧ ಮಾಡಿ ಕೇಳತ ನಿನಗೊಂದು ಸೋಕ ।

ಕುಡು ಭರಸ ಮಾಡೂನು ಸರಸ ಬೆಳ್ಳ ಬೆಳತನಕಾ ॥
ನಿನ್ನ ಎದಿ ಮ್ಯಾಲ ಕುಚಗಳು ಬಗರಿ । ನಿಂತವ ನಿಗರಿ
ಗಂಡೆರಳಿ ಚಿಗರಿ ಹಾಂಗ ನಿನ್ನ ರೂಕಾ ।
ಸಣ್ಣ ಶಾಲಿ ಉಟ್ಟ ಓಣಿಗುಂಟ ಪೋರಿ ಎಷ್ಟ ಮಾಡತಿ ಮುರಕ ।

ನೀರ ಥೆರೀ ಹಾಂಗ ನಿರಗಿ ಒದ್ದು ನಾರಿ ನಡೆವುದು  ನಾಜೂಕಾ।
ಆನಿ ನಡಿದಾಂಗ ಮಾಡಿ ಸಿಂಗಾರ ಮೈಮ್ಯಾಲ ಬಂಗಾರ ಬಿದ್ದಂಗ ಬೆಳಕ॥

ನಿನ್ನ ಬೆಲಿ ಹೇಳ ಬಾಲಿ ಎಷ್ಟರದ ಹೋಗಬ್ಯಾಡ ಮುರದ
ವಸ್ತ ಭಂಗರದ ತಗೊ ನಿನ್ನ ತೂಕ।
ಇದಕನುಮಾನ ಯಾಕಿನ್ನ ಬಿಡು ನಿನ್ನ ಮನದಾನ ತೊಡಕ।
ಈ ಜನ್ಮಕ ಬಂದ ಮೂರ ದಿನದ ಸಂತೀ ಮಾಡೂನು ಬಾ ಖಡಕ
ಈ ಹರೇ ಹೋದ ಮ್ಯಾಲಸರದ ಅಲ್ಲಿಂದ ಬರದ ಈಗಿನ ಧಮಕ॥

**॥ಇಳುವು॥**

ಈ ಭಾರದಾಗ ಕುಡು ಕೈಯ ಒಲ್ಲ ಅನಬ್ಯಾಡ
ನಡಿ ರಂಗಮಾಲದಾಗ ಬಂದ ಕೂಡ ನನ್ನ ಜೋಡ। ನನ್ನ ಜೋಡ

ಯಾವ ಮಾತಿಂದೇನು ಕೊರತಿಲ್ಲ ಮನ್ಯಾಗ ಉಂಡಾಡ। ಉಂಡಾಡ
ಸ್ವತ ನಡಿಸಿ ಕುಡತ ನನ್ನ ಜೀವದ ಮ್ಯಾಲ ನೀ ಕಾಡ। ನೀ ಕಾಡ

ಹಿಂಗ ಪೋರಿಗಿ ಹೇಳ್ಯಾನ ಬೆಳಸಿ। ಒಳಿತಾಗಿ ತಿಳಸಿ
ತಾಯಿ ತಂದಿ ಗಳಿಸಿ ಇಟ್ಟಾರ ಮಸ್ತ।
ಮತ್ತ ದೌಲತ ನಾವು ಕುಂತ ಉಣ್ಣೂನಂತ ಬಂಗಾರ ತುತ್ತ।
ಶ್ರೀ ಸಾನಿಧಪ ಪಧನಿಸ ಸರಿಗಮ ನಾರೀ ನಿನ್ನ ಗತ್ತ।
ನಮ್ಮ ಕಂಡು ಹೋಗಬ್ಯಾಡ ಚದರಿ ಓಡಿದಾಂಗ ಬೆದರಿ ಕಾರ್ಘುಣವಿ ಎತ್ತ

**೨ ನೆಯ ಚೌಕ**

ಯಾಕೊ ಗಂಡುಳ್ಳ ಬಾಲೇರಿಗಿ ಹಟಕ್। ಕೇಳತಿ ಕೀಟಕ್
ಅವನ ಮ್ಯಾಲ ಚಟಕ್ ಮುರದಾಳ ಬಟ್ಟ।
ನನ್ನ ಪುರುಷ ಹಾನ ದುರುಷ ಖಾಲೆ ಇರ್ಸ ಬೆಳಸಬ್ಯಾಡ ನೀ ತಂಟ
ನನ್ನ ಸೋದರ ಮಾವ ಕೆಟ್ಟಾವ ನಿನ್ನ ಜೀವ ಮಾಡ್ಯಾನು ಚಟ್ಟಾ
ನಿನ್ನ ಮನದಾಗ ನೋಡೋ ತಿಳಿದ। ಕಾಲ್ಹಿಡಿದೆಳದ ಕಿತ್ತ್ಯಾರೊ ಜುಟ್ಟಾ
ಕಂಡ ಕಂಡಲ್ಲಿ ತರಬತಿ ಸಂಧ್ಯಾಗ। ಮಾನ ಕಳಿದೀ ಮಂದ್ಯಾಗ
ಹಾಕಿಸೇನು ಬಂದ್ಯಾಗ। ಇದ್ದಿ ಮರಸೋಟಾ।
ಖಾಲೆ ಭಂಡ ಮಾಡಿ ದಂಡ ಕೊಟ್ಟಿ ಹ್ವಾಂಡ ಇದ್ದಿ ಭಾಳ ಅಡಮುಟ್ಟ
ಈ ಸರ್ಕಾರೊಂಡು ಪ್ರಕಾರಾದ ಕಾಣಸ್ಯಾರು ತುರಂಗ ಘಾಟ

ನಿನಗ ಬೇಡೀ ಹಾಕಸೇನು ಒಯ್ದು। ಅಲ್ಲಿಂದ ಕಯ್ದು ಭೋಗಸುದು ಕಷ್ಟ॥
ಬಾಳಕೆಟ್ಟಾದ ಹೆಣ್ಣಿನ ಇರಸ। ಲಂಕಾದರಸ

ಮಂಡೋದರಿ ಪುರಷ ರಾವಣ ಕುಷ್ಟಾ ।
ಮೈಗಿ ಬೂದಿ ಧರಿಸಿ ಸಾಧು ಆಗಿ ಸನ್ಯಾಸಿ ರೂಪ ತೊಟ್ಟ ।
ಅವ ಕಪಟದಿಂದ ಹೋದ ಅಲ್ಲಿ ಸೀತಾನ ಬಲ್ಲಿ  ಬೇಡಿದಾ ಹಿಟ್ಟ ।
ಮಂಡಲದೊಳಗಿದ್ದರೇನು ಕಿಮ್ಮತ ಹೊರಗ ಬರೂನಾಮಾತ
ಎತ್ತಗೊಂಡು ಹೊಂಟ ॥

**||ಇಳುವು||**

ಸೀತಾನ ಸಲುವಾಗಿ ಲಂಕ ಸುಟ್ಟ ಮಾರುತಿ । ಮಾರುತಿ
ಭಾಳ ಮಂದಿ ಮಡೀತೋ ಮುಳುಗಿ ಹೋಯ್ತು ಸಂಪತಿ
ಕೌರವನ ಹೊಡಿಸಿ ಬಿಟ್ಟಾಳ ಪಾಂಡವರ ದ್ರೌಪತಿ । ದ್ರೌಪತಿ

**||ಏರು||**

ಭೀಮಸೇನಂದು ಇತ್ತು ಒಳೆ ಧಸಕ । ತುಳದಾನ ಕಚಕ
ಆವಾಗ ಕೀಚಕ ಸೊಕ್ಕ ಮುರಿದು ಸತ್ತ ।
ಈ ಹೆಣ್ಣಿಗಾಗಿ ಮಣ್ಣಗೂಡಿ ಮುಳುಗಿ ಹೋಗ್ಯಾವ ದೌಲತ್ತ ।
ಶ್ರೀಸಾನಿಧಪ ಪಧನಿಸ ಸರಿಗಮ ನಾರಿ ನಿನ ಗತ್ತ ।
ನಮ್ಮ ಕಂಡು ಹೋಗಬ್ಯಾಡ ಚದರಿ ಓಡಿದಾಂಗ ಬೆದರಿ ಕಾರ್ಘಣವಿ ಎತ್ತ ॥

**೩ ನೆಯ ಚೌಕ**

ಪೋರಿ ಹೇಳಬ್ಯಾಡ ನನಗೊಂದು ಅಕಲ । ಕೃಷ್ಣನ ಗೋಕುಲ ।
ಒಳಗಿನ ದಾಖಲ । ಕೇಳ ಶಾಣೇರಗಿ ।
ಆ ಶ್ರೀಹರಿ ಶರಾಸೂರಿ ಮಾಡಿದಾ ಗೌಳಗೆರಗಿ ।
ಆಂವ ಹದಿನಾರು ಸಾವಿರ ಭೋಗಿಸಿದಾ ಗೋಪ್ಯಾರಿಗಿ ।

ನೀ ತಗೀಬ್ಯಾಡ ಖಾಲೀ ಕುಸಲ ಮಾತಿನ ಹಾಸಲ ಕೇಳ ತುಸು ತಿರಗಿ ।
ನಿನ್ನ ಮಾವಂದು ಇಟ್ಟಿದಿ ಹಿಮ್ಮತ । ಅವಂದೇನು ಕಿಮ್ಮತ
ಮಾಡೂನು ಬಾ ಗಮ್ಮತ । ಇಂದ ರಾತರಿಗಿ ।
ಶಿವ ಹುಡುಕ್ಯಾಡಿ ಸಮಜೋಡಿ ಗಂಟ ಹಾಕ್ಯಾನ ಇಬ್ಬರಿಗಿ ।
ನಿನ್ನ ದೈವ ಭಾಳ ಸವ್ವಮೊಳ ಹಾಂಗಂತ ದೊರೆದೆ ನನ್ನ ವಾರಿಗಿ ।
ನಾ ಎಷ್ಟು ಹೇಳಲೆ ಹುಚ್ಚೀಗಿ ಐದು ಹೂವ ಹೆಚ್ಚೀಗಿ ಹಾಕ ದೇವರಿಗಿ ॥

ನಿನ್ನ ಗಂಡಂದು ಹೇಳಬ್ಯಾಡ ಬಿರದ । ಅಂವ ಅಲ್ಲ ಮರದ ।
ನುಂಗೇನ ಅರದ । ಅದು ಯಾವ ಭಾರಗಿ ।
ಇಷ್ಟು ದಮ್ಮ ಬ್ಯಾಡ ಸುಮ್ಮ ಬಾ ಅಂಜಬ್ಯಾಡ ನೀ ಯಾರ್ಯಾರ್ಗಿ ।

ನಿನ್ನ ಕೊಳ್ಳ ಆಣಿ ಸುಳ್ಳ ಅಲ್ಲ। ಕೇಳ ಉಬೇ ಊರಿಗಿ।
ನಾ ಸುಳ್ಳೇ ಹೇಳೂದಿಲ್ಲ ಬಡಾಯಿ ಮಾಡೇವು ಲಡಾಯಿ ಜಗಳ ಮಾರೀಗಿ॥

**॥ಇಳುವು॥**

ನೀ ಮಾಡಿ ನೋಡ ಹಾದರ ಅಂಬುದು ಹಸಿ ಹಾಲ। ಹಸಿ ಹಾಲ॥
ತಂದಂಗ ಸುಲದ ಕೇರಿ ಕರೀಕಬ್ಬ ಭಾಳ ಸವಿ ಬೆಲ್ಲ। ಸವಿ ಬೆಲ್ಲ॥
ಅಮೃತ ಫಲ ಜೇನುತುಪ್ಪ ಇದರ ಮುಂದಲ್ಲ। ಮುಂದಲ್ಲ॥

**॥ಏರು॥**

ಏನು ಮಾವಿನ ಕಾಯಿ ಬಂತು ಪಾಡಕ। ಗಿಣಿ ಕೂತು ಗಿಡಕ
ಕಡಿದು ಒಗೀತು ಬುಡುಕ। ಕೊಳತಿತು ವ್ಯರ್ಥ।
ಹಾಂಗ ಕೊಳತ ಹೋದೀ ಎಳತ ಯಾಕ ಹಚ್ಚಿದಿ ಮಾಡ ಖೂನ ಗುರುತ।
ಶ್ರೀಸಾನಿಧಪ ಪಧನಿಸ ಸರಿಗಮ ನಾರಿ ನಿನ ಗತ್ತ।
ನಮ್ಮ ಕಂಡು ಹೋಗಬ್ಯಾಡ ಚದರಿ। ಓಡಿದಂಗ ಬೆದರಿ ಕಾರ್ಲುಣವಿ ಎತ್ತ।

**ಆನೆಯ ಚೌಕ –**

ಬಾಲಿ ತಿಳಿದಾಳೊ ತನ್ನ ಮನಕ। ನನ್ನ ಒಗತನಕ।
ಗರತೆಂಬು ಗುಣಕ। ಹಚ್ಚ ಬ್ಯಾಡ ಧಕ್ಕಿ।
ಬರೂ ರೀತಿಯಿಂದ ರಾತರ್ಯಾಗ ಬಂದು ಹೋಗೋ ಮಂದಿ ಅಂಜಿಕಿ।
ನನ್ನ ಮಾವ ಮುಪ್ಪಿನವ ಕಣ್ಣ ಹೋಗಿ ಕುಂತಾಳತ್ತಿ ಮುದಕಿ।

ಪೋರಿ ನಿಂತಾಳ ಗೆಣೆಯನ ಇದರ। ಹಿಡಿಸ್ಯಾಳ ಪದರ
ನನಗಿಲ್ಲ ಆಧಾರ। ಪರದೇಶಿ ಹಕ್ಕಿ।
ನನಗ ಪಿಂಜರದಾಗ ಹಾಕಿ ಒಯ್ದು ಸಾಕಿ ಮಾಡಂತಾಳ ಜೋಕಿ।
ಅವನೀಗಿ ಹೀಂಗಂದು ಮನೀಗಿ ತಂದು ಕುಂಡ್ರೆಂತ ಕೊಟ್ಟಾಳ ಚೌಕಿ।
ಪಂಚಾಮೃತ ಮಾಡ್ಯಾಳ ಅಡಗಿ। ಹಾಳ ಸಣ್ಣ ಹುಡುಗಿ ಇಲ್ಲ ಬ್ಯಾಸರಕೀ॥

ಗೆಣ್ಯಾ ನಗಲಾಗ ಹಾಲತುಪ್ಪ ಹಣಿಸಿ। ಮುಂದ ಕೂತು ಉಣಿಸಿ
ಮ್ಯಾಲ ಎಣ ಎಣಿಸಿ। ಕೊಟ್ಟಾಳೆಲಿ ಅಡಕಿ।
ಆಕಿ ಅಬೀರ ತಂದು ಅಷ್ಟಗಂಧ ಮೈಗೆಲ್ಲ ಹಚ್ಯಾಳ ತಿಕ್ಕಿ।
ಸಣ್ಣ ಕುಬಸಿನ ಗಂಟ ಬಿಚ್ಚಿ ಎದಿಗ್ಹಚ್ಚಿ ಹೊಡಿದಾಳ ತೆಕ್ಕಿ।
ಭೋಗ ಕುಡತಾಳ ಗುಲಗಲಸಿ। ಅವನಿಗಿ ಭುಲಾಸಿ ಬಿಟ್ಟಾಳ ಆಕಿ॥

**॥ಇಳುವು॥**

ಮನ ಸಂತೋಷಾಯ್ತು ಬೆಳಗಿದಂಗ ಮಳಿ ಕುಟ್ಟಿ । ಮಳಿ ಕುಟ್ಟಿ ॥

ಸುತ್ತ ರಾಜ್ಯದಾಗ ಹಲಸಂಗಿ ಊರ ಕರಿ ಕೋಟಿ । ಕರಿ ಕೋಟಿ ॥
ಗುಡುಬಾಳು ವಸ್ತಾದರ ಆ ಕಡಿ ನಡಗಟ್ಟಿ । ನಡಗಟ್ಟಿ ॥

**||ಏರು||**

ಸಿದ್ದು-ಶಿವಲಿಂಗ ಹಾಡೂದು ವರಸಿ । ಧನಿ ಎತ್ತರಿಸಿ
ನುಡಿ ಕತ್ತರಿಸಿ । ಸುರಿದಾಂಗ ಮುತ್ತ ।
ಶೇಕು ಬಾವಶ ಔಂದಶ ಹರದಾಸಿ ಕೇಳಿ ಆಂವ ಮರ್ತ ।
ಶ್ರೀಸಾನಿಧಪ ಪಧನಿಸ ಸರಗಮ ನಾರಿ ನಿನ್ನ ಗತ್ತ
ನಮ್ಮ ಕಂಡು ಹೋಗಬೇಡ ಚದರಿ, ಒಡಿದಂಗ ಬೆದರಿ ಕಾರ್ಪುಣವಿ ಎತ್ತ ॥

***ರಚನೆ :*** ಸಿದ್ಧು -ಶಿವಲಿಂಗ
***ಕೃತಿ :*** ಜೀವನ ಸಂಗೀತ

## ೮. ಕರಿ ಹುಡುಗಿ

**೧ ನೆಯ ಚೌಕ –**

ನೀ ಬಾರ ಕರ್ರನ ಕರೀ ಹುಡಿಗಿ । ಕರೀ ಸೀರಿ ಉಡಿಗಿ ।
ನವಿಲಿನಾಂಗ ನಡಿಗಿ ನಡುತೆ ಸವನಾ ।
ಕರಿ ಕೂದಲ ಬೇತಲಿ ತೀಡಿ ತೆಗೆದ ಸಣ್ಣ ।
ಕರಿ ಹುಬ್ಬ ಕೊರೆದಂಗ ಕರಿಕಾಡಿಗಿಗಣ್ಣ ।

ಏನು ಹೇಳಲಿ ನಾರಿ ನಿನ್ನ ಕಪ್ಪ । ಎಂಥ ನಿನ್ನ ರೂಪ
ಆಯಿತ ನೆಪ್ಪ ನೀಲದ್ದಣ್ಣ ॥

ಕರಿ ಹಣಚಿಬಟ್ಟಿನ ಖಲಿ । ಗಲ್ಲದ ಮ್ಯಾಲ ಬಾಲಿ
ಹಲ್ಲಿಗಿ ಜಾವೇಲಿ ಹಚ್ಚೆದಿ ತುಂಬ ।
ಕರಿ ಕರಿ ಮಣಿ ಕೊರಳಾಗ ಒಪ್ಪತಾವ ರಂಭಾ ।
ಮೈನರೆದೆ ಉಚ್ಚಿಧಂಗ ಕರಿ ಮಾವಿನ ತುಂಬ ।

ಕರಿಗೋಟ ಕೈಯಾಗ ಬಳಿ । ಚಿಕ್ಕ ಪ್ರಾಯ ಎಳಿ
ನಿನ್ನ ಈ ಬೆಳಿ ಕರಿ ಬಾಳಿಯ ಬಂಬಾ ॥

ನೀ ಬಾರ ಕರ್ರನ ಕರಿ ಸ್ವಾಗಿ । ಆಯ್ತು ತಗಬೀಗಿ
ಹೋಗತೇ ಸಾಗಿ ಹಾಯ್ದು ಇಂಬಾ ।
ಗಣಿ ಹೂಡಿ ಮಿಣಿಯ ಮ್ಯಾಲ ನಡೆದಾಂಗಾಯ್ತು ಡೊಂಬ ।
ಏನು ಸುದ್ದ ತೋಳ ತೊಡಿ ಕರಿಕಾಜಿನ ಕಂಬಾ ।

ಮದವೇರಿಸಿ ಹೊಂಟಂಗ ಗೂಳಿ । ಕರಿಯ ಗಂಡೆರಳಿ
ಖಂಡೋಬನ ಮುರಳಿ ಕುಚಾ ಕುಂಭಾ ।

ಯಾರಾರು ಇಲ್ಲ ನಿನ್ನ ಸರಿ । ಸೃಷ್ಟಿಯೊಳು ಧೊರಿ
ಕಂಡಾಂಗ ಎರಿ ನೆಲಿಯ ಗುಂಬಾ ।
ಮುಂಚ ಮಥನ ಮಾಡುವಾಗ ಹುಟ್ಟಿಸಿದನ ಸಾಂಬ ।
ಕರಿ ಕತ್ತಲಿ ರೂಪಕ ಅನಿಸಿದೆ ಜಗದಂಬ ।

ನಿನ್ನ ಕಂಡು ಹಾರಿತು ನನ್ನ ಹರಣ । ತುಸು ಇಲ್ಲ ಕರುಣ
ಕರೀ ನೀಲವರಣ । ನಿಂದು ಜಂಬಾ ॥

**॥ಇಳುವು॥**

ಕರಿಚಂದ್ರಕಾಳಿ ಉಟ್ಟಿಸೀರಿ । ಕುಬಸ ಪುಟದೊರಿ
ನಿಂತ ಹೌಹಾರಿ । ನೋಡಿ ನಿನ್ನ ಡೌಲಾ ॥
ನಿನ ಮೂಗ ಕಾಡಿಗೀ ತೆನಿ । ಹೆಣ್ಣನಾಗಿಣೀ
ಸಣ್ಣಸ್ವರ ಧನೀ । ಕರಿಯ ಕೋಗಿಲಾ ॥
ನಿನ್ನ ಕಂಡು ಮರತೆ ನನ್ನ ಮನಿ । ಮಾತನಾಡ ಜಾಣಿ
ಕರಿಯ ಮದ್ದಾನಿ । ಏರಿದಂಗ ಅಮಲಾ ॥

**॥ಏರು॥**

ಕರಿ ಕುತನಿಯಂಥ ಕಾಮಿನಿ । ಕಾರೆಳ್ಳದ ಗೊನಿ
ದೃಷ್ಟಿಯ ಮಣಿ । ಇದ್ದಂಗ ವರಣ
ಭಾಳ ಕಷ್ಟದಿಂದ ಶಿವ ಹುಟ್ಟಿಸಿ ನಿನ್ನ ಬಣ್ಣ
ಕರಿ ಹುಬ್ಬ ಕೊರೆದಂಗ ಕರಿ ಕಾಡಿಗಿ ಕಣ್ಣ ।
ಏನು ಹೇಳಲಿ ನಾರಿ ನಿನ್ನ ಕಪ್ಪ । ಎಂಥ ನಿನ್ನ ರೂಪ
ಆಯಿತ ನೆಪ್ಪ ನೀಲದ್ವಣ್ಣಾ॥

**೨ ನೆಯ ಚೌಕ-**

ಕರಿ ರೂಪಕ ಕಿಗ್ಗಳ ಮಾಡಿ | ಅಡ್ತಿ ಯಾಸಿ ದೀಡಿ
ನಿನಗ ಏನು ಧಾಡಿ | ತಿಳಿಯೊಣಿಲ್ಲ |
ನನ್ನ ಕರಿಯ ರೂಪ ಹೆಚ್ಚಾದ ಸುಳ್ಳ ಅಲ್ಲ |
ನಿನ್ನ ಕೆಂಪ ರೂಪ ಯಾತಕ್ಕು ಬರುವುದಿಲ್ಲ |

ನಿನ್ನ ರೂಪಿಂಧೇಳತೀನಿ ಝಾಡಿ | ಉತ್ರ ಮಾಡಿ ತೋಡಿ
ಹೌದೊ ಅಲ್ಲೊ ನೋಡಿ ಮಾಡೊ ಕಬುಲ ||

ರಣದಾಗ ನನ್ನ ಸಾಮರ್ಥ | ಹೇಳತಿನಿ ಗುರ್ತ
ಕರಿಯ ಮದ್ದ ತುರ್ತ | ಆದ ಮಿಗಿಲ |
ಗುಂಡಹಾಕಿ ಹೊಡೆದರ ದಂಡ ಅಡವಿ ಪಾಲ |
ಕರಿ ಕಬ್ಬಿಣ ಹೊಡೆತಕ ಒಡೆದು ಹೊಯ್ತು ಕಲ್ಲ |

ನನ್ನಿಂದೆ ಆವ ಹತಿಯಾರ | ಕಾಳಮ್ಮನವತಾರ
ತುಬಾಕಿ ಬಂಧೂಕ ಕತ್ತಿ ಢಾಲ ||

ನನ ಕಂಡು ತೆರೆದನೋ ಬಾಯಿ | ರಾವಣ ಕಿಸುಬಾಯಿ
ನಾನೆ ಇದಿ ಮಾಯಿ ಹೋಗಿದ್ದೆ ಮೊದಲ |
ನಾ ಹೋದ ಬಳಿಕ ಹಿಂದಿಂದ ಬಂತೊ ಬಾಲ |
ರಾವಣನ ಸಂಪತಿ ಮಾಡುದಕಳಿಗಾಲ
ಕರಿಹಣಮ ಹಾನ ಮೂರ ಡೊಂಕಿ | ಹಾರಿದಾ ಲಂಕಿ
ಹಚ್ಚಿ ಅಂವ ಬೆಂಕಿ ಸುಟ್ಟ ಎಲ್ಲ

**||ಇಳುವು||**

ಕೆಂಪ ಕೋತಿಯಂಥ ಜೋಕ್ಮಾರ | ಮೆರೆದ ಬಲ್ಭಾರ
ಕರಿಯ ಹೊಲಿಯಾರ | ಹೊಡದ ಅವನ ಪ್ರಾಣ
ಕೀಚಕ ನೋಡಿ ದ್ರೌಪದೀ ಕಳಿ ಕೂಡೇನಂದ ಬಳಿ
ಕರಿಯ ಭೀಮ ಸೀಳಿ, ಒಗೆದ ಅವನ ಹೆಣ ||
ಕರಿ ಪರಿಮಳೆ ಹೆಣ್ಣ ಪರವಾರ್ತ | ಆಕಿಯ ಸಾಮರ್ಥ |
ಫಾಲ್ಗುಣ ಪಾರ್ಥ | ಯುದ್ಧ ಮಾಡಿಕೊಟ್ಟ ಬಂದ ಬಿಲ್ಬಾಣ

**||ಏರು||**

ಆದಿ ಬುನಾದಿ ನನ್ನ ಕತ್ತಲಿ | ಓಂಕಾರದಲ್ಲಿ
ರೂಪ ನಂದು ಅಲ್ಲಿ | ಇತ್ತ ಖೂನಾ |
ಮುಂದ ಸೃಷ್ಟಿ ಮಾಡಿ ಭಾರ ತಾಳಿ ಚೌದಾ ಭುವನಾ |

ಸೂರ್ಯ ಚಂದ್ರ ಬೆಳಕ ನನ್ನಿಂದ ಆಯ್ತೊ ಮುನ್ನಾ ।
ಏನು ಹೇಳಲಿ ನಾರಿ ನಿನ ಕಪ್ಪ ಎಂಥ ನಿನ್ನ ರೂಪ ।
ಆಯಿತ ನೆಪ್ಪ ನೀಲದ್ವಣ್ಣ ॥

**೩ ನೆಯ ಚೌಕ –**

ಕರಿರೂಪಿಂದ್ಹೇಳ್ತೆ ಬಡಿವಾರ । ಮಾಡಿ ಬಲ್ಭಾರ
ಹೇಳತಿನಿ ಪೊರ । ಮಾಡಿ ಖುಲ್ಲಾ ।
ಮುಂಚ ಸಬಂದ ಬೆಳಕ ಸುವರ್ಣ ಇತ್ತ ಮೊದಲ ।
ನಿಜ ವಸ್ತು ನಿರ್ವಿಕಾರ ಮಾಡಿದಾಗ ಅಮಲಾ ।

ಅವಗಿಚ್ಚೆ ಬಂತು ಮನದಲ್ಲಿ । ಆಯಿತ ಕತ್ತಲಿ
ಮಾಯದ ಮಾಲಿ । ಬಿತ್ತು ಜಾಲ ॥

ಖೋಲ್ಯಾಗ ಒಯ್ದು ಕತ್ತಲಿ । ಇಟ್ಟ ಜ್ವಾಕಿಲೀ
ಹಾಕಿದಾನ ಕೀಲಿ ಸುತ್ತ ಎಲ್ಲ ।
ಏಳು ಲಕ್ಷ ವರ್ಷ ಅದರ ಕೈದ್ಯಾಗಿಟ್ಟನೆಲ್ಲಾ ॥
ಮುಂಚ ಮಥನ ಮಾಡಿದವನ ಮೈಮಿಗಿ ಅಳತಿಲ್ಲ ।
ಆಕಿ ಕೈದಿ ಬಿಟ್ಟಿದಾ ಪುನಃ । ಸೂರ್ಯ ಚಂದ್ರ ದಿನ
ಎರಡು ಮಾಡಿ ಸವನ । ರಾತ್ರಿ ಹಗಲ ॥
ಕರಿ ಮದ್ದಿಂದು ಹೇಳತೆ ಬಡಿವಾರ । ಮಾಡಿ ಒಳಭಾರ
ಹೇಳತೀನಿ ಸಾರ । ತೆಗೆದು ಅಕಲಾ ।
ನನ್ನ ಕೆಂಪ ಗಂಧಕ ಒಳಗ ಕೂಡ್ಯಾದ ಮಿಗಿಲ ।
ಕೆಂಪ ಬೆಂಕಿ ಹಚ್ಚಿದರ ಮದ್ದ ಹಾರುದು ಮುಗಿಲ ।

ಅಗ್ನಿ ನಾರಾಯಣನ ಸಾಮರ್ಥ । ಕೆಂಪ ರೂಪ ತುರ್ತ
ಸುಟ್ಟು ಆದಿ ಭರತ । ಆಗ ಕಬುಲ ॥

**॥ಇಳುವು॥**

ಮಾರುತಿದು ಹೇಳತಿನಿ ಉತ್ರ । ವಾಯು ಸುತ ಪುತ್ರ
ಸಾಂಬನವತಾರ । ಕೆಂಪ ರೂಪ ನೇಮ ॥
ಬೆಂಕಿ ಹಚ್ಚಿದ ಲಂಕಾಕ ಹಾರಿ । ಕೆಂಪು ಅಗ್ನಿ ಉರಿ ।
ಜಳಾ ಹತ್ತಿ ಮಾರಿ । ಕಪ್ಪ ಆಯ್ತು ಚರ್ಮ ॥
ನಿನಗ್ಹೇಳತೀನಿ ದೃಷ್ಟಾಂತ । ಆತ್ಮನ ಗುರುತ
ವಾದ ಹಾಕಿ ವ್ಯರ್ಥ । ಆದ ನಿನ್ನ ಜನ್ಮ ॥

||ಏರು||

ಕೆಂಪ ರೂಪಿನದೆಷ್ಟು ಐಸಿರಿ | ಪ್ರಭು ಹಾನ ಧೊರಿ |
ಅಲ್ಲ ಅವನ ಸರಿ | ನಿನ್ನ ಬಣ್ಣ |
ಅವನ ಬೆಳಕಿನಲ್ಲ ತಿರುಗಾಡಿ ಉಣ್ಣುದು ಜನ |
ನಿನ್ನ ಕತ್ತಲಿಯೊಳಗ ಉಪವಾಸ ಪರಿಪೂರ್ಣ |
ಏನು ಹೇಳಲಿ ನಾರಿ ನಿನ್ನ ಕಪ್ಪ ಎಂಥ ನಿನ್ನ ರೂಪ
ಆಯಿತ ನೆಪ್ಪ | ನೀಲದ್ವಣ್ಣ||

**ಳನೆಯ ಚೌಕ-**

ನಿನ್ನ ಸಾಂಬಂದು ಹೇಳ್ತಿ ಸಾಮರ್ಥ | ಯಾವ ದೊಡ್ಡ ಪಾರ್ಥ |
ಸಾರತಿ ಅವನ ವಾರ್ತಾ | ನನ್ನ ಮುಂದ |
ಕರಿ ಭಿಲ್ಲಣಿಗ್ಯಾಕ ಬೆನ್ನ ಹತ್ತಿದ ಹಿಂದ ಮುಂದ
ಕರಿ ಡೊಂಬತಿ ಕಾಲಾಗ ಟೊಣ್ಣೆ ಏಟ ತಿಂದ |
ಕರಿ ವಿಷಾ ನುಂಗಿ ಶಂಕರ | ಧಗಿಯೆ ಬಿತ್ತು ಜೋರ
ತಲಿಯ ಮ್ಯಾಲ ಪೂರ | ಗಂಗಿ ಹೌದ ||

ಸಮುದರಕ ಮಾಡಿದಾ ಮಥುನ | ಚೌದಾ ಹೊಂಟು ರತನ |
ವಿಷಾ ಒಂದು ಜತನ | ತೆಗೆದು ಹಿರದ |
ವಿಷದುರುಪ ಬಿದ್ದು ಜಡಿಯೊಳಗ ಗಂಗಿನ ತಂದ |
ಕರಿ ನೀರಂದ್ವೇಳಬ್ಯಾಡ ದಮ್ಮ | ಆಗಲಿಲ್ಲ ಕಮ್ಮ
ಶಬ್ದ ಅಂದ ರಾಮ |ಶಾಂತವಾದ ||

ಇಬ್ಬರದು ನಡಿತ ಹೀಂಗವಾದ | ಸಾಂಬ ಕೇಳಿದ ||
ಸಿಟ್ಟಿಗಿ ಬಂದ | ಕ್ರೋಧದಿಂದ
ಯಮನರಿಗಿ ಹೇಳಿದಾನ ಜೀವ ತರ್ರ್ಯೋನಂದ |
ಯಮ ಹೋಗಿ ಜಗ್ಗಿ ತನ್ನ ಜೀವ ಎಳೆದು ಒಯ್ದ |
ಬೆಳಕ್ಹಾರಿ ಹೋಯಿತು ಅಂತರಲಿ | ಬಿತ್ತ ಕತ್ತಲಿ |
ಗುರುವಿನ ಕೀಲಿ ತಿಳಿಯದು ಸಂದಾ ||

ಈ ದೇಹವೆಂಬುದು ಹೆಣ್ಣ | ಆಗೂದು ಮಣ್ಣ
ಗಂಡ ಜೀವ ಬಣ್ಣ | ಒಳಗ ಇರುದಾ |
ಜೀವ ಕಡಿಗಿ ಆದ ಮ್ಯಾಲ ದೇಹ ಕತ್ತಲಿಗೊಯ್ದಾ |
ಬೆಳಕ್ಹಾರಿ ಆಕಾಶದ ಕಡಿ | ಒಳಗಿನ ಕುಡಿ
ಹೋಯ್ತು ಇನ್ನು ಹಿಡಿ ಹಾರಿ ಜಿಗಿದಾ ||

**||ಇಳುವು||**

ಈ ಜ್ಯೋತಿ ಚಿರಂಜೀವ ಇರುದ ದೇಹ ಸಾವುದ ।
ಹಾಕಬ್ಯಾಡ ವಾದ । ನೆನಿಯ ಪರಮಾತ್ಮ ॥
ಗುರುಹರದಾಸ ಪ್ರಸನ್ನ । ವಸ್ತಾದಾನ ತಾನ ।
ಸಂಗೂ ರಾಯಪನ । ಜ್ಞಾನದಲಿ ಪ್ರೇಮ ॥
ಇರೂ ಠಿಕಾಣಿ ಹಲಸಂಗಿ ಗ್ರಾಮ । ಕತ್ತಲಾಯ್ತು ಕಮ್ಮ ।
ಬೆಳಕ ಚಂದ್ರಾಮ । ತುರಾಯಿ ಹಚ್ಚಿ ಜೋಮ ॥

**||ಏರು||**

ಸರ್ವಜನಕ ಮಾಡತಿನಿ ಶರಣ । ಇರಲಿ ಅಂತಃಕರಣ ।
ಗುರುವಿನ ಚರಣ । ಹಿಡಿದು ಸವನ ।
ಖಾಜಾನ ಕವಿಯ ನೋಡಿರಿ ಮುಡಿದಂಗ ದವನ ।
ಈ ಜೀವ ದೇಹಕ ಲಾವಣಿ ಮಾಡಿ ರತನ ।
ಏನು ಹೇಳಲಿ ನಾರಿ ನಿನ್ನ ಕಪ್ಪ । ಎಂಥಾ ನಿನ್ನ ರೂಪ ।
ಆಯಿತ ನೆಪ್ಪ ನೀಲದ್ವಣ್ಣಾ ॥

***ರಚನೆ*****:** ಖಾಜಾಬಾಯಿ
***ಕೃತಿ*****:** ಜೀವನ ಸಂಗೀತ

## ಸಂಕೀರ್ಣ

## ೧. ಕುಕವಿನಿಂದೆ

ಅರ್ಥ ತಿಳಿಯದ ಅನುಭಾವ ಕಲಿತ
ಅಳತಿಗೆಟ್ಟ ನಿಂತ ನಾಡಾಗ
ಮಂಗ್ಯಾನ ಕೈಯಾಗ ಮಾಣಿಕ ಕೊಟ್ಟರ
ಹಲ್ಲಾಗ ಹಾಕಿ ಕಡದ ಒಗದ್ಹಂಗ||ಪಲ್ಲ||

ಶ್ಯಾಣ್ಯಾ ಅಂತ ಇವಗ್ಯಾಂಗ ಅನ್ನಬೇಕ
ಏನ ಗುಣಾ ಕಂಡ ಇವರಲ್ಲಿ
ಗಾಯನದಲ್ಲಿ ನಾರದ ಅಂದೇನ

ಗಾರ್ದಭ ರಾಗ ಇವರ ಬಳಿಯಲ್ಲಿ
ವಿದ್ಯೆಯಲ್ಲಿ ಗಣಪತಿ ಅಂದೇನ
'ಓಂ'ನಾಮ ಅಂಕಿ ಕಲತಿಲ್ಲ ಜಲ್ಮದಲ್ಲಿ
ನೀತಿಯಲ್ಲಿ ನಿನಗ ವಿದುರ ಅಂದೇನ
ಬೇಗಳ ತಪ್ಪಿಲ್ಲ ಬಾಯಲ್ಲಿ
ಪರಾಕ್ರಮದ ಪ್ರತಿ ಪಾರ್ಥ ಅಂದೇನ
ನಾಡ ಹೇಡಿ ನೀನು ಸರ್ವರಲ್ಲಿ
ದಾನದಲ್ಲಿ ಬಲಿ ಚಕ್ರಿ ಅಂದೇನ
ಹೆಣದ ಬೆಣ್ಣಿಯ ತಿನ್ನುವ ಚಾಲಿ
ಶಾಂತಿಯಲ್ಲಿ ವಸಿಷ್ಠ ಅಂದೇನ
ಜಗಳ ತಗೀತಿ ಕುಂತ ನಿಂತಲ್ಲಿ
ಸತ್ಯದಲಿ ಹರಿಶ್ಚಂದ್ರ ಅಂದೇನ
ಮಾತಿನೊಳಗ ಮಾತಿಲ್ಲ ಕ್ಷಣದಲಿ
ಕವಿತ್ವದಲಿ ಪ್ರತಿ ವ್ಯಾಸ ಅಂದೇನ
ದನಾ ಕಾಯವರಷ್ಟ ಇಲ್ಲ ಬೆಲಿ
ಸ್ವರದ ಒಳಗ ಕೋಕಿಲಾ ಅಂದೇನ
ಶ್ವಾನನ್ಹಂಗ ಬೊಗಳತಿ ಸಭೆಯಲಿ
ರೂಪದಲ್ಲಿ ಮನ್ಮಥಾ ಅಂದೇನ
ಮಾರಿ ಸುದ್ದ ಕ್ವಾಡಗನ್ಹಾಂಗ
ಮಂಗ್ಯಾನ ಕೈಯಾಗ ಮಾಣಿಕ ಕೊಟ್ಟರ
ಹಲ್ಲಾಗ ಹಾಕಿ ಕಡದ ಒಗದ್ಹಂಗ

**೧ನೇ ಚೌಕ**

ಸಂಪತ್ತಿಯಲ್ಲಿ ಕುಬೇರ ಅಂದೇನ
ಮಧ್ಯಾಹ್ನದಾಗ ಇಲ್ಲ ಬೀಸುದಕ
ಭಕ್ತಿಯಲ್ಲಿ ಪ್ರಹ್ಲಾದ ಅಂದೇನ
ಮನಸ ಸ್ಥಿರಾ ಇಲ್ಲ ಕ್ಷಣತನಕ
ಬಳಗದಲ್ಲಿ ರಾವಣ ಅಂದೇನ
ಗೂಗಿಯಂತಾಂವ ನಿನಗಿಲ್ಲ ದಿಕ್ಕ
ಬುದ್ಧಿಯಲಿ ಬೃಹಸ್ಪತಿ ಅಂದೇನ
ಪುಂಡ ಕೆಂಚ ನೀ ಲೋಕಕ್ಕ
ಭೋಗದಲ್ಲಿ ದೇವೇಂದ್ರ ಅಂದೇನ
ಹುಟ್ಟ ಷಂಡ ನೀ ನಪುಂಸಕ
ತೇಜದಲ್ಲಿ ನಿನಗ ಸೂರ್ಯ ಅಂದೇನ
ರೊಟ್ಟಿ ಹಂಚಿನ್ಹಾಂಗ ನಿನ್ನ ಮುಖಾ

ಪಂಥದಲಿ ಪ್ರತಿ ಭೀಷ್ಮ ಅಂದೇನ
ಮುಕಳಿ ತಿರವಿ ಹೋಗಾಂವ ಹಿಂದಕ
ಏಕ ಪತ್ನಿ ರಾಮಚಂದ್ರ ಅಂದೇನ
ನಾಡ ಕಸಬಿ ನೀ ರಾಜೇಕ
ಮುತ್ತ ತಿನ್ನುವ ರಾಜಹಂಸ ಅಂದೇನ
ಇಚ್ಛಾ ಭಕ್ಷಣ ಮಾಡುವ ಕಾಕ
ಕೋಪದಲ್ಲಿ ವಿಶ್ವಾಮಿತ್ರ ಅಂದೇನ
ಭಾಳ ಮಳ್ಳ ನೀ ಕೆಲಸಕ
ಶಕ್ತಿಯಲಿ ಮಾರುತಿ ಅಂದೇನ
ಕಾಣತಿ ಇಳಿತದ ಮುದಕನ್ಹಾಂಗ
ಮಂಗ್ಯಾನ ಕೈಯಾಗ ಮಾಣಿಕ ಕೊಟ್ಟರ
ಹಲ್ಲಾಗ ಹಾಕಿ ಕಡದ ಒಗದ್ಹಂಗ॥೧ನೇ ಚೌಕ॥

ಲಕ್ಷಣದಲ್ಲಿ ವಿಕ್ರಮ ಅಂದೇನ
ಹಂದಿ ಹಾಂಗ ನೀ ರೂಪದಲ್ಲಿ
ಗೌತಮ ಋಷಿ ಹಾಂಗ ಯೋಗಿ ಅಂದೇನ
ಕಾಗಿ ಹಾಂಗ ನೀ ಗುಣದಲ್ಲಿ
ಪಡದ ಒಳಗ ನೀ ಪಡಗಾರ ಅಂದೇನ
ಗಡಗಿ ತೋಳ್ಯಾವ ಅಡಗಿ ಮನಿಯಲ್ಲಿ
ಗುರುತ್ವದಲ್ಲಿ ದ್ರೋಣಾಚಾರಿ ಅಂದೇನ
ಮುಕಳಿ ತೊಕ್ಕೊಂಡಿಲ್ಲ ಜಲ್ಮದಲ್ಲಿ
ಉಗ್ರದಲ್ಲಿ ವೀರಭದ್ರ ಅಂದೇನ
ಹೆಣದ ಹಂಗ ನಿಂತಿದಿ ಸಭೆಯಲ್ಲಿ
ಧೈರ್ಯದಲ್ಲಿ ನಳರಾಜ ಅಂದೇನ
ಗಂಡಿಗ್ಯಾರಂಗ ಕೈಯ ತಿರವುತಲಿ
ಜಾತಿಯಲ್ಲಿ ನಿನಗ ಸುಜಾತ ಅಂದೇನ
ಮುಸರಿಗಂಜಿ ತಿನ್ನುವ ಚಾಲಿ
ಲಂಕಾ ಜಿಗಿಯುವ ಹನುಮ ಅಂದೇನ
ಉಚ್ಚಿ ಜಿಗ್ಯಾಂವ ನೀ ನಿಂತಲ್ಲಿ
ನಿನ್ನ ವಾಚಾ ಶುದ್ಧ ಅಂದೇನ
ಹೊಲೇರ ಹಂತಾ ಭಾಷೆ ನಿನ್ನಲ್ಲಿ
ಬಾಳ ಗೋಪಾಳನ ಜೋಡಿ ಆಗುದಕ
ಸತ್ತ ಹುಟ್ಟಿ ಬಾ ನೀ ಇನ್ನ ಮ್ಯಾಲಿ
ಮಂಗ್ಯಾನ ಕೈಯಾಗ ಮಾಣಿಕ ಕೊಟ್ಟರ
ಹಲ್ಲಾಗ ಹಾಕಿ ಕಡದ ಒಗದ್ಹಂಗ॥೨ನೇ ಚೌಕ॥

***ರಚನೆ :*** ಬಾಳಗೋಪಾಳ

***ಕೃತಿ :*** ಬಾಳಗೋಪಾಳನ ಲಾವಣಿಗಳು

# ೧. ಅಪಸ್ವರ ಗಾಯಕ

ನೀವು ಪಂಚಮುಖದ ಪರಮಾತ್ಮ ದೈವ ದೇವರ ।
ಕುಂತಿರಿ ಹಿರಿಯರ ।
ನನ್ನ ಮಾತ ಲಾಲಿಸಿ ಒರಿಗಿ ಹಚ್ಚರೀ ಪೂರಾ ॥
ಗಾಯನ ಮಾಡೂದು ಸುಲಭ ಅಲ್ಲ ಶಾಹೀರಾ । ಕೇಳ್ರಿ ಬಲ್ಲವರಾ ।

ಈ ಉದ್ಯೋಗದೊಳಗ ಸೋತೀದಾರ ಬಹು ಜನರಾ ॥
ಬರೇ ಮೊಟ್ಟಿ ಕವಿ ನೀವು ಕಟ್ಟಿ ।
ಒಯ್ದೇನು ಒಲಿಯಾಗ ಸುಟ್ಟಿ ।
ಮುಂಚೆ ತಾಳಸ್ವರ ಇಲ್ಲ ಗಟ್ಟಿ ।
ಅಪಸ್ವರ ಗಾಯನ ಮಾಡಿ ಹಾಡಿ ಹಸಗೆಟ್ಟಿ ॥
ಕವಿ ಸುಳ್ಳ ಮಾಡಿಲ್ಲ ನಾ ಹುಟ್ಟಿ ।
ಖರೇ ಖರೇ ಶಾಸ್ತ್ರಕ ಮುಟ್ಟಿ ।
ಬಲ್ಲವರಿಗಿ ತಿಳಿದಿತ ತಿಗಟಿ ।

ಹುಸಿ ಹಾಡಂವ ಅಲ್ಲ ಗುರಿ ಒಗ್ಯಾಂವ ನಿರತಿಟ್ಟು ಸೂಟಿ ॥
ನಿಮಗ ತಿಳಿಯದಿದ್ದರ ತಿಳಿಸಿ ಹೇಳ್ತಿನಿ ವಿಚಾರ । ಆಗಿರಿ ಹುಸಿಯಾರ ।
ನನ್ನ ಮಾತ ಲಾಲಿಸಿ ಒರಿಗಿ ಹಚ್ಚಿರಿ ಪೂರಾ॥೧ ಚೌಕ॥

ಸುಳ್ಳಂದ್ರ ಇದಕ ನಿಮಗ ಹೇಳತೀನಿ ದೃಷ್ಟಾಂತ । ಸಭಾದಾಕ ನಿಂತ
ನಿಮ್ಮಂಥ ಪ್ರಾಣಿ ಒಬ್ಬ ಅಪಸ್ವರ ಗಾಯನ ಕಲಿತ ॥
ಒಂದು ತುಂತುನಿ ಮಾಡಿ ಹಗಲಿರುಳ ಹಾಡಂವ ಯಾವತ್ತ ।
ಸ್ವರಯಿತ್ತ ಗೊತ್ತ ।
ನಾ ಶಾಣ್ಯಾ ಅಂತ ತನ ಮನಸಿನೊಳಗ ಮದ ಮಸ್ತ ॥
ಸೊಲ್ಲಾಪುರಕ ಹೋಗಿ ಗಾಯನ ಮಾಡಬೇಕಂತ । ತೆಗೆದ ಒಂದು ಬೇತ ।
ತುಂತುನೀ ತಗೊಂಡು ಬಿಸಲಾಗ ಹೊಂಟ ನಡಕೋತ ।
ಆತ ಹೋಗುವ ದಾರಿಮ್ಯಾಲ ಕಂಚಾಳ ಮರ ಒಂದಿತ್ತ । ತಂಪು ಭಾಳ ಶಿಸ್ತ ।
ಆ ಗಿಡದ ಕೆಳಗ ಕುಳಿತಿದ್ದ ಸ್ವಲ್ಪ ವಿಶ್ರಾಂತಿ ॥
ಶಿವ ಶಿವ ಮಾಡಿದಾನ ಸ್ಮರಣಿ ।
ಗಾಯನ ಮಾಡುವ ಯೋಚನಿ ।
ತಂಬೂರಿಯಂತೆ ತುಂತೂನಿ ।
ಅಪಸ್ವರ ತಾಳ ಬಿಟ್ಟು ಸುರವ ಮಾಡಿದ ಗಾಯನೀ ॥

ಅಲ್ಲಿ ಬ್ರಹ್ಮರಾಕ್ಷಸದ ಮನಿ।
ಗಿಡದಲ್ಲಿ ಅದರ ಸಂಪಾದನಿ।
ಕೇಳಿ ಒದರಿ ಮಾಡಿತೋ ಧನಿ।
ನಿನ್ನ ಗಾಯನ ಕೇಳಿ ನನಗೆದ್ದಾದ ತಲಿಬ್ಯಾನೀ॥
ಬ್ಯಾಡಂದ್ರ ಕೇಳವೊಲ್ಲಿ ಕರುಣಿ।
ಹಟಬಿದ್ದು ಒದರತಾನ ಧರಣಿ।
ರಾಕ್ಷಿ ತಿಳಿದ ಕಾಳ ಬಂತು ಸನೀ।
ಬೇಡಿದ್ದು ಕೊಡತಿನೀ ಬಂದ್ ಮಾಡೊ ಗಾಯನೀ॥
ನನ್ನ ಹತ್ತರಿಲ್ಲ ಈಗ ತ್ರಾಣಿ।
ಕೊಡಲಾಕ ದುಡ್ಡ ದುಗ್ಗಾಣಿ।
ಸಾವುಕಾರನ ಹೇಣ್ತಿ ಭವಾನಿ।
ಹೋಗಿ ಬಡಕೋತೀನಿ ಬಂದು ಬಿಡಿಸೊ ಆಗಿ ಸುಜ್ಞಾನೀ॥

ಬಲ್ಲವರು ಬರಲಿ ಸುಜ್ಞಾನೀ।
ಅವರೀಗಿ ಹೋಗೂದಿಲ್ಲ ಆಣಿ।
ನೀ ಬಿಡಿಸು ಬಂದು ಬಡ ಪ್ರಾಣಿ।
ನಾ ಹೋದ ಬಳಿಕ ನೂರಾರು ಪಡಕೊ ನೀ ಸುಗುಣಿ॥
ಇನ್ನು ಸಾಕು ಮಾಡೊ ಮಹಾರಾಯ ಕೇಳೋ ಕವೀಸೂರ।
ಆಯಿತೋ ಬ್ಯಾಸರ ॥೨ ಚೌಕ॥

ನನ್ನ ಮಾತ ಕೇಳಿ ಗಾಯನ ಮಾಡೂದು ಮರತಾ। ಖುಷಿ ಆಗಿ ಕುಂತಾ।
ಕಾಳ ರಾಕ್ಷಿ ಹೋಯಿತು ಸಾವುಕಾರನ ಮನಿ ಹುಡುಕುತ॥
ಸಾವುಕಾರನ ಹೇಣತಿಗಿ ದೆವ್ವ ಆಗಿ ಬಡಕೋತ। ವಚನಕಾಗಿ ಶರತ।

ಕೂದಲ ಬಿಡಿಸಿ ಕಂಡಂಗ ಕುಣಿಸುತ್ತ ನಿಂತಿತ್ತ॥
ಸಾವುಕಾರ ನೋಡಿ ಅಂದ ಅಬುರು ಹೋಗೂದು ಬಂತ। ಚಿಂತಿ ಹೆಚ್ಚಿತ್ತ।
ಗುಮಾಸ್ತರಿಗಿ ಹೇಳಿದಾನ ಪಂಡಿತರು ಬಂದು ನೆರ್ದಾರ ಸುತ್ತ॥
ಬಲ್ಲವರು ಬಂದು ಆ ದೆವ್ವ ಬಿಡಿಸಬೇಕಂತ। ಯತ್ನ ಯಾವತ್ತ।
ಬಗಿಹರಿಯವಲ್ಲದೆ ಕುಂತಿದಾರ ಬ್ಯಾಸತ್ತ॥
ಮಂತ್ರ ಹಾಕಿ ಬೇಗು ಬೇಳಗಾನಾ।

ಶಾಣ್ಯಾರು ಆಗ್ಯಾರ ಹೈರಾಣಾ।
ಅದೆ ವಿದ್ಯದಲ್ಲಿ ಅವರು ಪೂರ್ಣಾ।
ಕುಣಿಸ್ಯಾಡಿದ್ಹಂಗ ಕುಣಿತಿತ್ತು ಕಲ್ಗಿಯವರ ಹೆಣ್ಣ॥
ಶ್ಯಾಣ್ಯಾರದು ನಿಂತಿತೋ ಯತನ।
ಹೇಳಲಾರದೆ ಹೋದರು ಪುನ್ಹ

ಗಾನವಗ ಮುಟ್ಟಿತೊ ವರ್ತಮಾನ ।
ನಾ ಬಿಡಿಸತೇನಂತ ಬಂದಿದಾನ ॥
ಆ ದೆವ್ವ ಹಿಡಿದಿತೋ ಅವನ ಖೂನಾ ॥
ನೋಡಿ ಅಂದಿತು ನಾ ಹೋಗತೇನ ।
ದೆವ್ವ ಬಿಡಿಸಿದಾನ ಗಾವನ್ನ ।
ಸಾವುಕಾರ ಖುಷಿ ಆಗಿ ನೂರು ರೂಪಾಯಿ ಕೊಟ್ಟಿದಾನ ॥

ಆ ರಾಕ್ಷಿ ಅಂತದ ನಿನ್ನ ವಚನದಂದು ಆದೆ ಪಾರ ।
ಹೋಗೋ ಇನ್ನ ದೂರ ॥౩ ಚೌಕ॥

ನನ್ನ ಮಾತ ಲಾಲಿಸಿ ಒರಿಗೆ ಹಚ್ಚಿರಿ ಪೂರಾ
ಸಾವುಕಾರನ ಹೇಣತಿಗೆ ದೆವ್ವ ಸವಿಯ ಗಂಡಿತ್ತ ಮೈಯ ಉಂಡಿತ ।
ಒಂದು ಎಂಟು ದಿನಾ ಬಿಟ್ಟು ಮತ್ತ ತಿರುಗಿ ಬಂದಿತ್ತ ॥
ಸಾವುಕಾರ ತಿರುಗಿ ಶಾಣ್ಯಾರಿಗಿ ಕರಿಸಿದನು ಕುಂತ । ಇಟ್ಟಿದಾನ ಪಂಥ ।
ಈ ದೆವ್ವ ಬಿಡಿಸಿದವರಿಗೆ ಬೇಡಿದ್ದು ಕೊಡತೇನಂತ ॥
ಬಲ್ಲಂಥ ಮಾಂತ್ರಿಕರು ವಿದ್ಯೆ ಮಾಡಿದರು ಮಸ್ತ ಕುಂತರು ಹಲ್ ಕಿಸ್ತ ।

ಬಗಿ ಹರಿಯಲಾರದೆ ಬರಿಗೈಲೆ ಹೋಗಿದಾರ ಪರತ ॥
ಗಾಯನ ಮಾಡಂವ ಬಂದಿದ ।
ಮಂತ್ರ ಹಾಕಿದ್ಹಂಗ ಮಾಡಿದ ।
ಬಗಿಹರಿಯಲಿಲ್ಲ ಅದರಿಂದ ।
ತುಂತುನೀ ತಗೊಂಡು ಗಾಯನ ಸುರು ಮಾಡಿದ ॥

ದೆವ್ವ ಕುಣಿಯುತಿತ್ತರಿ ಮುಂದ ।
ಮತ್ಯಾಕ ಕಾಳ ಬಂತಂದ ।
ತಲಿಬ್ಯಾನಿ ಎದ್ದಿತ ಹೆಚ್ಚಿಂದ ।
ನಿನ್ನ ದರ್ಶನ ಬ್ಯಾಡೋ ಹೋಗತೀನಿ ಇಲ್ಲಿಂದ ॥
ಅಪಸ್ವರ ಗಾಯನದಿಂದ
ದೆವ್ವಾದರು ನಿಂದ್ರುದಿಲ್ಲ ಮುಂದ ।
ಸಧ್ಯಾ ಹ್ಯಾಂಗ ಕೇಳಬೇಕೊ ಚಂದ ।
ತಾಳಬಿಟ್ಟು ಹಾಡಿದರ ದೋಷ ಆದ ಅದರಿಂದ ॥
ಹಲಸಂಗಿ ಗ್ರಾಮ ಹೆಚ್ಚಿಂದ
ಕವಿ ಹುಟ್ಟತಾವ ಚಂದಚಂದ ।
ಸ್ವರ ಸಂಪ ತಾಳದಲ್ಲಿ ಶುದ್ಧ ।
ಖಾಜಾಃ ಕವಿತಾ ಚಿಂತಾಲ ಹಚ್ಚಿ ತೂಗಿದ್ದ ॥

ಒಳೆ ಶಿಸ್ತ ಹಾಡತಾರ ಮೌಲ ರಾಮಚಂದರಾ । ಗುರುವ ಪುತ್ತರಾ ।
ನನ್ನ ಮಾತ ಲಾಲಿಸಿ ಒರಿಗಿ ಹಚ್ಚಿರಿ ಪೂರಾ॥ಳ ಚೌಕ॥

***ರಚನೆ :*** ಖಾಜಾಬಾಯಿ
***ಕೃತಿ :*** ಜೀವನ ಸಂಗೀತ

## ೩. ಗೀಗೀ ಸ್ಪರ್ಧೆ

ಗೀಗೀ ಗಾಯನ ಸ್ಪರ್ಧೆಗಾಗಮಿಸಿದ ಇಂದಿನ ಅಧ್ಯಕ್ಷರಿಗೆ ।
ಸುಸ್ವಾಗತ ಸಂಭ್ರಮವೀಗೆ ॥ಪ॥

ಈಗ ಬಂದ ಸೌಭಾಗ್ಯ ಸಾಹಿತಿ ಮಾನ್ಯ ತೀರ್ಪುಗಾರರಿಗೆ ।
ಸುಸ್ವಾಗತ ತಮ್ಮೆಲ್ಲರಿಗೆ ॥ಅ.ಪ॥

ಕ್ರಾಂತಿವೀರ ಧೀರ ಸುಭಾಸಚಂದ್ರರ ಕಥಿ ।
ಧಾರ್ಮಿಕ ಕ್ರಾಂತಿ ಬಸವಣ್ಣಗೈದಿಹ ಕೃತಿ ।
ಭಾರತಪಿತ ಗಾಂಧಿ ಮಹಾತ್ಮರ ನೀತಿ । ರಾಷ್ಟ್ರೀಯ ।
ರಾಷ್ಟ್ರೀಯ ಕ್ರಾಂತಿ ನಾಲ್ಕರಲಿ ಎರಡನು ಸ್ವಂತ ಬರೆದ ಕವಿಗಳಿಗೆ ।
ಆದರದ ಸ್ವಾಗತವು ತಮಗೆ ॥೧॥

ಭಾಗವಹಿಸಿ ಆಗಮಿಸಿದ ಕವಿಯಿತ್ರಿ ಅಕ್ಕ-ತಂಗಿ ತಾಯರಿಗೆ ।
ಅಕ್ಕನ ಬಳಗದವರಿಗೆ ॥
ಪರರಾಳಿಕೆಯಲ್ಲಿ ಮರೆಯಾದ ಪೂರ್ವಸಂಸ್ಕೃತಿ ।
ಹೊರತೆಗೆದು ತೋರಿಸುವ ಕರ್ನಾಟಕ ಸಾಹಿತಿ ।
ಸರಳ ಶೈಲಿಯಲಿ ಸರ್ವರಿಗೆ ತಿಳಿಸುವ ಕೃತಿ । ಗೀಗೀಲಾವಣಿ ।
ಗೀಗೀಲಾವಣಿ ಪುನರುತ್ಥಾನ ಸಮಿತಿಯ ಮಾನ್ಯ ಸದಸ್ಯರ ಕರೆಗೆ ।
ಓಗೊಟ್ಟು ಬಂದ ಸರ್ವರಿಗೆ ॥೨॥

ಸಾಲೋಟಗಿ ಗೀಗೀ ಮೇಳದ ನಾಲ್ವರು ಈಗ ಸಮಿತಿ ಪರವಾಗಿ ।
ಸ್ವಾಗತಿಪರು ಸರ್ವರಿಗೆ ॥

***ರಚನೆ :*** ಶರಣಪ್ಪವಾಲಿ
***ಕೃತಿ :*** ಶರಣಸ್ಮೃತಿ

# ೪. ರಾಜ್ಯಮಟ್ಟದ ಗೀಗೀ ಸ್ಪರ್ಧೆ ಕಲಬುರ್ಗಿ

ಸಧ್ಯದ ಸಭೆ ಅಧ್ಯಕ್ಷ ವಿದ್ವನ್ಮಣಿ ಜೀ ನಾರಾಯಣರಿಗೆ।
ಮೇಧಾವಿ ಹಿರಿಯ ಮಾನ್ಯರಿಗೆ ॥ಪ॥

ಜನತೆಯ ಪ್ರೀತಿಗೆ ಪಾತ್ರರಾಗಿ ಸ್ವತಃ ನಿಂತು।
ತನುಮನದಿ ಕನ್ನಡ ಸಾಹಿತ್ಯ ಭಾರವ ಹೊತ್ತು।
ಘನ ಅಧ್ಯಕ್ಷತೆ ನಾಡ ಸಾಹಿತ್ಯ ಪರಿಷತ್ತು। ದಿನದಿನಕೆ।
ದಿನದಿನಕೆ ಬೆಳೆಸಿ ಮನೆಮನೆಗೆ ಸಾಹಿತ್ಯವ ತಂದುಕೊಟ್ಟ ಮಾನ್ಯರಿಗೆ।
ಸುಸ್ವಾಗತ ಸಂಭ್ರಮವೀಗೆ ॥೧॥

ಗೀಗೀ ಗಾಯನ ಸ್ಪರ್ಧೆ ಉದ್ಘಾಟಕ ಬಿ.ಡಿ. ಜತ್ತಿಯವರಿಗೆ।
ಭಾರತದ ಮುಕುಟಮಣಿಯರಿಗೆ॥
ವಿದ್ಯೆಯಿಂದ ವಿಶ್ವರಾಜಕೀಯ ರಂಗವನೆ ತಿಳಿದು।
ಚಪಲ ಚಾಣಾಕ್ಷತೆ ದಕ್ಷಧೋರಣೆ ಪಡೆದು।
ಜನಸೇವೆಯಲಿ ಅನುರಾಗದಿ ಅನುದಿನ ದುಡಿದು। ಅಧಿಕಾರ।
ಅಧಿಕಾರ ಪದವಿ ಪಡೆದಂಥ ಭಾರತ ಉಪರಾಷ್ಟ್ರಪತಿಯವರಿಗೆ।
ಸ್ವಾಗತಿಪೆವು ಮಾನ್ಯರಿಗೆ ॥೨॥

ಈಗ ಬಂದ ಸೌಭಾಗ್ಯ ಸಾಹಿತ್ಯ ಮಾನ್ಯ ಅತಿಥಿದ್ವಯರಿಗೆ।
ಸುಸ್ವಾಗತ ತಮಗೆಲ್ಲರಿಗೆ॥
ಮೈಸೂರು ವಿಶ್ವವಿದ್ಯಾಲಯ ಉಪಕುಲಪತಿ।
ಭಾಷಾ ಸಾಹಿತ್ಯ ಬೆಳೆಸುವಲ್ಲಿ ಆಸಕ್ತಿ।
ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರತಿಭಾ ಶಕ್ತಿ। ತೋರಿಸಿ।
ತೋರಿಸಿ ಕನ್ನಡ ಭಾಷೆ ಬೆಳೆಸಿ ಮಾಧ್ಯಮವ ಮಾಡಿದವರಿಗೆ।
ಸನ್ಮಾನ್ಯ ಜವರೇಗೌಡರಿಗೆ ॥೩॥

ಪರಿಶ್ರಮಿಸಿ ಕನ್ನಡ ಸಾಹಿತ್ಯ-ಸಂಸ್ಕೃತಿ ಉಳಿಸಲು ದುಡಿಯುವ ನಿಮಗೆ।
ಸುಸ್ವಾಗತ ಸಂಭ್ರಮವೀಗೆ॥
ಡಿವಿಜನಲ್ ಕಮೀಶನರರಾಗಿ ಸತತ ದುಡಿದವರು।
ನಿವೃತ್ತರಾಗಿ ಸಾಹಿತಿ ಖ್ಯಾತಿ ಪಡೆದವರು।
ಬಹುಜನತೆಯ ಪ್ರೀತಿಗೆ ಪಾತ್ರರಾಗಿ ಬಂದವರು। ಆಡಳಿತ।
ಆಡಳಿತ ಕನ್ನಡ ಭಾಷೆ ಬೆಳೆಸಿದ ಲೋಕಸೇವಾ ಆಯೋಗದ।
ಸನ್ಮಾನ್ಯ ನಾಗೇಗೌಡರಿಗೆ ॥೪॥

ಭಾಗವಹಿಸಿ ಆಗಮಿಸಿದ ಪ್ರಖ್ಯಾತ ಮಾನ್ಯ ತೀರ್ಪುಗಾರರಿಗೆ ।
ಸಾದರದ ಸ್ವಾಗತವು ನಿಮಗೆ ॥
ಪರರಾಳಿಕೆಯಲಿ ಮರೆಯಾದ ಪೂರ್ವ ಸಂಸ್ಕೃತಿ ।
ಹೊರತೆಗೆದು ತೋರಿಸುವ ಕನ್ನಡ ನಾಡಿನ ಸ್ಥಿತಿ ।
ಸರಳ ಶೈಲಿಯಲ್ಲಿ ಸರ್ವರಿಗೆ ತಿಳಿಸುವ ಕೃತಿ । ಗೀಗೀ ಲಾವಣಿ ।
ಗೀಗೀ ಲಾವಣಿ ಪುನರುತ್ಥಾನ ಸಮಿತಿಯ ಮಾನ್ಯ ಸದಸ್ಯರ ಕರೆಗೆ ।
ಓಗೊಟ್ಟು ಬಂದ ಮಾನ್ಯರಿಗೆ ॥೫॥

ಗೀಗೀ ಮೇಳದ ವಾಲಿ ಶರಣರು ಸ್ವಾಗತಿಪರು ಸರ್ವರಿಗೆ ।
ಸುಸ್ವಾಗತ ಸಂಭ್ರಮಮಿಗೆ ॥

**(ಇದು ಗೀಗೀ ಲಾವಣಿ ಪುನರುತ್ಥಾನ ಸಮಿತಿ ಯಾದಗಿರಿ ಅವರು ಏರ್ಪಡಿಸಿದ ಸ್ಪರ್ಧೆಯಲ್ಲಿ ಹಾಡಿದ ಹಾಡು)**

***ರಚನೆ :*** ಶರಣಪ್ಪವಾಲಿ
***ಕೃತಿ :*** ಶರಣಸ್ಮೃತಿ

## ೫. ಹಾಡು ಕೇಳಲು ಕೂಡಿದ ಜನ

ಹಚ್ಚಿದೇರಿ ಹಾಡೋದಕ್ಕ ಕೂಡಿದೇರಿ ಕೇಳೋದಕ್ಕ
ಹುರಪ ಆಗವಲ್ತ ಮನಕ ಗದ್ಲಾ ಎಬ್ಬಿಸ್ಯಾರ ನಡಕ ॥
ಹೆಣ್ಣಗಂಡಿನ ಪದಾ ಇಲ್ಲದ್ದಕ್ಕ ॥

ಸಿನಿಮಾ ನಾಟಕಕ್ಕ ಹೋಗತಾರ ನೋಡಲಾಕ
ತಿಕೀಟ ತಗಸೋದಕ್ಕ ಹೋದೀತ ಕೈಯ್ಯಾನ ರೊಕ್ಕ ॥
ಸುರು ಆಗೋತನಾ ಕುಂಡರತಾರ ಸುಮ್ಮಕ ॥

ಕಾಲಮಡಿ ಆಗಿ ಇವರ ನಡಬಟ್ಲೆ ಎದ್ದಗಿದ್ದರ
ಪೋಲೀಸರ ಬರತಾರ ಕೊರಡಾದ್ಲೆ ಜಡಿತಾರ
ಅರೆ ಇಸಕಾ ಮಾಕ ॥
ಮೆತ್ತಗಾಗಿ ಅಲ್ಲ್ಯಾರಿಗೆ ಹೇಳಬೇಕ ॥

ಪುಕ್ಕಟ್ಟ ಹಾಡಿದರ ಭೇಷ್ ಭೇಷ್ ಅಂತಾರ
ಮನಸಿಗಿ ಬ್ಯಾಡ ಅದರ ವನ್ಸಮೋರ ಅಂತಾರ
ತೂಗಡಿಸತಾರ ಯಾಕ ॥
ನಿದ್ದಿಬಂತ ಮನಸ ಇಲ್ಲದ್ದಕ್ಕ ॥

ತಿಗಡೊಳ್ಳಿ ಊರ ಚೆಂದ ದ್ಯಾಮವ್ವನ ಗುಡಿಮುಂದ
ತೆಂಗಿನ ಗಿಡಗಳು ಚೆಂದ ಮಾಡಕೇಳ್ರಿ ಅಕ್ಕರಿತಿಂದ
ಬಲಭೀಮ ಜ್ಞಾನಕೊಟ್ಟ ಮನಕ ॥
ಮರಿಕಲ್ಲ ಸಖಿ ಮಾಡಿದ ಠೀಕ ॥

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲ ಕವಿಯ ಗೀಗೀ ಪದಗಳು

## ೬. ಎಂಥವರು ಬಾಳ

ರೊಕ್ಕದ ಆಸೆಕಾಗಿ ದಿಕ್ಕೆಟ್ಟ ತಿರಗೂತ
ಹಲ್ಕಾ ಪದ ಕಲತ ಹಾಡವರು ಬಾಳ ।
ಗಂಡ ಹೆಣ್ಣಿನ ಭೇದ ಮಾಡಿಕೊಂತ ।
ವಾದ ಹಾಕಿ ವ್ಯಾಳ್ಯೆ ಕಳ್ಯಾವರು ಬಾಳ ॥

ತತ್ವದ ಪದಗಳ ಬಿಚ್ಚಿ ಹಾಡಿದರ
ರೊಚ್ಚಿಗೆದ್ದ ನನ್ನ ಬೈಯ್ಯಾವರು ಬಾಳ ।
ಹಾದಿ ಬಿಡಿಸುವಂತಾ ಹದಗೇಡಿ ಪದಗಳನ
ಹಲ್ಲಕಿಸದ ಕುಂತ ಕೇಳಾವರು ಬಾಳ ॥

ತತ್ವದ ವಿಚಿಯಾರ ಗೊತ್ತ ಇಲ್ಲದೆ
ಬೋಧಾಮೃತ ಸಾರ ಓದಾವರು ಬಾಳ ।
ಆತ್ಮ ಜ್ಞಾನದ ಅನುಭವ ತಿಳಿಯದೆ
ಜಾತಿಭೇದ ಮಾಡಿ ನಡ್ಯಾವರು ಬಾಳ ॥

ಹೇಸಿ ಗುಣಗಳನ್ನ ಹಿಂತೇಕ ಇಟಗೊಂಡ
ಮಡಿ ಹುಡಿ ಅಂತ ಅನ್ನವರು ಬಾಳ ।
ಮನಸಿನ ಮೈಲಿಗಿ ಮರತ ಬಿಟ್ಟಿದಾರ
ಮೈಯ್ಯತೊಳದ ಮಡಿ ಮಾಡವರು ಬಾಳ ।

ತಮ್ಮ ಬೆನ್ನ ಹಿಂದ ತಮಗ ಕಾಣಾನಿಲ್ಲ
ಅನ್ಯರಿಗೆ ನಿಂದ ಆಡವರು ಬಾಳ ।
ತಮ್ಮ ಮನಿಯಾಗ ಮೊಳ ಉದ್ದ ಇಟಗೊಂಡ
ಓಣ್ಯಾಗ ಆಚಾರ ಹೇಳವರು ಬಾಳ ॥

ಬಡವರ ತಪ್ಪಾ ಬೈಲಿಗಿ ತಂದು
ಬಲ್ಲಂಗ ಬೈದ ಬುದ್ಧಿ ಹೇಳವರು ಬಾಳ

ಕಂಡು ಕಾಣದಾಂಗ ಕದ್ದಿಲಿ ಮಾಡಿ
ಇದ್ದು ಇಲ್ಲದಾಂಗ ಇರಾವರು ಬಾಳ ||

ಖರೆ ಸುಳ್ಳು ಚಾಡಾ ಹೇಳವರು ಬಾಳ
ಜಗಳಾ ಬೆಳಸಿ ಮೋಜ ನೋಡವರು ಬಾಳ |
ವಿಶ್ವಾಸ ಇದ್ದಲ್ಲಿ ನಂಬಿ ನಡಿಯಾಣಿಲ್ಲ
ಕದ್ದಿಲಿ  ಕಾಯಕಾ ಮಾಡವರು ಬಾಳ ||

ಖಾಲಿ ಕುಂಡ್ರೋದೇನಂತ ಕೂಲಿ ಮಾಡಿದರ
ಹೊಟ್ಟೆಗಿಲ್ಲದ ಮೂಳ ಅನ್ನವರು ಬಾಳ |
ಉಂಡ ಉಟ್ಟ ಸುಖವಾಗಿ ಇದ್ದರ
ಅವರನ್ನ ನೋಡಿ ಉರ್ಯಾವರು ಬಾಳ ||

ಸಧ್ಯದ ಪರಿಸ್ಥಿತಿ ತಿದ್ದಿ ಹಾಡಿದರ
ಭಪ್ಪಾರೆ ಹಾಡಬಹುದನ್ನವರು ಬಾಳ |
ಪ್ರಾಸ ಹೊಂದಿಸಿ ಪದಾ ಮಾಡತಾನಂತ |
ವಾಲಿಶರಣರ ಪದಗೋಳ ಕೇಳಾವು ಬಾಳ ||

***ರಚನೆ :*** ಶರಣಪ್ಪವಾಲಿ
***ಕೃತಿ :*** ಶರಣಸ್ಮೃತಿ

## ೭. ಏನೇನು ಸಂವಿ

ಸಾದೂರ ಸಂಗ ಸಂವಿ ಸದ್ಗುರುವಿನ ಧ್ಯಾನ ಸಂವಿ
ಭಕ್ತಿ ಇದ್ರ ಭಜನಾ ಸಂವಿ ಸಂವಿಗಾರ ಬಲ್ಲಾ ತತ್ವದಕೀಲಾ ||
ಸದ್ಗತಿಯಿಂದ ಮುಂದ ಸಂವಿ ಯಾವದಿಲ್ಲಾ ||

ವಿಶ್ವಾಸ ಇದ್ರ ಕೇಳತಾನ ಸಂವಿ ಬೆಲ್ಲದ ಅಂತಾ ಮಾತ ಸಂವಿ
ಬಲ್ಲವಗ ಬೇವ ಸಂವಿ ಹಲ್ಲ ಇದ್ರ ಸಂವಿ ತಿಳಿಯೋದು ಎಲ್ಲಾ ||
ಎಲ್ಲಾ ಸಂವಿ ತಿಳ್ಯೋದು ನಾಲಿಗಿ ಮ್ಯಾಲಾ ||

ಬಾಲಕರಿಗೆ ಆಟ ಸಂವಿ ಹರೇದವಗ ನೋಟ ಸಂವಿ
ವೈಯ್ಯಾರಿಗೆ ವಣಪ ಸಂವಿ ಉಪ್ಪಿನಕಾಯಿ ಸಂವಿ ಊಟದಮ್ಯಾಲಾ ||
ಹೋಳಗಿ ಸಂವಿ ತುಪ್ಪ ಹಾಲಾ ||

ತಿಗಡೊಳ್ಳಿ ನೀರ ಸಂವಿ ಬಲಭೀಮಾನ ದರ್ಶನ ಸಂವಿ
ಮರಿಕಲ್ಲನ ಪದಾ ಸಂವಿ ಎಲ್ಲಾ ಸಂವಿ ಯಾರಿಗಿ ತಿಳದಿಲ್ಲಾ ||
ಸದ್ಗತಿ ಮುಂದ ಸಂವಿ ಮತ್ತ್ಯಾವದಿಲ್ಲಾ ||

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲ ಕವಿಯ ಗೀಗೀ ಪದಗಳು

## ೮. ಆಕಳ ಲಾವಣಿ

ಚಿತ್ತಗೊಟ್ಟು ಕೇಳಿರಿಂದು | ಮುತ್ತಿನಂಥ ಮಾತಿದು
ಬುತ್ತಿಗಂಟು ಸ್ವರ್ಗದ್ದು | ಸುರಿದಂಗ ಮುತ್ತಿನ ಮಳಿಯೆ |
ಕನಸಿನ ಕತೆಯಲ್ಲ | ತನುವಿನ ನುಡಿಸೊಲ್ಲ
ಜನಕಿದು ಸವಿಬೆಲ್ಲ | ಹರಿದಂಗ ಹಾಲಿನ ಹೊಳಿಯೆ |
ಗೋವಿನ ಮೈಮೆಯೆ | ನಾವೇನು ಬಲ್ಲೆವು |
ಸಾವಿಗದು ಅಮೃತ ಕಳೆಯೆ |

ಹಸಿ ಹಾಲು ಕರೆವುದು | ಬಸವನ ಹೆರೆವುದು
ಕಸುವನು ತರುವುದು | ಹುಸಿಯಲ್ಲ ಗೋವಿನ ತಳಿಯೆ ||
ಧಾನ್ಯಕಾಳು ಬೆಳೆಯಲು | ತನ್ನ ಹೋರಿ ಕುಡುವುದು
ಘನ್ನ ರೋಗ ಕಳೆವುದು | ಅಣ್ಣ ಕೇಳ್ರಿ ಗೋವಿಗೆ ಬೆಲೆಯೆ |
ಮಕ್ಕಳಂತೆ ಸಲುಹಲು | ಚಿಕ್ಕ ಕೂಸಿನಂತೆ ಅದು
ತಕ್ಕಂತೆ ಕಾಯುವ ನೆಲೆಯೆ ||

ಸಾವಕಾರಿದ್ದ ನೀತಿವಂತ | ಜಾತಿಲೆಂವ ಲಿಂಗಾಯತ
ಯಾತರದೇನು ಕೊರತಿ ಮತ್ತ | ದಾನ ಧರ್ಮ ಕರ್ಣಗ ಸರಿಯೆ |
ಜಾಣನಾದ ಸತ್ಯವಂತ | ಪ್ರಾಣ ಉಳಿಸು ಪುಣ್ಯವಂತ
ಖೂಳರಿಗೆ ಕಾಳಮತ್ತ | ಅನಿಸಿದ ಜನರಿಗೆ ದೊರಿಯೆ |
ಓಣಿ ಹಿಡಿದು ಹೋಗುವಾಗ | ದನಿ ಬಂತು ಅಂಬಾ ಎಂದು
ಮನಸಿಗೆ ತಾಕಿತು ಉರಿಯೆ ||

**||ಇಳುವು||**

ಹಣಕಿ ಹಾಕಿ ನೋಡ್ತಾನ ಹಸುವಿನ ದನಿ ಅದು
ಕಟುಕನ ಮನೆ ನೆನಿಸಿ
ಹಸುವಿನ ಬಿಗಿದು ನಿಲ್ಲಿಸಿ
ಮಸಿತಿದ್ದ ಚೂರಿ ಹದನಿಸಿ |

ಕಟುಕನ ಎದಿ ಕೆಟ್ಟ ಕರಗದು ಬಾಳ ಕಟ್ಟ
ಸಾವಕಾರ ಬಂದ ಧಾವಿಸಿ ॥

**||ಏರು||**

ಹೊಡಿಬ್ಯಾಡ ನಿಂದರಂದು । ಬಿಡಿಸತೀನು ಆಕಳಿಂದು
ಕುಡುವೆನು ಹಣ ತಂದು । ಹೇಳದು ಹಸುವಿನ ಬೆಲೆಯೆ ।
ಕಣ್ಣಿಗದು ಕಾಮಧೇನು । ಬಣ್ಣ ಆದ ಬಿಳಿಯ ಭಾನು
ಚಿನ್ನೊ ರನ್ನೊ ಬೆಲೆ । ತಿಳಿಯಲಿ ಮನಸಿನ ನೆಲೆಯೆ ।
ಗೋವಿನ ಮೈಮೆಯ । ನಾವೇನು ಬಲ್ಲೆವು
ಸಾವಿಗದು ಅಮೃತ ಕಳೆಯೆ॥೧ ಚೌಕ॥

ಎತ್ತ ಬಂದಾನಿವ ಮತ್ತ । ಕತ್ತನೆತ್ತಿ ಸುತ್ತ ಮುತ್ತ
ಎತ್ತಿದಂಥ ಕೈ ಕುತ್ತ । ಇಳಿಸಿದಾ ಮಾತನು ಕೇಳ
ಚಿನ್ನರನ್ನ ಬೇಕಾಗಿಲ್ಲ । ಪುಣ್ಯ ಪಾಪ ನೋಡಾವಲ್ಲ
ಎನ್ನ ಕುಲ ಕಸಬಲ್ಲ । ತಿಳಿಸಿದ ನುಡಿಯನು ತಾಳಿ ।
ಪ್ರಾಣಹತ್ಯಾ ಬಿಡಿಸೋದು । ನನ್ನ ಧರ್ಮ ಎನಿಸೂದೂ
ನಿಂತಾನ ಉತ್ತರ ಹೇಳಿ ॥

ಆಕಳ ನೋಡಿ ದಯಾ ಬಂತು । ಸಾಕಲೇಕೆ ಜೀವನಿಂತು
ಮೂಕ ಪ್ರಾಣಿ ಉಳಿಸೂ ಹೊತ್ತು । ಸುತ್ತಿದ ನಡುವಿಗೆ ಸೆಲ್ಲಿ ।
ಹಾದಿಗ್ಹೋಗೂ ಮುಂದಿನ ಕರೆದು । ನಡೆದ ಸುದ್ದಿ ಹೇಳಿ ನುಡಿದು
ಕಂಠಿ ತೆಗೆದು ಮುಂದೆ ಹಿಡಿದು । ಕಟುಕಗೆ ಬುದ್ಧಿಯ ಹೇಳಿ ।
ನಾಕು ಮಂದಿ ನೆರದಾರ । ಕಟಕಗೆ ಹೇಳ್ಯಾರ
ಕೇಳಲಿಲ್ಲ ಬ್ಯಾಡಂದ್ರ ವಾಳಿ ॥

ಕೊರಳಿನ ಹಗ್ಗ ಉಚ್ಚಿ । ಹೊರಟಾರ ಆಕಳ ಬಿಚ್ಚಿ
ತರುಬೆಂದ್ರು ಕಟುಕಗೆ । ನೆರೆದ ಮಂದಿ ಸಿಟ್ಟಿಲೆ ಕೆರಳಿ ।
ಹಿಡಿದಾರ ಗಟ್ಟುಳ್ಳವರು । ನಡೆದಾರ ಮನಿಗವರು
ತಡಿಯಲಿಲ್ಲ ಅವರಿಗ್ಯಾರು । ಆಕಳದು ಜೀವದಿಂದ ಬಾಳಿ ।
ದೈವಕ ಮೀರ್ಯಾನ । ಹೇವೇನು ತೋರ್ಯಾನ
ಕಟುಕಗೆ ತಿಳಿಲಿಲ್ಲ ವ್ಯಾಳಿ ॥

ತುಂಬಿ ಪಾಪದ ಕೊಡ । ಬಂದಿತು ಕಟುಕಗೆ ಜಡ
ದರವಡೆಗೆ ಬಂದ್ರು ಕಳ್ಳರು ।
ಮನಿವರ ಎಲ್ಲ ಸುಲಿದರು
ಚಿನ್ನ ರನ್ನ ಹಣವ ಸೆಳೆದರು ।

ಮಾರಿ ಖೂನ ಹಿಡಿದಾನ । ನಾಳೆ ಫಾಸೀಗೊಯ್ತಾನ
ಎಂದು ಅವನ ಕಳ್ರು ಕೊಂದರು॥ಳ ಚೌಕ॥

**॥ಏರು॥**

ಕಂಡಕೊಂಡು ಕೊಳ್ಳುವಂಥ । ಹಿಂಡಾಸ್ತಿಂಡ ಜನ ಬಂತ
ತುಂಡ ಹೆಣ ನೋಡಿ ನಿಂತ । ಜನರಿಗಿ ತಿಳಿಯದು ನೆಲೆಯೆ ।
ಒಬ್ಬರಿಗೊಬ್ಬರು ಸುದ್ದಿ ಸಾರಿ । ಬೊಬ್ಬಿ ಹೊಡೆದು ನೆರಸ್ಯಾರ್ರಿ
ಹಬ್ಬ ಬಂತು ಕಟ್ಲೆ ಬರ್ರಿ । ಕೂಡಿದ ಜನಕದು ಎಣೆಯೆ ।
ಗೋವಿನ ಮೈಮೆಯ ನಾವೇನು ಬಲ್ಲೆವು
ಸಾವಿಗದು ಅಮೃತ ಕಳೆಯೆ॥೨ ಚೌಕ॥

ಸಾವಕಾರ್ನ ಖಂಗಿನವರು । ಕಟುಕನ ಹಂಗಿನವರು
ಸರಕಾರ್ಕ ಹೋದರು । ಹೊಡೆದದ್ದು ನಿಜ ಸಾವಕಾರ
ಖಂಗ ಇತ್ತ ಮೊದಲಿಂದು । ಹ್ಯಾಂಗ ಮಾಡಲೆಂದು ಇಂದು
ಜಂಗಿ ಟೋಳಿ ತಂದು ಬಂದು । ಸುಲಿದಾನ ಕೊಂದಾನ ಚೋರಾ ।
ಕೊಟ್ಟು ಸೂರಿ ಮಾಡಿ ಹೊನ್ನ ಕಟ್ಟಿಕೊಂಡ್ರು ಸರಕಾರ್ನ
ಸಿಟ್ಟಿನಿಂದ ಬಂದಾ ಅಮಲದಾರ ॥

ಒಮ್ಮಿಂದೊಮ್ಮೆ ಪೋಲೀಸ ಬಂದು । ಹಮ್ಮ ಎಷ್ಟು ನಿನಗೆಂದು
ಸುಮ್ಮ ನಡಿ ಎಂದು ತಂದು । ಕೈಯಾಗ ಬೇಡಿ ಹಾಕ್ಯಾರ ।
ಮಂದಿ ಮಕ್ಕಳು ಮುಕರ್ಯಾರ । ನೆರಿ ಹೊರಿ ನೆರದಾರ
ತಗೀರೆಂದು ಕೈಯ ಬೇಡಿ । ಹವಳ ಮುತ್ತುಗಳ ಸುರವ್ಯಾರ ।
ಲಂಚಗಿಂಚ ತಿನ್ನುದಿಲ್ಲ । ಮ್ಯಾಲಿನ್ಹುಕುಮ ಮುರುದಿಲ್ಲ
ಮುಂದ ದೂಡಿ ಅವ್ನ ಎಳದಾರ॥೨।

ಬಂದದ್ದು ಬರಲೆಂದ । ನಂದು ಪುಣ್ಯ ಜೋರೆಂದ
ಮುಂದ ತಾಯಿ ಸಲಹೆಂದ । ನಡೆದಾನ ಎದೆಗಾರ ಚದುರ ।
ಕಾಳು ಮೇಳು ಗಂಟು ಬಿದ್ದು । ಮೇಳಾಯ್ತು ಇಂದಿದು
ಶೀಲವೆನ್ನ ಸಲಹುದು । ಅಂದಾನ ಮನದಾನ ಮಧುರ ।
ಪುಣ್ಯ ಪಾಪ ಯುದ್ಧದಲ್ಲಿ । ನನಗಿನ್ನು ಸೋಲೆಲ್ಲಿ
ಧೈರ್ಯ ಹೇಳಿ ಹೊಂಟಾನ ಧೀರ ॥

**॥ಇಳುವು॥**

ಸಾಹೇಬ ಬಂದಾನ । ತಪ್ಪು ಮ್ಯಾಲ ಹೊರಿಸ್ಯಾನ
ಬಂದದ್ದು ಬರಲಿ ಅಂದನು ।

ಕೊಟ್ಟ ಶಿಕ್ಷೆ ನಾನು ಕೊಂಬೆನು ।
ಕೈಮುಗಿದು ಮುಂದ ನಿಂದನು ।
ಇದು ಆದ ದೊಡ್ಡ ತಪ್ಪ । ಘಾಸೀ ಶಿಕ್ಷೆ ಕೊಟ್ಟಿತಪ್ಪ ।
ಬೇಡೂದೆಲ್ಲ ಬೇಡಪ್ಪ ನೀನು ॥

**॥ಏರು॥**

ಸಾಯಬನ ನುಡಿ ಕೇಳಿ । ಸಾಯ್ಬುದು ಬಂತು ಪಾಳಿ
ಮೂರ್ತಿಂಗಳ ಮುದ್ದತ ಕೇಳಿ । ನಿಂತಾನ ಧೈರ್ಯದ ಬೆಳೆಯೆ ।
ಕೊಟ್ಟುಬಿಟ್ರು ಮುದ್ದತ । ಜಾಮೀನು ತಂದು ಕೊಟ್ಟ
ಖುಷಿಯಿಂದ ಜಾಗ ಬಿಟ್ಟ । ನಡೆದಾನ ಧರ್ಮದ ಹೊಳೆಯೆ ।
ಗೋವಿನ ಮೈಮೆಯೆ ನಾವೇನು ಬಲ್ಲೆವು
ಸಾವಿಗದು ಅಮೃತ ಕಳೆಯೆ॥೩ ಚೌಕ॥

ಬಾಯಾಂತಗದು ಬಾಯಾಗ ಹಾಕೀ ತಾಯಿ ಗೋವನು ಸಾಕಿ
ಮೆಯಿಸಿದ ಹುಲ್ಲ ಕಣಕಿ । ಕಡಿಮಿಲ್ಲ ಕೊರತೇನೇನ ।
ತಾನು ಉಂಡಾ ಹಾಲ್ಮೊಸರ । ಏನು ಸವಿ ಉಸಳಿ ಪೂರಾ
ತಾಲೀಮಿಟ್ಟ ಎರಡೂ ಹೊತ್ತ । ಉಂಡು ದೂದಖೀರ ತುಪ್ಪ ಬೋನ ।
ಮೈತುಂಬ ಸೊಕ್ಕ ಬಂತು । ಮೋತೀ ಮ್ಯಾಲ ಕಳೆ ಬಂತು
ಭೀತಿಯಿಲ್ಲ ಸಾವಿನ ಖೂನ ॥
ಆಕಳಿಗಿ ಬಿಳಿಯ ಬಣ್ಣ । ಜೋಕಾದ ಕಾಡಿಗಿ ಕಣ್ಣ ।
ದಿಟ್ಟಿಯಾಗೂ ಮಾತಿದು । ಕುಕ್ಕಬೇಕು ಕಂಡವರ ಕಣ್ಣ ।
ತಾಯಿ ಕೂಸುಗಳ ಪ್ರೀತಿ । ನಡೆದರ ಹಾದೀ ಹತ್ತಿ
ಅದರ ಮನ ಕೂಡಿ ಅತಿ । ಹತ್ತಿತ್ತು ಸಾವಕಾರ್ನ ಬೆನ್ನ ।
ಮೂರು ಮಾಸ ಕಳೆಯಿತು । ಮರಣ ಕಾಲ ಬಂದಿತು
ಜಾಮಿನದಾರ್ಗ ನಡಿಯಂದ ಇನ್ನ ॥

ಗಲ್ಲೀಗ್ಹಾಕು ವೇಳೆ ಬಂತು । ಅಲ್ಲಿ ಮಾಡಿ ಜಾಗಾ ಗೊತ್ತು
ಎಲ್ಲರಿಗೆ ಭೆಟ್ಟಿ ಕೊಟ್ಟು । ಮೆರೆಸುತ ತಂದರು ಘನ್ನ ।
ಇತ್ತ ಹಿಂದ ಆಕಳಿತ್ತು । ಸುತ್ತಿ ಸುತ್ತಿ ಬರುತಿತ್ತು
ಹೊಡೆದರೆ ಮತ್ತು ಮತ್ತು । ಬಿಡಲಿಲ್ಲ ಧನಿಯ ಬೆನ್ನ

**॥ಇಳುವು॥**

ಜನ ನೆರೆದು ಸಾವಿರಾರು । ಕಂಡಂಗೆ ನುಡಿದರು
ಗಲ್ಲಿನ ಕಂಬಕೆ ನಿಲ್ಲಿಸಿ ।
ಕೊರಳಿಗಿ ಉರಲ ಸಿಗಸಿ ।

ಒದ್ದಾರ ಜೋರಿಲೆ ಸರಿಸಿ ।
ಒಮ್ಮೆ ಒದ್ರು ಬೀಳಲಿಲ್ಲ । ತಮ್ಮ ನಿನ್ನ ಬಿಡೂದಿಲ್ಲ
ಉಳಿದಿಲ್ಲ ಏನೂ ನಿನ್ನ ಆಶಿ ॥

**॥ಏರು॥**

ಹತ್ತುಸಾರೆ ಹಾಕಿದಾರ । ಮತ್ತು ಮತ್ತು ಒದಿತಾರ
ಸುತ್ತಿ ಸುತ್ತಿ ಬರುತ್ತಿತ್ತು । ತಿಳಿಲಿಲ್ಲ ಆಕಳ ಬಗೆಯೆ ।
ನೆರೆದ ಮಂದಿ ದಂಗು ಆಗಿ । ಗೋವೀಗಿ ಸರಿಸಿ ಕೂಗಿ
ಇದು ಏನು ಸೋಜಾಗಿ । ನಡೆದಿರುವುದು ಹೊಸ ಪರಿಯೆ ।
ಗೋವಿನ ಮೈಮೆಯ । ನಾವೇನು ಬಲ್ಲೆವು
ಸಾವಿಗದು ಅಮೃತ ಕಳೆಯೇ॥ಳ ಚೌಕ॥

ಯಾತಕಿದು ಕಟ್ಟ ಹತ್ತು । ಪಾತಕೇನು ನಮಗಿತ್ತು
ಘಾತಕಿದು ಆಕಳ ಬಂತು । ಸಾವುಕಾರ ತಿಳಿಯದು ಪರಿಯೆ ।
ಕೊಂದರ ಸಾಯಲೊಲ್ಲಿ । ತಂದಿ-ಯಮಗ ಕೇಳಲೊಲ್ಲಿ
ಮಂದ್ಯಾಗ ಮಂತ್ರ ಚೆಲ್ಲಿ । ಏನಿದು ಧರ್ಮದ ತೆರಿಯೆ ।
ಓಡಿ ಬಂದು ಅಡಿಗೆರಗಿ । ಕಾಡುವದು ಅಡ್ಡ ಬಂದು
ದೈವಕ ತೆರೆದಿಡು ಮರೆಯೆ ॥

ಸಾವಕಾರ್ನ ಶೂಲಕಿಂತು । ವಾಸರಾಗಿ ಮುಂದೆ ನಿಂತು
ಜನಕೆಲ್ಲ ಬೆರಗು ಬಂತು । ಉಳಿಸಿತು ಚಿಂತಾಮಣಿಯೆ ॥
ಆಕಳ ಕೃಪೆಯಿಂದ । ಸಾಯಬಗೆ ಕರುಣೆ ಬಂದ
ಸಾವುಕಾರ್ನ ಮರಣಬಂದ । ತಪ್ಪಿತು ಪುಣ್ಯದ ಕಣಿಯೆ ।
ಅರಿದರಿದೆಂದರು । ಕರಚಪ್ಪಳಿಕ್ಕಿದರು
ಸುರಿದರು ಹೂವಿನ ಗೊನಿಯೇ ॥

ತಾಯಿ ತಾಯಿ ಗೋತಾಯಿ । ನನಗಾಗಿ ಆದೆ ಗಾಯಿ
ಕಾಯ್ದೆಯೆನ್ನ ಪಡೆದಾಯಿ । ಹೊಡಿ ಬಿಚ್ಚಿ ಕ್ಯಾದಿಗಿ ತೆನಿಯೆ ।
ಕಾಲ ಕೆಳಗೆ ಆಸರಿತ್ತು । ಬಾಲನೆತ್ತಿ ಬೆನ್ನಕೊಟ್ಟು
ಶೂಲದಲ್ಲಿ ದಯವಿಟ್ಟು । ಉಣಿಸಿದ ಹಾಲಿನ ಕೆನಿಯೆ ।
ಸತ್ಯಧರ್ಮ ರೂಪತೋರಿ । ಕುತ್ತ ಹರಿದಿ ನನ್ನ ಗೌರಿ
ನಿತ್ಯ ನೀಡು ಅಮೃತ ಹನಿಯೆ ॥

**॥ಇಳುವು॥**

ಪುಣ್ಯಕ ಎಣಿಯಲ್ಲ । ಕಣ್ಣಿಗಿ ಕಾಣೂದಿಲ್ಲ
ಗಲ್ಲದಿಂದ ಅವನ ಇಳ್ಸಿದರು
ನೆರೆದವರು ಹೌದು ಅಂದರು
ತಾಯಿಯ ಕೃಪೆಯ ಕಂಡರು ।
ಇದು ಎಂಥ ಅಚ್ಚರಿ । ಅರಿತಪ್ಪದಳ್ಳುರಿ
ಹರಿಯಿತು ಪುಣ್ಯದ ಸಾರು ॥

**॥ಏರು॥**

ತಾಯಿಯಂತೆ ಹಾಲನುಣಿಸಿ । ಕಾಯುವದು ಕರುಣೆಯಿರಿಸಿ
ಸಾಯುವನ ಎದುರಿಸಿ । ತಾರಿಪುದುಪಕೃತಿ ಸಿರಿಯೆ ।
ಮುಪ್ಪಿನ ತಾಯಿಯನು । ಅಪ್ಪಾ ನೀವು ಸಲಹುವಂತೆ
ತಪ್ಪದೆ ಸಲುಹಿರಿ । ಕಟುಕಗೆ ಮಾರೂದು ಸರಿಯೆ ।
ಗೋವಿನ ಮೈಮೆಯ ನಾವೇನು ಬಲ್ಲೆವು
ಲಿಂಗನ ಹಾಡಿದು ಸವಿಯೆ॥೫ ಚೌಕ॥

***ರಚನೆ :*** ಲಿಂಗಕವಿ
***ಕೃತಿ :*** ಜೀವನ ಸಂಗೀv

## ೬. ಕಬೀರ-ಕಮಾಲ

ಅನಿವಾರ ಭೂಮಿ ಮ್ಯಾಲ ಭಕ್ತ
ಕಬೀರ ಕಮಾಲನಂಗ
ವಿಷ್ಣು ಭಕ್ತಿ ಸತ್ವದಲಿ ಶೀಲಾ
ಲೀಲಾ ಮಾಡಿ ತೋರಿಸ್ಯಾರ ಪ್ರಬಲಾ
ಸಾಧು ಜನರ ದೆಸೆಯಿಂದ ವಧಾ ಮಾ
ಡಿದ ಮಗನ ಶಿರಕಮಲ ಮಗನ ಶಿರಕಮಲಾ॥ಪಲ್ಲ॥

ಪತಿವ್ರತಾ ಸತಿಸುತ ಜ್ಞಾತಿಕಮಲಾ
ಅತಿ ಭಕ್ತ ಕಬೀರ ನೀತಿ ಶಾಸ್ತ್ರ ಸಕಲ ಬಲ್ಲವರಾ
ಅತಿಥಿಗಳಿಗೆ ಅನ್ನಾ ಹಾಕುವರಾ
ಗತಿಯಿಲ್ಲ ಮನಿಯಾಗ ಬಡತನ ಪೂರಾ
ಅವರ ನಡಸತಿದ್ರ ಜನ್ಮ ಸಸಾರಾ
ಒಂದು ದಿವಸ ರಾತ್ರಿಲೆ ಅವರ ಮನಿಗೆ
ಬಂದಾರ ಅನೇಕ ಮಂದಿ ಸಾಧುರಾ
ಕಬೀರ ಹಾಕ್ಯಾನ ಅವರಿಗೆ ನಮಸ್ಕಾರಾ

ಅಡ್ಡ ಬಿದ್ದಾರ ಸತಿ ಸುತರಾ
ಹಾಸಿದಂತ ಹರಕ ಚಾಲಿ ಮ್ಯಾಲಾ
ಸಾಧುರರು ಕುಂತಾರು ಎಲ್ಲರಾ

**||ಚಾಲ||**

ಆನಂದಕಂದ ಆದ ಕಬೀರಾ
ಚಂದ್ರಗ ಚಕೋರ ಬಾಯಿ ತೆರದಂಗ
ಹನುಮಂತನ ನೋಡಿ ಸೀತಾಗ
ಅಶೋಕವನದಾಗ ಹರುಷಾದಾಂಗ
ಕುರುಡಗ ಬಂದ್ಹಾಂಗ ನಯನಾ
ಯಾಚಕಗ ದೊರೆತಂಗ ಧನಾ
ನೋಡಿದಂಗ ಕಮಲ ಸೂರ್ಯನಾ
ಈ ಪರಿ ಹರುಷ ಆದ ಭಕ್ತಾ
ಹೆಣತಿನ ಕರದ ಕೇಳ್ಯಾನ ಅನಕೂಲಾ
ಊಟಕ ಹಾಕಬೇಕ ನಿರ್ವಾ ಇಲ್ಲಾ
ಸಂತ ಮಹಿಮಾ ಯಾರಿಗೂ ತಿಳಿದಿಲ್ಲಾ
ಕೇಳಿ ಪತಿವ್ರತಾ ಅಂತಾಳ ಪ್ರಾಣನಾಥಾ
ಈಗಿನ ವ್ಯಾಳೇಕ-ಸೇರ ಕಾಳಿಲ್ಲ ನಮ್ಮಲಿ ಶಿಲ್ಕಾ
ಯಾರ ಮನಿಗಿ ಹೋಗಲಿ ಬೇಡುದಕಾ
ಕೊಂಡ ತಂದೇವಿ ಅಂದರ ನಮ್ಮ ಕೈಯಾಗಾ
ಇಲ್ಲರಿ ರೊಕ್ಕಾ
ಒಂದ ಯುಕ್ತಿ ಹೇಳತಿನ ಕೇಳರಿ
"ತಕ್ಕೊಂಡ ಹೋಗರಿ ನಿಮ್ಮ ಮಗನ ಬಾಜಾರಕಾ
ಸಾಮಗ್ರಿ ತುಡುಗ ಮಾಡುವದಕಾ
ಪಾಪಿಲ್ಲ ಪರೋಪಕಾರಕಾ
ಇದರ ಹೊರತ ಮುಕ್ತಿ ಕಾಂಬುದಿಲ್ಲ
ಊಟ ಹಾಕಿ ಇವರ ಮಣಿಸುವದಕಾ"

**||ಏರು||**

ಅನಿವಾರ ಭೂಮಿ ಮ್ಯಾಲ ಭಕ್ತ ಕಬೀರ
ಕಮಾಲನಂಗ ಯಾರಿಲ್ಲಾ
ಸಾಧು ಜನರ ದಸಿಯಿಂದ ವಧಾ ಮಾಡಿದ
ಮಗನ ಶಿರಕಮಲಾ.....||೧ನೆಯ ಚೌಕ||

ಸತಿ ಮಾತ ಕೇಳಿ ಅತಿ ಹರುಷಾದ
ಕಬೀರದಾಸ ತನ್ನ ಮನಕಾ
ಕಮಾಲನ ಕರದಾನ ಆ ಕ್ಷಣಕಾ
ನಡಿ ಮಗನೆ ಹೋಗುನು ತಡಾಯಾಕಾ
ಕನ್ನಗತ್ತಿ ಹಾರಿ ತಕ್ಕೊಂಡ ಹೊಂಟಾರ
ಮನಿಯೊಡೆಯುದಕಾ ಮನಿಯೊಡೆಯುದಕಾ
ಹೋದಾರ ಸರ್ವ ರಾತ್ರ್ಯಾಗ ನಡು ಪ್ಯಾಟ್ಯಾಗ

ನಿಂತಾರ ಇಬ್ಬರು ನಿಂತಾರಾ ಇಬ್ಬರಾ
ನೋಡಿ ಸುತ್ತಲು ಎಚ್ಚರಿಲ್ಲ ಯಾರದ್ಯರಾ
ದೊಡ್ಡ ಸವಕಾರನ ಅಂಗಡಿ ನೋಡಿದರಾ
ಗಚ್ಚಿನ ಗ್ವಾಡಿ ಒಡೆದರಾ
ಒಳಹೊಕ್ಕು ತಾವು ನೋಡ್ಯಾರು
ಸುತ್ತೆಲ್ಲ ಎಚ್ಚರಿಲ್ಲ ಯಾರು

**||ಚಾಲ||**

ಧನ ದ್ರವ್ಯ ನೋಡಿ ಮನದಾಗ
ಬಿಟ್ಟ ನಡದ ನೋಡಿ ನೋಡದಂಗ
ಹಂಸ ನೀರ ಬಿಟ್ಟ ಹಾಲ ಕುಡದಂಗ
ಹಿಟ್ಟಕ್ಕಿ  ಬ್ಯಾಳಿ ತುಪ್ಪಾ ಬೆಲ್ಲಾ
ಸಾಧುರ ಪುರ್ತೆಕ ತಗೊಂಡ ಹೆಚ್ಚಿಲ್ಲಾ
ಕಬೀರದಾಸ ಮಾಡತಾನ ಕಾವಲಾ
ಅವನ ಕೈಯಾಗ ಕೊಟ್ಟಾನು ಎಲ್ಲಾ
ಹೊರಬಿದ್ದ ಹೋಗು ವೇಳೆದಲ್ಲಿ ನೆಪ್ಪಾತ ಒಂದಾ
ಸಾವಕಾರ ಮಲಿಗ್ಯಾನ ಎಚ್ಚರಿಲ್ಲದಾ
ಧನದ್ರವ್ಯ ಬಿದ್ದಿದೆ ಆನಂದಾ
ನನ್ನಂತ ತುಡುಗ ಒಯ್ದಾನ ಮತ್ತೊಬ್ಬ ಬಂದಾ
ಆತ ತಿಳದ ಮಾಡ್ಯಾನ ವಿಚಾರಾ
ಏಳೋ ಸಾವಕಾರಾ ಸಾವದಾಂಗ ಜಲದಾ
ಜ್ವಾಕಿ ಮಾಡಿಕೊಳ್ಳೊ ಬಾಕಿ ಉಳದದ್ದಾ
ನಾವು ತುಡುಗರಾ ಹೋಗತೇವ
ನೋಡೋ ಜೋಡಿ ಇಲ್ಲಿಂದಾ
ಇಷ್ಟ ನುಡದ ಕಮಾಲ ಆಗ ಕಿಂಡ್ಯಾಗ
ತಲಿ ಹಾಕಿ ಹೋಗತಿದ್ದಾ
ಇತ್ತ ಸಾವಕಾರ ಕಾಲ ಹಿಡದೆಳದಾ

ಅರ್ಧಾ ಒಳಗ ಅರ್ಧಾ ಹೊರಗಾದಾ
ಕಬೀರಗಂತಾನ ಆದೀತ ಘಾತಾ
ನಮ್ಮ ಮ್ಯಾಲ ಮುನಿದ ಭಗವಂತಾ

||ಏರು||

ಮೃಗರಾಜ ಸಿಕ್ಕಾಂಗ ಬಲಿಯೊಳಗಾ
ಕಮಾಲ ಸಿಕ್ಕಾನ ಅವನ ಕೈಯಾಗಾ
ಕಮಾಲ ಅಂತಾನ ಕಬೀರಾ
ಅಯ್ಯೋ ಎನ್ನ ಶಿರಾ ಒಯ್ಯೋ ಲಗುಬ್ಯಾಗ
ಅನಿವಾರ ಭೂಮಿ ಮ್ಯಾಲ ಭಕ್ತ ಕಬೀರ
ಕಮಾಲನಂಗ ಯಾರಿಲ್ಲಾ
ಸಾಧು ಜನರ ದಸಿಯಿಂದ ವಧಾ ಮಾಡಿದ
ಮಗನ ಶಿರಕಮಲಾ....||೩ನೆಯ ಚೌಕ||

ಎಲೋ ತರಬ್ಯಾಡೋ ಅನುಮನಾ
ಮಾಯಾ ಮಮತಾ ಒಗದ ಬಿಡೋ ನೀನಾ
ಎಂದಿದ್ರ ಹೋಗೋದು ಒಂದೀನಾ
ಹತ್ತು ಮಂದಿ ಕೂಡಿದರ ಖೂನ ಹಿಡಿದರ
ಮಾನ ಉಳಿಯುವದಿಲ್ಲ ಮಾನ ಉಳಿಯುವದಿಲ್ಲಾ
ಸುದ್ದಿ ಹತ್ತೀತ ಸಾಧುರಿಗೆಲ್ಲಾ
ಮಾಡಿದ್ದೆಲ್ಲಾ ಆದೀತ ನಿಷ್ಫಲಾ
ಕಬೀರದಾಸ ಮನಸಿನಲಿ ತಿಳದಾ
ಮೋಹಪಾಸೆ ಹರದಾ
ಹಿರದ ಕತ್ತಿ ತೈಯಾರಾ
ಮಾಡಲಿಲ್ಲ ಮತ್ತೊಂದು ವಿಚಾರಾ
ಏ ಭಕ್ತರಾಜ ಸುಕುಮಾರಾ
ಆಸೆವಂತ ಖರೇ ಶಾಹೀರಾ

||ಚಾಲ||

ಪ್ರಾಣಕೊಟ್ಟ ಪರೋಪಕಾರಕ
ಮಗನೆ ಆದಿಯೋ ಪಾರಾ
ರಾಮನಾಮ ಸ್ಮರಣೆ ಮಾಡಿಕೋತಾ
ಕುತ್ತಗಿ ಮ್ಯಾಲ ಖಡ್ಗ ಮುಟ್ಟಲಾಧೀರಾ
ಮಗನೆ ಮಾಡೋ ರಾಮನಾಮ ಉಚ್ಚಾರಾ
ರಾಮನಾಮ ಎರಡು ಅಕ್ಷರಾ

ಕ್ಷೀರಾಬ್ಧಿ ಶೇಷಶಾಯಿ ಹಂತೇಲಿ
ಇರೋ ನೀನು ಸ್ಥಿರಾ ಇರೋ ನೀನು ಸ್ಥಿರಾ
ಇಷ್ಟ ನುಡದ ಕಬೀರಾ
ಕಡದಾನ ತಲಿ ತಡ ಮಾಡಲಿಲ್ಲ
ಮತ್ತೊಂದು ವಿಚಾರಾ
ರುಂಡ ಬಗಲಾಗ ಹಿಡಕೊಂಡಾ
ಹೊಂಟಾನ ಧೀರಾ ಧೀರಾ
ಸಾಮಗ್ರಿ ಸಹಿತ ಕಬೀರಾ
ಆನಂದದಿಂದ ಹೊಕ್ಕಾನು ಮಂದಿಯ
ತನ್ನ ಮಡದಿಗೆ ಹೇಳ್ಯಾನ ಏಕಾಂತಾ
ಆದ ವೃತ್ತಾಂತ ಹೋದ ನಿನ್ನ ಮಗಾ
ಕೇಳಿ ಕಬೀರನ ಸತಿ ಬಿದ್ದಾಳ
ಬಡದ್ಹಂಗ ಭ್ರಾಂತಿ ಜಗಮುಳಗಿದ್ಹಂಗಾ
ನನ್ನ ಮಗನಿಗೆ ಬಂತೋ ಮರಣಾ ಶ್ರೀಹರಿ
ಹಿಂಗಾಯಿತೇನೋ ಧೀರಾ ಉದ್ಧಾರಾ

||ಏರು||

ಶ್ರೀಯಾಳ ಚೆಲ್ಲಾಳನ ಪರಿ
ಸಾಧುರ ದಸಿಯಿಂದ ಶಿರಾ ಕೊಟ್ಟ
ಹಾಕಿದಿ ಊಟಾ ಸತ್ವ ಬಿಡಲಿಲ್ಲಾ
ದುಃಖ ಒಗೆದು ಆದಾಳ ಖುಸಿಯಾಲಾ
ಅಡಗಿ ಮಾಡ್ಯಾಳ ತಾತ್ಕಾಲಾ
ಅನಿವಾರ ಭೂಮಿ ಮ್ಯಾಲ ಭಕ್ತ ಕಬೀರ
ಕಮಾಲನಂಗ ಯಾರಿಲ್ಲಾ
ಸಾಧು ಜನರ ದಸಿಯಿಂದ ವಧಾ ಮಾಡಿದ
ಮಗನ ಶಿರಕಮಲಾ......||೩ನೆಯ ಚೌಕ||

ಕೂತೀತ ಸಾಧುರ ಪಂಕ್ತಿ
ಹಿಡಿಸದೊ ಕಬೀರನಕ್ಕರತಿ
ಇತ್ತ ಸಾವಕಾರ ಎದ್ದ ರಾತ್ರಿಯಲಿ
ಶಂಕದನಿ ಮಾಡಿದ ಪ್ಯಾಟಿಯಲಿ
ಕೂಡ್ಯಾರ ಜನರು ನೋಡ್ಯಾರ ಕಣ್ಣೀಲಿ
ತುಡಗನ ತುಡಗ ನಿಂತ ಕಡದ ಖೂನಾಗಿ
ದಡದ ಗುರ್ತ ಹತ್ತವಲ್ತ ಎಲ್ಲಿ
ಆಶ್ಚರ್ಯವಾದೀತ ಲೋಕದಲಿ

ಸಾವಕಾರಗ ಅಂತಾರ ದೈವಶಾಲಿ
ಧನದ್ರವ್ಯನಿಂತ ಭಗವಂತ ಕಾಯೂತ ಇಲ್ಲಿ
ರಾಜನ ಮುಂದ ಈ ಸುದ್ದಿ ಹೇಳತರಿ
ಮಂದಿ ಹೋಗಿ ತೀವ್ರದಲಿ
ಏ ದೊರೆಯೆ ನಿನ್ನ ಊರಲ್ಲಿ
ಕಡದೊಯ್ದಾರ ತುಡಗನ ತಲಿ
ಇಂತವರದಂತ ಖೂನ ಹತ್ತವಲ್ತಲ್ಲಿ
ದಡದ ಮ್ಯಾಲಿಂದಾ ಮ್ಯಾಲಿಂದಾ
ಆಗ ರಾಜಗ ಬಂದೀತ ಸಿಟ್ಟಾ
ಅಪ್ಪಣೀ ಆಗ ಅಂವ ಕೊಟ್ಟಾ
ಹಾಕೀರಿ ಅದನ ಫಾಸೇಕಾ
ಸೂಲಗಂಬ ತಂದ ನಿಲಿಶ್ಯಾರ ಅದಕ
ಹಾಕ್ಯಾರ ಸತ್ತ ಹೆಣಕಾ
ಆಗ ರಾಜ ಆಗಿ ಅಜ್ಞಾನ ತಗೊಂಡಾ
ಮೂರ್ಖತನ ತನ್ನ ಪಾಲಕಾ

**||ಚಾಲ||**

ಮುಂಜಾನೆ ಎದ್ದ ಸಾಧುರಾ
ಮುಂದ ಹೋಗುದುಕ ಆಗ್ಯಾರ ತೈಯಾರಾ
ಅಂತಾರ ಕಬೀರ ಉದಾರಾ
ಇಷ್ಟ ಹೇಳಿ ಹೊಂಟಾರ ಹೊರಬಿದ್ದಾ
ಕಬೀರ ಕೈಮುಗದ ಹಿಡಿತಾನ್ರಿ ಕಾಲಾ
ದಯಾ ಇರಲಿ ಕಿಂಕರನ ಮ್ಯಾಲಾ
ಕಳಿಸುತ ಹೋದಾನ ಹಿಂಬಾಲಾ
ತಾಳ ವೀಣಾ ಮೃದಂಗ ಘೋಷಾ
ಮಾಡುತ ಹರಿಧ್ಯಾನದಲಿ ಹರಿಧ್ಯಾನದಲಿ
ಕಮಾಲನ ಶೂಲಕ ಹಾಕಿದಲ್ಲಿ
ಕೂಡ್ಯಾರ ಸಾಧೂರಾ ನೋಡ್ಯಾರ
ಧಡಾ ದೃಷ್ಟಿಯಲಿ ತಮ್ಮ ದೃಷ್ಟಿಯಲಿ
ಎತ್ತೆತ್ತ ಹೋದತ್ತರತ್ತತ್ತ ಮುಗಿತದ
ಕೈಯಾ ಬಿದ್ದು ಫಾಸಿಯಲಿ
ಲಕ್ಷ ಇಟ್ಟ ಸಾಧುರ ಚರಣದಲಿ
ತಾಳ ಇಲ್ಲದ ಶರೀರ ಶರೀರ
ಕುಣಿತದ ಮ್ಯಾಲೆ ಅಂತ್ರದಲಿ
ನೋಡಿ ಸಾಧುರ ಅಲ್ಲಿ ನಿಂತಾರ

||ಏರು||

ಕಬೀರಗಂತಾರ ಏನು ಇದರ ಲೀಲಿ
ರುಂಡವಿಲ್ಲಿದ ಜೀವ ಇದಕೆಲ್ಲಿ
ನಾವೆಂದ ಕಂಡಿಲ್ಲ ಪೃಥ್ವಿಯಲಿ
ಕೈಯ ಮುಗಿತದ ಹೆಂಗ ನೀ ಹೇಳವಲ್ಲಿ
ಅನಿವಾರ ಭೂಮಿ ಮ್ಯಾಲ ಭಕ್ತ ಕಬೀರ
ಕಮಾಲನಂಗ ಯಾರಿಲ್ಲಾ
ಸಾಧುರ ಜನರ ದಸಿಯಿಂದ ವಧಾ ಮಾಡಿದ
ಮಗನ ಶಿರಕಮಲಾ....||ಳನೆಯ ಚೌಕ||
ತಂತಿ ಹರದ ಮ್ಯಾಲ ವೀಣಾ
ನುಡಿಯೋದು ಕಠಿಣಾ ಕಠಿಣಾ
ಬಲ್ಲ ಭಗವಂತ ಪಕ್ಷಿಗಳ
ಪಂಖ ಹೋದ ಮ್ಯಾಲೆ ಹಾರತಾವ ಹೆಂಗಾ
ಭಾಳ ವಿಪರೀತಾ ವಿಪರೀತಾ
ಕಬೀರ ಅಂತನ ಕೇಳರಿ
ಹೇಳುವೆ ಈ ದಡದ ಪುರಾಣ "ಈ ಪರಿ
ರಣದಾಗ ಬಿದ್ದ ಭೀಷ್ಮಾಚಾರಿ
ಪ್ರಾಣಾ ಬಿಡಲಿಲ್ಲ ಉತ್ತರಾಯಣ ತನಕಾ
ಶರಪಂಜರದ ದುಃಖವನಿಗಾಗಲಿಲ್ಲಾ
ಹಾಂಗ ತುಡುಗ ನಿಮ್ಮ ಪದಕಮಲ
ನೋಡ ಬೇಕೆನ್ನೊ ಹಂಬಲ್ಯಾ"
ಕೇಳಿ ಕಬೀರದಾಸನ ಶಬ್ದಾ
ಸಾಧೂರ ಆಗಿ ಸ್ತಬ್ಧಾ
ಕೇಳತಾರ ಅವನ -
'ಅಂತಹ ತುಡುಗ ಯಾಂವ
ಹೇಳೊ ನೀ ಪೂರ್ಣಾ
ತೀರಿಸೋಣ ಅವನ ಮನೋರಥಾ'
ಅಂದ ಮಾತಿಗೆ ಕಬೀರ ಮೊದಲಿಂದಾ
ಹೇಳ್ಯಾನ ವೃತ್ತಾಂತಾ ವೃತ್ತಾಂತಾ
ತಂದಿ ಮುಂದ ಸುದ್ದಿ ಹೇಳುದುಕ
ಕಂದ ಅಭಿಮನ್ಯು ಬಿದ್ದ ಮೂರ್ಛಿತ
ಅರ್ಜುನಗ ವರದಿ ಹೇಳಿ ಸತ್ತಾಂಗ
ತುಡುಗ ನಿಮ್ಮನು ನೋಡುತಾ
ನಿಮ್ಮ ದರ್ಶನ ಮಾಡಿ ಹಿಡಿಬೇಕಂತಾನ
ಸ್ವರ್ಗದ ಪಂಥಾ ಸ್ವರ್ಗದ ಪಂಥಾ

ವನವಾಸಕ ಹೋದ ರಘುವೀರಾ
ಪಕ್ಕ ಕಳಕೊಂಡ ಬಿದ್ದ ಜಟಾಯು
ರಾಮನಾಮ ಸ್ಮರಣಿ ಮಾಡಿಕೊಂತಾ
ಅವನ ಚರಣ ಕಂಡ ಚರಣ ಕಂಡಾ
ಪ್ರಾಣ ಬಿಟ್ಟಾನು ಜಟಾಯು ಭಕ್ತಾ
ಹಿಂಗ ಘಾಸೇಕ ಹಾಕಿ ನಿನ್ನ ಮಗನಾ
ಹ್ಯಾಂಗ ಹೋಗೋಣ ಅಲ್ಲ ಧರ್ಮಾ
ಇಲ್ಲಿ ತಾರೋ ಕಮಾಲನ ಶಿರಾ
ಧಡಕ ಹಚ್ಚಿ ತ್ವರಾ
ಮಾಡೋ ಹರಿನಾಮಾ
ಶಿರಾ ತಂದ ಧಡಕ ಹಚ್ಚ್ಯಾರ
ಟಾಳಿ ಹೊಡಿತಾರ ಆಗಿ ಸುಪ್ರೇಮಾ

**||ಏರು||**

ಸಾಧುರ ನಿಂತಾರ ಸುತ್ತಮುತ್ತಾ
ಅಲ್ಲಿ ಬಂದಾನ ಪಂಢರಿನಾಥಾ
ಕಮಾಲ ಎದ್ದಾನ ನಕ್ಕೋತಾ
ಪುಷ್ಪ ಮಳೀ ಸುರದರ ಇಲ್ಲ ಸೀಮಾ
ಸಂತ ಮಹಿಮಾ ನೋಡಿ ಸರ್ವರೆಲ್ಲಾ
ದಯಾ ಇಟ್ಟ ಅಣ್ಣಾರಾವಜಿ ಮ್ಯಾಲಾ
ಬಾಳಗೋಪಾಳ ಹರಿಧ್ಯಾನದಲಿ ಲೋಲಾ
ಅನಿವಾರ ಭೂಮಿ ಮ್ಯಾಲ ಭಕ್ತ ಕಬೀರ
ಕಮಾಲನಂಗ ಯಾರಿಲ್ಲಾ
ಸಾಧು ಜನರ ದಸಿಯಿಂದ ವಧಾ ಮಾಡಿದ
ಮಗನ ಶಿರಕಮಲಾ.....||ಜನೆಯ ಚೌಕ||

***ರಚನೆ :*** ಬಾಳಗೋಪಾಳ
***ಕೃತಿ :*** ಬಾಳಗೋಪಾಲನ ಲಾವಣಿಗಳು

## ೧೦. ಸಂಗ್ಯನ ಅಪರಾಧ ಮತ್ತು ಸಾವು

**ಪಲ್ಲಾ**

ಬಡತನ ಅಂಬುದು ಬಾಽಳಕೆಟ್ಟ
ಬಡವಗ ಬಂತು ಬಹು ಶಿಟ್ಟ

ಸಾವಕಾರ ಸಾಲಾ ಕೊಡಬೇಕಾದರ
ಸಂಗ್ಯಾಗ ಆದಿತೊ ಸಂಕಷ್ಟ

೧ನೆ ನುಡಿ

ಶಹರ್ ಹೊಂಗಲದಾಗ ಸಾವಕಾರ
ದೂರವಜಂತಿ ಅವನ ಹೆಸರ
ಬೆಳ್ಳಿ ಬಂಗಾರ ರೊಕ್ಕ ರುಪಾಯಿ
ಅಳ್ಳಿಯ ವಹಿವಟ ವ್ಯಾಪಾರ
ಚಿನಾಯ ಕುರೇದ ಚಾಕತರ
ರುಪಾಯಿ ವೋಯುತ್ತಾರ ಪತ್ತಾರ
ವಾರವಾರ ಚಲತಿ ಚಾಕಲೆಕ್ಕ ಮಾಡೊದು ಶನಿವಾರ
ಅಂದಾದುಂದಿ ಅವನ ಕಾರ್ಭಾರ
ಹತ್ತೆಂಟು ಮಂದಿ ಅವನ ಮನುಷ್ಯರ
ಮಗಿ ಮಳಿಗಾಲ ಹತ್ತಿ ಅರವುತಾರ ಗೊತ್ತ ಇಲ್ಲದ ಹೆಂಗಸರ॥ಚ್ಯೆ॥

ಯೇನ ಹೇಳಲವನ ಕಾರ್ಬಾರಕಿ
ಅವ ಮಾಡುತ್ತಿದ್ದನೊ ಚಿನವಾರಕಿ
ಅಣ್ಣತಮ್ಮರಿಬ್ಬರು ತಿಳವಳಿಕಿ
ಅವರ ಮಾಡುದಕ ಕಡಿಮಿಲ್ಲ ಗಳಿಕಿ
ಊರಾಗ ಯಾರಿಗಾಗಿಲ್ಲ ಬೇಸರಿಕಿ
ಬಹಳ ಸಾಚೆ ಇಟ್ಟರ ಸಾವಕಾರಿಕಿ॥ಇಳವ॥

ಅವನ ಪೋಷಾಕ ಹೇಳತೇನ ನಿಮಗ
ಕೇಳ ಈಗ
ಅವ ಹಿಡಿದ ತಿರಗತಿದ್ದ ವೋಣಿ
ಚೌಕ ಶಿಖಾಮಣಿ
ಹಾಕಿದ್ದ ಕೊರಳಾಗ
ಜೆರಕಾಟಿ ರುಮಾಲ ತಲಿಮೇಗ
ನೋಡ ಅವಗ
ಹೊತ್ತಿರು ದೋತರ ನಾಕ್ಪುರಿ
ಕೆಮಲಟ ಬೇರೆ
ಅಂಗಿ ಮೈಯಾಗ
ಚಂದ್ರಹಾರ ಗೋಪ ಚಂದ ಹ್ಯಾಂಗ
ಯೆದಿಮೇಗ
ತಳತಳ ಹೊಳುದು ಬಂಗಾರ

ಪವಿತ್ರದುಂಗರಾ
ಇಟ್ಟಿದ್ದ ಬೆರಳಾಗ॥ಯೇರ॥

ಮಾತಿಲಿ ಇದ್ದನ ಬಹುದಿಟ್ಟ
ಸುಳ್ಳ ಮಾತ ಇಲ್ಲ ಯಳ್ಳಷ್ಟ

೨ನೇ ನುಡಿ

ಮೊದಲ ಕೇಳ ಮಾತಿನ ಜರಿ
ಖಾತೆದ ಹೊಲ ನೋಡ ಜಾತ ಯೆರಿ
ಐದ ವರಷದ ದಿನ ಮುದ್ದತ ಮಾಡಿದನ ಬರಕೊಟ್ಟ ಕಾಗದ ಬರಾಬರಿ
ನ್ಯಾಯ ಬಂದಿತೊ ಹೋದಬರಿ
ಜೋರಿ ಮಾಡಲಿಲ್ಲ ಕಾಯದೆ ಮೀರಿ
ಮಾಸೀಲಿ ಪ್ರಕಾರ ಫಿರ್ಯಾದಿ ಮಾಡಿದನ ಸವದತ್ತಿ ಕೋರ್ಟಿನ್ಯಾಗ ಬಿತ್ತಮುರಿ
ಬಸಲಿಂಗಣ್ಣನ ಮಾತ ಸರಿ
ಶ್ಯಾಪ ಚೆಲ್ಲಿ ಮಾಡಿದ ಮಂಜರಿ
ಮುನ್ಸುಫ ಅಂತನ ಅಫಿಲರ್ಜಿ ಧಾರ್ವಾಡಕೆ ಹೋಗಿ ಮಾಡರಿ ॥ಚ್ಯೇ॥

ಅಲ್ಲಿಂದ ಬಂದನ ಹೊಂಗಲಕ
ಮಲಸತ್ತ ಮಾಡಿದ ಹೋಗುದಕರಿ
ನೂರ ರೂಪಾಯಿ ತೊಗೊಂಡ ಹಂತೇಕ
ಇಲ್ಲಿಂದ ಹೊಂಟನ ಧಾರ್ವಾಡಕ
ಅಫಿಲರ್ಜಿ ಕೊಟ್ಟನ ಸರಕಾರಕ
ವಕಿಲನಿಟ್ಟನೊ ಆಗಿನ ಕ್ಷಣಕ॥ಇಳವ॥

ಅರ್ಜಿ ಅಂತ ಮಾಡಿ ಕೊಡ ನಮಗ ನೀ ಈಗರ
ನೂರ ರುಪಾಯಿ ತೊಗೊ ಮಾರಿ ಗಾಡಿ
ಹೇಳ ಲಗು ಮಾಡಿ
ಯೇನಂತಿ ನಮಗ
ವಕೀಲ ತಿಳದ ಮನದಾಗ
ನೋಡ ಆಗ
ಹೀಗಂತ ಕೊಟ್ಟ ವಚನ
ಕಟ್ಲೇದ ಸಂದನ
ಚಿಂತಿ ಯಾಕೊ ನಿನಗ
ನೂರ ರೂಪಾಯಿ ಕೊಟ್ಟ ವಕೀಲಗೆ
ಕೈಯಾಗ
ಪಹಿಲಾ ತಾರೀಖ ಮುದ್ದತ ಆದಿತ್ಯವಾರ

ಮುಂದ ಸೋಮವಾರ
ಜಬತಿ ಬಂತ ಬೇಗ||ಯೇರ||

ಕಾರ್ಕೂನ ತಂದ ಜಬತಿ ಇಟ್ಟ
ಬಸಲಿಂಗ ನಡಿಸಿದ ತನ್ನ ಹಟ

**೩ನೆ ನುಡಿ**

ಮುನ್ನೂರ ರುಪಾಯಿದ ಮಾಸೀಲಾ
ನಿನ ಮೇಲಾಯಿತೊ ಫೈಸಲಾ
ಕಾರ್ಕೂನ ಅಂತಹ ಸಂಗೆಣ್ಣ ಕರಸು ನೀ ಯೇನ ಮಾಡತಿ ಸವಾಲಾ
ಸಂಗ್ಯಾಗ ಬಿತ್ತೊ ಮಹಜಾಲಾ
ಹೇಳಿಕೊಂಡ ತನ ಅನಕೂಲಾ
ಫೈಸಲ ಪ್ರಕಾರ ರುಪಾಯಿ ಕೊಡತೆನ ಹೊಲದ ವಳಗ ಬಿಡಸರಿ ಪಾಲಾ
ಸರ್ವ ತಪ್ಪು ನಂದ ಆಯಿತಲ್ಲಾ
ನಿನ್ನಿಂದ ಹೊರತ ಗತಿಯಿಲ್ಲ
ಬಸಲಿಂಗಣ್ಣನ ಮಾತ ಮೀರುದಿಲ್ಲ
ಕೈ ಮುಗದ ಹಿಡಿದನ ಕಾಲಾ||ಚ್ಯೇ||

ಜಪ್ತಿ ಬಂದ ಬಳಿಕ ಯೇನ ಹೇಳಲಿ
ಇಂದಿಗೆ ನಿನ್ನ ಹೊಲ ಹೋಯಿತಿ
ಬಸಲಿಂಗಣ್ಣ ಮಾಡಿದನ ಜಾತಿ
ಫಕಿರಣ್ಣನ ಜುಮೆಕ ಹೊಲ ಆತಿ
ಸಂಗ್ಯಾ ಮನಿಗೆ ಹೋಗಿ ಮಾಡ್ಯಾನ ಚಿಂತಿ
ಖಾತೆದ ಹೊಲಾ ಇಂದಿಗೆ ಯಾರವಾತಿ||ಇಳವ||

ಮತ್ತೊಂದ ಮಾಡ್ಯಾರ ಮಸಲತ್ತ
ನೋಡ ಬೇತ
ಸಂಗ್ಯಾ ಪರಿಷ್ಯಾ ಇಬ್ಬರು ಕೂಡಿ
ನಗತ ಮಾತಾಡಿ
ಯಾರಿಗಿಲ್ಲ ಗೊತ್ತ
ನಮ್ಮ ನಿಮ್ಮರ ವೊಳಗಿನ ಮಾತಾ
ಹೀಂಗಂತಾ
ಯಾರ್ಯಾರಿಗೆ ತಿಳಿಯಬಾರದ ಹೀಂಗ ಮಾಡಂನು ಬಲ್ಲಾಂಗ
ಹೋಗುನು ಹರ್‍ಯಾನ ಹೊತ್ತ
ಅವರ ಮಸದರ ಕುಡಗೋಲ ಕುಂತ
ಕಡುನ ಅಂತ

ಇಂದಿಗೆ ಹೋಗಲಿ ನಮ್ಮ ತಲಿ
ಆಗುವದು ಆಗಲಿ
ಜೀವದಂದ ಹೊರತಾ||ಯೇರ||

ವಕ್ಕುಂದ ಊರ ಬಸಲಿಂಗ ಬಿಟ್ಟ
ನಾಳೆ ಹಾಕುದು ಮಹನೌಮಿಗಟ್ಟ

**೪ನೆ ನುಡಿ**

ಮಂಗಳಾರ ಉದಯಕ ತಾ ಯದ್ದ
ತಾಯಿ ಪಾದಕ ಹೋಗಿ ಬಿದ್ದ
ಸಂಗ್ಯಾ ಪರಿಷ್ಯಾ ಇಬ್ಬರು ಅಂತರ ಬಸವಣ್ಣ ನಡಸು ನಮ ಜಿದ್ದ
ಕುಡಗೊಲ ಮಸದ ಅವ ಹಿಡಿದ ಬಗಲಗ ಮುಚ್ಚಿಕೊಂಡ ತಾ ನಡದ
ಮೂರ ತಾಸ ಹೊತ್ತೇರಿತ ಆಗ ಫಕೀರ್ಣನ ಮನಿಗಿ ಬಂದ
ಮನಿಯಾಗ ಕೇಳತಾರ ಯೆಲ್ಲಿ ಹೋದ
ಬಹಳ ಕೆಲಸ ಇತ್ತ ಅವನಿಂದ
ತುಕ್ಕಣ್ಣ ಅಂತನ ಯಾತಕ ಬಂದಿ ಯೇನ ಕೆಲಸ ನನ ಮುಂದ||ಚ್ಯೇ||

ಇಷ್ಟ ಕೇಳಿ ಹಿಂದಕ ತಿರಿಗಿ ಹೋದ
ಹೊಲದಾಗ ಹೊಳಿಯಾಗ ಹುಡಿಕಿದಾ
ಅವ ಶಿಕ್ಕರ ಪ್ರಾಣ ಹೋಗುದಾ
ಫಕೀರಣ್ಣನ ಪರಮೇಶ್ವರ ಕಾದ
ಹುಡಿಕಿಯಾಡಿ ಅಂಗಡಿಗೆ ಬಂದ ಕಪ್ಪುರ ಕಾಯ ತೊಗೊಂಡವೊಂದ|| ಇಳವ||

ಬಸವಣ್ಣ ದೇವರಿಗೆ ನಡದ ಮಾಡಿ ಜಲದ
ಕಾಯಿ ವಡದ ಬೆಳಿಗಿ ಕಪ್ಪರ ಮಾಡಿ ನಮಸ್ಕಾರ ಹೊಂಗಲ ದಾರಿ ಹಿಡಿದ
ಸಂಗಣ್ಣ ಬಂದ ಮುಂದ ಮುಂದ
ಅಲ್ಲಿಂದ
ಮೆಗುಟಿ ಪರಸ ಯೇನಂದ
ಮುಂಚೆ ಕುಡುನಂದ
ರಾಚಪ್ಪನ ಹಿಡಿದಾ
ಹೀಂಗ ಮಾತಾಡಿ ಪರಿಪರಿದಿಂದ
ವೊಂಡ್-ಖಂಡಾ
ರಾಚಪ್ಪನ ಮನಿಗೆ ಹೋಗಿ ಕೇಳ್ಯಾರ ಮುದಿಕಿಗಿ ಅಣ್ಣಪಯೆಲ್ಲಿ ಹೋದಾ||ಯೇರ||

ಕೊಲ್ಲವನಕಿಂತ ಕಾಯುವ ಶ್ರೇಷ್ಠ
ಬಹಳ ಚಲೊ ಅವರ ಅದರುಷ್ಟ

**೫ನೆ ನುಡಿ**

ಬಂದದ್ದಾತಿ ಅಂತಾರ ಕಾಲಿ
ಶಿಟ್ಟ ಅದರ ತಮ್ಮ ಮನದಲ್ಲಿ
ಬಸಲಿಂಗಣ್ಣನ ಮನಿಗೆ ಹೋದರೊ ತಿಳಿಯಲಿಲ್ಲ ಇಬ್ಬರ ನೆಲಿ
ವೊಂಬತ್-ತಾಸ ವೇಳೆದ ಮೇಲೆ ಪೂರ್ವಲಿಖಿತ ವದಗಿತ ಅಲ್ಲಿ
ಸಂಗ್ಯಾ ಪರಿಷ್ಯಾ ಮುಜರಿ ಮಾಡಿಕ್ಯಾರ ಹೋಗಿ ನಿಂತರೊ ಅವನ ಬದಿಯಲಿ
ಬಸಲಿಂಗಣ್ಣನ ಚಿತ್ತ ರುಪಾಯಿ ಮೇಲೆ
ಮೂರು ನಾಕು ಮಂದಿ ಅವನ ಬದಿಯಲ್ಲಿ
ಕಡದಾರು ಅಂಬುದು ಅವಗ ತಿಳಿಯಲಿಲ್ಲ
ಶಿವ ತಂದ ಹಾಕಿದ ಮಾಲಿ॥ಚ್ಯೇ॥

ಸಂಗ್ಯಾ ಮುಂಗೈಯಂಗಿಯ ತೇಡಿಕೊಂಡ ಬಗಲನ್ನು ಕುಡಗೋಲ ತಕ್ಕೊಂಡ
ನಿಂತ ನೋಡಿ ಕಡದನೊ ಅವನ ಚಂಡ
ಅದರಂತ ಕುಡಗೋಲ ಯಳಕೊಂಡ
ಕಡದವನ ಹಿಂದಕ ಸರಕೊಂಡ
ವೋಡಿ ಹೋದನ ಪರಿಷ್ಯಾನ್ನ ಕರಕೊಂಡ॥ಇಳವ॥

ಬಸಲಿಂಗಣ್ಣ ಯೆದ್ದ ಸಂಗಟಾಗಿ
ಶಿರ ಬಾಗಿ
ಬಾಯಿಲಿ ಸುರಿತ ನೆತ್ತರಾ
ಹಾರಿತ ಕಬರಾ
ಬಿದ್ದನ ಜೀವ ಹೋಗಿ
ಕುಂತಿರು ಮಂದಿ ಗಾಬ ಆಗಿ ಹೊರಗ ಹೋಗಿ
ಯೆಲ್ಲರು ಅಂತರ ಹಿಡಿ ಹಿಡಿ ವೋಡತನ ವೋಡಿ
ಕೋದ ಕುತ್ತಿಗಿ
ಬರುಹಂತ ಮಂದಿ ಇದಿರಿಗಿ ಬದಿಗಾಗಿ
ಅವನ ಹಿಡಿಯಲಿಲ್ಲ ಯಾರ್ಯಾರಾ
ಬಂದರ ಹಳಬರಾ ಆಗ ಸುದ್ದಿ ಆಗಿ॥ಯೇರ॥

ಊರಾಗ ಆದಿತ ಬಬ್ಬಾಟ
ದಾಟಲಿಲ್ಲ ಹೊಂಗಲ ಗೇಟ

**೬ನೆ ನುಡಿ**

ಶಿಟ್ಟ ತೀರಿತ ಅವರ ಮನದಂದಾ
ಮಂದಿ ಕೂಡಿತೊ ಸುತ್ತರದಾ

ಕೈಯಾನ ಕುಡಗೋಲ ಬಿಸಾಟಿ ವೊಗೆದಾನ ಪಾಪ ಹೋಗಗೊಡಲಿಲ್ಲ ಮುಂದಾ
ಬಿಕ್ಕಟ್ಟ ಹಾದಿ ವೋಣಿಯ ಸಂದಾ
ಹಳಬರ ಹಿಡಿದರ ಮಾಡಿ ಜಲದಾ
ಹೊಡಕೊಂತ ಚಾವಡಿಗೋದರ ಮರ್‍ಯಾದೆ ಉಳಿಯಲಿಲ್ಲ ಸಂಗ್ಯಾಂದಾ
ಕುಲಕರ್ಣಿ ಬಂದ ನೋಡಿದಾ
ಪೋಲಿಸಗವಡ ಹೊಡಿ ಅಂದಾ
ಇದರ-ಬದರ ಸಂಗ್ಯಾನ ಪರಿಷ್ಯಾನ ಕಂಬಕೆ ಕಟ್ಯಾರೊ ಬಿಗಬಿಗದ॥ಚ್ಯೇ॥

ಸುಳ್ಳ ಬಡಿಯಬೇಡರಿ ನಿವ ನಮಗ
ಕಡದಾಂಗ ಕಬೂಲ್ ಅದೇವ್ ಈಗ
ನಮ್ಮನ ಹಿಡದ ಕಳವರಿ ಸಂಪಗಾಂವ್ಯಾಗ
ಚೌಕಾಸಿ ಆದಿತ ಕಚೇರ್‍ಯಾಗ
ಹೂವಿನ ರಾಮಾ ಇದ್ದನ ಇದರಾಗ
ಅವ ಅಯಿದಾನ ವಕ್ಕುಂದ ಊರಾಗ॥ಇಳವ॥

ಕ್ಕುಂದ ಊರಿಗೆ ಹೊಂಟರೊ ಹಳಬರಾ ತಯಾರಾ
ಅವ ಶಿಕ್ಕ ಹೂವಿನಾ ರಾಮಾ
ಆಗಿ ಬೇಪಾಮ ಜೀವಕ ಬಂತ ಗೋರಾ
ಅದವತಿಗೆ ಹೇಳತಾರ ಅವರ ಇಬ್ಬರಾ
ಅಂಜಿ ನಡಗತಾನ ತರತರಾ
ಇದ್ ಎನ ಆಕಾರ ಕಣ್ಣಿಗೆ ತಂದ ನೀರಾ
ಊರಾಗ ಹೇಳತಾರ ದೀರಾ
ಎಲ್ಲಾರಾ
ಈ ಪಾಪದಾಗ ಜರ್ ಇಲ್ಲ ಯೇನನಾಗುದಿಲ್ಲ ಅಂತಾರ ಗೆಣಿಯರಾ॥ಯೇರ॥

ರಾತ್ರೊರಾತ್ರಿಲಿ ಅವ ಹೊಂಟ
ಉಣಗೊಡಲಿಲ್ಲ ವಂದೀಟ

೭ನೆ ನುಡಿ

ಪೋಲಿಸ ಕುಲಕರ್ಣಿ ಯೇನಂದ
ಬಹಳ ಹುಷಾರಿ ಇರಬೇಕಂದ
ವೊಳೆ ಸಾವಕಾರನ ಕಡದ ಹಾಕಿದಾರ ಹಿಂತ್ ಆದ ಆಗಕಿಲ್ಲ ಯೆಂದ್ ಎಂದ
ರಿಪೋರ್ಟ ಮಾಡೆರ ಕಾಗದ ಬರದ
ಹಳಬ ತೊಗೊಂಡ ಸಂಪಗಾಂವಿಗೆ ಹೋದ
ಕಚೇರಿವೊಳಗ ರಿಪೋರ್ಟ ಚೆಲ್ಯಾನ ಸುಭೇದಾರ ವೋದಿ ನೋಡಿದ
ಫೌಜ್‌ದಾರ ಲಗುಬೇಗ ತಯಾರ ಆದ

ಕುದುರಿಗಿ ತಡಿ ಬೇಗ ಹಾಕಂದ

ಬಿಲ್ಲಿ ಮನುಷ್ಯನ ತೊಗೊಂಡ ಬುಧವಾರ ಚೆಂಜಿವೇಳೆದಲಿ ಅವಬಂದ||ಚ್ಯೇ||

ಬಂದ ನಿಂತ ನೋಡಿದ ಫೌಜ್‌ದಾರ

ಕಣ್ಣಿಲಿ ಕಂಡನ ನೆತ್ತರಾ

ಹೆಣ ನೋಡಿ ಮರಗಿದ ಮರಮರಾ

ಯೇನ ಮುನಿದಾನ ಹರಿಬ್ರಹ್ಮ ದೇವರಾ

ಇವನ ಕಡದಾಗ ಇದ್ದರ ಯಾರ್‌ಯಾರ

ಮಂಟೂರ ಅಯ್ಯಗೋಳ ಪಂಚಪ್ಪ ಮೂವರ||ಇವಳ||

ಇಷ್ಟ ಕೇಳಿ ಮಣ್ಣ ಕೊಡರೆಂದಾ

ಅರತಿಂದಾ

ತಾಯಿತಂದಿ ಅಳತಾರೊ ಬೋರ್‍ಯಾಡಿ

ಬಿದ್ದ ಹೊರಳ್ಯಾಡಿ

ಅದರುಷ್ಟಕವರ್ ನಮದಾ

ಯೇನ ಕಡಿಮಿಯಿಲ್ಲ ಆನಂದಾ ದಯದಿಂದಾ

ಯೇನ ಬೇಡಿ ಬಂದನ ಶಿವನಲ್ಲಿ ನಮ್ಮ ಹೊಟ್ಟಿಲಿ ಮಗ ಬಿಟ್ಟ ಹೋದಾ

ನಾನಾಪರಿ ದುಕ್ಖ ಸ್ತ್ರೀಯಳದಾ

ಹಾಕಿದಾ ಗುಂಡ-ಗುಳದಾಳಿ ವೊಗದಾಳ ಹರದ

ಇನ್ನೇನ ಅತಿ ನಂದ

ಮಣ್ಣಿಗೆ ಮರಿ ಆದ||ಯೇರ||

ದುರ್-ಮಣ ಆದಿತೊ ವೈಕುಂಠ

ಯಾರಿಗೆ ತಿಳಿಯದೊ ಶಿವನಾಟ

**೮ನೆ ನುಡಿ**

ಮಹನೌಮಿ ಅಮಾಸಿ ಸೋಮವಾರ

ಆಶ್ವೀಜ ಶುದ್ಧ ಪಾಡ್ಯ ಮಂಗಳಾರ

ಸಕೆ ಸತ್ತರಾಸೆ ಪಂಚಾ-ಐಂಶಿ ರುದ್ರೋದ್ಗಾರಿನಾಮ ಸಂವತ್ಸರಾ

ಹೀಂಗ ಮಾಡಿದರ ವಿಚಾರ

ಪೋಲಿಸ ಕುಲಕರ್ಣಿ ಫೌಜ್‌ದಾರಾ

ಸಂಗ್ಯಾನ ಪರಿಷ್ಯಾನ ಕೈದ-ವೊಳಗ ಸಂಗಟ ಹೊಂಟರ ಹಳಬರಾ

ಇದ ಮೇಗ ಬಲ-ಹುಷಾರ

ಕಚೇರಿವೊಳಗ ಹಾಜರಾ

ಯಚ್ಚರ ತಪ್ಪಿ ಯತ್ತರ ಹೋದಿರಿ ಹುಕುಮ ಮಾಡಿದಾನ ಮಾಮ್ಲೆದಾರ||ಚ್ಯೇ||

ಇಲ್ಲಿ ತಾಲೂಕ ಬಿಟ್ಟರ ಸಂಪಗಾಂವಿ

ಪೋದ ಹಾಕ್ಯಾರ ಜಿಲ್ಲೆ ಬೆಳಗಾಂವಿ
ಕರಸಿ ಸಾಹೇಬ ಮಾಡಿದ ನಿರ್ಣಾಯಿ
ಸಂಗ್ಯಾಗ ಬಿದ್ದಾಂಗ ಆದೀತ ಕೆರಿ ಬಾಂವಿ
ಕಟ್ಟ ಬರಹ ಕಳಿವ್ಯಾರ ಮಮ್ಯಾಗಿ
ಹುವ್ವಿನ ರಾಮನ ತಂದದ್ದ ಅನ್ಯಾಯಿ
ಮೂರ ತಿಂಗಳಿಗೆ ಬಂದ ಉತ್ತರಾ ಮಜಕೂರಾ
ಪೋದಿ ನೋಡಿದಾನ ಸರದಾರಾ
ಪರಿಷ್ಯಾನ ಕರಿ-ನೀರಾ
ಬಿಡುದು ಅತಿ ಪೂರಾ
ಸಂಗಣ್ಣ ಅವಲ ಕೈದಿದಾರ
ಕರಾರ
ಧಾರ್ವಾಡಕ ಸಾಹೇಬ ಹೋಗಂದ ಸಜಾ ಗಲ್ಲಿಂದ ಆತಿ ಜಾಹಿರಾ
ಸುತ್ತಮುತ್ತ ಅವನ ಮೇಲಿ ಪಾರಾ
ಚೆಟಿಗಾರಾ
ಧಾರ್ವಾಡಕ ಹಾಕಿದರ ತಂದ ಹೊನ್ನಾರ ಮುಂದಿಂದ ತಿಳಿಯಲಿಲ್ಲ ಜರಾ||ಯೇರ||
ಇಂಗ್ರೆಜಿ ಕಾಯಿದೆ ಬಿಕ್ಕಟ್ಟ
ನಡುವದಿಲ್ಲ ಯಾರ್‌ಯಾರ ಆಟ

**೯ನೆ ನುಡಿ**

ಧಾರ್ವಾಡ ಪೂರ ಬಿಟ್ಟ ಬಂದಾ
ಉಳಸಣ ಆಗಲಿಲ್ಲ ಯಾರಿಂದಾ
ಸಾಹೇಬ ಸುಭೇದಾರ ಫೌಜ್‌ದಾರ ಕಾರ್ಕೂನ ಹೊಂಗಲಕ ತೊಕೊಂಡ ನಡಿರೆಂದಾ
ಯಚ್ಚರಿಕೆ ಇರಬೇಕ ಯಚ್ಚರದಿಂದ
ಹಿರದ ಕಟಟಿ ಪಾರಾ ಹಿಂದ ಮುಂದಾ
ಗಲ್ಲಿಗ್ ಹಾಕುದು ಸಾಮಾನ ಯೆಲ್ಲಾ
ಸಂಗ್ಯ ಚೆಕ್ಕಡಿ ಮೇಗ ಕುಂತಿದ್ದ
ಮಾಡಿ ತಂದರೊ ಬಲಿ-ಬಂದ
ಮಾತಾಡತಾನ ದರಜಿಲ್ಲದ
ಬೆಸ್ತಾರ ದಿವಸಾ ಅಣ್ಣತಮ್ಮರನಾ ತನ್ನ ತಾಯಿನಾ ಕರಸಿದಾ||ಚ್ಯೇ||

ಹಡೆದ ತಾಯವ್ವಗಂತಾನೊ ಯಾಕಳತಿ
ಆಗುಹಂತಾದೆಲ್ಲಾ ಆಗಿ ಹೋತಿ
ರಣ-ಮಂಡಲ ಅಭಿಮಾನ್ಯ ನನಗ್-ಅತಿ
ನನಗ ಯಾರ್‌ಯಾರ ಇಲ್ಲದಾಂಗ ಆತೊ ಸಾರತಿ

ಇಂದಿಗೆ ರಿಣ ಹರದ ಹೋತಿ
ಇನ್ನ ಬಿಟ್ಟ-ಕೊಡ ನನ್ನ ಕಕಲಾತಿ॥ಇಳವ॥

ಇಷ್ಟ ಹೇಳಿ ಮಾಡಿದ ಅಲಾಪ
ವಂದ ಸ್ವಲ್ಪ
ನಂದ ಹೀಂಗ ಇತ್ತ-ಪ್ರಮಾಣ ಕೆಟ್ಟ ದಿವಾಣಾ
ಕೇಳಲಿಲ್ಲ ತಪ್ಪ
ಮಾಡಿ ಬಿಟ್ಟಾರಂತಿನಿ ಮಾಫಾ ವರಷ ಟೇಪಾ
ಶಿಕ್ಕ್ಯಾಂಗ ಆತೊ ಕೈಶೆರಿ ಬ್ರಹ್ಮ ಬರೆದ ಬರಿ ಮಾಡಿದಂತಾ ತಪ್ಪಾ
ಯೆಣ್ಣಿರತ ಹೋದಾಂಗ ದೀಪಾ ಆಕಲ್ಪಾ
ಹಿಂತ್-ಆದ ನನ್ನ ಅದರುಷ್ಟ
ಜಿದ್ದ ಬಲಿ-ಕೆಟ್ಟ ಇರಬಾರದೊ ಕೋಪಾ॥ಯೇರ॥

ಮಾತಮಾತಿಗೆ ಮಥನ ಕೆಟ್ಟ
ಚೆಲೋ ಮನುಷ್ಯಗ ಮಾತಿನ ಪೆಟ್ಟಾ

**೧೦ನೆ ನುಡಿ**

ಸಂತಿ ಶುಕ್ರವಾರಾ ಅದ ದಿನ ಸುತ್ತಿನ ಮಂದಿ ಕೂಡಿತ ಜನಾ
ಹವ್ವ ಹಾರಿ ಕಬರಿಲ್ಲದ ಮಾತಾಡತಾನ ವೊರ ಹೊರಗ ತಂದಾರೊ ಅವನಾ
ಸಾಹೇಬಗ ಹೇಳಿಕೊಂಡ ಯೇನೇನ ಕೈಮುಗದ ಮಾಡಿದ ಶರಣ
ಐದ ರೂಪಾಯಿ ಖರ್ಚು ಮಾಡಿಕ್ಯಾರ ಮಠದ ವೊಳಗ ಕೊಡಸರಿ ಮಣ್ಣ
ಮಾರಿ ಬಾಡಿ ಆದಿತ ಸಣ್ಣ ಕಳೆ ಗುಂದಿ ಹಾರಿತ ಬಣ್ಣಾ
ಹರಹರಾ ಅಂತ ಹಾದಿ ಹಿಡದನೊ ಹತ್ತಿ ನಿಂತ ತನ್ನ ಟಿಕಾಣ॥ಚ್ಯೇ॥

ಗಲ್ಲಿಗೆ ಹಾಕ್ಯಾರ ಕೊರಳಿಗೆ ಸರಕಾ
ಸ್ವರ್ಗದ ದಾರಿ ಹಿಡಿದಾನೊ ಕೈಲಾಸಕಾ
ಅಕ್ಕತಂಗೆರ ಅಣ್ಣತಮ್ಮರ ತಾಯಿ ದುಕ್ಖ
ಸುತ್ತಗಟ್ಟಿ ನಿಂತಿತ ಜನಲೋಕಾ
ನಾಕ ತಿಂಗಳ ಹನ್ನೆರಡ ದಿನಕ
ಅವರಾತ್ರಿ ಅಮಾಸಿ ತಾರೀಖಾ॥ಇಳವ॥

ಊರ ಬೈಲ್-ಹೊಂಗಲ ದೊಡ್ಡ ಶಹರ
ಜಾಹೀರಾ
ಸುತ್ತ ರಾಜ್ಯದ ವಳಗ ಹೆಸರಾ
ಹನುಮಂತ-ದೇವರಾ ಅವಗ ನಮಸ್ಕಾರಾ
ತುಕಾರಾಮ ನಮ್ಮ ವಸ್ತದರಾ

ಶಾಯಿರಾ-ಕವಿ ಆಪು ಮಾಡಿದ ತಯಾರ
ದೇವಂಣ್ಣನಕ್ಷರ ಇಲ್ಲದಾಂಗ ಕಸರ
ಅವರ ಡಬ್ಬಿನ ಮೇಗ ಮುತ್ತಿನ ತೂರಾ
ಜರ್ತರಾ
ಸಂತು ಬಸಣ್ಣ ಜೀವದ ಗೆಣೆಯರಾ
ವೈರಿಗೆ ಮಾಡ್ಯಾರ ಜೇರ
ಇಳಿತ ಕಲಿಗಿಗಿ ನೀರಾ॥ಯೇರ॥

ಮಾದುರಾವ ಕಲಿಗಿಗೆ ಬಿದ್ದಾನೆ ಗಂಟಾ
ಹಾಡಿನ ವಳಗ ಮುಕಪಾಟ

***ರಚನೆ :*** ದೇಮಣ್ಣ
***ಕೃತಿ :*** ಫ್ಲೀಟರು ಸಂಗ್ರಹಿಸಿದ ಲಾವಣಿಗಳು

## ೧೧. ಕಡ್ಲಿಮಟ್ಟಿ ಕಾಶಿಬಾಯಿ

ಪತಿವ್ರತಾ ಧರ್ಮದ ಮ್ಯಾಲ ಪ್ರೀತಿ ಇಟ್ಟ ತಾಯಿಗಳು
ಗಳಿಸಬೇಕ ಸದ್ಗತಿಯೆಂಬೋ ಮುಕ್ತಿಯನಾ
ಪತಿಸೇವಾ ಮಾಡಿ ಹೊಂದಿರೆವ್ವಾ ಸ್ವರ್ಗ ಸದನಾ
ನೀತಿವಂತರೆಂದು ಉಳಿಸಿಕೊಳ್ರಿ ನಿಮ್ಮ ಕೀರ್ತಿಯನಾ ॥
ಕಾಶಿಬಾಯಿ ಸತ್ಯಧರ್ಮ ಚಿತ್ತಗೊಟ್ಟು ಕೇಳಿರಮ್ಮಾ
ಕಡ್ಲಿಮಟ್ಟಿ ಸ್ಟೇಷನ್‌ದೊಳು ಆದಂತಾ ಕಥನಾ
ಅತಿ ಶಾಂತದಿಂದ ಕುಂತ ಕೇಳ್ರಿ ಸರ್ವ ಜನಾ ॥

ಕಾಶಿಬಾಯಿ ರೂಪವಂತಿ ಗುಣದಿಂದ ಶಾಂತವೃತ್ತಿ
ಪತಿಹೊರತ ಇದ್ದಿಲ್ಲ ಆಕಿಗಿ ಅನ್ಯ ವ್ಯಸನಾ
ಅತ್ತಿ ಮಾವಗಳಿಗೆ ಅನುಕೂಲ ಒಳ್ಳೆ ಗುಣಾ
ತವರೀಗ್ಹೋಗಿ ಹೆತ್ತಿದಾಳ ಗಂಡ ಮಗನ್ನಾ ॥
ಹುಣ್ಣಿವಿ ಚಂದ್ರಾಮನಂಥ ಕೂಸ ಕುಲಕುಲ ನಗತಿತ್ತ
ಚೆಂದದಿಂದ ಬೆಳಿತೆತ್ತ ದಿನಾದಿನಾ
ಆಕಿ ಭಾವಕ್ಕ ಮೆಚ್ಚಿಕೊಟ್ಟಿದಾನ ಭಗವಾನಾ ॥

ಮೂರ ತಿಂಗಳ ಆಗೂತ ಬಂತ ಗಂಡನ ಮನ್ಯಾವರು ಬರಲಿಲ್ಲ
ಕುಂತ ಮಾಡತಾಳ ತನ್ನ ಗಂಡನ ಧ್ಯಾನಾ
ಅತ್ತಿ ಮಾವ ಕಳವಿ ಕೊಟ್ರ ತಮ್ಮ ಮಗನ್ನಾ
ಕರಕೊಂಡ ಬಾರೋ ನಿನ್ನ ಹೇಣತಿನ್ನಾ ॥

ತಂದಿ ತಾಯಿ ಮಾತ ಕೇಳಿ ಮನಸಿನೊಳು ಗಟ್ಟಿಮಾಡಿ
ಮಗಾ ಹೋದ ಕರಿಲಿಕ್ಕೆ ಕಾಶಿಬಾಯಿನ್ನಾ
ಅಕ್ಕರತೀಲೆ ಮುದ್ದಾಡತಾನ ತನ್ನ ಮಗನ್ನಾ ||

ಹೇಣತಿ ಮನಿಯೊಳಗ ವಂದ ದಿನ ವಸ್ತಿಮಾಡಿ
ಮರುದಿನ ಮುಂಜಾನೆದ್ದು ಅತ್ತಿಮಾವನ್ನಾ
ಕೇಳತಾನ ಕಳಿಸಿಕೊಡರಿ ಸತಿಯಳನಾ
ಗಟ್ಟಿಮಾತ ನಿಷ್ಠುರ ಹೇಳಿ ನಿಂತ ಸುಮ್ಮನಾ ||
ಹಿಂಗ್ಯಾಕ ಅಂತಿಯೋ ಅಳಿಯಾ ಹಿಂದ ಮುಂದ ಯಾರ ನಮಗ
ಸೀರಿ ಕುಬಸಾ ತಂದಿಲ್ಲಪ್ಪಾ ದಾಗೀನಾ
ಹಂಗs ಹೆಂಗ ಕಳಸೂನಪ್ಪ ಮೊಮ್ಮಗನ್ನಾ ||

ಚಿಂತಿ ಬಂತ ಅಳಿಯಾಗ ತನ್ನ ಹೇಣತಿನ್ನ ಕರದ ಅಂತಾನ ಹಿಂಗ
ಕೂಡಿಕೊಂಡ ಇರ ನಿನ್ನ ತಂದಿ ತಾಯಿನ್ನಾ
ಹ್ವಾದಮ್ಯಾಲ ಹೊಳ್ಳಿ ಬರಾಂವ ಅಲ್ಲ ನಾನಾ
ನನ್ನ ತಂದಿ ತಾಯಿ ಕೇಳಿದರ ಹೇಳಲಿನ್ನೇನಾ ||
ಮಗನ್ನ ಎತ್ತಿ ಮುದ್ದಾಡುತ ಮಕಾ ನೋಡಿ ಅಂತಾನ
ಬಾಳ ಜೋಕಿಂದ ಜೋಪಾನ ಮಾಡ ಕಂದನ್ನಾ
ಕೋಪ ಮಾಡಿ ಕೂಸನ್ನ ಕೊಟ್ಟ ಹೊಂಟ ಸುಮ್ಮನಾ ||

**೧ನೇ ಚಾಲ**

ಹೇಣತಿ ಮುಂದ ಹೇಳುವಂತ ಮಾತ ಅತ್ತಿಮಾವ ಕೇಳ್ಯಾರನಿಂತ
ಅಂತಾರು ಅಳಿಯಾಗ
ವಿಪರೀತ ತಿಳದ್ಯೋ ಮನದಾಗ ||

ನಮ್ಮ ಮ್ಯಾಗ ಮಾಡಬ್ಯಾಡ ಸಿಟ್ಟ ಮಾಡೋ ನೀ ಊಟ
ಕರಕೊಂಡ ಹೋಗೋ ನೀನೀಗ
ಹಟಾ ಮಾಡಿ ಹೋಗೋದು ಅಲ್ಲ ಹಿಂಗ ||

ಕಾಶಿಬಾಯಿ ಮುಗಿಯತಾಳ ಕೈಯ್ಯಾ ಬರಲಿಲ್ಲವಗ ದಯಾ
ಸೆಟಗೊಂಡ ಹ್ವಾದ ಲಗುಬೇಗಾ
ಅವಸರಲೆ ಹೊಂಟ ಅಡಿವ್ಯಾಗಾ ||

**೨ನೇ ಚಾಲ**

ಕಡ್ಲಿ ಮಟ್ಟಿಗಿ ಬಂದಾನು ಸ್ಟೇಶನಕ
ಗಾಡಿ ಸಿಕ್ಕಿತ ಅವನ ವ್ಯಾಳ್ಯೇಕ ॥
ತಿಕೀಟ ತಗಸಿ ಹತ್ತಿದೋ ಆ ಕ್ಷಣಕ
ತನ್ನ ಊರ ಮುಟ್ಟಿದ ಸಂಜೀಕ ॥
ಕಾಶಿಬಾಯಿ ಮಾಡತಾಳ ದುಃಖ
ಚೈನ ಇಲ್ಲ ಆಕಿ ಜೀವಕ ॥

**॥ಏರ॥**

ತಂದಿ ತಾಯಿನ್ನ ಕರದ ಕಾಶಿಬಾಯಿ ಹೇಳತಾಳ
ಗಂಡ ಸಿಟ್ಟ ಮಾಡಿ ಬಿಟ್ಟ ಹ್ವಾದಾನು ನನ್ನಾ
ಇಲ್ಲೆ ಕುಂತ್ರ ಮುಂದ ನನ್ನ ಗತಿ ಏನಾ
ಸದ್ದೇ ಹೋಗದಿದ್ದರ ಹರದೀತ ವಗತಾನಾ ॥
ಕಾಶಿಬಾಯಿ ಸತ್ಯಧರ್ಮ ಚಿತ್ತಗೊಟ್ಟಕೇಳಿರಮ್ಮಾ
ಕಡ್ಲಿಮಟ್ಟಿ ಸ್ಟೇಶನ್‌ದೊಳು ಆದಂತಾ ಕಥನಾ
ಅತಿ ಶಾಂತದಿಂದ ಕುಂತಕೇಳ್ರಿ ಸರ್ವ ಜನಾ॥೧॥
ಕಾಶಿಬಾಯಿ ಹೊಂಟಾಳ ಆಗ ಕೂಸ ತನ್ನ ಬಗಲಾಗ
ಅಬಸುಬಾ ಅದು ತೊಡಕ ಹಾದಿಮ್ಯಾಗ
ಅಡ್ಡಹ್ವಾದ ಹೋತ ಬೆಕ್ಕ ಹಾಲ್ವಕ್ಕಿ ನುಡದೀತ
ತರಲಿಲ್ಲ ದ್ಯಾಸಕ್ಕ ॥
ಕಂದನ ಕಡೆ ಕರುಣ ಇಲ್ಲ ಗಂಡನ ಮ್ಯಾಲೆ ಹಂಬಲ
ಅವಸರದಿಂದ ಹ್ವಾದ್ಲ ಗಂಡನ ಕೂಡೋದಕ್ಕ
ಮಗಾ ಮರಗತಿತ್ತ ಬಿಸಲಿನ ತಾಪಕ್ಕ ॥
ಅವಸರಾ ಮಾಡಿ ಅಡವಿಯೊಳಗ ಅಡಬಡಿಸುತ್ತ ಓಡಿಹೋಗಿ
ಮುಟ್ಟಿದಾಳು ಕಡ್ಲಿಮಟ್ಟಿ ಸ್ಟೇಶನಕ
ಒಂದು ತಾಸ ಹೊತ್ತ ಉಳೀತ ಇಷ್ಟ ಆಗೋದಕ
ಗಂಡನ್ನ ಹುಡಿಕಿದಾಳ ದುಕ್ಕ ಆತಿ ಮನಕ ॥
ಚಿಂತಿ ಮಾಡತಾಳ ಕುಂತ ಸದ್ದೆ ಮುಳಗೀತ ಹೊತ್ತ
ಮೂರ ತಾಸ ಉಳದೀತ ಗಾಡಿ ಬರೋದಕ
ಅಳತಿ ಹಾಕತಾಳ ಸೊಗಸಿಲ್ಲಾ ಜೀವಕ್ಕ ॥
ಮಂದಿ ಉಲವ ಇಲ್ಲದಾಂಗಾತಿ ಎಲ್ಲಿ ಮಾಡಬೇಕು ವಸ್ತಿ
ಸುತ್ತ ಮುತ್ತ ಯಾರೂ ಇಲ್ಲ ಆಕಿ ಸಾಯಕ್ಕ
ತಿಕೀಟ ಮಾಸ್ತರ ಕಂಡಾನ ಆಕಿನ ಆ ಕ್ಷಣಕ
ಯಾರೂ ಸರಿ ಇಲ್ಲ ಅಂತಾನ ಈಕಿ ರೂಪಕ್ಕ ॥
ಏರಿತವಗ ಕಾಮಾತುರ ಮಾಡಿದಾನ ವಿಚಿಯಾರ
ಯಾರ ನೀನು ಯಾಕ ಬಂದಿ ಇಲ್ಲಿತನಕ

ರಾತ್ರಿವ್ಯಾಳ್ಳೆ ಹೋಗವಾಕಿ ಎಲ್ಲಿತನಕ ॥
ಈಕಿ ಕೂಡ ಸಹವಾಸ ಮಾಡಬೇಕ ಈ ದಿವಸ
ಮಾಸ್ತರ ಅಂತಾನ ಹಿಂಗ ತನ್ನ ಮನಕ
ಇಲ್ಲೆ ಒಬ್ಬಾಕಿ ಕುಂಡ್ರೋದಲ್ಲಾ ನೀ ಸುಮ್ಮಕ
ಇನ್ನ ನಾಲ್ಕ ತಾಸ ಬೇಕ ಗಾಡಿ ಬರೋದಕ ॥
ಬೇಕಾದಷ್ಟು ಬ್ಯಾಳಿ ಬೆಲ್ಲಾ ಯಾತಕೇನೂ ಕಡಿಮಿಲ್ಲಾ
ಕೊಡತೇನ ಅಡಿಗಿ ಮಾಡಿ ಉಣ್ಣೋದಕ
ಗಾದಿ ಲೋಡ ಪಟ್ಟೆಮಂಚ ಮಲಗೋದಕ ॥

೧ನೇ ಚಾಲ

ಸಿಂಹ ಶಾರ್ದೂಲ ಹುಲಿ ಕರಡಿ ಕಾಟ ಮಾಡತಾವ ಅರ್ಬಾಟ
ಕುಂಡ್ರುದಲ್ಲಾ ನೀನು ಹಿಂಗ ಹೊರಗ
ಕಾಶಿಬಾಯಿ ಅಂಜ್ಯಾಳು ಮನದಾಗ ॥
ಹಿಂಗ ಹೇಳಿದಾನು ಸುಳ್ಳ ಪಂಟ ಕರಕೊಂಡ ಹೊಂಟ
ಬಂದ ಹೊಕ್ಕಾಳವನ ಕ್ವಾಣ್ಯಾಗ
ಕೀಲಿ ಹಾಕಿ ನಡದ ಅಂವ ಹೊರಗ ॥
ತಿಕೀಟ ಆಫೀಸಕ ಬಂದ ಹಿಂತಾ ಹೆಣ್ಣಾ ಸಿಗಾಕಿಲ್ಲ ಮುಂದ
ಅಂತಾನು ಮನದಾಗ
ಅನಾಯಾಸ ಸಿಕ್ಕಾಳೊ ಕೈಯ್ಯಾಗ ॥

೨ನೇ ಚಾಲ

ಕಾಶಿಬಾಯಿ ಹಾಕತಾಳು ಉಸರಾ
ಇಷ್ಟ್ಯಾಕ ಇವನ ಉಪಕಾರಾ ॥
ಮನಸ ಇಟ್ಟಾನು ನನ್ನ ಮ್ಯಾಲ ಮಾಸ್ತರಾ
ಬಲಿಯೊಳಗ ಸಿಕ್ಕೇನು ಈಗ ಪೂರಾ ॥
ವ್ರತಾ ಭಂಗ ಆಗೋದು ಇಂದ ಪೂರಾ
ಹೆಂಗ ಮಾಡಲಿ ದಾಟುವ ವಿಚಿಯಾರಾ ॥

॥ಏರ॥

ಪತಿವ್ರತಾ ಧರ್ಮ ನಂದ ಕುಂದ ಬಂದೀತ ಇಂದ
ನೀನೆನ್ನ ಪಾರಮಾಡೋ ಭಗವಾನಾ
ಏಕ ನಿಷ್ಠಾದಿಂದ ಮಾಡತಾಳ ಗಂಡನ ಧ್ಯಾನಾ
ಕೂಸನ್ನ ಎತ್ತಿಕೊಂಡ ಕುಂತಾಳ ಹಾರಿ ಹೌಸಾನಾ ॥
ಕಾಶಿಬಾಯಿ ಸತ್ಯಧರ್ಮ ಚಿತ್ತಗೊಟ್ಟ ಕೇಳಿರೆಮ್ಮ

ಕಡ್ಲಿಮಟ್ಟಿ ಸ್ಟೇಶನ್‌ದೊಳು ಆದಂತಾ ಕಥನಾ
ಅತಿ ಶಾಂತದಿಂದ ಕುಂತ ಕೇಳ್ರಿ ಸರ್ವ ಜನಾ॥೧॥
ಬಂದ ಹೋತ ಗಾಡಿ ತಿಕೀಟ ಆಫೀಸ ಬಂದ ಮಾಡಿ ಮಾಸ್ತರ
ಅವಸರದಿಂದ ತಗದ ಕೋಲಿ ಬಾಗಿಲಾ
ಕಾಶಿಬಾಯಿ ಮ್ಯಾಲ ಅವನ ಹಂಬಲಾ
ಆಕಿ ಮಾರಿನೋಡಿ ನಕ್ಕಾನ ಒಳ್ಳೆ ಕುಸಿಯಾಲಾ ।
ಏರಿತೊಳ್ಳಿ ಕಾಮಾತುರ ಮಾಡಲಿಲ್ಲ ವಿಚಿಯಾರ
ಅವಸರ ಮಾಡಿ ಹ್ವಾದ ಆಕಿ ಮೈಮ್ಯಾಲಾ
ಕಾಶಿಬಾಯಿ ತಗದಾಳ ಆಗ ದಾಟೋ ಅಕಲಾ ॥
ಇಷ್ಟ್ಯಾಕ ನಿಮ್ಮ ಗಡಬಡ ಸ್ವಲ್ಪ ಸಮಾಧಾನ ಮಾಡ್ರಿ
ಸೊಗಸ ಇಲ್ಲ ಸದ್ದೆ ನನಗ ನಿದ್ದಿ ಅಮಲಾ
ಕಾಳಜಿ ಮಾಡಬ್ಯಾಡ್ರಿ ಕಾಲಮಾಡದ ಬರತೇನ ಮೊದಲಾ
ಕೂಸ ಎಚ್ಚರಾದೀತ ಎಳದ ಹೊಚ್ಚರಿ ಶಾಲಾ ॥
ಸುಳ್ಳ ಹೇಳಿ ಮಳ್ಳ ಮಾಡಿ ಮೆಲ್ಲನೆ ಹೊರಗ ಬಂದ
ಅವಸರಾ ಮಾಡಿ ಜಗ್ಗಿ ಕೋಲಿ ಬಾಗಿಲಾ
ಚಿಲಕಾ ಹಾಕಿ ನಿಂತ್ಲ ಹೊರಗ ಅಂಜಲಿಲ್ಲಾ ॥
ಮಾಸ್ತರ ಆಗ ಎದ್ದನಿಂತ ಇನ್ನು ಯಾಕ ಬರಲಿಲ್ಲಂತ
ಜಗ್ಗಿ ನೋಡಿದಾನ ಕೋಲಿ ಬಾಗಿಲಾ
ಎದಿ ತಣ್ಣಗಾಗಿ ನಿಂತ ಹಚಿಕೊಂಡ ಜಲ್ಲಾ
ಕಿಡಿಕ್ಯಾಗ ನಿಂತ ಅಂತಾನ ತಗಿ ಕೋಲಿ ಬಾಗಿಲಾ ॥
ಏನಬೇಕ ಬೇಡ ನಿನಗ ಇಲ್ಲ ಅನ್ನುದಿಲ್ಲ ನಾನು
ರೋಖ ರೂಪಾಯಿ ವಸ್ತಾ ವಡವಿ ಕಡಿಮಿಲ್ಲಾ
ಒಳಗ ಬಂದ ನೋಡ ಕೊಟ್ಟ ವಚನ ತಪ್ಪೋದಿಲ್ಲಾ ॥
ಕಾಶಿಬಾಯಿ ಅಂತಾಳಾಗ ಹಸಗೇಡಿ ಮಾಸ್ತರ ನಿನಗ
ಮುಂದಾಗೊ ನರಕದ ಗತಿ ತಿಳದಿಲ್ಲಾ
ನಾನು ಗಂಡನ ಮ್ಯಾಲ ಅನ್ಯೆ ಕೆಲಸ ಮಾಡಾವಳಲ್ಲಾ
ನೀನು ಹಿಂತಾ ಹೇಸಿ ಮಾತ ಆಡೋದು ತರವಲ್ಲಾ ॥
ದ್ರವ್ಯ ಇದ್ದರ ದಾನ ಮಾಡ ದೊರದೀತ ಪುಣ್ಯೇದ ಪಾಲಾ
ಮುಂದ ಅನ್ಯಾಯ ಮಾಡಿ ಆಗಬ್ಯಾಡೊ ಅಳಿಗಾಲಾ
ನಾನು ಪತಿವ್ರತಾ ಧರ್ಮ ಎಂದೂ ಬಿಡೋದಿಲ್ಲಾ ॥

**೧ನ ಚಾಲ**

ಮಾಡಿಕೋತಾನ ಮಸಾರ ವಿನಂತಿ ಎನ್ನ ಮನಪೂರ್ತಿ
ನಿನ್ನ ಮ್ಯಾಲ ನನ್ನ ಹಂಬಲಾ
ತೋಡಿಕೋತಾನ ಹೊಟ್ಯಾಂದು ಎಲ್ಲಾ ॥

ಮಾರಿ ನೋಡತಿದ್ದ ಕಿಡಿಕ್ಯಾಗ ನಿಂತ ಏರಿತ ಮನ್ಮಥ
ನಿಸೆದೊಳಗ ಆದಂಗ ಅಮಲಾ
ಕಾಮನ ಜ್ವಾಲಿ ಸಂದು ಸಂದೆಲ್ಲಾ ॥
ಹೌಹಾರಿ ಮಾಸ್ತರ ಆಗ ಹಾರಿಕೋಲ ಹುಡುಕುವಾಗ
ಕೂಸ ಮಂಚದ ಮ್ಯಾಲ ಮಲಗಿದ್ದನ್ನ ದ್ಯಾಸಕ ತಂದಾನು
ಕುತಿಗಿ ಹಿಡದ ಸಿಸುವನ್ನ ಮ್ಯಾಲಕ್ಕೆತ್ತ್ಯಾನು
ಒಳಗ ಬಾರದಿದ್ರ ನಿನ್ನ ಮಗನ್ನ ಕೊಲ್ಲುವೆನು ॥
ಕಾಶಿಬಾಯಿ ಅಂತಾಳಾಗ ಧರ್ಮ ಉಳದರ ಸಾಕ
ನನ್ನ ಗಂಡಗ ಆಶೆ ಆಗಲೆಂತ ಬೇಡಿಕೊಳ್ಳುವೆನು
ಮುಂದ ಮಗನ್ನ ಕೊಡಾವ ದೇವರದಾನು ॥
ಕಳ್ಳಗೇಡಿ ಮಾಸ್ತರಗ ಕೂಸಿನ ಕರುಣ ಹುಟ್ಟಲಿಲ್ಲ
ಚಾಕು ಹಿರದ ಚರ್ರಂತ ಹಸ್ತ ಕೋದಾನು
ರಟ್ಟಿ ಹಿಡದ ಬೀಸಾಡಿ ಗಾಸಿ ಮಾಡ್ಯಾನು
ಹಸ್ತ ಒಂದ ಕಿಡಿಕ್ಯಾಗ್ಹಾಸಿ ಬೀಸಿ ವಗದಾನು ॥
ಚೆಂಡ ಹೂವಿನಂತಾ ಪಿಂಡ ತುಂಡ ತುಂಡ ಮಾಡಿ ಅವನು
ತಗೋ ಅಂತ ದಿಮಾಕೀಲೆ ಹೊರಗ ಚೆಲ್ಲ್ಯಾನು
ಕಾಶಿಬಾಯಿ ನೋಡತಿದ್ದಳ ಪ್ರಾಣ ಹಾನಿಯನು ॥
ಕನಕದಂತಾ ಕೂಸಿನ ತುಂಡಗಳನ್ನು ಉಡ್ಯಾಗ ಕಟ್ಟಿಕೊಂಡ
ಏಕ ನಿಷ್ಠಾದಿಂದ ಗಂಡನ ಧ್ಯಾನವನ್ನು
ಭಕ್ತಿಪೂರ್ವಕ ನೆನಿಸಿದಾಳ ಸಾಂಬ ಶಿವನನ್ನು
ಮಹಾದೇವಾ ಕಣ್ಣ ತೆರದ ನೋಡೋ ನನ್ನ ಸಂಕಟವನ್ನು ॥
ಹೊತ್ತ ಏರೋ ತನಕಾ ಮಸ್ತ ಕಾಡ್ಯಾನ ಮಾಸ್ತರ
ಗಾಡಿ ಬಂತ ಅದರಾಗಿಂದ ಸಾಹೇಬ ಇಳದಾನು
ತನ್ನ ಉಡಿಯ ಬಿಚ್ಚಿ ತೋರಿಸ್ಯಾಳ ಮಗನ ತುಂಡಗಳನ್ನು ॥

**೨ನೇ ಚಾಲ**

ನೋಡಿ ಸಾಹೇಬಗ ಬಂದಿತೊಳೆ ಸಿಟ್ಟ ಹಲ್ಲಕಡದ ಕಟಕಟ
ಸಾಹೇಬಂದು ಹಾರಿ ಖಬರಾ
ಕೇಳ್ಯಾನು ಎಲ್ಲ ಮಜಕೂರಾ ॥
ಒಳಗ ನಿಂತ ಮುಗಿಯತಾನು ಕೈಯಾ ತೆರದಾನು ಬಾಯಾ
ತಗಿಯ ಬಾಗೀಲ
ವಲ್ಲಿನಂದ್ರು ನಿನ್ನ ಬಿಡೋದಿಲ್ಲಾ

**೨ನೇ ಚಾಲ**

ಕಾಶಿಬಾಯಿ ಅಂತಾಳು ಸಿಟ್ಟಿಗೆದ್ದಾ
ಹಿಂತಾ ಕೆಲಸ ಆಗದ್ದೊ ನಿನ್ನಿಂದಾ ॥
ಜೀವ ಹೋದ್ರು ಚಿಂತಿ ಇಲ್ಲೊ ನಂದಾ
ಪತಿವ್ರತಾ ಧರ್ಮಕ್ಕ ತರಲಾರೆ ಕುಂದಾ ॥
ಧ್ಯಾನ ಮಾಡ್ಯಾಳು ತನ್ನ ಗಂಡಂದಾ
ಮಾನಾ ಕಾಯೋ ಮಹದೇವ ಈಗ ನಂದಾ ॥

**॥ಏರ॥**

ನಾಚಿಕಿಲ್ಲದ ಮೂಳಾ ನೀನು ನಾಯಿಹಂಗ ಬಗಳಬ್ಯಾಡ
ಪರಸ್ತ್ರೀಯಳ ಮ್ಯಾಲೆ ಮನಸ ಮಾಡೋ ರೀತಿ ಹೌದೇನಾ
ನಾಳೆ ಯಮನ ಮುಂದ ಜಡತಿ ಕೊಡತಿ ಏನಾ
ನಿನ್ನ ವಸ್ತಾವಡವಿಗೆ ಆಸೆ ಮಾಡುವಳಲ್ಲ ನಾನಾ ॥
ಕಾಶಿಬಾಯಿ ಸತ್ಯಧರ್ಮ ಚಿತ್ತಗೊಟ್ಟ ಕೇಳಿರೆಮ್ಮ
ಕಡ್ಲಿಮಟ್ಟಿ ಸ್ಟೇಶನ್‌ದೊಳು ಆದಂಥಾ ಕಥನಾ
ಅತಿ ಶಾಂತದಿಂದ ಕುಂತಕೇಳ್ರಿ ಸರ್ವಜನಾ॥೩॥
ದುಷ್ಟ ಮಾಸ್ತರಗ ಸಿಟ್ಟ ಬಂದೀತೊಳೆ
ಕೆಟ್ಟಗಣ್ಣಿನಿಂದ ಮತ್ತ ಮಾರಿ ನೋಡ್ಯಾನು
ಇಂದ ನಿನ್ನ ಬಿಡಾಕಿಲ್ಲಂತ ಪಣಾ ತೊಟ್ಟಾನು
ಕಿಡಕಿ ಕಿತ್ತ ಹೊರಗ ಬರೋ ಯೋಚನಾ ಮಾಡ್ಯಾನು ॥
ಸಿಟ್ಟಿನಿಂದ ಕಿಡಕಿ ಜಗ್ಗಿ ಬಾಳ ಗೋರ ಬಿಡತಾನ
ಕದಾ ಮುರಿಯಲಿಕ್ಕೆ ಕಟಪಟ ಮಾಡ್ಯಾನು
ನೀಗಲಿಲ್ಲ ಮೈ ಬೇಂವತ ಉಸರ ಹಾಕ್ಯಾನು ॥
ಸಾಹೇಬ ಮಾಸ್ತರನ ಕರೆಸಿ ನಡೆಸಿ ಚೌಕಾಶಿ
ಗಲ್ಲಿನ ಠರಾವ ಹೇಳ್ಯಾರಾ
ಮಾಸ್ತರನ ಗಲ್ಲಿಗಿ ಏರಿಸ್ಯಾರಾ ॥
ಕಾಶಿಬಾಯಿ ಗಂಡಗ ಹೋತ ಸುದ್ದಿ ಬಂದಾನ ಜಲದಿ
ಕೂಡ್ಯಾರು ಗಂಡ ಹೆಂಡಿರಾ
ನಾಡ ತುಂಬ ಆತಿ ಜಾಹೀರಾ ॥

**೨ನೇ ಚಾಲ**

ಕಾಶಿಬಾಯಿ ದುಡದಾಳು ಧರ್ಮಕ್ಕ
ದುಷ್ಟಮಾಸ್ತರ ಗುರಿಯಾದ ಕರ್ಮಕ್ಕ
ಗಂಡನ ಮ್ಯಾಲ ಭಕ್ತಿ ಇರಲಿ ಕಡಿತನಕ
ದೊರಕುವದು ನಿಮಗ ಸ್ವರ್ಗಸುಖ ॥

ನುಡಿದಂತೆ ನಡಿ ಇರಬೇಕ
ದಾನಧರ್ಮಾ ಮಾಡೋದು ಕಲಿಬೇಕ ||

||ಏರ||

ಗಂಡನಿಂದ ಗತಿ ಅಂತ ಹೇಳತಾರ ಗಾದಿಮಾತ
ಗಂಡನ ಸೇವಾ ಮಾಡರೆಲ್ಲಾ ಪ್ರತಿದಿನಾ
ತಿಗಡೊಳ್ಳಿ ಮರಿಕಲ್ಲ ಮಾಡಿದ ಈ ಕವಿ ರಚನಾ
ಸದಾ ಮಾಡುವನು ಬಲಭೀಮನ ಭಜನಾ ||
ಕಾಶಿಬಾಯಿ ಸತ್ಯಧರ್ಮ ಚಿತ್ತಗೊಟ್ಟ ಕೇಳಿರಮ್ಮಾ
ಕಡ್ಲಿಮಟ್ಟಿ ಸ್ಟೇಶನ್‌ದೊಳು ಆದಂತಾ ಕಥನಾ
ಅತಿ ಶಾಂತದಿಂದ ಕುಂತಕೇಳ್ರಿ ಸರ್ವಜನಾ||ಳ||

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೧೨. ಮಲಪ್ರಭಾ ಹೊಳಿ ಬಂದದ್ದು

ಹುಂಬ ಮನಿಸ್ಯಾ ಹೊಂದಿಸಿದ ಪದಾ ಒಂದ
ಚೆಂದದಿಂದ ಕುಂತ ಕೇಳರಿ ನೀವು ಈಗ
ಸಂದಿಗೊಂದಿ ಎಲ್ಲಾ ಮುಳಿಗಿಹೋತ ನೀರಾಗ
ಇನ್ನ ಮುಂದ ತಿಳಿಸುವೆನು ನಾ ನಿಮಗ ||
ಸನ್ನ ಹತ್ತೊಂಭತ್ತನೂರಾ ಐವತ್ತಮೂರನೆ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ ||

ಕಿತ್ತೂರ ನಾಡಾನ ಸುದ್ದಿ ಚಿತ್ತಿಟ್ಟ ಕೇಳರಿನ್ನ
ಸತ್ತಾನ ಕಕ್ಕೇರಿ ಮುದಕ ಹಳ್ಳದಾಗ ಮುಳಗಿ
ಅವನ ಸತಿಸುತರು ಅಳತಾರ ಮನದಲಿ ಮರಗಿ
ದುಕ್ಕ ಮಾಡತಾರ ಕಣ್ಣೀರ ಚೆಲ್ಲಿ ಧರಣಿಗಿ ||
ಮೀರಿದ ಮಳಿಯಾಗಿ ಬಾಳ ಸೂರಿಯಾತ್ರಿ
ಕೆರಿ ಬಾಂವಿ ಎಲ್ಲಾ ತುಂಬಿ ಏಕಾಗಿ
ನೀರ ಹರಿತಿತ್ತ ವಂದಸವನ ಹೆಚ್ಚಾಗಿ ||

ಆದ್ರಿಮಳಿ ಅರ್ದಗಳದ ಹೊಳವ ಬಿತ್ತ ಅಂತಿದ್ರ
ಮಳಿ ಚಾಲು ಆತ ಮಂಗಳಾರ ಸಂಜಿಕ ಹೊತ್ತಮುಣಗಿ
ತಾರೀಕ ಮೂವತ್ತ ಇತ್ತ ಆರನೇ ತಿಂಗಳಿಗಿ

ಹಿಂಗ ರಭಸ ಮಾಡತಿತ್ತ ಒಳ್ಳೆ ಸುರುವಾಗಿ ||
ಬುಧವಾರ ದಿವಸ ಮುಂಜಾನೆ ಬೆಳಕಾಗಿ
ಅಷ್ಟರೊಳಗ ಗದ್ದಿಹಾಳ ಬಿದ್ದ ಎಲ್ಲಾ ಸಾಪಾಗಿ
ಇದ್ದ ಉದ್ದನ್ನ ಬತ್ತ ಕಾಣಲಿಲ್ಲ ನೀರಾಗಿ ಮುಳಗಿ ||

ಮಂದಿಗೆಲ್ಲಾ ದಿಂಗ ಬಡಿತ ಸುಂದ ಬಡದ ಸುತ್ತಹಾದ
ಬಂದ ಬಂದ ಕೂಡ್ಯಾರ ಚಾವಡಿ ಕಟ್ಟಿಗಿ
ನಾವು ಎಂದೆಂದು ಸಿಕ್ಕಿದಿದ್ದಲ್ಲ ಹಿಂತಾ ಮಳಿಗಿ
ಹಾಳಿ ಹಾಕಬೇಕಂತಾರ ನಾಳಿ ಹೊಲಕ್ಹೋಗಿ ||
ಇಂದ ಆದಂತಾ ಮಳಿ ಹಿಂದ ಎಂದೂ ಆಗಿದ್ದಿಲ್ಲ
ಸಂದ ಹಿಡದ ಬರತೆತ್ತ ನೀರ ಭೂಮಿಗಿ
ಹುಚ್ಚ ಹಚ್ಚಿಬಿಟ್ಟಿತೆಲ್ಲ ರೈತರಿಗಿ ||

**೧ನೇ ಚಾಲ**

ಒಡದ ಹ್ವಾದುವ ಎಲ್ಲಾ ಕೆರಿ ಕಟ್ಟಿ
ಕಟ್ಯಾಕ ಹ್ವಾದ್ರ ತಗೊಂಡ ಸಲಿಕಿ ಬುಟ್ಟಿ ||

ಭತ್ತ ಸತ್ತ ಆತ ಉಪರಾಟಿ
ಇನ್ನ ಹಚ್ಚೋನ ಅಂತಾರ ಎಲ್ಲಾ ನಟ್ಟಿ||

ಹಿಂಗ ಎಲ್ಲಾರು ಮಾಡೋಣ ಕಟಪಟಿ
ಮಲ್ಲಾಡ ಮಂದೀದು ಆತ ಮೂರಾಬಟ್ಟಿ ||

**೨ನೇ ಚಾಲ**

ಹಾದಿ ಬೀದಿಗಿ ನೀರ ಹೆಚ್ಚಾಗಿ
ಓಣಿ ಊರ ಎಲ್ಲಾ ಕೆಸರಾಗಿ ||

ಆದ್ರಿ ಮಳಿ ಆತಂತ ಹೆಸರಾಗಿ
ಹಾಳಿ ಬದುವ ಹ್ವಾದು ಹಾಳಾಗಿ ||

**||ಏರ||**

ಗದ್ದಿನೀರ ಗದ್ದಿಗಿ ಬಿದ್ದ ಸದ್ದಾ ಮುದ್ದಾ ಏಕಾಗಿ
ಆಗ ಜನರೆಲ್ಲಾ ನೋಡುತ ನಿಂತಾರ ಮನದಲ್ಲಿ ಮರಗಿ
ನೀರ ವಟ್ಟಗೂಡಿ ಹೋಗತಿತ್ತ ಮಲಪ್ರಭಾ ನದಿಗಿ
ನೋಡಿ ಆಗತಿತ್ತ ಆಗ ತಗಬಗಿ ||

ಸನ್ನ ಹತ್ತೊಂಭತ್ತನೂರಾ ಐವತ್ತ ಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ ||||೧||

ಇಳೆಯೊಳು ವಂದಸವನ ಕಾಳಗವನ ಮಳಿಯಾಗಿ
ಭಾಳ ಆತ್ರಿ ನೀರಿನ ಪ್ರಬಲ್ಲಾ
ಎಲ್ಲಾ ಹೇಳಬೇಕಂದ್ರ ಅದಕ ಗಣಿತಿಲ್ಲಾ
ಕುಂತ ಕೇಳರಿ ಹೇಳತೇನ ಇನ್ನಮ್ಯಾಲಾ ||
ಗುಡಗುಡಸಿ ಆದೀತ ಮಳಿ ಆಡಬಡಿಸಿ ಕುಂತಾರ ಕೇಳಿ
ತಡಪಡಿಸಿ ಅಂತಾರ ಇದು ಏನಕಾಲಾ
ಬಾಯಲಿ ಬಡಬಡಿಸಿ ಅಂತಾರ ನಾವು ಉಳಿಯೋದಿಲ್ಲಾ ||

ಗುಡ್ಡದ ಮ್ಯಾಲಿನ ನೀರ ಬಂದ ಮಡ್ಡಿಮಾಳಾ ಏಕಾಗಿ
ಹಾವಕಪ್ಪಿ ಗುದ್ದಾ ಬಿಟ್ಟ ಓಡ್ಯಾವ ದಿಕ್ಕಾಪಾಲಾ
ಗಿಡದ ಬಡ್ಡಿಗಳು ಹೋದುವ ನೀರಿನ ಹಿಂಬಾಲಾ
ಬಿದರಗಡ್ಡಿ ಕಿತ್ತ ಆದುವರಿ ಬುಡಮೇಲಾ ||
ಊರಕೇರಿಗಿ ಹೋದ ಜನಾ ಮೂರು ದಿವಸ ಇನ್ನೂ ಇಲ್ಲಾ
ನೀರ ಮುಳಗಿ ಹೋದರೇನೋ ಬರಲಿಲ್ಲಾ
ಹಿಂಗ ತೋರತೈತಿ ಅಂತಾರ ಜನರೆಲ್ಲಾ ||

ಬಿದ್ದನೀರ ಬಿದ್ದಬಿದ್ದ ಗದ್ದಿತುಂಬಿ ಹೆಚ್ಚಾಗಿ
ಇದ್ದ ಭತ್ತ ಸತ್ತ ಹೋದುವರಿ ಎಲ್ಲಾ
ನೀರ ವದ್ದ ನಿಂತ ಮಾಡೇತ್ರಿ ಗಾಲ ಮೇಲಾ
ಜನಾ ಸುಮ್ಮನ ಕುಂತಾರ ತಿಳಿವಲ್ತು ಅಕಲಾ ||
ಬೆಂಡಿ ಬೀಜ ಪುಂಡಿಕಾಳ ಕಂಡೆನಂದ್ರ ಉಳಿಯಲಿಲ್ಲ
ಹೆಂಡಿ ಬುಡಕ ಸಿಕ್ಕ ಹೋದುವರಿ ಎಲ್ಲಾ
ಜೋಳಾ ಅಕ್ಕಡಿಕಾಳ ಅಲಸಂದಿ ಹುಟ್ಟಲಿಲ್ಲಾ ||

ಹಕ್ಕಲಾ ಬಿತ್ತೀವಂದ್ರ ಹತ್ತಿದ ಮಳಿ ಬಿಡವಲ್ತು
ಸುತ್ತ ಹಾಕಿ ಹೊಡೀತೈತಿ ಅಕಲಿಲ್ಲಾ
ಹಿತ್ಲಾಗಿನ ಹೀರಿಬಳ್ಳಿ ಗೊಂಜಾಳ ಏನೂ ಹುಟ್ಟಲಿಲ್ಲ
ಬದನಿ ಬೀಜ ಬೈಮಂಗ ಏನೂ ನಾಟಲಿಲ್ಲಾ ||

ಹೊಳವ ಬಿದ್ದದ್ದ ನೋಡಿ ಹುಳ್ಳಿ ನವಣಿ ಬಿತ್ತೋಣಂದ್ರ
ಸಾಂವಿ ಬೆಳಿ ಸರಿಯಾಗಿ ಬರಲಿಲ್ಲಾ
ಕಬ್ಬಿನ ಬೆಳಿ ಆ ವರ್ಷ ಹೆಚ್ಚಾಗಿಲ್ಲಾ ||

೧ನೇ ಚಾಲ

ಹರಿದ ಮುರದ ನೀರಿನ ಗೂಡ ತರದ ಹೋದುವ ಬೆಳಿ
ಈಗ ಮುರದ ಬಿತ್ತೋದಕಿಲ್ಲ ದಿನಾ
ಹಿಂತಾದ ತರಬಾರದಿತ್ತ ತಂದ್ಯೊ ಭಗವಾನಾ ॥
ಮರಮರಾ ಎಲ್ಲರು ಮರಗಿ ತರಾತರಾ ನಡಗಿ
ಅಂತಾರ ಇದು ಏನಾ
ನೋಡ್ರಿ ಸರ್ವರಿಗೆ ಇಲ್ಲ ಸಮಾಧಾನಾ ॥

೨ನೇ ಚಾಲ

ಮಳಿ ಹಿಡಿದೀತ ಬಿಡವಲ್ತ ತಳಾ
ಸತ್ತಹೋದುವ ಭೂಮ್ಯಾಗಿನ ಹುಳಾ ॥
ಗುಬ್ಬಿ ಪಕ್ಷಿ ನವಲ ಪಾರಿವಾಳಾ
ಜೀವಕಂಜಿ ಬಿಟ್ಟಾವ ಗಿಡಗಳಾ ॥

॥ಏರ॥

ಚಿತ್ತವಿಟ್ಟ ಕೇಳರಿನ್ನು ಸುತ್ತೊರದ ಮಳಿ ಹೊಡದ
ಸತ್ತಾರ ಬಲು ಮಂದಿ ನೀರಾಗ ಮುಳುಗಿ
ತುತ್ತ ಆಗಿ ಹೋದ್ರ ಮಲಪ್ರಭಾ ನದಿಗಿ
ಮುಪ್ಪಾನ ಮುದುಕರು ಕುಂತಾರ ಗಡಗಡ ನಡುಗಿ ॥

ಸನ್ನ ಹತ್ತೊಂಭತ್ತನೂರಾ ಐವತ್ತಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ॥೧॥

ಲೆಕ್ಕವಿಲ್ಲದ ಹಕ್ಕಿ ಪಕ್ಷಿ ದಿಕ್ಕತಪ್ಪಿ ಹಾರೋದ ಬಿಟ್ಟ
ಪಕ್ಷಿ ಸೋತ ಬಿದ್ದು ಕಾಲ್ಹೋಗಿ
ಲಾವಕಿ ಗಿಣಿ ಗೂಡ ತುಂಬ ನೀರಾಗಿ
ಮಳಿಗಿ ಸಿಕ್ಕ ಸತ್ತ ಹ್ಯಾದುವರಿ ಹದ್ದಕಾಗಿ ॥
ಅಡಕುರಿ ಟಗರ ಹೋತ ಆಡಿ ಮೇಯೋ ಪ್ರಾಣಿಗಳು
ಜಟಾಪಟಾ ಸತ್ತು ಗಾಳಿ ಸಲುವಾಗಿ
ಮಳಿ ಸಾಕಸಾಕ ಅಂತಾರ ಜನಾ ಹೊರಗ್ಹೋಗಿ ॥

ಪೊಡವಿಯೊಳು ಇರುವಂಥಾ ಅಡವಿ ಹಂದಿ ಕಾಡಕೋಣ
ತಡವಿಲ್ಲದೆ ನಡಿಗ್ಯಾವ ತಂಡಿ ಸಲುವಾಗಿ

ಗುಡಗ ಹೊಡಿವಂತಾ ಹುಲಿಕರಡಿ ಓಡಿದಾವ ತಮ್ಮ ಗವಿಗಳಿಗಿ
ಸುತ್ತ ಹಾಕಿಕೊಂಡ ಬಿಟ್ಟಾವರಿ ಸಲ್ಲ ಅಡಗಿ ॥
ಎತ್ತು ಎಮ್ಮಿ ಕತ್ತಿ ಕುದರಿ ನಿತ್ಯ ನಿತ್ಯ ದುಬ್ಬತೋ
ಕಾಲಕೊಳತ ಸತ್ತಾವ ಮಳಿ ಹೆಚ್ಚಾಗಿ
ಎಂಥಾ ಹೊತ್ತ ಬಂದೀತಂತ ಮನದಾಗ ಮರಗಿ ॥

ಹಿಂಗ್ಯಾಕ ಮಾಡಿದ ಶಿವ ಹಂಗಮ ಹದಿಗೆಟ್ಟಹ್ವಾದು ಅಂತ
ಹಟಗಂತ ಬೈತಾರ ಸೃಷ್ಟಿಕರ್ತನಿಗಿ
ಒಣಾಹುಲ್ಲ ಹೊಟ್ಟ ತೋದ ಹೋತ ಮಳಿಗಿ
ಕೋದ ಹಾಕೋಣಂದ್ರ ಹುಲ್ಲ ಇಲ್ಲ ದನದ ಹೊಟ್ಟಿಗಿ ॥
ಚಿಂತಿ ಮಾಡತಿದ್ರ ಜನಾ ಕೈಮುಗಿದ ಬೇಡಿಕೋತಾರ
ಕುತ್ತ ಬಂದಃತಿ ಅಂತಾರ ದೇವರಿಗಿ
ಇನ್ನ ಹ್ಯಾಂಗ ಹೇಳ್ರಿ ಪಾರೊಗೊ ಬಗಿ ॥

ಮಲಪ್ರಭಾ ನದಿ ತುಂಬಿ ಚೆಲ್ಲವರದ ಹೋಗುವಾಗ
ಎಲ್ಲಾ ಪೂಲಮ್ಯಾಲ ದಾರಿ ಇಲ್ಲ ಮೋಟಾರಿಗಿ
ಮೇಲೆ ನೀರ ಬರತಿತ್ತ ಇನ್ನು ಹೆಚ್ಚಾಗಿ
ಎಲ್ಲಾ ಎಸ್ಟಿ ಗಾಡಿ ಬರತಿದ್ದುವ ಹಿಂದುಗಿ ॥
ಖಾನಾಪುರ ಕಾರಖಾನೆದಾನ ಕಪಾಟ ಕಾಗದ ಪತ್ರಾ
ರಪಾಟ ಬರತಿದ್ದುವ ತೇಲುತ ಮುಳುಗಿ
ಅವನ್ನ ಹಿಡಕೊಂಡಾರ ಹಿರೆ ಮುನವಳ್ಳಿಗಿ ॥

**೧ನೇ ಚಾಲ**

ಸೃಷ್ಟಿನೇಮ ಬಿಟ್ಟಹೋತ ಹಟ್ಟಿಹೊಳಿ ಊರಾಗ
ಒಟ್ಟರಸಿ ಹೊಕ್ಕಿತ್ಹೊಳಿ ನೀರಾ
ಊರನ ಮಂದಿ ನಿಲ್ಲದೆ ಓಡ್ಯಾರ ॥

ಮಧ್ಯಾಹ್ನದ್ಹೊತ್ತ ಆಗಿತ್ತ ಭರಪೂರ /
ಹೊರಗೆ ಹೋಗಿದ್ದುವ ದನಾಕರಾ
ಕಾಯಾವರಿಲ್ಲ ಆಗ ಯಾರ್‍ಯಾರಾ ॥

**೨ನೇ ಚಾಲ**

ಬುಧವಾರ ದಿವಸ ಆಯ್ತು ಆರತಾಸಾ
ಹಡಿಯಾಕ ಕುಂತ ಹೆಣ್ಣಿಗಿ ಬಾಳ ತ್ರಾಸಾ ॥

ಹೊರಗ ಓದ ಹಾಕ್ಯಾರ ಆಗ ಹೊರಸಾ
ಹಡದ ಕುಂತಾಳ ಅಡಿವ್ಯಾಗ ಉಪವಾಸಾ ॥

ಬೆಕ್ಕ ಕುಂತಿತ್ತು ಬಣವಿಮ್ಯಾಗ ಇಲ್ಲ ದ್ಯಾಸಾ
ಎರಡ ನರಿ ಏರ‍್ಯಾವ ಬಣವಿ ಮಾಡಿ ಸಾಸಾ ॥
ಬಣವಿ ನಡದೀತ ನೀರಾಗ ಸಾವಕಾಶಾ
ಮೂರೂ ಮುಟ್ಯಾವ ಆಗ ಕೈಲಾಸಾ ॥

||ಏರ||

ಅಡಬಡಿಸಿ ಹೊಕ್ಕಿತ ನೀರ ಅರವತ್ತಮನಿಗಳ ಗ್ವಾಡಿ
ತಡವಿಲ್ಲದ ಬಿದ್ದಾವ ಒಂದಗಳಿಗ್ಯಾಗ
ಕಾಳಕಡಿ ಏನು ಉಳಿಯಲಿಲ್ಲ ಮನಿಯಾಗ
ಅಂಜಿ ಓಡಿ ಹೋಗಿ ಕೂತಾರ ಅಡಿವ್ಯಾಗ ॥
ಸನ್ನ ಹತ್ತೊಂಭತ್ತನೂರಾ ಐವತ್ತಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ॥೩॥

ಲೆಕ್ಕವಿಲ್ಲದಷ್ಟ ನೀರ ಚಿಕ್ಕ ಹಟ್ಟಿಹೊಳಿಗಿ ಬಂದ
ದಿಕ್ಕ ತಪ್ಪಿಸಿ ಬಿಟ್ಟಿತ ಒಂದ ಗಳಿಗ್ಯಾಗ
ಐವತ್ತ ಮನಿಗಳು ನಿಂತಾವ್ರಿ ನೀರಾಗ
ಮಂದಿ ಗಡಬಡದಿಂದ ಓಡ್ಯಾಡತಾರ ಒಳಹೊರಗ ॥
ಜೀಕನೂರ ಒಳಗ ಹೊಳಿ ನೂಕತಿತ್ತ ಒಂದ ಸವನ
ಮೂಡ್ಲಹೋರಿ ಹೋಗಿದ್ದುವ ಹೊಳಿಯಾಗ
ಎರಡೂ ಕೂಡೆ ಉಳದ ಬಂದುವ ಈಸಿ ಹೊರಗ ॥

ಜೋರಾವರಿ ನೀರಬಂದ ಈರಾಪುರ ಹೊಕ್ಕಿತ
ಸರಾಸರಿ ಆರತಾಸ ಮಧ್ಯಾಹ್ನದಾಗ
ಹಾಲಉಕ್ಕೇರಿ ಒಮ್ಮಿಗಿಲೆ ಬಂದಾಂಗ
ದನಾಕರಾ ಮರಿ ಹೋಗಿದ್ದುವ ಭೂಮ್ಯಾಗ ॥
ಗ್ವಾಡಿ ಬಿದ್ದ ಕೇಡನಾಗಿ ಊರಾನ ಮಂದಿ ನೋಡಿಕೊಂತ
ಓಡತಾರ ಸುತ್ತಹಾದ ಊರ ಹೊರಗ
ಇನ್ನ ಎತ್ತ ಹೋಗಬೇಕ ತಿಳಿವಲ್ತ ನಮಗ ॥

ಮಸ್ತ ರೊಕ್ಕಾ ಖರ್ಚಮಾಡಿ ಸಿಸ್ತ ಮನಿ ಹಾಕಿಸಿದ್ರ ಒಂದ
ದಿಕ್ಕಿಲ್ಲದೆ ನಿಂತೀತ ನೀರಾಗ
ಕೊಪ್ಪರಿಗಿ ಹಾಕಿ ದಾಟ್ಯಾಡತಾರ ಓಣ್ಯಾಗ

ಮತ್ತಿಕೊಪ್ಪದಿಂದ ಬಂದಿತ್ತ ಉಡಿಕಿ ನಿಬ್ಬಣಾಗ ॥
ಇಂದ ಇದ್ದ ಕಾರೆ ಈಗ ಬಂದ ಮಾಡಿ ಬಿಡೋಣಂದ್ರ
ನೀರ ಬಂದ ಹೊಕ್ಕತಿ ಮನಿಯಾಗ
ಅಡಿಗಿ ಹ್ಯಾಂಗ ಮಾಡೋಣಂತಾರ ಇದರಾಗ ॥

ಹೆಂಗಸೂರ ಅಂತಾರ ಹಿಂಗ ಸುತ್ತ ಹಾಕೇತಿ ಹೊಳಿ
ಕತ್ಲ ಕವಿದಂಗಾಗಿ ಹೋತ ಈಗ ನಮಗ
ಎಂಥಾ ಹೊತ್ತ ತಂದ್ಯೋ ಸ್ವಾಮಿ ಶಂಕರ ನಮಗ
ಗದ್ಲಾ ಮಾಡತೈತಿ ಹೊಳಿಹೊಕ್ಕ ಹೊಲಿಗೇರ್ಯಾಗ ॥
ಹೊಟ್ಟ ಹುಲ್ಲಿನಬಣವಿ ಕಟಿಗಿ ಕುಳಬಾನ
ಒಟ್ಟಿಗೆ ನಿಂದರಲಿಲ್ಲ ನೆಲದಮ್ಯಾಗ
ಅಷ್ಟೂ ತಟ್ಟನೆ ಎದ್ದ ಹ್ವಾದು ಹೊಳಿಯಾಗ ॥

**೧ನೇ ಚಾಲ**

ದನದ ಮೇವು ಏನ ಉಳಿಯಲಿಲ್ಲ ಆತ ದಿಕ್ಕಾಪಾಲ
ತೇಲಿಹೋತ ಮದಲಾ
ಉಪವಾಸ ದನಾಕರಾ ಎಲ್ಲಾ ॥

ಹೆಣ್ಣುಗಂಡು ಹುಡಗೋರು ಹವ್ವಹಾರಿ ಆದಾರ ಗಾಬರಿ
ನಿಂತಾರ ಕಬರಿಲ್ಲಾ
ಕಾಳಕಡಿ ತುಸಾ ಉಳೀಲಿಲ್ಲಾ ॥

**೨ನೇ ಚಾಲ**

ಬಡವರಿಗೆ ಬಂದೀತೊ ಬಾಳಗೋರ
ಮಿಡಕೂತ ಕುಂತಾರೋ ಎಲ್ಲಾರಾ ॥
ಊರ ತುಂಬ ನಿಂತಿತ್ತರಿ ನೀರಾ
ಮನಿ ಬಿದ್ದುವ ವಂದ ಐದಾರಾ ॥

**॥ಏರ॥**

ಕಂಡದ್ದನ್ನು ಬೇಡುವಂತಾ ಉಂಡಾಆಡೊ ಹಿಂಡ ಮಕ್ಕಳ
ತಂಡಿ ಹತ್ತಿ ನಡಗತಾವ ತಂಬಲ ಅರಿವ್ಯಾಗ
ಹಸದ ಹಲಬತಾವ ಕೂಳಿಲ್ಲ ಹೊಟ್ಯಾಗ
ತಾಯಿತಂದಿ ನೋಡಿ ನೀರತಂದ್ರ ಕಣ್ಣಾಗ ॥

ಸನ್ನ ಹತ್ತೊಂಭತ್ತನೂರಾ ಐವತ್ತಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ॥ಳ॥
ಅಬ್ಬರಲೆ ಬಂದಿತ ಹೊಳಿ ಹುಬ್ಬಳ್ಳಿ ಮಂದಿಕೇಳಿ
ಅಬ್ಬಬ್ಬಾ ಅಂತಾರ ಇದು ಏನುಕಾಲಾ
ಎತ್ತ ನೋಡಿದರು ನೀರ ಕಾಣತೈತಿ ನಾಡಮ್ಯಾಲಾ
ದಿಬ್ಬದ ಮ್ಯಾಲ ನಿಂತ ನೋಡತಾರ ಜನರೆಲ್ಲಾ ॥
ಗೋರಬಿಟ್ಟ ಹಚ್ಚಿದಂತಾ ಪ್ಯಾರಲ ತೋಟದಾಗ ಹೊಕ್ಕ
ಸಾಲಹಿಡದ ಬೀಳತಿದ್ದುವರಿ ಗಿಡ ಎಲ್ಲಾ
ನೀರ ಬಂದಿತ್ತ ಏರಿ ಪೂಲಿನಮ್ಯಾಲಾ ॥

ಹೊಟ್ಟ ಹುಲ್ಲಿನ ಬಣವಿ ಬಂದ ತಟ್ಟನೆ ಬಡದ ತಾರಕಂಬ
ಲಟ್ಟನೆ ಮುರದ ಹ್ವಾದುವರಿ ಉಳಿಲಿಲ್ಲಾ ।
ತಾರ ತಂತಿಗಳು ಹರದ ಹೊಂಟು ನೀರಿನ ಹಿಂಬಾಲಾ
ಹಿಂಗ ನಡದಿತ್ತ ಹುಬ್ಬಳ್ಳಿ ಮುಂದ ಗಾಲಮೇಲಾ ॥
ಹೊಳಿ ನೋಡಾಕ ಹ್ವಾದ ಜನಾ ಹೊಳ್ಳಿ ಇನ್ನು ಬರಲಿಲ್ಲ
ಕಾಗಳವದ ಆಗೇತ್ರಿ ಕತ್ತಲಾ
ಮಳಿ ಹತ್ತೀತ ಬಿಡಲಿಲ್ಲ ಸಡಿಲಾ ॥

ಹೆಚ್ಚಾಗಿ ಬಂದಿತ ನೀರ ಅಚ್ಚುತರಾಯನ ಕಟ್ಟಿಮುಚ್ಚಿತ
ಹೆಚ್ಚಾಗಿ ಆಗ ಒಳಗ ಹೊರಗೆಲ್ಲಾ
ಒಡದ ಬಿಚ್ಚೀತ ಸುತ್ತಿನ ಗ್ವಾಡಿ ತಳದಾನಕಲ್ಲಾ
ಅಲ್ಲಿ ಮುಂಜಿಗಿ ಬಂದಿದ್ರ ಬ್ರಾಹ್ಮಣರೆಲ್ಲಾ ॥
ತಡಪಡಿಸಿ ಕುಂತಾರ ಅವರು ಅಡಬಡಿಸಿ ಹತ್ಯಾರಗುಡಿ
ಸಣ್ಣ ಹುಡುಗೋರನ್ನ ಕುಂಡ್ರಿಸಿ ತೊಲಿಮ್ಯಾಲಾ
ಬಡಬಡಿಸಿ ಅಂತಾರ ನಾವು ಉಳಿಯೋದಿಲ್ಲಾ ॥

ಹೆಂಗ ಮಾಡೋಣ ನಾವಿನ್ನ ಸಣ್ಣ ಮಕ್ಕಳ ಹಿಂಬಾಲೆಂತ
ಹಿಂಗ ಕುಂತಗೊಂಡ ಅಳತಿದ್ರ ಹೆಂಗಸರೆಲ್ಲಾ
ಅನ್ನದ ಬಾಂಡೆಗಳು ಆದಾವ ನೀರಪಾಲಾ
ಉಂಡಿ ಅವಲಕ್ಕಿ ಹ್ವಾದುವ ನೀರಿನ ಹಿಂಬಾಲಾ ॥
ಹಾಲಮಸರ ಬೆಣ್ಣಿ ಎಲ್ಲಾ ಉಂಡೇನಂದ್ರ ಉಳಿಯಲಿಲ್ಲ
ಸುತ್ತಕಡೆ ನೀರ ಬಂದ ಹಾಕಿತ ಜಾಲಾ
ತಂಡಿಹತ್ತಿ ನಡಗತಿದ್ರ ಖಬರಿಲ್ಲಾ ॥

ಗುಲ್ಲ ಮಾಡಿ ಕರದೇವಂತಾರ ಸಲ್ಲ ಅಡಗಿಹೋತ ಎಲ್ಲಾ
ಬಾಯಾನ ಹಲ್ಲಿಗಿಹಲ್ಲ ಹಚ್ಚಿಕೊಂಡ ಜಲ್ಲಾ
ಕಾಲಮ್ಯಾಲ ಹಾಂವ ಚೋಳ ಹರದಾಡತಾವ ಅಳತಿಲ್ಲಾ
ಸುತ್ತುಕಡೆ ನೀರ ತುಂಬಿ ಮುಳಗೀತ ಹೊಳಿಸಾಲಾ ||
ದುಡಕೀಲೆ ನೀರಬಂದ ದಡಕಿ ಹೊಡಿತಿತ್ತ ಬಾಳ
ಮಿಡಮಿಡಕಿ ಅಂತಾರ ನಾವು ಉಳಿಯೋದಿಲ್ಲಾ
ಅಲ್ಲೆ ಕುಂತ ಹೊತ್ತ ಹಾಕಿದಾರ ರಾತ್ರೆಲ್ಲಾ ||

**೧ನೇ ಚಾಲ**

ಹೊತ್ತ ಮುಳುಗಿ ಆತ ರಾತಃರಿ ನಿಂತಿದ್ರ ಗುಡಿ ಏರಿ
ಗಾಳಿ ಬಡದ ನಡಗ್ಯಾರ ಕಟಾಕಟಾ
ವಳ್ಳೆ ಮಾಡತಿದ್ರೊ ಬಬ್ಬಾಟಾ ||

ಶ್ರೀಹರಿ ಕೃಷ್ಣಮುರಾರಿ ಗೌರಿಶಂಕರ
ಸ್ವಾಮಿ ಎಂಕಟಾ
ಜೀವ ಹೋಗತಾವ ಕಾಯೊ ಮುಕ್ಕನ್ನ ||

**೨ನೇ ಚಾಲ**

ಮರುದಿವಸ ಮುಂಜಾನಿ ಬೆಳಗಾಗಿ
ಕರದ ಹೇಳತಾರ ಮಂದೀಗಿ ||

ತಾರ ಮಾಡಿ ಕರಸರಿ ನಮ್ಮ ಜನರಿಗಿ
ತಾರ ಹೋತ ತಡವಿಲ್ಲದ ಬೆಳಗಾಂವಿಗಿ ||

ತಾರ ಬಂದದ್ದ ನೋಡಿ ಅವರು ತಡಾ ಮಾಡಲಿಲ್ಲ
ಆಗಿ ಗಡಾ ಓಡಿಹ್ವಾದ್ರ ಕ್ಯಾಂಪಿಗಿ
ಲಾಂಚ್ ಮಶಿನ್ ಈಗ ಒಯ್ಯಬೇಕಂದ್ರ ಹುಬ್ಬಳ್ಳಿಗಿ
ನೀವು ಹೆದರೋ ಕಾರಣೆಲ್ಲಾ ಖರ್ಚಿಗಿ ||

ಸನ್ನ ಹತ್ತೊಂಭತ್ತನೂರಾ ಐವತ್ತಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ||ಃ||

ಮಿಶೆನ್ ಬಂದದ್ದನೋಡಿ ಇವರು ಹುಶ್ಯಾರಾಗಿ ಕುಂತಾರ
ಅಗದಿ ಕುಶ್ಯಾಲದಿಂದ ನಗತಿದ್ರ ತಮ್ಮೊಳಗ

ನೀರಾನ ಮೋಟೋರ ತಂದ ಚಾಲೂ ಮಾಡಿದಾರ ಹಕ್ಕಲದಾಗ
ಉಸರ ಎಳದ ನಿಂತೈತಿ ಅಲ್ಲಲ್ಲಿ ಬಲ್ಲಂಗ ॥
ಹುರಪೀಲಿ ಹೋಗತಿತ್ತಗಾಡಿ ದರಪಿಲೆ ಬಿಟ್ಟಿದ್ದ ವೇಗ
ಬರಾಟ ಬರಪೂರ ಸರಪ ಹ್ವಾದಾಂಗ
ಗಾಡಿ ಬಂದ ಆಗಿ ನಿಂತೀತ ನಿರಾಗ ॥

ಮೂರು ಮಂದಿ ಕೂಡಿಕೊಂಡ ಗೋರಬಾಳ ಬಿಡತಾರು
ಸೆಳವ ಬಲಿಯ ಹತ್ತಿತರಿ ಬಲ್ಲಂಗ
ಮಿಶೆನ್ ತೇಲುತ ತೇಲುತ ನಡದೀತ ಹೊಳಿಯಾಗ
ಇನ್ನ ಉಳಿಯೋ ಹಂಚಿಕಿ ಮಾಡೋಣ ಹ್ಯಾಂಗ ॥
ಪ್ಯಾರಲ ತ್ವಾಟದಾಗ ಹೊಕ್ಕೀತ ಲಾಂಚಗಾಡಿ
ಗಟ್ಟಿಮುಟ್ಟಿ ಸಿಕ್ಕೀತ ವಂದ ಗಿಡದಾಗ
ಹಗ್ಗಹಚ್ಚಿ ಬಿಗದ ನಿಂತಾರ ಗಿಡದ ತುದಿಮ್ಯಾಗ ॥

ಪಾರಮಾಡೊ ಪರಮೇಶ್ವರಾ ಘೋರ ಬಂದತಿ ಅಂತಾರ
ನಮ್ಮನ್ನ ಸೋದಮಾಡಿ ತಂದ ಹಾಕಿದಾರ ಇದರಾಗ
ಫೌಜದಾರ ಅರೆ ಇಸಕಾ ಮಾಕಾ ಅಂತಾನ ಆಗ
ನಮನ್ನ ಪಾರಮಾಡಿದವರಿಗೆ ರೊಕ್ಕಾ ಕೊಡತವಂದ್ರ ಬಲ್ಲಂಗ ॥
ಅಷ್ಟರೊಳಗ ಒಟ್ಟಗೂಡಿ ಹುಬ್ಬಳ್ಳಿ ಹುಡಗೋರು ಅಂದ್ರ
ಬರಾಬರಿ ಇಪ್ಪತ್ತೈದ ರೂಪಾಯಿ ಒಬ್ಬಬ್ಬಗ
ಆಡಿದಂತ ಕೊಟ್ಟ ದಾಟಿದಾರ ಹೊರಗ ॥

ದಪಮಾಡತಿತ್ತ ಹೊಳಿ ದುಡಕೀಲೆ ಹೊಕ್ಕೈತಿ ನೋಡ್ರಿ
ಹುರಪಿಲಿಂದ ಹುಣಸಿಕಟ್ಟಿ ಊರಾಗ
ಜನರು ಹವ್ವಹಾರಿ ಬಡದ ನಿಂತಾರ ದಿಂಗ
ಇನ್ನೂ ವತ್ತಿ ಬಂದರ ನಾವು ಮಾಡೋದ್ಯಾಂಗ ॥
ಆರತಾಸ ಮೀರಿತ್ತ ಆಗ ಜೋರಿನಿಂದ ಏರತಿತ್ತ
ಅರಮನಿ ಬಿದ್ದಾವ ಒಂದಃ ಓಣ್ಯಾಗ
ಇಷ್ಟಕ್ಕ ಬಿಟ್ಟಿತ ನಮನ ಅಂದಾರ ಆಗ ॥

**೧ನೇ ಚಾಲ**

ಸಯಿಲ ಬಿಡದೆ ಸಾಗಿಹೋತ ಹತ್ತಲಿಲ್ಲ ಗಳಿಗಿಹೊತ್ತ
ಮುಟ್ಟೀತ ಸಂಗೊಳ್ಳಿಗಿ
ಒಂದ ಬಾರಕ ಮೂರಸರತಿ ಕೂಗಿ ॥
ಎಲ್ಲಾ ಮಂದಿಗಿ ಹೊಕ್ಕಿತ ತಗಿಬಗಿ ಓಡೋಣಂದ್ರ ಮಡ್ಡಿಗಿ

ನೀರಿನ ಬಗೀ
ಊರಾಗ ಬಂತ್ರಿ ಸಾಗಿ ||

**೨ನೇ ಚಾಲ**

ಸಂಗೊಳ್ಳಿ ಮುಂದ ಐತಿ ನಾವಿ ದೋಣಿ
ಕಟ್ಟಿ ಓಡ್ಯಾರ ಹಚ್ಚಿ ಸರಪಣಿ ||

ಸುರು ಆದೂರಿ ಬೀಳಲಿಕ್ಕೆ ಮನಿ
ಕಣಕಿ ಬಣವಿ ನಡದುವ ಹಿಡದ ಓಣಿ

**||ಏರ||**

ಸಂಗೊಳ್ಳಿ ಮಂದೆಲ್ಲಾ ಆಗ ದಿಂಗ ಬಡದ ಓಡ್ಯಾಡತಾರ
ಹೆಂಗ ದಾಟಬೇಕ ತಿಳಿವಲ್ತ ನಮಗ
ನೀರ ಹೊಕ್ಕೀತ ಜೋಳದ ಹಗೇದೊಳಗ
ಹೋಗಿ ಕುಂತಾರ ಮಂದಿ ಲೈನ ಹಾದಿ ಮ್ಯಾಗ ||

ಸನ್ನ ಹತ್ತೊಂಭತ್ತನೂರಾ ಐವತ್ತಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ||೮||

ಸಂಗೊಳ್ಳಿ ಊರಮಂದಿ ಸಣ್ಣ ದೊಡ್ಡವರಂತಾರ ಹಿಂಗ
ನೀರಾವರಿ ವಡ್ಡಿನಿಂದ ಉಳದ್ವು ಮನಿ ದೀಡನೂರಾ
ಬಾಳ ಸಿಸ್ತಿಲೆ ಕಟ್ಟಿದ್ರ ವಳೆ ಬಂಧುರಾ
ವಡ್ಡ ಕಟ್ಟಿ ಬರದಂಗ ಮಾಡಿದ್ರ ನೀರಾ ||
ಒದರಿತ ಒಮ್ಮಿಗಿಲೆ ಹೊಳಿ ಬೆದರಿತ ಮಂದೆಲ್ಲಾ
ಅದರೀತ ಕಟ್ಟಿದ ವಡ್ಡ ಒಂದ ಬಾರಾ
ಮಣ್ಣ ಉದರೀತ ಹೆಚ್ಚಾಗಿ ನೀರಿನ ಜೋರಾ ||

ಹತ್ತಿದ ಮಳಿ ಬಿಡವಲ್ತ ಊರ ಸುತ್ತು ಕಡಿನೀರ ಬಂದ್ರೂ
ಹಾಕಿದ ವಡ್ಡ ಕೀಳಲಿಲ್ಲ ಬಂಧುರಾ
ಕೇಡ ಆಗೋದ ನೋಡಿ ಅಳತಾರ ಎಲ್ಲಾ ಜನರಾ
ಇನ್ನ ಎತ್ತ ಹೋಗೋಣಂತಾರ ಹೆಂಗಸರಾ ||
ಅಡಗಿಮನಿ ಪಡಸಾಲಿ ತುಂಬಿ ಎಡಬಲಕ ಸುತ್ತೊರದ ನೀರ
ಮಲಗಿದ ಹುಡಗರ್ನ ತಗೊಳ್ಳೋದು ಅವಸರಾ
ಗಲಿಬಿಲಿಯಿಂದ ಓಡಿಹೋದ್ರ ಎಲ್ಲಾರಾ ||

ಪ್ಯಾಟಿ ಕೂಟಿನ್ಯಾಗ ದಾಟ್ಯಾಡದಂಗ ಹೊಳಿ ಬಂದ
ನೀರ ನಿಂತೀತ ಒಳೆ ಅಬ್ಬರಾ
ಕಟ್ಟಿಮ್ಯಾಲ ಚಿಮ್ಮಿ ಹೊಗತಿತ್ತ ವಳೆ ಜೋರಾ
ನೋಡಿ ಉಸರ ಹಾಕತಿದ್ರ ಎಲ್ಲಾ ಅಂಗಡೆವರಾ ॥
ಮೂರ ಪೂಟ ಕಟ್ಟಿ ಏರಿ ಹೋಗಲಿಲ್ಲ ನೀರಾ
ದೀಡನೂರ ಮನಿ ಉಳದು ಊರೆಲ್ಲಾ ಸಂಹಾರಾ
ಅಂಗಡಿಕಾರರು ಅಂತಾರ ಕಾದ್ಯೋ ಪರಮೇಶ್ವರಾ ॥
ಹೊಳ್ಳಿ ನೋಡೋದರೊಳಗ ಪೂಜೇರ ಮನಿಯೊಳಗ
ದಿಕ್ಕ ತಪ್ಪಿ ಹೊಕ್ಕ ನಿಂತಿತ ನೀರಾ
ಖಬರ ಹಾರಿ ಓಡತಿದ್ರ ಹೆಂಗಸರಾ
ಗೌಡರ ಮನಿಗಿ ಹೋಗಿ ನಿಂತಕೊಂಡ್ರ ಎಲ್ಲಾರಾ ॥
ಮನಿಯಾಗ ಹೊಕ್ಕರ ಮಾಡೋದೇನ ದೇವರಾ ಎಲ್ಲಾ
ತಕ್ಕೋಬೇಕಂತ ಬುಟ್ಟಿ ತುಂಬಿದರ ಬಸಯ್ಯನವರಾ
ಗಂಟಿದೂಪಾರ್ತಿ ಮರತಬಂದ್ರ ಆತ ಅವಸರಾ ॥

**೧ನೇ ಚಾಲ**

ನೀರ ಇತ್ತ ಊರ ಸುತ್ತೊರಗಿ ಹೊಕ್ಕಿತ ಹೊಲಗೇರಿಗಿ
ಮುಳಗಿದಾವ ಮನಿ
ಏರಿ ಬಂದಿತ್ತ ಚವಕಟ್ಟಿ ಸನೆ ಸನಿ ॥

ತಾಲಿ ಗಿಂಡಿ ತಂಬಿಗಿ ತಾಬಾಣ ಹಂಡೆ ಕೊಡಪಾನ
ಬಂಗಾರ ಬೆಳ್ಳಿ ಹಮ್ಮಿಣಿ
ಎಲ್ಲಾ ಹೋತ ಮಾಡಿದ ಜಿಂದಗಾಣಿ ॥

**೨ನೇ ಚಾಲ**

ಕಾಳಕಡಿ ಉಳಿಯಲಿಲ್ಲ ತುಸಾ
ಹೊಟ್ಟಿಗಿಲ್ಲದೆ ಕುಂತಾರ ಉಪವಾಸಾ ॥

ನಾನಾ ತರದಿಂದ ಆಗತಾರ ನಾಶಾ
ಪಾಂಡವರಿಗೆ ಬಂದಾಂಗ ವನವಾಸಾ ॥

**॥ಏರ॥**

ರೊಟ್ಟಿ ಹಂಚ ಬುಟ್ಟಿ ಮರಾ ಬಿಟ್ಟಬಂದ ಕುಂತೇವ
ಒಂದ ರೊಟ್ಟಿ ಸಹಿತ ತರಲಿಲ್ಲಾ ಮಕ್ಕಳಿಗಿ

ಅಟ್ಟ ತಿಂದೇವಂದ್ರ ಉಳಿಲಿಲ್ಲ ಒಂದೂ ಗಡಿಗಿ
ಹಿಟ್ಟ ನಾದಕ ಇರಲಿಲ್ಲ ಕೊಣಂಬಿಗಿ ॥
ಸನ್ನ ಹತ್ತೊಂಭತ್ತನೂರಾ ಐವತ್ತಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ ॥॥೭॥

ಹಿರೇರ ಗಳಿಸಿದಂತಾ ಬದಕ ಬಂಗಾರಾ ಸ್ಥಿರವಾಗಿ ಇದ್ದಿತಂತ
ಅಣ್ಣತಮ್ಮಂದಿರ ಹೇಳಿದ್ದಿಲ್ಲ ತಮ್ಮೊಳಗ
ಹಿಂಗ ನರಕ ಮಾಡಿಕೊಂಡಿದ್ರ ಮೊದಲ ಬಡ್ಯಾಗ
ಈಗ ಊರ ಊರ ತಿರಗೋದ ಬಂತ ನಮ್ಮ ದೈವದಾಗ ॥
ಸಯಿಲ ಬಿಡವಲ್ಲ ಮಳಿ ಲೈನಹಾದಿ ಮ್ಯಾಗ ಅವರು
ಮೂರ ದಿವಸ ಕುಂತ್ರ ತಪ ತಂಡ್ಯಾಗ
ಸಣ್ಣ ದನಾಕರಾ ಸತ್ತಬಿದ್ದು ಹಾದಿ ಮ್ಯಾಗ ॥

ಬಸರ ಹೆಂಗಸರೆಲ್ಲಾ ಕೆಸರಾಗ ಹೆಂಗ ಹೋಗೋಣಾಂತ
ಉಸರ ಹಾಕತಾರ ಕುಂತ ಹಾದಿಮ್ಯಾಗ
ಬಾಳ ಹುಶ್ಯಾರಕಿಲೆ ಒಯ್ಯತೇವ ನಿಮಗ
ಗಂಡಸೂರ ಗಡಬಡದಿಂದ ಕರಕೊಂಡಹೋದ್ರ ಊರಹೊರಗ ॥
ಸುತ್ತುಕಡೆ ಹಳ್ಳಿ ಮಂದಿ ರೊಟ್ಟಿ ಒದಕೊಡತಾರ
ಪಟ್ಟ ಮಾಡೋಣಂದ್ರ ತಮ್ಮ ಊರೊಳಗ
ಹಿಂಗ ಏಳ ದಿನಾ ರೊಟ್ಟಿ ಕೊಟ್ರ ಕಿತ್ತೂರಾಗ ॥

ಗತ್ತ ಹಿಡಿಸಿತ್ತ ಹೊಳಿ ಸುತ್ತ ಹಾಕಿತ್ತ ಊರ
ಸತ್ತಹ್ವಾದು ಇಲಿ ಹೆಗ್ಗಣಾ ಮನಿಯಾಗ
ಹರದ ತಿಂತಿದ್ದುವ ಹದ್ದುಕಾಗಿ ಬಲ್ಲಂಗ
ನಾಕನೂರ ಮನಿ ಬಿದ್ದುವ ಒಂದು ದಿನದಾಗ ॥
ವಡ್ಡಿಗಿ ವದ್ದನಿಂತ ನೀರ ವಡದಗಿಡದ ಬಂದಿದ್ದರ
ಸದ್ದೆ ಇದ್ದ ಮನಿ ಎಲ್ಲಾ ಹೊಳಿಯಾಗ
ಊರ ಹೋಗತಿತ್ತ ಗುರ್ತಾ ಉಳಿದ್ಹಾಂಗ ॥

ಸುತ್ತ ಹಾಕಿದ್ದನ್ನ ನೋಡಿ ಕಿತ್ತೂರವರು
ಸ್ವಂತ ಮೋಟಾರ ಗಾಡಿ ಇಟ್ರ ಹೋಗಿ ಬರುವ್ಹಂಗ
ತಾಬಡತೋಬಡ ತಾರ ಮಾಡಿದ್ರ ಪ್ರಾಂತ ಸಾಹೇಬಗ
ಅವರು ಬಂದ ನೋಡಿ ಬಡವ ನಿಂತಾರ ದಿಂಗ ॥
ಏಳ ಊರ ತಂದೇನು ಇನ್ನು ಏಳ ನನ್ನ ಮುಳಕೂರ ಅಂತ

ಏಳ ಸಾರಿ ಕೂಗಿದಾಳ ಗಂಗವ್ವ ಆಗ
ಕೇಳಿ ಓಡಿಹೋಗಿ ಕುಂತಾರ ಹತ್ತಿ ಹೊಡೇದ ಮ್ಯಾಗ ॥

**೧ನೇ ಚಾಲ**

ಜಾಗಾ ಇಲ್ಲ ಎಲ್ಲೆಲ್ಲಿ ಹೋದೆವಂದ್ರ
ಬಿಟಗೊಟ್ಟ ಎದ್ದಾ
ನೀರ ಬಂದಿತ್ತ ಸುತ್ತೊರದ ಸದ್ದಾಮುದ್ದಾ ॥

ಮನಿಗಳು ಇದ್ದುವ ಮಾಳಿಗಿ ಬೀಳತಿದ್ದುವ
ಸಯಿಲಾಗಿ ಹೋದಾವ ಬಿದ್ದಾ
ಪದಾ ಆತ ಇಲ್ಲಿಗಿ ಎಂಟ ಸಂದಾ ॥

**೨ನೇ ಚಾಲ**

ಮುಂದ ಸಾಗೇತಿ ಮಲಪ್ರಭಾ ಹೊಳಿ
ವಂದ ದಿನದಾಗ ಮಾಡೀತ್ ಹಾವಳಿ ॥

ದೇವದೊಳಗ ಪಾಸ ತಿಗಡೊಳ್ಳಿ
ಬಲಭೀಮ ತನ್ನ ಶಿಷ್ಯಾಗ ತಿಳ ಹೇಳಿ ॥

ಪದಾ ಮಾಡಿದ ಮರಿಕಲ್ಲ ಈ ರಗಳೆ
ತಪ್ಪ ಆಗಿದ್ರ ಕೇಳಬ್ಯಾಡ್ರಿ ಹೊಳ್ಳಿ ॥

**॥ಏರ॥**

ಖಾನಾಉರದೊಳಗಿರುವ ಕಾರಖಾನೆ ಹಿಡದ
ನಾಲ್ಕು ಊರನಾದೂರಿ ಜೀಕನೂರಿಗಿ
ಇನ್ನ ಈರಾಪುರ ಹುಣಶಿಕಟ್ಟಿ ಸಂಗೊಳ್ಳಿಗಿ
ಹಿಂಗ ಏಳ ಊರ ಅದು ಅಂದ್ಲ ಮುಳಕೂರಿಗಿ ॥

ಸನ್ನ ಹತ್ತೊಂಭತ್ತನೂರಾ ಐವತ್ತಮೂರನೇ ಇಸವಿಯಲ್ಲಿ
ದುಂದ ಎಬಿಸಿತ ಮಳಿ ನಾಡಾಗ
ಸಣ್ಣ ದೊಡ್ಡವರು ಕುಂತಾರ ಅಂಜಿ ಮನಿಯಾಗ॥ಲ॥

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೧೩. ಕುಸ್ತಿ ಪೈಲ್ವಾನರು

ಕುಸ್ತಿ ಹುಡಗೋರ ಸುದ್ದಿ ಸಿಸ್ತಿಲೆ ಕುಂತಕೊಂಡ
ಚಿತ್ತವಿಟ್ಟ ಕೇಳರಿ ನೀವೆಲ್ಲಾ
ಈಗ ಪೈಲವಾನರು ಹೆಚ್ಚಾದಾರ ನಾಡ ಮ್ಯಾಲಾ ॥
ಬೈಲಗಣದ ಕುಸ್ತಿ ಒಗದ ಬಲ್ಲಂಗ ತಿರಗತಾರ
ನವಲಗ್ಯಾಂವಿ ಟಾವೆಲ್ಲ ಹೆಗಲ ಮ್ಯಾಲಾ
ಅಂಗಿ ತೊಡತಾರ ಮೈಯಾಗ ಮಲಮಲಾ ॥

ಗಂಜಿಪ್ರಾಕ ಜಾನಪಲ್ಲ ಪಡಕಿ ದುಡಕೀಲೆ
ಬದಾಮ ಬಣ್ಣದ ಪಟಗಾಸುತ್ತಿ ತಲಿಮ್ಯಾಲಾ
ಎರಡು ವ್ಯಾಳ್ಯೆ ಹೊಡಿತಾರ ಸಜ್ಜಕ ಹಾಲಾ ॥
ಬೆಣ್ಣಿ ಬೇಕಂತಾರ ಎಮ್ಮಿ ಮೈ ತೊಳಿಯೋದಿಲ್ಲ
ಹಂಗಕುಂತ ಹೊಡಿತಾರ ಕುಬ್ಬಲ್ಲಾ
ಸಕ್ತಿ ಹಸಿಹಾಲಾ ॥

ಮಸ್ತಿ ಬಂದ ಮ್ಯಾಲ ಇವರು ಸುಸ್ತ ಮಾಡೋದಿಲ್ಲ
ಮಾರಿ ನೋಡಿ ವಾರಿ ನೋಟ ಹೆಂಗಸರ ಮ್ಯಾಲಾ
ದಾರಿಯೊಳಗ ಮಾತು ಕತಿ ದರಜಿಲ್ಲಾ ॥
ಬೇಚಾರಕ ಬಿದ್ದ ಒಂದ ಸವನ ಹುಚ್ಚಹತ್ತಿ
ರಾತ್ರಿ ಹಗಲ ತಿರಗತಾರ ಎಚ್ಚರಿಲ್ಲಾ
ಕಳ್ಳನಂತೆ ಮುಳ್ಳಬೇಲಿ ಕಾಯತಾರ ರಾತ್ರೆಲ್ಲಾ ॥

ದುಡಿಯಾಕಂತೂ ಆಗೋದಿಲ್ಲ ಮನ್ಯಾಗಂತೂ ಸೇರೋದಿಲ್ಲ
ಕಣ್ಣ ಮೂಗ ಕಿಸದ ಅಣ್ಣ ತಮ್ಮರ ಮ್ಯಾಲಾ
ಎದ್ದ ಗುದ್ದೇನಂತ ಅಂತಾರ ಖಬರಿಲ್ಲಾ
ತಿನಸಕಮ್ಮಿ ಆಗಾನ ಮಾಡಬೇಕ ಇನ್ನೇನ
ಸಕ್ರಿ ಹಣ್ಣ ತಂದ ಆತ ಅಂಗಡಿ ಸಾಲಾ
ತುಡಗ ಮಾಡಿ ಕೊಡತಾನ ಮುನಿಯಾಂದೆಲ್ಲಾ ॥

**ಎರಡನೇ ಚಾಲ**

ಚೈನಿ ಹೊಡದದ ಗೆಣ್ಯಾ ಇಂವ ಸಣ್ಣ ಆಗಿರೋದಿಲ್ಲ ಜೀವ
ಕುಸ್ತಿ ನೇಮಿಸಿಕೊಂಡ ಥೇಟಿರಕ
ತಾಲೀಮ ಮಾಡತಾನ ಒಂದ ಹದಿನಾಲ್ಕ ॥

ಕರಕೊಂಡ ಹ್ವಾದ ಮಂದಿನ್ನ ಅಣ್ಣ ತಮ್ಮರನ್ನ
ಕುಸ್ತಿ ನೋಡೋದಕ
ಕುಸ್ತಿ ಹಿಡಿದ ಸಿಕ್ಕೊಂಡಾನ ಬುಡಕ ||

**ಎರಡನೇ ಚಾಲ**

ಅಂವ ತುಂಬ್ಯಾನರಿ ಗುಮ್ಮ ಸವಾರಿ
ರಕ್ತ ಸೋರಿತ ವಡದ ಮಣಕಾಲ ಮಾರಿ ||
ಕಿಂವಿ ಬಾಯಿ ಮೂಗಿನ್ಯಾಗ ದೂಳ ಸೇರಿ
ಹೊಳ್ಳಿ ಬಿದ್ದೊ ಅಂಗಾಂತ ಕಸವ ಹಾರಿ ||

**||ಏರ||**

ಡೋಂಗ ಮಾಡೊ ಹುಡಗ ಇಂವ ದಿಂಗ ಬಡದ ಕೂತಾನ
ನೆಂಪ ಆತ ಹಿಂದ ತಾ ಮಾಡಿದ್ದೆಲ್ಲಾ
ಇನ್ನ ಎಂದೆಂದೂ ಕುಸ್ತಿ ನಾನು ಹಿಡಿಯೋದಿಲ್ಲಾ
ಇವನ್ನ ನೋಡಿ ನಗತಿದ್ರ ಕಣದಾನ ಮಂದೆಲ್ಲಾ ||

ಬೈಲಗಣದ ಕುಸ್ತಿ ಒಗದ ಬಲ್ಲಂಗ ತಿರಗತಾರ
ನವಲ ಗ್ಯಾಂವಿ ಟಾವೆಲ್ಲ ಹೆಗಲ ಮ್ಯಾಲಾ
ಅಂಗಿ ತೊಡತಾರ ಮೈಯಾಗ ಮಲಮಲಾ ||||೧||

ಕುಸ್ತಿ ಹಿಡಿದರ ಹಿಡೀಬೇಕ ಹುರಪಿನ ಬಾದ್ದೂರ
ಹುಣಶೀಕಟ್ಟಿ ಕಲ್ಲ ನಮ್ಮ ನಾಡಾಗ
ಅವನ ಜೋಡಿ ಇಲ್ಲ ಸದ್ದೆ ಕರ್ನಾಟಕದೊಳಗ ||
ಪೈಲವಾನ ಅನ್ನೊ ಗಮಜ ಎಳ್ಳಷ್ಟು ಇಲ್ಲ ಅವಗ
ದೇವರ ದಯಾ ಐತಿ ಕಲ್ಲನಮ್ಯಾಗ
ಹಿಂಗ ಹೆಸರಪಡದ ಸುತ್ತ ನಾಡಾಗ ||

ವಿಠಲಸೋನಾ ಪಂಜಾಬೀದು ಐಟಬಾಳ ಕಣದಾಗ
ಕಲ್ಲನಕೂಡ ನೇಮಿಸಿದ್ರ ಇಟಗ್ಯಾಗ
ಕಲ್ಲ ವಿಠಲನ್ನ ಒಗದ ಬಾಜೂ ಟಾಂಗಿನೊಳಗ ||
ಬೆಳಕ ಬಾಳ ಇತ್ತ ನೋಡ್ರಿ ಬಾಪೂ ಬೆಲದಾರನ್ನ
ಮುಗಲ ತೋರಿಸಿಬಿಟ್ಟ ಕಲ್ಲ ಬೆಳಗಾಂವಿಯೊಳಗೆ
ಕರ್ನಾಟಕದ ಸಿಂಹ ಅನಿಸಿಕೊಂಡ ಆವಾಗ ||

ಮೂರ್ತಿ ಸಣ್ಣದಿದ್ದರೇನು ಕೀರ್ತಿ ದೊಡ್ಡದೆಂಬುವಂತಾ
ಅಳವಾಡ ಅಪ್ಪಣ್ಣ ಅದಾನ ಬೆಳಗಾಂವಿ ನಾಡಾಗ
ಸರಳ ಸ್ವಭಾವದಿಂದ ಕುಸ್ತಿ ಆಟ ಕಣದಾಗ ॥
ದ್ಯಾಸಗೊಟ್ಟ ನೋಡತಿದ್ರ ದುಸಗಿ ಜೈವಂತನ್ನ
ಮಿಸಕಗೊಡದ ಒಗದ ನೆಂದೆಳ್ಯಾಗ
ಅಕ್ಕಲಕೋಟಿ ನಿಂಬಾರಿನ್ನ ಡಾಕ ಹೊಡದ ಬೆಳಗಾಂವ್ಯಾಗ ॥

ನೇಗಿನಾಳ ಬಸವಣ್ಣಿ ನಮ್ಮ ಬಾಗಿನ್ಯಾಗ ಮುಂದಬಂದ
ಕೊಲ್ಲಾಪುರ ಮಾರುತಿ ಸಿಕ್ಕಿದ್ದ ಅವನ ಕೈಯ್ಯಾಗ
ಗಜಪತಿಯೊಳಗ ॥
ತಿಕ್ಕಿತಿಕ್ಕಿ ಮಾರುತಿನ್ನ ಗೋಳ ಮಾಡಿ ಒಗದಾನ
ಮಾಲಿ ಹಾಕಿದಾರ ಬಸವಣ್ಣಿ ಕೊರಳಾಗ
ಬನತಾನ ಕೂಡ ಬಿಡಿಸಿಕೊಂಡ ಬೀಡ್ಯಾಗ ॥

**ಒಂದನೇ ಚಾಲ**

ಕುಸ್ತಿ ಆಟದಲ್ಲಿ ವಳೆ ಜಾಣ ಮಲ್ಲಾಪುರ ಚವ್ವಾಣ
ಬಸಪ್ಪನ ಹೆಸರಾ
ಕೇಳದವರು ಇಲ್ಲ ಯಾರ್‍ಯಾರಾ ॥
ಅರಿವಿ ಕಳೆಯುವದಕ್ಕ ಅವಸರ ಕಿತ್ತೂರ ಕಿಲ್ಲೆದ್ದಂತೆ ಥೇಟರ
ಬಂದಿದ್ದ ನೂಲ್ವಿ ಮಾಸ್ತರಾ
ಬಸಪ್ಪ ಒಗದೊ ಮಾಡಿ ಅವಸರಾ ॥

**ಎರಡನೇ ಚಾಲ**

ಕುಸ್ತಿ ನೇಮಿಸ್ಯಾರ ಜಾಗಾ ಗೆಜಪತಿ
ಕೆರೂರಿನ ಬಂದಿದ್ದರಿ ಜ್ಯೋತಿ ॥
ಅಡ್ಡೆಕ ಕಟ್ಟಿದ ಹಗ್ಗ ಇತ್ತ ಕಾತಿ
ಜೋತಿನ್ನ ವಗದ ಬಸಪ್ಪ ಅದರ ಮ್ಯಾಲೆತ್ತಿ ॥

**।ಏರ॥**

ಕಿತ್ತೂರ ನಾಡ ಹುಲಿ ಅಂತ ಕೀರ್ತಿ ಪಡಕೊಂಡ
ಕುಸ್ತಿ ಆಡೋದಕ್ಕ ಕಣದಾಗ ಖಬರಿಲ್ಲಾ ।
ಶಾಪೂರ ರಾಜಾರಾಮನ್ನ ಮಾಡಿ ಬಿಟ್ಟ ಗಾಲಮ್ಯಾಲಾ ॥

ಬೈಲಗಣದ ಕುಸ್ತಿ ಒಗದ ಬಲ್ಲಂಗ ತಿರಗತಾರ
ನವಲ ಗ್ಯಾಂವಿ ಟಾವೆಲ್ಲ ಹೆಗಲ ಮ್ಯಾಲಾ
ಅಂಗಿ ತೊಡತಾರ ಮೈಯಾಗ ಮಲಮಲಾ ||||೨||

ಮುನವಳ್ಳಿ ನಾಗೂಗ ಶಮನೆವಾಡಿ ಕಲ್ಲೂಗ
ಕುಸ್ತಿ ಹತ್ತಿತ ಒಂದ ಗಳಿಗ್ಹೊತ್ತಾ |
ಕಲ್ಲೂಸೋತಾ ||
ತಿಗಡೊಳ್ಳಿ ಥೇಟರದಾಗ ತಿಕ್ಕ್ಯಾಟ ಇಬ್ಬರಿಗು
ಕಲ್ಲೂಂದ ಹಾರಿತ ತಾಕತ್ತಾ
ನಾಗೂ ಹಸನಕಟ್ಟಿ ಒಗದಾನ ಅಂಗಾತಾ ||

ಚವಾಟಗಲ್ಲಿ ಕೇದಾರಿ ಅಯಿಟ್‌ಲಿಂದ ಅರಿವಿಕಳದ
ಕುಸ್ತಿ ಆಟದಲ್ಲಿ ಯಾರಿಲ್ಲ ಅವನಂಗ ಚಮತಾ
ಕೇದಾರಿ ಮ್ಯಾಲ ಇರತೈತಿ ಎಲ್ಲಾರ ಚಿತ್ತಾ ||
ದೊಡವಾಡ ಗಂಗಪ್ಪನ್ನ ಎದಿಗಿ ಎದಿಗೆ ಹಚ್ಚಿ
ಹುಂಚಿಕಟ್ಟ್ಯಾಗ ಒಗದಾನ ಅಂಗಾತಾ
ಗಂಗಪ್ಪಗ ತಿಳಿಲಿಲ್ಲ ಕೇದಾರಿ ಬೇತಾ ||

ಪೀರ ಮಹಮ್ಮದ ಪಂಜಾಬೀದು ದೂರತನಕಾ ವಾಹಿನಿ
ಅವನ ಜೋಡಿ ಇಲ್ಲ ಹುಬ್ಬಳ್ಳಿ ಸುತ್ತಮುತ್ತಾ
ಅಂವಗ ಅಂತರಾ ಹುಬ್ಬಳ್ಳಿ ಹುಲಿ ಅಂತಾ ||
ಕಿತ್ತೂರಾಗ ಉಗರಖೋಡ ಮುಕ್ತುಮನ ಕೈಯಾಗಸಿಕ್ಕ
……………………. ಮಹಮ್ಮದನ ತಾಕತ್ತಾ |
ಮಕ್ತುಮ ಮಡಿಚಿ ಮಡಿಚಿ ಮಾಡಿಬಿಟ್ಟಾನ ಚಿತ್ತಾ ||

**ಒಂದನೇ ಚಾಲ**

ಕುಸ್ತಿ ಇತ್ತ ನೋಡ್ರಿ ಬೆಳಗಾಂವಿಗಿ ವೈತಾಕವಾಡಿಗಿ
ಹುಣಶಿಕಟ್ಟಿ ಸಿದ್ಧ ಅಲ್ಲಿ ಬಂದಾ
ತಡಿಲಿಲ್ಲ ಎಳ್ಳೂರ ಮುಕ್ಕುಂದಾ ||
ಮರುದಿವಸ ಮಕರ ಸಂಕ್ರಾಂತಿ ಇತ್ತ ಸಿದ್ಧನ ಕುಸ್ತಿ
ಹುಬ್ಬಳ್ಳಿಗೆ ಬಂದಾನ ಅಂದಾ
ನಸಲಾಪುರ ಬಂಡೂನ್ನ ಅಲ್ಲೆ ವಗದಾ ||

**ಎರಡನೇ ಚಾಲ**

ಹ್ಯಾಂವ ಬಿತ್ತ ಹಸನ ಪಾನಾರಿಗಿ
ನೇಮಿಸಿಕೊಂಡ ಇಟಗಿ ರೋಡಿಗಿ ||
ಆಕಾಶ ತೋರಿಸಿದ ಸಿದ್ಧ ಪಾನಾರಿಗಿ
ಸಿದ್ದ ಬೆಳದೋ ನಮ್ಮ ನಾಡಿಗಿ ||

**||ಏರ||**

ಗರಗದಾಗ ನೇಮಿಸಿದ್ರ ಅಷ್ಟೇಕಾರ ಶಿವೂನ್ನ
ಉಡಿಕೇರಿ ಸೋಮನ ಹಿಂಬಾಲಾ
ಶಿವೂ ಕಮ್ಮ ಆದ ಸೋಮಗ ಆಗ ತಡಿಲಿಲ್ಲ ||

ಬೈಲಗಣದ ಕುಸ್ತಿ ಒಗದ ಬಲ್ಲಂಗ ತಿರಗತಾರ
ನವಲ ಗ್ಯಾಂವಿ ಟಾವೆಲ್ಲ ಹೆಗಲ ಮ್ಯಾಲಾ
ಅಂಗಿ ತೊಡತಾರ ಮೈಯಾಗ ಮಲಮಲಾ ||||೩||

ತಡಾಕಿ ಮಲ್ಲನಂಗ ತಾಕತ್ತ ಇಲ್ಲಯಾರ
ತಿದ್ದಿ ಮಾಡಿದ್ಹಾಂಗ ಅವನ ಮೈಕಟ್ಟಾ
ಯಾತರಾಗೇನು ಕಸರಿಲ್ಲ ಬಲು ಗಾಟಾ ||

ಕುದ್ದ ಊರ ಬಡ್ಯಾಗ ಬಾಹುನ ಸವದತ್ತಿ
ಕೊಲ್ಲಾಪುರ ಸದ್ದೆ ಅಂವ ಇರೋ ಮೆಟ್ಟಾ
ಎಲ್ಲ ಮಲ್ಲರೊಳಗ ಮೇಲಾದ ಬಂಟಾ ||

ಹೆಂಡರ ಮಕ್ಕಳೆಲ್ಲಾ ಸಂಗಾಟ ಸದ್ದೆ ಕೂಡಿ ಇದ್ದು
ಚಿಂತಿ ಹಚ್ಚಿಗೊಂಡಿಲ್ಲ ಅಂವ ಏಟೇಟಾ
ಮನಿಯೊಳಗ ಮಕ್ಕಳದಾವ ಒಂದ ಏಳೆಂಟಾ ||
ಇಲ್ಲಿವರಿಗೂ ಜೋಡಿ ಇಲ್ಲ ಅನಿಸಿಕೊಂಡ
ಬೋಲಾ ಪಂಜಾಬಿ ಬಂದಾನ ಹೊಂಟಾ
ಅಂವ ಕೊಲ್ಲಾಪುರಕ ಹಾಕ್ಯಾನ ಮೆಟ್ಟಾ ||

ಬೋಲಾ ಪಂಜಾಬಿ ಕೂಡ ತಡಾಕಿ ಮಲ್ಲನಕುಸ್ತಿ
ನೇಮಿಸ್ಯಾರ ಮಾಡಿ ಕಟಪಟಾ
ರೊಕ್ಕಾ ಕೊಟ್ಟರ ಇಬ್ರಿಗೂ ಬೇಡಿದಪ್ಪಾ ||
ಹ್ಯಾಂಡಬಿಲ್ ಅಲ್ಲದೆ ಎಲ್ಲಾ ಪೇಪರಿನ್ಯಾಗ
ಫೋಟೋ ತಗಸಿ ಕೊಟ್ಟಾರ ಅಯಿಟಾ
ದೊಡ್ಡ ಜೋಡಿ ಹೆಸರ ಒಂದ ಏಳೆಂಟಾ ||
ದೂರಿನ ಮಂದಿಗೆ ಗೋರ ಆದೀತಂತ

ರಿಜರ್ವ ಮಾಡಿಸಿದಾರ ತಿಕೀಟಾ
ಇನ್ನೂ ಎಂಟದಿನಕ ಮುಕ್ಕಟ್ಟಾ ॥

ಒಂದ ರೂಪಾಯಿ ಎರಡಾಣೆ ನೆಲಕ್ಕ ಕುಂಡ್ರೋದಕ್ಕ
ಐದು ಹತ್ತು ಹದಿನೈದು ಕುರ್ಚಿಯ ಗಂಟಾ
ಹಿಂಗ ಮಾರಾಟ ಆದ್ವು ತಿಕೀಟಾ ॥
ಬಂದುಬಸ್ತೀಲೆ ಒಳ್ಳೆ ಸಿಸ್ತೀಲಿ ಕಟ್ಟಿಸ್ಯಾರ
ಖಾಸಬಾಗದಲ್ಲಿ ಥೇಟರ ಮೆಟ್ಟಾ
ಮರಿ ಆಗೋದಿಲ್ಲ ಯಾರಿಗಿ ಏಟೇಟಾ ॥
ಬಂದ ಹೊಕ್ಕಿತ ಮಂದಿ ಒಂದ ಬಾರಕ ತುಂಬಿ
ಜಾಗಾ ಇಲ್ಲ ನಿಂದ್ರೋದಕ ಒಂದೀಟಾ
ಹೊರಗ ನಿಂತಿದ್ರ ಹಿಡಕೊಂಡ ತಿಕೀಟಾ ॥

ಯಾರಿಂದ ಬಂದೇವಂತ ಚೀರ್‍ಯಾಡತಿದ್ರ ಹೊರಗ ನಿಂತ
ಯಾರ ಕೇಳಬೇಕ ಇವರ ಬಬ್ಬಾಟಾ
ರೊಕ್ಕ ಆಗಿತ್ತಿ ಅಷ್ಟೊತ್ತಿಗೆ ಸಾಕಷ್ಟಾ ॥
ಒಳಗ ಹೊಕ್ಕವರಲ್ಲಿ ಸತ್ತಾರ ಇಬ್ಬರಾ
ಎಷ್ಟೋ ಜೀವ ಆಗಿದ್ದುವ ಅರದೋಟಾ
ಹಿಂಗ ನಡದಿತ್ತ ಬಲ್ಲಂಗ ನುಗಸ್ಯಾಟಾ ॥

ಕುದರಿ ಸ್ವಾರಗಳು ಪೇರಿ ಹಾಕಿಕೊಂತ ಮಂದಿನ್ನ
ಖಬರಿಲ್ಲದ ಬಡಿತಿದ್ರ ಪಟಾಪಟಾ
ತಲಿ ಮೂಗು ಮಾರಿ ಒಡದ ರಕ್ತ ಸೋರ್‍ಯಾಟಾ ॥
ಚಪ್ಪಲ್ಲ ಚತ್ತರಗಿ ಪಟಗಾ ಟೊಪ್ಪಿಗಿಗಳು
ಹರಿವ್ಯಾಡಿ ಹೋದುವರಿ ಸಾಕಷ್ಟಾ
ಪೋಲೀಸ ಪಾರ್ಟಿ ಬಂದೋಬಸ್ತಾ ಕಟಪಟಾ ॥

ಕೂಡಿದ ಮಂದಿನ ತರಬೋ ಕೂವತ್ತಾಗಲಿಲ್ಲ
ಕುಸ್ತಿ ಎಬಿಸಿದಾರ ಲಗೂಜಟಾಪಟಾ
ಆಗ ಮಲ್ಲ ಬಂದ ಕಣದಾಗ ಹೊಂಟಾ ॥
ಹಿಂದುಗಡೆ ಬಂದ ಬೋಲಾ ಸಿವಡಗಾಲಿಗೆ ಹೊಕ್ಕ
ನೆಲದ ಮ್ಯಾಲ ಕೆಡವಿ ಹೊಂಟಾ
ಆಗ ತಿಳಿಯಲಿಲ್ಲ ಕುಸ್ತಿಯ ಆಟಾ ॥

**ಒಂದನೇ ಚಾಲ**

ಇನ್ನೊಮ್ಮೆ ಹಿಡಬೇಕಂತ ತಡಾಕಿಯ ಬೇತ
ಮುಂದ ಎರಡ ತಿಂಗಳಿಗಿ
ಮತ್ತ ನೇಮಿಸಿಕೊಂಡ ಬೇಡಿಕ್ಯಾಳಿಗಿ ||

ಬೋಲಾಂದು ಬಾಳ ತಯ್ಯಾರ ಮಲ್ಲಂದು ಇಳತಾರ
ಮಲ್ಲ ಕುಂತ ಕಾಲಾ ಜಂಗಿಗಿ
ಬುಡಕ ಸಿಕ್ಕ ಕಸುವ ಕಮ್ಮ್ಯಾಗಿ ||

ತಡಾಕೀದು ನಾಟಲಿಲ್ಲ ಪೇಚ ಬೋಲಾ ಆದಾನ ಬಾಳಹೆಚ್ಚ
ಬುಡಕ ಕುಂತ ಹಿಡದ ಗುಟ್ಯಾಗಿ
ಬೋಲಾ ಹೋದೆನಂತಾನ ತಟ್ಟಾಗಿ ||

**ಎರಡನೇ ಚಾಲ**

ಒಂದ ತಾಸ ಮಲ್ಲಪ್ಪ ಬುಡಕ ಕುಂತಾ
ಬೋಲಾನ ಭಾರಾ ಹಿಡದ ಬಾಳ ಸೋತಾ ||
ಬೋಲಾನ್ನ ಬೈತಿದ್ರ ಮಂದಿ ಆಗಿ ಅಂತಾ
ರೊಳ್ಳಿಗಂವದ ಹೊಳ್ಳಿದ ತಡಾಕಿ ಅಂಗಾತಾ ||
ಬೋಲಾ ಹೇಳಿದೊ ಆವಾಗ ಎದ್ದನಿಂತಾ
ಇವನ್ನ ವಗದರೂ ವಗದಂಗ ಅಲ್ಲಂತಾ ||

**||ಏರ||**

ಹೆಂಗಾರೆ ಆಗಲೆಂತ ಬಂದಾಂಗ ಹೊಂದಿಸಿ
ಪದಾ ಮಾಡಿದಾನ ತಿಗಡೊಳ್ಳಿ ಮರಿಕಲ್ಲಾ
ಬಲಭೀಮನ ದಯಾ ಐತಿ ಅವನ ಮ್ಯಾಲಾ ||

ಬೈಲಗಣದ ಕುಸ್ತಿ ಒಗದ ಬಲ್ಲಂಗ ತಿರಗತಾರ
ನವಲ ಗ್ಯಾಂವಿ ಟಾವೆಲ್ಲ ಹೆಗಲ ಮ್ಯಾಲಾ
ಅಂಗಿ ತೊಡತಾರ ಮೈಯಾಗ ಮಲಮಲಾ ||||ಳ||

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

# ೧೪. ಮಳೆಯ ವರ್ಣನೆ

ಯಲ್ಲಾ ಜೀವನಕ್ಕೆ ಆಧಾರ । ಮುಖ್ಯವಾಗಿ ನೀರ
ಮಳೆಯು ಆದರ । ಬೆಳೆಯು ಬಂದ ದೇಶವೆಲ್ಲಾ ಸಡಗರ
ಹೊಳಿ ಹಳ್ಳ, ಕೆರಿಭಾಂವಿ ಭರಪೂರ
ತುಂಬಿದಾಗ ಉಲ್ಲಾಸದ ಉದ್ಗಾರ॥ಪ॥

ಮಳೆರಾಜ ಪೂರ್ಣ ತಡದರ । ಬಂದಿತ ಘೋರ
ಬರಗಾಲ ಅನ್ನುರ । ಹಾದಿ ಬೀದಿಯೋಳಗ ಬಿದ್ದ ಶರೀರ
ಪ್ರಾಣ ಕಳಕೊಂಡ ಹಾಕಿ ಉಸುರ
ಆಹಾರ ನೀರ ನೀರ ಅಂತ ಹಾಹಾಕಾರ॥ಜ॥

ಮಿತಿ ಮೀರಿ ಮಳಿ ಸುರಿದರ । ಹಿತ ಇಲ್ಲ ಚೂರ
ಅತಿವೃಷ್ಟಿ ಹೆಸರ । ಹಾಳಾಗಿ ಹೋಗುವದು ಸಂಸಾರ
ಬೀಳ ಭೂಮಿ ಏಟಿ ಬರುವುದಿಲ್ಲ ಪೈರ
ಹಿಂಗ ಇರುವದು ಮಳೆಯ ಚಮತ್ಕಾರ॥ಜ॥

ಹದಕ್ಕೆ ತಕ್ಕ ಹಸಿಯಾಗಿ । ಮುದದಿ ಬಿತ್ತಿಗಿ
ಚಂದ ರೈತರಿಗಿ ಕುಂದು ಕೊರತಿಲ್ಲ ಹರುಷವಾದಾರ
ಬಂಧು ಬಳಗಹೊಂದಿ ಸುಗ್ಗಿ ಮಾಡುರ
ತಂದ ಕಣಜ ತುಂಬಿ ಬಣವಿ ಒಟ್ಟೂರ॥ಜ॥

ಮೃಗ ಹಿಡಕೊಂಡ ಆಶ್ಲೇಸ ತನಕ । ಮೃಗಾ ಪಂಚಕ
ಮುಂಗಾರಿ ಬಿತ್ತುದಕ । ಕೆಂಜೋಳ ತೊಗರಿ ಅವರಿ
ಹೆಸರ । ಸಜ್ಜ ನವಣೆ ಮಡಿಕಿ ಹುರಳಿ ಬಿತ್ತಿಪೂರ
ಶೆಂಗಾ ಅಲಸಂದಿ ಔಡ್ಲಹಾಕುರ॥ಜ॥

ಮಲ್ಲಾಡದವರ ಬಿತ್ತಿಗಿ । ಮದಲಿಗೆ ಅಗಿ
ಭತ್ತದ ಅಗಿ । ಅಚ್ಚ ಹೆಸರಾಗಿ ಎಷ್ಟ ಸುಂದರ
ಗದ್ದಿಗಳು ತುಂಬಿ ತಳುಕುವವು ನೀರ
ಮೇಡ ಭೂಮಿ ಬರಗ ಸಾಂವಿಗೆ ತಯ್ಯಾರ॥ಜ॥

ಮಾನ್ಸೂನ ಹುಟ್ಟುತ । ಕಡಲ ದಾಟುತ
ಜಡಿ ಮಳಿ ಹತ್ತೀತೊಳೆದುರಂದರ
ಹೆಮ್ಮೋಡ ಹಾಕಿ ನಿರಂತರ । ಪಾಡಭೂಮಿ ನಾಡಿಗೆಲ್ಲ ಸುಖಕರ॥ಜ॥
ಮುಂಗಾರಿ ಬಿತ್ತುಣಗಿ ಮುಗಿದ । ಉಳ್ಳೀಬೀಜ ಒಗದ
ತಂಬಾಕ ಅಗಿ ಹುಗಿದ । ಮೆಣಸಿನ ಅಗಿ ಬದ್ನಿ ಹಚ್ಚುದ

ಹದಸೀರ | ನೌಲ ಕೋಲ ಕ್ಯಾಬೀಜ ಗಡ್ಡಿ ಹೊಸತರ
ಗೆಣಸ ಗಜ್ರ ಕಾಯಿಪಲ್ಲೆ ನಾನಾತರ॥ಜ॥

**॥ಚಾಲ॥**

ಹಿಂಗಾರಿಯ ಸಲುವಾಗಿ ಉರಿ ನೆಲಾ ಹರಗೂತ್ತಾ
ನೆಲಾ ಹರಗೂತ್ತಾ॥ವ॥

ತಂಗಾಳಿಯ ಹೊಡೆತಕ್ಕ ರೈತನ್ಹೊಟ್ಟೆ ಹಸಿಯುತಾ
ಹೊಟ್ಟೆ ಹಸಿಯುತಾ॥ಜ॥

ಹಂಗದೊರೆದು ದುಡಿಯಬೇಕ ಬಿತ್ತು ಹದಕ
ಬರಲೆಂತಾ॥ಜೀಯ॥ಜಿ॥

ಹಿಂಗ ಇರುವುದು ಕಮತದ ಕೆಲಸ ಮಾಡು
ವೃತ್ತಾಂತಾ॥ಜೀಯ॥ಜೀಯ॥

**॥೨ಚಾಲ॥**

ಗಡಬಡಸಿ ಎಡಿ ಹೊಡೆಯುತ್ತಾ |
ಎಡಬಿಡದೆ ಕಳಿ ತಗಿಸುತ್ತಾ ॥

ಧಡಾ ಧಡಾ ಹಳ್ಳ ಹರಿಯುತ್ತಾ |
ಬಡ ನೆಲದ ಅಡವಿ ಚಿಗಿಯುತ್ತಾ ॥

ಗುಡಗ್ಹೊಡದ ಸಿಡಿಲ ಬೀಳುತ್ತಾ |
ಅಡಬಡಿಸಿ ದನಾ ಬೆದರುತ್ತಾ ॥

ಮಿಡಚಿಗಳು ಕುಡಿ ಕಡಿಯುತ್ತಾ |
ಹುಡಿ ಹೊಡೆದ ನಾಶ ಪಡಿಸುತ್ತಾ ॥

ನಡ ನಡುವೆ ಘಾಳಿ ಬೀಸುತ್ತಾ |
ಹುಡುಕಿದರು ಸೂರ್ಯಸಿಗಂತಾ ॥

ಎಡ ತೊಡರುಗಳನ ತಡೆಯುತ್ತಾ |
ಧೃಡ ಮನಸಿನಿಂದ ದುಡಿಯುತ್ತಾ ॥

**॥ಏರು॥**

ರಾತ್ರಿ ಹಗಲು ಎನ್ನದೆ ಕೆಲಸ । ರೈತಗ ಹೌಸ
ಹೊಲದ ಮ್ಯಾಲ ಧ್ಯಾನ । ಕುಲುಕುಲು ನಗುತ ಗಂಡ ಹೆಂಡರ
ಹೆಲ ಕೆಲವು ಮನಸಿನಲ್ಲಿ ವಿಚೆಯಾರ
ಮಲಗಿದಾಗ ಹೊಲದ ಸುದ್ದಿ ಜೋರದಾರ॥ಜಿ॥೧॥

ಹಿಂಗಾರಿ ಮಳಿಗಳು ಐದ । ಮಘಾ ಹಿಡದ ಮುಂದ
ಎಣಿಸಿ ನೋಡಂದ । ಪೂರ್ವ ದಿಕ್ಕಿನಿಂದ ಬಂದ ಹೊಡೆಯುತ
ಮೊದಲಿನ ಮಳೆಗೆ ಹೊತ್ತಿ ಹಾಕುತ
ಬೆಳವಲಕ ಇವುಗಳಿಂದ ಬಹಳ ಒಳಿತ॥ಜೀಯ॥ಜಿ॥

ಉತ್ತರಿ ಹಸ್ತ ಎರಡ ಇವ । ಒಕ್ಕಲಿಗರ ಜೀವ
ಭಾಷೆ ಕೊಟ್ಟಿರುವ । ವೆಂದು ಹೇಳುವ ಗಾದಿ ಸಿದ್ಧಾಂತ
ಸರ್ಬಕಾದ ಆಗುವುವು ನಿಶ್ಚಿತ
ತಪ್ಪಿದರ ಏನ ಹೇಳುವುದು ಅನಾಹುತ॥ಜೀಯ॥ಜಿ॥

ಉತ್ತರಿ ಮಳಿ ಹೋದರ । ಹೆತ್ತಮ್ಮ ಮುನಿದರ
ಉತ್ತಮರು ಸಟ ಬಿದ್ರ । ಪೃಥ್ವಿಯನ್ನೆತ್ತ ಬದಕುವದಂತ
ಸ್ವತಾ ಸರ್ವಜ್ಞ ಹೇಳಿದ ಕವಿತ
ಕೈಗೆ ಬರುವುದಿಲ್ಲ ಹಿಂದಿನ ಪೀಕ ಸಹಿತ॥ಜೀಯ॥ಜಿ॥ಜಿ

ಜನದಾಶೆ ಇವೆ ಮಳಿತನಕ । ಆಗದಿದ್ರ ದಿಕ್ಕ
ತಪ್ಪಿ ಹೋತಲೆಕ್ಕ । ಬರಗಾಲಕ್ಕ ಮಾಡಿದಂತೆ ಸ್ವಾಗತ
……..ಮಾರಬೇಕ ನೋಡ ಎತ್ತ
…………………….. ಹಲ್ಲಕಿಸ್ತ॥ಜಿ॥ಜಿ॥

ತಪ್ಪದೆ ಮಳಿ ಬಿದ್ರ ಹಸಿ । ವದಗಿದರ ಬೇಸಿ
ಬೆಳಿ ಪುರಮಾಸಿ । ಗೋದಿ ಕಡ್ಲಿ ಬೀಳಿಜೋಳ ಬರುವವು ಮಸ್ತ
ಕುಸಬೀ ಅಗಸಿ ರಾಶಿಗೆಲ್ಲ ಪುರಸೊತ್ತ
ಸರ್ವೆಲ್ಲಾ ಬಂದ್ರ ರಾಷ್ಟ್ರಕ ಸಿರಿ ಸಂಪತ್ತಾ॥ಜೀಯ॥ಜಿ॥ಜಿ॥

ದನಕರುಗಳು ಹಕ್ಕಿ ಪಕ್ಕಿಗನ್ನ ಸಮೃದ್ಧ ಜೀವನ
ಸಾಕಷ್ಟ ಹಾಲು ಹೈನ । ಚೈನಿ ಚಲ್ಲಾಟಗಳು ವಿಪರೀತ
ದೈನಂದಿನ ಅಡಚಣೆ ಇಲ್ಲದ ರೈತ
ಕ್ಷಣ ಕ್ಷಣಕ ದಾನ ಧರ್ಮ ಮಾಡುತ॥ಜೀಯ॥ಜಿ॥

ಶೀಗಿ ಹುಣ್ಣಿವ್ಯಾಗ ಚಲ್ಲುವ ಚರಗ । ಉಳ್ಳಾಮಾಸಿಯೊಳಗ
ಕೂಡಿ ಬಂಧು ಬಳಗ । ಕಡಬ ವಡಿ ಗಾರಿಗೀಯ ಮಾಡಿಸುತ

ಕಡ್ಲಿ ಪಚಡಿ ಕಟ್ಟಿನಾಂಬ್ರ ಕಾಸೂತ
ಸಣ್ಣಕಿ ಅನ್ನ ಬೆಣ್ಣಿಯನ್ನು ಕರಗಿಸುತ॥ಜೀಯ॥ಜಿ॥ಜಿ॥

**॥ಚಾಲ॥**

ಕಡ್ಲಿ ಸುಲಗಾಯಿ ಗೋದಿಯ ಉಮ್ಮಿಗಿ ಒಳೆ ಗಮ್ಮತ್ತಾ॥ಜಿ॥ಜಿ॥
ತಂಡಿ ಗಾಲದಿ ಬಿಳಿಜೋಳ ಎಳಿಯ ಬೆಳಸಿ ತಿನ್ನುತ್ತಾ॥ಜಿ॥ಜಿ॥
ಕಂಡ ಕಂಡ ಜಮೀನುಗಳ ಪೀಕ ವರ್ಣನೆ ಮಾಡುತ್ತಾ॥ಜಿ॥ಜಿ॥
ಉಂಡ ತಿಂದ ಸಂತೋಷಾಗಿ ಮನಿಯ ಕಡೆ ಹೊರಡುತ್ತಾ॥ಜಿ॥ಜಿ॥

**೧ನೇ ಚಾಲ**

ಸುಗ್ಗಿ ಮಾಡುವರು ಸುಖದಿಂದಾ ।
ಹಿಗ್ಗಿ ಹಿಗ್ಗಿ ಮನಸಿಗಾನಂದಾ ॥

ಜಗ್ಗಿ ಜಗ್ಗಿ ರಾಶಿ ಯಳ ಯಳದಾ ।
ಹುಗ್ಗಿ ಹೋಳಿಗಿ ರಾಶಿ ನೈವದ್ಯಾ ॥

ಬಿಗಿ ಬಿಗಿದು ಚೀಲ ಹೊಲ ಹೊಲದಾ ।
ತಗ ತಗದು ನಿಟ್ಟ ಹಚ್ಚುವದಾ ॥

ಸೊಗಸಿಲೆ ಮನಿಗೆ ಹೊಡತಂದಾ ।
ಹಗೆ ಹಾಕುವದು ಏನ ಚಂದಾ ॥

ಮೇಘ ರಾಜನ ಉಪಕಾರದಿಂದಾ ।
ಮೃಗ ಕೀಟಕವೆಲ್ಲ ಬದಕುವದಾ ॥

**॥ಏರು॥**

ವಿಶ್ವದ ಮೂಲ ಆಧಾರ । ಪಂಚತತ್ವಸಾರ
ಮಳಿಯು ತಾಯಿಬೇರ । ಮಲಿನ ತೊಳದ ಸ್ವಚ್ಛ ಮಾಡುವ ಅಧಿಕಾರ
ಮಳಿಯಪ್ಪಗ ಕೊಟ್ಟಾನ ಜಗದೀಶ್ವರ
ಹುಲಕುಂದ ಭೀಮಕವಿ ಹೇಳಿದ ಮಜಕೂರ॥ಜೀಯ॥ಜಿ॥ಜಿ॥ ॥೧॥

***ರಚನೆ :*** ಹುಲಕುಂದ ಭೀಮಕವಿ
***ಕೃತಿ :*** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ಸಾಮಾಜಿಕ

# ೧. ಅಷ್ಟೂರ ಮಾತಿದು

**೧ನೆಯ ಚೌಕ**

ಅಷ್ಟೂರ ಮಾತಿದು ನಿಷ್ಠೂರ ಹೇಳತೀನಿ
ಬಿಟ್ಟಿಲ್ಲ ತುಂಬೀತು ಜಗವೆಲ್ಲ

ಹೊಟ್ಟಿಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ‖

ವಿಶ್ವಾಸ ಗೆಳೆತನ ಗೆಳೆತನ ವಿಶ್ವಾಸ
ಅಳೆದು ಬಳಸತಿರಿ ನೀವೆಲ್ಲ ।

ಹಿರಿಯರ ಕಿರಿಯರ ಮರಿಯಾದೆ ಉಳಿದಿಲ್ಲ
ಕಾಯ್ದೆ ಬುಕ್ಕ ಓದಿದ ಮ್ಯಾಲ ‖

ಸಾಲಿಗ್ಹಾಕಿ ಮಗನ ಶಾಣೇರ ಮಾಡತೀರಿ
ಹೆಂಡಿ ತಿನ್ನೂದು ಇವರು ಬಿಟ್ಟಿಲ್ಲ ।

ಸಾಲಿ ಕಲ್ತವರೆಲ್ಲ ಶಾಣ್ಯಾರ್‍ಯಾಕ ಆಗಿಲ್ಲ
ತಿನಲಾಕ ಮನಿಯಾಗ ಕೂಳಿಲ್ಲ ‖

ಸೆರೆಗಾರ ಅಂಗಡಿ ಶಿವನಗದ್ದುಗೀ
ನ್ಯಾಯ ನಡಿಯುದು ರಾತರಿಹಗಲ ।

ಸಿಂದಿಖ್ಯಾನ್ಯಾಗ ಮಂದೆಷ್ಟು ಇರತಾರ
ಕುಡಿವುದು ಬಿಟ್ರು ಎಮ್ಮಿಯ ಹಾಲ ‖

ಕಮಾನ ಝುಟ್ಟು ಬಿಟ್ಟು ಕಾಲಾಗ ಬೂಟ ಮೆಟ್ಟು
ಕೋಟ ತೊಟ್ಟು ಮಾಡತಾರ ಒಣಡೌಲ ।

ಹೆಂಡ್ರು ಹಾದರ ಮಾಡಿದರ ಗಂಡ ರೊಕ್ಕ ಇಸಗೋತಾನ
ಬರದೈತಿ ಅವರಿಗೇನು ಬಿಟ್ಟಿಲ್ಲ ‖

ಆನಿ ಹೋಗಿ ಉಳಿಯಿತಪ್ಪ ಬಾಲ । ನನ್ನ ಕಡಿ ನಿನ್ನ ಮೊದಲ ॥
ಉತ್ತಮರದು ಅಡಗಿತಪ್ಪ ಸಲ್ಲ । ಕೆಟ್ಟ ಮಂದಿದು ಎಷ್ಟು ಬೋಲ್ಬಲ ॥
ಈಗೈತಪ್ಪ ಇಂಗ್ರೇಜಿ ಅಮಲಾ । ಗಂಡಸೊತ್ತುದು ಹೆಂಗಸರ ಕಾಲ ॥

**।ಏರು॥**

ಹೆಣ್ಣ ಸರಕಾರ ಇದು ಮಣ್ಣಾಗ ಹಾಕಲಿ
ಸವನ ಮಾಡಿ ಇಟ್ಟೈತಿ ಎಲ್ಲಾ ಕುಲ ।

ಹೊಟ್ಟೆಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ॥

**೨ನೆಯ ಚೌಕ**

ಹರೇಬಾಜ ನಿಶೇಬಾಜ ರಾಂಡಬಾಜ
ಮೂರು ಬಾಜನಾಗ ಭಾಡ ಭಾಗಸ್ತದ ಬಿಡುದಿಲ್ಲ ।

ಭಾಗಿನಿಂದ ಮುಂದ ಬೈಲಾಗಿ ನಿಂತಿತು
ಕೂಳ ಅಂಬುದು ಆದೀತು ಬೆಲ್ಲ ॥

ಆಣಿ ಮಾಡಿ ಮಾಡಿ ದೇಣೆ ತಂದಾರಪ್ಪ
ಘಾಣ ಬರಕೊಟ್ಟಾರ ಎಲ್ಲಾ ।

ಆಣಿ ಕಾಗದ ಮ್ಯಾಲ ದೇಣೆ ಹೆಗಲ ಮ್ಯಾಲ
ಬರಕೊಂಡವರ್ಹೊಹಕೊಂಡರೆಲ್ಲ ॥

ಕುಂಡಿ ತುಂಬಿದ ಮಂದಿ ಕೂಗಿ ದೇವರ ಹೇಳಿ
ಹಿಡಿಸಿಕೊಂಡಾರಪ್ಪ ತಮ್ಮ ಕಾಲ ।

ಮನಸ್ಯಾನ ಮೈಯಾಗ ದೇವರ ಬಂದರ
ಜಗಲಿ ಮ್ಯಾಲ ಒಂದು ಇರಲಾಕಿಲ್ಲ ॥

**॥ಇಳುವು॥**

ಸತ್ತುಳ್ಳ ದೇವರು ಸಡಿಲಾದ ಕಾಲ । ಜೋಳ ಸುರುವಿ ತರ್ತಾರಪ್ಪ ಬೆಲ್ಲ ॥
ಗಂಡ ನಟ್ಟ ಕಡದು ತಂದ ಜೋಳೆಲ್ಲ । ಬೆಲ್ಲ ಆಗೂದು ಪೂಜಾರಿ ಪಾಲ ॥

**॥ಏರು॥**

ಅಲ್ಲದ ಮಾತೀಗಿ ಬೆಲ್ಲ ಕಳೀಬ್ಯಾಡ್ರೀ
ಸತ್ತ ಮ್ಯಾಲ ತಿಳಿದೀತೆಲ್ಲ ।
ಹೊಟ್ಟಿಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ॥

**೩ನೆಯ ಚೌಕ –**

ಪುಗಸಟ್ಟೆ ಪುರಾಣ ಓದಾಣ ಕಟ್ಟಾಣ
ಪಾನ ಹರದು ಪನ್ನಾಸ ಮ್ಯಾಲ ।
ಕೆಟ್ಟ ಕೆಲಸ ಮಾಡಿ ಮುಟ್ಟಿ ಓದಿದವನ
ಕಟ್ಟಿ ಕಲ್ಲ ಒಂದು ಉಳಿಯಾಕಿಲ್ಲ ॥
ಹೊಗಳಿ ಹೊಗಳಿ ಮಸ್ತ ಬೊಗಳಿ ಸತ್ತವೋ
ಹುಗುಳೂದು ಹುಟ್ಟೂದು ಬಿಟ್ಟಿಲ್ಲ ।
ಹುಟ್ಟಿ ಬಂದ ಬಳಿಕ ಹುಶಾರ ಇರಬೇಕು
ದೇಹ ಆಗಲಿ ಶಿವನ ಪಾಲ ॥

ಮೂರು ದಿನದ ಸಂತಿ ಮುನ್ನೋಡಿ ಮಾಡಿಕೋ
ಗರದಿ ನಡುದು ಮಧ್ಯಾನ ಮ್ಯಾಲ ।
ಸಂಜಿ ಆದಂಗ ಒಂದು ಗುಂಜಿ ಇರಲಾಕಿಲ್ಲ
ಖಾಲೇ ಮಾರಿ ಆದವೊ ಚೀಲ ॥

**||ಇಳುವು||**

ಜಮಾಖರ್ಚು ಮಾಡತಾರ ಮ್ಯಾಲ । ಕಾಣಿದ್ರ ಕಟ್ಟತಾರ ಕಲ್ಲು
ತೇರದಾಳ ಪ್ರಭು ನಿನ್ನ ಕೀಲ । ನರಕಾಗೂದು ಬಿಡಲಾಕಿಲ್ಲ ॥

**||ಏರು||**

ಗೋಪಾಲ ದುರದುಂಡಿ ಕರೆದು ಹೇಳತಾರ
ಅಂಜಬ್ಯಾಡ್ರಿ ಇರತೇವು ಬೆನ್ನ ಮ್ಯಾಲ ।
ಹೊಟ್ಟಿಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ॥

*ರಚನೆ :* ಗೋಪಾಲ ದುರದುಂಡ
*ಕೃತಿ :* ಜೀವನ ಸಂಗೀತ

# ೨. ಒಕ್ಕಲುತನ ಲಾವಣಿ

ನಾಡದೇವಿ ನಿನಗ ಶರಣು ಮಾಡುವೆನು | ಕೂಡಿದಂತ ಸಭಾದೊಳಗ ಹಾಡುವೆನು |
ನಾಡ ತರುಣರೊಳು ಐಕ್ಯ ಬೇಡುವೆನು | ನಾಡಕಷ್ಟದೂಡಿರಂತ ಹೇಳುವೆನು||ಪ||

ವಂದನ ವಂದನ ನಾಡಬಾಂಧವರೆ | ವಂದನ ವಂದನ ಅಂಣ ತಮ್ಮಂದಿರೇ |
ವಂದ ವಂದನ ಅಕ್ಕ-ತಂಗಿಯರೇ | ವಂದನ ವಂದನ ಹಿಂದು-ರಾಷ್ಟ್ರೀಯತೇ||೧||

ರೈತ ಸಭೆಯೊಳಿಂದು ಒಂದು ಹಾಡುವೆನು | ರೈತ ರಾಜ್ಯದೊಡೆಯನೆಂಬ ತತ್ವವನು |
ರೈತನಿಂದ ಲೋಕವೆಲ್ಲ ನಡೆವುದನು | ರೈತಗೈಯ್ವ ಭೂಮಿ ಕರ್ಮ ಭೋಗವನು||೨||

ಭಾರತ ರಾಜ್ಯವೀಗ ಸ್ವಾತಂತ್ರವಾಯ್ತು | ಪಾರತಂತ್ರ ಕಡಿದು ಸ್ವರಾಜ್ಯ ಬಂತು |
ಘೋರ ಯುದ್ಧಸಾಗಿ ಹೊಟ್ಟೆಗಿಲ್ಲದಾಯ್ತು | ಮಾರಿಯಾಗಿ ಕೊಲ್ಲುದಕ್ಕ ಕಂಟ್ರೋಲಬಂತು||೩||

ಕಾಲಚಕ್ರ ತಿರುಗಿ ಹಿಂದುಸ್ತಾನದಾಗ | ನಲವತ್ತು ಕೋಟಿ ಜನಸಂಖ್ಯಾ ಈಗ |
ಸಾಲುದಿಲ್ಲ ಭೂಮಿ ಬೆಳೆದ ಧಾನ್ಯನಮಗ | ಏಳಬೇಕು ರೈತ ಕೈಯ್ಯ ಮುಗಿವೆ ನಿನಗ||೪||

ಒಕ್ಕಲುತನವ ಬೆಳಿಸೋಬೇಗ ನೇಗಿಲಯೋಗಿ | ಟ್ರ್ಯಾಕ್ಟರ ಹೊಡೆದು ಭೂಮೀ ಹಸನಮಾಡಲಾಗಿ |
ತಕ್ಕ ಕಾಂಪೋಸ್ಟ ಗೊಬ್ಬರ ಹಾಕಲಾಗಿ | ಲೆಕ್ಕ ತಪ್ಪಿ ಬಂದ ಬೆಳೆಯ ನೋಡೋ ತೂಗಿ||೫||

ಮಂಣ ಬಂಗಾರ ಮಾಡುವಂತ ಗೊಬ್ಬರವು | ಮಂಣಗೂಡಿ ಬೆಳೆದ ಬೆಳೆಯ ಅಬ್ಬರವು |
ಮಂಣು ಬೆಳೆದರಿಲ್ಲ ಲೋಕದಲ್ಲಿ ಬರವು | ಮಂಣಿನಲ್ಲಿರುವ ಹೊನ್ನು ಹೆಂಣಿನಿರವು||೬||

ಗೊಬ್ಬರ ಗೊಬ್ಬರವೆ ಕಲ್ಪತರವು | ಗೊಬ್ಬರ ಗೊಬ್ಬರ ಬೇಡಿದಂತ ವರವು |
ಗೊಬ್ಬರ ಗೊಬ್ಬರ ಬೆಳ್ಳಿ ಬಂಗಾರವು||೭||

ಆರಿಸಿ ತೆಗೆದ ಬೀಜವನ್ನು ಬಿತ್ತಬೇಕೋ | ಹೋರಿ ಬೀಜಕ ಬಿಟ್ಟು ಆಕಳು ಕಟ್ಟಬೇಕೋ |
ನೂರಾ ಎಂಟು ಎಂಟರ ಗೋಧಿ ಬಿತ್ತಬೇಕೋ | ಪೂರಾ ಪೂರಾ ಬೆಳೇಯ ಕಂಡು ಹಿಗ್ಗಬೇಕು ||೮||

ಭಾವಿಗಾಗಿ ಸಬ್‌ಸೀಡಿಯ ಪಡೆಯಬೇಕೋ | ತ್ಯಾಂವದಾಗ ಕೋಯಿಮತ್ತೂರ
ಕಬ್ಬು ಹಚ್ಚಬೇಕೋ
ಹೂವು-ಕಾಯಿ ಬಿಟ್ಟ ಬಳ್ಳಿ ನೋಡಬೇಕೋ | ಸೇವ ಲಿಂಬಿ ಬಟಾಟಿ ಗೆಣಸು
ಬೆಳೆಯಬೇಕೋ ||೯||

ಹೊಸದಾಗಿ ಭೂಮಿ ಬದುಕು ಮಾಡಿದಾಂಗ | ಹೊಸದಾಗಿ ಮಡದಿ ಮುಖ ನೋಡಿದಾಂಗ |
ಹೊಸ ಮಾದರಿಯ ಪೈರು ಬೆಳಸಿದಾಂಗ | ಹೊಸ ಲಾಭ ನಮಗ ದೊರಕಿದಾಂಗ||೧೦||

ಬೆಂಡಿ ಹೀರಿ ಚವಳಿಕಾಯಿ ಪಲ್ಲೇಗಳ । ದುಂಡಲಿಂಬಿ ಪೇರಲ ಬಾಳಿ ತೋಟಗಳ ।
ಕಂಡಾಂಗ ಬಲಿಸಿ ನಮ್ಮ ನಾಡಬಾಳ । ಉಂಡುಟ್ಟು ಮೆರೆಯಲಿ ರೈತ ಮೇಲ॥೧೧॥

ಬಾಳ ಬುದ್ಧಿವಂತ ಲಾರ್ಡ ಬಾಯಿಡ್ ಭಲಾ । ಹೇಳಿದನು ಭೂಮಿಯಲ್ಲಿ ಕೃಷಿವಲಾ ।
ನಾಳಿಗಿರಲಿ ರಾಜಕಾರಣ ಊಳೋ ನೆಲಾ । ಮ್ಯಾಲೆ ಯಾವುದಿಲ್ಲ ಇದಕೂ ಶ್ರೇಷ್ಠ ಫಲ॥೧೨॥

ಗಾಂಧಿ ಒಂದು ಮಾತಿನಿಂದ ಗರ್ಜಿಸಿದ । ಹಿಂದುಸ್ತಾನಕೆಂದು ರೈತ ಮಂತ್ರಿಯಾದ ।
ಎಂದು ಅವನ ಕಾರ್ಯದರ್ಶಿ ನೇಹರೂ ಆದ । ಅಂದು ನಮ್ಮ ಸ್ವಾತಂತ್ರ ಸಿದ್ಧಿಯೆಂದ॥೧೩॥

ತಂದೆ-ತಾಯಿ ಆಪ್ತ ಬಂಧು ಬಳಗ ರೈತ । ಇಂದ್ರ-ಚಂದ್ರರಂತೆ ಲೋಕ ಬೆಳಗುವಂಥ ।
ಹಿಂದೂ-ಮುಸ್ಲಿಮರೊಂದುಗೂಡುವಂತ । ಮುಂದೆ ಬರಲಿ ಭಾಗ್ಯ ಕವಿತೆ ಹಾಡುವಂತ॥೧೪॥

ಅಳಿದ ಕಂಟ್ರೋಲಿನ ಕಾಲ ಮತ್ತೆಬಂತು । ಹಳೆಯ ಕಳ್ಳ ಪ್ಯಾಟಗೀಗ ದೊಡ್ಡ ಕುತ್ತು ।
ತಿಳಿದನಡದರ ಹೋಳಿಗಿ - ತುಪ್ಪದಾಗ ಬಿತ್ತು । ಕಳವಿಗೆ ಮೂರು ವರ್ಷ
ಶಿಕ್ಷೆಮಂಣ ಹೊತ್ತು ॥೧೫॥

ಕಾಳ ಕಡಿ ಆಹಾರ-ಧಾನ್ಯ ಬೆಳೆಯಿರೀಗ । ಹಾಲು-ತುಪ್ಪ ಕೈಯ್ಯ ತೊಳೆಯಿರೀಗ ।
ತಾಳಗೆಟ್ಟು ತಿನ್ನಬ್ಯಾಡ್ರಿ ವ್ಯಾಪಾರದಾಗ । ಕೀಳತನಕ ಬೀಳಬ್ಯಾಡ್ರಿ ಲೋಕದಾಗ॥೧೬॥

ಒಕ್ಕಲುತನದ ಮಂತ್ರಿ ಎಮ್.ಪಿ.ಪಾಟೀಲರು । ಚೊಕ್ಕ ಮಾತಹೇಳಿ ದಾರಿ ಹಿಡಿಸುವರು ।
ಹಕ್ಕಿನಿಂದ ಭೂಮಿ ಬಲಗೊಳಿಸುವರು । ರೊಕ್ಕ ಬೇಕಂದ್ರ ನಿಮಗ ಕೊಡಿಸುವರು॥೧೭॥

ನಾಡ ನುಡಿಯ ಹಾಡಕೇಳಿ ಸರ್ವಜನಾ । ಮಾಡಬೇಕು ಒಕ್ಕಲುತನ ಸುಧಾರಣ ।
ನಾಡಕವಿ ಶ್ರೀಕಂಠನ ಕವನ । ನಾಡಿಗಾಗಲೀ ದಿವ್ಯ ದರ್ಶನ॥೧೮॥

*ರಚನೆ :* ನಲವಡಿ ಶ್ರೀಕಂಠಶಾಸ್ತ್ರಿ
*ಕೃತಿ :* ರಾಷ್ಟ್ರಗೀತಾವಳಿ

## ೩. ಬರತಾಳು ಮಹಾಮಾರಿ

ಕುಂತ ಸಭಾದಾಗ । ನಿಂತು ಹಾಡುವೆ ಮತಿ । ವಂತ
ಹಿಂದು ಬಂಧೂ ಬಳಗಕ್ಕ । ನೀತಿವಂತರಾಗಲೆಂದು
ಪಾದಕ್ಕ । ಕೈ ಮುಗಿದು ಬೇಡುವೆ ಎಲ್ಲ ದೈವಕ್ಕ ॥
ಮಧ್ಯಪಾನ ಮಾಡಬಾರದಂತನಾ । ಸಾರೀ ಹೇಳುವೆ
ಹುಟ್ಟಿ ಬಾಳೂದಕ । ಪಾಪ ಕೀಳೂದಕ॥೧॥

ಕುಡಿದು ಕುಡಿದು ಎದೆಯೊಡೆದು ಸಾಯುತೀರಿ । ಮಡದೀ
ಮಕ್ಕಳ ಗೋಳಾಟಕ್ಕ । ನೀವು ಎಡೆಯಾಗುತೀರಿ
ಯಮಲೋಕಕ್ಕ । ಮುಂದ ನಡದು ಹೋಗತೀರಿ ನರಕಕ್ಕ ॥
ಮಾಡಬಾರದಂತ ಪಾಪಮಾಡಿ ಕಷ್ಟಪಡೆಯತೀರಿ ।
ನಡತಿ ಬಿಟ್ಟಿದ್ದಕ । ಕುಡದು ಕೆಟ್ಟದ್ದಕ॥೧॥

ಮಧ್ಯ ಕುಡದು ಮಾನಾ ಕಳಕೊಳ್ಳತೀರಿ
ಮನಬಂದ ಹಾಂಗ ನೀವು ಮಾತಾಡಿ ।
ಎದ್ದು ಜೋಲೀ ಹೊಡೆಯುತೀರಿ ಹೊಯ್ದಾಡಿ ।
ಬುದ್ಧಿಗೆಟ್ಟು ಬೊಗಳತೀರಿ ಬೈದಾಡಿ ।
ಸುದ್ಧ ಮಂಗನಾಂಗ ಮಾಡತೀರಿ ನಿಮಗ । ನಾಚಿಕಿಲ್ಲ
ಹೆಂಡ ಕುಡದ್ದಕ । ಭಂಡರಾದದ್ದಕ॥೩॥

ಕರಳ ಕೊರದು ತೂತು ಕೆಡುಹುವಂತ ಭಟ್ಟಿ । ಶರೇ
ಕುಡಿಯುತೀರಿ ಮಿತಿಮೀರಿ । ಹೊಟ್ಟಿ ಮುರಿದು
ಹೊಯ್ಯಕೊಂತೀರಿ ಕೈಮೀರಿ । ನಿಮ್ಮನ್ನ ಕರಿಯಾಕ
ಬರತಾಳು ಮಹಾಮಾರಿ ॥
ಎವ್ವಾ ಸಾಯಲಾರೆ ಎಪ್ಪಾ ಸಾಯಲಾರೆ ಎಂದು
ಹೊಯ್ಯಕೊಂತೀರಿ ಹೌಹಾರಿ । ಸುಡಗಾಡದಾರಿ॥೪॥

ಬಟ್ಟಿಯೊಳಗ ಬೆಂಕಿ । ಕಟ್ಟಿದಾಂಗ ನೀವು ।
ಭಟ್ಟೀಶೆರೆ ಕುಡದರಾಗೂದು ।
ಎದಿಸುಟ್ಟ ಸುಂಣದಾಂಗ ಬೇವೂದು ॥
ಅನ್ನ ತಿಂದು ವಾಂತಿ ಮಾಡಿಕೊಳ್ಳುದು ॥
ಘಟ್ಟಿ ಮಾತು ಎದಿತಟ್ಟಿ ಹೇಳುವ ಲಂಕಿ ।
ಸುಟ್ಟಾಂಗ ಮೈ ಸುಟ್ಟ ಹೋಗುವುದು । ಹಾಳಾಗುವುದು॥೫॥

ಕೆಟ್ಟ ಶರೇ ಕುಡದ ಜನ । ಕೆಟ್ಟ ಹೋಗಬಾರದಂತ
ಗುಟ್ಟ ಒಡದ ಹೇಳತೇನಿ ಲೋಕಕ್ಕ ।
ಬ್ರಹ್ಮ ಹುಟ್ಟಿಸಿಲ್ಲ ಮಧ್ಯಪಾನ ಮಾಡುದಕ ।
ಅದು ನಟ್ಟ ನಡುವೆ ಬಂದೈತಿ ಒಯ್ಯಾಕ ॥
ಕೆಟ್ಟ ಶೆರೇ ನಮ್ಮ ಹೊಟ್ಟೆಯೊಳಗ ಹೊಕ್ಕು ।
ಮಡದೀ ಮಕ್ಕಳನ್ನ ಕೊಲ್ಲುದಕ । ಹೊರ ಚೆಲ್ಲುದಕ॥೬॥

ಸಾವಿರಾರು ಮಂದಿ ಶೆರೇ ಕುಡದು ।
ಸಾಯತಾರು ಇಪ್ಪತ್ತು ಮೂವತ್ತು ವರ್ಷಕ್ಕ ।
ಸಾವಿಗೆ ತುತ್ತಾಗತಾರ ಸುಡಗಾಡಕ ।

ಶೆರೇ ಹುಟ್ಟೇತಿ ಲೋಕ ಸಂಹಾರಕ್ಕ ॥
ಕಂಣ ಮುಟ್ಟ ನೋಡಿ ನೋಡಿ ।
ಬೆನ್ನ ಹತ್ತಬ್ಯಾಡ್ರಿ ನಿಮ್ಮನ್ ಕೊಲ್ಲಾಕ ಬಂದ ।
ಮಧ್ಯಪಾನಕ್ಕ । ಪ್ರಾಣ ದಾನಕ್ಕ॥೭॥

ಕಡೆಯ ಮಾತ ಹೇಳತೇನಿ । ಕುಡಿಬ್ಯಾಡ್ರೆಂತ ನಾನು
ಸಿಡಿಲ ಬಡದ ಮರದಾಂಗ ದೇಹಕ್ಕ ।
ಕುಡದವರ ನಾಶ ಮಾಡುವಂತ ಮಧ್ಯ ಮೋಹಕ್ಕ ।
ಯಾರು ಬೀಳಬ್ಯಾಡ್ರಿ ಸರ್ವ ನಾಶಕ್ಕ ॥
ಭರತ ಖಂಡದಾಗ ನೀವು । ಮರಳಿ ಹುಟ್ಟಾಕ
ಹುಲ್ಲಲ್ಲಿ ಹುಟ್ಟಿ ಬರೂದಕ । ಜನ್ಮ ತರೂದಕ

*ರಚನೆ :* ನಲವಡಿ ಶ್ರೀಕಂಠಶಾಸ್ತ್ರಿ
*ಕೃತಿ :* ಧರ್ಮದ್ರೋಹ

## ೪. ಮಾಡಬ್ಯಾಡ್ರಿ ಮದ್ಯಪಾನ

ಮದ್ಯಪಾನ ಮಾಡಬಾರದಂತ ।
ಮಾಡಿದರ ಬಾಳ ಕೆಡಕಂತ ॥
ಸಿಂದೀ ಶೆರೇ ಕುಡಿಯಬಾರದಂತ ।
ಕಾಯ್ದೆ ಆಗೇತಂತ । ಮೂರು ವರುಷಂತ ॥
ಕುಡದವಗ ಶಿಕ್ಷೆ ಅದಕಂತ॥೧॥

ಶೆರೇ ಮಾರೀ । ಹೊಲಮನಿ ಮಾರಿ
ಮಾರಿಸತಾಳ ವೈರಿ । ನೆತ್ತರಾ ಕಾರಿ ॥
ಕೊಲ್ಲುದಕ ಲೋಕ ಸಂಹಾರೀ॥೨॥

ಮಿತಿಮೀರಿ ಕುಡದು ಮತಿಗೆಟ್ಟು ।
ಕರಳು ಎದೆಸುಟ್ಟು । ಸಾಯುತೀರಿ ಬಿಟ್ಟು ॥
ಹೆಂಡರ ಕೈಯಾಗ ಪರಟಿಯ ಕೊಟ್ಟು॥೩॥
ಶೆರೇ ಕುಡದು ಹಿಡಿದು ಅಡ್ಡದಾರೀ ॥
ಗಟಾರದಾಗ ಹಾರಿ । ನೆತ್ತರಾ ಸೋರಿ ॥
ಹಣಿಪಟ್ಟಿ ಕಟ್ಟಿಕೊಳ್ಳತೀರಿ॥೪॥

ಮಾನಗೆಟ್ಟ ಮಾಡತೀರಿ ಹ್ಯಾಂಗ ।
ಸುದ್ದ ಮಂಗನಾಂಗ । ಮನಕ ಬಂದಾಂಗ ॥
ನೋಡಬೇಕ ಕುಡದಾಗಿನ ರಂಗ॥೫॥

ಸರಕಾರ ಮಾಡಿದಂತ ಕಟ್ಟ ।
ಕೇಳ್ರಿ ಕಿವಿಮುಟ್ಟ । ಇನ್ನು ಪಣತೊಟ್ಟ ॥
ಬಿಡದಿದ್ರ ಜೇಲು ಗಟ್ಟಿಮುಟ್ಟ॥೬॥

ಹೊಸರಾಜ್ಯ ಬಂತು ಸ್ವರಾಜ್ಯ ।
ಮದ್ಯಪಾನ ತ್ಯಾಜ್ಯ ಮಾಡಬೇಕಂತ ॥
ನಿರ್ಬಂಧಕಾಜ್ಞೆ ಆತಂತ॥೭॥

ಕುಡದ ಒಬ್ಬ ಡ್ರಾಯವ್ಹರ ಗಾಡೀ ಬಿಟ್ಟ ।
ಗಿಡಕ ಓದಿಟ್ಟ । ಎಲ್ಲರ ಕೊಂದಿಟ್ಟ ।
ಕಾಜನಟ್ಟು ಎದ್ಯಾಗ ಪ್ರಾಣಬಿಟ್ಟು॥೮॥

ಬಸರಿದ್ದ ಹೆಂಡತಿ ಮನೆಯಾಗ ।
ಕುಡದು ಬಂದನಾಗ । ಬಡಿದ ಬೆನ್ನಮ್ಯಾಗ ॥
ಬಸರ ಬಿಚ್ಚಿ ಬಿತ್ತ ಭೂಮಿಮ್ಯಾಗ॥೯॥

ಕೈಮುಗಿದು ಹೇಳುವೆ ಕುಡಕರಿಗೆ ।
ಕುಡಿಯಬ್ಯಾಡ್ರಿ ಮರೀಗೆ । ಕದ್ದು ಕುಡಿವರಿಗೆ॥
ಬಿಟ್ಟಿದ್ದಲ್ಲ ಕಬ್ಬಿಣದ ಸರಿಗೆ॥೧೦॥

ಹಿಂದುಸ್ತಾನ ಸುಧಾರಿಸಲಂತ ।
ಕಾಯ್ದೆ ಮಾಡ್ಯಾರಂತ । ಕುಡಿಯಬ್ಯಾಡ್ರೆಂತ ॥
ಗ್ರಾಮವಾಣೀ ಲಾವಣಿ ಸರಸಂತ॥೧೧॥

*ರಚನೆ :*  ನಲವಡಿ ಶ್ರೀಕಂಠಶಾಸ್ತ್ರಿ
*ಕೃತಿ :* ಧರ್ಮದ್ರೋಹ

## ೫. ಅಸ್ಪೃಶ್ಯತ ನಿವಾರಣೆ ಲಾವಣಿ

ಹಿಂದುದೇಶ ಉದ್ಧಾರಮಾಡಿದಂತ। ಗಾಂಧೀ-ಮಹಾತ್ಮನ ಪಾದಕ್ಕ ।
ನಾ ವಂದಿಸುವೆ ಹಿಂದು-ಬಂಧು ಬಳಗಕ್ಕ । ಆನಂದದಿಂದ ಕುಂತು ಎಲ್ಲದೈವಕ್ಕ ॥
ಹಿಂದೂಸ್ತಾನದಾಗ ಮುಟ್ಟಬಾರದ ಕುಲ । ಹುಟ್ಟೇ ಇಲ್ಲ ತಿಳಿಸೂದಕ । ಹೊಲಿ ಕಳಸೂದಕ ॥
ಹರಗೀಗಾ ॥೧॥

ಮುಟ್ಟೇರಿ ಗಿಟ್ಟೇರಂತ ಮುರಕಾ ಮಾಡತೀರಿ । ಹೊಟ್ಟೆಯೊಳಗಿದ್ದ ಮಲಮೂತ್ರಕ್ಕ ।
ನೀವು ಕಟ್ಟುಮಾಡುದಿಲ್ಲ ಹೊರಾಗ ಬರಾಕ । ಕೈಮುಟ್ಟಿ ಮುಟ್ಟಿ ತೊಳಿತೀರಿ ಶೌಚಕ್ಕ ॥

ಹುಟ್ಟಿ ಬಂದದ್ದು ಹೊಲಿ | ಗಟ್ಟಿಗೊಂಡಿದ್ದು ಹೊಲಿ | ಮುಟ್ಟಿಯಿಲ್ಲ ನಮ್ಮ ಮಾನವ ಕುಲಕ |
ಹಿಂದು ಧರ್ಮಕ್ಕ ‖೧‖

ಸೃಷ್ಟಿ ಮಾಡುವಾಗ ಬ್ರಹ್ಮ ಹುಟ್ಟಿಸಿದ ಹೆಂಣು-ಗಂಡು | ಒಟ್ಟುಗೂಡಿ ಮಾಡಿದ ಸಂಸಾರ |
ಜಗಹುಟ್ಟಿ ಆಯ್ತು ಕುಲ ಗೋತ್ರ ವಿಸ್ತಾರ | ಮನಮುಟ್ಟಿ ಮಾಡಿದಂತ ಈ ಅವಿಚಾರ ‖
ಒಟ್ಟಿನಲ್ಲಿ ಹೊಲಿ-ಜಾತಿ ನಟ್ಟನಡುವೆ ಹುಟ್ಟಿಬಂತು | ಮೊಟ್ಟಮೊದಲು ಇದ್ದಿಲ್ಲ ಮುಟ್ಟದವರ |
ಹುಟ್ಟಿಬಂದವರ ‖೩‖

ಸಾವಿರಾರು ವರುಷದಿಂದ ಹೊಲಿಯರಂತ ಹೊರಗಟ್ಟಿ | ಎತ್ತಿ ಹಣಸತೀರಿ ನೀವು ಕೆರಿ ನೀರ |
ಅವರು ಅತ್ರುಕೇಳೂದಿಲ್ಲ ನೀವೊಬ್ಬರ | ನಿಮ್ಮ ಎತ್ತು, ಎಮ್ಮಿ ಸತ್ರ ಅವರು ತಯ್ಯಾರ ‖
ಹೊತ್ತುಕೊಂಡು ಹೋಗಿ ನಿಮಗ ಜತ್ತಿಗಿ ಮಿಣಿ ಮಾಡಿಕೊಟ್ರ | ಕುತ್ಗಿ-ಕೊಯ್ದು ಬಿಟ್ರ ನೀವು
ಹರಿಜನರ | ಮುಟ್ಟಿದಲೆ ಅವರ ‖೪‖

ಬುದ್ಧ ಬಸವ ಮಹಮ್ಮದ ಪೈಗಂಬರ | ಹುಟ್ಟಿದಾಗಿಲ್ಲಂತ ಹೊಲಿಜಾತಿ |
ಅವರು ಗಟ್ಟಿ ಹೇಳಿದ ಧರ್ಮ ನೀತಿ | ನಡತಿ ಬಿಟ್ಟ ಜನ ಕೆಟ್ಟ ಹಾದಿ ಹಿಡಿದೈತಿ |
ಮೊಟ್ಟ ಮೊದಲು ಹರಿಜನರ | ಮುಟ್ಟಿ ದಯತೋರುವಂಥ | ಶ್ರೇಷ್ಠವಾದ ಭಾರತ ನೀತಿ |
ಬಾಂಧವ ಪ್ರೀತಿ ‖೫‖

ಯಾರಕರ್ರಗ | ಯಾರ ಬೆಳ್ಳಗ | ಎಲ್ಲ ಮಂಣಿನ ಮಡಕಿ | ಜಾತಿಯಿಲ್ಲಂತ ಗುರುನಾನಕ |
ಸತ್ಯ ಸಾರಿ ಹೇಳಿದ ಸರ್ವ ಲೋಕಕ್ಕ | ಕಿತ್ತು ಹಾಕಿಬಿಟ್ಟ ಜಾತಿಯತತ್ವಕ್ಕ |
ಕತ್ತಿಹಾಂಗ ಬೆನ್ನಹತ್ತಿ | ಕಪ್ಪಹಚ್ಚ ಬ್ಯಾಡ್ರಿ ನಮ್ಮ | ಉತ್ತಮ ಹಿಂದೂ ಧರ್ಮಕ್ಕ |
ಕುಲ ಕರ್ಮಕ್ಕ ‖೬‖

ಮುತ್ತು ಚಿಪ್ಪಿನಲ್ಲಿ ಹುಟ್ಟಿ ಮೂಗುತಿಯಾಯಿತು | ರತ್ನಕಲ್ಲು ಮಂಗಲ ಪದಕ |
ಹುಟ್ಟು ಕಾರಣವಲ್ಲ ಹೊಲಿಯರ ಕುಲಕ್ಕ | ಮುಟ್ಟು ಇಲ್ಲ ನಮ್ಮ ಹರಿಜನಕ್ಕ |
ಮುಟ್ಟಿನಲ್ಲಿ ಹುಟ್ಟಿ ಬಂದ ಪಿಂಡಾಂಡ ಬ್ರಹ್ಮಾಂಡ | ಸೃಷ್ಟಿಸಿದ ಬ್ರಹ್ಮ ಮುಟ್ಟೂದಕ |
ಹೊಲಿ ಅಟ್ಟೂದಕ ‖೭‖

ರಕ್ತ-ಮಾಂಸ ಮಜ್ಜಾಸ್ಥಿ ರೋಮ ತೊಗಲು ಮೂಳೆ | ತಾಯಿ ಗರ್ಭದಲ್ಲಿ ಬೆಳೆದ ಪಿಂಡಾಂಡ |
ಹೊರಗಬಿದ್ದ ಮ್ಯಾಲೆ ಆಯ್ತು ಈ ಬ್ರಹ್ಮಾಂಡ | ಕುಲಹದಿನೆಂಟು ಭಾರತ ಭೂಖಂಡ ‖
ಮೈಲಿಗಿ ಅನ್ನುವವರು ಎಲ್ಲಿ ಹುಟ್ಟಿಬಂದ್ರು ಕೇಳ್ರಿ | ಹುಟ್ಟಿಲ್ಲೇನೋ ತಾಯಿ ತಂದಿ ರಕ್ತಕ್ಕ ಮುಟ್ಟ ಅನ್ನೂದಕ ‖೮‖
ವ್ಯಾಸ ಬೋಯತಿಮಗ | ದುರ್ವಾಸ ಮಚ್ಚಿಗ ಕೌಶೀಕ ಕೌಂಡಿನ್ಯ ನಾರದ |
ಋಷಿ ಕಶ್ಯಪ ಕಮ್ಮಾರ ತಾನಾದ ಮುನಿ ಶಾಂಡಿಲ್ಯ ಕುಲದಿಂದ ನಾಯಿದ |
ಕೊಲ್ಲುವವ ಮಾದಿಗ | ಹೊಲಸು ತಿನ್ನುವವ ಹೊಲೆಯ | ಮುಟ್ಟಿದ ಬಸವೇಶ್ವರ
ಅಸ್ಪೃಶ್ಯರ ‖೯‖

ಮಚಿಗಾರ ಹರಳಯ್ಯ ಮಾದಾರ ಚೆನ್ನಯ್ಯ | ಶಿವಶರಣ ಕಕ್ಕಯ್ಯಡೋಹರ |
ಬಿಟ್ಟ ಎಡೆಯನುಂಡ ಬಸವೇಶ್ವರ | ಮುಟ್ಟು ಮೈಲಿಗಿ ಕಳೆದ ಶಿವಭಕ್ತರ |
ಮಧುವಯ್ಯ ಹರಳಯ್ಯ ಹಾರೂರ ಮಚಿಗಾರ | ಮದಿವಿ ಮಾಡಿಸಿಬಿಟ್ಟ ಅಸ್ಪೃಶ್ಯರ|
ಮುಟ್ಟಿ ಅನ್ನುವವರ ॥೧೦॥

ಜಾತೀ ಭೂತವನ್ನು ಹೊಡೆದು ಅಟ್ಟಿದರು | ಖ್ಯಾತಿವಂತ ಗಾಂಧಿ ಮಹಾತ್ಮರು |
ಹಿಂದೂ-ಮುಸ್ಲಿಮರೊಂದಾಗಿರೆಂದರು | ಅದಕಾಗಿಯೇ ಅವರನ್ನು ಕೊಂದರು |
ಸಿಂದೀ-ಶೆರೇ ಕುಡದು ಕುಲಕುಲ ಅಂತೀರಿ | ತಿಳಿದು ನಡೆಯಬೇಕ್ರಿ ಮುಂದಾದರು
ಹಿಂದು ಬಾಂಧವರು ॥೧೧॥

*ರಚನೆ :* ನಲವಡಿ ಶ್ರೀಕಂಠಶಾಸ್ತ್ರಿಗಳು
*ಕೃತಿ :* ರಾಷ್ಟ್ರಗೀತಾವಳಿ

## ಪುಣ್ಯಪುರುಷರು

### ೧. ಏಸುಕ್ರಿಸ್ತನ ಚರಿತ್ರೆ

ನಿರಾಕಾರ ರೂಪೀದೇವನೆ ನರನ ರೂಪ ಧರಿಸಿ ಧರೆಯ
ನರರು ಮಾಡಿದ ಪಾಪಕರ್ಮದ ಕಟ್ಟಿನ ಫಲವನ್ನು |
ಮಾಡಿದ ಪಾತಕಿ ತಪ್ಪನು ಒಪ್ಪಿ ಬೇಡಿದ ಕ್ಷಮೆಯ ಜನರನು ಅಪ್ಪಿ
ತಾನೇ ಭೋಗಿಸಿ ಮರಣವನಪ್ಪಿದ ಏಸುಕ್ರಿಸ್ತನು ॥ ೧ ॥

ಮೇರಿ ಎಂಬುವ ಮಹಾತಾಯಿಯ ವರಿಸಲು ಒಪ್ಪದ ಜೋಸಫ
ಮಹಿಮನ ಮದುವೆಯ ಮೊದಲೇ ಏಸುಕ್ರಿಸ್ತನ ಜನ್ಮಯೋಗವನು |
ಜನರುದ್ಧಾರಕೆ ಜನಿಸುವನೆಂದು ಜಗದ ಜನಕೆ ಇದೇ ಗುರ್ತೆಂದು
ಕೋಟಿ ಸೂರ್ಯರ ಮಿಂಚಿನ ಪ್ರಭೆಯನು ಬೆಳಗಿಸಿ ಭೂಮಿಯನು ॥ ೨ ॥

ಮೇರಿ ಜೋಸಫ ದಂಪತಿ ಮನದಿ ವಿರಸವಾಗದ ತೆರದಿ ಜಗದ
ಜನಕೆ ತಿಳಿಯುವಂತೆ ಮಾಡಿ ಆಕಾಶವಾಣಿಯನು |
ಪರಿಶುದ್ಧಾತ್ಮಕ ಗರ್ಭದಿಂದ ಧರೆಗೆ ಜನಿಸಿ ಬರುವನೆಂದು
ಕರ್ತೃ ಏಸುಕ್ರಿಸ್ತನೆ ಸಾರಿದ ನಂಬಿಗೆ ತತ್ವವನು ॥ ೩ ॥

**॥ಚಾಲ॥**

ದಾವದ ವಂಶದರಸನು | ಜನತೆಯ ಜನನವನು |
ಬರೆಯಲ್ಕೆ ಹಳ್ಳಿಗಟ್ಟಿದನು | ಮೇರಿ ಜೋಸಫ ದಂಪತಿಗಳನು ‖ ೧ ‖

ದಿನ ತುಂಬಿದ ಹೆಂಡತಿಯನು | ಕೂಡಿ ಹೋಗಿಹನು |
ಬೆತ್ಲೆ ಹೇಮಿಗೆ ಹೋಗಿ ಮುಟ್ಟಿದನು | ದನದ ಹಕ್ಕಿಯಲಿ ಇಳಿದಿಹನು ‖ ೨ ‖

ಅರ್ಧರಾತ್ರಿ ಅಲ್ಲಿ ಕಳೆದಿಹನು | ಏಸು ಜನಿಸಿದನು |
ಆಗ ತಂದೆ ಕಂಡಿಹನು | ಪ್ರಜ್ವಲಿಪ ನಕ್ಷತ್ರವನು ‖ ೩ ‖

**||ಏರು||**

ನಕ್ಷತ್ರ ಹುಟ್ಟಿದ ಲಕ್ಷಣ ನೋಡಿ | ಲೆಕ್ಕ ಹಾಕಿ ಭವಿಷ್ಯ ಕೂಡಿ |
ಪಂಡಿತರ್ಥೇಳ್ಯಾರ ಮಹಾತ್ಮಾ ಏಸುಕ್ರಿಸ್ತನು ಹುಟ್ಟಿದನು ‖ ೧ನೆಯ ಚೌಕ ‖
ತಾರಾ ಜ್ಯೋತಿಯ ಪ್ರಖರತೆ ಬೆದರಿ | ಕುರಿಕಾಯುವ ಕುರುಬರು ಹೆದರಿ |
ಎದೆಯೊಡೆದು ಗಾಬರಿಯಾಗಿ ಒಡಲು ನಿಂತಿಹರು |
ಸರ್ವರಕ್ಷಣೆ ಮಾಡುವ ಗುರುವೆ | ದಾವದ ರಾಜನ ಮನೆತನದಲ್ಲಿ |
ಹುಟ್ಟಿದನೆಂಬ ದೂತನ ಮಾತಿಗೆ ದಂಗ ಬಡಿದಿಹರು ‖ ೧ ‖

ಸುರಸ ಲೋಕದ ದೇವನೆ ಬಂದು | ನರರ ಲೋಕದ ಜೀವಿಯು ಆಗಿ |
ಧರೆಗೆ ಬಂದ ಸುದ್ದಿಯ ಕೇಳಿ ಕುರುಬರು ಹಿಗ್ಗಿದರು |
ಬರೇ ಅನ್ನುವ ಮಾತಿಗೆ ಕುರುಬರು | ಕುರಿ ಮರಿ ಕಾಣಿಕೆ ತಂದು |
ಕೊಟ್ಟಿಗೆಯಲ್ಲಿ ಬಟ್ಟೆ ಸುತ್ತಿದ ಕೂಸಿನ ನೋಡಿದರು ‖ ೨ ‖

ದೂರದವರೆಗೆ ಸುದ್ದಿಯು ಹೋಗಿ | ಜರೂಸಲೇಮದ ರಾಜಗೆ ತಾಗಿ |
ಹೆರೋಡ ಎಂಬುವ ಹಿರಿಯ ಅರಸನು ಆಗಿ ಎಚ್ಚರ |
ಹಿರಿಯನೆಂಬುವ ಹೆಸರಿಗೆ ಇನ್ನು ಕೊರತೆ ಬರುವ ಕೊನೆಮಾತನ್ನು |
ನಾಶಮಾಡುವ ಆಶೆಗೆ ಬಿದ್ದು ಕರೆಸಿದ ಪಂಡಿತರ ‖ ೩ ‖

**||ಚಾಲ|||**

ಮೂಡಣ ದೇಶದ ಪಂಡಿತರನ್ನು | ಕರೆಯಿಸಿ ಹೇಳಿದನು |
ಶಾಸ್ತ್ರಿ ಗಣಿತದಿ ಭವಿಷ್ಯವನು | ಹೇಳಿದ ಸತ್ಯವನು ‖ ೧ ‖

ನಕ್ಷತ್ರದ ಗುರ್ತಿನ ಚಿಹ್ನ ಸತ್ಯವೇದವನು ನೋಡಿ |
ತೆಗೆದಿರುವಂಥ ಉತ್ತರವನ್ನು | ಏಸುಕ್ರಿಸ್ತನ ಜನ್ಮದ ಸುದಿನ‖ ೨ ‖

ಹೆರೋಡ ರಾಜಗೆ ಮುಂದೆ ಅಳಿಗಾಲ | ಬರುವ ಸ್ಥಿತಿ ಮೊದಲ |
ಕ್ರಿಸ್ತನ ಮಾಡಿ ನಾಶವನ್ನು | ಅನ್ನುವ ಮನದ ನೋವನ್ನು‖ ೩ ‖

||ಏರು||

ಹಿರಿಯ ಪಂಡಿತರನ್ನು ಕರೆಸಿ | ಬೆತ್ಲೆ ಹೇಮ ಊರಿಗೆ ಕಳಿಸಿ |
ಚಿನ್ನಧೂಪ ಕಾಣಿಕೆಕೊಟ್ಟು ಬರಲು ಕಳಿಸಿದನು || ೨ನೆಯ ಚೌಕ ||

ಮೋಸ ಮಾಡಿ ಕೂಸಿನ ಕೊಲ್ಲುವ ಹೊಸ ಆಲೋಚನೆಯ ಮಾಡಿ |
ಎರಡು ವರ್ಷದ ಒಳಗಿನ ಕೂಸನ್ನು ಕೊಲ್ಲುವ ಕಾಯ್ದೆಯನು ||
ಪಾಸುಮಾಡಿ ಕಳಿಸಲಾಗಿ ಸ್ವತಃ ದೇವದೂತನೆ ಬಂದು |
ಕನಸಿನಲ್ಲಿ ಕಾಣಿಸಿಕೊಂಡ ದಾರಿಯ ತೋರಿದನು || ೧ ||

ಮೇರಿ ಮಗನ ಕೂಡಿಕೊಂಡು ರಾತ್ರಿಯೊಳಗೆ ನಡೆದು ಬಂದು |
ಪ್ರವಾದಿ ಹೇಳಿದ ಪ್ರಮಾಣದಂತೆ ಗುಪ್ತದಿ ಸಾಗಿಹರು |
ಕಿರಿಯ ಏಸುಕ್ರಿಸ್ತ ಬೆಳೆದು ಹಿರಿಯ ದೇವನಾಗಿ ಬಂದು |
ಜಗಕೆ ಬೋಧಕನಾಗಿ ಬೆಳೆದನು ಆ ಮಹಾತ್ಮನು || ೨ ||

ಜಗದಿ ದೇವನು ಒಬ್ಬನೆ ಎಂದು ಜಗದ ಜೀವಿ ರಕ್ಷಕನೆಂದು
ಜಗದ ಒಡೆಯ ದೇವನ ಮೇಲೆ ಇಟ್ಟು ದೃಢತೆಯನು ||
ನಂಬಿಗೆಟ್ಟು ನಡೆದವರಿಗೆ ಇಂಬುಗೊಡುವನು ದೇವನೆಂದು |
ನಂಬಿದವರಿಗೆ ದಾರಿಯ ತೋರಿದ ಕ್ರಿಸ್ತನ ಜನನವನು || ೩ ||

||ಚಾಲ||

ಪಾಶ್ಚಿಮಾತ್ಯ ನಾಸ್ತಿಕರಿಗೆ | ಕ್ರಿಸ್ತನ ಬೋಧೆಗೆ |
ಆಸ್ತಿಕವಾದಿ ಪ್ರಚಾರ | ಧರ್ಮದ್ರೋಹ ತಪ್ಪು ಹಚ್ಚಿಹರು || ೧ ||

ಶಿಲುಬೆಯ ಶಿಕ್ಷೆ ವಿಧಿಸಿದರು | ಹಲಗೆ ಕುಟ್ಟಿದರು |
ಕಾಲು ಕೈಗೆ ಮೊಳೆಯ ಹೊಡಸಿದರು | ಏಸುವಿನ ಗಲ್ಲಿಗೆ ಏರ್ಸಿದರು|| ೨ ||

ಕ್ರಿಸ್ತನ ಬೋಧೆಯೇ ಬೆಳೆದು | ಜನರ ಮನ ಸೆಳೆದು |
ದೃಢದಿಂದ ಮಾಡಿರಿ ವಿಚಾರ | ಏಸುವಿನ ತತ್ವ ಆಚಾರ || ೩ ||

||ಏರು||

ಇಲ್ಲಿಗೆ ಕ್ರಿಸ್ತನ ಕತೆಯನು ಮುಗಿಸಿ ಮುಂದಿನ ಬೋಧೆಯ ಮುಂದುವರಿಸಿ
ಮಂಗಳ ಮಾಡಿದ ಸಾಲೋಟಗಿಯ ಶರಣನ ಈ ಹಾಡು|| ೩ನೆಯ ಚೌಕ ||

ಖ್ಯಾಲಿ

ಏಸುವಿನ ಪವಾಡ ಮಹಿಮೆಯನು | ಸರ್ವರಿಗೆ ಸಾರುವೆನು || ಪ ||

ಕಷ್ಟಪಡುವ ಕುಷ್ಟರೋಗಿ ಮನುಜನು | ನಿಷ್ಠೆಯಿಂದ ಏಸುವಿನ ಪಾದವನು |
ಮುಟ್ಟಿ ಕಷ್ಟವ ಪರಿಹರಿಸೆನ್ನಲು | ಹಸ್ತ ಇಟ್ಟು ಏಸು ಗುಣಪಡಿಸಿದನು|| ೧ ||

ಶತಾಯುಷ್ಯದ ಹಿರಿಯನೊಬ್ಬಗೆ | ಪಾರ್ಶ್ವವಾಯುದಿಂದ ಬಳಲುವಾತಗೆ |
ನೋಡದೆ ಬೇನೆಯ ಕಳೆದ ಕ್ರಿಸ್ತನ | ವಾಕ್ ಸಿದ್ಧಿಯೆ ನೋಡಾತನ ಮಹಿಮೆಯ|| ೨ ||

ಪತಿಯು ತೀರಿದ ಗರತಿಯೊಬ್ಬಳ | ಇದ್ದೊಬ್ಬ ಮಮತೆಯ ಮಗನು ಸಾಯಲು |
ಸಾವಿನಿಂದ ಅವನ ಪಾರುಮಾಡಿಸಿ | ತಾಯಿಯ ದುಃಖವ ನೀಗಿಸಿದಾತನು|| ೩ ||

ರಕ್ತ ಕುಸುಮದ ರೋಗಿಯೋರ್ವಳು | ಕ್ರಿಸ್ತನ ಉಡುಪಿನ ಗೊಂಡೆಮುಟ್ಟಲು |
ರಕ್ತಸ್ರಾವವು ನಿಂತು ರೋಗದ | ಭೀತಿಯು ಕಳೆದ ಏಸುಕ್ರಿಸ್ತನ || ೪ ||

ಅಪಸ್ಮಾರ ರೋಗ ದೆವ್ವ ಬಿಡಿಸಿದನು | ಹುಟ್ಟು ಕುರುಡರಿಗೆ ಕಣ್ಣು ಕೊಟ್ಟನು |
ಬೀಸುವ ಭೀಕರ ಗಾಳಿ ಮಳೆಯನು | ಗದರಿಸಿ ಬೆದರಿಸಿ ತಿರುಗಿಸಿದವನು|| ೫ ||

ಸರ್ವಶಕ್ತಿಗೂಡಿ ಲೋಕಕ ಬಂದಾನ ಏಸುಕ್ರಿಸ್ತ ತಾ ದೇವ ಅನಸ್ಯಾನ |
ನಂಬಿನಡೆದರೆ ಇಂಬುಗೊಡುವನು ಕೇಳಿರಿ ಶರಣನು ಈ ಹಾಡನ್ನು|| ೬ ||

**ಸುಖಿ**

ಜಗದೊಡೆಯನೆ ಜಗದುದ್ಧಾರನೆ ಜಗದರಕ್ಷಕ ಜಗದ ಈಶನೆ |
ಜಗದೀಶನ ಪ್ರತಿರೂಪವು ನೀನೇ ಜಗಕೆ ಜನಿಸಿ ಬಂದಿ |
ಏಸುಕ್ರಿಸ್ತ ಹೆಸರು ಪಡೆದಿ || ೧ ||

ಜಗದ ಕರ್ತ ಜಗಪಾಲಕ ನೀನೆ ಜಗದ ಜನರ ಸುಖ-ದುಃಖವು ನೀನೆ |
ಜಗದ ದುಃಖಗಳ ಅಳಿದವ ನೀನೆ ಉದ್ಧಾರಕೆ ಬಂದಿ |
ಮಾಡುವ ಜನಪಾಪಕೆ ನೊಂದಿ || ೨ ||

ಮಾಡಿದ ಪಾಪಕೆ ತಪ್ಪೆಂದು ಒಪ್ಪಿ ಬೇಡುವ ಕ್ಷಮೆಗೆ ಅವರನು ಅಪ್ಪಿ
ಉದ್ಧಾರದ ಉದ್ದೇಶವನೊಪ್ಪಿದಿ ಪಾಪವ ಕಿತ್ತೊಗೆದಿ |
ನೀನೇ ಶೂಲವನಪ್ಪಿದಿ || ೩ ||

ಮಾನವಕೋಟಿಯ ಮನುವನು ತಿಳಿದಿ ನಿನ್ನಯ ತನುವಿನ ಸುಖವನು ತೊರೆದಿ |
ಜನತೆಯ ತಪ್ಪಿಗೆ ನೀ ಗುರಿಯಾದಿ ಶಿಲುಬೆಗೇರಿ ನಿಂತಿ |
ವಾಲಿ ಶರಣಗೆ ನೀ ಒಲಿದಿ || ೪ ||

**ರಚನೆ :** ಶರಣಪ್ಪವಾಲಿ

**ಕೃತಿ :** ಶರಣ ಸಂಸ್ಕೃತಿ

# ೧. ವೀರಸಾಗರ ಮುನಿಗಳು

ಪುಣ್ಯ ಪ್ರಭಾವದಿಂದ ಮುನೇಶ್ವರ ಅನಿಸಿಕೊಂಡ್ರ
ಖಾನಾಪುರ ತಾಲ್ಲೂಕದಲ್ಲಿ ಇರುವಂಥಾ ಹೆಸರಾ
ಚಿಕ್ಕದಿನಕೊಪ್ಪ ಅಂತ ಐತಿ ಸಣ್ಣ ಹಳ್ಳಿ ಊರಾ ॥
ಶ್ರೇಷ್ಠ ಜೈನ ಧರ್ಮದಲ್ಲಿ ಹುಟ್ಟಿಬಂದ್ರ ತವನಣ್ಣ
ಅಷ್ಟೈಶ್ವರ್ಯಕ್ಕೆ ಕಡಿಮಿ ಇಲ್ಲದವರಾ
ಮೊದಲ ಮರ್ಡಿ ಅಂತ ಅವರ ಮನಿ ಅಡ್ಡಹೆಸರಾ ॥

ಚಿಕ್ಕಂದಿಂದ ಅವರು ಚಿಕ್ಕದಿನಕೊಪ್ಪದೂರಾಗ
ಶೇತ್ಕಿ ಉದ್ಯೋಗದಲ್ಲಿ ಪ್ರವೀಣ ಆದವರಾ
ಶಕ್ತಿವಂತರು ಕುಸ್ತಿ ಆಡೋದರಲ್ಲಿ ಪ್ರಸಿದ್ಧ ಆದವರಾ ॥
ಕುಸ್ತಿಗೆ ಹೋದಾಗ ಕೂಡಿ ಬಂತ ಅವರಿಗೆ
ಬೆಳಗೋಳ ಬೆಟ್ಟದ ಮೂರ್ತಿ ಸುಂದರಾ
ದರ್ಶನ ಆದೀತ ಬಾಹುಬಲಿ ಗೊಮ್ಮಟೇಶ್ವರಾ ॥

ದರ್ಶನ ಮಾತ್ರದಿಂದ ಅವರ ಮನಸ ಬದಲಾತು
ಧಾರ್ಮಿಕ ಕೆಲಸಗಳನ ನಡಸಿದರಾ
ಸ್ವಂತ ಬಸ್ತಿ ಒಂದ ಊರಾಗ ಕಟ್ಟಿಸಿದರಾ ॥
ನಿತ್ಯನೇಮದಲ್ಲಿ ಅವರು ವ್ರತಗಳ ಪಾಲನ
ನಿಷ್ಠೆಯಿಂದ ಬಿಟ್ಟೂಬಿಡದ ನಡಸಿದರಾ
ಹಿಂಗ ಮಾಡತಿದ್ರ ಮುಂದಿನ ವಿಚಿಯಾರಾ ॥

ಮದಿವಿಯಾದೀತು ಮಡದಿನ್ನ ಕರತಂದ
ಸುಖವಾಗಿ ಇದ್ರ ಗಂಡ ಹೆಂಡರಾ
ತೀರ್ಥಯಾತ್ರಿ ಮಾಡೋದ ಒಳ್ಳೆ ಉಮೇದ್ವರಾ ॥
ಧರ್ಮಶಾಸ್ತ್ರ ಮರ್ಮ ತಿಳಿಯಲಿಕ್ಕಿ
ಓದು ಬರಿಕಲಿತಿಲ್ಲ ಅಕ್ಷರಾ
ಹಂಗ ಅಂತಿದ್ರ ಭಗವಂತ ಜಿನೇಶ್ವರಾ ॥
**॥ಚಾಲ॥**

ತೀರ್ಥಯಾತ್ರಿ ಮಾಡುವ ಮರ್ಜಿ ಸ್ವಾಮಿ ಶಿಖರಜಿ
ಹೋಗಿದಾರ ಹೊಂಟಾ

ಕಟ್ಟಿಕೊಂಡ ರೊಕ್ಕದ ಗಂಟಾ ॥
ನೋಡಿ ಮನಸಿಗಾತ ಹರುಷ ವ್ರತನೇಮ ಮಾಡ್ಯಾರ ಉಪವಾಸ
ಹುಟ್ಟಿ ಬಂದ ಜನ್ಮ ಪುಕ್ಕಟ್ಟಾ
ಸುಖಾ ಇಲ್ಲ ಇದರಲ್ಲಿ ಏಟೇಟಾ ॥

ಹಿಂಗ ಹೊಳಿಯತಿತ್ತ ಆಗ ಜ್ಞಾನ ತಿಳದಾರ ಸಂಪೂರ್ಣ
ಸಂಸಾರ ಲಂಪಟಾ
ಬಿಡಬೇಕೆಂದ್ರ ಇನ್ನ ಒಕ್ಕೊಟ್ಟಾ ॥

**||ಏರು||**

ಆತುರದಿಂದ ಶಿಖರ್ಜಿ ಯಾತ್ರೆಯನ್ನು
ಎರಡು ಸಾರೆ ಆಗ ಮುಗಿಸಿದರಾ
ಮಕ್ಕಳಾಗಿದ್ದುವ ಎರಡ ಗಂಡ ಹುಡಗೋರಾ ॥
ಶ್ರೇಷ್ಠ ಜೈನಧರ್ಮದಲ್ಲಿ ಹುಟ್ಟಿಬಂದ್ರ ತವನಣ್ಣ
ಅಷ್ಟ ಐಶ್ವರ್ಯಕ್ಕ ಕಡಿಮಿ ಇಲ್ಲದವರಾ
ಮೊದಲ ಮರ್ಡಿ ಅಂತ ಮನಿ ಅಡ್ಡಹೆಸರಾ ॥ ॥ ೧ ॥

ಹೆಂಡಿರು ಮಕ್ಕಳು ನನ್ನವರ ಅಲ್ಲಂತ ತಿಳದಾರ
ಯಾರ್‍ಯಾರು ಸಂಗಾಟ ಬರುದಿಲ್ಲಾ
ಹರದೊಗದಾರ ಮಾಯಾ ಎಂಬುವ ಜಾಲಾ ॥
ಗಟ್ಟಿಮನಸ ಮಾಡಿ ಬಿಟ್ಟಾರ ಸಂಸಾರ
ಹೊಂಟಹೋದ್ರ ರಾಜ್ಯದ ಮ್ಯಾಲ
ಮನಸಿನಲ್ಲಿ ಏನು ಮೋಹಾ ಇಡಲಿಲ್ಲಾ ॥

ಊರೂರ ತಿರಗುತ್ತ ಗುರುಗಳನ್ನು ಹುಡುಕುತ್ತ
ದೀಕ್ಷಾ ತಗೊಳ್ಳೊ ಹಂಬಲಾ
ಬಂದ ಮುಂದ ನಿಂತಿತ್ತ ಪುಣ್ಯೇದ ಫಲಾ ॥
ಉದಗಾಂವದಲ್ಲಿ ಗುರುಗಳು ಸಿಕ್ಕಾರ
ಮಲ್ಲಿಸಾಗರ ಮುನಿ ಭೂಪಾಲಾ
ಅಲ್ಲೆ ಉಳದಾರ ಗುರುಗಳ ಹಿಂಬಾಲಾ ॥

ಮುನಿಗಳ ಬೆನ್ನಹತ್ತಿ ಬೋಧಾ ಕೇಳಿಕೊಂತ
ಹಳೆ ಇಂಗಳಿಗೆ ಬಂದಾರ ಬಿಡಲಿಲ್ಲಾ
ಗುರುಸೇವಾ ಮಾಡತಿದ್ರ ಹಗಲೆಲ್ಲಾ ॥
ಕ್ಷುಲ್ಲಕ ವ್ರತ ಅಲ್ಲೆ ಖಾಯಮ್ಮ ಆದೀತ

ತಿಳಿಯತಿತ್ತ ತತ್ವದ ಕೀಲಾ
ಆಗ ವಿಜಯಸೇನ ಅಂದ್ರ ಜನರೆಲ್ಲಾ ॥

ಉಪವಾಸ ವ್ರತಾ ಅತಿ ಜೋರಿನಿಂದ ಮಾಡುತ್ತ
ನಸಲಾಪುರಕ ಬಂದ್ರ ಸಂಘದ ಹಿಂಬಾಲಾ
ಅಲ್ಲಿ ಐಲಕ ವ್ರತ ಆತ ಪುಣ್ಯೇದ ಫಲಾ ॥
ಓದು ಬರಹ ಕಲೀಲಕ್ಕೆ ಪಾಟಿಪುಸ್ತಕ ಗಂಟ
ಕಟ್ಟಿಕೊಂಡ ತಿರಗತಿದ್ದರ ಹಿಂಬಾಲಾ
ಕಟಪಟ ಮಾಡಿ ಕಲತ್ರ ಬಿಡಲಿಲ್ಲಾ ॥

**॥ಚಾಲ॥**

ನಂದ ಅಲ್ಲ ಅಂದ್ರ ಶರೀರ ಆದ್ರ ದಿಗಂಬರ
ಶಿರಗುಪ್ಪಿಯಲ್ಲಿ
ಕಡಿತಂದ್ರ ಕರ್ಮದ ಕತ್ತಲಿ ॥
ಮೊದಲಿನ ಹೆಸರು ತವನಣ್ಣ ಆಮೇಲೆ ವಿಜಯಸೇನ
ವೀರಸಾಗರ ಆದ್ರ ಇಲ್ಲಿ
ಮಿಗಿಲಾದ್ರ ವ್ರತನೇಮದಲ್ಲಿ ॥

ಉದಗಾಂವ ಮುಂದ ಮಹಿಷವಾಡಿಗಿ ಮತ್ತ ಬ್ಯಾಡಗಿ
ಇಷ್ಟು ಊರಲ್ಲಿ
ಚಾತುರ್ಮಾಸ ಮಾಡ್ಯಾರ ಮ್ಯಾಲಿ ಮ್ಯಾಲಿ ॥

**॥ಏರು॥**

ಮಲ್ಲಿಸಾಗರ ಗುರುಗಳ ಕೂಡ ಎಂಟ ವರ್ಷ ಇದ್ದಾರ
ಅಷ್ಟಾಣಿಕ ವ್ರತವನ್ನು ಮುಗಿಸಿದರಾ
ನಾಡಮ್ಯಾಲ ಹಬ್ಬೀತ ಅವರ ಹೆಸರಾ ॥
ಶ್ರೇಷ್ಠ ಜೈನ ಧರ್ಮದಲ್ಲಿ ಹುಟ್ಟಿ ಬಂದ್ರ ತವನಣ್ಣ
ಅಷ್ಟ ಐಶ್ವರ್ಯಕ್ಕೆ ಕಡಿಮಿ ಇಲ್ಲದವರಾ
ಮೊದಲ ಮರ್ಡಿ ಅಂತ ಅವರ ಮನಿ ಅಡ್ಡಹೆಸರಾ ॥ ೧ ॥

ಗಾಡಿ ಮೋಟಾರ ಬಿಟ್ಟ ಕಾಲ ನಡಿಗಿಯಿಂದ
ಶಿಖರ್ಜಿಯಾತ್ರಿಗಿ ಹೋದಾರ ಹೊಂಟಾ
ದಣಿವ ಆಗಲಿಲ್ಲ ಅವರಿಗೆ ಏಟೇಟಾ ॥
ಹೊಳ್ಳಿ ಬಂದಾರ ಬೇಗ ಊರ ಹಳ್ಳಿ ಹುಡುಕುತ್ತಾ

ಅಳವಾಡದಲ್ಲಿ ಹಾಕ್ಯಾರ ಮೆಟ್ಟಾ
ಅಲ್ಲಿ ಮಂದಿ ಪ್ರೀತಿ ಬಾಳ ಆತು ಕಟಪಟಾ ||

ಹುಂಬ ಜನರನ್ನ ಹಾದೀಗಿ ತರಬೇಕಂತ
ಬೋಧಾ ಮಾಡಿದಾರ ಸಾಕಷ್ಟಾ
ತಿಳಿಹೇಳತಿದ್ರ ಒಳಗಿನ ಗುಟ್ಟಾ ||
ಅಳವಾಡ ಮಂದೆಲ್ಲಾ ಆನಂದ ಹೊಂದ್ಯಾರ
ಹೋಗಬ್ಯಾಡ್ರಿ ಅಂತಾರ ಹೊಂಟಾ
ನಮ್ಮ ಊರ ಬಿಟ್ಟಾ ||

ಬಾಳಸಾರೆ ಅಲ್ಲೆ ಚಾತುರ್ಮಾಸಮಾಡಿ
ನಾಡಮ್ಯಾಲ ನಡದಾರ ಹೊಂಟಾ
ಕಟ್ಟಿಕೊಂಡ ಜ್ಞಾನದ ಗಂಟಾ ||
ತತ್ವದ ವಿಚಿಯಾರ ಬಿಚ್ಚಿ ಹೇಳತಾರ
ಕಸರ ಇಲ್ಲರಿ ಒಂದೀಟಾ
ಇನ್ನೂ ಹೇಳರಿ ಅಂತಾರ ಜನಾ ಮತ್ತಿಷ್ಟಾ ||

ಜಗತ್ತಿನ ಜನರೆಲ್ಲಾ ಜಯಾ ಬೇಕಂತಾರ
ಹೆಂಗ ಸಿಕ್ಕೀತು ಅದು ಪುಕ್ಕಟ್ಟಾ
ಬಾಳ ಜಡ ಐತಿ ಜ್ಞಾನದ ಗುಟ್ಟಾ ||
ಜಯಾ ಬೇಕಾದರ ಮೋಹಾ ಜೈಸಬೇಕ
ಸಾಕ ಮಾಡ್ರಿ ಈ ಲಂಪಾಟಾ
ಹಿಂಗ ಹೇಳತಾರ ಸ್ಪಷ್ಟಾ |

**||ಚಾಲ||**

ಕೊಡಚವಾಡ ಮುಂದ ಗಂದಿಗವಾಡ
ಮತ್ತ ತಿಗಡೊಳ್ಳಿಗಿ
ಸಂಚಾರ ಮಾಡುತ್ತ ಹೋದ್ರ ಸೀಗೀಹಳ್ಳಿಗಿ ||
ಇಸ್ವಿ ಹತ್ತೊಂಭತ್ತ ನೂರ ಐವತ್ತಮೂರ
ಚಾತುರ್ಮಾಸ ಶೀಗೀಹಳ್ಳಿಗಿ
ದರ್ಶನ ತಗೊಂಡ್ರ ಜನಾ ಅಲ್ಲೆ ಹೋಗಿ ||

ನಾಡೊಳು ನಮ್ಮ ತಿಗಡೊಳ್ಳಿ ಅತಿ ಸಣ್ಣ ಹಳ್ಳಿ
ಪದಾ ಮಾಡಿದ ಮರಿಕಲ್ಲ ಪ್ರೇಮಕ್ಕಾಗಿ
ಜಿನೇಶ್ವರ ಸ್ವಾಮಿ ಚರಣಕ್ಕೆರಗಿ ||

||ಏರು||

ವೀರ ಸಾಗರ ಮೂರ್ತಿ ಕೀರ್ತಿ ಕೇಳಿದ ಮೇಲೆ
ಹರುಷ ಆಗಬೇಕ ನೀವು ಎಲ್ಲಾರಾ
ಅವರು ದಾಟಿದಾರ ಸಂಸಾರ ಸಾಗರಾ ||
ಶ್ರೇಷ್ಠ ಜೈನ ಧರ್ಮದಲ್ಲಿ ಹುಟ್ಟಿಬಂದ್ರ ತವನಣ್ಣ
ಅಷ್ಟ ಐಶ್ವರ್ಯಕ್ಕ ಕಡಿಮಿ ಇಲ್ಲದವರಾ
ಮೊದಲ ಮರ್ಡಿ ಅಂತ ಅವರ ಮನಿ ಅಡ್ಡಹೆಸರಾ || ೩ ||

**ರಚನೆ :** ಶರಣಪ್ಪವಾಲಿ
**ಕೃತಿ :** ಶರಣ ಸಂಸ್ಕೃತಿ

## ೩. ಭಕ್ತ ಸಿರಿಯಾಳ

ಭಕ್ತಿ ಇದ್ದವರಿಗೆ ಮುಕ್ತಿ ಆಗುವುದು
ಭಕ್ತಿ ಇಲ್ಲದವ ನರಕ ಸ್ವಾಧೀನಾ
ಭಕ್ತಿಯಿಂದ ಶಕ್ತಿ ಸರ್ವ ಸಾಧನಾ ||
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ||

ಶಿವಾ ಪಾರ್ವತಿ ಆನಂದದಲ್ಲಿ ತಾವು
ಏರಿಕೊಂಡ ಕೂತಾರ ಸದನಾ
ತಂಬೂರಿ ನಾದ ಆತ ಜನನಾ ||
ತ್ರಿಲೋಕ ಸಂಚಾರಿ ನಾರದಮುನಿ ಬಂದ
ಜೋಡಿಸಿ ನಿಂತ ಎರಡು ಕೈಗಳನು
ಮಾಡಿ ಮುಜರಿಯನಾ ||

ಶಿವಾ ಪಾರ್ವತಿ ಪ್ರೀತೀಲಿ ಕೂಡ್ರಿಸಿ
ಪ್ರಶ್ನೆ ಮಾಡತಾರ ನಾರದನ್ನಾ
ನಿಮ್ಮ ಭೇಟಿಯಾಗಿದ್ದಿಲ್ಲ ಬಾಳ ದಿನಾ ||
ಯಾವ ಕಡಿಂದ ಬಂದ್ರಿ ಏನ ಸಮಾಚಾರ ತಂದ್ರಿ
ಚಂದದಿಂದ ಮಾಡರಿ ಕಥನಾ
ಇನ್ನ ಯಾವ ಕಡೆ ನಿಮ್ಮ ಗಮನಾ ||

ಮೃತ್ಯ ಲೋಕವೆಲ್ಲಾ ಸುತ್ತಹಾದ ಬನ್ನಿ
ಕಾಂಚಿಪುರ ಅಂಬೋದು ರಾಜಪಟ್ಟಣಾ

ಅದು ಸಿರಿಯಾಳ ಅರಸನ ಸ್ವಾಧೀನಾ ॥
ಚೆಂಗಳಿ ಅವನ ಸತಿ ತಕ್ಕಂತ ಒಳ್ಳೆ ಗರತಿ
ಚೆಲ್ಲಾಳ ಅಂಬುವವ ಮಗನಾ
ಸತ್ಯತ್ವದಲ್ಲಿ ಪ್ರಜಾಪಾಲನಾ ॥

**ಒಂದನೇ ಚಾಲ**

ಅತಿಥಿಗಳಿಗೆ ದಿನಾ ದಿನಾ ಹಾಕತಾನ ಅನ್ನಾ
ಅರವಿ ಕೊಡತಾನು
ಸತ್ಕಾರ್ಯ ಸದಾ ಲೋಲನು ॥
ಕಾಂಚಿ ಪುರಕ ಅನಬೇಕ ಕೈಲಾಸ ನೋಡಿ ಆತ ಹರುಷ
ಮಾಡುತ ಸದಾಶಿವ ಧ್ಯಾನಾ
ಎಲ್ಲಿ ಕೇಳಿದಲ್ಲಿ ಕೀರ್ತನಾ ॥

ಯಾರು ಇಲ್ಲನೋಡ್ರಿ ಅವನ ಸರಿ ಸುಳ್ಳ ಅಂದೇರಿ
ಐತಿ ಇಲ್ಲೇನಾ
ಹೋಗಿ ನೋಡಿ ಬರ್ರಿ ಒಂದ ದಿನಾ ॥

**ಎರಡನೇ ಚಾಲ**

ಶಿವಾ ಅಂದ ನಾರದ ಮುನಿ ಮುಂದಾ
ಕಾಂಚಿಪುರಕೆ ಹೋಗುವ ನಾನು ಇಂದಾ ॥
ಭಕ್ತಿ ಪರೀಕ್ಷೆ ಮಾಡುವೆ ಆತಂದಾ
ಜಂಗಮ ವೇಷ ಶಿವಾ ಧರಿಸೀದಾ ॥

ಮೃತ್ಯಲೋಕ ಮಾರ್ಗಾ ಹಿಡಿದ ನಡದಾ
ಕೈಲಾಸದಿಂದ ಕಾಂಚಿಪುರಕ ಬಂದಾ ॥

**||ಏರು||**

ಕೆಟ್ಟ ವೇಷ ಮೈ ಗಾಯ ತುಂಬಿತ್ತು
ರಕ್ತ ಕೀಂವ ಇಪ್ಪಿಯ ನೊಣಾ
ಜೊಲ್ಲ ಸೋರತಿತ್ತ ಇಲ್ಲರಿ ಹಸನಾ
ಪಿಚ್ಚ ಮೆತ್ತಹಾಕಿ ಎರಡೂ ಕಣ್ಣಾ ॥
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನ ॥ ೧ ॥

ಅತಿಥಿ ಬಂದಿದೇನ ಅನ್ನಾ ನೀಡಿರೆಂತ
ಒದರತಿದ್ದ ವಾಡೇದ ಮುಂದಾ
ಹಸದೇನು ಅಂದಾ ॥
ನೋಡಿದ್ವಾರಪಾಲ ಓಡಿಹೋಗಿ ಆಗ
ತಿಳಿಸಿದಾನ ಅರಸನ ಮುಂದಾ
ಅವನ್ನ ಹಿಂದಕ್ಕೆ ಅಟ್ಟುವೆನೆಂದಾ ॥

ಕೆಟ್ಟಮಾರಿ ಹಿಂತಾ ಬಟ್ಟಹರಕನ್ನ
ನಾ ಎಂದೂ ನೋಡಿದ್ದಿಲ್ಲ ದುರ್ಗಂಧಾ
ನಾರುವುದಂದಾ ॥
ಕೆಟ್ಟ ಇದ್ದರ ಅಂವ ಸಿಟ್ಟಿಗೇಳಬ್ಯಾಡ
ಹಿಂದಕ್ಕಟ್ಟಿದೆ ಕರತಾ ಅಂದಾ
ಬಂದೀತ ಕುಂದಾ ॥

ಏಳೂತ ಬೀಳೂತ ಬಗ್ಗಿ ಬಡಗಿ ಹಿಡಿದ
ಮುದುಕ ನಿಂತಕೊಂಡಾನ ಬಂದಾ
ಅರಸನ ಮುಂದಾ ॥
ಅಕರಾತಿಲೆ ಅರಸ ಎತ್ತಿಕೊಂಡ
ತನ್ನ ಸಿಂಹಾಸನಕ ಇಳಿಸಿದಾ ಓದಾ
ಅರವಿಯ ಕಳದಾ ॥

ಸಿರಿಯಾಳ ಚಂಗಳಿ ಕೂಡಿ ಬಚ್ಚಲಕ ಓದು
ನಾನಾತರದ ತೈಲ ಮಕರಂದಾ
ಹೆಚ್ಚ್ಯಾರು ತಂದಾ ॥
ಗಂಧ ಕಸ್ತೂರಿ ಚೆಂದದಿ ಬೆರಸಿ
ಜಳಕ ಮಾಡಿಸಿದಾರ ಮುದಕಂದಾ
ಆತ ಆನಂದಾ ॥

**ಒಂದನೇ ಚಾಲ**

ಕುಂಡರಸ್ಯಾರು ದೇವ ಮನಿಯೊಳಗ ಗದ್ದಿಗಿ ಮ್ಯಾಗ
ಪರಿಮಳ ಪುಷ್ಪ ತರಿಸ್ಯಾನು
ಪಾದಪೂಜೆ ಮಾಡಿ ಕೇಳ್ಯಾನು ॥
ಏನ ಐತಿ ನಿಮ್ಮ ಇಷ್ಟಾರ್ಥ ಹೇಳರಿ ಸ್ಪಷ್ಟ
ಬೇಡಿದ್ದ ಕೊಡತೇನು
ಕೊಟ್ಟ ವಚನ ತಪ್ಪುವನಲ್ಲ ನಾನು ॥

ಬೇಕಷ್ಟ ಬೆಳ್ಳಿ ಬಂಗಾರ ರೊಕ್ಕದ ಭಂಡಾರ
ಅಲ್ಲದೆ ಮತ್ತೆ ಬೇಕೇನು
ಕಡಿಮಿಲ್ಲ ನನಗೆ ಏನೇನು ॥

**ಎರಡನೇ ಚಾಲ**

ಅತಿಥಿ ಅಂತಾನು ಇದು ಖಾಲಿ
ದ್ರವ್ಯ ಓದ ನಾಯೇನ ಮಾಡsಲಿ ॥

ನರಮಾಂಸ ಬೇಕೋ ಸಧ್ಯದಲ್ಲಿ
ಇದು ನಿಚ್ಚ ತಿಳಿಯೋ ಮನದಲ್ಲಿ ॥

ಆಗದಿದ್ದರೆ ಹೇಳೋ ತೀವ್ರದಲ್ಲಿ
ಶಾಪ ಕೊಟ್ಟು ಹೋಗುವೆ ಕ್ಷಣದಲ್ಲಿ ॥

**॥ಏರು॥**

ಘಾತ ಆತ ಅಂದ ಹೋತ ವಚನ ನಂದ
ಸಿರಿಯಾಳ ಕರದ ತನ್ನ ನೌಕರನಾ
ತರಬೇಕೋ ಮನುಷ್ಯರ ಮಾಂಸವನಾ ॥
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನ ॥ ॥ ೧ ॥

ಸಿರಿಯಾಳ ಅರಸ ತನ್ನ ಆಳಿಗೆ ತಿಳಿಸಿದ್ದು
ಸ್ವಾಮಿ ಕೂತ ಕೇಳ್ಯಾನು ಆಗ
ಅಂತಾನ ಹಿಂಗ ॥
ಅನ್ಯರ ಮಾಂಸಾನಾನು ಉಣಲೊಲ್ಲೆ ನಿಮ್ಮ ಮಗನ
ಮಾಂಸಾ ನೀಡರಿ ಬೇಗ
ಉಣ್ಣುವೆನೀಗ ॥

ಇಷ್ಟಕೇಳಿ ಅರಸ ನಿಷ್ಠುರಮಾಡಿ ಮನಸ
ಮಡದಿ ನೀ ಬಾ ಅಂದ ಚಂಗಳಿಗೆ
ಹೇಳ್ಯಾನು ಹಿಂಗೆ ॥
ಕೇಳಿ ಚಂಗಳಿ ಮೂರ್ಛೆ ಬಂದು
ಉರುಳಿ ಬಿದ್ದಾಳ ಧರಣಿಯ ಮ್ಯಾಗ
ಬಡದಿತ ದಿಂಗ ॥

ಬಿದ್ದ ಚಂಗಳಿ ಒದ್ದಾಡಿ ಎದ್ದ ಕುಂತ
ಶೋಕಮಾಡತಾಳ ಮನದಾಗ
ಏನ ಬಂತೊ ಶಂಭೋ ಶಂಕರ ನನಗ ॥
ಹೆತ್ತ ಕೂಸಿನ ಕುತ್ಗಿ ಕೊಯ್ದು
ತುತ್ತ ಮಾಡೋದಾತ ಜಂಗಮಗ
ಅಂತಾಳ ಹಿಂಗ ॥

ಸಿರಿಯಾಳ ಅರಸ ಆಗ ಸಮಾಧನ ಹೇಳಿ
ಮ್ಯಾಲ ಎಬ್ಬಿಸಿದ ಚಂಗಳಿಗೆ
ಶೋಕ ಮಾಡಬ್ಯಾಡ ನೀ ಈಗ ॥
ಸಿಟ್ಟಿಗೆದ್ದ ಅತಿಥಿ ಅಂತಾನ
ಹೊಟ್ಟಿ ಹಸಿವಿ ಆಗೇತಿ ನನಗ
ನೀಡಿರಿ ಬೇಗ ॥

**ಒಂದನೇ ಚಾಲ**

ಅತಿಥಿ ಆಡಿದಂಥಾ ವಚನ ಒಪ್ಪಿಕೊಂಡ ತಾನ
ಮಗನ್ನ ಕರಿ ಅಂತಾ
ಚಂಗಳಿಗೆ ಹೇಳಿದ ತುರ್ತಾ ॥

ಲಗುಬಗಿ ಕಂದನ್ನ ಕರಿಸಿ ಚಂಡ ರುಂಡ ಕೊರೆಸಿ
ಮಾಡಿಸು ಅಡಿಗಿ ತುರ್ತಾ
ಇಷ್ಟಹೇಳಿ ಸುಮ್ಮನೆ ಕುಂತಾ ॥

**ಎರಡನೇ ಚಾಲ**

ಹೋಗಿ ನಿಂತಾಳು ಚಂಗಳಿ ಬಾಗಿಲ ಮುಂದಾ
ಎಲ್ಲಿ ಇರುವಿ ಚಿಲ್ಲಾಳಾ ಬಾರೋ ಕಂದಾ ॥

ತಕ್ಷಣಕ ಮಗಾ ಅವ್ವಾ ಅಂದಾ
ಅಡಬಡಿಸಿ ಚಿಲ್ಲಾಳಾ ಓಡಿ ಬಂದಾ ॥

ಚಂಡಗುಂಡಿನ ಆಟ ಒಳ್ಳೆದುಂದಾ
ಆಡೋ ಸರತಿ ಬಂದಿತ್ತು ಈಗ ನಂದಾ ॥

**॥ಏರು॥**

ಗಂಟಲ ಬಿಗಿದು ದುಃಖ ವಟ್ಟರಿಸಿ
ತೆಕ್ಕಿಯೊಳಗ ಅಪ್ಪ್ಯಾಳ ಮಗನಾ
ಕುಂತಾಳ ಸುಮ್ಮನಾ ॥
ಕಾಂಚಿಪುರದ ಸಿರಯಾಳ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ॥ ॥ ೩ ॥

ಯಾಕಕರದೆ ತಾಯಿ ಏನ ಕಾರಣಾ
ಶೋಕ ಮಾಡುವಿ ಚಿಂತಿ
ಅಳವುತ ಕುಂತಿ ॥
ನಿನ್ನ ಶಿರಾ ಕೊಯ್ದು ಮಾಂಸದ ಅಡಿಗಿ
ಮಾಡಿ ನೀಡಿರೆಂದ ಅತಿಥಿ
ಇನ್ನೇನು ಗತಿ ॥

ಮಗನ್ನ ಮೇಲಕ್ಕೆತ್ತಿ ಮುದ್ದಾಡಿ ಅಂತಾಳ
ನಿನ್ನ ಮುಖಾ ಇಂದಿಗೆ ಎರವಾತಿ
ನಮ್ಮನ್ನ ಮರತಿ ॥
ಚೆಲ್ಲಾಳ ಅನ್ನೋ ಸಲ್ಲ ಇಲ್ಲದಾತೊ
ನಾ ತಿನಿಸಿ ಉಣಿಸಿ ಮಾಡಿನ್ನೊ ಪ್ರೀತಿ
ಒಳ್ಳೆ ಅಕ್ಕರತಿ ॥

ಮಾತೆ ಕೇಳ ಇದು ಮಿಥ್ಯಾ ಶರೀರಾ
ಹುಟ್ಟೋದು ಸಾಯೋದು ನಡದsತಿ
ಎಂದ ಬಿಟ್sತಿ ॥
ಸುತ್ವಾತ್ರಕ್ಕದ ನನ್ನ ದಾನಾ ನೀಡಿರಿ
ಮೂರೂ ಮಂದಿಗೆ ಆಗೋದು ಮುಕ್ತಿ
ಹಬ್ಬೀತು ಕೀರ್ತಿ ॥

ಅಂದ ಚೆಂದದ ಮಾತ ಕಂದ ಆಡೋದ ಕೇಳಿ
ಶೋಕ ಮಾಡತಾಳ ಪತಿವರತಿ
ಮಾತ ಕೊಟ್ಟಿದಾನ ಪ್ರಾಣಪತಿ ॥
ನಿಷ್ಠುರ ಮನಸಮಾಡಿ ನಿಂತಾಳ ಎದುರಿಗಿ
ವರಿಯ ಜಗ್ಗಿ ಹಿರಿದಾಳ ಕತ್ತಿ
ಕಡಿದಾಳ ಎತ್ತಿ ॥

**ಒಂದನೇ ಜಾಲ**

ಕುಲು ಕುಲು ಕೂಸ ನಗುವೂತ ಪ್ರಾಣ ಬಿಟ್ಟೇತ
ಸಣ್ಣ ಕಳಲಾ
ಮಾರಿ ಕಳಾ ಕಡಿಮಿ ಆಗಿಲ್ಲಾ ॥

ಲಗುಬಗಿ ಕೂಸಾನ್ನ ಕೊಚ್ಚಿ ತೊಳದಾರು ಸ್ವಚ್ಛಿ
ಸಾಹಿತ್ಯ ಸರ್ವೆಲ್ಲಾ
ಕೂಡಿಸ್ಯಾರ ತಡಾ ಆಗಲಿಲ್ಲಾ ॥

ತಗದಿಟ್ಟಕೊಂಡಾಳು ಚಂಡ ಮಾಡ್ಯಾಳ ಬರೆರುಂಡ
ಮಗನ ಹಂಬಲಾ
ಅವಸರಲಿ ಅಡಿಗಿ ತಾತ್ಕಾಲಾ ॥

**ಎರಡನೇ ಚಾಲ**

ಎಡಿ ಬಡಿಸಿ ಕೊಟ್ಟಾಳ ಸ್ವಾಮಿ ಮುಂದಾ
ಖೂನಾ ಹಿಡದ ಶಿವಾ ಸಿಟ್ಟಿಗೆದ್ದಾ ॥

ರುಂಡ ಉಂಡ ಬತಿಗೆಡೆನು ಅಂದಾ
ಚೆಂಡ ತಿನ್ನುವೆ ಮೊದಲ ತಾ ಅಂದಾ ॥

ಇಟ್ಟಾಳ ಚಂಗಳಿ ಚಂಡ ತಂದಿದಾ
ನೋಡಿ ಅತಿಥಿ ಆದಾನು ಆನಂದಾ

**॥ಏರು॥**

ಈ ಚೆಂಡ ಒಯ್ದು ಒಳಕಲ್ಲಿನೊಳಗ ಹಾಕಿ
ಒಳಕಿಲಿಂದ ಕುಟ್ಟರಿ ಇದನ್ನಾ
ಮಾಡರಿ ಸಣ್ಣಾ ॥
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ॥ ॥ ೪ ॥

ಸಿರಿಯಾಳ ಚಂಗಳಿ ಚೆಂಡ ಕುಟ್ಟುವಾಗ
ಆನಂದದಲ್ಲಿ ಹಾಡ್ಯಾರ ಗೀತಾ
ಸ್ವಾಮಿ ಅದನ್ನ ಹಿಡದಾನ ಗುರತಾ ॥
ಚೆಂಡ ರುಂಡ ಎರಡೂ ಕೂಡಿಸಿ ಕಲಸೋದು

ಶಿವಾ ನೋಡಿದಾನ ಕುಂತಾ
ಅಂತಾನ ಮಸ್ತಾ ||

ಮಗನ ಮೋಹದಲ್ಲಿ ನೀವು ದುಃಖ ಮಾಡಿದರ
ಊಟಕ್ಕ ನಾನು ಒಲ್ಲೆನು ಅಂತಾ
ಮೊದಲ ತಿಳಿಸಿದೇನ ಈ ಮಾತಾ ||
ಸರ್ವ ಕೆಲಸ ಪರಿಹಾರವಾದೀತ
ಮೂರು ಎಡಿಯ ಮಾಡರಿ ತುರಿತಾ
ತೆಗದಾನ ಬೇತಾ ||

ಅತಿಥಿ ಆಡಿದ್ದಕ್ಕ ಸಿರಿಯಾಳ ಅಂತಾನ
ಮೂರು ಎಡಿ ಯಾರ್‍ಯಾರಿಗಂತಾ
ಕೇಳ್ಯಾನು ಅಂಜುತಾ ||
ನಾನು ನೀನು ನಿನ್ನ ಮಡದಿ ಚಂಗಳಿ
ಮೂವರು ಕೂಡಿ ಉಣ್ಣೋನು ಕೂತಾ
ಅದೋನು ಶಾಂತಾ ||

ಚಂಗಳಿ ಅಂತಾಳಾಗ ಹಡದ ಕೂಸನ್ನ
ಕಡಿದ ತಿನ್ನೋದ ಬಂದೀತ ಹೊತ್ತಾ
ದೇವಾ ಭಗವಂತಾ ||
ಅರಸನ ವಚನಾ ಅಲ್ಲಗಳಿಯಲಿಲ್ಲ
ಮೂರ ಎಡಿಯ ಮಾಡ್ಯಾಳ ತುರ್ತಾ
ಉಣ್ಣುವೆನಂತಾ ||

**ಒಂದನೇ ಚಾಲ**

ಎಡಿಬಿಟ್ಟ ಸ್ವಾಮಿ ಎದ್ದನಿಂತ ಹೋಗುವೆನು ಅಂತ
ಊಟ ಮಾಡೋದಿಲ್ಲಾ
ಅರಸ ಹಿಡಿದ ಅತಿಥಿಯ ಕಾಲಾ ||

ಸ್ವಾಮಿ ಏನ ಬಂತ ಸಂಕೋಚ ಹೇಳರಿ ಸ್ವಚ್ಛ
ಕೊಟ್ಟ ವಚನ ನಾನು ತಪ್ಪಿಲ್ಲಾ
ಇದು ಏನು ನನಗ ತಿಳಿಲಿಲ್ಲಾ ||

ಮಕ್ಕಳು ಇಲ್ಲದ ಮನಿಯಾಗ ಉಂಡಿಲ್ಲ ಯಾವಾಗ
ನಿಮ್ಮ ಮಗನ್ನ ಕರಿಯೋ ತಾತ್ಕಾಲಾ
ಉಣ್ಣುವೆನು ಅಮ್ಯಾಲಾ ||

**ಎರಡನೇ ಚಾಲ**

ನಿಮಗ ನೀಡೆವರಿ ಒಬ್ಬ ಮಗಾ ಇದ್ದಾ
ಇನ್ನ ಕರದಿರ ಬಂದಾನು ಎಲ್ಲಿಂದಾ ॥

ಯಾವ ದೋಸ ಆಗಿಲ್ಲರಿ ನಮ್ಮಿಂದಾ
ತಿಳಸಿ ಹೇಳರಿ ಚೆಂದದಿಂದಾ ॥

ಸಂಶೆ ಬಿಡಿರಿ ಮನಸಿನೊಳಗಿಂದಾ
ತಡಾ ಆದೀತು ಮಗನ್ನ ಕರೀರೆಂದಾ ॥

**||ಏರು||**

ಅತಿಥಿ ಆಡಿದ ವಚನವ ಕೇಳಿ
ಕರಿಲಿಕ್ಕೆ ಹ್ವಾದಾಳು ಚಂಗಳೆ ತಾನಾ
ನಡಗುತಿದ್ದಳು ಒಂದೇ ಸವನಾ ॥
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನ ॥ ಈ ॥

ಹೊರಗ ಬಂದ ಎತ್ತ ಹ್ವಾದ್ಯೋ ಮಗನ ಅಂತ
ದುಃಖದಿಂದ ಚಂಗಳೆ ತಾನಾ
ಕರದಾಳ ಮಗನ್ನಾ ।
ಅಪ್ಪಾ ಬಾರೋ ನೀನು ಇಲ್ಲದೆ ಅತಿಥಿ
ಮಾಡೋದಿಲ್ಲ ಅಂತ ಊಟವನಾ
ಕುಂತಾನ ಸುಮ್ಮನಾ ॥

ಸಾಲಿಗಿ ಹೋಗಿದ್ದ ಪುಸ್ತಕ ಕೈಯ್ಯಾಗ
ಓಡಿ ಬಂದ ಚೆಲ್ವಾಳ ತಾನಾ
ಯಾಕ ಕರದೆ ಅವ್ವಾ ನನ್ನಾ ॥
ಅಪ್ಪಾ ಬಾರೊ ಎಂದು ಗಪ್ಪನೆ ಎತ್ತಿಕೊಂಡು
ಒಳಗ ಬಂದಾಳ ಆ ಕ್ಷಣಾ
ಇಳಿಸ್ಯಾಳ ಮಗನ್ನಾ ॥

ಮೊದಲಿನ ವೇಷಾ ಬದಲ ಆಗಿ
ನಗ ಮುಖದಲ್ಲಿ ಕೂತಿದ್ದ ಶಿವನಾ
ಕಂಡಾರು ಅವನ್ನಾ ॥

ಗಂಡಾ ಹೇಣತಿ ಮಗಾ ಕೂಡಿಕೊಂಡ
ಗಟ್ಯಾಗಿ ಹಿಡದಾರ ಪಾದವನಾ
ಕಾಡಿದ್ಯೋ ನಮನ್ನಾ ॥

ಮಾಯಾ ರೂಪದಿಂದ ಮಾಂಸದ ಅಡಿಗಿ
ಪಂಚಾಮೃತ ಆತ ಆಕ್ಷಣಾ
ನೋಡ್ಯಾರು ಅದನ್ನಾ ॥
ನಾಲ್ಕು ಎಡಿಯಮಾಡಿ ನಾಲ್ವರು ಕೂಡಿ
ನಕ್ಕೊಂತ ಮಾಡ್ಯಾರ ಊಟವನಾ
ಆತ ನಿವಾರಣಾ ॥

ನಿಮ್ಮ ಸತ್ವ ಪರೀಕ್ಷೆ ಸ್ವಂತ ಮಾಡಲಿಕ್ಕೆ
ಮೃತ್ಯೇಕ ಇಳದ ಬಂದೆನು ನಾನಾ
ಆಗ್ರಿ ಉದ್ಧರನಾ ॥
ನಿಮ್ಮ ಭಕ್ತಿ ಭಾವಕ್ಕ ನಾನು ಧನ್ಯನಾದೆನು
ನಿಮ್ಮ ಸರಿ ಕಾಣೆನು ಯಾರನ್ನಾ
ಮೆಚ್ಚಿದೆ ನಿಮ್ಮನ್ನಾ ॥

ಯಾವ ವರವ ಬೇಕೊ ಬೇಡೋ ಅರಸಾ ನೀನು
ಹರುಷದಿಂದ ಕೊಡುವೆನು ನಾನಾ
ಯಾಕ ಅನುಮಾನಾ ॥
ನಮ್ಮನ್ನ ಕಾಡಿದಂತೆ ಮತ್ಯಾರ್ನು ಕಾಡಬ್ಯಾಡ್ರಿ
ಬೇಡುವೆ ಇದನಾ
ಇಲ್ಲ ಮತ್ತೇನಾ ॥

**ಒಂದನೇ ಚಾಲ**

ಸಿರಯಾಳಗ ಅಂತಾನು ಶಂಕರನು ಭೂಲೋಕ ಜನರನ್ನು
ಕಾಡೊದಿಲ್ಲ ನಾನು
ಹಿಂಗಂತ ವಚನ ಕೊಟ್ಟಾನು ॥

ಶಿವಾ ಅಂದ ಬಾಲ ಚೆಲ್ಲಾಳಗ ತಂದಿ ಸಿರಿಯಾಳಗ ತಾಯಿ ಚಂಗಳಿಗೆ
ಮುಕ್ತಿ ಕೊಡತೇನು
ಚಿರಂಜೀವಿ ಆಗಿ ಇರೋ ನೀನು ॥

ವರವ ಕೊಟ್ಟಾನು ಹಿಂಗ ಅವರ ತಲಿಮ್ಯಾಗ
ಹಸ್ತ ಇಟ್ಟಾನು
ಮರ್ತ್ಯ ಬಿಟ್ಟ ಮಾಯ ಆದಾನು ॥

**ಎರಡನೇ ಚಾಲ**

ಸಿರಿಯಾಳ ಅನಿಸಿದ ಗುಣಶೀಲಾ
ಚಂಗಳಿ ಹಂತಾಕಿ ಯಾರಿಲ್ಲಾ ॥

ಚೆಲ್ಲಾಳ ಇನ್ನೂ ಸಣ್ಣ ಬಾಲಾ
ಅವನ ಕೀರ್ತಿ ಹಬ್ಬಿತ ನಾಡಮ್ಯಾಲಾ ॥

ತಿಗಡೊಳ್ಳಿ ಮಾರುತಿ ಪ್ರಬಲ್ಲಾ
ಶಿಷ್ಯಾಗ ತಿಳಿಸಿದ ಕವಿ ಅಕಲಾ ॥

**॥ಏರು॥**

ಪಕ್ಕಾಶ್ಯಾಣೆ ಅಲ್ಲ ಹುಚ್ಚ ಮರಿಕಲ್ಲ
ಸಾರಾಂಶ ತಗದ ನೋಡಿದ ಕತನಾ
ಬರದಾನ ಹಸನಾ ॥

ಕಾಂಚಿಪುರದ ಸಿರಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನ ॥ ೬ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿಯ ಗೀಗೀ ಪದಗಳು

## ೪. ಜಗಜ್ಯೋತಿ ಬಸವಣ್ಣ

ಜಗಜ್ಯೋತಿ ಬಸವಣ್ಣನ ನೆನೆಯಿರೋ ಹಗಲಿರುಳು ಯನ್ನದೆ ॥ ಪ ॥

ಬಾಗೇವಾಡಿಯ ಭಾಗ್ಯದ ಬಸವಣ್ಣ ।
ಸಂಗಮ ನಾಥನ ನಂಬಿದ ಬಸವಣ್ಣ ।
ಜಂಗಮಸೇವೆಯ ಕೈಕೊಂಡ ಬಸವಣ್ಣ ।
ಮಂಗಲ ಮೂರ್ತಿ ಶೃಂಗಾರ ಬಸವಣ್ಣ ॥ ೧ ॥

ಹನ್ನೆರಡನೆ ಶತಮಾನದ ಬಸವಣ್ಣ ।
ಧನ್ಯಧನ್ಯ ಕ್ರಾಂತಿ ಪುರುಷನು ಬಸವಣ್ಣ ।
ಕನ್ನಡ ನುಡಿಯಲಿ ಬರಿಸಿದ ವಚನ ।
ಅನುಭವನ ಮಂಟಪ ಮಾಡಿದ ರಚನ ॥ ೧ ॥

ಜನತಾವಾದ ಉದ್ಯೋಗ ವಿಕೇಂದ್ರಿಕರಣ ।
ಜನತೆಗೆ ಕೊಟ್ಟೆನೋ ನೈತಿಕ ಶಿಕ್ಷಣ ।
ಘನವಾದ ಕಾಯಕ ಕೈಲಾಸವೆನುತ ।
ಮಾನವನಿಗೆ ಮಾರ್ಗದರ್ಶಕ ಬಸವಣ್ಣ ॥ ೨ ॥

ಸದ್ಭಾವನೆಯಿಂದ ಇದ್ದಾಂವ ಬಸವಣ್ಣ ।
ಸದ್ಬೋಧನೆಯಿಂದ ತಿದ್ದಾಂವ ಬಸವಣ್ಣ ।
ಅದ್ಭುತ ಕಾರ್ಯದ ಧುರೀಣ ಬಸವಣ್ಣ ।
ಬಿದ್ದ ಕೈಲಾಸ ಲಿಪಿ ಓದಿದ ಬಸವಣ್ಣ ॥ ೪ ॥

ಭಕ್ತಿ ಭಂಡಾರಿ ನಿತ್ಯ ಶಿವ ಶರಣ ।
ಯುಕ್ತಿಲೆ ತೋರಿಸಿದ ಮುಕ್ತಿ ಸೋಪಾನ ।
ಸತ್ಪಾತ್ರಕ್ಕೆ ನೀಡಿದನೋ ದಾನ ।
ಮೃತ್ಯುಂಜಯನಿಗೆ ಆದ ವಾಹನ ॥ ೫ ॥

ಶರಣ ಮಾರ್ಗದ ರಹಸ್ಯ ಅರಿತವ ।
ಪರಿಪೂರ್ಣ ದಲಿತೋದ್ಧಾರಕ ಬಸವಣ್ಣ ।
ಮರೆಯಲಾರದ ರಾಜಕಾರಣ ।
ಧರಣಿಯೊಳಗೆ ಮಾಡಿದ ಪರಿಪೂರ್ಣ ॥ ೬ ॥

ಮೂಲ ಷಟಸ್ಥಲ ಕಾರ್ಯಾಚರಣ
ಲೀಲಾ ತೋರಿಸಿದ ನೀಲಾಂಬೆ ರಮಣ ।
ಕಲಿಯುಗದಲಿ ಶಿವನೇ ಬಸವಣ್ಣ ।
ಹುಲಕುಂದ ಭೀಮಕವಿ ಮಾಡಿದ ಭಜನ ॥ ೭ ॥

**ರಚನೆ :** ಹುಲಕುಂದ ಭೀಮಕವಿ

**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

# ೫. ಬಸವಣ್ಣ

ಶಿವಹರಾ ಸ್ವಾಮಿ ಶಂಕರಾ ಸರ್ವಾಂಗ ಸುಂದರ
ಬೆಳಸಿದ ಶಿವಾಚಾರ ಪುಣ್ಯೇದ ಫಲದಿಂದಾ ॥
ಮರಳಿ ಜನಿಸೀದಾ ಕಲ್ಯಾಣಕ ಬಂದಾ ॥

ಶಿವನ ವಾಹನ ನಂದಿ ಬಸವಣ್ಣ ಶಿವಾಚಾರ ಪ್ರಕಟ ಮಾಡ್ಯಾನ
ಅಂಗಲಿಂಗ ಬೆರಸಿ ತೋರಿಸಿದಾ ತ್ರಿಗುಣಗಳ ಮೀರಿದಾ ॥
ಅಷ್ಟಾಂಗ ಸುದ್ಧ ಆಗಮ ಮಾರ್ಗ ಹಿಡಿದಾ ॥

ಚೌರ್‍ಯಾ ಅಂಸಿ ಜೀವರಾಸಿಗೆ ಅನ್ನದಾತ ಮಳಿ ಬೆಳಿ ಕೊಡುವಾತ
ಶಿವಾ ಆನಂದ ಶಿವಾ ಆನಂದಾ ॥
ಮೃತ್ಯುಲೋಕಕ್ಕೆ ಗೀತ ಪಾಡುತ ನಾರದ ಮುನಿ ಬಂದಾ ॥

ಹೊಳ್ಳಿ ಹೋದ ನಾರದ ಕೈಲಾಸಕ ಕೂತಾನ ಶಿವನ ಬದಿಯಕ
ತಿಳಿಸೀದಾ ಎಲ್ಲ ಕೌತುಕ ಹರನೆಂಬ ಶಬ್ದ ಇಲ್ಲಂದಾ ॥
ಹರಿಬೆಳಕ ಮೃತ್ಯಲೋಕದಲ್ಲಿ ಆಗೇತ್ರಿ ಮುಂದಾ ॥

**ಒಂದನೇ ಚಾಲ**

ಮಹಾದೇವ ತಾನು ಆವಾಗ ತಿಳಿಸ್ಯಾನು ನಂದೀಶ್ವರಗ
ಆಕ್ಷಣಾ ಅಪ್ಪಣಿ ಕೊಟ್ಟಾ
ಮೃತ್ಯು ಲೋಕಕ್ಕೆ ಹೋಗ ನೀ ಹೊಂಟಾ ॥
ಹೋಗಿ ಬೆಳೆಸಬೇಕ ಶಿವಾಚಾರ ನೂರಾರು ಗಣದವರ
ಅವರ ಸಾಯಕ್ಕ ಕೊಟ್ಟಾ
ವೀರಭದ್ರ ಅವತಾರ ಆತ ಗಟ್ಟಿಮುಟ್ಟಾ ॥

**ಎರಡನೇ ಚಾಲ**

ತಿಳಿಸಿ ಹೇಳ್ಯಾರು ಎಲ್ಲಾ ತತ್ವದ ಕೀಲಾ
ಗಂಟೆ ಮಡಿವಾಳನವತಾರ ಕಡಿಮಿಲ್ಲಾ ॥
ಶಿವನ ಬಾಗಿಲ ಕಾಯುವ ದ್ವಾರಪಾಲಾ
ಬಿಜ್ಜಳನವತಾರ ನಿನಗ ನಾಡ ಮ್ಯಾಲಾ ॥

**॥ಏರ॥**
ಹಿಂಗ ಅವರವರ ಕೆಲಸಾ ಒಪ್ಪಿಸ್ಯಾನ ಶಿವಾ ಭಗವಾನ
ಎಲ್ಲರಿಗೂ ಬೋಧ ಮಾಡಿ ಭೂಲೋಕಕ್ಕೆ ಕಳಿವಿದಾ ॥

ಬೆಳಸಿದ ಶಿವಾಚಾರ ಪುಣ್ಯೇದ ಫಲದಿಂದಾ
ಮರಳಿ ಜನಿಸೀದಾ ಕಲ್ಯಾಣಕ ಬಂದಾ ॥ ॥ ೧ ॥

ಜಿಲ್ಲಾ ಬಿಜಾಪುರ ಬಾಗೇವಾಡಿ ಊರ ಜಾತೀಲಿ ಬ್ರಾಹ್ಮಣರ
ಇದ್ದಾರ ಗಂಡ ಹೆಂಡಿರಾ ॥
ಮಾದರಸ ಗಂಡನ ಹೆಸರ ಮಾದಲಾಂಬಿಕೆ ಸತಿ ಸುಂದರಾ ॥

ಅವರೀಗೆ ಇದ್ದಿಲ್ಲ ಹುಡುಗೋರ ಅಲ್ಲಿ ಹುಟ್ಟಿ ಬಂದ ನಂದೀಶ್ವರ
ರೂಪ ಸುಂದರಾ ॥
ಅಕ್ಷಯ ತೃತಿಯಾ ಪಾಡ್ಯೆ ಸೋಮವಾರ ವಿಕ್ರಮನಾಮ ಸಂವತ್ಸರಾ ॥

ಆಗ ಆದ್ರ ಎಲ್ಲಾರು ಆನಂದ ವರುಷ ಹನ್ನೊಂದ
ತಾಯಿ ತಂದಿ ಪ್ರೀತಿ ಮಾಡುವರಾ ॥
ಶಿವವಾಕ್ಯದಂತೆ ಪವಾಡ ಮಾಡ್ಯಾರ ॥

ಕಲ್ಯಾಣಕ ಬಂದಾರ ಸಾಗಿ ಬಿಜ್ಜಳನ ಭೆಟ್ಟಿಗಿ ಆದೀತ ಲಗುಬಗಿ
ಒಳ್ಳೆ ಉಮ್ಮೇದ್ವರಾ ॥
ತಾಮ್ರ ಪಟಾ ಓದಿ ತೋರಿಸ್ಯಾರ ದ್ರವ್ಯ ತಗಿಸ್ಯಾರ ॥

ಎಂಟು ಮಂದಿ ಇದ್ರ ಸಭಾದಲಿ ಕುಂತಿದ್ರ ಅರಸರ ಬದಿಯಲಿ
ಅಂತಾವರ ಕಾರಬಾರ ॥
ಕುಂತವರಿಗೆ ಇಲ್ಲ ಖಬರ ಹಾಕತಾರ ಉಸರ ॥

**ಒಂದನೇ ಚಾಲ**

ಲಿಂಗ ಪೂಜಿಗಿ ಕುಂತಿದ್ರ ಬಸವಣ್ಣಾ ಆತ್ಮಮಯಾ ಪೂರ್ಣ
ನೂರಾರು ಹರಗಣದವರಾ
ಶಿವಶರಣರಾಗಿ ಜನಿಸಿದರಾ ॥
ಮಡಿವಾಳಪ್ಪನವರು ವೀರಗಂಟಿ ನಾದ ಹಿಡಿಸ್ಯಾರ ಮದ್ದಲಿಗಂಟಿ
ಕೇಳಿದರು ಕೈಲಾಸ ದೇವತೇರಾ
ಮುಳಿಗ್ಯಾರ ಆನಂದ ಸಾಗರಾ ॥

**ಎರಡನೇ ಚಾಲ**

ಪ್ರಮತ ಗಣಂಗಳು ಭೈರವಾದಿ
ಶಿವಾ ಪಾರ್ವತಿಗೆ ಆದೀತು ಉಮೇದಿ ॥

ಮಳಿ ಸುರಿಸ್ಯಾರ ಕಲ್ಯಾಣ ಪಟ್ಟಣದಿ
ಆನಂದ ಹೊಂದ್ಯಾರ ಎಲ್ಲಾ ಮಂದಿ ॥

**॥ಏರ॥**

ಬಿಜ್ಜಳ ಬಸವಣ್ಣಗ ಹೇಳಿದ ನಮ್ಮ ತಂಗಿನ್ನ ಮಾಡಿಕೊ ಅಂದ
ಗೋತ್ರ ನೋಡಂದಾ ॥
ಬೆಳಸಿದ ಶಿವಾಚಾರ ಪುಣ್ಯೇದ ಫಲದಿಂದಾ
ಮರಳಿ ಜನಿಸೀದಾ ಕಲ್ಯಾಣಕ ಬಂದಾ ॥ ॥ ೧ ॥

ನೀಲಾನ್ನ ಕೊಟ್ರ ಬಸವಣ್ಣಗ ಸತಿಪತಿ ಒಳೆ ಜೋಡಿ ನಾಡಾಗ
ರಾಜ ದರಬಾರ ಬಸವಣ ಕೈಯಾಗ ಆತ ಪ್ರಬಲ್ಲಾ ॥
ಲಿಂಗ ಚೆನ್ನ ತೋರಿತ ಬಸವರಾಜ ಅಂದ್ರ ಜನರೆಲ್ಲಾ ॥

ಜಾತಿ ಕುಲಾ ಹದಿನೆಂಟ ಏಕ ಬಳಿಕಿ ಆದೀತರಿ ಊಟ
ಬಸವ ಲೀಲಾಟ ಕೀರ್ತಿ ಹಬ್ಬಿತ ನಾಡಮ್ಯಾಲಾ ॥
ಬಸವಣ್ಣ ದೇವರೆನಿಸಿಕೊಂಡ ಲೀಲಾ ಶಿವಬಲ್ಲಾ ॥

ಬ್ರಾಹ್ಮಣ ಹರಿಜನರಿಗೆ ನಂಟ ಮಾಡಿಸಿದ ಬಂಟ
ಅಂದ್ರ ಕುಲಕಂಟ ಬಿಜ್ಜಳಗ ಹೇಳಿದಾರ ಖುಲ್ಲಾ ॥
ಬಿಜ್ಜಳ ಆದಾನು ಸಿಟ್ಟ ಯೋಚನಿ ಮಾಡಲಿಲ್ಲಾ ॥

ಹರಳಯ್ಯ ಮಧುವರಸರು ಅವರನ್ನ ಕರಸ್ಯಾರು
ಆನಿಕಾಲಿಗಿ ಕಟ್ಟಿ ಎಳೆಸ್ಯಾರು ಬಿಜ್ಜಳ ಅಂತಾನ ಇನ್ನಮ್ಯಾಲ ॥
ಕಿತ್ತಹೋತ ಪಾಪ ಉಳಿಲಿಲ್ಲ ಬಸವ ಹೊಂಟ ನಾಡಮ್ಯಾಲಾ ॥

**ಒಂದನೇ ಚಾಲ**

ಒಂದ ಲಕ್ಷ ತೊಂಬತ್ತಾರು ಸಾವಿರ ಗಣಂಗಳು ಆಗಿದ್ರ ತಯ್ಯಾರ
ಎಲ್ಲರನ ಕರಿ ಕಳಿಸ್ಯಾರು
ಎಚ್ಚರದಿ ನಡಿ ಅಂದಾರು
ಶರಣರು ಆದಾರ ಬಲು ಬೆಂಕಿ ಉಳಿಯಲಿಲ್ಲ ಶಾಂತಿ
ಬಿಜ್ಜಳನ ಎಳದ ಕೊಂದಾರು
ತಕ್ಕಂತಾ ಶಾಸ್ತಿ ಮಾಡ್ಯಾರು ॥

**ಎರಡನೇ ಚಾಲ**

ಚೆನ್ನ ಬಸವಣ್ಣ ಹೊಂಟಾರ ದಕ್ಷಿಣಕ
ಹೋಗಿ ಮುಟ್ಯಾರು ಉಳುವಿ ಗುಡ್ಡಕ ॥
ಗಂವಿಯೊಳಗ ಹೋಗೋ ಪೂರ್ವಕ
ಮಾತಾಡ್ಯಾರು ನಿಂತ ಕಡಿಯಕ ॥

**॥ಏರ॥**
ಎಲ್ಲರಿಗೂ ಅಂದರ ಇನ್ನ ಮುಂದ ಭೂಲೋಕ
ಪೂರ್ತಿ ಬಸವಣ್ಣಂದಾ ॥
ಬೆಳಸಿದಾ ಶಿವಾಚಾರ ಪುಣ್ಣೇದ ಫಲದಿಂದಾ
ಮರಳಿ ಜನಿಸೀದಾ ಕಲ್ಯಾಣಕ ಬಂದಾ ॥ ॥ ೩ ॥

ಬಸವೇಶ್ವರ ಮಹಿಮಾ ಎಷ್ಟಂತ ಹೇಳಲಿ
ಅವರ ಲೀಲಾ ನಡಿತ ನಾಡಮ್ಯಾಲಿ
ಕಲಿಯುಗದಲ್ಲಿ ಇಂಥವರು ಹುಟ್ಟಾಕಿಲ್ಲಾ ಮುಂದಾ ॥
ತ್ರತಾಕೃತಾ ದ್ವಾಪರ ಆಗಿಲ್ಲರಿ ಹಿಂದಾ ॥

ಇಂಥಾ ಲೀಲಾ ಆಗಿಲ್ಲ ಪೂರ್ವದಲ್ಲಿ ಹರಕೃತ ಯುಗದಲ್ಲಿ
ಮಹಿಮೆ ಇಂಥಾದಾ ॥
ಹರನೆಂಬೊ ಬೆಳಕ ಅಲ್ಲಿಂದಾ ಬೆಳಕ ಅಲ್ಲಿಂದಾ ॥

ನೋಡರಿ ಹಿಂಗ ಬರದಿತ್ತ ರಾಜೀವಂಬುದಿತ್ತ
ಶಂಭನ ಸ್ತಾನಾ ಮ್ಯಾಲಿಂದಾ ॥
ಸೃಷ್ಟಿಕರ್ತನು ಆಗಿ ತಾನಾ ಪಾಲನ ಮಾಡಿದಾ ॥

ಹದಿನೆಂಟ ಪುರಾಣಗಳು ಪೂರಾ ನಾಲ್ಕು ವೇದಗಳು ಮನೋಹರಾ
ಆನಂದದಿಂದ ಸ್ಥಳ ತೋರಿದಾ
ಪಂಚಾಚಾರ ಷಡಸ್ಥಳದಿಂದಾ ಬೆಳಕ ತೋರಿದಾ ॥

**ಒಂದನೇ ಚಾಲ**

ಇಂತು ಭೂಲೋಕದಲ್ಲಿ ಈ ಕಲಿಯುಗದಲ್ಲಿ
ಹೆಸರಾದರ ಬಸವಣ್ಣವರಾ
ಅವರ ಸರಿ ಇಲ್ಲ ಯಾರ್‍ಯಾರಾ ॥
ಸ್ವರ್ಗ ಮೃತ್ಯು ಪಾತಾಳಕ ಬಿದ್ದಿತರಿ ಬೆಳಕ
ತೇಜದಲ್ಲಿ ಸೂರ್ಯ ಚಂದಿರಾ
ಛಾಯ ಬಿತ್ತ ಶಿವ ಹರಹರಾ

**ಎರಡನೇ ಚಾಲ**

ಸರ್ವ ಜೀವಿಗಳಿಗೆ ಅನ್ನದಾತಾ
ಲೋಕದೊಳಗ ಅನಿಸಿದೊ ಪುಣ್ಯವಂತಾ ॥
ತಿಗಡೊಳ್ಳಿ ಊರ ಜಾಗಾ ಶಿಸ್ತಾ
ಬಲಭೀಮನ ದಯಾ ಐತಿ ಮಸ್ತಾ ॥

**||ಏರ||**
ಪದಾ ಕೇಳಿ ಆಗ್ರಿ ಆನಂದ ಕವಿ ಮಾಡಿದ ಮರಿಕಲ್ಲ ಇದೊಂದ
ಮರಿ ಬ್ಯಾಡ್ರಿ ಬಸವಣ್ಣನ ಪಾದಾ ॥
ಬೆಳೆಸಿದಾ ಶಿವಾಚಾರ ಪುಣ್ಯೇದ ಫಲದಿಂದಾ
ಮರಳಿ ಜನಿಸೀದಾ ಕಲ್ಯಾಣಕ ಬಂದಾ ॥ ೪ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿಯ ಗೀಗೀ ಪದಗಳು

## ೬. ಜಗಜ್ಯೋತಿ ಬಸವೇಶ್ವರ

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತೆಂಬೋಕ್ತಿಯನು ।
ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಸಿ ಭಾರತ ಬೆಳಗಿದನು ॥ ೧ ॥

ಶುದ್ಧ ಬ್ರಾಹ್ಮಣ ಮಾದರಸನ ಸುತ ಬಾಗೆವಾಡಿಯೊಳು ಜನಿಸಿದನು ।
ಬಿದಿಗೆಯ ಚಂದ್ರನ ತದುಪರಿ ಬೆಳೆದನು ಇಹಪರ ವಿದ್ಯೆಯ ಗಳಿಸಿದನು ॥ ೨ ॥

ಹದಗೆಡಿಸುವ ಖಲ ಮೂಲ ವಿಚಾರವ ಸದೆಬಡಿಯುವ ನಿಜತತ್ವವನು ।
ಮದಮತ್ಸರ ಮೋಹಾದಿ ಅಳಿಸುವ ಸದಸದ್ಗುರುವಿನ ಶೋಧವನು॥ ೩ ॥

**||ಚಾಲ||**

ತಂದೆ ತಾಯಿ ಬಂಧು ಬಳಗವನು । ಮಾಯಾ ಮೋಹವನು ।
ಅಳಿದು ಮನೆಬಿಟ್ಟು ನಡೆದು ಹಿಡಿದನು । ಕೂಡಲ ಸಂಗಮ ದಾರಿಯನು ।
ವಂದ್ಯ ಜಾತವೇದ ಮುನಿಯನ್ನು । ಮಾಡಿ ಸೇವೆಯನು ।
ಶಾಸ್ತ್ರ ವೇದಾಗಮ ಅಭ್ಯಾಸವನು । ಸಾಧಿಸಿದ ಆದಿ ಆತ್ಮನನು ॥
ಒಂದೇ ಇರುವ ಸರ್ವರಾತ್ಮವನು । ಮಾಡಿ ಭೇದವನು ।
ಜಾತೀಯತೆ ಅತಿ ದ್ವೇಷವನು । ನೋಡಿ ಮನದಿ ಬಹಳ ನೊಂದಿಹನು ॥

**||ಏರು||**

ಮೋದದಿ ಬ್ರಾಹ್ಮಣ ಧಾರ್ಮಿಕದೀಕ್ಷೆ । ಮಾದರಸನು ತಾ ಮಾಡುವುದಕ್ಕೆ
ಪ್ರೇಮದಿ ಕರೆಸಿ ಹೇಳತಾರ ಬಸವಣ್ಣನ॥ ೧ನೆಯ ಚೌಕ ॥

ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ॥
ಸೊಟ್ಟಮೂರು ಎಳೆಕಟ್ಟಿದರೇನು । ನಿಷ್ಠೆಬೇಕು ನಿಜ ತಿಳಿಯುದಕೆ ।
ಮುಟ್ಟುವ ಗುರಿಯನು ಸ್ಪಷ್ಟ ತೋರಿಸುವ । ಶ್ರೇಷ್ಠ ತತ್ವಮತ ಧರಿಸುದಕೆ ॥ ೧ ॥

ನಷ್ಟವಾದ ವೀರಶೈವ ಶ್ರೇಷ್ಠಮತ । ಸೃಷ್ಟಿಸಿ ಪುನಃ ಉದ್ಧರಿಸುದಕೆ ।
ಶ್ರೇಷ್ಠ ಇಷ್ಟಲಿಂಗ ಕಟ್ಟಿ ನಡೆದನು । ಅಷ್ಟಾವರಣವ ತಿಳಿಯುದಕೆ ॥ ೨ ॥

ಅಷ್ಟರಲ್ಲಿ ಬಲದೇವ ಮಾವನು । ಮಗಳು ಗಂಗಾಂಬಿಕೆ ವರಿಸುದಕೆ ।
ಇಷ್ಟದಿಂದ ಕರೆಸಿದನು ಕಲ್ಯಾಣಕ್ಕೆ । ಮಂತ್ರಿಪದವ ಒಪ್ಪಿಸುವದಕ್ಕೆ ॥ ೩ ॥

**॥ಚಾಲ॥**

ಬಲದೇವಮಾವ ಮಡಿದನು । ಅಳಿಯ ಬಸವನ ।
ಕರೆದುಕೊಟ್ಟಾನ ಮಂತ್ರಿಪದವನು । ಕಲ್ಯಾಣ ರಾಜ ಬಿಜ್ಜಳನು ॥
ಬಸವಣ್ಣ ಲಿಪಿ ಓದಿದನು । ನೆಲವ ಅಗಿಸಿದನು ।
ಮುತ್ತು ರತ್ನದ್ರವ್ಯ ತೆಗೆಸಿದನು । ಬಿಜ್ಜಳ ರಾಜ ಮೆಚ್ಚಿದನು ॥
ಕೀರ್ತಿಯ ಪಡೆದನು ಬಸವಣ್ಣ । ಮಾಡಿ ನಡೆಸಿಹ ಧಾರ್ಮಿಕ ಜ್ಞಾನ ।
ಮಂತ್ರಿಕಾರ್ಯದ ಮಾನ । ಪರಮಾರ್ಥ ಚರ್ಚಾಕೂಟವನು ॥

**॥ಏರು॥**

ಜಾತಿ ವಿಜಾತಿ ಭೇದವ ತೆಗೆದು । ನೀತಿಯೆ ನಿಜವಾದ ಜತಿಯು ಎಂದು ।
ಮಾತಿನ ಚರ್ಚೆಗೆ ರಚಿಸಿದನವನು ಅನುಭವ ಮಂಟಪವ॥ ೨ನೆಯ ಚೌಕ ॥

ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ॥
ಅನುಭವ ಮಂಟಪ ಅಧ್ಯಕ್ಷತೆಯನು । ಅಲ್ಲಮಪ್ರಭುವರ ವಹಿಸಿದನು ।
ಚೆನ್ನಬಸವ ಮೆರೆಮಿಂಡದೇವ । ತಿರುವಾಂಕುರೀಶ ಚೋಳ ಚೌಡಯ್ಯನು॥ ೧ ॥

ಕಿನ್ನರಿ, ಕೋಹಾರ ಬೊಮ್ಮಯ್ಯ । ಹರಳಯ್ಯ ಕಕ್ಕಯ್ಯ ಮಡಿವಾಳ ಮಾಚಯ್ಯನು ।
ಪೊನ್ನಾಂಬಲ ಮಾರಯ್ಯ ಕೇತಯ್ಯ । ಓಹಿಲಾರ್ಯ ಶಿವಶರಣರನ॥ ೨ ॥

ಅಣ್ಣನ ಬಳಗದ ಹಿನ್ನಲೆಯಾಗಿ । ಅಕ್ಕನ ಬಳಗವ ಬೆಳೆಸಿದನು ।
ಹೊನ್ನಮ್ಮ ಲಕ್ಕಮ್ಮ ಅಕ್ಕಮಹಾದೇವಿ । ಜ್ಞಾನವಂತ ಶರಣೆಯರನು॥ ೩ ॥

**॥ಚಾಲ॥**

ಜೀವಿಗಳೆಲ್ಲ ಒಂದೇ ಜಾತಿ | ಎಲ್ಲರಲಿ ಪ್ರೀತಿ |
ದಯವಿರುವದೇ ಧರ್ಮದಮೂಲ ಉಚ್ಚ ನೀಚ ಜಾತಿಯಲಿಲ್ಲ ||
ದೇವನೊಬ್ಬನಿರುವನೆಲ್ಲರಲಿ | ಸರ್ವ ಹೃದಯದಲಿ |
ತಿಳಿದುನಡೆಯುವದೇ ನೀತಿಯ ಮೂಲ | ನೀತಿಗೆ ಜಾತಿ ಭೇದವಿಲ್ಲ ||
ಭಾವ ಶುದ್ಧಬೇಕು ಸರ್ವರಲಿ | ಸಲ್ಲಬೇಕು ಇಲ್ಲಿ |
ಅಲ್ಲಿ ಸಲ್ಲುವವರು ಮಾತಿನಮೂಲ | ಅರಿ ಕೃತಿಯಲ್ಲಿ ಮಾತಿನಲ್ಲಿಲ್ಲ ||

**||ಏರು||**

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜನರು ಸುಧೆಯುಂಡವರು |
ತಾತ್ವಿಕ ನುಡಿಯನು ನಡೆದು ತೋರಿಸಿದ ಸ್ವತಃ ಬಸವಣ್ಣನು|| ೩ನೆಯ ಚೌಕ ||

ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ||
ಅನುಭವ ಮಂಟಪ ದಿನದಿನ ಬೆಳೆಯಿತು | ಕೈಲಾಸವೆನಿಸಿತ್ತು ಕಲ್ಯಾಣ
ಮಾನವ ಕುಲ ಉದ್ಧಾರವಾಗುವ | ವೀರಶೈವ ಮತ ಹೆಚ್ಚಾಯ್ತು|| ೧ ||

ಅನ್ಯರ ಕುಲವನು ಸೇರನು ಎಂಬ | ಮತ್ಸರ ಭಾವನೆ ಹುಟ್ಟಿತ್ತು |
ಕನಲಿದ ಕೊಂಡಿ ಮಂಚಣ್ಣರ ಜಾಡಿಗೆ | ರಾಜನ ಮನವದು ಒಡೆದಿತ್ತು|| ೨ ||

ಋಣಸಂಬಂಧ ಮಧುವಯ್ಯ ಹರಳಯ್ಯ | ರಾಜನ ಕಿವಿಗೆ ಮುಟ್ಟಿತ್ತು |
ಕಣ್ಣು ಕಿತ್ತಿಸಿ ಇಬ್ಬರ ಶಿಕ್ಷಿಸಿದ್ದು | ಜನತೆಯ ಈರ್ಷೆಗೆ ಗುರಿಯಾಯ್ತು|| ೩ ||

**||ಚಾಲ|||**

ಕಲ್ಯಾಣ ಕ್ರಾಂತಿ ಎದ್ದಿತು | ಕೊಲೆಯು ನಡೆಯಿತು |
ಬಿಜ್ಜಳನ ಮರಣವಾಯಿತು | ಬಸವಗೆ ದೋಷ ತಟ್ಟಿತು ||
ಶರಣರ ಕೊಲೆಯು ತಿಳಿಯಿತು | ಬಸವಗೆ ಕಸವಿಸಿಯಾಯಿತು |
ನಾಲ್ಕೂ ದಿಕ್ಕಿನ ಹೋಳಿಗೆ ಮನನೊಂದು | ಅಣ್ಣನು ಕೂಡಲ ಸೇರಿದನು ||
ಬಸವನ ತತ್ವವೆ ವಚನಗಳಾದವು | ಎಂಟು ನೂರು ವರ್ಷದ ಈ ಮಾತು |
ಇಂದಿಗು ನಾಡಲಿ ಮೆರೆಯುತಿದೆ | ವಾಲಿ ಶರಣರ ಹಾಡಿನಲಿ ||

**||ಏರು||**

ಬಸವನ ಚರಿತೆಯ ಬಣ್ಣಿಸಿ ಬೆಳೆಸದೆ ಕನ್ನಡಿ ಹಿಡಿದು ತೋರುವ ತೆರದಿ |
ವಿಶ್ವಮಾನ್ಯ ಬಸವಣ್ಣನ ಚರಿತೆಯ ಕೇಳಿರಿ ಕೂಡಿದ ಜನರೆಲ್ಲ|| ೪ನೆ ಚೌಕ ||
ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ||

**ರಚನೆ : ಶರಣಪ್ಪ ವಾಲಿ**

**ಕೃತಿ : ಶರಣಸ್ಮೃತಿ**

## ೭. ಸೊಲ್ಲಾಪೂರ ಸಿದ್ಧರಾಮೇಶ್ವರ

**ದಾಟಿ : ಮೈಸೂರ ಲಾವಣಿ**

ಕಲಿಯುಗದೊಳಗ ಕರ್ಮ ಹೆಚ್ಚಾದಾಗ ಧರ್ಮದ ಗುರುಗಳು ಬರುತಿಹರು।
ಕಾಲ ಕರ್ಮ ನಿರ್ಮೂಲನ ಮಾಡುವರು।
ಮೂಲ ಮರ್ಮದ ಮಾತಿನ ಮಜಕೂರು।
ಸೊಲ್ಲಾಪೂರ ಊರಲ್ಲಿ ಆದ ಕಥಿ ಎಲ್ಲರೂ ಕೇಳಿರಿ ಬಲ್ಲವರು॥ ಪ॥

ಎಂಭತ್ತೊಂಬತ್ತು ವರುಷ ತುಂಬಿದ ವಯಸ್ಸು ಮುಪ್ಪಿನವರು ಗಂಡ ಹೆಂಡಂದಿರು
ಮುದ್ದುಗೌಡ ಸುಗ್ಗಲದೇವಿ ಎಂಬವರು
ಖುದ್ಧ ಮಕ್ಕಳಿಲ್ಲದೆ ವದ್ದಾಡವರು।
ಮುದ್ದಾಂ ರೇವಣಸಿದ್ಧ ಗುರುಗಳು ವೃದ್ಧರಲ್ಲಿ ದಯಮಾಡಿಸಿದರು।
ಅಂತರಂಗದಲ್ಲಿ ಚಿಂತಿ ಮಾಡುತ ದಂಪತಿಗಳು ಪಾದಕೆರಗಿದರು।
ಭ್ರಾಂತಿ ಬಡದನಿಂತ ಕೊಂಡ ಮರಗಿದರು।
ಸ್ವಂತ ಸಂತತಿ ಇಲ್ಲಂತ ಕೊರಗಿದರು।
ಕಂತುಹರಾ ನಮಗೆಂಥ ವ್ಯಾಳೆ ತಂದ ಶ್ರೀಮಂತಿಕೆ ಯಾತಕೆಂದಾರು।

ಶಾಂತ ಮೂರ್ತಿಗೆ ಸಂತಾನ ಸಮೃದ್ಧಿರಸ್ತು ಬಂತ ಬಾಯಿಲೆ ಆಶೀರ್ವದಿಸಿದರು
ಕಾಂತಿಗೆ ಪುತ್ರವತೀ ಭವ ಅಂದಾರು।
ಕುಂತ ನಿಂತವರು ಆಶ್ಚರ್ಯ ಹೊಂದಿದರು।
ಅಂತ್ಯ ಕಾಲಕ್ಕ ಎಂತ ಮಕ್ಕಳಿವರ್‍ಧೆಂತ ಹರಿಕೆ ಕೊಟ್ರ ಗುರುವರು॥

ಸರೋವರ ನೀರೊಳು ಮುಳಿಗಿ ಬರ್ರಿ ಅಂತ ಗುರುಗಳು ಈರ್ವರಿಗ್ಹೇಳಿದರು।
ತ್ವರತದಿ ಸತಿಪತಿ ಸ್ನಾನ ಮಾಡಿದರು।
ವರ ಭಸ್ಮ ಗುರುವರರು ಕೊಟ್ಟಾರು।
ಶರೀರಕ್ಕೆ ವಿಭೂತಿ ಧರಿಸಿದ ಕೂಡಲೆ ತರುಣರಾಗಿ ಕರ ಮುಗಿದಾರು॥

ಶ್ರೀಗಳ ದಯದಿಂದ ಸುಗ್ಗಲಮ್ಮ ಸೌಭಾಗ್ಯದ ಗರ್ಭವ ಧರಿಸಿದರು।
ಮೊಗ ಬಿಳುಪರೀ ಆಲಸ್ಯ ಹೊಂದಿದರು।
ಆಗ ಶಿವರೂಪ ಬಯಕೆಯ ಬಯಸಿದರು।
ಸಾಗಿ ಮಂಚಕ ಹೋಗಿ ಮಲಗಿ ಶಿವಯೋಗಿ ಮಗನನು ಹೆತ್ತಾರು॥

ನರರೂಪ ಧರಿಸಿ ಧರೆಗವತರಿಸಿದ ಪರಮನೆಂದು ಜನ ನೆರೆದಾರು |
ಹರಿಹರ ಮಹಾದೇವ ಶಬ್ದ ಕೇಳಿದರು ದೇವಲೋಕದಿ
ಬಂದ್ರ ಪಾರ್ವತೆಮ್ಮನವರು |
ಹರುಷದಿ ತೊಟ್ಟಿಲ ಜುರು ಜುರು ತೂಗೂತ
ಪರಿ ಪರಿ ಜೋಗುಳ ಪಾಡಿದರು ||

**ಜೋಗುಳ ಪದ**

ಜೋ ಜೋ ಜೋ ಜೋ ಸಿದ್ಧರಾಮಯ್ಯಾ |
ಜೋ ಜೋ ಜೋ ಜೋ ಮುದ್ದು ಕಂದಯ್ಯಾ|| ಜೋ ||

ಹಾಲುಂಡ ಲೋಲಾಡು ಮೂಲ ನನ್ನಯ್ಯಾ |
ಪಾಲನ ಕರ್ತ ಹೋಗಿ ಬಾಲನಾದಯ್ಯಾ ||
ಚಲುವ ಸೊಲ್ಲಾಪೂರದ ಸಿದ್ಧರಾಮಯ್ಯಾ|| ೧ ||

ಹತ್ತು ವರುಷದ | ತನಕ ಹೆತ್ತಮ್ಮನ ಕೂಡ ಮಾತಿಲ್ಲ ಸಿದ್ಧರಾಮಯ್ಯನವರು |
ನಿತ್ಯ ಗೋವುಗಳ ಕಾಯಲಿಕ್ಕೆ ಹೋಗುವರು |
ಅತ್ತ ಅಡವಿಯೊಳು ಲಿಂಗ ಪೂಜೆ ನಡಿಸುವರು |
ಉತ್ತಮ ತರದ ಪತ್ರಿ ಪುಷ್ಪಗಳ ಮತ್ತಷ್ಟ ಲಿಂಗಕ್ಕೆ ಏರಿಸುವರು ||

ಭಕ್ತಿಗೆ ಮೆಚ್ಚಿ ಪ್ರತ್ಯಕ್ಷ ಹೊರಟರು ಶ್ರೀ ಶೈಲದಿಂದ ಮಲ್ಲಯ್ಯನವರು |
ಶಕ್ತಿ ಅವತಾರಿ ಭ್ರಮರಾಂಬಿಕೆಯವರು |
ಸತ್ವ ಪರೀಕ್ಷೆ ಮಾಡಲಿಕ್ಕೆ ಹೊರಟಾರು |
ಸೀತನಿ ತಿನ್ನುವ ಬೇತ ಮಾಡಿಕೊಂಡು ಆತುರದಿಂದ ಭೆಟ್ಟಿ ಕೊಟ್ಟಾರು ||

ಬಿಳಿ ಜೋಳ ಎಳಿ ಎಳಿ ಬೆಳಿಸಿ ತಿನ್ನುವ ಕಳಕಳಿಯಿಂದ ಅಲ್ಲಿಗಿಳಿದವರು |
ಒಳ್ಳೆ ಗಿಳಿಕೂಡ ತೆನಿಗಳ ಕೇಳಿದರು |
ಬುಳು ಬುಳು ಕಾಲಬೀಳಬೇಕೆ ಬಲು ಜೋರು |
ಕಳಕಳ ತೆನಿ ಮುರಿದು ಝಳ ಝಳ ಬೆಂಕಿಲೆ ವಳಿತಾಗಿ ಸುಡಂತ ಹೇಳಿದರು.
ಕಾಕುಳ್ಳ ಪುಟ ಮಾಡಿ ನಾಲ್ಕೆಂಟ ತೆನಿ ತಂದ ಹಾಕಿ ಸುಟ್ಟ ಶಿವಯೋಗಿಯವರು |
ಸಾಕಷ್ಟ ಉದರಿಸಿ ಕೊಟ್ಟಾರು |
ಬೇಕಂತ ನೆವ ತಗದ ಮಲ್ಲಿಕಾರ್ಜುನರು |
ಸಂಕಟ ಬಹಳ ನನಗ ಸಾವತೀನ ಅಂತ ಹೊರಳಾಡಿ ಅಳಲಿಕ್ಕೆ ಹತ್ತಿದರು ||

ಪ್ರಾಣ ರಕ್ಷಣಕ ಅನ್ನ ಮಸರ ಬುತ್ತಿ ತನ್ನಿರೆಂದು ಕಣ್ಣ ತಿರವಿದರು |
ಸೊನ್ನಲಗಿಗೆ ಹೋದ್ರ ಶಿವ ಶರಣರು |

ತನ್ನ ತಾಯ ಸುಗ್ಗಲ ದೇವಿಗ್ಹೇಳಿದರು ।
ಚನ್ನಾಗಿ ಕೆನೆಮೊಸರನ್ನದೊಳಕ ಕಲಿಸಿ ಉಣಲಿಕ್ಕೆ ಕೊಟ್ಟ ಕಳುಹಿದರು ॥

ತಿರುಗಿ ಬರುದರೊಳು ಮಾಯವಾಗಿದ್ದರು ಇದ್ದಿದ್ದಿಲ್ಲ ಅಲ್ಲಿ ಯಾರ್‍ಯಾರು ।
ಅರಿಯದೆ ಮರಾ ಮರಾ ಮರಗಿದರು ।
ಗಿರಿ ಮಲ್ಲೇಶ ಅಂತ ಚೀರಾಡಿದರು ।
ಅರಣ್ಯದೊಳಗೆ ಹುಡಕಂತ ನಡೆದಾಗ ಪರ್ವತಕೋಗುವರು ದೊರತಾರು ॥

ಪರ್ವತ ಗಿರಿ ಮೇಲೆ ಇರತಾನಂತ ಹೇಳಿ ಕರಕೊಂಡ ಹೋದರು ಯಾತ್ರಿಕರು
ತಿರ ತಿರುಗಿ ನೋಡಿದರು ಸಿಗಲೊಲ್ಲರು ।
ಕರ ಕಳಕೊಂಡಾವಿನಂತೆ ಮಿಡಿಕಿದರು !
ಹರಿಯುವ ಝರಿ ಕಾಂತಾರ ಶೋಧಿಸಿ ಪರ್ವತ ಶಿಖರಕ್ಕೇರಿದರು ॥

ಅಲ್ಲಿಯು ಮಲ್ಲಯ್ಯ ಇಲ್ಲದ್ದನ್ನು ನೋಡಿ ಹಲ್ಲಣ್ಣಾರಿ ಸಿದ್ಧೇಶ್ವರರು
ಮೇಲಿಂದ ಕೊಳ್ಳದೊಳು ಹಾರಿದರು ।
ಎಲ್ಲ ಪ್ರಾಣ ಶರೀರದಾಶೆ ನೀಗಿದರು ।
ಅಲಲ ಅಂತ ಅಲ್ಲಿ ಮಲ್ಲಿಕಾರ್ಜುನ ಬಂದ ಬಲ್ಲದ ಶರಣನ್ನ ಉಳಿಸಿದರು

ಪರ್ವತ ಮೇಲಿರುವ ಅರವತ್ತೆಂಟು ಲಿಂಗ ಸೊಲ್ಲಾಪೂರಕ ತಂದಿರಿಸಿದರು
ಗುರು ಚನ್ನ ಬಸವನಿಂದ ದೀಕ್ಷೆ ಹೊಂದಿದರು ।
ಸರಳ ವಚನಗಳನ್ನ ಸ್ವಂತ ಸಾರಿದರು ।
ಪರಮ ಶಿವಯೋಗಿ ಚರಿತೆಯ ಲಾವಣಿ ಹುಲಕುಂದ ಭೀಮಕವಿ ಸಾರಿದರು॥ ೨ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೮. ಮೋಳಿಗೆಯ ಮಾರಯ್ಯ

ಮೋಳಗಿಯ ಮಾರಯ್ಯಾ ಭಕ್ತಾ । ಬಸವೇಶನ್ನ ಸೋಲಿಸಿದಾತಾ ॥ ಪ ॥

ನಿತ್ಯ ಅರಣ್ಯಕ್ಕೆ ಹೋಗತಿದ್ದ । ಕಟ್ಟಗಿ ತರತಿದ್ದ ।
ಶಿವಶರಣರಿಗೊಯ್ದು ಮಾರತಿದ್ದ । ಸ್ವಂತ ಬಂದ ಹಣದಿಂದ ಧಾನ್ಯ ತರವೂತಾ ॥ ೧ ॥

ಅಂಬಲಿ ಕಾಸಿ ಆಗತುರ್ತಾ । ಜಂಗಮರಿಗೆ ಉಣಸುವ ನಿಂತಾ ॥
ಬಸವೇಶನ ದಾಸೋಗದೊಳಗಿಂದ । ಮೃಷ್ಟಾನ್ನ ಉಂಡ ಬಂದ ।
ಅಂಬಲಿ ಕುಡಕುಡದು ಹೋಗುವರು ಖಚಿತಾ । ಅಮೃತಕಿಂತ ರುಚಿ ಅಂತಾ ॥ ೨ ॥

ಬಸವಣ್ಣಗ ತಿಳಿದೀತ ಈ ಮಾತಾ । ವೇಷ ಬದಲಿಶ್ಯಾನ ಬೇಕಂತ ॥
ಅಯ್ಯನವರ ರೂಪವನು ಧರಿಸಿ । ಹೋದ ಧಾವಿಸಿ ॥
ಭಕ್ತಿ ಪರೀಕ್ಷಿಸಿ ನೋಡಬೇಕಂತಾ । ಹಸಿವ್ಯಾಗೇದ ಊಟಕ ಹಾಕಿರೆಂತಾ॥ ೩ ॥

ಮಾರಯ್ಯನ ಹೆಂಡತಿ ಪತಿವ್ರತಾ । ಕರಕೊಂಡ ಹೋದ್ಲ ಮಾಡಿ ಮಮತಾ ॥
ಒಳಗ ಉಚಿತ ಆಸನ ಹಾಸಿ । ಲಿಂಗಾರ್ಚನೆ ಮಾಡಿಸಿ ।
ಇದ್ದದ್ದ ಉಣಬಡಿಸಿ ತೃಪ್ತಿಪಡಿಸುತಾ । ಸಂತೋಷದಿ ಊಟವಾಯ್ತು ಸಿಸ್ತಾ॥ ೪ ॥

ಹೊರಗ ಬರುವಾಗ ತಗದಾನು ಬೇತಾ । ಚರಗಿ ಹತ್ತರ ಮಾಡಿ ಮಸಲತ್ತಾ ॥
ಎರಡು ಸಾವಿರ ವರಹ ತುಂಬಿದ । ಎರಡು ಚೀಲ ತಗದ ।
ಮರೆಗೆ ಇಟ್ಟು ನಡದ ಶರಣು ಶರಣಂತಾ । ಮಾರಯ್ಯನ ಮಡದಿಗೆ ತಿಳಿಯದಂತಾ॥ ೫ ॥

ಮಾರಯ್ಯನು ಹೊರಗಿಂದ ಬರುತಾ । ಸ್ನಾನ ಮಾಡಿ ಪೂಜೆಗೆ ಕೂಡ್ರುತಾ ॥
ನೀರಿನ ಪಾತ್ರೆಯ ಬದಿಲಿದ್ದ । ವರಹದ ಚೀಲ ತಗದು ।
ಮರ ಮರ ಮರುಗಿದ ಯಾರ ಇಟ್ಟಾರಂತ । ಸತಿಯಳನ ಕೇಳಾನ ಏಕಾಂತಾ॥ ೬ ॥

ಶರಣನೊಬ್ಬ ಬಂದಿದ್ದ ಈ ಹೊತ್ತಾ । ಗರತಿ ಹೇಳ್ಯಾಳ ಗುರ್ತ ಹತ್ತಲಿಲ್ಲಂತಾ ॥
ಹಣದ ಚೀಲ ತಾನೆ ಹೊರಗಿಟ್ಟ । ದಾನ ಕೊಟ್ಟ ಬಿಟ್ಟ ।
ಜಾಣತನವೆಷ್ಟು ಜ್ವಾನಿಗಿಲ್ಲ ಸ್ವಾರ್ಥ । ಕಾಯಕವೆ ಕೈಲಾಸವೆನುತ॥ ೭ ॥

ಗುರುಗಳ ಪಾದೋದಕ ತೀರ್ಥಾ । ಹೊರಿ ಮೇಲೆ ಓದ ಚಿಮುಕಿಸುತಾ ॥
ಬಂಗಾರಾತ ತುಣಕ ಮಾಡಿ ಮಾಡಿ । ಜಂಗಮರಿಗೆ ನೀಡಿ ।
ಮಂಗಳಾರತಿ ಹಾಡಿ । ಹರುಷವಾಗಿರುತಾ । ಬಸವರಸನ್ನ ಕರಿ ಕಳಿಸುತಾ॥ ೮ ॥

ಭಕ್ತಿ ಭಾಂಡಾರಿಗಾದಿತ ಗೊತ್ತ । ಮುಕ್ತಿ ಬೇಡಿಕೊಂಡ ಮುಂದ ಬಂದ ನಿಂತಾ ॥
ಮಾಚಿ-ದೇವನ ಮೊಮ್ಮಗ ಹಂಗಿಸಿದ । ವೃಷಬೇಶ ನಿನ್ನಿಂದ ।
ಬಡತನ್ಹೋತ್ನಂದ । ಅಂದ ನಗ ನಗುತಾ । ಹುಲಕುಂದ ಭೀಮನ ಕವಿ ಚಮಾತಾ॥ ೯ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೯. ಶಿವಶರಣ ಕಿನ್ನರಿ ಬೊಮ್ಮಯ್ಯ

ಸರ್ವದೈವಕ ಶಿರವ ಬಾಗಿ ಕರವ ಮುಗಿದು ಹೇಳುವ ನಿಂತು ।
ಶಾರದೆ ಸ್ಮರಿಸಿ ಸಾರುವೆ ಕಿನ್ನರಿ ಬೊಮ್ಮಯ್ಯನ ಕಥಾ ।
ಶಿವಾಚಾರ ಶೀಲಸಂಪನ್ನ ಶಿವನ ಪೂಜಿಸುವ ಭಕ್ತ ।
ಶಿವನಿಗೆ ತನು ಮನವೊಪ್ಪಿಸಿ ಶಿವನಕೂಡಿ ಆದನು ಸನ್ಮುಕ್ತ ॥

ಸಂಗೀತ ವಿದ್ಯೆಯ ಇಂಗಿತ ತಿಳಿದು ಇಂಪಾದ ಕಿನ್ನರಿ ಬಾರಿಸುತ ।
ಲಿಂಗ-ಜಂಗಮ-ಗುರುವಿನ ಪೂಜಿಸಿ ಭಕ್ತಿಲೆ ನಡೆಯುತ ।
ಗಾನಲೋಲನಾಗಿ ಧ್ಯಾನಿಸಿ ಜಂಗಮರಿಚ್ಛೆಯ ತೀರಿಸುತ ।
ಅನ್ನ-ವಸ್ತ್ರ ದಾನ ಮಾಡಲು ಅವನ ಆಸ್ತಿಯು ತೀರಿತ ॥

**||ಚಾಲ||**

ಇದ್ದ ಆಸ್ತಿಯೆಲ್ಲ ಹೋಯ್ತಂತ ಆಗಲಿಲ್ಲ ಭ್ರಾಂತ ।
ಮನಸು ಮಾಡಿ ಶಾಂತ ಆನಂದದಿಂದ ಶಿವನ ಒಲಿಸಿ ಗಾಯನದಿಂದ ॥
ಶಿವನೊಲಿದು ಕೊಡುತಲಿರೆ ಹಣ ತಂದು ಅಡಿಗೆ ಮಾಡಿ ।
ಜಂಗಮಭಕ್ತಿ ಪ್ರೀತಿಯಲಿ ಮಾಡಿ ಮೋದದಿ ಬೊಮ್ಮಯ್ಯ ದಿನಗಳೆಯುವನಾ ॥
ಕಲ್ಯಾಣದಲ್ಲಿಯ ಹೆಸರನೊಂದು ಬಲ್ಲಿದ ಬಸವ ಎಂಬುದನಂದು ।
ನಾಲ್ಕು ಕಡೆಯಿಂದ ಕೇಳಿ ಹೊರಟ ತನ್ನ ಊರಿಂದ ।

**||ಏರ||**
ಇಷ್ಟಲಿಂಗದಲ್ಲಿ ಕಂಡ ಬೊಮ್ಮಯ್ಯನು ಶ್ರೇಷ್ಠ ಬಸವನನು ಹುಡುಕುತ ॥ ೧ನೆಯ ಚೌಕ ॥
ಕಲ್ಯಾಣ ಪಟ್ಟಣದ ಎಲ್ಲ ಜಂಗಮರ ಮಧ್ಯ ಬೊಮ್ಮಯ್ಯ ತಾನಿರುತ
ಬಲ್ಲಿದ ಶರಣರ ಬಳಗದ ನಡುವೆ ಕಾಲವ ಕಳೆಯುತ ।
ಕೆಳಗಿನ ಓಣಿಯ ಸೂಳಿಯೊಬ್ಬಳು ವಿಟನಕೂಡ ಸರಸವಾಡುತ ।
ಸೂಳಿ ಅಂತಾಳ ವಿಟ ಪುರುಷನಿಗೆ ಮಾರಿ ಹಬ್ಬ ಮಾಡೋಣ ಅಂತ ॥
ಸೂಳಿಯ ಮಾತ ಕೇಳಿ ಹೊಂಟಾನೋ ಕುರಿಯನೊಂದ ತರಬೇಕಂತ ।
ಹೇಳಿದಷ್ಟು ಬೆಲೆಯನಿತ್ತು ತಂದನು ಕುರಿಯ ಜಗ್ಗಾಡುತ್ತ ॥

**||ಚಾಲ||**

ಊರ ಹೊರಗ ಇತ್ತ ಒಂದು ಗುಡಿ ಬೊಮ್ಮಯ್ಯ ಧ್ಯಾನ ಮಾಡಿ ।
ಸಹಜ ಕೂತಿದ್ದಾ ಬಾಗಿಲ ತೆರೆದು ತ್ರಿಪುರಾಂತಕಾ ಎಂಬ ದೇವರದ ।
ಆ ಕುರಿಯು ಸಾವಿಗೆ ಹೆದರಿ ಒದರತಾದ ಚೀರಿ ।
ಅತ್ತಿತತ ಓಡಿ ಹೌಹಾರಿ ಗುಡಿಯೊಳಗ ಹೋಗಿ ಸೇರ್‍ಯಾದ ।
ವಿಟಪುರುಷ ಬೆನ್ನ ಹತ್ಯಾನ ಗುಡಿಯ ಹೊಕ್ಕಾನ
ಕುರಿಯ ಹಿಡಿದು ಮನಸಿನಾಗ ಅಂದಾ ಆಯುಷ್ಯ ಮುಗಿತು ನಿನ್ನದ ।

**||ಏರ||**
ಬೆನ್ನಿಗೆ ಬಿದ್ದಾದಂತ ಕಿನ್ನರಿ ಬೊಮ್ಮಯ್ಯ ಹೋಗಿ ಹಿಡಿದಾದನ ಕುರಿ
ಬಿಡುವದಿಲ್ಲ ಅಂತ ॥ ೨ನೆಯ ಚೌಕ ॥

ವಿಟ ಪುರುಷನು ಬಲು ದಿಟದಿಂದ ನುಡಿದನು ಕುರಿಯ ನೀ ಬಿಡು ಅಂದ ।
ಶ್ರೇಷ್ಠ ಶರಣನಾದ ಕಿನ್ನರಿ ಬೊಮ್ಮಯ್ಯ ಸ್ಪಷ್ಟ ಬಿಡುವುದಿಲ್ಲ ನಾ ಅಂದ ॥
ಸತ್ಯ ಅಹಿಂಸೆಯ ತತ್ವವ ತಿಳಿದ ಸತ್ಯ ಶರಣನ ಮಾತೊಂದ ।
ಸ್ತುತ್ಯ ಬಸವ ಸ್ತೋತ್ರವ ಮಾಡುತ ಬೊಮ್ಮಯ್ಯ ಹೇಳ್ಯಾನ ವಚನ ಒಂದ ।
ದಯವಿಲ್ಲದ ಧರ್ಮವಾವುದಯ್ಯ ಎಂದ ॥
ಮರಣದ ಭಯದಿಂದ ಮೊರೆಹೊಕ್ಕ ಕುರಿಯ ಬಿಡುವದಿಲ್ಲ ನಾ ಒಂದೆಂದ ।
ದುರಾಸೆಯಿಂದ ದುಡ್ಡು ಬೇಡಿದರ ಬೇಡಿದಷ್ಟು ಕೊಡುವೆನು ಅಂದ ॥

**॥ಚಾಲ॥**

ಬೊಮ್ಮಯ್ಯ ಅಂದ ಮಾತ ಕೇಳಿ ವಿಟನು ಕೋಪ ತಾಳಿ ।
ಕುರಿಗೆ ಹೇಳಿದ ಸಾವಿರ ಹೊನ್ನ ಬೊಮ್ಮಯ್ಯ ಕೊಟ್ಟಾನ ॥
ಆ ವಿಟನು ಹಿಗ್ಗಿ ಮನಸಿನಲಿ ಹೋಗ್ತ ದಾರಿಯಲಿ ಕುರಿಯ ಕೊಂಡಾನ ।
ಸಾವಿರ ಹೊನ್ನ ಸೂಳಿಗಿ ಒಯ್ದು ತೋರಸ್ಯಾನ ॥
ರೂಪಾಯಿ ಗಂಟ ನೋಡಿ ಸೂಳಿ ಎಲ್ಲಾ ಕತಿ ಕೇಳಿ ದೇವರ ।
ಹೆಸರುಗೊಂಡು ಕುರಿಯ ನೀನು ಮಾರಿದಿ ಹ್ಯಾಂಗ ಅದನ ॥
ಇತ್ತ ಬೊಮ್ಮಯ್ಯನು ಲಿಂಗಮುದ್ರೆಯನೊತ್ತಿ ಇದ್ದನು ಕುರಿಯನು
ಪ್ರೀತಿಸುತ ॥ ೩ನೆಯ ಚೌಕ ॥

ಕೂಡಲೆ ಸೂಳಿಯು ಬಿಡದೆ ಬಯ್ಯುತಾಳ ಬೇಗನೆ ಈಗ ಹೋಗಂತ ।
ಸಿಡಿಲಿ ನಿನ್ನನು ಸುಡಲಿ ನೆತ್ತಿಯ ಬಡಿಲಿ ಅದೇ ಕುರಿ ಬೇಕಂತ ।
ಬಲ್ಲಂಗ ಬಸವಿಯರೆಲ್ಲರು ಕೂಡಿ ಕುಳಿದಾರೊ ನನ್ನಯ ಕಿಮ್ಮತ್ತ
ಕೊಲ್ಲಲು ತಂದ ಕುರಿಯ ಮಾರಿದರ ದೇವಿಗೆ ಯೋಗ್ಯ ಹ್ಯಾಂಗ ಆದೀತ
ಸಿಟ್ಟಗೇರಿ ತಾ ಸೂಳಿ ಒಗಿತಾಳ ರೂಪಾಯಿದೇನ ನನಗ ಕಿಮ್ಮತ್ತ
ಗಟ್ಟಿ ಹೇಳತಾಳ ತಂದರ ಒಳಿತು ಇಲ್ಲದಿದ್ದರ ಬರಬ್ಯಾಡಂತ ॥

**॥ಚಾಲ॥**

ತ್ರಿಪುರಾಂತಕ ದೇವರ ಗುಡಿ । ಬಂದ ಲಗುಮಾಡಿ । ಹಿಡಿದ ಲಿಂಗ ಮುದ್ರೆ ।
ಬತ್ತಿದ ಕುರಿಯನು । ಬೊಮ್ಮಯ್ಯ ದಿಟ್ಟಿಸಿ ನೋಡ್ಯಾನ ॥
ಹಿಡಿದಿದ್ದ ಕುರಿಯ ಬಿಡು ಅಂದಾ । ಮುಂದ ನೋಡಂದಾ ।
ದೇವರ ಮುದ್ರೆಯ ತೋರಿಸಿದಾ । ಬೊಮ್ಮಯ್ಯ ಸಿಟ್ಟಿಗೇರಿದಾ ॥
ಇಷ್ಟ ಮಾತ ಕೇಳಿ ಆ ವಿಟ । ಬಿಡಲಿಲ್ಲ ತನ್ನಯ ಹಟ ।
ಸಿಟ್ಟು ತಡೆಯದೆ ಥಟ್ಟನೆದ್ದು ಕತ್ತಿ ಹಿಡಿದಾನ । ಬೊಮ್ಮಯ್ಯ ಅವತಾರ ತಾಳ್ಯಾನ ।

**॥ಏರ॥**
ವೀರಭದ್ರನಂತೆ ಅವತಾರ ತಾಳಲು ವಿಟನ ರುಂಡ ಸಿಡಿದು

ಹೊರಬಿತ್ತು ‖ ಆನೆಯ ಚೌಕ ‖
ವಿಟಪುರುಷನ ಘಟ ಪುಟದು ಬಿದ್ದಿತೋ ಗುಡಿಯ ಹೊರಗ ಗೋಡೆಗೆ ಸಿಡಿದು ।
ಅಷ್ಟರಲ್ಲಿ ವಿಟಪುರುಷನು ಮಡಿದ ಸುದ್ದಿ ಕೇಳಿ ಸರ್ವರೂ ನೆರೆದ ‖
ಊರೊಳಗಿನ ಜನರೆಲ್ಲರೂ ಕೂಡಿ ರಾಜನಲ್ಲಿ ಹೋಗಿ ಫಿರ್ಯಾದೆ ।
ಕಿನ್ನರಿ ಬೊಮ್ಮಯ್ಯ ಕಟ್ಟಿದ ಕುರಿಯನು ವಿಟನು ಕೇಳಲು ಸಾಯಿಸಿದ ‖
ಬಿಜ್ಜಳ ಸಹಿತ ಎಲ್ಲರೂ ಬಂದರು ಹಳಿಯಲು ಬಸವನ ಮನೆಯಿಂದ ।
ನಿಜ ಸಂಗತಿಯನು ಅರಿಯದ ಬಸವನು ಗುಡಿಯೆಡೆ ಓಡುತ ತಾ ಬಂದ ‖
ತಿಳಿಯದೆ ಎಲ್ಲರು ಬಲ್ಲಂತೆ ಬೈದರು ಇದೇನು ಬಸವನ ಶರಣರು ।
ಕಳೆದ ಕುರಿಯನು ಹುಡುಕಲು ಬಂದ ವಿಟನನು ಕೊಂದನು ಈ ಶರಣ ‖

**||ಚಾಲ||**

ಬೊಮ್ಮಯ್ಯ ಶರಣ ಇದು ಕೇಳಿ । ಶಾಂತಿಯನು ತಾಳಿ ।
ಆದ ಕತೆಯನು ಹೇಳಿ ನಿಂತ ಕೈಮುಗಿದು । ತ್ರಿಪುರಾಂತಕನೇ ಸಾಕ್ಷಿ ಅಂದ ‖
ಲಿಂಗಕ್ಕ ಕೇಳ್ತಾನ ಸ್ವತಃ ಭಕ್ತ ಮಹೇಶ ಸಾಕ್ಷಿಯ ನೀ ಹೇಳೋ ।
ಸ್ವತಃ ಬಂದು ಇದ್ದದ್ದು ಸತ್ಯ ಹೇಳಂದಾ ।
ಖಟ್ ಖಡಖಡ ಶಬ್ದ । ಬಂದ ವೀರಭದ್ರಾ ।
ಏಳು ಸಮುದ್ರ ತುಳಿಯುವಂತೆ ಎದ್ದ । ಸಾಕ್ಷ ಹೇಳಿದ ಖರೇ ಇದ್ದದ್ದ ‖
ಆವಾಗ ಎಲ್ಲರು ಗಾಬರಿಯಾಗಿ ನಿಂತರು ಶಿರಬಾಗಿ
ಬಸವ ಶರಣರ ಮಹಿಮೆ ಹೆಚ್ಚೆಂದು । ಕಾಲು ಹಿಡಿದಾರೊ ಬೊಮ್ಮಯ್ಯನದು ।
‖ಏರ‖ ಕೂಸ ಶರಣನು ದಾಸನಾಗಿ ಸದಾ ಶರಣರ ಸ್ಮರಣೀಯ ಮಾಡುತ್ತಾ‖ ಆನೆಯ ಚೌಕ ‖

**ರಚನೆ :** ಶರಣಪ್ಪ ವಾಲಿ
**ಕೃತಿ :** ಶರಣಸ್ಮೃತಿ

## ೧೦. ಶಿವಶರಣ ನುಲಿಯ ಚೆಂದಯ್ಯ

ಬುದ್ಧಿವಂತರು ನೆರೆದು ಕುಂತೀರಿ ತಿದ್ದಿ ನಿಮಗ ಹೇಳತೀನಿ
ಶುದ್ಧಭಾವದಿಂದ ನಿತ್ಯ ಕಾಯಕ ಶರಣರ ।
ಇದ್ದನೊಬ್ಬ ನುಲಿಯ ಚೆಂದಯ್ಯನೆಂಬ ಸುಕುಮಾರ ।
ಕಂದುಗೊರಳ ಶಂಕರನನ್ನು ಒಲಿಸಿ ಬಹದ್ದೂರ ।
ಎದ್ದ ಕೂಡಲೆ ಶಿವನನು ಭಜಿಸಿ ಮೆದಿ ಹಣ್ಣು ಕೊಯ್ದು ಕೂಡಿಸಿ
ನುಲಿಯ ಹೊಸೆದು ಬೆಲೆಗೆ ಮಾರಿ ಧಾನ್ಯ ತರುವರು
ತಂದು ಜಂಗಮಗುಣಿಸಿ ದಾಸೋಹ ನಡೆಸಿ ತಾವು ಉಣ್ಣುವರು‖ ೧ ‖

ಗುರುಕೊಟ್ಟ ಇಷ್ಟಲಿಂಗ ಶ್ರೇಷ್ಠವೆಂದು ಕೊರಳಿಗೆ ಕಟ್ಟಿ ।
ಎಷ್ಟೋ ದಿವಸವಾದರೂ ಲಿಂಗ ಅಲ್ಲೇ ಮರತಾರ ।
ಕಾಯಕವೇ ಕೈಲಾಸವೆಂದು ಬಿಡದೇ ದುಡಿಯುವರು ।
ಕಟ್ಟಿದ ಇಷ್ಟಲಿಂಗಕ್ಕಿಂತ ಕಾಯಕ ಮಿಗಿಲೆಂದು ಸಾಗಲಾಗಿ ।
ಕೊರಳಿಗೆ ಸುತ್ತಿದ ವಸ್ತ್ರಕೊಳೆತು ಹರಿದು ಲಿಂಗ ಧರೆಗೆ ಬಿದ್ದು ।
ಶ್ರದ್ಧಾನೋಡಿ ಲಿಂಗಯ್ಯ ತಾನೇ ಬೆನ್ನು ಹತ್ತಿದರ ।
ಉದ್ಯೋಗದಲ್ಲಿ ಚೆಂದಯ್ಯನಿಗೆ ಇಲ್ಲ ದರಕಾರ॥ ೨ ॥

ಕುಳಿತು ಧ್ಯಾನಿಸಿದರೆ ಶಿವ ನಿಂತು ಕೇಳುವನೆಂಬರು ।
ನಿಂತು ಭಜಿಸುವ ಭಕ್ತನ ಬೆನ್ನ ಹತ್ತುವನೆನ್ನುವರು ।
ಅದರಂತೆ ಚೆಂದಯ್ಯ ಕೇಳತಾನ ಲಿಂಗದ ಎದುರು ।
ಯಾರಿಗಿ ಕೇಳಿ ಭೂಮಿಗಿ ಬಿದ್ದೆಂತ ತಪ್ಪ ಹೊರಿಸ್ಯಾರ ।
ಎಷ್ಟು ಬೆನ್ನ ಬಿದ್ದರು ಕೂಡ ಮುಟ್ಟಲಾರೆ ನಿನ್ನ ನಾನು ।
ನನ್ನ ಅಪ್ಪಣೆ ಇಲ್ಲದೆ ಭೂಮಿಗಿ ಹ್ಯಾಂಗ ಬಿದ್ದಿ ಎಂದಾನ ।
ಆಗ ಲಿಂಗ ತಾನೇ ಬೆನ್ನು ಹತ್ತಿ ನಡದೈತಿ ಆತನ॥ ೩ ॥

**॥ಚಾಲ॥**

ಲಿಂಗ ಜಂಗಮ ಆಗಿ ಚೆಂದಯ್ಯಗ । ಬಿದ್ದು ಬೆನ್ನಿಗಿ ।
ಮೆಚ್ಚೇನಿ ನಿನ್ನ ಭಕ್ತಿಗಿ । ಕಟ್ಟಿಕೊಳ್ಳು ನಿನ್ನ ಕೊರಳಾಗ ॥ ೧ ॥

ಚೆಂದಯ್ಯ ಬಂದ ಸಿಟ್ಟೇಗಿ । ಕೇಳ್ದ ಲಿಂಗಯ್ಯಗ
ನನ್ನ ಬಿಟ್ಟು ಬಿದ್ದ್ಯಾಕ ಭೂಮಿಗಿ ಬ್ಯಾಡ ಹೋಗು ನೀನು ನನಗ॥ ೨ ॥

ಅಗಸರ ಶರಣ ಮಾಚಯ್ಯ । ಕೇಳಿ ಇವರ ಜಗಳ ।
ಕರೆದು ಇಬ್ಬರನ ಕೂಡಿ ಹೊರಟಾರ । ದಾರ್ಯಾಗ ತಿಳಿಸಿ ಹೇಳ್ಯಾರ॥ ೩ ॥

**॥ಏರ॥**

ಕಲ್ಯಾಣ ಬಸವಗ ಸುದ್ದಿ ತಿಳಿಸಿ ಚೆಂದಯ್ಯನಿಗೆ ಲಿಂಗ ಕಟ್ಟಿಸಿ
ಕೂಡಿಸು ಎಂದು ಮಡಿವಾಳನಿಗೆ ಲಿಂಗಯ್ಯ ಹೇಳ್ಯಾರ ।
ಮಡಿವಾಳ ಅಂತಾನ ಹೇಳ್ತಿನಿ ನಾನೇ ಕೇಳ್ರಿ ಇಬ್ಬರು ।
ತಪ್ಪಿಗಿ ಕ್ಷಮಾ ಕೇಳಿಸ್ತೀನಿ ಮಾಡ್ರಿ ವಿಚಾರ॥ ೧ನೆಯ ಚೌಕ ॥
ಮಡಿವಾಳ ಮಾಚಯ್ಯ ಲಿಂಗಯ್ಯಗ ಹೇಳತಾರ ।
ಸ್ವತಃ ನೀನೇ ಜಂಗಮ ಆಗಿ ಹುಲ್ಲಿಗಿ ಹೋಗಬೇಕು
ಹುಲ್ಲು ಕೊಯ್ದು ತಂದು ನುಲಿಯ ಹಗ್ಗ ಹೊಸಿಬೇಕು ।
ಹೊತ್ತು ಪ್ಯಾಟಿಯೊಳಗ ಮಾರಿ ಧಾನ್ಯ ದವಸ ತರಬೇಕು ॥

ಹೊತ್ತು ಆಗುವ ಮೊದಲ ಬಂದು ಅಡಗಿ ಮಾಡಿ ಜಂಗಮಗುಣಿಸಿ
ಮೂರು ಹೊತ್ತಿನ ಪೂಜಿಗಿ ನೀನು ತಯಾರು ಇರಬೇಕು ।
ಅಂದರ ಅವನ ಕೊರಳಾಗ ನಿನ್ನನು ನಾನು ಕಟ್ಟಿತೀನಿ॥ ೧ ॥

ಆಗ ಲಿಂಗದೇವರು ಒಪ್ಪಿ ಚೆಂದಯ್ಯ ಮಡುವ ಕೆಲಸಕ ಹತ್ತಿ ।
ಮುಂಜಾನೆದ್ದು ಹುಲ್ಲಿಗೆ ಹೋಗಿ ಕೊಯ್ದಾನಾಕ್ಷಣಕ ।
ನುಲಿಹೊಸ್ತು ಹಗ್ಗಾಮಾಡಿ ತಂದಾನ ಬಜಾರಕ ।
ಬಜಾರದಲ್ಲಿ ಬೇಗನೆಮಾರಿ ತರಬೇಕು ರೊಕ್ಕ ॥
ಎಷ್ಟೊತ್ತು ಕೂತರೂ ಗಿರಾಕಿಲ್ಲ ಹತ್ತಿತು ಜೀವಕ ।
ಹ್ಯಾಂಗ ಮಾಡಲಿ ಎಂಬುವ ಚಿಂತಿ ಆಯಿತು ಮನಕ ।
ಹೋಗದೆ ನಿಂತರ ಚೆಂದಯ್ಯ ಒದ್ದು ಮುರಿತಾನ ಸೊಣಕ॥ ೨ ॥

ಕಲ್ಯಾಣ ನಾಡಿನ ಬಲ್ಲಿದ ಬಸವ ಎಲ್ಲಾ ಶರಣರು ಕೂಡಿಕೊಂಡು ।
ಭಕ್ತರ ಗತಿ ನೋಡಲಾಕ ಬಂದಾನ ಬಜಾರಕ ।
ಲಿಂಗಯ್ಯ ಒಣಮಾರಿ ಮಾಡಿ ಕೂತಾನ ವ್ಯಾಪರಿಲ್ಲದಕ ।
ಅಂತಃಕರಣದಿ ಶರಣಮಾಡಿ ಕೇಳ್ಯಾನ ಲಿಂಗಕ್ಕ ॥
ನನ್ನಕಿಂತ ಕಿರಿಯರಿಲ್ಲ ಭಕ್ತರಿಗಿಂತ ಹಿರಿಯರಿಲ್ಲ ।
ಭಕ್ತರ ಬಲಿಗೆ ಬಿದ್ದು ನಾನು ನಿಂತಿನಿ ದುಡಿಯುದಕ ।
ತಪ್ಪಿನಡದರ ಚೆಂದಯ್ಯಗ ನಾ ಏನು ಹೇಳಬೇಕ॥ ೩ ॥

**॥ಚಾಲ॥**

ಲಿಂಗಯ್ಯನ ಸ್ಥಿತಿಯನು ನೋಡಿ । ಬಸವ ಲಗುಮಾಡಿ ।
ಹಣಕೊಡುವೆ ನಡ ಮನಿಕಡಿ । ಲಿಂಗಯ್ಯ ಹೊರಟ ಗಡಿಬಿಡಿ॥ ೧ ॥

ಗಂಟ ಕಟ್ಟಿಕೊಟ್ಟ ಕಾಳುಕಡಿ । ಬಂಗಾರದ ತುಕಡಿ ।
ರೊಕ್ಕ ರೂಪಾಯಿ ಅರಿವೆ-ಅಂಚಡಿ । ಹೊತ್ತು ನಡೆದ ಚೆಂದಯ್ಯನ ಕಡಿ॥ ೨ ॥

ಚೆಂದಯ್ಯ ಲಿಂಗಯ್ಯನ ನೋಡಿ । ಕಣ್ಣಲಿ ಕಿಡಿಕಿಡಿ ।
ಸಿಟ್ಟಿನಿಂದ ಬಂದ ಲಗುಮಾಡಿ । ತಂದೀದಿ ಇದನ ತುಡುಗು ಮಾಡಿ॥ ೩ ॥

**॥ಏರ॥**
ಲಿಂಗಯ್ಯ ಹೇಳತಾನ ಥರಥರ ನಡುಗಿ ಬಸವಣ್ಣ ಕೊಟ್ಟಾನ ತಾಬೇಕಾಗಿ
ಅಡಗಿಮಾಡಿ ನಡಿಸಬೇಕು ದಾಸೋಹ ಅಂದಾರ ।
ಅದಕ ಚೆಂದಯ್ಯ ಅಂತಾನ ಬಸವಗ ರೊಕ್ಕದ ಸೊಕ್ಕ ಬಂದರ ।
ಅವನ ಮುನಿಮುಂದ ನೀನು ಎಲ್ಲಿಯಾರೆ ಒಯ್ದು ಸುರುವು ಅಂದಾರ
॥ ೨ನೆಯ ಚೌಕ॥

ದುಡಿsಲಾರದೆ ತಂದ ಹಣ ಸಾಲಕ್ಕಿಂತ ಕೀಳು ಅಂತ ।
ತಡಾಮಾಡದೆ ಹೋಗಿ ಹೇಳು ಆ ಬಸವಗ ।
ದುಡಿದ ಹಗ್ಗದ ಬೆಲೆಯೇ ಸಾರ್ಥಕ ಸತ್ಯವಂತರಿಗೆ ।
ರೊಕ್ಕದ ಮದ ಏರಿದರ ನಡೆಯದು ನಮಗ ।
ಇಷ್ಟು ಅಂದಕೂಡಲೆ ಲಿಂಗಯ್ಯ ಗಾಬರ್‍ಯಾಗಿ ಓಡತಾನ ।
ಹೋಗಿ ನಡದ ಸುದ್ದಿ ತಿಳಿಸ್ಯಾನ ಅಣ್ಣ ಬಸವಗ ।
ಬಸವಣ್ಣ ತಾನೇ ಅಂದ ಸತ್ಯಶರಣ ಚೆಂದಯ್ಯಗ॥ ೧ ॥

ಬಸವಣ್ಣ ಸಹಿತ ಶರಣರಗೂಡಿ ಚೆಂದಯ್ಯನ ನೇಮವ ನೋಡಿ ।
ಅಂಗಕ ಲಿಂಗ ಸಂಗಮಾಡಲು ಕೇಳ್ಯಾರ ಚೆಂದಯ್ಯಗ ।
ಆಗ ಅಂಗಸತಿ ಲಿಂಗಪತಿ ಬೇಕು ಮೊದಲಿಗಿ ।
ಅಂಗ ತಾನೇ ಲಿಂಗವಾದಮ್ಯಾಲ ಮತ್ಯಾಕ ಲಿಂಗ ॥
ಕಣ್ಣೀಗಿ ಕಾನದ ಗುರಿತಾಗಲು ನಡುವೆ ಒಂದುs ಗುರ್ತುಬೇಕ ।
ಅದಕ್ಕಾಗಿ ಲಿಂಗ ಬೇಕು ನಮ್ಮ ಕೊರಳಾಗ ।
ಲಿಂಗದ ಮ್ಯಾಲ ಮನಸಿಟ್ಟು ಹೊರಗಿನ ವ್ಯಾಪಾರ ಮರಿಲಾಕ॥ ೨ ॥

ಹೃದಯದಲಿ ಇದ್ದ ಆತ್ಮಾ ಅರಳಿದಾಗ ಅಂತರಾತ್ಮಾ ।
ಕೂಡಿದಾಗ ಪರಮಾತ್ಮ ಅಂತ ಆಧ್ಯಾತ್ಮದಾಗ ।
ಅರಳುವ ಅಂತರಾತ್ಮನೆ ಇಷ್ಟಲಿಂಗ ದೇಹದಮ್ಯಾಗ ।
ಪರಮಾತ್ಮನನು ಕೂಡಿಸುವವನೇ ಸಂಗಮಲಿಂಗ ॥
ಇಷ್ಟು ತತ್ವ ಬಸವಣ್ಣನವರು ಚೆಂದಯ್ಯನಿಂದ ಕೇಳುವಾಗ ।
ಕೂಡಲಸಂಗಮ ಲಿಂಗನೆ ಪ್ರತ್ಯಕ್ಷ ಆಗಿ ಎದುರಿಗಿ ।
ಚೆಂದಯ್ಯನ ಅಪ್ಪಿಕೊಂಡು ಮಾಯವಾದ ಅವನ ಭಕ್ತಿಗಿ॥ ೩ ॥

**॥ಚಾಲ॥**

ಲಿಂಗಯ್ಯ ಚಂದಯ್ಯರ ಕತೆ । ಒಪ್ಪುವುದಿಲ್ಲ ಜನತೆ ।
ವಿಜ್ಞಾನಿಗಳ ಮನಸಿಗಿ । ಲಿಂಗಯ್ಯ ಆಡಿದ ಮಾತಿಗಿ॥ ೧ ॥

ವಿಶ್ವವ್ಯಾಪಿ ಪರಮಾತ್ಮನ । ಗುರುತ ಗೋಲ ಲಿಂಗಂತ ।
ಆಕಾಶ ಬಣ್ಣ ನೀಲವಾಗಿ । ಏಕಾಕಾರದ ನಿಧಿಧ್ಯಾಸಾsಗಿ॥ ೨ ॥

ಜೀವಭಾವದ ವ್ಯವಹಾರವೆಲ್ಲ ಮರೆತ । ವಿಶ್ವತುಂಬ ಬೆರೆತ ।
ವಿಶ್ವವೆಲ್ಲ ತಾನೇತಾನಾಗಿ । ಮುಕ್ತನಾಗು ತನ್ಮಯನಾಗಿ॥ ೩ ॥

**॥ಏರ॥**
ಮೂಲತತ್ವ ತಿಳಿಸಿದಂಥ ವಾಲಿ ಶರಣನ ಸಣ್ಣ ಕಥಾ ।

ಹಣ್ಣ ಮಾಡಿ ತಿಳಿಯಬೇಕು ತಾವೇ ಸರ್ವರೂ
ಎಲ್ಲರಿಗೆ ಮಾಡಿ ಹೇಳತಾನ ತನ್ನ ನಮಸ್ಕಾರ
ಗೀಗೀ ಮೇಳ ಕಟ್ಟಿದ ನಾಲ್ವರಿವರು ಸಾಲೋಟಗಿಯವರು॥ ೩ನೆಯ ಚೌಕ ॥

**ರಚನೆ :** ಶರಣಪ್ಪ ವಾಲಿ
**ಕೃತಿ :** ಶರಣಸ್ಮೃತಿ

## ೧೧. ಅಕ್ಕಮಹಾದೇವಿ ಚರಿತ್ರೆ

ಅಕ್ಕರೆಯಿಂದಲಿ ಅಕ್ಕಮಹಾದೇವಿಯ ಚರಿತ್ರೆ ಕೇಳಿರಿ ಕೂತವರಾ
ಮುಕ್ಕಂಣ ಶ್ರೀ ಮಲ್ಲಿಕಾರ್ಜುನ ಗಂಡನೆಂದು
ಹುಡಿಕಿಕೊಂಡ ಹೋದಳು ದೇವರಾ॥ ಪಲ್ಲವಿ ॥
ಧರಣಿ ತಲದೋಳು ಉರುತರ ಸಿರಿಯಿಂದ
ಮೆರೆಯುವ ಕರ್ನಾಟಕದಲ್ಲಿ ಇರುತಿಹ ಭಕ್ತಿಗೆ ಮುಕ್ತಿಗೆ ತವರ ಮನೆ
ಎನಿಸಿದ ಉಡಿತಡಿವೆಂಬಲ್ಲಿ ॥
ಪರಮ ಶಿವಭಕ್ತರು ನಿರ್ಮಲ ಸುಮತಿಗಳೆಂಬುವ ದಂಪತಿಗಳು ಅಲ್ಲಿ
ನಿರುತದಿ ಮುರಹರನ ಭಕ್ತಿಲೆ ಭಜಿಸುವ
ಸದ್ಗುಣಮಣಿಗಳು ನಿಜದಲ್ಲಿ ॥
ಮುಕ್ತಿಯ ಹೊಂದುವ ಮಿಗಿಲಾದ ಆಶೆಯು
ಮನೆಮಾಡಿಕೊಂಡಿತ್ತು ಅವರಲ್ಲಿ
ಅಂಥವರ ಉದರದಿ ಜನಿಸಬೇಕಂತ
ಮನಸವಾಯ್ತು ಮಹಾದೇವಿಯಲ್ಲಿ ॥
ಗಿರಿಜಾ ಮಹಿಮಳ ಕರುಣದಿ ಸಮಿತೆಯು
ಪರಿತರ ಗರ್ಭ ತಾಳಿದಳಲ್ಲಿ
ತರುಣಿಯು ತ್ವರತದಿ ದಿನ ತುಂಬಿದ ಮೇಲೆ
ಹರುಷದಿ ಹೆತ್ತಳಾನಂದದಲಿ
ತೊಟ್ಟಿಲದೊಳಗೆ ಆ ಉಮಾ ಮಂತ್ರವ
ಗಟ್ಟಿಯಾಗಿ ನುಡಿತ್ತಿದ್ದಳಲ್ಲಿ
ದಿಟ್ಟ ಗಗನದೋಳ್ ಮನಸಿಟ್ಟ ಭೂಮಿತಾ
ಬಿಟ್ಟ ಹೋಗುವ ಭಾವನೆಯಲ್ಲಿ ॥

**೧ನೇ ಚಾಲ**

ಬಿದಿಗೆಯ ಚಂದಿರನಂತಾ
ಅಕ್ಕದೇವಿ ಬಾಲ್ಯ ದಾಟುತಾ ॥

ಜಗಕೆಲ್ಲ ಯೌವ್ವನ ಸೊಬಗದಿಂದ ಕಾಣುತ್ತಾ
ತಂದಿ ತಾಯಿ ಸರ್ವರಿಗನ್ನುತ್ತಾ ॥

**೨ನೇ ಚಾಲ**

ದಾನಧರ್ಮ ಜಡಧ್ಯಾನ ಗಳಿಕೆ ಮಾಡಿಕೊಂಡಳು
ಅವು ತನ್ನ ಕರ್ತವ್ಯ ಕರ್ಮವಾಗಿಟ್ಟುಕೊಂಡಳು ॥
ಜಾಣರ ಸಂಗದಿ ಜನ್ಮದೋಚನೆ ಕಾಲ ಗತಿಸುವ ನಡೆದಳು
ದುರ್ಜನ ಸಂಗ ದೂರಿಕರಿಸಿಬಿಟ್ಟಳು ॥

**॥ಏರ॥**

ಒಂದಾನೊಂದ ದಿನ ಕೌಸಿಕ ರಾಜನು
ಊರೊಳಗ ಬಂದನು ಕೇಳ್ರಿ ಜರಾ॥ ೧ ॥

ಸಂಭ್ರಮದಿಂದಲಿ ಪ್ರಜೆರನು ನೋಡಲು
ಆತನು ಬಂದಿದ್ದ ಊರೊಳಗೆ
ಸೌಂದರ್ಯದ ನಿಧಿ ಅಕ್ಕನ ಕಾಣುತ
ಮೋಹಿತನಾದನು ಮನದೊಳಗೆ ॥
ಅಕ್ಕನ ಮದುವೆಯ ಆಗುವ ಹುಚ್ಚವು
ಹೆಚ್ಚಿತ ಕೇಳರಿ ರಾಜನಿಗೆ
ಕಕ್ಕಸ ಬಡುತಲಿ ಮಂತ್ರಿಯ ಕರೆಯಿಸಿ
ಪೇಳಿದ ನೇಕಾಂತದೊಳಗೆ
ಮಂತ್ರಿಯು ಬಂದನು ಮಹದೇವಿ ಮನೆಗೆ
ರಾಜನ ಆಜ್ಞೆಯ ಬಗೆಯಾಗೆ
ಕರಳವು ಕರಗುವ ಮೋಹದ ಮಾತನು
ಪೇಳಿದನಾ ಶಿವಶರಣೆಗೆ ॥
ಸೋಮಶೇಖರಾ ಗುರುವೇ ಹಂಬಲ
ಮೊರೆ ಇಟ್ಟೆಹೆನಾ ಮನದೊಳಗೆ
ನಿಮಗದು ತಿಳಿಯದು ಮುಸಿಕಿದ ಕತ್ತಲೆ
ಪೇಳುದಲ್ಲಾ ಎದ್ದೋಗೆ ॥
ಮಂತ್ರಿಯು ಪೇಳಿದ ಅಕ್ಕನ ಮಾತನು
ಸರಿಯಾಗಿ ಆಗ ರಾಜನಿಗೆ
ನಡಿಯುತ ಬಂದನು ರಾಜನು ಆಗ
ಕಾಮುಕದಿಂದಕ್ಕನ ಮನೆಗೆ ॥
ಇಲ್ಲದ ಸಲ್ಲದ ಮಾತನು ಹೇಳಿದ
ರಾಜನು ಆನಂದ ಭರದೊಳಗೆ

ರಾಣಿಯ ಸ್ಥಾನವು ಕೊಡುವೆನು
ನಿನಗೆ ಬೇರಿನ್ನಾವದು ಬೇಕೆನಗೆ ॥

**೧ನೇ ಚಾಲ**

ಅಕ್ಕ ಗಂಭಿರ ವಾಣಿಯಿಂದಾ
ನನ್ನ ಕರಾರ ನೀವು ಒಪ್ಪಿದ್ದಿಂದಾ
ಆ ಮೇಲೆ ಪ್ರೀತಿ ಮದುವೆಂದಾ
ಹೇಳಿದಳು ಆಕಿ ಪಸಂದಾ ॥

**೨ನೇ ಚಾಲ**

ಅರಸನೊಪ್ಪಿದ ಅಕ್ಕನ ಮಾತನು
ಬರಹೇಳಿದ ಆಕೆಗೆ ಅರಮನೆಗಿನ್ನು ॥
ತಿಳಿಲಿಲ್ಲಾತಗೆ ಅಕ್ಕನ ಗುಟ್ಟೇನು
ಮಾಡಿದ್ದುಣ್ಣುದು ಬಂತ ಕಡೆಗಿನ್ನ ॥

**ಏರ**

ಚೆಕ್ಕನ ಅಕ್ಕನ ಸೆರಗನು ಸೆಳೆದನು
ಕಾಮುಕದಿಂದಲಿ ಅಂವಪೂರಾ॥ ೨ ॥

ದೇವಿಯ ಮಹಿಮೆಯದು ಅವನಿಯೋಳ್
ತಿಳಿಯದು ಕೇಳ್ರಿ ಸಾವಧಾನದಿಂದ
ರಾವತಾಳಿ ಆ ಕೌಸಿಕ ರಾಜನ ಸುಟ್ಟ
ಭಸ್ಮ ಮಾಡಿದಳಂದು ॥
ಉಟ್ಟಿರು ಸೀರೆಯ ನಾಚಣ ಬಿಸುಟುತ
ತೊಟ್ಟಿರು ತೊಡಿಗೆಯ ಹರಿದ್ಹೋಗೆದು
ಬಿಟ್ಟಳು ಬಿಡಿಮುಡಿ ಹೊರಟಳು
ಕೌಶಿಕ ರಾಜನ ರಾಜ್ಯಕೆ ನೀರೆರೆದು ॥
ಅಕ್ಕನು ಪೋಗುವ ರೀತಿಯ ನೋಡಿ
ತಾಯಿಯು ಮರಗುತ ಮನದಂದು ॥
ಎತ್ತದು ಪೋಗುವೆ ನಿಲ್ಲಲೆ ಮಗಳೇ
ಅನ್ನುತ ಅಪ್ಪಿದಳು ಆಕಿ ಅಂದು ॥
ಅಪ್ಪಿದ ತಾಯಿಗೆ ಒಪ್ಪುವ ಮಾತನು
ಅಕ್ಕನು ಪೇಳಿದಳಿಂತೆಂದು

ಮುಪ್ಪಾಗದ ಮಲ್ಲಿಕಾರ್ಜುನ ಗಂಡಗೆ
ತನುಮಣಗಳ ನೀಡಿದೆನೆಂದು ॥

**೧ನೇ ಚಾಲ**

ತಾಯಿ ತಂದಿ ಮಾತನು ಕೇಳ್ದಾ
ಕಲ್ಯಾಣದ ದಾರಿ ಹಿಡಿದಾ ॥
ಅಲ್ಲಿಂದ ಅನುಭವ ಮಂಟಪಕ ಬಂದಾ
ಅಲ್ಲಮಪ್ರಭು ನನ್ನ ತಂದೆಂದಾ ॥

**೨ನೇ ಚಾಲ**

ಅಲ್ಲಿ ಕೆಲವು ದಿನ ಕಾಲ ಕಳೆದಳು
ಮುಂದೆ ಶ್ರೀಶೈಲಕೆ ಬಂದಳು ॥
ಶ್ರೀಶೈಲ ಚೆನ್ನಮಲ್ಲಿಕಾರ್ಜುನೊಳ್ ಐಕ್ಯ ಆದಳು
ಜಗದೊಳು ಕೀರ್ತಿಯನು ಪಡೆದಳು ॥

**ಏರ**

ಅಕ್ಕನ ಬಳಗದ ಪರವಾಗಿ ಹಾಡಿದ
ಹುಲಕುಂದ ಕುಂದ ಭೀಮಕವೇಶ್ವರಾ॥ ೩ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೨. ಅಕ್ಕಮಹಾದೇವಿ

ತನ್ನೊಳ ತಾನು ತಿಳಿಬೇಕ | ಮನುಷ್ಯನಾದ ಬಳಿಕ | ಮನಸ್ಸಿನ ಕೊಳಕ ತೊಳೆಯ ಬೇಕ ಮೊದಲ
ಝುಳ ಝುಳಾ ಹೊಳೆಯುವು ಕಳಿಯಳ್ಳ ಎಳೆ ತಿಳೆ ಬಿಸಲಾ ॥ ಪ ॥
ಬಿಸಲಿನ ಮಹತ್ವದ ಅಸಲ | ತತ್ವದ ಕುಶಲ | ಪಸರಿಸಿದ ಸೊಲ್ಲ | ಶರಣರಿಂದ ಹೊರಟಾಗ
ಈ ಧರಣಿಯೊಳಗ ಅನುಕರಣ ಮಾಡುವಂಥ ಆಟಾ ॥
ಆ ಶರಣರು ಶಿವ ಶರಣೆಯರು | ಇನ್ನೂರ ಹದಿಮೂರ | ಸ್ತ್ರೀ ವಚನಕಾರ ಇದ್ರ ಇಪ್ಪತ್ತೆಂಟಾ
ಆತ್ಮಜ್ಞಾನ ಸ್ಫೂರ್ತಿಯಿಂದ ಕೀರ್ತಿ ಪಡದ ಆದ್ರ ಶ್ರೇಷ್ಠಾ ॥
ಅವರಲ್ಲಿ ಅಕ್ಕಮಹಾದೇವಿ | ಉಡುತಡಿ ಊರಕವಿ | ಮೂಡಿದಂತೆ ರವಿ | ಪೂರ್ವದಲ್ಲಿ ಥೇಟಾ |
ವಿಮಲ ಸುಮತಿ ಎಂಬ ದಂಪತಿಯ ಗರ್ಭದಲಿ ಪ್ರಕಟಾ ॥
ಹದಿನಾರು ವರುಷದ ವಯಾ | ಚಿನ್ನದಂತ ಕಾಯ | ಸುಂದರ ಸೌಂದರ್ಯ ಮಾತಿನಲಿ ದಿಟ್ಟಾ |
ಆಕಿ ರೂಪ ನೋಡಿ ಆ ಊರ ಅರಸ ಮನಸಿಟ್ಟಾ ॥

ರಾಜನ ಹೆಸರ ಕೌಶೀಕ । ಇದ್ದವನ ಠೀಕ । ಈಕಿನ್ನ ಆಗುದಕ । ಹಿಡಿದನು ಹಠಾ
ಮೋಹದಾಹದಿಂದ ಅಹಂಕಾರ ಕೂಡಿ ತಲಿ ಕೆಟ್ಟಾ ॥

**||ಚಾಲ|||**

ಮಹಾತ್ಮಳನ್ನು ಕರಿಸಿ ಅಂದಾನು । ಸ್ನೇಹ ಮಾಡ ನನ್ನ ಕೂಡ ನೀನು ॥
ಆ ಕ್ಷಣದಿ ಪೇಳ್ಯಾಳ ಅಕ್ಕ । ದೀಕ್ಷಾ ಹೊಂದಿ ಕಟ್ಟೊಲಿಂಗವನು
ಕಬುಲಾಗಿ ಕರಕೊಂಡ ಹೋದಾನು । ಸಭಾದೊಳಗ ನಿರಾಕರಿಸಿದನು

**||ಏರು||**

ಬಲತ್ಕಾರ ಮಾಡಲಿಕ್ಕೆ ಹೋದ ಧೊರಿ ಅಂತ ತಿಳಿದ । ಚೋರ ಮಾಡಿದ ।
ದಾರಿ ಬಿಡಲಿಲ್ಲಾ ॥ ೧ ॥

ಅಕ್ಕಗ ಬಂದೀತ ಸಿಟ್ಟ । ಅಲ್ಲಿಯ ಸ್ಥಾನ ಬಿಟ್ಟ । ವೈರಾಗ್ಯ ತೊಟ್ಟ । ಹೊರಟ್ಲಾ ಭರರಾ ।
ಉಟ್ಟ ವಸ್ತ್ರ ಕಳದಿಟ್ಟ ಆಗಿ ದಿಗಂಬರಾ ॥
ಮಲ್ಲಿಕಾರ್ಜುನನೇ ನನ್ನ ಗಂಡ । ಉಳಿದವರ ಕಂಡ । ನಶ್ವರ ಪಿಂಡ । ಅಂತ ವಿಚಿಯಾರಾ ।
ಹಿಂಗ ಸಾರುತ ನಡದಾಳ ಅಲ್ಲಮ ಪ್ರಭುವಿನ ಹತ್ತರಾ ॥
ಸೃಷ್ಟಿಯೊಳಗ ಶ್ರೇಷ್ಟವಾದ ವ್ರತಾ । ಉತ್ಕೃಷ್ಟ ಮಾತ । ಹಿಡದಾಳು ಪಂಥ । ಯವ್ವನದ ಭಾರಾ ।
ಪ್ರೌಢ ವಯಸ್ಸಿನಲ್ಲಿ ತ್ಯಾಗ ಮಾಡಿದ್ಲ ಸಂಸಾರಾ ॥
ಅಂತರಂಗ ಆತ್ಮದ ಜೋರ ಬಹಿರಂಗ ವ್ಯಾಪಾರ । ಅದೇ ಕ್ಷಣ ದೂರ । ಮನಸ ನಿರ್ಧಾರ ।
ಇಕಿ ಶೌರ್ಯ ನೋಡಿ ಬೆಪ್ಪಗಿ ಕೂತ್ರ ಸಾಧೂರ ॥
ಪ್ರಭು ದೇವರ ಪ್ರಶ್ನ ಹಾಕಿದ । ನೀನು ಲಗ್ನವಾದ । ಗಂಡನ ಬೀರದ । ಹೇಳತಾಯಿ ಪೂರಾ ।
ಹೇಳದಿದ್ರ ಇಲ್ಲಿ ನಿಲ್ಲಬ್ಯಾಡ ಹೋಗ ವತ್ತಾರ ॥

**||ಚಾಲ|||**

ಇಷ್ಟ ಕೇಳಿ ಕೊಟ್ಟಾಳ ಉತ್ತರಾ । ನನ್ನ ಪ್ರೇಮ ಪತಿಯ ದೇವರಾ ॥
ತಪಶ್ಚರ್ಯ ಮಾಡಿದಾಗ ಜೋರಾ ಅವನಿಗೆ ಕೊಟ್ಟಾರ ನಮ್ಮವರಾ ॥
ಧರ್ಮ ಬಿಟ್ಟ ಹೇಳಲಿಲ್ಲ ಹೆಸರಾ । ಮರ್ಮ ಭೇದಕ ಶಬ್ದದ ಸಾರಾ ॥

**||ಏರು||**

ಕಲ್ಯಾಣ ಅನುಭವ ಮಂಟಪ । ಹಚ್ಚಿದಂಗ ದೀಪ । ಪ್ರಶ್ನೋತ್ತರ ಹೊಳಪ ಜ್ಞಾನದ ಕುಶಲಾ ॥ ೨ ॥

ದೀಕ್ಷಾ ಆಗಲಿಲ್ಲ ಕೌಶಿಕ । ಸಿಟ್ಟಾಗಿ ಅದಕ । ಬಂದಿ ಇಲ್ಲಿ ತನಕ । ಅಕ್ಕಮಹಾದೇವಮ್ಮಾ ।
ನೀ ವಿರಕ್ತಿ ಇದ್ದರ ಕೂದಲ ಮರಿಯಾಕಮ್ಮಾ ॥
ಉತ್ತರ ಕೊಟ್ಟಳ ಅವರಿಗಿ । ನಿಮ್ಮ ಸಲುವಾಗಿ । ಮಾಡಿದಿನಿ ಬಗಿ । ಮರ್ಯಾದಿಯ ಕಲಾ

ಕಾಮನ ಮುದ್ರಿ ಕಂಡ ನಿಮಗ ಆದೀತಂತ ಭ್ರಮಾ ॥
ನಾ ಶರೀರದ್ದು ಇಟ್ಟಿಲ್ಲ ಮಾಯಾ । ಕರಗಿದರೇನಯ್ಯಾ ।
ಮಿರಿಗಿದರೇನಯ್ಯಾ । ಧೊರಿ ಅಲ್ಲಮಾ ॥
ಇರವ ಅರವ ತಪ್ಪಿದರ ಉರುಳಾಡಿ ಹೋಗುವದು ನೇಮಾ ॥
ಪ್ರಭು ದೇವರ ಮನಸ್ಸಿಗೆ ಬಂದ । ಉಕ್ಕಿ ಆನಂದ । ಶರಣರಿಗೆ ತಿಳಿದ । ಹೊರಬಿದ್ದ ಪ್ರೇಮಾ ॥
ಬಸವಣ್ಣನವರು ನಿಂತು ಹೊಗಳಿದರು ಆಕಿ ನಾಮಾ ॥
ಪ್ರತಿಯೊಂದು ಮಾತಿನಲ್ಲಿ ವಚನ । ವಾಙ್ಮಯದ ಹಸನ । ಅನುಭವ ಚೆನ್ನ । ವಿಷಯ ಉತ್ತಮಾ ।
ಅಚ್ಚ ಕನ್ನಡದೊಳಗ ಬಿಚ್ಚ ಶಬ್ದದ ಮರ್ಮಾ ॥

**॥ಚಾಲ॥**

ಆದ್ಯರ ವಚನವು ಐವತ್ತಾ । ದಣ್ಣಾಯಕರವು ಇಪ್ಪತ್ತಾ ॥
ಪ್ರಭು ದೇವರ ವಚನವು ಹತ್ತಾ । ಅಜಗಣ್ಣನವು ಐದ ಸಹಿತಾ ॥
ಇಕಿ ಬಂದ ವಚನದ ಕಿಮ್ಮತ್ತಾ । ಚನ್ನ ಬಸವ ಹೇಳಿದ ಈ ಮಾತಾ ॥

**॥ಏರು॥**

ಸ್ತ್ರೀ ಸಮಾಜಕ್ಕೆ ಭೂಷಣ । ಪಡಕೊಂಡಳು ಜ್ಞಾನ । ಹುಲಕುಂದ
ಭೀಮೇಶನು । ಹೇಳಿದ ಈ ಲೀಲಾ ॥ ೩ ॥
**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೩. ಹಕ್ಕ ಬುಕ್ಕರು

ತುಂಗಭದ್ರೆ ಮಂಗಲ ತರಂಗ ಸಂಗೀತ ಹಾಡುವಲ್ಲಿ ।
ಸಂಗಮಾನ್ವಯದ ಹುಕ್ಕಬುಕ್ಕ ಸೋದರರು ಬಂದರಲ್ಲಿ ।
ಹರಿಹರಾಭಿದಾನದಲಿ ಹುಕ್ಕ ಓಂ ಪ್ರಥಮ ರಾಜನಾದ ।
ಕಿರಿಯ ಬುಕ್ಕ ಯುವರಾಜನಾದ ಮಾಧವನು ಮಂತ್ರಿಯಾದ ।
ನಿಟ್ಟಿಸಿದರು ಪುದುವಾಳ್ದ ನಾಡು ಘನಘಟ್ಟಿಗೊಳ್ವಾದನ್ನು
ಮೆಟ್ಟಿದರು ದುರಾಕ್ರಮಣ ಶೀಲಯುವನೋಗ್ರ ಭೀತಿಯನು ।
ಕಟ್ಟಿದರು ಮಹೋದಗ್ರ ಗೋಪುರಾದಿಗಳ ಸಾಂದ್ರವಾಗಿತ್ತು ।
ನೀರು ಹರಿದು ಬೆಳೆ ಬೆಳೆದು ವಾಣಿಜ್ಯ ವಿಪುಲವಾಗಿ ।
ಭೂರಿ ಕನಕ ಕವಿಸೂರಿ ಕುಶಲರಿಗೆ ಸೂರೆ ಸೂರೆಯ ।
ಪ್ರಜೆಗಳೇರಿದರು ಸುಖಸಮೃದ್ಧ ಜೀವನದ ಪರಮಶಿರಾ ।
ವಿಜಯ ನಗರ ಕರ್ನಾಟಕ ಜಾನಪದಾಭ್ಯುದಯ । ಶಿಖರಿ ಶಿಖರ ॥

**ರಚನೆ :** ಎ.ಜಿ. ನೀಲಗಾರ

**ಕೃತಿ :** ಜಾನಪದ ಝೇಂಕಾರ

## ೧೪. ಬೆಳವಡಿ ಮಲ್ಲಮ್ಮ-೧

ಬೆಳಗಾಂವಿ ಬೆಳವಲ ನಡುವೆ ಬೆಳೆದ ಬೆಳವಡಿ ಮಲ್ಲಮ್ಮಾ ।
ಇಳಿಯೊಳಗ ಕೀರ್ತಿ ಗಳಿಸಿದೆಮ್ಮಾ ॥ ಪ ॥

ವಿದ್ಯದಲ್ಲಿ ಪ್ರತ್ಯಕ್ಷ ಸರಸ್ವತಿಯ ಸರಿಯಾಗಿ ।
ವೇದಾಂತದಲ್ಲಿ ಬ್ರಹ್ಮಜ್ಞಾನಿ ಗಾರ್ಗಿದೇವಿಯಾಗಿ ।
ಕ್ರೋಧದಲ್ಲಿ ಕಾಲದೇವಿಯಂತೆ ಅರ್ಭಾಟ ಮೇಲಾಗಿ ।
"ರಣದಲ್ಲಿ" ರಣದಲ್ಲಿ ದುರ್ಗಾದೇವಿಯಂತೆ ಭೋರ್ಗರಿದ ಜಲ್ಮಾ॥ ೧ ॥

ಪಾತಿವ್ರತ್ಯದಲ್ಲಿ ಪಾರ್ವತಿಯಂತೆ ನೀತಿ ನೇಮಾ ।
ಕ್ಷಿತಿಯಲ್ಲಿ ರೂಪ ರತಿ ಸಮಾ ॥
ದಾನದಲ್ಲಿ ಕಲ್ಪವೃಕ್ಷದಂತೆ ಶ್ರೀಮತಿಯ ಗುಣಾ ।
ಜ್ಞಾನಿಯಾದ ಗುರುಗಳಿಗೆ ತಾನೆ ಕೊಡುವಾಕಿ ಹಣಾ ।
ರಾಜತಂತ್ರದಲ್ಲಿ ಪ್ರಮೀಲೆಯಂತೆ ಪ್ರವಿಣಾ ।
"ಪತಿಹತಿಯಾರ" ಪತಿಹತಿಯಾರ ಹಿಡಿದು ಸ್ವತಾಯುದ್ಧಕ ನಡದಮ್ಮಾ॥ ೨ ॥

ಧೈರ್ಯವಂತಿ ಶೌರ್ಯವಂತಿ ಆರ್ಯಮಾತೆ ಮಲ್ಲಮ್ಮಾ ।
ಮರ್ಯಾದಿ ಕಾಯ್ದ ಕನ್ನಡಮ್ಮಾ ॥
ಛತ್ರಪತಿ ಶಿವಾಜಿನ್ನ ಮೆತ್ತಗಮಾಡಿದ ರಾಣಿ ।
ತಪ್ಪದಿಪ್ಪತ್ತೇಳ ದಿವಸ ಕಾಳಗ ಮಾಡಿದ ವೀರಾಂಗಿಣಿ ।
ಸಂಸ್ಥಾನ ದರ್ಬಾರ ಪ್ರಥಮ ರಾಜಕಾರಣಿ ।
"ಮುನ್ನೂರ" ಮೂನ್ನೂರ ಇಪ್ಪತಹಳ್ಳಿ ಪಡಿಯಳಾದ ಹಡದಮ್ಮಾ॥ ೩ ॥

ವೀರಗಲ್ಲು ಸ್ಥಾಪನೆಯಾಗಿ ಸ್ಮಾರಕವಾಯಿತು ನಾಮಾ ।
ನಾರಿರತ್ನ ಶಿರೋಮಣಿ ಧರ್ಮಾ ॥
ಹೆಂಣ ಮಕ್ಕಳಿಗೆಲ್ಲ ಸೈನ್ಯ ಶಿಕ್ಷಣ ಕೊಟ್ಟಾ ।
ಕನ್ನಡ ನಾಡಿನ ಸೇವೆಗೆ ಮಾಡಿ ಒಕ್ಕಟ್ಟಾ ।
ಧನ್ಯ ಜಯಭೇರಿ ಹೊಡಿಸಿ ಉನ್ನತ ಕೀರ್ತಿ ಗಳಿಸಿಟ್ಟಾ ।
"ಪ್ರಖ್ಯಾತ" ಪ್ರಖ್ಯಾತವಾದಳೆಂದು ಹೇಳಿದ ಹುಲಕುಂದ ಭೀಮಾ॥ ೪ ॥

**ರಚನೆ :** ಹುಲಕುಂದ ಭೀಮಕವಿ

**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೫. ಬೆಳವಡಿ ಮಲ್ಲವ್ವ-೨

ಧನ್ಯ ಧನ್ಯ ಮಲ್ಲಮ್ಮ ರಾಣಿ
ಬೆಳವಡಿಯ ಭಾಗ್ಯದೇವಿ ।
ಧನ್ಯ ಕನ್ನಡದ ಶಕ್ತಿ ಪತಾಕೆಯ
ಎತ್ತಿ ಹಿಡಿದ ತಾಯೆ॥ ೧ ॥

ಪತಿವ್ರತೆಯೊಳು ಪಾರ್ವತಿಯೌ ನೀ ।
ಕ್ರೋಧದಲಿ ಕಾಳಿ ।
ಸಮರದಲ್ಲಿ ದುರ್ಗಾವತಾರಿ
ರತಿದೇವಿ ಚಲ್ವಿಕೆಯಲ್ಲಿ॥ ೨ ॥

ಪ್ರಮೀಲೆಯೇ ಸರಿ ರಾಜ ತಂತ್ರದಲ್ಲಿ
ಗಾರ್ಗಿ ಜ್ಞಾನದಲ್ಲಿ ।
ಕಲ್ಪಲತೆಗೆ ಸಮದಾನದಲ್ಲಿ
ಶಾರದೆಯು ಕಲೆಗಳಲ್ಲಿ॥ ೩ ॥

ನಿನ್ನ ವೀರಕಥೆ ಕನ್ನಡಿಗರಿಗೆ
ಚೈತನ್ಯ ನೀಡುತಿಹುದು ।
ನಿನ್ನ ಕೀರ್ತಿ ಪ್ರಭೆ ನಮ್ಮ ಮನಕೆ
ಹೊಸ ಕಣ್ಣ ನೀಡುತಿಹುದು॥ ೪ ॥

**ರಚನೆ :** ಎ.ಜಿ. ನೀಲಗಾರ
**ಕೃತಿ :** ಜಾನಪದ ಝೇಂಕಾರ

## ೧೬. ಕಿತ್ತೂರ ಚೆನ್ನಮ್ಮರಾಣಿ-೧

ಕನ್ನಡ ಕಿತ್ತೂರ ಚನ್ನಮ್ಮ ರಾಣಿ ।
ಧನ್ಯ ಧನ್ಯ ಮಾನಿನಿ॥ ಪ ॥

ಉನ್ನತ ಸ್ವಾತಂತ್ರ ಸ್ವಾಭಿಮಾನವನು ।
ಚನ್ನಾಗಿ ಜನತೆಯ ಕಂಣ ಮುಂದೆ ಇಟ್ಟ ।
ಹೆಂಣು ವಂಶಕೆಲ್ಲಾ ರನ್ನಗನ್ನಡಿಯಾಗಿ ।
ರಣಭೇರಿ ಹೊಡಿಸಿದ ಮಾನ್ಯ ಮಹಾರಾಣಿ॥ ೧ ॥

ಸಂಸ್ಥಾನಕ ಸಂತತಿ ಇಲ್ಲದಕ ।
ದತ್ತಕ ಮಾಡ್ಸಿ ವ್ಯವಸ್ಥಾನಡಿಸಿದ್ಲ ।
ದತ್ತಕ ಸುಳ್ಳಂತ ಬ್ರಿಟಿಶರು ಬರೆದ ।
ಪತ್ರಾ ನೋಡಿ ಪ್ರತಿಭಟನಾ ಮಾಡಿದಳು॥ ೧ ॥

ಊಟಕ ನಿನಗ ಪೋಟಗಿ ಕೊಡತೀವ ಕ್ವಾಟೆಯ
ಬಿಡ ಅಂತ ಬ್ರಿಟಿಶರ್‍ಹೇಳಿದಾಗ ।
ನಿಷ್ಠಾವಂತಿ ತಾ ದಿಟ್ಟತನದಿಂದ ।
ಘಟ್ಟಿಗಳಾಗಿ ಕೊಟ್ಟಾಳ ಉತ್ತರ॥ ೩ ॥

ಚಾಕರಿ ಮಾಡುವ ಥ್ಯಾಕರೆ ಸಾಹೇಬ ।
ಕಾಕ ಬುದ್ಧಿಯಿಂದ ಕಾರಭಾರ ನಡಿಸಿದ್ದ ।
ಆ ಕಾಲಕ್ಕ ಸಾಕಷ್ಟ ಸೈನ್ಯ ಕೂಡ್ಸಿ ।
ಬೇಕಂತ ಆತನ ಸೊಕ್ಕ ಮುರಿಸಿದಳು॥ ೪ ॥

ತಂಡ ತಂಡ ಇಂಗ್ಲೆಂಡ ದಂಡ ಬಂತ ಗುಂಡ
ಹಾರಿಸುತ ವಾಡೇದಮ್ಯಾಗ
ಕಂಡ ಆಗ ಗಂಡಗುದರಿ ಏರಿ ಬಂದ್ಲ ।
ಚಂಡಿ ಚೌಡಿಯಂತೆ ಖಡ್ಗ ಹಿರಿದಳು॥ ೫ ॥

ವೈರಿಗಳ ಮಕ್ಕಳು ಶರೆ ಸಿಕ್ಕರವರ್‍ನ ।
ಕರುಣದಿಂದ ಜೋಪಾನ ಮಾಡಿಸಿ ।
ಯುರೋಪ ಖಂಡಕ ಪರತ ಕಳಿಸಿಕೊಟ್ಟ
ಕೀರ್ತಿ ಪಡೆದಳು ನೀತಿವಂತಿಯು॥ ೬ ॥

ಸ್ವಾಭಿಮಾನ ಸ್ವಜನಾಭಿಮಾನ
ನಾಡಾಭಿಮಾನ ದೇಶಾಭಿಮಾನಕಾಗಿ ।
ನಶ್ವರ ಶರೀರ ಮೀಸಲಿಟ್ಟಳೆಂದು ।
ಹುಲಕುಂದ ಭೀಮೇಶ ಸಾರಿದನ್ಹಿಂಗ॥ ೭ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೭. ಕಿತ್ತೂರ ಚೆನ್ನಮ್ಮ ರಾಣಿ-೨

ವೀರರಾಣಿ ಕಿತ್ತೂರ ಧೀರಚನ್ನಮ್ಮ ತಾ ಶೂರಳಾಗಿ ।
ಪಡಕೊಂಡ್ಲ ಕೀರ್ತಿ ।

ನಾರಿ ಮಣಿಯರಲ್ಲಿ ಶೌರ್ಯ ಧೈರ್ಯವಂತಿ ಯಾರಿಗೆ |
ಹೆದರದ ಎದೆಗಾರ್ತಿ|| ಪ ||

ಕಾಗತಿ ದೇಶಾಯರ ಮಗಳು ಭಾಗ್ಯವಂತಿಯು ಕಿತ್ತೂರ |
ಅರಸರಿಗೆ ಸೊಸೆಯಾಗಿ |
ಆಗಿನ ಕಾಲದ ಅಗಣಿತ ವೈಭವದ ಮಲ್ಲಸರ್ಜನ |
ಧೊರಿಯ ಸತಿಯಾಗಿ ||
ಸುಂದರಾಂಗಿ ಸದ್ಗುಣಿ ಸಂಪನ್ನಿ ರಾಜಕಾರಣದಲ್ಲಿ ಮಿಗಿಲಾಗಿ |
ಸಂದೇಹವಿಲ್ಲದೆ ಮುಂದೆ ಸಾಗತಿದ್ಲ ಬಂದ ಪ್ರಸಂಗಕ್ಕೆ ಎದುರಾಗಿ |
ಪತಿಯು ಸುತರು ಎಲ್ಲಾ ಗತಿಸಿ ಹೋದಮೇಲೆ ಸಂಸ್ಥಾನ |
ಕಾರಭಾರಕ್ಕೆ ಹೊಣೆಯಾಗಿ |
ಅತಿ ಮಹತ್ವದ ಪ್ರತಿ ಕೆಲಸದಲ್ಲಿ ಸ್ವತಾ ನೋಡುವಳು ಒಳಿತಾಗಿ ||

**||ಚಾಲ||**

ದೇಶಗತಿಗೆ ವಾರಸ ಇಲ್ಲದಕ ಮಸಲತ ನಡದೀತ |
ದತ್ತಕ ತಗೊಳ್ಳುದಕ ||
ದ್ವೇಷ ಹುಟ್ಟಿ ಸಂಸ್ಥಾನ ಆತ ಒಡಕು ಮೋಸಗಾರರಿಗೆ
ಸಾಧಿಸಿತ ಸಮಯಕ್ಕ ||
ಆದ ಮಜಕೂರ ತಿಳಸತಿದ್ರು ಚೊಕ್ಕ ಭೇದ ನೀತಿಯ |
ಬ್ರಿಟಿಷ ಸರಕಾರಕ್ಕ |

**||ಏರು||**

ಕಾರಣ ತಿಳಕೊಂಡ ಬಿಳಿ ಮೋರೆಯ ಇಂಗ್ಲಿಷರು |
ಧಾರವಾಡಕ ತಿಳಸತಿದ್ರು ಸರ್ವ ವಾರ್ತಿ|| ೧ ||

ಮಾಸ್ತ ಮರಡಿ ಗೌಡರ ಮಗನ ದತ್ತಕವಾಗಿತ್ತ ಮದಲ |
ಇತ್ಯರ್ಥವಾಗುದು ಉಳದಿತ್ತಸಿಲಕ |
ಪೂರ್ತಿಯಾಗುವವರೆಗೆ ಮತ್ತೊಬ್ಬ ಅಧಿಕಾರಿ ಕೊಟ್ರು |
ಕಿತ್ತೂರ ಕಾರಭಾರದ ಸಹಾಯಕ್ಕ ||
ಆತನ ಕೇಳಿದಲೆ ಕೆಲಸ ಪ್ರತಿಯೊಂದ ನಡಿಸಬಾರದಂತ |
ನೋಟೀಸ ಕಳಿಸಿದ್ದರಾಗ ದರಬಾರಕ |
ಕಿತ್ತೂರ ಕೇಸರಿ ಕೆಚ್ಚದಿ ಚೆನ್ನಮ್ಮ ರಾಣಿಗೆ |
ಆಶ್ಚರ್ಯವಾದೀತ ಆ ಕ್ಷಣಕ ||
ತಡವಿದ ಮಿಡಿನಾಗರ ಹಾವೆ ಹೆಡೆದೆಗೆದಂತೆ ರಾಣಿ |
ಕಿಡಿಕಿಡಿಯಾದಳು ಕ್ರೋಧ ತಡೆಯದಕ |

ಗಡಿಬಡಿಸಿ ದರಬಾರದ ಪುಡಾರಿಗಳನ್ನೆಲ್ಲಾ ಕರಿಸಿ ।
ನಡಿಶ್ಯಾಳ ವಿಚಾರ ಮಾರ್ಗ ಹುಡುಕುದಕ ॥

||ಚಾಲ|||

ಪ್ರತಿಯೊಬ್ಬರು ಹಾಕ್ಯಾರ ಹಂಚಿಕಿ ।
ಸ್ವಾತಂತ್ರಕ ಬಂದೀತ ಧಕ್ಕಿ ॥
ಸಧ್ಯ ತಯಾರಾಗಬೇಕ ಬಹಳ ಜೋಕಿ ॥
ಮದ್ದುಂಡ ತೋಫ ತುಬಾಕಿ ।
ಸಿದ್ಧಮಾಡಿಕೊಂಡ ಇಡಬೇಕ ಹುಡುಕಿ ॥

||ಏರು||

ಫಿರಂಗ್ಯಾರ ದಂಡಿನ ಕೂಡ ಹುರಿಪಿಲೆ ಹೋರಾಡುವ ತರುಣರಿಗೆ ।
ಬರಬೇಕಂತಾಳ ಸ್ಫೂರ್ತಿ॥ ೧ ॥

ಲಡಾಯಿ ತಯ್ಯಾರಿ ಸುದ್ದಿಗಡ ತಿಳಿಸಿದರು ಗುಪ್ತಚಾರರು ।
ಥ್ಯಾಕರೆ ಸಾಹೇಬಗ ।
ಕೂಡಿಸಿ ದಂಡ ಗರಗದ ಮಾರ್ಗವಾಗಿ ಕಳಿಸಿದ ಭರಾಟ ।
ಬಂತ ಖಬರಿಲ್ಲದಂಗ ॥
ಗಂಡುಗಲಿ ಪುಂಡಕಿತ್ತೂರನಾಡ ಪುಂಡರು ಇಂಗ್ಲೆಂಡದ ।
ದಂಡಿಗೆ ಹೆದರದೆ ಸವದರಾಗ ।
ಓಡಿ ಹೋದೀತ ಪೌಜ ಕೆಲವರು ಸೆರೆಯಾಳಾದ್ರ ಚಿಕ್ಕ ಮಕ್ಕಳು ।
ಇದ್ರ ಅದರೊಳಗ ॥
ಸಂಣವರನ್ನ ಚನ್ನಮ್ಮತಾಯಿ ಚೆನ್ನಾಗಿ ಜೋಪಾನ ಮಾಡಿ ।
ಕರಕ್ಕೊಂಡೋಗರಂತ । ಪತ್ರ ಬರದ್ಲ ಬೇಗ ।
ಧನ್ಯಧನ್ಯಳೆಂದು ಮಾನ್ಯತೆಕೊಟ್ಟರು ಹನ್ನೊಂದ್ಹಳ್ಳಿ ।
ಇನಾಮ ಕೊಡತೀವಂದ್ರ ಲಗ್ಗ ॥

||ಚಾಲ||

ಸಂಧಾನಕ ಥ್ಯಾಕರೆ ಸಾಹೇಬ ಬಂದಾ ।
ಮುಂದೆ ಬಿಳಿಯ ನಿಶಾನೆ ಹಿಡದಿದ್ದಾ ॥
ಅಮಟೂರ ಬಾಳಾ ಸಾಹೇಬ ನೋಡಿದಾ ।
ಜಾಂವಿಗಿ ಬಂದೂಕಿಲೆ ಥ್ಯಾಕರೆನ್ನ ಹೊಡದಾ ॥
ಉರಳಿ ಕುದರಿ ಮ್ಯಾಲಿಂದ ನೆಲಕ ಬಿದ್ದಾ ।
ಚೂರಚೂರ ಮಾಡ್ಯಾರ ಕಡಕಡದಾ ॥

**||ಏರು||**

ಗೋರಾ ಲಷ್ಕರ ಫರಾರಿಯಾದಿತು ಧಾರವಾಡತನಕ ।
ಮಾಡಲಿಲ್ಲ ಸುಸ್ತಿ॥ ೩ ॥

ಧಾರವಾಡದಿಂದ ಚಾಪ್ಲೀನ ಸಾಹೇಬ ತನ್ನ ಸೈನ್ಯ ತಗೊಂಡ ।
ಕಿತ್ತೂರಿಗಿ ಬಂದಾ ।
ಕರ್ ಕರ್ ಹಲ್ಲತಿಂದ ಹುರದ ಬಡಿತೀನಂದ ಅರ್ಭಾಟ ನಡಿಸಿದ ।
ದರವಾಜ ಮುಂದಾ ॥
ಕಿಲ್ಲೇದ ಕದಾ ಇಪ್ಪತ್ತ ನಿಮಿಷದೊಳಗ ತಗಿಯದಿದ್ರ ತೋಪ ।
ಹಾರಸುವೆನೆಂದು ಹೆದರಿಸಿದಾ ।
ಅಲ್ಲಿಂದ ಬಾಗಿಲ ತಗದ ಬಲ್ಲಾಂಗ ನಡದೀತ ಯುದ್ಧ ಎಲ್ಲಾ ಕಡೆ
ಹೆಣಗಳು ಬಿದ್ದಾ ॥
ತನ್ನಕಡೆಯ ಜನರು ಫಿತೂರಿಯಾದದ್ದು ತಿಳಿದ ಇನ್ನ ಮೇಲೆ ನಮಗೆಲ್ಲಾ
ಜಯ ಇಲ್ಲಂದಾ ।
ಮಾನವಂತಿ ಚನ್ನಮ್ಮ ಮೇಣೆದೊಳಗ ಕುಳಿತ ತಾನೆ ಹೊರಟಳು
ಕಿತ್ತೂರಿಂದಾ ॥

**||ಚಾಲ||**

ಬೈಲ ಹೊಂಗಲದಲ್ಲಿ ಖೈದಿಯಾಗಿ ಉಳದಾ ।
ಕೆಲವು ದಿವಸದ ಮೇಲೆ ಅಲ್ಲಿ ಶರೀರಕಳದಾ ॥
ಹೆಣ್ಣು ಮಕ್ಕಳ ವಂಶಕ್ಕೆ ಯಶತಂದಾ ।
ಧನ್ಯ ಸ್ವಾತಂತ್ರದ್ದು ತೋರಿಶಾಳ ಬಿರದಾ ॥
ಮುಂದೆ ಸ್ವರಾಜ್ಯ ಬೀಜವು ಬೆಳದಾ ॥
ಇಂದಿನವರೆಗೆ ಬಂದಿತ ಸುಳಿದೆಗೆದಾ ॥

**||ಏರು||**

ಸಾರ ಹೇಳಿದ ಕವೇಸೂರ ಹುಲುಕುಂದ ಭೀಮ ಊರ ಕಿತ್ತೂರಕಾಳಗದ ಕತಿ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

# ೧೮. ಕಿತ್ತೂರ ಚೆನ್ನಮ್ಮ - ೧

ಕನ್ನಡ ನಾಡಿನ ಅಧಿಕಾರ ಕನ್ನಡತಿ ಮಾಡತಿದ್ಲ ।
ಫಿರಂಗ್ಯಾರದೇನ ಹೋಗತಿತ್ತ ಗಂಟಾ ।
ಕನ್ನಡ ಸಂಸ್ಥಾನ ಮೇಲೆ ಕಾರಭಾರ ಮಾಡಲಿಕ್ಕೆ ಬಂದ ।
ಥ್ಯಾಕರೆ ಸಾಹೇಬ ಹೊಡೆದ ಲಾಗಾಟಾ॥ ಪ ॥

ಹನ್ನೆರಡ ಜನ ಅರಸರು ಇನ್ನೂರ ಮೂವತ್ತೊಂಭತ್ತ ವರುಷ ।
ಚೆನ್ನಾಗಿ ರಾಜ್ಯ ಆಳಿದರು ಕಿತ್ತೂರಿಗಿ ।
ಅನ್ಯರ ಕಾಟಯಿಲ್ಲ ಅನ್ಯಾಯ ಏಟು ಇಲ್ಲ ।
ಸನ್ಮಾರ್ಗದಿಂದ ಸುಖ ರೂಪವಾಗಿ ॥
ಮೂನ್ನೂರೈವತ್ತೆಂಟ ಹಳ್ಳಿ ಎಪ್ಪತ್ತೆರಡು ಕೋಟಿಗಳು ।
ಉತ್ಪನ್ ಏಳ ಲಕ್ಷಕ್ಕಿಂತ ಮಿಗಿಲಾಗಿ
ಧನ ದೌಲತ್ತ ಆನೆ ಒಂಟಿ ಕುದುರಿಗಳು ಹತ್ತಾರ ಬಂದೂಕ ।
ತೋಫ ಮೂಲಿ ಮೂಲಿಗಿ ॥
ಕನ್ಯ ಶಿರೋಮಣಿ ಚೆನ್ನಮ್ಮರಾಣಿ ಆಳತಿದ್ಲ ಸಂಸ್ಥಾನಕ ।
ವಾರಸ ಪುತ್ರ ಇಲ್ಲದ್ದಕ್ಕಾಗಿ
ಸನ್ ಹದಿನೆಂಟನೂರು ಇಪ್ಪತ್ನಾಲ್ಕನೆ ಇಸ್ವಿಯಲ್ಲಿ ದುರಾಶೆ ।
ಹುಟ್ಟಿತ ಆ ಫಿರಂಗ್ಯಾರಿಗಿ ॥
ಹನ್ನೊಂದ ಹಳ್ಳಿ ಇನಾಮ ಹಾಕಿ ಉಂಣಲಿಕ್ಕೆ ಕೊಡತೀವ ।
ಬಾಕಿದೆಲ್ಲ ಬಿಡ ಅಂದ್ರ ಚನ್ನಮ್ಮಾಜಿಗಿ ।
ನನ್ನಿ ಸಂಸ್ಥಾನ ಮೇಲೆ ನಿಮ್ಮದೇನ ಹಕ್ಕ ಅಂದ್ಲ ।
ಹೆಣ್ಣಮಗಳು ಅಂಜಲಿಲ್ಲ ಬ್ರಿಟಿಷರಿಗಿ ॥

**॥ಚಾಲ॥।**

ಥ್ಯಾಕರೆ ಸಾಹೇಬ ಕೇಳಿ ಕೋಪಾದಾ
ನೌಕರಿ ಮೇಲೆ ಧಾರವಾಡಕ ಇದ್ದಾ ॥
ಸಾಕಷ್ಟ ಸೈನ್ಯ ಕೂಡಿಸಿದಾ ।
ಭೀಕರ ಯುದ್ಧ ಹೂಡಿದಾ ॥
ಬ್ಲಾಕ ಕಪ್ತಾನನ್ನ ಕರಸಿದಾ ।
ಅಕ್ಟೋಬರಕ ಕಿತ್ತೂರಿಗಿ ಬಂದಾ ॥

**॥ಏರು॥**

ಘನ್ ಮಸೀನ್ ತೋಫ ಬ್ಯಾನಿಟ್ ರಾಯಫಲ್ ಧರ್ಪ ।
ಕಣ್ಣ ಮುಚ್ಚ ತಿದ್ದುವ ನೋಡಿ ಆರ್ಭಾಟಾ॥ ೧ ॥

ತೋಫ ಹಚ್ಚಿ ಕೋಟೆಯಲ್ಲಾ ಸಾಪ ಮಾಡಿ ಬಿಡಬೇಕಂತ ।
ವ್ಯಾಪ ಹಾಕಿದ್ದರು ಆ ಸೈನಿಕರ ।
ಇಪ್ಪತ್ತ ನಿಮಿಷದೊಳಗೆ ಕೋಟಿ ಬಾಗಿಲ ತಗಿಯದಿದ್ರ ।
ಹಲ್ಲಾ ಮಾಡತೀವಂತ ಸಾರಿದರ ॥
ತಡಾ ಮಾಡದೆ ಲಢಾಯಿ ನಡೆಸಿ ಸಿಡ್ಲ ಬಡದಂಗ ಘುಡಿ ಘುಡಿಸಿ ।
ನಡು ಬಾಗಿಲಕ್ಕೊಡದ ಪುಡಿ ಮಾಡ್ಯಾರ ।
ಧಡಬಡಿಸಿ ಒಳಗಡೆ ನಡದಿತ್ತ ಫಿರಂಗ್ಯಾರ ದಂಡ ಬಿಡಲಿಲ್ಲ ।
ಬಾಗಿಲ ಕಾಯುವ ಸೈನಿಕರ ॥
ಪುಂಡ ಕಿತ್ತೂರ ನಾಡ ಗಂಡುಗಲಿಗಳು ತಂಡ ತಂಡ ।
ಬಂದ ಮುಂದ ನಿಂತಾರ ।
ಹೆಂಡ ಇಂಗ್ಲೀಷರ ರುಂಡಾ ಚಂಡಾಡಿ ಬಿಡಬೇಕಂತ ।
ಗಂಡುಗುದರಿ ಏರಿ ಬಂದ್ಲ ಚನ್ನಮ್ಮನವರ ॥
ಧ್ಯಾಕರೆ ಸಾಹೇಬ ಹೂಂಕರಿಸಿ ತಕ್ಷಣ ಕುದರಿ ಏರಿ ।
ಧಕ್ ಧಕ್ ಆಗಿ ಬಂದ ಬೇಖಬರ
ಆ ಕಾಲದ ರಾಣಿಯವರ ಮೈಗಾವಲಿಗೆ ನಿಂತಿದ್ದ ।
ಅಮಟೂರ ಬಾಳಾ ಸಾಹೇಬ ಮುಸಲ್ಮಾನ ವೀರ ॥

**॥ಚಾಲ॥**

ವೀರಮಾತೆಯ ಆಜ್ಞೆ ಪಡಕೊಂಡಾ ।
ಗುರಿ ಹಿಡಿದ ಹಾರಿಶಾನ ಗುಂಡಾ ॥
ಜಾಂವಿಗಿ ಬಂದೂಕನ ಸಪ್ಪಳ ಮನಗಂಡಾ ।
ಢಂ ಅಂತ ಸಪ್ಪಳಾತ ಗಡಾ ॥
ಥ್ಯಾಕರೆ ಸಾಹೇಬಂದು ಹಾರಿತ ರುಂಡಾ ।
ದಿಕ್ಕೆಲ್ಲ ಓಡೀತ ಅವನ ದಂಡಾ ॥

**॥ಏರು॥**

ಸಂಣ ಸಂಣ ಬ್ರಿಟಿಶ ಹುಡುಗರು ಸೈನಿಕ ಹತ್ತೊಂಭತ್ತ ಜನರು ।
ಶರಿಯಾಳಾದ್ರ ಉಳಿದವರದು ಹಾರಿತ ಚಟ್ಟಾ
ಮಾತ ಮಾತಾಡುದರೊಳಗ ಸೋತ ಸುದ್ದಿ ಹೋತ ಆಗ ।
ಘಾತ ಆಯ್ತು ಕೇಳಿ ಬಿಳಿ ಮೋತಿ ಜನಕ ।
ಕೂಡಕೊಂಡ ವಿಚಾರ ನಡೆಸಿ ಚತುರಂಗ ಮಾರ್ಬಲ ಕೂಡಿಸಿ ।
ವತ್ತರ ಮಾಡಿ ಕಳಿವ್ಯಾರ ಲಢಾಯಕ ॥

ಸುತ್ತುಕಡೆ ಶಸ್ತ್ರಾಸ್ತ್ರದಲ ಮತ್ತೊಂದು ಯೂರೋಪಿಯನ್ನದಲ |
ತೋಫದಲ ಕುದರಿ ಸವಾರರು ಖಡಕ ||
ಕಿತ್ತೂರ ಸಂಸ್ಥಾನವೆಲ್ಲಾ ಮುತ್ತಿಗಿ ಹಾಕಿದರು ಆಧುನಿಕ |
ಪದ್ಧತಿ ಯುದ್ಧ ಮಾಡುದಕ ||
ಹತ್ತೀತ ಕಾಳಗ ಸನ್ ಹದಿನೆಂಟನೂರೂ ಇಪ್ಪತ್ತಾಲ್ಕ |
ಡಿಶೆಂಬರ ಎರಡನೆ ತಾರೀಖ |
ರಕ್ತದ ಕಾವಲಿ ಹರದ ಸತ್ತ ಹೆಣ ತೇಲಿಹೋಗಿ |
ಸಂಸ್ಥಾನ ಪತನವಾಯ್ತು ಒಂದ ದಿವಸಕ್ಕ ||
ನಾಲವತ್ತಾರ ವಯಸ್ಸಿನ ಚನ್ನಮ್ಮ ರಾಣಿಯವರನ್ನ |
ಸ್ಥಾನಬದ್ಧಮಾಡಿ ಇಟ್ರ ಬೈಲಹೊಂಗಲಕ |
ಅಲ್ಲಿಂದ ಆರ ವರುಷ ಅದೇ ಸ್ಥಾನದಲ್ಲಿ ಇದ್ದ |
ಲಿಂಗದೊಳಗ ಆದರು ಕಡಿಕಾಲಕ ||

**||ಚಾಲ||**

ಸ್ವಾತಂತ್ರಕಾಗಿ ಹೋರಾಡಿ |
ಪತಿವ್ರತಿ ಹೋದಳು ಭವದೂಡಿ ||
ಕನ್ನಡ ನಾಡಿಗೆ ತನ್ನ ಪ್ರಾಣ ನೀಡಿ |
ಧನ್ಯವಂತಿ ಹೋದಳು ದೇವರಕಡಿ ||
ಕಲ್ಮಠದಲ್ಲಿ ಸಮಾಧಿಮಾಡಿ |
ಅಲ್ಲಿ ಸ್ವಾಮಿಗಳು ಕಟ್ಟಿಶ್ಯಾರ ಗುಡಿ ||

**||ಏರು||**

ಚನ್ನಮ್ಮರಾಣಿ ಇತಿಹಾಸ ಮಂಡಲ ಸಂಣ ಕೂಸ |
ಹುಲಕುಂದ ಭೀಮನ ಪದ ರುಚಿ ಕಟ್ಟಾ|| ೩ ||

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೯. ಕಿತ್ತೂರ ಚೆನ್ನಮ್ಮ - ೨

ಅಲ್ಲಿ ಅರಿಷಣ ನೆಲ್ಲು ಬೆಳೆಯುವ ಮಲ್ಲಾಡವೆನಿಸಿದ ಕಿತ್ತೂರು |
ಮಲ್ಲಸರ್ಜ ಧೊರಿಯ ನಲ್ಲಳಾದಂಥ ಬಲ್ಲಿದ ಚನ್ನಮ್ಮನ ಕಿತ್ತೂರು|| ಪ ||
ಕಟ್ಟಕಥೆಯಲ್ಲಿ ಕಟ್ಟಡವಿಯಲ್ಲಿ ಕಟ್ಟಿದ ಕೋಟಿಯು ಬಂಧೂರ |
ನಟ್ಟ ನಡುವೆ ಉತ್ಕೃಷ್ಟವಾದ ಅರಮನಿ ಭಟ್ಟಂಗಿ ಹೊಗಳುವಂತ ದರ್ಬಾರ ||
ರತ್ನಖಚಿತ ಸಿಂಹಾಸನ ಸುತ್ತು ಕಡೆ ಮುತ್ತಿನ ತೋರಣ ಭರಪೂರ

ರತ್ನಗಂಬಳಿಯ ಮೇಲೆ ನರ್ತನ ಮಾಡುವ ನರ್ತಕಿಯರದತಿ ಶಡಗರ ।
ಛತ್ರ ಚಾಮರ ಅಷ್ಟೈಶ್ವರ್ಯದಿಂದ ಘಟ್ಟಿಗರಾಳತಿದ್ರ ಅರಸರ ।
ಧಾತ್ರಿಯೊಳಗ ಸತ್ಪಾತ್ರರೆನಿಸಿಕೊಂಡ ಕೀರ್ತಿ ಗಳಿಸಿಕೊಂಡಿದ್ರ ಪೂರ ॥
ಮದ್ದು ಗುಂಡ ಯುದ್ಧ ಸಾಮಗ್ರಿ ತುಂಬಿದಂಥ ಇದ್ದುವು ಖೋಲಿಗಳುತಯ್ಯಾರ ।
ಬದ್ಧ ಖಜಾನಿ ಸಮೃದ್ಧಿ ಹೊಂದಿತ್ತು ಇದ್ದಲಿ ಬಿದ್ದಂತೆ ಮಸ್ತ ಬಂಗಾರ ॥

**||ಚಾಲ||**

ಇಪ್ಪತ್ತಾಲ್ಕ ಲಕ್ಷ ರೂಪಾಯಿತನ ಇದ್ದುವ ಕಿಮ್ಮತ್ತಿನ ।
ಮುತ್ತುರತ್ನಾಭರಣಾ ॥
ಹದಿನಾರ ಲಕ್ಷ ರೂಪಾಯಿ ನಗದ ಹಣಾ ॥
ಅನೇಕ ಆನೆಗಳು ಮೂರುಸಾವಿರ ಕುದರಿ ಒಂಟಿ ಎರಡ ಸಾವಿರ ।
ಲೆಕ್ಕಿಲ್ಲದಷ್ಟಧನಾ ॥
ಜಾಂವಿಗಿ ಬಂದೂಕ ಐವತ್ತಾರ ಪೂರ್ಣ ॥
ಕಬ್ಬಿಣ ಕಂಚಿನ ಕೋಪ ಮೂವತ್ತಾರ ವಿಷಗತ್ತಿ ಇಪ್ಪತ್ತಾರ ।
ಬಾಲೆಗಳು ಗುರಾಣಿ ॥
ಹತ್ತು ಬರಾಸ ಮದ್ದು ತುಂಬಿದ ಕೋಣಿ ॥

**||ಏರು||**

ಎಲ್ಲಿ ನೋಡಿದಲ್ಲಿ ಬಲಾಢ್ಯ ವೀರರು ನೆಲೆಸಿದಂಥಸಲೆ ಕಿತ್ತೂರು ॥
ಎಷ್ಟೋ ಜನರು ಮುಟ್ಠಾಳುಗಳು ಬಂದಬಂದ ಕಾಟಕಾಯಿ ।
ಎಬ್ಬಿಸತಿದ್ರ ಬಲ್ಲಾಂಗ ।
ಹೊಟ್ಟೆಕಿಚ್ಚಿನಿಂದ ಕೋಟೆ ತಕ್ಕೊಳ್ಳುವ ಗುಟ್ಟ ।
ಇಟ್ಟಕೊಂಡ ಮನದೊಳಗ ॥
ಟಿಪ್ಪುಸುಲ್ತಾನ ಬಂದ ಭೂಪ ಮಲ್ಲ ಸರ್ಜನ ತಪಾಸ ಮಾಡಿ ।
ಓದ ಇಟ್ಟ ಕೊಪ್ಪಳದೊಳಗ ।
ಅಪಾರ ಕಷ್ಟಸಹಿಸಿ ಭೂಪಾಲ ಮರ ಮರಗಿ ತಾಪತ್ರಯ ।
ಸೋಸಿದ ಆಗ ॥
ಉಪಾಯದಿಂದ ಅಲ್ಲಿಂದ ಸಫಲವಾಗಿ ದಾಟಿ ಬಂದ ।
ಜೋಪಾನವಾಗಿದ್ದ ಕಿತ್ತೊರೊಳಗ ।
ಕಪಟತನದಿ ಪಟವರ್ಧನರು ಮತ್ತೆ ಹಿಡಿದ ಸ್ಥಾನ ಬದ್ಧ ।
ಮಾಡಿಟ್ರ ಮುಧೋಳದೊಳಗ ॥
ಬಹು ಚಿಂತೆಯಿಂದ ಮರಗಿ ಕ್ಷಯರೋಗಕ್ಕ ತುತ್ತಾಗಿ ।
ಇಹಲೋಕಯಾತ್ರೆ ಮುಗಿಸಿದರು ಬೇಗ ।
ಶಿವಲಿಂಗ ರುದ್ರಪ್ಪನೆಂಬ ಕೊನೆಯ ದೇಸಾಯರನ್ನ ಕಿತ್ತೂರಿಗಿ ।

ಪಟ್ಟಗಟ್ಟದ್ರ ಲಗ್ಗ ॥
ಬ್ರಿಟೀಶ ರಾಜ್ಯ ಆಗ ಪಸರಿಸಿತ್ತ ನಾಡೊಳಗ ನದರ ।
ಬಿದ್ದಿತ ಕಿತ್ತೂರ ಮ್ಯಾಗ ।
ಜಟಿಲ ಪ್ರಶ್ನೆಯಿಂದ ಧೊರೆಗಳು ತೀರಿಕೊಂಡ್ರ ಕಾರಸ್ಥಾನ ।
ಇಂಗ್ಲೀಷರದು ಒಳಗಿಂದೊಳಗ ॥

**॥ಚಾಲ॥**

ಸಂಸ್ಥಾನಕ ಸಂತತಿ ಇಲ್ಲದಕ । ದತ್ತಕ ತಗೊಳ್ಳುದಕ ।
ಮಾಡಿದ್ರ ಹರಕತ್ತಾ ॥
ಪೂರ್ತಿ ಸಂಸ್ಥಾನ ನುಂಗ ಬೇಕಂತಾ ॥
ಚನ್ನಮ್ಮಾಜಿಗೆ ಬಂದೀತ ಕೋಪ । ಆಗಿ ಸಂತಾಪ ।
ದರಬಾರ ಕರೆಯುತಾ ॥
ಮುಂದಿನ ಮಾರ್ಗವನ್ನು ಹುಡುಕುತ್ತಾ ॥
ಕೊನೆಯ ನಿರ್ಣಯಕ್ಕ ಬಂದಾರ । ಸರ್ವ ಜನರ ।
ಯುದ್ಧ ಮಾಡುದು ಖಚಿತಾ ॥
ಪರತಂತ್ರದೊಳಗ ಬೀಳಬಾರದಂತಾ ॥

**॥ಏರು॥**

ಉಲ್ಲಾಸದಿ ಹೇಳ್ಯಾಳ ನಾರಿ ಖುಲಾಸ ಇದೊಂದು ಸಾರಿ ।
ಎಲ್ಲಾರು ಕೂಡಿ ಉಳಿಸಿಕೊಳ್ರಿ ಕಿತ್ತೂರು॥ ೨ ॥

ತಾಯ್ನಾಡ ಸೇವೆಗೆ ಕಾಯ ಮೀಸಲಿಟ್ಟ ತಯಾರಾದ್ಲರಾಣಿ ಆಕ್ಷಣಕ ।
ಧೈರ್ಯದಿಂದ ಬಲಗೈಯಲ್ಲಿ ಖಡ್ಗ ಹಿಡಿದ್ಲ ಧ್ಯೇಯ
ಸಾಧಿಸುವ ಗೋಸ್ಕರಕ ॥
ಗಂಡುಗುದರಿ ಹತ್ತಿಕೊಂಡ ಇಂಗ್ಲಡದ ದಂಡಿನರುಂಡ ಚಂಡಾದುದಕ ।
ಗಂಡುಗಲಿಗಳ ಪುಂಡ ರಕ್ಕಸರ ಹಿಂಡು ಖಂಡಿತ ತುಂಡರಿಸುದಕ ॥
ಕೆಲವು ಕಾಲದಲ್ಲಿ ಕೊಲ್ಮಿಂಚಿನಂತೆ ಸುದ್ದಿ ಕಲೆಕ್ಟರಗೆ ।
ಮುಟ್ಟಿತ ಧಾರವಾಡಕ ।
ಪೊಲಿಟಿಕಲ್ ಏಜೆಂಟ ಥ್ಯಾಕರೆ ದಲತಕ್ಕೊಂಡ ಬಂದ ।
ಕಲಿತನದಿಂದ ಕಾದಾಡುದಕ ॥
ಬಾಳಾಸಾಹೇಬ ಅಮಟೂರ ಹಳಬ ಒಬ್ಬ ಕಳಾ ಹಿಡಿದ ।
ತಾಳಲಾರದೆ ಒಗದಾನ ಬಂದೂಕ ।
ವ್ಯಾಳೆ ಒದಗಿ ಬಂತ ಗೋಳಿ ಥ್ಯಾಕರೇಗ ಕುಂತ ತಳಮಳಸಿ ।
ಬಿದ್ಧ ಭೂಮಂಡಲಕ ॥

**||ಚಾಲ||**

ಉಳಿದವರು ಹಿಡದ ತಲವಾರ | ಕಡದ ಚೂರ ಚೂರ |
ಮಾಡಿದರು ಹೆಣಾ ||
ಸಾಹೇಬಂದು ಹತ್ತದಾಂಗ ಕೂನಾ ||
ಕ್ಯಾಪ್ಟನ್ ಬ್ಲಾಕ್ ಇಲಿಯಟ್ ಸ್ಟಿವನ್‌ಸನ್ |
ಇಂಗ್ಲೀಷ ಪ್ರಮುಖ ಜನ | ಮುಚ್ಚಿದರು ಕಂಣಾ ||
ಕಿತ್ತೂರ ಕೆಚ್ಚೆದೆಯ ವೀರರಿಗೆ ಜಯ ಪೂರ್ಣಾ ||
ವಾರ್ತಿ ಕೇಳಿ ಚಾಪ್ಲಿನ್ ಧೊರೆ ಬಂದ |
ಲೆಕ್ಕಿಲ್ದ ಸೈನ್ಯ ತಂದ | ಕೋಟಿ ಹಾರಿಸಿದಾ |
ಚನ್ನಮ್ಮ ರಾಣಿನ್ನ ಶರಿ ಹಿಡದೊದಾ ||

**||ಏರು||**

ಬೈಲ ಹೊಂಗಲದಲ್ಲಿ ಪ್ರಾಣ ಬಿಟ್ಟಳೆಂದ ಹುಲಕುಂದ ಭೀಮ |
ಪತನವಾಯ್ತು ಆಗ ಕಿತ್ತೂರು|| ೩ ||

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೦. ಕಿತ್ತೂರ ಚೆನ್ನಮ್ಮ - ೩

ಕಿತ್ತೂರ ಸಂಸ್ಥಾನದೊಳು ರಾಜ್ಯಭಾರ ಮಾಡುವಂತಾ
ಶಿವಲಿಂಗ ಭೂಪ ಮರಣ ಹೊಂದಿದರಾ
ವಟ್ಟಗೂಡಿ ದತ್ತಕ ಮಾಡಿದರಾ |
ಕನ್ನೂರ ಮಲ್ಲಪ್ಪಸೆಟ್ಟಿ ಕಂಪನಿ ಸರಕಾರಕ್ಕ
ಒಳಗಿಂದೊಳಗೆ ಮಾಡಿದಾನ ಪೀತೂರಾ
ಬರದ ಪತ್ತರಾ ||

ಕಪಿಕುಲದ ಪಿರಂಗೇರನ ಕೈಮಾಡಿ ಕರದಂಗಾತು
ಹಾತವರಿದ ಬಂದ ಹೊಕ್ಕರ ಕಿತ್ತೂರಾ
ಅಲ್ಲಿ ಅಧಿಕಾರಿಗಳ ಮನಸ ಒಡೆಸಿದರಾ |
ಸಂಸ್ಥಾನ ಕೈಸೇರಿತಂತೆ ಖಜಾನಿ ಎಲ್ಲಾ ಸೀಲ ಮಾಡಿ
ಶಾಮರಾಯ ಮಲ್ಲಪ್ಪಸೆಟ್ಟಿಗೆ ಒಪ್ಪಿಸಿದರಾ
ಎಲ್ಲಾ ಅಧಿಕಾರಾ ||

ಮನಸಿನೊಳಗ ಮಾಡಿದ ಸಾಸ ನೆನಸಗೊಡದ ಆದೀತಂತ
ಉಲ್ಲಾಸದಿಂದ ಇಬ್ರು ಉಬ್ಬಿದರಾ
ಒಳ್ಳೆ ಉಮೇದ್ವಾರಾ ।
ಕುಟಿಲ ಕಾರಸ್ಥಾನವಿದು ಕಣ್ಣಮುಂದೆ ಆಗೋದ ಕಂಡ
ಚೆನ್ನಮ್ಮಾಜಿ ಹಲ್ಲ ತಿಂದಳ ಕರಾಕರಾ
ಆಗ ಇಲ್ಲ ಖಬರಾ ॥

ಕಷ್ಟ ಸಹಿಸಿ ಚೆನ್ನಮ್ಮರಾಣಿ ಕರದ ಕೇಳತಾಳ ತನ್ನ
ಸಂಸ್ಥಾನದ ಉಪ್ಪ ಉಂಡ ಬಂಟರಾ
ಬಂದ್ರು ಎಲ್ಲಾರಾ ।
ಉಪಾಯ ಏನ ಮಾಡೋಣಂತ ವಟ್ಟಗೂಡಿ ಮಾತಾಡತಾರ
ಸಂಧಾನಗೋದೊಂದೆ ಸಧ್ಯ ವಿಚಿಯಾರಾ
ಬರದ್ರು ಪತ್ತರಾ ।

ಅಷ್ಟರೊಳಗ ಇಂಗ್ಲೀಷರ ದಂಡ ಐದನೂರ ಲಕ್ಷರಹಿಂಡ
ಸಜ್ಜಾಗಿ ಯುದ್ಧಕ್ಕೆ ಬಂದಾರಾ
ಡೊಂಬರಕೊಪ್ಪಕ್ಕೆ ಠಾಣಾ ಅವರು ಒಗದಿದ್ದರಾ ।
ಮುಚ್ಚಲ್ಪಟ್ಟ ಕ್ವಾಟೆಯನ್ನು ಕುಲ್ಲಾ ಮಾಡದಿದ್ರ ಇನ್ನು
ಹಲ್ಲಾ ಮಾಡತೇವಂತ ಹೇಳಿ ಕಳಿವಿದರಾ
ಯುದ್ಧಕ್ಕ ಬಾ ಅಂತ ಕೊಟ್ಟಾರಿವರು ಪ್ರತ್ಯುತ್ತರಾ ॥

**ಒಂದನೇ ಚಾಲ**

ಹದಿನೆಂಟನೂರ ಇಸ್ವಿ ಇಪತ್ತ ನಾಲ್ಕ
ಅಕ್ಟೋಬರ ಇಪ್ಪತ್ತಮೂರನೇ ತಾರೀಖ
ಮುಂಜಾನೆ ಮುತಿಗಿ ಹಾಕ್ಯಾರು ।
ಕ್ವಾಟಿ ವಡದ ಒಳಗ ಬಂದಾರು ॥

ಚೆನ್ನಮ್ಮಾಜಿ ಕುದರಿಯ ಹತ್ತಿ
ಹಿರಿದಾಳೊ ಕತ್ತಿ
ರಣದೊಳಗ ಬಂದ ಹೊಕ್ಕಾರು ।
ಕಣಾಕಟ್ಟಿ ಕಾಳಗ ನಡಿಸ್ಯಾರು ॥

ಧ್ಯಾಕರೆನ್ನ ಕೊಂದಾರ ಹೊಡದ ಗುಂಡ
ಬ್ರಿಟಿಷರ ದಂಡ
ಹೊರಳಿ ಓಡ್ಯಾರು ।
ಎಷ್ಟೋ ಮಂದಿನ್ನ ಸೆರೆ ಹಿಡಿದಾರು ॥

ಇಂಗ್ಲೀಷರು ಆದಾರ ಬಲು ಗಾಸಿ
ಚೆನ್ನಮ್ಮ ಕೆಡಿವ್ಯಾಳ ಹೆಣದ ರಾಶಿ
ಕಿತ್ತೂರ ಧ್ವಜಾ ಏರಿಸ್ಯಾರು ।
ಶಂಭೋ ಹರಾ ಜೈಘೋಷ ಮಾಡ್ಯಾರು ॥

**ಎರಡನೇ ಚಾಲ**

ಡಿಸೆಂಬರ ಎರಡಕ್ಕೆ ಎರಡನೇ ಯುದ್ಧಾ
ಮೋಸ ಮಾಡಿ ತೋಸಿದ್ರ ಎಲ್ಲಾ ಮದ್ದಾ ॥

ಚಾಪ್ಲಿನ್ ತಗೊಂಡಾನ ಕಿತ್ತೂರ ಗೆದ್ದಾ
ಚೆನ್ನಮ್ಮನ ಇಟ್ಟಾರೊ ಹೊಂಗಲಕೋದಾ ॥

ತಿಗಡೊಳ್ಳಿ ಮಾರುತಿ ದಯದಿಂದಾ
ಮರಿಕಲ್ಲ ಕವಿ ಮಾಡಿದಾ ॥

**॥ಏರು॥**

ಮೋಸ ಮಾಡಿದ ಮಲ್ಲಪ್ಪನ್ನ ಗಾಸಿ ಮಾಡಿ ಬ್ರಿಟಿಷರು
ಆನಿ ಕಾಲಿಗಿ ಕಟ್ಟಿ ಎಳಿಸಿದರಾ
ಪರವಶ ಆದೀತಾಗ ಕಿತ್ತೂರಾ ॥

ಕನ್ನೂರ ಮಲ್ಲಪ್ಪಸೆಟ್ಟಿ ಕಂಪನಿ ಸರಕಾರಕ್ಕೆ
ಒಳಗಿಂದೊಳಗ ಮಾಡಿದಾನ ಪೀತೂರಾ
ಬರದ ಪತ್ತರಾ ।

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿಯ ಗೀಗೀ ಪದಗಳು

## ೧೧. ಕಿತ್ತೂರ ಚೆನ್ನಮ್ಮ - ೪

ಧನ್ಯ ಧನ್ಯ ಚೆನ್ನಮ್ಮ ನಮ್ಮ ಕಿತ್ತೂರ ವೀರರಾಣಿ
ಮಾನ್ಯ ಮಲ್ಲಸರ್ಜನನ ಮನವ
ಮೆಚ್ಚಿಸಿದ ಜಾಣ ರಾಣಿ ॥
ಚೆನ್ನ ರತ್ನದಿಂದಧಿಕ ಬೆಲೆಯ
ಸೌಶೀಲ್ಯ ಸುಗುಣ ಶ್ರೇಣಿ ।

ಚನ್ನ ಕನ್ನಡದ ಕೆಚ್ಚಿನುಜ್ವಲದ।
ಬಲದ ಖಡ್ಗ ಪಾಣಿ ॥ ೧ ॥

ಪತಿಯ ಮೃತಿಯ ದುಃಖವನು।
ನುಂಗಿ ಗಡ ನಮ್ಮ ನಾಡಿಗಾಗಿ।
ಧೃತಿಯ ತೇಜಿಯನ್ನೇರಿ ಕಾದಿದಳು।
ಘೋರ ರಣಕೆ ಸಾಗಿ॥ ೨ ॥

ಕುಟಿಲ ಬ್ರಿಟಿಶ ಕಾಪಟ್ಯದೆದೆಗೆ
ನಿಡುಬಲ್ಲೆ ಎಸೆದು ತಾನು।
ದಿಟದಿ ದೇಶದಲ್ಲಿ ಧೈರ್ಯ
ಶೌರ್ಯ ತುಂಬಿದಳು ಪೇಳ್ವುದೇನು॥ ೩ ॥

ತುಂಗವೀರ ಸಂಗೊಳ್ಳಿರಾಯ
ಮೊದಲಾದ ವೀರರನ್ನು
ಸಂಘಟಿಸುತ ಸಾರಿದಳು
ನಾಡ ಬಿಡುಗಡೆಯ ಬವರವನ್ನು॥ ೪ ॥

ಸ್ವಾಭಿಮಾನ ಸ್ವಾತಂತ್ರ್ಯ ಬೀಜ ಬಿತ್ತಿದಳು
ಜನದ ಮನದಿ
ಶೋಭಿಸಿಹಳು ಜಾಜ್ವಲ್ಯಳಾಗಿ
ಭಾರತ ಚರಿತ್ರ ನಭದಿ

**ರಚನೆ :** ಎ.ಜಿ. ನೀಲಗಾರ
**ಕೃತಿ :** ಜಾನಪದ ಝೇಂಕಾರ

## ೨೨. ಸಂಗೊಳ್ಳಿ ರಾಯಣ್ಣ - ೧

ಪುಂಡ ಕಿತ್ತೂರ ನಾಡಿನೊಳಗ ಭಂಡಾಯ ಮಾಡಿದರಾಯಾ।
ಪಂಡಿತರೆಲ್ಲಾ ಇಟ್ಟ ಕೇಳರಿ ಚಿತ್ತಾ॥ ಪಲ್ಲವಿ ॥

**೧ನೇ ಚೌಕ**

ಅಂವ ಜಾತಿಲೆ ಕುರಬ ಭೀರುನ ಭಕ್ತಾ
ಹಳಬ ಸರಕಾರದ ಚಾಕರಿ ಮಾಡುತಿದ್ದೊ ಸಿಸ್ತಾ
ಕುಲಕರ್ಣಿ ದಶಿಯಿಂದ ಪೈಲೆ ಕದನ ಹುಟ್ಟಿ ಊರಬಿಟ್ಟ
ಸುತ್ತೆಲ್ಲ ಹಾವಳಿ ಮಾಡಿದೋ ವಿಪರೀತಾ

ಬಂಟ ಇದ್ದರ ಇರಬೇಕೋ ಪುಂಡ ರಾಯ ಪ್ರಖ್ಯಾತ
ಮುಂದಿನ ಕೆಡಗಾಲಕಿನ್ನ ಅಂದಾನೋ ಬ್ರಾಹ್ಮಣ
ಬಂದ ಉಟ್ಟಿರುವ ಧೋತ್ರಾ ಒಗತಾರಾಕೋ ರಾಯಾ ನೀನಾ |

ಹಳಬರಾದ ಮೇಲೆ ಹೇಳಿದ ಮಾತ ಮೀರುವರೇನಾ |
ತುಸು ಅಲಕ್ಷ ಮಾಡದೆ ಪಾಲಿಸೆನ್ನ ವಚನಾ
ಸಿಟ್ಟಿಗೆದ್ದ ಅಂತಾನ ರಾಯಾ ಉಟ್ಟಿರುವ ಧೋತ್ರಾ
ಒಗತರಲಾಕು ಬಿಟ್ಟ ಆಳಗಳ ಕೆಲಸ ಮಾಡವಲ್ಲ ನಾನಾ |
ಎಂಥ ಕೆಟ್ಟ ಮಾತನಾಡಿದೆಪ್ಪ ಬಾಳಣ್ಣ ನೀನಾ
ಕಡಿಯಂದ್ರ ನೂರ ಮಂದೀನಾ ಕಡಿಯಾವ
ಹೊಡಿಯಂದ್ರ ನೂರ ಮಂದೀನ ಹೊಡಿಯಾವ
ಇಂಥ ಡೊಮ್ಮಾನ ಕೆಲಸ ಮಾಡಲಾಕ ನಾಚಿಕಿಲ್ಲೇನ
ಬಗ್ಗಿ ಒಲಿಯ ಊದಿ ಬಸದ ಬಾಣಾ ಮಾಡಾವಲ್ಲೋನಾ |
ದೊಡ್ಡ ದೊಡ್ಡ ಮೇಲಮಾಳಿಗಿ ಅಂತ್ರಾಟಿಲೆ ಜಿಗದ ಹೋಗುವಾಂವ ನಾನಾ |
ಮನಸಿನೊಳಗೆ ಇಟ್ಟ ಬ್ರಾಹ್ಮಣ್ಣ ಮೈಲಿಗಿ ಧೋತ್ರಾ
ಮನಿಗಿ ತಂದು ಸಿಕ್ಕರ ಸಿಗಲಿ ನನ್ನ ಕೈಯೊಳಗೊಂದಿನಾ
ಬಗ್ಗಿಸಿ ಡುಬ್ಬದ ಮೇಲೆ ಕಲ್ಲುಹೇರಿ ಕಳಿಯುವೆನು ಮಾನಾ

ಇತ್ತ ಎರಡು ಮೂರು ತಿಂಗಳ ಮತ್ತೆ ಹೊತ್ತ ಹೋದ ಮೇಲೆ
ಒತ್ತರಲೆ ಕೊಡೂದು ಸರಕಾರದ ಪಾಳೆವನಾ |
ಕುಲಕರ್ಣಿ ಅಂತಾನ ಮೀಸೆ ಹುರಿ ಹಾಕಿ ಮಾಡಲಿನ್ನೇನಾ |
ರಾಯಣ್ಣನ ಮನೆಗೆ ಕಳುಹಿದ ನಾಲ್ಕು ಮಂದಿ ಹಳಬರನಾ |
ನಾಳೆ ಪಾಳೆ ಕೊಡದಿದ್ರ ಓಳಿ ಆಡೀವಂತ ಹೇಳ್ರಿ ಆಂವದೇನಾ |
ಬಿಸಾಟ ಮಳ್ಳ ಕುರಬಂದಾ ಜಾಸ್ತಿ ಕಡಿಮೆ ಮಾತಾಡಿದ್ರ ಎಳತರ್ರಿ ಅವನಾ |

**||ಚಾಲ|||**

ನಾಲ್ಕ ಮಂದಿ ಹಳಬರಿಗೆ ಕೈಮುಗದ ಹೇಳತಾನ ರಾಯಾ
ಮಾಡಬ್ಯಾಡ್ರಿ ನಮ್ಮನ್ನ ಅಬರುಗೇಡಾ |
ಮನಿಯಾಗ ಅದಾವ ಚಲೋ ಹೋರಿ ಜೋಡಾ
ನಾಳೆ ಕಿತ್ತೂರ ಸಂತಿಗೆ ಹೋಗಿ ಆತುರದಿಂದಲೆ ಮಾರಿ
ತರತೀವೆಪ್ಪ ಅಣ್ಣ ತೋಡ ಜೋಡಾ ||

ಇನ್ನ ಬಾಳ ಮಾತಾಡಿದ್ರ ಅಲ್ಲ ಪಾಡಾ
ಕಣ್ಣೀರ ಉದರಸುತೆ ರಾಯಾ ಎರಡು ಹೋರಿ ಕನ್ನಿಬಿಟ್ಟ
ಕೈಯಲ್ಲಿರುವ ಕತ್ತಿ ಕಟ್ಟಿದ ನಡಾ
ನೋಡಿ ತಾಯಿ ಅಂತಾಳ ಮಗನೆ ಹೋಗ ಬೇಡಾऽ

ಕೂಡ ಸುಮ್ಮನಿರು ಹಡದವ್ವ ನೀನಾ ।
ಹೆಮ್ಮೆ ಬಹಳ ಕುಲಕರಣಿದು ಪಾಳೆದ ರೂಪಾಯಿ ಹೋರಿ ಮಾರಿ ಕೊಡುವೆನ ತುರ್ತಾ ।
ಹಿಂದುಗಡೆ ಅವನ ಬನವಿಗೆ ಬೆಂಕಿ ಹಚ್ಚುದು ತುರ್ತಾ
ಇಷ್ಟ ಹೇಳಿ ಸಂತಿಗಿ ಹೊಡಕೊಂಡು ಹೋದ ಸಮರ್ಥ
॥ ಪುಂಡ ಕಿತ್ತೂರ ನಾಡಿನೊಳಗ ....॥

**೨ನೇ ಚೌಕ**

ಹಳಬರ್‍ಹೋಗಿ ಕುಲಕರ್ಣಿಗೆ ಹೇಳ್ಯಾರ ರಾಯಣ್ಣಾಡಿದ ಮಾತಗಳೆಲ್ಲಾ ।
ಪಾಳೇದ ರೂಪಾಯಿ ಹೋರಿ ಮಾರಿ ಕೊಡತೀನ ತಂದಾ ।

ನಿಮ್ಮ ಮ್ಯಾಲ ಸಿಟ್ಟಾಗಿ ಕರಕರ ಹಲ್ಲ ತಿಂದಾ ।
ನಮ್ಮ ಹುಜೂರ ಇಷ್ಟೆ ಹೇಳಿ ಕಿತ್ತೂರ ಸಂತಿಗೆ ಹೋದಾ
ಬಿಟ್ಟರ ಕುಲಕರ್ಣಿ ನಿಂದಿಗೆ ಉಟ್ಟಂಗ ಹೆಂಗಸರ ಸೀರಿ
ತೊಟ್ಟಂಗ ಕುಬ್ಬುಸವೆಂದು ನಿಷ್ಟುರ ಹೇಳಿದಾ ।
ಭಂಟ ಭರಮಣ್ಣನ ಹೊಟ್ಟಿಲೆ ಹುಟ್ಟಿ ಇರಬಾರದೆಂದಾ ।
ಊರ ಕುಲಕರ್ಣಿ ಬರದಾನ ವಾರಂಟ ಪತ್ತರಾ ವಾಯಿದೆ ಮೀರಿತೆಂದಾ ।

ರಾಯಣ್ಣನ ಮನೆಗೆ ಸೆಮನಾಸ ಹಚ್ಚಿದಾ
ರಾಯಣ್ಣನ ತಂದಿ ಭರಮಣ್ಣ ನೋಡಿ ಕಣ್ಣಿಗೆ ನೀರತಂದಾ
ನಾಳೆ ಪಾಳೆ ಕೊಡಲೀನ ತಂದ ಕುಲಕರ್ಣಿ ಪಾದಹಿಡದಾ
ಕರುಣ ಬರಲಿಲ್ಲ ಹಿಕ್ಕಟ್ಟಿನ ಕುರಕುರಿಯಿಂದ
ಜೋರಿಲೆ ನೂಕೂತ ಚಾವಡಿಗೆ ಒಯ್ದಾ ॥

ಚಂಡ ಬಾಗಿಸಿ ಡುಬ್ಬದ ಮ್ಯಾಲ ಕಲ್ಲ ಹೇರಿದಾ
ಎರಡು ಹೋರಿ ಮಾರಿ ರಾಯಾ ಒಡಲೊಳು ತಳಮಳಿಸುತ್ತಾ
ಚಿಂತಿ ಮಾಡುತಲಿ ಕೊಟ್ಟ ಚೀಟಿ ಬರದ ಮೂನ್ನುರಾ
ರೂಪಾಯಿ ತೆಗೆದುಕೊಂಡ ಪದರೊಳಗ ಕಟ್ಟಿದಾ

ಸಂಜಿ ತಾಸೊತ್ತ ಇರತ ತನ್ನ ದಾರಿ ಹಿಡದಾ ।
ದೀಪಾ ಹಚ್ಚಿದ್ದಿಲ್ಲ ಇನ್ನೂ ಸಂಗೊಳ್ಳಿಯ ಸೀಮಿಕಂದಾ ।

ಮನಿಗೆ ಬಂದ ತನ್ನ ತಾಯಿಗೆ ನೀರ ಕೊಡೆಂದಾ ।
ಕೆಂಚವ್ವ ನೀರಕೊಟ್ಟ ಹೇಳ್ಯಾಳ ಕಂತ್ರಾಟ ಆದದ್ದಾ ।
ಕೇಳಲಿಲ್ಲ ಕುಲಕರ್ಣಿ ಹಿರಿಯಾನ ಗೋಳಮಾಡಿ ।
ಒಯ್ದಿದಾರ ಹೇರಿದಾರ ಡುಬ್ಬದ ಮ್ಯಾಲ ಕಲ್ಲ ॥

||ಚಾಲ|||

ಶಿವಶಂಕರ ವ್ಯಾಳೆ ತಂದ ನಮ್ಮ ಮ್ಯಾಲಾ
ರೂಪಾಯಿ ತಕ್ಕೊಂಡ ಹೋಗಿ ರಾಯಾ ಉಪಾಯವಿಲ್ಲಾ
ಸರಕಾರ ಮಾಲೆಂದ ಪಾಳೆಕೊಟ್ಟ ಡುಬ್ಬದಮಾಲಿನ ಕಲ್ಲಾ
ಕಡಿಕ ತಗದ ತಿಂದ ಕುಲಕರ್ಣಿ ಮ್ಯಾಲ ಕರಕರ ಹಲ್ಲತಿಂದಾ |
ತಂದಿನ ಮನಿಗೆ ಕರಕೊಂಡ ಹೋಗಿ ವಂದನೆ ಮಾಡಿ ಹೇಳತಾನ ರಾಯಾ |

ಇಂದಿಗಿ ಬಿಟ್ಟ ಬಿಡ್ರಿ ನನ್ನ ಹಂಬಲಾ |
ನಿಮ್ಮ ಹೊಟ್ಟಿಲಿ ಹುಟ್ಟಿದ ಪುತ್ರ ನಾಯೇನಲ್ಲಾ |
ಮಡದಿ ಕೊರಳಾಗಿನ ಗುಳದಾಳಿ ಹರದ ನಡದಾನ
ಕುಲಕರ್ಣಿ ಹೊಲಕ ಜೋಳ ಚಾಪಿಸಿದ ಅಗಣಿತ
ಲಂಕಾ ಹಾರ್‍ಯಾಡಿದಂಗೋ ವೀರ ಹನುಮಂತ
ವೈರಿ ಮನಿಗೆ ಬೆಂಕಿ ಹಚ್ಚಿ ನಡದಾನ ಹಿಡಿರಂತ || ಪುಂಡ ಕಿತ್ತೂರ ನಾಡಿನೊಳಗ ||

**೩ನೇ ಚೌಕ**

ಜೀವದ ಗೆಳೆಯ ಬಿಚ್ಚಗತ್ತಿ ಚನಬಸುನ ಹಂತೇಲಿ ಹೋಗಿ |
ರಾಯಣ್ಣ ಕರದ ಕೇಳತಾನ ಏಕಾಂತ ತಳ್ಳಿಮಾಡಿ ಬಂದಿನ ಕುಲಕರ್ಣಿ ಬಾಳ್ಯಾನ ಮ್ಯಾಗ |
ದೇಹ ಜೀವದ ಕಬರ ಇಲ್ಲೋ ಎಳ್ಳಿನಷ್ಟೆ ನನಗ |
ಚನಬಸು ಅಂತಾನ ಗೆಳೆಯಾ ಸುಸ್ತಿ ಮಾಡಬ್ಯಾಡ ಸದ್ಯ
ಶಿವಗುತ್ತಿ ಅರಸನ ಹಂತೇಲಿ ಹೋಗಬೇಕ ಬೇಗ
ಒಬ್ಬ ಪುಂಡ ಅದಾನಂತ ಅವನ ದಂಡಿನೊಳಗ
ಸೂರ ರಾಯಾ ಸುದ್ದಿ ಕೇಳಿ ಯುದ್ಧ ಮಾಡಿ ಅವನ ಪ್ರಾಣಾಗೆದ್ದ ತರಬೇಕಂತ |
ಎದ್ದಾನ ಆಗಿಂದಾಗ ಕತ್ತಿ ಡಾಲ ಪೊಶೇಕ ಶಿಸ್ತಹಿಡದ ನಡದಾನ ಕೈಯಾಗ |
ಚನ್ನಬಸವಣ್ಣನವರ ನಿನ್ನ ಕೃಪಾ ಇರಲಿ ನನ್ನ ಮ್ಯಾಗ |
ಅರಸನ ಹಂತೇಲಿ ನಿಂತಹೋಗಿ ಸರಸದಿಂದ
ಮುಜರಿ ಹೊಡೆದ ಕರಸರಿ ಅಂತಾನ ರಾಯಾ ನಿಮ್ಮ ಬಂಟಗ
ನಾನು ಬಹದ್ದೂರ ಮಲ್ಲಸರ್ಜನ ಹಳಬ ಕಿತ್ತೂರ ನಾಡಾಗ
ಕಣ್ಣಿಲೆ ನೋಡಿ ಕುಸಿಬಂದ ಮನ್ನಿಸಿ ಕರದಕೂಡ್ರಿಸ್ಯಾನ ಅರಸ
ಸಣ್ಣಾಂವ ಕಾಣಸ್ತಿ ಲಡಾಯಿ ಮಾಡುವದ್ಹೆಂಗ
ಅವನ ಕೈಯಾಗ ಪ್ರಾಣಹೊಂದಿ ಸುಮಾರಮಾಡಿ ನನಗ
ಮಡಿದಂಗ ಆದಿತೋ ಅಭಿಮನ್ಯು ಚಕ್ರಭೀಮರಕೋಟ್ಯಾಗ |
ಗೊಬ್ಬರಕ್ಕೊಗದಂಗ ಆದೀತೋ ಬೆಂಕಿ
ಅಬ್ಬರಲಿ ಅಂತಾನ ರಾಯಾ ಇಬ್ಬರನು ಕಾದಬಿಟ್ಟ ನೋಡ
ಒಳತಂಗ ಸುಳ್ಳ ಅಬ್ಬರಲಿ ಮಾತಾಡಿದ್ರ ಏನಾತಂದ ||

**||ಚಾಲ|||**

ಬಹದ್ದೂರ ರಾಯಣ್ಣನ ಬದಿಯಲ್ಲಿ ಕೂಡ್ರಿಸಿಕೊಂಡ
ನಟ್ಟಿತೋ ಮನಕ ದಿಟ್ಟಿಸಿ ಆಡಿದ ಮಾತಾ |
ತನ್ನ ಪುಂಡನ ಕರಸಿದೋ ತುರತಾ |
ಬಂಡಾಯದ ಸುದ್ದಿ ಕೇಳಿ ಕೆಂಡದಂಗ ಆದಣ್ಣಾ
ಮದ್ದು ಗುಂಡು ತುಂಬಿ ಮಾಡಿದಾರೋ ಸಿಸ್ತಾ ||
ಬಂದ ಕಾಲಕೆದರಿ ಮುಂಡಿ ಹೊಡೆಯುತ

ನಿಂತ ಕೂಡಿದ್ದಂಗ ಆದೀತೋ ದಶರಥನ ಮಿತ್ರ ಲಕ್ಷಣ
ಇಂದ್ರಜೀತ ಅರಸ ಇಟ್ಟ ಇಬ್ಬರ ತೆಲಿಮ್ಯಾಲ ಹಸ್ತ
ನಾಳಿಗೆ ಲಡಾಯಿ ಮಾಡಿರೆಂತ ವೀಳ್ಯಕೊಟ್ಟಾನ ಅರಸ |
ಜಾಳಿಗೆ ಹೊನ್ನ ಕೊಡುವೆನು ಮಾಣಿಕ ಮುತ್ತು
ಮತ್ತು ಏನಬೇಕು ಬೇಡ್ರಿ ನಿಮ್ಮ ಸನಮಂತ
ವೀಳ್ಯೆ ಹಿಡದಾರೋ ನಗನಗತ ಏಕಾಗದಲ್ಲಿ ದಂತ |
|| ಪುಂಡ ಕಿತ್ತೂರ ನಾಡಿನೊಳಗ ....||

**೪ನೇ ಚೌಕ**

ಮರುದಿನ ಮಧ್ಯಾಹ್ನದಾಗ ಶಿವಗುತ್ತಿ ಊರ ಹೊರಗ ದಂಡುಕೂಡಿತ್ತೊ |
ಒಂದು ಅಜಮಾಸ ಏಳು ಎಂಟು ಸಾವಿರಾ |
ಕರಾರ ಮಾಡ್ಯಾನ ಕತ್ತಿಯ ಮೂರು ಮೂರು ಭಾರಾ |
ನೋಡಲಾಕ ಕೂಡ್ಯಾರೊ ಸಣ್ಣ ದೊಡ್ಡವರಾ |
ಬಂದಾನ ಶಿವಗುತ್ತಿ ಪುಂಡ ದುಂಡ ಗ್ಯಾಮಿ ಹಚ್ಚಿಕೊಂಡಾ |
ಚಂದದಿಂದಲಿ ತಿರುವ್ಯಾಡುತ ತನ್ನ ಹತಿಯಾರಾ |
ರಾಯಣ್ಣನ ಒಂದುಗಳಿಗ್ಯಾಗ ಹೊಡೆಯುವನೋ ಠಾರಾ |
ರಾಯಣ್ಣ ರಣಗೂದಲ ಬಿಚ್ಚಿ ನಡಕ ಸುತ್ತಿದ ಬಿಚ್ಚಿ ನಗನಗುತ |
ನಿಂತಾನೋ ಶಿವಗುತ್ತೆವನ ಎದುರಾ |
ಟನ್ ಟನ್ ಜಿಗದ ವಗದ ಅಂತರಲಾಗಾ |
ಕಣ್ಣ ಮುಚ್ಚಿ ಕಣ್ಣ ತೆಗೆಯುವುದರೊಳಗ ಶಿವಗುತ್ತಿ
ಪುಂಡನ ಚಂಡ ಕಡಿಕೆ ಮಾಡಿ ಬಿಟ್ಟೋ ರಾಯಾ |
ಬಾದ್ದೂರ ಅರಸ ಸಾಕ್ಷಾತ ನೋಡಿದೋ ತನ್ನ ಕಣ್ಣಾರಾ
ಅರಸನ ಮನಸ್ಸಿಗೆ ಬಂದ ಸರಸದಿಂದ ರಾಯಣ್ಣನ
ಮೆರಿಸ್ಯಾರೋ ಇಲ್ಲಂತ ಇವನ ಹಂತವರಾ |
ಆಯಾರ ಮಾಡ್ಯಾರೋ ಕಡೆ, ತೋಡೆ, ಉಂಗರ ಉಡದಾರಾ
ಡಂಗುರ ಹೊಡಿಸ್ಯಾರೋ ಸತ್ತಂತ ಶಿವನಗುತ್ತಿ ಸೂರಾ

ಮುಜರಿ ಹೊಡದದ ಮುಗಳನಗಿ ನಗನಗತ ಅಂತಾನ
ರಾಯಣ್ಣ ಬೇಡಿದ್ದ ಕೊಡತಿನಂಬು ಕರಾರಾ
ವಚನದಂತೆ ದಂಡಕೊಡ್ರಿ ನನಗೊಂದು ಸಾವಿರಾ ।

**||ಚಾಲ|||**

ಕೊಟ್ಟಾನ ಒಂದು ಸಾವಿರ ದಂಡಾ ದಿಟ್ಟು ರಾಯಣ್ಣ ಮಾಡಿದಂತ
ಶ್ರೇಷ್ಠ ತನ್ನ ಮನಸ್ಸಿಗೆ ಬಂದ ಹಿಕ್ಕಟ್ಟ ಮುಕ್ಕಟ್ಟ ಇವನಂತವನ ನೋಡಿಲ್ಲಂದ
ಅಪ್ಪಣೆ ತಕ್ಕೊಂಡರಾಯಾ ಶಿವನಗುತ್ತಿ ಊರಬಿಟ್ಟ ಹೊಂಟಾ
ಜೀವದ ಗೆಳೆಯನ ಹಂತೇಲಿ ಬಂದಾ ॥
ನೋಡಿ ಚನಬಸು ಆದಾನೋ ಆನಂದಾ ।
ಒಡ್ಡರ ತಿಮ್ಮಣ್ಣ ಏನಲಡ್ಡಿ ಹುಡುಗನಲ್ಲಾ
ಬಿಗವಲಿ ಚಡ್ಡಿ ತೊಟ್ಟಾನ ಅವಸರದಿಂದ
ಭೇಟಿಯಾದಾನೋ ಮಿತ್ರರಿಗೆ ಪ್ರೀತಿಯಿಂದಾ
ಕಿತ್ತೂರ ಮಲಸರ್ಜನ ಮೋಸ ಮಾಡಿದ ಇಂಗ್ರೇಜ ॥
ಚನ್ನಮ್ಮನ ಕೂಡ ಹಾಕಿಕೊಂಡ ಪಂಥಾ ।
ತಾಯಿ ಕುಂತಾಳೋ ಮಗನ ಶೋಕ ಮಾಡುತಾ
ಲಡಾಯಿ ಮಾಡಿ ತಕ್ಕೊಂಡಾನೋ ಆತ ಪಿರಂಗ್ಯಾನಂತ ।
॥ ಪುಂಡ ಕಿತ್ತೂರ ನಾಡಿನೊಳಗ .....

**೫ನೇ ಚೌಕ**

ಗೋದಳ್ಳಿ ಕೆರಿಮ್ಯಾಗ ಇಳದಿತೋ ಸರಕಾರ
ದಂಡಾ ರಾಯಣ್ಣನ ಚಂಡಕಡದ ಜಯಯುದುಕ ಸಾಯ್ಬ
ಡೇರೆ ಹೊಡದ ಕುಂತ ಕೋಪ ತುಂಬಿ ಮನಕ ॥
ಹತಿಯಾರ ಬಂದೂಕನೆಲ್ಲ ಗೂಡಹಚ್ಚಿ ಇಟ್ಟಾರ ನಡಕ
ಕುದರಿ ಸ್ವಾರರು ಮತ್ತು ಚತುರ ಬಲ ಆರಂಭದಿಂದ ಜಳಕಮಾಡಿ ಕುಂತಾರೋ ।
ಎಲ್ಲರೂ ಉಣಲಾಕ ವರ್ತಮಾನ ಕೇಳಿ ರಾಯಣ್ಣ ಅಂದಾನ
ಗಜವೀರ ರಾಯಣ್ಣ ಸಹಜವಾಗಿ ಹೊಂಟಾರ ಜೋಡಿ
ತಜವಿಜ ಮಾಡಿ ಬರುನ ಸುಮ್ಮಕ ॥
ಹೋದಾರೋ ಗೂಡ ಹಚ್ಚಿದ ಬಂದೂಕಿನ ಸನೇಕ
ಗಜವೀರ ಮರಿ ಆದಾನೋ ಬಿದರ ಮೆಳೆಯ ಬಲಕ
ಟುಬಾಕ್ಯಾಗ ಗುಂಡಹಾಕಿ ಬಾಯಿಗಿ ಜರಜಾಂವಿಗಿ
ದಕ್ಕಿಕೊಟ್ಟ ಹೊಡೆದ ಸಾಯ್ಬಗ ಗುಂಡು ತಾಕಿ ಬಿದ್ದೊ ನೆಲಕ ।
ಹತಿಯರ ಬಂದುಕನೆಲ್ಲಾ ವಯದ ಜಿಗಿದಾನೋ ದೊಡ್ಡ ಮಡಕ ।
ಅಲಿಮಾನ ಕತ್ತಿಯ ಹಿರಿದು ಆರ್ಯಾರಿಸಿ ಕಡದ

ಅರ್ಧ ಚಂಡರುಂಡ ಆಗಿ ಬಿದ್ದಾವ ತುಣಕ
ಕುರಿ ಹಿಂಡಿನ್ಯಾಗ ಮುರಿದಾಂಗಾತೋ ಹೆಬ್ಬುಲಿ ಹೊಕ್ಕ ||
ತಿರಿವ್ಯಾಡಿ ಕಡಿದಾನೋ ಕಬರ ಹಾರಿ ತಪ್ಪಿತೋದಿಕ್ಕಾ
ಚಾಪಹಾಸಿದ ಲೋಪ ಮಾಡಿದ ಕಲಿದೀಪ ಭೂಪ ರಾಯಣ್ಣ ಕೌತುಕ |
ಒಬ್ಬನ ಮಾಪ ಮಾಡಿಸಿ ಇಟ್ಟಾನ ಸುದ್ಧಿ ಹೇಳಿದಕ

**||ಚಾಲ||**

ಇದರ ಬದರಾ ನಿಂತು ತಾರಾಬಾರಾ ಕಾದುವಾಗ
ಹಾರತಾವ ಗೋರಾಜನರ ತೆಲಿ |
ಬಿದ್ದ ಗೋರಾ ತಾ ಬಕ್ಕಬಾರಲಿ ಸಾಯ್ಬ ಕೇಳಿಕೊಂಡ ತನ್ನ ಮುಂಗೈ ಕಡಕೊಂಡ |
ಮತ್ತು ದಂಡ ಸಂಹಾರ ಮಾಡ್ಯಾನ ಹುಲಿ |
ತಾಪಾಸ ಮಾಡಿರಿ ಹಾಕೋಣ ಅದಾನೆಲ್ಲಿ |
ರಕ್ತದೊಳಗ ಬಟ್ಟಹಾಕಿ ಹಣಿಮ್ಯಾಲ ಇಟಗೊಂಡ
ಚಟ್ಟನ ಹೋದಾನ ಮೈತರ ಬದಿಯಲ್ಲಿ
ರಣರಂಗನೆಲ್ಲಾ ಮಾಡಿದಾನೋ ಖಾಲಿ
ಸಿಂದಿ ಸೆರೆ ತರಸಿ ಬಹಳ ದುಂದದಿಂದಲ್ಲಿ
ಕುಡದಾಡಿ ಚಂದದಿಂದ ಹೊಂಟಾರೋ ತಮ್ಮ ಸೈನ್ಯಸಹಿತ |
ಬಾಳಿಗುಂದಿ ಗುಡ್ಡದ ದಾರಿ ಹಿಡಿದ ನಡೆಯುತಾ |
ಆರ್ಯಾಣದಾಗ ಇಳಿದಾರೋ ರಾತ್ರಿ ಇತ್ತೊ ಸರವತ್ತಾ |
|| ಪುಂಡ ಕಿತ್ತೂರ ನಾಡಿನೊಳಗ .....||

**೬ನೇ ಚೌಕ**

ಬಹದ್ದೂರ ಇಂಗ್ರೇಜನ ದಂಡ ಬಂದಿತೊ ಮತ್ತೊಂದು
ಕೇಪ ಬಾಳಿಗುಂದಿ ಗುಡ್ಡಕ ಹಾಕ್ಯಾರೊ ಮುತ್ತಿಗಿ
ಅದರ ಸೂಚನಾ ಮುಟ್ಟಿತೋ ರಾಯಣ್ಣಗ ಹೋಗಿ
ಅವನ ಕಲ್ಪನಾ ತಿಳಿಯಲಾಕ ಇಲ್ರಿ ಯಾರ್‍ಯಾರಿಗಿ |
ಗುಡ್ಡದೊಳಗ ಇರುವಂಥ ಕಂಟಿಗಿಡಗಳನ್ನೆಲ್ಲ
ಮಂಡಮಾಡಿ ಅರಿವಿ ಸುತ್ತಿ ಹಚ್ಚಾರೋ ಬ್ಯಾಗಿ |
ರಾಯಣ್ಣನ ದಂಡ ಇಳದ ಮಾಡತತಿ ಅನ್ನ-ಅಡಗಿ |
ಉರಿಯ ನೋಡಿ ಅದಾರೆಂದು ಬಿಗಿಲ್ ಮಾಡಿ
ಬಂದಾರೊ ಲಗು ಗುರಿಯ ಹೂಡಿ ಹೊಡೆದಾರ, ಕತಲಗವದೀತಹೋಗಿ |
ಕೂಗ ಹೊಡದ ರಾಯಣ್ಣನ ದಂಡ ಬಂದ ಮಾರ್‍ಯಾಗಿ
ಎಳವಳದ ಕೊಂದಾರಣ್ಣಾ ಧೀರಾ |
ತುಳತುಳದ ಒಬ್ಬೊಬ್ಬರನ್ನಾ ಹೊರಹೊರಳಿಸಿ ತರದಾರ

ಕತ್ತಿಮಿಂಚಿನ ಪರಿಯಾಗಿ ತಪ್ಪಿಸಿ ಉಳಉಳದ
ಹೋದಾರೋ ಕಂಟಿಯ ಮರಿಗೆ
ನಿತ್ತ ಚಿತ್ತ ಬಲ್ಲಾಂಗ ಕತ್ತಿಲಿಕಡದಾನ
ಸುತ್ತ ಕತ್ತಿರಿಸಿ ಬಿದ್ದಾವ ರಕ್ತ ಹರದಿತೋ ಧರಿಗಿ ।
ದಿಕ್ಕತಪ್ಪಿ ಕಾಳಗವಾತೋ ಅವರ ಇದರಿಗಿ
ಸುತ್ತಗಟ್ಟಿ ಹೊಡದೋ ಒಬ್ಬರು ಹೋಗಲಿಲ್ಲ ತಿರುಗಿ ।
ಪ್ರಾತಃಕಾಲದಲ್ಲಿ ರಕ್ತ-ಮಾಂಸ ತಿನ್ನಲಾಕ
ಸುತ್ತುಕಡೆ ಮುತ್ತಿದಾವೋ ಹದ್ದುಕಾಗಿ

**॥ಚಾಲ॥**

ತೋಟಿ ಇಲ್ಲದ ಮಾಡಿದಾಂಗ ಆತೋ ಹಬ್ಬ ಆನಂದವಾಗಿ ।
ಆನಂತ್ರ ಅರಣ್ಯದೊಳು ಸ್ವಾತಂತ್ರ್ಯ ತಪ್ಪಿತು
ಅದಕ್ಕ ತಂತ್ರ ಹೇಳುವಷ್ಟು ಇಲ್ಲ ಶಕ್ತಿ
ಹತಿಯಾರ ಧೈರ್ಯ ಪ್ರಭೂ ಶಕ್ತಿ ಊಟಾಬಸಿ
ಮಾಡಿ ಯುಕ್ತಿಯಿಂದ ಎಲ್ಲರೂ ಕೂಡಿ ದಿನ್ನ ಅಂತ
ಜಯ ಅಂತ ಜಿಗಿದಾರೋ ಸರ್ವ ಎಲ್ಲಾ
ಸರ್ವರೂ ಕಾದಿದಾರೋ ರಣ ಗೂದಲಾ
ಸೃಷ್ಟಿಯೊಳು ಪ್ರಸಿದ್ಧ ಆದ ಹುಟ್ಟಿದಂತ ವೇಳೆ
ಜೀವದ ಆಶೆಬಿಟ್ಟಿದಾರ ಯೆಲ್ಲಾ ಇರ್ಸೆತೊಟ್ಟಿದಾರ ಏರುಣಂತ ಹಲ್ಲಾ
ಬಾಲಿ ಬಾಕ ಕೈಚೂರಿ, ಪಿಸ್ತೂಲಗಳ ಪಟ್ಟಿ ಡಾಲ
ಕೈಯಲ್ಲಿ ಹಿಡಿದ ನಡದಾನೋ ತುರತಾ ॥
ಅಲ್ಲಲ್ಲಿಗೆ ಹಳ್ಳಿ ಸುಲಗಿ ಮಾಡುವವನ ತಗದ ಬಂದಾನೋ ಪೂರ್ವದಲಿ ॥
॥ ಪುಂಡ ಕಿತ್ತೂರ ನಾಡಿನೊಳಗೆ ….. ॥

**೭ನೇ ಚೌಕ**

ಕ್ವಾಟೆ ಕಿಲ್ಲೆ ಹಳ್ಳದ ಮ್ಯಾಲೆ ಕಳವ್ಯಾಳ ಚೀಟಿ
ರಾಯಣ್ಣಗ ಚನ್ನಮ್ಮಗ ಭೆಟ್ಟಿಯಾಗಿ
ಬರಬೇಕಂತ ಕಿತ್ತೂರಿಗೆ ಹೊಂಟ ।
ಹೊಲಸಿದ ಬಿಗಿಯಾಗಿ ಕ್ಯಾವಿಯ ಗುಂಡಿಗೆ
ಚನ್ನಾ ತೋಟಾ ಮ್ಯಾಲೆ ಬಂದೂಬಸ್ತಾ ।
ಸುತ್ತಿದಾನ ಸೀಮಿ ನಡಕಟ್ಟಾ
ತನ್ನ ಹಂತೇಲಿ ಸಾವಿರ ದಂಡಿಗೆ ಹಸದಂಗ ಊಟಾ ।
ಮಾಡಿಕ್ಯಾರ ಸ್ವಸ್ತಾ ಇರಬೇಕಂತ ಹೇಳಿ ತಾಕಿತಕೊಟ್ಟಾ ।
ಹೇಳಿ ಚನ್ನವ್ವನ ಬೆಟ್ಟಿಗಿ ಹೊಂಟಾನ ಗೋಪಾಲ

ಚೆನ್ನವ್ವ ರಾಯಣ್ಣನ ಮುಂದ ಇನ್ನೇನು ಐತಿ ಅಂತಾಳ ಮಗನ ।
ಮೊನ್ನೆ ಮಲ್ಲಸರ್ಜ ಹೊದಾನ ಕೈಬಿಟ್ಟ ಘನಘಾತುಕರು ಕೆಂಪ ಸೋಜರು ಕೆಟ್ಟ ।
ಇಷ್ಟು ಮನ್ನಿಸಿ ಕೇಳಿ ಹಳಬರಾಯ್ತಾಗ ಬಂದಿತೋ ಸಿಟ್ಟ
ಹಲ್ಲ ತಿಂದ ಅಂತಾನೋ ದೊರಿ ಮಲ್ಲಸರ್ಜ ಹೋದಬಳಿಕ
ಎಲ್ಲಾನು ಕಚೇರಿ ಬಿಡತೀನಿ ಸುಟ್ಟಾ
ಎಲ್ಲೆಲ್ಲಾ ನಡಿದಾಂಗ ಮಾಡತೀನ ಇಂಗ್ರೇಜನ ಆಟ ॥
ಹೊಳ್ಳಿ ಬಂದ ಸಾವಿರದಂಡ ಸಂಗಾಟ ತಕ್ಕೊಂಡ
ಬೀಡಿ ಸಂಪಗಾಂವ ಕಚೇರಿಗೆ ಬೆಂಕಿ ಹಚ್ಚಿ ಬಿಟ್ಟಾ
ರಾಣಿ ಪೌಜ ಹಿಡಲಾಕ ಬಂತೋ ಕಡಿದ ಕೆಡಿವ್ಯಾರೋ ದಿಟ್ಟ ॥
ಇಂಗ್ರೇಜಿ ನಡೆಸಿದಾರೋ ಒಳವರ್ತಿ ಆಗ ಪಿತೂರಿನಾಟಾ
ನೇಗಿನಾಳ ನಿಂಗನಗೌಡ ಖುದಾನಪೂರ ಯಂಕನಗೌಡಾ
ಮಸಲತ್ತು ಮಾಡಿ ತಿಳಿಸ್ಯಾರ ಒಬ್ಬರಿಗೊಬ್ಬಾ

**||ಚಾಲ||**

ಚೆಂತಿ ಬಿಡ್ರಿ ಹಿಡದಕೊಡತೀನಿ ತಿಂಗಳ ಮುದ್ದತ ಕೊಟ್ಟಾ
ಸಾಹೇಬ ಕೊಡತೀನಿ ಅಂತಾ ಸಹಿ ಹಾಕಿದ ಕಾಗದ ಮ್ಯಾಲ
ಕಡೆಗೆ ಕೂತ ಉಣ್ಣುವಂತ ಹೊಲಾ ।
ಯಂಕನಗೌಡ ನಿಂಗನಗೌಡ ಅದಾರೋ ಖಬೂಲಾ
ಜಳಕಮಾಡಿ ರಾಯಣ್ಣ ಕ್ಯಾವಿಗುಂಡಗಿ ತೊಡುವಾಗ
ಬಂದ ಮೋಸಮಾಡಿ ಕರಿಕಂಬಳಿ ಒಗಿದಾರ ದುರಿಮ್ಯಾಲ ಜಾಲ ।
ಪಿತುರಿನ ಸಾಹೇಬರೆಲ್ಲಾ ಆತುರದಿಂದಲಿ ಹೋಗಿ ಕಟ್ಟಿ ಬಿಗಿದ ಒಗದಾರ ಕೈಕಾಲಾ ।
ಆಗ ಶಂಕರ ಮುನದಾನ ರಾಯಣ್ಣನ ಮ್ಯಾಲಾ
ನಂದಗಡದ ಊರಹೊರಗ ಕೂಡಿ ಸರ್ವರೆಲ್ಲಾ
ಆಗ ನಿಂತ ನೋಡಿ ಮಾತಾಡತಾರೋ ರಾಯಣ್ಣನ ಸೂರತಾ
ಕೇವಲ ವಿಷ್ಣು ಪರಮೇಶ್ವರನ ಮಗಾ ಇದ್ದಾಂಗ ಮನ್ಮಥಾ
ಮನ ಹೌಸದಿಂದ ಬಂದ ಮೌನಿವೇರ್ಥಾ ॥ ಪುಂಡ ಕಿತ್ತೂರ ನಾಡಿನೊಳಗ ….. ॥

**೮ನೇ ಚೌಕ**

ಹೆಬ್ಬುಲಿ ಹಿಡದ ಒಯ್ಯುವಾಗ ಹಬ್ಬಿಸಿ ನೋಡುವ ಮಂದು ಭಾಳಾ ।
ಸಾಬ ಸುಬೇದಾರ ಪಾರಾ ಅವರ ಮ್ಯಾಲಾ ।
ಸಬ್ಬ ದಂಡ ಎಲ್ಲಾ ನಿಂತಾರ ಅವನ ಸುತ್ತುಮುತ್ತಲೆ ।
ಮೈ ಉಬ್ಬಿಸ್ಯಾನ ಕಟ್ಟಿರುವ ಹಗ್ಗಾ ಕಿತ್ತವ ಮಿಗಿಲಾ
ಹನ್ನೆರಡಾಳ ಉದ್ದಗೋಡಿ ಓಡಿಬಂದ ಜಿಗದ ಹೋದಾ ಹದಿನೆಂಟು ಮಂದು ಪಾರಾ
ಸಿಪಾಯರು ಅವನಮ್ಯಾಲಾ ಮುತ್ತ ಮುತ್ತಗಿ ಹಾಕಿ ಹಿಡಿದಾರ ಅವನ ಒತ್ತರದಿಂದಲಿ

ಹಿಡಿದವರ ಪೌರುಷ ಬೆಳಸಿ ಪತ್ರಬರದ ಕಳುಹಿದರಾ ।
ಬಿತ್ತಾರದಲ್ಲಿ ಹೋಗಿ ಮುಟ್ಟಿತ ರಾಣಿಯವರ ಕರದಲ್ಲಿ
ಓದಿ ನೋಡಿ ಆದ್ರ ಬಹಳ ಹರುಷದಲ್ಲಿ ।
ಇಂಥಾ ಒಬ್ಬ ಬಹದ್ದೂರ ಇರಲಿ ನಮ್ಮ ದಂಡಿನಲ್ಲಿ
ತಿರುಗಿ ಉತ್ರಾ ಕಳುಹಿದಾರ ಜಕಮು ಏನೂ ಮಾಡಬಾರದು
ಜೋಕುಮ ಇಲ್ಲದ ತಕ್ಕೊಂಡು ಬರ್ರಿ ॥
ವಿಲಾಯತಿಯಲ್ಲಿ ನಮ್ಮ ಸರಕಾರ ಮರ್ಜಿ ಅತಿ
ರಾಯಣ್ಣನ ನೋಡುದ ಇಲ್ಲಿ
ಹಿಂತಾ ಉತ್ತರ ಓದಿನೋಡಿ ಮತ್ತ ನಮ್ಮ ಜೀವದಸುತ್ತ ಮುಳವ ಉಳದೀದಂತ
ಚಿಂತೆ ಮಾಡುತಲಿ ಯಂಕನಗೌಡ ನಿಂಗನಗೌಡ
ಅಂಜಿದಾರ ಮನಸ್ಸಿನಲ್ಲಿ ಒಳಗಿಂದ ಒಳಗ ।
ಬೇತ ನಡಸಿದಾರ ತಿಳಿಯದಲ್ಲಿ ದಿಕ್ಕುತಪ್ಪಿ
ಓಡ್ಯಾಡುತಾರ ಧಕ್ಕಾ ಅಂತ ಮನಸ್ಸಿನೊಳಗೆ
ಏಕದಮ್ಮ ಬಿಡಬ್ಯಾಡ್ರಿ ಅಂದಾರ ಹೋಗಿ
ಸಾಹೇಬರಂತೇಲಿ ಎಂದಿದ್ದರ ಒಂದಿನಾ ಹೊಡೆಯುತಾರ ನಮ್ಮತೆಲಿ ॥
ಜೋರ ಹುಕುಂ ನಡಿಸ್ಯಾರ ದೂರತನಕ ಜಾಹೀರ ಹೋತು ।
ನೋಡಲಾಕ ಕೂಡಿಸ್ಯಾರ ಜನಾ ।
ಗಲ್ಲಿಗೇರಿಸತಾರ ಸೋಮವಾರ ದಿನಾ ।
ಮುಸುಕಿಲೆ ಹಗ್ಗಾ ಹಿಡದಾ ವೀರರಾಯಾ ।

**॥ಚಾಲ॥**

ಜಿಗದನಿಂತ-ಹಾರಿಹೋದಿತ ಹೌಸೀನಾ ।
ರಾಯಣ್ಣ ನೆನಸತಾನ ವೀರ ಮಾರೋತನಾ ।
ಮಾರುತಿ ಲೋಕದ ಗಂಡ ಪುಂಡ ಅರ್ಜುನಾ ।
ನಂತರ ಹೋದ ಮುಳಗಿ ಹೋದಿತೋ ರತನಾ ।
ದೇವರಾ ಮಾಡಿ ಪೂಜಿಸತಾರೋ ಆತನ್ನಾ ।
ಶಾಹೀರ ಶಾಮರಾವ ಬಾರೋ ಜಾಹೀರ ಕರ್ನಾಟಕದೊಳು ।
ತಯಾರ ಮಾಡ್ಯಾರೋ ಚಂದ ಚಂದ ಕವಿತಾ
ತಾಯಿ ಕ್ಷೀರ ಕುಡದಂಗ ಆತೋ ಹಸುಗೂಸಿಗೆ ಹಿತಾ
ಬೈಲಹೊಂಗಲ ಶಹರಾ ಬಲಭೀಮನ ದಯಾಪೂರ್ತಾ
ಕುಲಕರ್ಣಿದಶಿಯಿಂದ ಪೈಲೆ ಕದನ ಹುಟ್ಟಿ
ಊರ ಬಿಟ್ಟ ಸುತ್ತೆಲ್ಲಾ ಹಾವಳಿ ಮಾಡಿದ ವಿಪರೀತಾ ।
ಬಂಟನಿದ್ದರಿರಬೇಕ ರಾಯಣ್ಣ ಪುಂಡ ಪ್ರಖ್ಯಾತಾ
॥ ಪುಂಡ ಕಿತ್ತೂರ ನಾಡಿನೊಳಗ ... ॥

**ರಚನೆ :** ಶಾಹೀರ ರಾಮರಾವ್

**ಕೃತಿ :** ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ

# ೧೩. ಸಂಗೊಳ್ಳಿ ರಾಯಣ್ಣ - ೧

ಚಿತ್ತಗೊಟ್ಟ ಕೇಳರಿನ್ನ ಕಿತ್ತೂರ ನಾಡಾನ ಸುದ್ದಿ
ಕತ್ತಿ ಹಿರದ ನಿತ್ತಿದಾನ ಲಡಾಯಕ
ಸಂಗೊಳ್ಳಿ ರಾಯಣ್ಣನಂಥ ಬಂಟ ಇದ್ದಿರಬೇಕ
ತಾಯಿ ಕೆಂಚವ್ವ ತಂದಿ ಹಳಬ ಭರಮನಾಯಕ ‖
ಜಾತಿಯಿಂದ ಹಾಲಮತ ಖ್ಯಾತಿಲಿಂದ  ಶಮರಂತ
ಸೋತ ನಡಿಲಿಲ್ಲ ಪ್ರಾಣ ಹೋಗೂತನಕ
ಬಂಟರಿದ್ದರಿರಬೇಕ ಇಂಥ ಪುಂಡ ಪ್ರಖ್ಯಾತ ‖

ಮಲಪುರಿ ಹೊಳಿಯೊಳಗ ಹುಟ್ಟಿತ ಕದನದ ಬ್ಯಾಗಿ
ಕುಲಕರ್ಣಿ ಬಾಳಪ್ಪ ಅಂದ ದೊತ್ರಾ ಒಗದ ಕೊಡಬೇಕ
ಹಳಬ ಆದ ಮ್ಯಾಲ ಅಲಕ್ಷತನ ನಿನಗ್ಯಾಕ
ಚಾಕ್ರಿಮಾಡೋದಾದರ ಹೇಳಿದ್ದನೆಲ್ಲಾ ಕೇಳಬೇಕ ‖
ಇಷ್ಟಕೇಳಿ ರಾಯಣ್ಣ ನಿಷ್ಠುರದಿಂದ ಹೇಳತಾನ
ಹೆಂತಾ ಕೆಟ್ಟ ಮಾತನಾಡಿದೆಪ್ಪ ಕೇಡಗಾಲಕ್ಕ
ನಾಚಿಕೆ ಬರಲಿಲ್ಲೇನೋ ಹಿಂತಾ ಕೆಲಸ ಹೇಳುದಕ ‖

ಎಂಟದಿನ ಆಗಿದ್ದಿಲ್ಲ ಸಿಟ್ಟ ಇತ್ತ ಕುಲಕರ್ಣಿಗೆ
ಗಂಟ ಬಿದ್ದ ಸರಕಾರಿ ಪಾಳೇಕ
ರಾಯಣ್ಣ ಹೊಂಗಲಕ ಹ್ವಾದ ಹೋರಿಗಳನ ಮಾರೂದಕ
ಬಾಳಣ್ಣ ಕೆಂಚವ್ವನ್ನ ಕರಿಸಿದಾನೊ ಚಾವಡಿತನಕ ‖
ಮಾಡಿದಾನ ಚೀಮಾರಿ ಡುಬ್ಬದಮ್ಯಾಲಿ ಕಲ್ಲಹೇರಿ
ಎಲ್ಲಿಹೋಗತಿ ಸದ್ದೆ ಪಾಳೆ ಕೊಡಬೇಕ
ನಿನ್ನ ಮಗಾ ರಾಯಾಗ ಬಂದತೀಗ ಬಾಳಸೊಕ್ಕ ‖

ಹೋರಿ ಮಾರಿದ ಹಣಾತಂದ ಮಾರಿಮ್ಯಾಗ ಒಗದ
ತಾಯಿ ದುಬ್ಬದ ಮ್ಯಾಲಿನ ಕಲ್ಲ ಇಳಿವ್ಯಾನ ನೆಲಕ
ಬಾಳ್ಯಾ ನಿನ್ನ ಚೆಂಡ ಕಡದ ಇಡತೇನಂದ ಕಡಿಯಾಕ
ಕುತಿಗಿ ಹಿಡಿದ ಕತ್ತಿ ಕೈ ಎತ್ತಿ ಮ್ಯಾಲಕ್ಕ ‖
ಗಾಬ ಆಗಿ ಬಾಳಣ್ಣ ಬಾಯೊಳು ಹಲ್ಲಕಚ್ಚಿ
ಜೀವದಾನಾ ಬೇಡಿದಾನ ಬಿದ್ದಪಾದಕ
ನಿನ್ನ ಮಗಾ ಆಗಿ ಇರತೇನಪ್ಪಾ ಕಡಿತನಕ ‖

ದಯಾಬಂತ ರಾಯಣ್ಣಗ ಜೀವದಾನಾ ಕೊಟ್ಟಿದಾನ
ಕುಲಕರ್ಣಿ ಕೊಟ್ಟಿ ರಿಪೋರ್ಟ ಬರದ ಕಂಪನಿ ಸರಕಾರಕ್ಕ
ವಾರಂಟ ಹುಟ್ಟೀತ ರಾಯಣ್ಣನ ಹಿಡಿಯೂದಕ್ಕ
ಸಂಪಗಾಂವ ಬೀಡಿ ಕಚೇರಿ ಸುಟ್ಟಿದಾನ ಆ ಕ್ಷಣಕ ॥
ಬಲ್ಲಿದ ಬಂಟರ ಹಿಂಡ ಒಪ್ಪುವಂಥಾ ಒಣಕಿ ದಂಡ
ಕೂಡಿಸಿಕೊಂಡ ರಾಯಣ್ಣ ಬೆಂಬಲಕ
ಬೆನ್ನ ಹತ್ತೀತ ಬ್ರಿಟೀಷ ದಂಡ ಹಿಡಿಯೋದಕ ॥

**ಒಂದನೇ ಚಾಲ**

ಕೂಡುಕೊಂಡ ಹ್ವಾದ್ರ ಮಲ್ಲಾಡಕ ಬಾಳಗುಂಡ ಸ್ಥಳಕ
ಇಳಕೊಂಡಾರ ಸ್ವಸ್ಥಾ
ಬ್ರಿಟಿಷರ ದಂಡ ನಡೀತ ಹುಡಕೂತಾ ॥

ಗೋರಾದಂಡ ಇಳದೀತ ಗೋದಳಿಗಿ ರಾತ್ರಿ ಹೊತ್ತ ಮುಳಗಿ
ರಾಯಣ್ಣಗಾತ ಗೊತ್ತಾ
ಮುಗಿ ಹಾಕಿದ್ರ ಆಗಲಿಲ್ಲಾ ಸುಸ್ತಾ ॥

ಕಡಕಡದ ಒಗದ್ರ ಚಂಡ ರುಂಡ ಮುಗಿದ ಎಲ್ಲಾ ದಂಡ
ಒಬ್ಬನ್ನ ಬಿಟ್ರ ಬೇಕಂತಾ
ಸಾಹೇಬಗ ಸುದ್ದಿ ತಿಳಸಂತಾ ॥

ಬ್ರಿಟಿಷರಿಗೆ ಬಿದ್ದಿತ ಬಾಳ ದಿಗಿಲ ಜಾಹೀರ ನಾಡಮ್ಯಾಲ
ಹಿಡಕೊಟ್ರ ಇನಾಮ ಐತಿ ಮಸ್ತಾ
ನೇಗಿನಾಳ ಖೋದಾನಪುರ ಗೌಡ್ರ ಹಿಡಕೊಡತೇವಂತಾ ॥

**ಎರಡನೇ ಚಾಲ**

ಗುಡ್ಡಗಂವಾರ ಹುಡುಕೂತ ನಡದಾರು
ರಾಯಣ್ಣನ ಭೆಟ್ಟಿ ಆದಾರು ॥

ವಿಶ್ವಾಸಕೊಟ್ಟ ಮಾತನಾಡ್ಯಾರು
ರೊಟ್ಟಿಬುತ್ತಿ ನಿನಗ ತಂದೇವಂದಾರು ॥

ಜಳಕಾ ಮಾಡೂದಕ ಕರಕೊಂಡ ನಡದಾರು
ಬಾಳಗುಂಡ ವರ್ತಿಗಿ ಇಳದಾರು ॥

ಕತ್ತಿ ತಗದೊಗದ ಸಿಳ್ಳ ಹೊಡದಾರು
ಲಷ್ಕರ ಬಂದು ಸುತ್ವಾಕಿ ಹಿಡಿದಾರು ॥

**||ಏರ||**
ಧಾರವಾಡದಲ್ಲಿ ಚೌಕಶಿ ಮಾಡಿದಾರ ಬಾಳ ಗಾಸಿ
ರಾಯಣ್ಣನ ಗಲ್ಲಿಗ್ಹಾಕಿದಾರ ಓದ ನಂದಗಡಕ
ತಿಗಡೊಳ್ಳಿ ಮರಿಕಲ್ಲ ಮಾಡಿದಕವಿ ಬಲುಟೀಕ
ಬಲ್ಲಿದ ಬಲಭೀಮ ಆದಾನ ಅವನ ಸಾಯಕ್ಕ ॥
ಜಾತಿಯಿಂದ ಹಾಲಮತ ಭಾತಿಲಿಂದ ಶಮರಂತ ।
ಸೋತ ನಡಿಲಿಲ್ಲ ಪ್ರಾಣ ಹೋಗೋತನಕ
ಸಂಗೊಳ್ಳಿ ರಾಯಣ್ಣನಂತಾ ಬಂಟ ಇದ್ರ ಇರಬೇಕ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿಯ ಕೃತಿಗಳು

## ೧೪. ಸಂಗೊಳ್ಳಿಯ ರಾಯಣ್ಣ - ೩

ಶೂರನಾದ ಸಂಗೊಳ್ಳಿಯ ರಾಯನಾಯಕ ಪುಂಡಾ ।
ಗೋರಾ ದಂಡಿಂದೆಲ್ಲಾ ಹಾರಿಸಿದನು ರುಂಡಾ॥ ಪ ॥

ಕುಲಕರ್ಣಿ ಬಾಳಣ್ಣಂವಗ ಧೋತ್ರಾ ಶಳತಾ ಅಂದಾ ।
ಅಲ್ಲಿಗಿ ರಾಯಣ್ಣಗ ಬಂದೀತ ಕ್ರೋಧಾ ।
ಸೊಲ್ಲ್ಯಾ ಅಂತ ತಿಳದಿ ಏನೋ ನೋಡಿ ಬಿಡತೀನಂದಾ ।
ಬಲ್ಲಾಂಗ ನಡದೀತೆ ಇಬ್ಬರಿಗೆ ವಾದಾ॥ ೧ ॥

ಫಾಳೆ ಎತ್ತುವ ವ್ಯಾಳೆದಾಗ ಬಾಳಣ್ಣ ಸಾಧಿಸಿದಾ ।
ನಾಳೆ ಅಂದ್ರ ಕೇಳಲಿಲ್ಲವರಪ್ಪನ ತರಸಿದಾ ।
ಹೇಳಿ ಕೇಳಿ ಡುಬ್ಬದ ಮೇಲೆ ಕಲ್ಲ ಹೇರಿ ನಿಂದ್ರಿಸಿದಾ ।
ಹಳಬರಾಯಂಣ ಹೋರಿ ಮಾರೀಹಪ್ತೆ ತುಂಬಿದಾ॥ ೨ ॥

ಸುರಪುರ ಅರಸಂದು ತಕ್ಕೊಂಡಾ ।
ಮೂರನೂರ ಬೇಡರದೊಂದ ಕೂಡಿಸಿದ ಹಿಂಡಾ ।
ಧೀರ ಗಜವೀರನ್ನ ಸಂಗಡ ಕರಕೊಂಡಾ ।
ಮೀರಿದಾಂವ ಬಿಚ್ಚಗತ್ತಿ ಚನ್ನಬಸವಣ್ಣ ಮುಖಂಡಾ॥ ೩ ॥

ಬೀಡಿ ಸಂಪಗಾಂವಿ ಕಚೇರಿ । ಸುಟ್ಟ ಬೂದಿ ಮಾಡಿದಾ ।
ನೋಡಿ ಸುಬೇದಾರ ಧಾರವಾಡಕ ತಿಳಿಸಿದಾ ।

ದೊಡ್ಡ ಸಾಹೇಬ ವಿಕ್ಟೋರಿಯಾ ರಾಣಿಯವರಿಗೆ ಬರದಾ।
ದೌಡ ಮಾಡಿ ಕಳಿಸಿದರು ದಂಡ ಅಳತಿಲ್ಲದಾ॥ ೪ ॥

ಹಳ್ಳಕೊಳ್ಳ ಹುಡುಕುತ ಬಂತ ಪೌಜ ಖಬರಿಲ್ಲದಾ।
ಹಳ್ಯಾಳ ಗುಡದಾಗ ಸರ್ಜ ಫರಾಳ ನಡಸಿದ್ದಾ।
ಸುಳವ ಹಿಡಿದ ಗತ್ತಗಾರಕಿ ಯುದ್ಧ ನಡೆಸಿದಾ।
ಎಲ್ಲಾ ಕಂಟಗಿ ಅರವಿಸುತ್ತಿ ಬೆಂಕಿ ಹಚ್ಚಿಸಿದಾ॥ ೫ ॥

ಮಂದಿ ಇಲ್ಲೇ ಐತಿ ಅಂತ ಸಿಪಾಯಿಗಳು ತಿಳದಾ।
ಮದ್ದಗುಂಡ ತೀರುವ ತನಕ ಹೊಡದರು ಪಸಂದಾ।
ಆದದ್ದು ನೋಡಿ ರಾಯಣ್ಣವರ ಮೇಲೆ ಬಿದ್ದಾ।
ಗದ್ನಿ ಹೊಡದ ಕತ್ತೀ ಹಿರದ ರುಂಡಗಳ ತರದಾ॥ ೬ ॥

ಚಕ್ರ ಟೊಪಿಗಿ ಫೀರಂಗೇರನ ಲೆಕ್ಕವಿಲ್ಲದೆ ಕಡದಾ।
ಬಕ್ಕ ಬರ್ಲ ಬಿದ್ದವರನ್ನ ಬೆನ್ನ ಮೇಲೆ ತುಳದಾ।
ದಿಕ್ಕ ತಿಳಿಯದಂಗ ಆಯ್ತು ರಕ್ತಿದ್ಹೊಳಿಹರದಾ।
ಸೊಕ್ಕ ಮುರಿದು ಹೋಯಿತು ಆಗಿನ ರಾಣಿ ಸರ್ಕಾರದ್ದಾ॥ ೭ ॥

ಸಂಪಗಾಂವಿ ತಾಲ್ಲೂಕಿನ ಸುತ್ತಿನ ಹಳ್ಳಿ ಸುಲದಾ।
ಸಂಪತ್ತು ಇದ್ದವರದು ಮನಿ ಎಲ್ಲಾ ಬಳದಾ।
ಗುಂಪಿನೊಳಗಿದ್ದವರ ಹೊಟ್ಟೆ ದಶೆಯಿಂದಾ।
ಸಂಪೂರ್ಣ ಜಬಾಬದಾರಿ ತನ್ನ ಕೂಡ ಇದ್ದವರದಾ॥ ೮ ॥

ಉಪಟಳಕ್ಕ ಸರಕಾರದವರು ಕೋಪ ಆಗಿ ಮುಂದಾ।
ತಪಾಸ ಮಾಡಿ ಹಿಡಿದವರಿಗೆ ಇನಾಂ ಕೊಡತೀವಂದಾ।
ಉಪಾಯದಿಂದ ಡಂಗುರ ಹೊಡಿಸಿ ಮಾಡ್ಯಾರ ಪ್ರಸಿದ್ಧಾ।
ಕಪಟಿಗಳು ವಚನ ಕೊಟ್ರ ಮೂವರು ಕೂಡಿ ಬಂದಾ॥ ೯ ॥

ನಿಂಗನಗೌಡ ವೆಂಗಕನಗೌಡ ಬಾಳನಾಯ್ಕ ಕೂಡಿಕೊಂಡಾ।
ಹ್ಯಾಂಗ ಮಾಡಬೇಕಂತ ಲೆಕ್ಕ ಹಾಕಿ ಮನಗಂಡಾ।
ಸಂಗೊಳ್ಳಿರಾಯನಾಯ್ಕಗ್ಹೋಗಿ ಹೇಳತಾರ ಬಂಡಾ।
ಕಂಗಾಲಾಗಿ ಬೆನ್ನಿಗೆ ಬಿದ್ದ ಇರತೇವ ನಿಮ್ಮ ಕೂಡಾ॥ ೧೦ ॥

ಒಳ್ಳೆ ಮನುಷ್ಯ ರಾಯನಾಯ್ಕ ವಿಶ್ವಾಸ ಹಿಡದಾ।
ಹಳ್ಳಕ್ಹೋಗಿ ಜಳಕಕ್ಕ ಕುಂತಾ ಕತ್ತಿ ತಗದಿಟ್ಟಿದ್ದಾ।
ಕಳ್ಳರಿವರು ಮೂವರು ಕೂಡಿ ಆಗ ಮೇಲೆ ಬಿದ್ದಾ।
ತಳ್ಳಿ ಮಾಡಿ ಕೈಕಾಲ ಕಟ್ಟಿ ಹೊರಸಿನ ಮೇಲೆ ಒಗದಾ॥ ೧೧ ॥

ಸರದಾರನ ಮುಂದ ಇಟ್ರ ಕಚೇರಿಗಿ ಒಯ್ದಾ ।
ಸರದಾರ ಸರ್ಜನ್ನ ನೋಡಿ ಮರ ಮರ ಮರಗಿದಾ ।
ಶಿರ ಹೊಡೆಯುವ ಪರವಾನಗಿ ಸರಕಾರನ್ನ ಕೇಳಿದಾ ।
ಮರಳಿ ಹುಕುಂ ಬರುದರೊಳಗೆ ಗಲ್ಲಿಗೆ ಹಾಕಿಸಿದ್ದಾ॥ ೧೨ ॥

ನಂದಗಡದೂರಲ್ಲಿ ದಫನ ಮಾಡಿಸಿದಾ ।
ಮಂದೆಲ್ಲಾ ಮರಗಿದರು ಕೊಲಬಾರದಿತ್ತಂದಾ ।
ಚಂದ ಆಲದ ಮರ ಒಂದ ಗುರ್ತಿಗೈತಿ ಇಂದಾ ।
ಸುಂದರ ಹುಲಕುಂದ ಭೀಮ ಪದ ಮಾಡಿ ಸಾರಿದಾ॥ ೧೩ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀನ ಜನಪದ ಗೀತೆಗಳು

## ೧೫. ಶೂರ ಸಂಗೊಳ್ಳಿ ರಾಯಣ್ಣ

ಸಂಗೊಳ್ಳಿ ರಾಯನಾಯ್ಕ ಸರ್ವ ಸಂಪಗಾಂವಿ ಸುಭೇದಾರನ ಮ್ಯಾಗ ।
ತಳ್ಳಿ ಮಾಡಿದನು ಮಹಾ ಪುಂಡಾ ।
ಒತ್ತರದಿಂದ ಸುತ್ತಿನ ಹಳ್ಳಿ ಮುತ್ತಿಗಿ ಹಾಕಿ ಬಡದರಣ್ಣ ।
ಗೊತ್ತ ಇಲ್ಲದಂಗಾಗಿ ಹೋಯಿತು ಬಂಡಾ॥ ಪ ॥

ಪೂರ್ವದ ಮಾತ ಹೇಳತೀನ ನಿಮಗ ಸರ್ವರು ಕುಂತ ಕೇಳಿರಿ ।
ಗರ್ವ ಬಂತ ಸಂಗೊಳ್ಳಿ ಕುಲಕರ್ಣಿಗಿ ।
ಚಂದದಿಂದ ರಾಯನಾಯ್ಕ ಹೊಂದಿಕೊಂಡ ಇದ್ದ ಅವರ ।
ಮುಂದ ಹುಟ್ಟಿತ ಕದನದ ಬ್ಯಾಗಿ ॥
ಕುಲಕರ್ಣಿ ಬಾಳಪ್ಪ ರಾಯಣ್ಣಗ ಜಳಕ ಮಾಡು ಹೊತ್ತಿನಾಗ ।
ಧೋತ್ರಾ ಶಳತಾ ಅಂತ ಕೊಟ್ಟ ಅವನ ಕೈಯಿಗಿ ।
ಇಷ್ಟ ಮಟ್ಟಗಿ ಸಿಟ್ಟಮಾಡಿ ಧಿಟ್ಟತನ ಹಿಡದ ರಾಯಣ್ಣ ।
ಮುಟ್ಟಾಕಿಲ್ಲ ಅಂದ ಅರಿವಿ ಎಂದೆಂದಿಗೆ ॥
ಯಾಕಲೆ ಹಳಬಾ ಜೊತ್ಯಾಗಿದ್ದಿ ಸೊಕ್ಕಬಂತ ಏನೋ ಈಗ ।
ದಿಗರ ಆಡತಿಯೋ ನಿಂತ ಇದಿರಿಗಿ ।
ಕೇಳಿ ರಾಯಣ್ಣ ತಾಳಿ ಸಿಟ್ಟು ಹೋಳಿ ಆದ ನಿನ್ನ ।
ಬಡುವೆನೆಂದು ಹೇಳಿ ಹೊಂಟ ಹಿಂದಕ ತಿರಿಗಿ ॥
ಒಳ್ಳೇದ ಬಾಳಣ್ಣ ನನ್ನ ತಳ್ಳಿ ಮಾತ್ರ ಹಿಡಿಯೋ ಇನ್ನ ।
ದಾಳಿ ಬಂಟ ತಿಳಿಯೊ ಸುತ್ತಿನ ಹಳ್ಳಿಗಿ ।
ಒತ್ತರದಿಂದ ರಾಯ ನಾಯ್ಕ ಹೆತ್ತಬಾಯಿ ಪಾದಕ ಬಿದ್ದು ।
ಮತ್ತೆ ಕಟ್ಟಿಕೊಂಡ ಹತ್ತೀತ ಬ್ಯಾಗಿ ॥

**||ಚಾಲ||**

ಮೊಗಲಾಯಿ ಸೀಮೆಗೆ ಹೋಗಿ | ಸುರಪುರ ಅರಸನಿದಿರಿಗಿ | ನಿಂತ ಕೈ ಮುಗದಾ |
ಶಿರಬಾಗಿ ನಮಸ್ಕಾರ ಮಾಡಿದಾ
ಧೀರ ಹೌದೊ ರಾಯನಾಯಕ | ಹಾರಿದ ಹೆನ್ನೆರಡ ಪಕ್ಕ ಅಕ್ಕಡಿ ಜಿಗಿದಾ
ಅರಸ ಸ್ವತಾ ಕಣ್ಣಾರೆ ನೋಡಿದಾ ||
ಅರಸ ಮೆಚ್ಚಿ ಹರುಷವಾದ ಭಾರೀ ಸರ್ಜ ನಿನಗ ಸರಿ |
ಯಾರು ಇಲ್ಲಂದಾ |
ಏನ ಬೇಡ್ತಿ ಬೇಡ ಕೊಡತೇನಂದಾ ||

**||ಏರು||**

ಎನಗ ಒಲಿದರ ನೀನು ಮುನ್ನೂರ ಬೇಡರನಕೊಡ |
ಆರಿಸಿಕೊಂಡ ವಯ್ಯತೇನ ಮನಗಂಡಾ|| ೧ ||

ದಂಡ ಎಲ್ಲಾ ತಕ್ಕೊಂಡ ಬಂದು ಬಂಡಾಯ ಮಡುವೆನೆಂತೆಂದು |
ಅವರಿಗೆ ಹೇಳಿದನು ಪಂಡೀತಾ |
ರವಡ ಮಾಡಿ ರಾಯನಾಯಕ ದವಡಮಾಡಿ ತಂದ ದಂಡಿನ |
ಗುಡದಾಗ ವೈದ ಇಟ್ಟ ಎಲ್ಲ ತುರತಾ ||
ತಂದ ದಂಡಿಗೆ ಹೇಳತಾನ ಹೊಂದಿಕಿಂದ ಮಾತಗಳನು |
ಮುಂದನಿಂತ ಚಂದ ಮಾಡಿ ಒಳೆ ಸಿಸ್ತಾ |
ಎಚ್ಚರದಿಂದ ಇರ್ರಿ ನಿಮ್ಮ ಸುತ್ತುಕಡೆ ಹುಷಾರಾಗಿ |
ಎತ್ತರೆ ಹೋದಿರಿ ನೀವು ಮತ್ತಾ ||
ಹಸದರ ಮನುಷ್ಯರನ್ನ ತಿನ್ನುವಂಥ ಹಬಸೇರನ ತಂದ ಇಟ್ಟಿ |
ಎಲ್ಲಾ ಸುತ್ತು ಕಡೆ ಮಡಿ ಬಂದು ಬಸ್ತಾ |
ವಿಸ್ತಾರ ದಂಡಿಗಿಲ್ಲಾ ಸಿಸ್ತಮಾಡಿ ತಯ್ಯಾರಾಗಿ ವತ್ತರದಿಂದ |
ನಡಿರೆಂದ ಜಿಕ್ಕೊಂತಾ ||
ಕಡುವ ಕತ್ತಿ ಕೈಚೂರಿಗಳು ಇರಿಯುವ ಕಂಜೀರ ಬಾಕ |
ಪಿಸ್ತೂಲ ಸಿಟ್ಟಿನ ಬಂಟರು ಸಮಸ್ತಾ |
ಕಠಾರಿ ಬಿಲ್ಲು ಈಟಿ ಬಾಣ ಧಿಟ್ಟತನದಲ್ಲಿಡುವ ಡಾಲು |
ಮ್ಯಾಗ ತೊಟ್ಟಾರ ಚಿಲಕುತ್ತಾ ||

**||ಚಾಲ||**

ದುಂಡಗ್ಯಾಮಿ ಹೊಂದಿಕಿ ಗಂಧ ಕಸ್ತೂರಿ ಧರಿಸಿ ಮುಂದೆ |
ಹುಯಿಲಗಾಳಿ ಹಿಡಿಸುತಾ |
ಅಬ್ಬರದಿಂದ ಒಬ್ಬರು ಉಳಿಯದಂತಾ ||

ಖಬರಿಲ್ಲ ಬಂದರಂಣ ಆಗ ।
ರಣಸೂರಿ ಯಾವಾಗ । ದೌಡ ಮಾಡೇವಂತಾ ।
ಒಳಗ ಉಕ್ಕತಿತ್ತ ಅವರ ರಕ್ತಾ ॥
ಭೇರಿ ಕಾಳಿ ಕರುಣಿಯ ಹಿಡಿಸಿ । ಮಿರೀದ ಹಲಗಿ ಹೊಡಿಸಿ ।
ಕಾಲ ಮಂದಿ ಸಹಿತಾ ।
ಮುಂದಕ ಕಳವಿದ ಪ್ರಖ್ಯಾತಾ ॥

**॥ಏರು॥**

ರಂಗವಾಗಿ ಇರವುವ ಕರ್ನಿಗೆ ಜಂಗು ಜಲ್ಲಿ ಘಂಟೆ ಸರಪಳಿ ।
ಮುಂಗೈಯಾಗ ತೊಡೆ ಹಾಕಿಸಿದ್ದ ಎರಡಾ॥ ೧ ॥

ಹಲ್ಲತಿಂತ ಹವಣಸ್ತ ಕಾಲಕೆದರಿ ಕತ್ತಿ ಹಿರಿದು ।
ಜಿಗತಾ ಮಾಡತಾರ ಅವರು ಕುಸಿ ಬಂದಾ ।
ಬಿಚ್ಚಗತ್ತಿ ಚನ್ನಪ್ಪಣ್ಣ ಮುಂದೆ ಶಮಸೇರ ।
ಗಡೇಕ ಹೋಗಿ ವಿಚಿತ್ರಹೊಡವುನ ನಡಿರೆಂದಾ ॥
ಗಜವೀರ ಹೇಳತಾನ ಬಹಳ ಗದ್ದಲ ಮಾಡುನು ಇಂದ ।
ಏನೇನು ಉಳಿದಂಗ ಒಳಗಿಂದಾ ।
ಕಡ್ಡಿಗುಡ್ಡ ಬಾಳಣ್ಣ ದೊಡ್ಡ ಕಿಲ್ಲೇದ ಭೀಮಣ್ಣ ।
ಬೆಳವಡಿ ವಡ್ರ ಎಲ್ಲಣ್ಣ ಕತ್ತಿ ಹಿರದಾ ॥
ಸತ್ತ್ಯಳ್ಳ ಸಿರಸಂಗಿ ಕಾಳವ್ವ ಮತ್ತೆ ಕಕ್ಕೇರಿ ಕರಿಯವ್ವ ।
ನಮ್ಮ ಕತ್ತಿಗೆ ಬೇಸ್ಯಾನ ಕೊಡಿರೆಂದಾ ।
ಎಲ್ಲಾ ಮಂದಿ ಕೂಡಿಕೊಂಡು ನಿಲ್ಲದೆ ಹೋಗಿ ಶಮಸಾರ ಗಡದ ।
ಹಲ್ಲಾ ಏರಿ ಮುತ್ತಿಗಿ ಹಾಕಿದ್ದಾ ॥
ಗುಡ್ಡದ ಒಳಗ ಹೋಗಿ ತಾವು ಬಹಳ ಗದ್ದಲ ಮಾಡ್ಯಾರಣ್ಣ ।
ಸಿಕ್ಕ ಮಂದಿನೆಲ್ಲಾ ಚಂಡ ಕೋದಾ ।
ಹಿಡದ ಹೊಡದ ದಂಧಲ ಮಾಡ್ಯಾರ ಗಮಿಕಿಲಿಂದ ಗಡಾದೋಳು ।
ಮಂದಿ ಯಾರ್‍ಯಾರುಳಿಯಲಿಲ್ಲ ವಳಗಿಂದಾ ॥

**॥ಚಾಲ॥।**

ಯಾತರದಿಲ್ಲ ಅವಂಗ ದರಕಾರ । ಕಾಲಲ್ಲಿ ಹಗರ ।
ಕತ್ತಿ ಹಿಡದ ಢಾಲಾ ।
ಕಡದ ಹೋಗತಾನ ಸಿಗುದಿಲ್ಲಾ ॥
ಗಡಾದ ವಳಗ ಗದ್ದಲ ಆದ । ಸುದ್ದಿ ಕೇಳಿದ ।
ಸುಭೇದಾರ ಎಲ್ಲಾ ।
ಘಾಬರ್‍ಯಾಗಿ ಎದ್ದ ಬಂದನಲ್ಲಾ ॥

ಸುತ್ತ ಮುತ್ತ ನೋಡಿದನು ಆಗ । ನಮ್ಮ ನಾಡ ವಳಗ ।
ಏನೇನು ಆಗಿದ್ದಿಲ್ಲಾ ।
ಹಿಂತವರ್‍ಯಾರು ಇಲ್ಲಿ ಬಂದಿದ್ದಿಲ್ಲಾ ॥

**॥ಏರು॥**

ಆದ ರೀತಿ ಮಾತಗಳನು ಶೋಧ ಮಾಡಿ ಸುಭೇದಾರ ।
ಧಾರವಾಡಕ ಬರದ ಹಾಕಿದ ಕೂತಕೊಂಡಾ॥ ೩ ॥

ಬರದ ಪತ್ತರ ವತ್ರರದಿಂದ ವಾಲಿಕಾರರು ಓದರಣ್ಣಾ ।
ದಾರಿ ಕೂಡಿಕೊಂಡ ಆಗ ಧಾರವಾಡಕ ।
ಗಚ್ಚಿನ ಬಂಗ್ಲೇದ ವಳಗ ಕಚೇರಿಯಾಗಿತ್ತು ಕಾಗದ ।
ಬಿಚ್ಚಿ ಓದರು ಸಾಹೇಬನ ಹಂತೇಕ ॥
ಓದಿಕೊಂಡ ಸಾಹೇಬ ನೋಡಿ ಹೋದ ಮಾತಿಗಿ ।
ಇನ್ನ ಯಾಕ ಎಂದು ಗಾದಿ ಬಿಟ್ಟ ಎದ್ದನಾಕ್ಷಣಕ ।
ಟೊಪ್ಪಿಗಿ ಒಗಿದು ಮುಂಗೈ ಕಡಿದು ಸಿಟ್ಟಿಲಿಂದ ಹಲ್ಲತಿಂದು ।
ಕುಂತ ಪತ್ರ ಬರದ ಮುಂಬಾಯಿಕ ॥
ವಿಕ್ಟೋರಿಯಾ ಎಂಬುವಂಥ ಶಕ್ತಿಯುಳ್ಳ ರಾಣಿಯವರು ।
ಮೊಕ್ತಾ ನೋಡಿ ತಿಳಿದರು ತಮ್ಮ ಮನಕ ।
ಐದನೂರ ಸೋದರ ಮಂದಿ ಎರಡನೂರ ಕರಿಯ ಮಂದಿ ।
ಕಳಿವಿ ಕೊಟ್ಟರಾಗಿನ ಕ್ಷಣಕ ॥
ಹೇಳದ ಅಷ್ಟು ದಂಡ ಬಂತ ಕಾಳಕಸ್ತಾಮಾಡಲಿಕ್ಕೆ ।
ಬೆಳಗಾಂವಿ ಧಾರವಾಡ ಜಿಲ್ಲೇಕ ।
ಸುಭೇದಾರ ತಗೊಂಡ ಇನ್ನ ಸಬರ ಹಿಡಿಯದ ಹೋಗಬೇಕಂದ
ಜಬರದಿಂದ ರಾಯಣ್ಣನ ಕೊಲ್ಲುದಕ ॥

**॥ಚಾಲ॥।**

ಅಷ್ಟು ಮಂದಿ ಕೂಡಿಸಿಕೊಂಡ ಹೊಂಟ ।
ಸುಭೇದಾರ ಸಿಟ್ಟ । ಅಡ್ಡಾಡಿ ಹುಡುಕುತಾ ।
ರಾಯಣ್ಣನ ಮಂದೆಲ್ಲಾ ಐತೆಂತಾ ॥
ಹಳಕೊಳ್ಳ ಗುಡ್ಡ ಗಂವ್ಹಾರ । ಅಡವಿ ಕಾಂತಾರ ।
ಹೊಂಟಾರ ನೋಡುತಾ ।
ಹಳ್ಯಾಲ ಗುಡ್ಡಕ ಹೋದಾರ ಆಹೊತ್ತಾ ॥
ಇವರ ದಂಡ ಬಂತ ಅಂಬುವ ಗುರ್ತಿ ।
ರಾಯಣ್ಣಗಾದೀತ । ನೋಡ್ಯಾನ ಶಮರಂತಾ ।
ಫರಾಳ ಮಾಡೀತ ಅವನ ದಂಡ ಕೂತಾ ॥

**||ಏರು||**

ತವಕದಿಂದ ತಯ್ಯಾರಾಗಿ ಗಿಡಕ ಜಾಂವಿಗಿ ಕಟ್ಟಿ ದೂರ ಹೋಗಿ
ನಿಂತಾರ । ಹುಯಿಲ ಗಾಳಿ ಹಿಡಿಸಿ ಕೊಂಡಾ
ಇಲ್ಲೇ ಅದಾನ ರಾಯ ನಾಯಕ ಅಂದು ನೋಡು ಅವರು ।
ವೈರಗಟ್ಟ ಹೊಡೆದರು ಸುತ್ತಾ ।
ಗುಂಡು ಮದ್ದು ಆವತ ಗುಂಡು ಗರ್ಸಲ್ ತಬಾಕಿ ಕರುಲಿ ।
ಹೊಡುವತಾರ ಇಲ್ಲ ಪುರುಸೊತ್ತಾ ॥
ಅವಾಜ ಧಡ ಫಡ ಅಳ್ಳ ಹುರದಾಂಗ ಕೊಳ್ಳದೊಳಗಿನ ಗಿಡಕ ।
ಹೊಡೆದರ ಗುಡ್ಡನಾದ ಹಿಡದೀತ ಗದ್ದನಿಸುತಾ ।
ಮೂರ ತಾಸ ಹೊಡದರ ಎಲ್ಲಾ ಮದ್ದ ಗುಂಡ ತೀರಿ ಹೋತ ।
ಮುನದಾನ ಅವರಿಗೆ ಭಗವಂತಾ ॥
ಮದ್ದತೀರಿ ಬಂದ ಆದಾರ ಗುಂಡ ಹಾಕುವ ಸಪ್ಪಳ ನಿಂತದ್ದು ।
ಕಂಡ ರಾಯಣ್ಣ ಬೆನ್ನಮ್ಯಾಲ ಬಂದಸ್ವತಾ ।
ಕುರಿ ವಳಗ ತೋಳ ಹೊಕ್ಕ ಮುರ ಮುರದ ವಗವಗದ ।
ಹಿರ ಹಿರದ ಕಡದಾರ ಕತ್ತಿಲೆ ವಿಪರೀತಾ ॥
ಸುತ್ತಗಟ್ಟಿ ಮಂದಿ ಯತ್ತ ಯತ್ತ ಹೋಗಗೊಡದ ಕಡದಾರ ।
ಮುತ್ತಿಗಿ ಹಾಕ್ಯಾರ ದಂಡಿಗಿ ಬಂತ ಕುತ್ತಾ ।
ಪಿಸ್ತೂಲ ಫಿರಂಗ ಹಿರಿದು ಬಾಕ ಬಿಲ್ಲ ಬಾಲಿಲೆ ಒಗೆದು ।
ನಾಕನೂರ ಮಂದು ಕೊಂದಾರಾ ಹೊತ್ತಾ ॥

**||ಚಾಲ|||**

ಕಂಡ ಮಂದಿ ಚಂಡ ಕೋದಾರ । ಗುಂಡಿಲೊಗದಾರ ।
ರುಂಡ ಪತ್ತಾ ಇಲ್ಲಾ ।
ತುಂಡ ತುಂಡ ಮಾಡ್ಯಾರ ಕೈಕಾಲಾ ॥
ಕೊಳ್ಳದೊಳಗ ಆಗಿ ಕುತಂತ್ರ । ಹರದೀತ ನೇತ್ರ ।
ಭೂತಗಳ ಪಾಲಾ ।
ಇಂಥ ಶರಸೂರಿ ಎಲ್ಲಿ ಆಗಿದ್ದಿಲ್ಲಾ ॥
ಉಳಿದ ಮಂದಿ ತೆಳಗ ಬಿದ್ದಾರ । ಕತ್ತಿ ಚಲ್ಯಾರ ।
ಕಚ್ಚಿದರು ಹಲ್ಲಾ ।
ಕಲ್ಲ ಹೊತ್ತರಣ್ಣ ತಲಿ ಮ್ಯಾಲಾ ॥

**||ಏರು||**

ಆದ ಕೈಲೆ ಸರಕ್ಕನ ಎದ್ದ ಕಿತ್ತೂರ ತಳದ ಮ್ಯಾಲ ಹೋದ್ರ ।
ಇತ್ತ ಅಲ್ಲಿ ಥೇಟ ಫಿರಂಗ್ಯಾರ ದಂಡಾ॥ ಈ ॥

ಚಕ್ಕರ ಟೊಪ್ಪಿಗಿ ಫಿರಂಗ್ಯಾರನ ಲೆಕ್ಕವಿಲ್ಲದ ಕಡದ ದಂಡಿನ ।
ದಿಕ್ಕ ತಪ್ಪಿಸಿ ಬಿಟ್ಟಾರ ಎಲ್ಲಾ ಹೋತಿ ।
ಪುಂಡರಾಗಿ ತರವೂನ ಹೊನ್ನ ಕಂಡ ಕಂಡ ಊರ ಬಡದು ।
ದಂಡಿಗೆಲ್ಲಾ ಪುರವಟ ಆಗತತಿ ॥
ಹಳ್ಯಾಳ ಹನಮಗಟ್ಟಿ ತಳ್ಳಿಮಾಡಿ ತಾಳವಾಡಿ ಹೋಗಿ ।
ಬಡದರಂಣ ಗಡಾದ ಪ್ಯಾಟಿ ।
ಅಗಸನ ಹಳ್ಳಿ ಅಂಬಡಗಟ್ಟಿ ಕಾದರೊಳ್ಳಿ ಹುನಸಿಕಟ್ಟಿ ।
ಬೆಳವಡಿ ಬಡದಾರ ಎಲ್ಲಾರು ಮುತ್ತಿ ॥
ಸೌದಳ್ಳಿ ಗುಡಗೇರಿ ಬಾಳಗುಂದ ಇಟಗಿ ।
ಬಡದ ಬಾಗೋಡಿ ಊರ ಮಂದಿ ಹೊಕ್ಕತಿ ।
ಚಮತದಿಂದ ರಾಯ ನಾಯಕ ಸಂಪಗಾಂವಿ ಕಚೇರಿ ಹೊಕ್ಕ ।
ಬೆಂಕಿ ಹಚ್ಚಿ ಹೋದ ಸುಟ್ಟ ಹೋತಿ ॥
ಹೊಂಗಲ ಊರಾಗ ಹಾಸಿಕೊಂಡ ಕಿತ್ತೂರ ಕಿಲ್ಲೇಕ ಹೋಗಿ ।
ಮತ್ತು ಅವರಿಗೆ ಹೇಳತಾನ ಯುಕ್ತಿ ।
ಅಂಜಬ್ಯಾಡ್ರಿ ಯಾವಕಿನ್ನ ಬರತಾಳ ನೋಡುನ ಇಲ್ಲಿ ।
ಕಾವಲ ಕುಂತೈತಿ ಮಂದಿ ಹಿರದ ಕತ್ತಿ ॥

**||ಚಾಲ|||**

ರಾಯನಾಯ್ಕ ಹುಟ್ಟಿದ ನಕ್ಷತ್ರ । ಬಹಳ ಪವಿತ್ರ ।
ಹಡದ ತಾಯಿ ಶ್ರೇಷ್ಟಾ ।
ಬಸ್‌ಧಾಳಿ ಮಡ ಬಹುದ ಬಂಟಾ ॥
ಸೂರಿ ಮಾಡಿ ಬಿಟ್ಟ ಬಹದ್ದೂರ । ಯಾರು ಇಲ್ಲ ಇದರ ।
ಆಗಲಿಲ್ಲ ನೇಟಾ ।
ಮೀರಿ ನಿಂತ ಸರ್ವರೊಳು ಧಿಟ್ಟಾ ॥
ಅವನ ಹಿಡಿದ ತಂದ ಕೊಟ್ಟರ । ಇನಾಮ ಭರಪೂರ ।
ಕೊಡತೇವ ಅಂತ ಸ್ಪಷ್ಟಾ ।
ಸಾಹೇಬ ಡಂಗುರ ಹೊಡಿಶಾನ ಹತ್ತಿ ಸಿಟ್ಟಾ ॥

**||ಏರು||**

ಹರುಷದಿಂದ ಮೂವರು ಜೋಡಿ ಕುಶಲದಿಂದ ಮಾತಾಡಿ ।
ಮಸಲತ್ ಮಾಡ್ಯಾರ ಕೂಡಿಕೊಂಡಾ॥ ೬ ॥

ಸರದಾರನ ಮುಂದ ಹೋಗಿ ವರದಿ ಕೊಟ್ಟ ಹೇಳತಾರ
ಕಾಯಮ ಮಾಡಿ ಮಾತಘಟ್ಟಿ ಮುಟ್ಟಾ
ರಾಯ ನಾಯ್ಕನ್ನ ಹಿಡದ ನಿಮಗೆ ತಂದ ಕೊಡತೀವಂತ ।

ಬಂದಾರ ಮೂವರು ಕಾಗದ ಬರಕೊಟ್ಟಾ ||
ರಾಯ ನಾಯ್ಕನಲ್ಹೋಗಿ ಭಾವ ಶುದ್ಧ ಮಾತಾಡ್ಯಾರ |
ಜೀವದ ವಳಗಿನ ಕಾಳಜಿ ಎಲ್ಲಾ ಬಿಟ್ಟಾ |
ನಿನ್ನ ಕಡೆ ಇರತೇವಣ್ಣ ನಮ್ಮನ್ನು ಮಾತ್ರ ಉಳವಿಕೊಳೊ |
ಆಣಿ ಮಾಡಿ ಬಂದಿದೆವೊ ಹೊಂಟಾ ||
ಉಪ್ಪು ಗೊಬ್ಬರ ಮುಟ್ಟಿ ಉರುವ ದೀವಿಗಿ ಮುಂದಕುಂತ |
ಹೇಳತಾರ ಕ್ರಿಯ ಕೊಟ್ಟ ಕೊಟ್ಟಾ |
ಸಾವಿರ ದೇವರ ಆಣಿ ಕೊಟ್ಟ ಸಕಾಟ ಆಗಿ ಇದ್ದರಂಣ |
ತಿಳಿಯಲಿಲ್ಲ ಮನಸಿನಾನ ಸಿಟ್ಟಾ ||
ನಡಿ ಹೋಗುನು ರಾಯನಾಯ್ಕ ನಾಡೆಲ್ಲಾ ಬಡದ ತರೂನ |
ಕೇಡಮಾಡಿ ಸುತ್ತಿನ ಹಳ್ಳಿ ಸಗಟಾ |
ಕೂಡಿ ಮಂದಿ ಹೊಂಟಿತಂಣ ದವಡ ಮಾಡಿ ಹುಬ್ಬಳ್ಳಿಗೆ |
ಬಂದು ಗಡಿಬಡಿಸಿ ಬಿಟ್ಟಾರ ಆತನಷ್ಟಾ ||

**||ಚಾಲ||**

ಮಂದಿನೆಲ್ಲಾ ಮುಂದ ಕಳಿವ್ಯಾರ |
ಹೊಂದಿಕಿಂದ ನಾಲ್ವರ | ಮಾತಾಡುತ ಸರಳಾ |
ಹಿಂದ ಹೋಗುನಂತಾರ ಆತ ನಿವಳಾ ||
ಮಾತಕೇಳಿ ರಾಯ ನಾಯಕ | ಮನಸೋತ ಆಕ್ಷಣಕ |
ಬೆನ್ನ ಹತ್ತಿದ ಸುಳ್ಳ |
ವಿಶ್ವಾಸಕ ಬಿದ್ದ ಆದ ಮರಳಾ ||
ಹಳ್ಳಕೆ ಹೋಗಿ ಮಾಡಿ ಜಳಕ | ಉಣ್ಣುವ ವ್ಯಾಳೇಕ |
ಬಿಡುವು ನಂದ ಸ್ಥಳಾ |
ಕೇಳಿದ ರಾಯಣ್ಣಾ ಮಾತುಗಳಾ ||

**||ಏರು||**

ಕತ್ತಿ ಇಟ್ಟ ಖಬರ ಬಿಟ್ಟ ತೊಟ್ಟ ಚೊಣ್ಣ ತಗಿಯಾಕ |
ಕುಂತ ವತ್ತಿ ಹಿಡಿದಾರ ಬಂದ ಮಾಡಿ ಗಡಾ
ಮಂದಿ ಕೂಡಿ ಹೊರಸಿನ ಮ್ಯಾಲ ತಂದ ಹಾಕಿ ಬಿಕ್ಕೊಂಡ ಹೋದ್ರ
ಅವಗ ಒದಗಿತ್ತಂಣ ಮಾಯ ಕಾಳಾ |
ಕಚೇರಿ ವಳಗ ಓದ ಇಳಿವ್ಯಾರ ಹೆಚ್ಚೆಚ್ಚಿನ ಬಂಟರಾಯ ನಾಯ್ಕನ
ಸರದಾರ ನೋಡಿದಾನ ಕಳಾ ||
ಧೀರ ಅಂಬುಕೂನ ಸರದಾರ ಪೂರ ತಿಳದ ಇವನ |
ಕೊಲಬಾರದಂತ ಮರಿಗ್ಯಾನ ಅವನ ಕರಳಾ |

ಇಷ್ಟ ಮಾತ ಕೇಳು ಮೂವರ್ ನಿಷ್ಠಾದಿಂದ ಸಾಹೇಬಗೆ ಹೇಳ್ಯಾರ
ಕಷ್ಟ ತಂದ ಇಟ್ಟರಿ ನಮಗೆ ಬಹಳಾ ||
ಸರದಾರನ ಮುಂದ ನಿಂತ ಕರವ ಮುಗಿದು ಹೇಳತಾರ ಇವರು |
ನೀವು ತಂದಿರಿ ನಮ್ಮ ಜೀವಕೆ ಗೋಳಾ |
ರಾಯನಾಯ್ಕನ್ನ ಬಿಟ್ಟರ ನಾವು ನೀವು ಉಳಿಯುದಿಲ್ಲ |
ನಮ್ಮನ್ನ ಕಡದ ಹಾಕತಾನ ಝಳ ಝಳಾ ||
ಸಾಹೇಬನ ಮುಂದ ನಿಂತ ಅಂತಾರ ಇವರು ನಮಗೆ |
ಮುಂಚೆ ಗಲ್ಲಿಗ್ಹಾಕಿ ಅವನ್ನ ಬಡಿರಿ ಪಳ್ಳಾ |
ಇದನ ಕೇಳಿ ಸಾಹೇಬ ಆಗ ಅದರಂತೆ ಮುಂಬೈಕ ಬರದ |
ಚಮತಮಾಡಿ ಹಾಕಿದ ರಿಪೋರ್ಟಗಳಾ ||

**||ಚಾಲ||**

ತಳದಾಗ ಹೋಗಿ ಆಗಿ ಚೌಕಸಿ | ತಿಳದ ವಿಚಾರಿಸಿ |
ಕಳವಿದಾರ ತುರತಾ |
ಬೆಳದ ಮನುಷ್ಯನನ್ನ ಕೊಲ ಬಾರದಂತಾ ||
ಉತ್ತರ ಬರುವದರೊಳಗೆ | ವತ್ತರ ಮಾಡ್ಯಾರಾಗ |
ರಾಯಣ್ಣನೊಯ್ದುತಾ |
ಗಲ್ಲಿಗ್ಹಾಕ್ಯಾರಣ್ಣ ಅವರು ನಿಂತಾ ||
ಧೀರ ರಾಯ ನಾಯ್ಕನ್ನ ಕೊರಳಿಗಿ | ಶವಕ ಹಾಕಿ ತೂಗ |
ಬಿಟ್ಟರ ಆತ ಘಾತಾ |
ನಿಂತಾರ ಜನರೆಲ್ಲಾ ಮರಗುತಾ ||

**||ಏರು||**

ಇಂಥಾ ಬಂಟ ರಾಯನಾಯ್ಕನ್ನ ಕೊಲಬಾರದಿತ್ತಂತ ಸುತ್ತಿಜನರು |
ದುಃಖ ಮಾಡತಾರ ಬಡ ಬಡಕೊಂಡಾ|| ಲ ||

ಫಾಸಿ ಕೊಟ್ಟ ಸರದಾರ ಆಗ ಧ್ಯಾಸ ಆಗಿ ಮರಗುತ ನಿಂತ |
ಇಂಥ ಬಂಟನ ಕೊಲಬಾರದಿತ್ತಂತಾ |
ಹತ್ತು ರೂಪಾಯಿ ಖರ್ಚು ಮಾಡಿ ಮತ್ತೆ ಮಂಣ ಕೊಡಿರೆಂತ |
ವತ್ತರ ಮಾಡಿ ಹೇಳಿದಾನ ಸಾಹೇಬ ನಿಂತಾ ||
ಚಂದದಿಂದ ರಾಯನಾಯ್ಕನ್ನ ಮಂದಿ ಕೂಡಿ ಮಣ್ಣ ಕೊಟ್ರ |
ಇಂದಿಗಿ ಮುಳಿಗಿದಂಗ ಆತ ಹೊತ್ತಾ |
ಅದ ಜಾಗಾದ ಮ್ಯಾಲ ಗಿಡ ಬೇಗ ತಂದ ಹಚ್ಯಾರ |
ತೂಗತಾವ ತೊಟ್ಟಿಲ ಸುತ್ತ ಮುತ್ತಾ ||
ಸತ್ಯವಂತ ರಾಯನಾಯ್ಕಗೆ ಮತ್ತೆ ಜನರು ನಡಕೊಂಡವರಿಗಿ |

ಪುತ್ರ ಸಂತಾನ ಕೊಟ್ಟಾನ ಮಸ್ತಾ ।
ವೆಂಕನಗೌಡ ನಿಂಗನಗೌಡ ಬಾಳ ನಾಯ್ಕ ಮೂವರು ।
ಹರುಷವಾಗಿ ಬಂದಾರ ನಕ್ಕೊಂತಾ ॥
ಬಿಚ್ಚಗತ್ತಿ ಚನಬಸಣ್ಣ ಹೆಚ್ಚೆಚ್ಚಿನ ಬಂಟ ಗಜವೀರ ।
ಇವರು ಕುಂತ ಹಾಕ್ಯಾರ ಮಸಲತ್ತಾ ।
ಕಡ್ಡಿಗುಡ್ಡ ಬಾಳಣ್ಣ ಕಿಲ್ಲೇದ ಭೀಮಣ್ಣ ಬೆಳವಡಿ ।
ವಡ್ಡರ ಎಲ್ಲಣ್ಣ ಆದ ಜತ್ತಾ ॥

**||ಚಾಲ||**

ರಾಯಣ್ಣನ ಸಂಗಡ ಇದ್ದವರ । ಅವನ ಮಿತ್ರರ ।
ದುಃಖ ಮಾಡುತಾ ।
ಕಚೇರಿಗಿ ಹೋದ್ರ ಎಲ್ಲಾ ಮಂದಿ ಸಹಿತಾ ॥
ಸುಬೇದಾರನ ಮುಂದ ನಿಂತಾರ । ಸಿಟ್ಟಲೆ ಅಂತಾರ ।
ಏನ ಮಾಡಿದಿ ಘಾತಾ ।
ಹೋತ ನಮ್ಮ ಜೀವದ ಕಡ್ಡಿ ಸತ್ತಾ ॥
ಹಿರದ ಕತ್ತಿಕೈಯಾಗ ಹಿಡದ । ತಿರಿಗಿ ಗುಡ್ಡ ಬಿದ್ದ ।
ಪರತ ಓಡುತ್ತಾ ।
ಮರತ ಹೋದಿತಣ್ಣಾ ಎಲ್ಲಾ ಮಾತಾ ॥

**||ಏರು||**

ಕ್ಷತಿ ಮೇಲೆ ಹುಲಕುಂದ ವಾಸ ಮತಿವಂತ ಬಲ ಭೀಮೇಶ ।
ಇತಿಹಾಸ ಪದ ಮಾಡಿದ ಕೂತಕೊಂಡಾ॥ ೬ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೧೯. ಸಂಗೊಳ್ಳಿ ರಾಯಣ್ಣನ ದಂಗೆ *

ಸಂಗೊಳ್ಳಿ ರಾಯನಾಯಕಾ ಸರ್ಜ್ಯಾ
ಸಂಪಗಾಂವಿ ಸುಭೆಯದಾರನ ಮ್ಯಾಗಾ
ತಳ್ಳಿ ಮಾಡತಾನೋ ಪುಂಡಾ
ಒತ್ತರದಿಂದ ಸುತ್ತಿನ ಹಳ್ಳಿ ಮುತ್ತಗಿ ಹಾಕಿ ಬಡದಾರಣ್ಣಾ
ಗೊತ್ತ ಇಲ್ಲದ ಹಾಂಗೆ ಹೋತ್ಯೊ ಬಂಡಾ॥ ಪಲ್ಲಾ ॥

**೧ನೆಯ ನುಡಿ**

ಪೂರ್ವದ ಮಾತ ಹೇಳತೆವ ನಿಮಗ
ಸರ್ವರು ಕುಂತ ಕೇಳರಿ ವಿಸ್ತಾರಾ
ಗರ್ವ ಬಂತ ಸಂಗೊಳ್ಳಿ ಕುಲಕಣ್ಣಿಗೆ
ಚಂದದಿಂದ ರಾಯನಾಯಕ ಹೊಂದಿಕೊಂಡ ಇದ್ದ
ಅವರ ಮುಂದ ಹುಟ್ಟಿತಲ್ಲೆ ಕದನ ಬ್ಯಾಗಿ
ಕುಲಕಣ್ಣಿ ಬಾಳಪ್ಪ ರಾಯಣ್ಣ ಜಳಕಾ ಮಾಡುಹೊತ್ನ್ಯಾಗ
ಧೋತರ ಸೆಳತಾ ಅಂತ ಕೊಟ್ಟನವನ ಕೈಗಿ
ಇಷ್ಟುಮಾತಿಗೆ ಸಿಟ್ಟಮಾಡಿ ಧಿಟ್ಟತಾನ ಹಿಡಿದು
ರಾಯಣ್ಣ ಮುಟ್ಟಾಕಿಲ್ಲದರವೀ ಯೆಂದಂದಿಗಿ
ಯಾಕಲೆ ಹಳಬಾ ಜೋಕ್ಯಾಗಿದ್ದಿ
ಸೊಕ್ಕ ಬಂತೀಗೇನೋ ನಿನಗ
ದಿಗರಾಡ್ತ ನಿಂತ ಇದರಿಗಿ
ಕೇಳಿ ರಾಯಣ್ಣ ತಾಳಿ ಸಿಟ್ಟು
ಹೋಳಿ ಆಡ್ನಿನ್ನ ಬಿಡುವೆನೆಂದು
ಹೇಳಿ ಹೊಂಟ ಹಿಂದಕ ತಿರುಗಿ
ಒಳ್ಳೇದೋ ಬಾಳಣ್ಣ ನನ್ನ ತಳ್ಳಿ ಮಾತರಹಿಡಿಯೊ
ಇನ್ನ ದಾಳಿ ಬಂತೋ ತಿಳಿಯೋ ಸುತ್ತಿನ್ಹಳ್ಳಿಗೆ

**೨ನೆಯ ನುಡಿ**

ಒತ್ತರ ಮಾಡಿ ರಾಯನಾಯಿಕಾ ಹೆತ್ತ ತಾಯಿ ಪಾದಕಬಿದ್ದು
ಮತ್ತೆ ಕತ್ತಿ ಹಿಡಿಕೊಂಡ್ಹೊಂಟ ಧೀರಾ
ಮಗಲಾಯರ ಸೀಮಗಿ ಹೋಗಿ
ಸುರಪೂರರಸರ ಯಿದಿರಿಗಿ ನಿಂತು
ಕರವ ಮುಗಿದು ಮಾಡಿದಾನ ನಮಸ್ಕಾರಾ
ಧೀರ ಹೌದೋ ರಾಯನಾಯಕಾ
ಹಾರಿ ಹನ್ನೆರಡಕ್ಕಡಿ ಜಿಗದಾ
ಅರಸ ನೋಡಿದಿವನ ಕಣ್ಣಾರಾ

ಅರಸ ಮೆಚ್ಚಿ ಹರುಷವಾಗಿ
ಸರ್ಜ್ಯಾ ನಿನಗೆ ಸರಿಯಿಲ್ಲೆಂದು
ಯೇನ ಬೇಡತಿ ಬೇಡಂದ ರಣಸೂರಾ

ಎನಗ ಒಲಿದಾರ ನೀನು
ಮುನ್ನುರು ಬ್ಯಾಡಕಿ ಕೊಡು
ಇನ್ನ ಆರಿಸಿ ಒಯ್ತೇನೋ ಪೂರಾ

ದಂಡನೆಲ್ಲಾ ತಕೊಂಡು ಬಂದು
ಭಂಡಾಯಿ ಮಾಡುನೆಂತೆಂದು
ಅವರಿಗ್ಹೇಳಿದಾನೋ ಚಾತುರಾ

ರವಡಮಾಡಿ ರಾಯನಾಯಕಾ
ದವಡಮಾಡಿ ತಂದ ದಂಡನ
ಗಿಡದಾಗವೋದಿಟ್ಟ ಎಲ್ಲಾ ಬಾರಾ

**೩ನೆಯ ನುಡಿ**

ತಂದ ದಂಡಿಗ್ಹೇಳತಾನೊ ಹೊಂದಿಕಿಂದ ಮಾತಗೊಳು
ಮುಂದ ನಿಂತ ಮಾಡಿ ಒಳೆ ಸಿಸ್ತಾ
ಎಚ್ಚರದಿಂದ ಇರರಿ ನೀಂವು
ಸುತ್ತುಕಡಿಸಿ ಹುಸಿಯರಾಗಿ ಯತ್ತರ ಹೋದಿರಿ, ನೀಂವು ಮತ್ತು
ಹಸ್ತರ ಮನುಷ್ಯರನ ತಿನ್ನುಹಂತಾ
ಹಬಶರನ್ನ ತಂದಿಟ್ಟಾನಲ್ಲೆ ಸುತ್ತುಕಡೆ
ಮಾಡಿ ಬಂದೋ ಬಸ್ತಾ ವಿಸ್ತಾರಾ ದಂಡಿಗೆಲ್ಲಾ
ಸಿಸ್ತ ಮಾಡಿ ತೈಯಾರಾಗಿ
ಒತ್ತರದಿಂದಾ ನಡಿರೆಂದಾಮತ್ತಾ

ಕಡವು ಕತ್ತಿ ಕೈಚೂರಿಗಳು
ಇರವು ಕಂಜಿರ ಚಾಕು ಪಿಸ್ತೂಲ
ಸಿಟ್ಟಿನ ಬಂಟರೋ ಸಮಸ್ತಾ
ಕಟಾರಿ ಬಿಲ್ಲು ಈಟಿ ಬಾಣ
ಧಿಟ್ಟ ತನದಲ್ಹಿಡವು ಥಾಲು ಮೈಗ ತೊಟ್ಟಿರೊ ಚಿಲ್ಕತ್ತಾ

ದುಂದಗ್ಯಾಂವಿ ಹೊಂದಿಕಿಂದ
ಗಂಧ ಕಸ್ತೂರಿಯ ಧರಿಸಿ
ಮುಂದ ಹೂಲಿಗಾಳಿ ಹಿಡಿಸುತಾ
ಅಬ್ಬರದಿಂದ ವೊಬ್ಬರ ಉಳಿಯದ
ಕಬರ ಇಲ್ಲದ ಬಂದರಣ್ಣಾ ರಣಸೂರಿ ಯಾವಾಗ ಮಾಡೆವಂತಾ

**೪ನೆಯ ನುಡಿ**

ಭೇರಿ ಕಾಳಿ ಕರ್ನಿ ಹಿಡಿಸಿ ಮೀರಿದ ಹಲಗಿ ಹೊಡಸಿ
ಕಾಲ್ ಮಂದಿ ಮುಂದಕ ಕಳವಿದಾ

ರಂಗವಾಗಿ ಇರುವುವ ಕರ್ನಿಗೆ ಚೆಂಗು ಜೆಲ್ಲಿ ಘಂಟೆಸರಪಳಿ
ಮುಂಗೈಯಾಗ ತೋಡೆವ ಹಾಕ್ಸಿದಾ

ಹಲ್ಲತಿಂತ ಹವಣಸ್ತ ಕಾಲಕೆದರಿ ಕತ್ತಿ ಹಿಡಿದು
ಜಿಗತಾ ಮಾಡತಾರ ಕುಸಿ ಬಂದು

ಬಿಚ್ಚಗತ್ತಿ ಚನಬಸಣ್ಣ ಮುಂಚೆ ಶಮಸರಗಡಕ ಹೋಗಿ
ವಿಚಿತ್ರ ಹೊಡವುನು ನಡಿಯರ್‌ಯೆಂದಾ
ಗಜವೀರ ಹೇಳತಾನು ಭಾಳ ಗದ್ದಲ ಮಾಡುನಯಿಂದಾ
ಏನ ಉಳಿಯದ ವಳಗಿಂದಾ

ಕಡ್ಡಿಗುಡ್ಡ ಬಾಳಣ್ಣಾ
ದೊಡ್ಡ ಕಿಲಿಯದ ಭೀಮಣ್ಣಾ
ಬೆಳ್ಳೋಡಿ ವಡ್ಡರ ಯಲ್ಲಣ್ಣಾ ಕತ್ತಿಹಿರದಾ
ಸುತ್ತ್ಯುಳ್ಳ ಶಿರಸಂಗಿ ಕಾಳವ್ವಾ
ಮತ್ತ ಕಕ್ಕೇರಿ ಕರಿಯವ್ವಾ
ನಮ್ಮ ಕತ್ತಿಗೆ ಬ್ಯಾಸನ ಕೊಡರೆಂದಾ
ಎಲ್ಲಾಮಂದಿ ಕೂಡಿಕೊಂಡು ನಿಲ್ಲದ್ಹೋಗಿ ಶಮಸರಗಡಾದ
ಹಲ್ಲಾಯೇರಿ ಮುತ್ತಗಿ ಹಾಕಿದಾ

**೫ನೆಯ ನುಡಿ**

ಗಡಾದವಳಗ ಹೋಗಿ ತಾಂವು ಬಾಳಗದ್ದಲ ಮಾಡ್ಯಾರಣ್ಣಾ
ಸಿಕ್ಕ ಮಂದಿ ಚಂಡ ಕೋದರಲ್ಲಾ

ಹಿಡಿದು ಹೊಡದು
ಕಡದು ಬಡದು
ದಂದಲ ಮಾಡ್ಯಾರ ಗಮಿಕಿಂದ
ಗಡಾದೊಳು ಮಂದ್ಯಾರು ಉಳಿಯಲಿಲ್ಲಾ

ಯಾತರದವಗ ಇಲ್ಲೋ ದರಕಾರಾ
ಕಾಲಿಲ್ಹಗರೊ ಕತ್ತಿಗಾರಾ
ಕಡದ ಹೋಗುತಾನು ಶಿಗುದಿಲ್ಲಾ

ಗಡಾದ ಒಳಗ ಗದ್ದಲ ಆದ
ಸುದ್ದಿಕೇಳಿ ಸುಭೆಯದಾರಾ ಗಾಬರಿಯಾಗಿ ಎದ್ದಬಂದಾನಲ್ಲಾ
ಹಿತ್ತಲ ಕಾಸಿ ಸುತ್ತ್ಯೇಳ ಸಮುದರ

ಮತ್ತ ನಮ್ಮ ನಾಡವಳಗ
ಹಿಂತಾವರು ಯಾರ್‍ಯಾರು ಬಂದಿದ್ದಿಲ್ಲ

ಲೂಟಿ ಮಾಡಿದ ಬದುಕು ಎಲ್ಲಾ
ರವಡ ಮಾಡಿ ಓದರಲ್ಲಾ
ಈಟ ಗಡಾದವಳಗ ಬಿಡಲಿಲ್ಲಾ

ಸುತ್ತು ಕಡಸೆ ನೋಡಿದರ
ಯಾತ್ತು ಯಾರ್‍ಯಾರಿಲ್ಲದಾಗಾಗಿ
ಕತ್ತಲ ಗಂವದ ಹಾಕಿತಣ್ಣಾ ಜಾಲಾ

ಆದ ರೀತಿ ಮಾತಗೋಳನು
ಸುಭೆಯದಾರ ಕುಂತುಕೊಂಡು ಧಾರವಾಡಕ ಬರದ ಹಾಕಿದಲ್ಲಾ

**೬ನೆಯ ನುಡಿ**

ಬರದ ಪತ್ತರ ವತ್ತರದಿಂದ
ವಾಲಿಕಾರರು ಓದರಣ್ಣಾ
ದಾರಿ ಕೂಡಿಕೊಂಡು ಧಾರವಾಡಕ

ಗಚ್ಚಿನ ಬಂಗಲೆದವೊಳಗ ಕಚೇರಿಯಾಗಿತ್ತು
ಕಾಗದಾ ಬಿಚ್ಚಿ ಒಯ್ದಾರ ಸಾಹೇಬನ ಹಂತೇಕ

ಓದಿಕೊಂಡ ಸಾಹೇಬ ನೋಡಿ
ಹೋದ ಮಾತಿಗೆ ಇನ್ನ್ಯಾಕೆಂದು
ಗಾದಿ ಬಿಟ್ಟ ಎದ್ದನಾಕ್ಷಣಕಾ

ಟೊಪ್ಪಗಿ ವೊಗಿದು
ಮುಂಗೈ ಕಡಿದು
ಶಿಟ್ಟಿಲಿಂದ ಹಲ್ಲ ತಿಂದು
ಕುಂತ ಪತ್ರ ಬರೆದ ಮುಂಬಾಯಕ

ವಿಕ್ಟೋರಿಯ ಯೆಂಬು ಹಂತಾ ಶಕ್ತಿಯುಳ್ಳ ರಾಣಿಯವರು
ಮೋಕ್ತಾ ನೋಡಿ ತಿಳಿದಾರ ತಮ್ಮ ಮನಕ

ಐದನೂರಾ ಸೋದರ ಮಂದಿ
ಎರಡನೂರ ಕರಿಯ ಮಂದಿ
ಕಳವಿ ಕೊಟ್ಟಾಳಾಗ ಟಾಕೊಟಾಕಾ

ಎಳೆದು ಅಷ್ಟು ದಂಡ ಬಂತು
ಕಾಳಗಕಸ್ತಾ ಮಾಡಲಿಕೆ
ಬೆಳಗಾಂವಿ ಧಾರವಾಡ ಜಿಲ್ಹೇಕಾ
ಸುಭೆಯದಾರ ತೊಗೊಂಡಯಿನ್ನ
ಸಬರ ಹಿಡಿಯದ ಹೋಗಬೇಕಂತಾನ
ಜಬರದಿಂದ ರಾಯನ ಕೊಲ್ಲುದಕ

೭ನೆಯ ನುಡಿ

ಸಿಟ್ಟಿನಿಂದ ಸುಭೆಯದಾರ
ಅಷ್ಟುಮಂದಿ ಹೊಂಡಿಸಿಕೊಂಡ್ಹೋಗಿ
ಹುಡುಕ್ಯಾನೋ ರಾಯನ ಮಂದೆಲ್ಲೈತೆಂತ
ಹಳ್ಳಾ ಕೊಳ್ಳಾ ಗುಡ್ಡ ಗಂವಿಯಾ
ಗಿಡ ಕಾಂತಾರಾ ಹುಡುಕುತ ಹೊಂಟಾರಾ
ಹಳ್ಯಾಳ ಗುಡ್ಡಕ ಹೋದರ ಮತ್ತಾ

ಇವರ ದಂಡಾ ಬಂತ ಅಂಬೊಸುಳವು ನೋಡ್ಯಾನು ರಾಯನಾಯಕಾ
ಫಳಾರ ಮಾಡುತವನ ಮಂದಿ ಕುಂತಾ

ತವಕದಿಂದ ತಯಾರಾಗಿ
ಗಿಡಕ ಜ್ಯಾಂವಿಗಿ ಕಟ್ಟಿ ದೂರ ಹೋಗಿ ನಿಂತಾರೋ
ಹೂಲಿಗಾಳಿ ಹಿಡಿಸೂತಾ

ಇಲ್ಲೆ ಅದಾನ ರಾಯನಾಯಕಾ
ಅಂದು ನೋಡೋ ಅವರು ಆಗ ಪೈರಗಟ್ಟಿ
ಹೊಡದಾರೋ ಸುತ್ತಾ

ಗುಂಡ ಮದ್ದು ಅವಟ ಗುಂಡು
ಗರನಾಲು ಟುಬಾಕಿ ಕರುಲಿ
ಹೊಡವುತಾರೊ ಇಲ್ಲ ಪುರಸೊತ್ತಾ

ಆವಾಜ ತಡಪಡ ಅಳ್ಳ ಹುರದಾಂಗ
ಕೊಳ್ಳದೊಳಗಿನ ಗಿಡಕ ಹೊಡದಾರ
ಗುಡ್ಡ ನಾದ್ದಿಡದಿತ ಗದಣಿಸುತಾ

ಮೂರ ತಾಸ ಹೊಡದಾರ್ರೈಲ್ಲಾ
ಮದ್ದು ಗುಂಡು ತೀರಿ ಹೋತಿ
ಮುನಿದಾನು ಅವರಿಗೆ ಭಗವಂತಾ

**ಲನೆಯ ನುಡಿ**

ಮದ್ದು ತೀರಿ ಬಂಡು ಆದಾರ
ಗುಂಡ ಹಾಕು ಸಪ್ಪಳ ನಿಂತದ್ದು
ಕಂಡ ರಾಯಣ್ಣ ಬಂದ ಬೆನ್ನ ಮ್ಯಾಲಿ

ಕುರಿಯೊಳಗ ತೋಳ ಹೊಕ್ಕ ಮುರಮುರದ
ಒಗೊಗದ ಹಿರಿಹಿರಿದು ಕಡದಾರ ಕತ್ತೀಲಿ
ಸುತ್ತಗಟ್ಟಿ ಕತ್ತಿಮಂದಿ ಎತ್ತೈತ್ಹೋಗಗೊಡದ ಕಡದಾರ
ಮುತ್ತಗಿ ಹಾಕ್ಯಾರೊ ದಂಡಿನ ಮ್ಯಾಲಿ
ಪಿಸ್ತೂಲ ಪಿರಂಗ ಹಿರದು
ಬಾಕ ಬಿಲ್ಲು ಬಾಲೆಲೊಗದು
ನಾಕನೂರಾಮಂದಿ ಕೊಂದರಲ್ಲಿ

ಕಂಡಮಂದಿ ಚಂಡಿ ಕೋದಾರ
ರುಂಡ ಬಿದ್ದವು ಗೊತ್ತ ಇಲ್ಲದ
ತುಂಡ ತುಂಡ ಮಾಡ್ಯಾರೊಂದೆ ಏಟು

ಕೊಳ್ಳದೊಳಗ ಕುತಂತ್ರ ಆಗಿ ನೆತ್ತರಕಾವಲಿ
ಹರದೀತಣ್ಣಾ ಹಿಂತಾ ಶರಿ ಸೂರಿ ಆಗಿದ್ದಿಲ್ಲೊಯಲ್ಲಿ

ಉಳದ ಮಂದಿ ತೆಳಗ ಬಿದ್ದು
ಕತ್ತಿಚೆಲ್ಲಿ ಹಲ್ಲ ಕಚ್ಚಿ
ಕಲ್ಲ ಹೊತ್ತಾರಣ್ಣಾ ತೆಲಿ ಮ್ಯಾಲಿ

ಆದಕೈಲೆ ಉದಯಕ ಯೆದ್ದು
ಹೋದ ಕಿತ್ತೂರ ತಳದಮ್ಯಾಲಿ
ತೇತಪಿರಂಗರ ದಂಡಿತ್ತಲ್ಲಿ

ಸೂರಿಮಾಡಿ ಬಿಡುವುನಂತಾರ
ಯಾರು ರಾಜ್ಯ ಆಳದಾಂಗ
ಮೀರಿ ಇರುವುನನಾವು ಲೋಕದಲ್ಲಿ

೯ನೆಯ ನುಡಿ

ಚಕ್ಕರ ಟೊಪ್ಪಿಗಿ ಪಿರಂಗೆರನಾ
ಲೆಕ್ಕವಿಲ್ಲದ ಕಡದ ದಂಡಿನ
ದಿಕ್ಕ ತಪ್ಪಿಸಿ ಬಿಟ್ವಾರೆಲ್ಲಾ ಹೋತಿ

ಪುಂಡರಾಗಿ ತರುವುನ ಹೊನ್ನ
ಕಂಡಕಂಡ ಊರ ಬಡಿದು
ದಂಡಿಗಿ ನಮಗೆಲ್ಲಾರಿಗಿ ಆಗತತಿ
ಹಳ್ಯಾಳ ಹನಮನಗಟ್ಟಿ
ತಳ್ಳಿಮಾಡಿ ತಾಳವಾಡಿ
ಹೋಗಿ ಬಡದಾರಣ್ಣಾ ಗಡಾದಪ್ಯಾಟಿ

ಆಗಸನ್ಹಳ್ಳಿ ಅಂಬಡಗಟ್ಟಿ
ಕಾದರೊಳ್ಳಿ ಹುಣಸಿಕಟ್ಟಿ ಬೆಳವಡಿ ಬಡದಾರ ಎಲ್ಲಾರುಮುತ್ತಿ |
ಸೋದಳ್ಳಿ ಗೋದಗೇರಿ ಬಾಳಗುಂಡ ಇಟ್ಟಗಿ
ಬಡದ ಬಾಗೊಡೂರು ಮಂದಿ ಹೊಕ್ಕತಿ
ಚಮತದಿಂದ ರಾಯನಾಯಕಾ ಸಂಪಗಾಂವಿ ಕಛೇರಿ ಹೊಕ್ಕು
ಬೆಂಕಿ ಹೋದ ಸುಟ್ಟ ಹೋತಿ

ಹೊಂಗಲದೂರಾಗ ಹಾಸಿಕೊಂಡ ಕಿತ್ತೂರ ಕಿಲೆಯಕಹೋಗಿ
ಮತ್ತ ಅವರಿಗೆ ಹೇಳತಾನೊ ಈಗತಿ
ಅಂಜಬ್ಯಾಡರಿ ಯಾವಳಿನ್ನ ಬರತಾಳ ನೋಡುನಿಲ್ಲೆ
ಕಾವಲ ಕುಂತತಿ ಮಂದು ಹಿರದಕತ್ತಿ

ಎಷ್ಟ ದಾಳಿ ಮಾಡಿದಾನೋ
ಬಂಟ ಹೌದೋ ರಾಯನಾಯಕ
ಹುಟ್ಟಿದ ನಕ್ಷತ್ರ ಸಾಮರ್ಥಿ

೧೦ನೆಯ ನುಡಿ

ಅವನ ಹಿಡಿದ ಕೊಟ್ಟರ
ನಿಮಗ ಇನಾಮು ಕೊಡತೇವಂತ
ಡಂಗುರ ಸಾಹೇಬ ಹೊಡಸಿದಾನ ಹತ್ತಿಸಿಟ್ವಾ

ಸೂರಿಮಾಡಿ ಬಿಟ್ವಾನಣ್ಣಾ ಯಾರು ಇದರ ಆಗಲಿಲ್ಲಾಂವಗ
ಮೀರಿ ಕುಂತ ಸರವರ ವಳಗ ಬಂಟಾ

ಹರುಷದಿಂದ ಮೂವರ ಕೂಡಿ
ಕುಶಾಲದಿಂದ ಮಾತಾಡಿ
ಮಸಲತ್ತ ಮಾಡ್ಯಾರೊ ಕುನಗುಂಟಾ

ಸರ್ದಾರನ ಮುಂದ ಹೋಗಿ ವರ್ದಿ ಕೊಟ್ಟ
ಹೇಳತಾರು ಕಾಯಿಮ ಮಾಡಿ ಮಾತ ಗಟ್ಟಿಮುಟ್ಟಾ
ರಾಯನಾಯಕನ ಹಿಡಿದ ನಿಮಗ
ತಂದ ಕೊಡತೇವಂತ ಬಂದರ
ಮೂವರು ಕೂಡಿ ಕಾಗದ ಬರಕೊಟ್ಟಾ

ರಾಯನಾಯಕನಲ್ಹೋಗಿ
ಭಾಂವ ಸುದ್ದ ಮಾತನಾಡ್ಯಾರ
ಜೀಂವದೊಳಗಿನ ಕಾಳಜಿ ಎಲ್ಲಾ ಬಿಟ್ಟಾ

ನಿನ್ನ ಕಡಶಿ ಇರತೆವಣ್ಣಾ
ನಮ್ಮನ ಮಾತ್ರ ಉಳವಿಕೊಳ್ಳೊ
ಆಣೆ ಮಾಡಿ ಬಂದಿದೇವೋ ಹೊಂಟಾ

ಉಪ್ಪು ಗೊಬ್ಬರ ಮುಟ್ಟಿ
ಉರವು ದೀವಿಗೆ ಮುಂದಕುಂತು
ಹೇಳತಾರೋ ಕ್ರಿಯಾ ಕೊಟ್ಟಕೊಟ್ಟಾ

ಸಾವಿರ ದೇವರ ಆಣೆಕೊಟ್ಟು
ಸಕಾಟವಾಗಿ ಇದ್ದರಣ್ಣಾ
ತಿಳಿಯಲ್ಲಿಲ್ಲೊ ಮನಸ್ಸಿನ್ಯಾನ ಸಿಟ್ಟಾ

**೧೧ನೆಯ ನುಡಿ**

ನಡಿ ಹೊಗುವ ರಾಯನಾಯಕಾ
ನಾಡನೆಲ್ಲಾ ಬಡದ ತರವುನ
ಕೇಡಮಾಡಿ ಸುತ್ತಿನ ಹಳ್ಳಿಗೋಳಾ

ಕೂಡಿ ಮಂದಿ ಹೊಂಟಿತಣ್ಣಾ
ದವಡ ಮಾಡ ಹುಬ್ಬಳ್ಳಿಗೆ ಬಂದು
ಕೇಡಿ ಮಾಡಿ ಹೋದರ ಬಾಳಗೋಳಾ

ಮಂದಿನೆಲ್ಲಾ ಮುಂದ ಕಳವಿ
ಹೊಂದಕ್ಕಿಂದ ನಾಲ್ವರ ನಾವು
ಹಿಂದ ಹೋಗುನಂತರ ಅತಿ ನಿವಳಾ

ಮಾತಕೇಳಿ ರಾಯಣ್ಣ ಮನಸೋತ
ಅವರ ಬೆನ್ನ ಹತ್ತಿದ
ಇಸವಾಸಕ ಬಿದ್ದ ಆದಮಳ್ಳಾ

ಹಳ್ಳಕ ಹೋಗಿ ಜಳಕಾಮಾಡಿ
ಉಣ್ಣು ಯಾಳೇಕ ಹೋಗುನಂದರ
ಕೇಳಿದ ರಾಯಣ್ಣ ಮಾತಗೋಳಾ

ಕತ್ತಿ ಇಟ್ಟ ಕಬರ ಬಿಟ್ಟ
ತೊಟ್ಟ ಚಣ್ಣ ತಗಿಯಾಕ ಕುಂತನ
ಒತ್ತಿ ಹಿಡಿದಾರ ಬಂದ ಮಾಡಿ ಬಾಳ

ಮಂದಿಕೂಡಿ ಹೊರಸಿನ ಮೇಲೆ
ತಂದಹಾಕಿ ಬಿಕ್ಕೊಂಡ ಹೋದಾರ
ಅವರಿಗೆ ವೊದಗಿತಣ್ಣಾ ಮಾಯಾ ಕಳಾ

ಕಚೇರಿವಳಗ ಒಯ್ದು ಇಳವ್ಯಾರ
ಹೆಚ್ಚಿನ ಭಂಟ ರಾಯನಾಕನ್ನಾ
ಸರದಾರ ನೋಡಿದನ ಕಳಾ

ಧೀರ ಅಂಬು ಕೂನಾ ಸರದಾರ
ಪೂರಾ ತಿಳಿದು ಇವನ ಕೊಲಬಾರದಂದ
ಮರುಗ್ಯಾವ ಇವನ ಕರುಳಾ

ಇಷ್ಟು ಮತು ಕೇಳಿ ಮೂರು ಮಂದಿ
ನಿಷ್ಟಾದಿಂದ ಸಾಹೇಬಗ ಹೇಳ್ಯಾರ
ಕಷ್ಟತಂದ ಇಟ್ಟೆರಿ ನಮಗ ಬಾಳಾ

**೧೨ನೆಯ ನುಡಿ**

ಸರದಾರನ ಮುಂದ ನಿಂತು
ಕರವ ಮುಗಿದು ಹೇಳತಾರಯಿವರು
ನೀವು ತಂದಿರಿ ನಮ್ಮ ಜೀಂವದಸುತ್ತಾ

ರಾಯನಾಯಕನ ಬಿಟ್ಟರ ನೀಂವು
ನಾಂವು ಮಾತರ ನಾಡಾಗಿರುದಿಲ್ಲ
ನಮ್ಮನ್ನ ಕಡದ ಹಾಕತಾನ ಪೂರ್ತಾ

ನಮಗ ಮುಂಚೆ ಗಲ್ಲಿಗೆ ಹಾಕಿ
ಸುಮ್ಮನ ಬಿಡರಿ ನೀಂವು ಇವನ
ಅಂತಾರಿವರು ಸಾಹೇಬನ ಮುಂದ ನಿಂತಾ

ಇದನ್ನು ಕೇಳಿ ಸಾಹೇಬ ಆಗ
ಅದರಂತೆ ಮುಂಬಾಯಿಕ ಬರದಾ
ಹಾಕಿದಾನೊ ಮಾಡಿ ವಳೆ ಚಮತಾ

ತಳದಾಗ್ಹೋಗಿ ಚವಕಸಿ ಆಗಕ
ತಿಳದ ವಿಚಾರ ಮಾಡಿ ಕಳವ್ಯಾರ
ಬೆಳೆದ ಮನುಷ್ಯನ ಕೊಲ್ಲಬಾರ್ದಂತಾ

ಉತ್ತರ ಬರದ ಬರವುದರೊಳಗ
ಒತ್ತರ ಮಾಡಿ ರಾಯನಾಯಕನ್ನ
ಗಲ್ಲಿಗಿ ಹಾಕ್ಯಾರಣ್ಣಾ ಅವರು ನಿಂತಾ

ಧೀರ ರಾಯನಾಯಕಾನ ಕೊರಳಿಗಿ
ಸವಕ ಹಾಕಿ ತೂಗ ಬಿಟ್ಟಾರ
ನಿಂತರೊ ಜನರೆಲ್ಲಾ ಮರಗೂತಾ

ಹಿಂತಾಬಂಟ ರಾಯನಾಯಕನ
ಮತ್ತ ಕೊಲ್ಲಬಾರ್ದಿಂತಂತ
ಸುತ್ತಿನ ಜನರು ದುಃಖಾ ಮಾಡುತಾ

**೧೩ನೆಯ ನುಡಿ**

ಪಾಶ ಕೊಟ್ಟ ಸರದಾರ ಆಗ
ದ್ಯಾಸಾ ಆಗಿ ಮರಗುತ ನಿಂತಾನ
ಇಂತಾ ಬಂಟನ ಕೊಲ್ಲಬಾರ್ದಿತ್ತಂತಾ

ಹತ್ತ ರೂಪಾಯಿ ಖರ್ಚು ಮಾಡಿ
ಮತ್ತ ಇವರ ಮಣ್ಣ ಕೊಡರೆಂತ
ಒತ್ತರ ಮಾಡಿ ಹೇಳಿದ ಸಾಹೇಬ ನಿಂತಾ

ಚಂದದಿಂದ ರಾಯನಾಯಿಕನ
ಮಂದಿ ಕೂಡಿ ಮಣ್ಣ ಕೊಟ್ಟಾರ
ಇಂದಿಗಿ ಮುಳಗಿದಾಂಗ ಅತಿ ಹೊತ್ತಾ

ಆದ ಜಾಗದ ಮೇಲಿ ಗಿಡಾ
ಬ್ಯಾಗದಿಂದ ತಂದ ಹಚ್ಯಾರ
ತೂಗತಾವ ತೊಟ್ಟಿಲ ಸುತ್ತಮುತ್ತಾ

ಸತ್ಯಮಂತ ರಾಯನಾಯಕಗ
ಮತ್ತು ಜನರಿಗೆ ನಡಕೊಂಡವರಿಗೆ
ಪುತ್ರ ಸಂತಾನ ಕೊಟ್ಟುದಾನ ಮಸ್ತಾ

ವೆಂಕನಗೌಡಾ ನಿಂಗನಗೌಡಾ
ಬಾಳನಾಯಕಾ ಮೂವರಕೂಡಿ
ಹರುಷವಾಗಿ ಬಂದಾರ ನಕ್ಕೊಂತಾ

ಬಿಚ್ಚಗತ್ತಿ ಚನಬಸವಣ್ಣಾ
ಹೆಚ್ಚಿನ ಭಂಟಾ ಗಜವೀರಾ
ಇವರು ಕುಂತ ಹಾಕತಾರೋ ಮಸಲತ್ತಾ

ಕಡ್ಡಿಗುಡ್ಡ ಬಾಲಣ್ಣಾ ಕಿಲ್ಲೇದ ಭೀಮಣ್ಣಾ
ಬೆಳವಡಿ ಒಡ್ಡರ ಯಲ್ಲಣ್ಣಾ
ಕಚೇರಿಗೆ ಹೋದರೆಲ್ಲಾ ಮಂದಿ ಸಹಿತಾ

ಸರದಾರಗ ಹೋಗಿ ಅಂತರಯೇನ
ಬಿರದಾ ಕಳದೆ ನಮದು
ಹೋತೆ ನಮ್ಮ ಜೀವದ ಕಡ್ಡಿಸತ್ತಾ

ಹಿರದ ಕತ್ತಿ ಕೈಗೆ ಹಿಡಕೊಂದು
ತಿರುಗಿ ಗುಡ್ಡ ಬಿದ್ದ ಓಡ್ಯಾರ
ಮರತ ಹೋದಿತಣ್ಣಾ ಯಲ್ಲಮಾತಾ

ಮಂಡಲ ಹೆಬ್ಬಳ್ಳಿ ಪುಂಡರು
ಬಸುವರು ಮಾಡಿದ ಲಾವಣಿ
ಕಂಡು ಹೇಳಿದ ಕವಿಮಾಡಿ ಸ್ವಥಾ

**ರಚನೆ :** ಹೆಬ್ಬಳ್ಳಿ ಬಸವ

**ಕೃತಿ :** ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ

## ೧೭. ಕಲಿದೀಪ ಸಂಗೊಳ್ಳಿ ರಾಯಣ್ಣ

ಬೆಳಗಾಂವಿ ಜಿಲ್ಲಾ ಪೈಕಿ ಸಂಪಗಾಂವಿ ತಾಲೂಕಿನೊಳಗೆ
ಸಂಗವಳ್ಳಿ ಎಂಬ ಸಣ್ಣ ಹಳ್ಳಿ ಇತ್ತೊ ಹದ್ದಿನೊಳಗ
ತಾಯಿ ಕೆಂಚವ್ವನ ಹೊಟ್ಯಾಗ ಬೆಳೆದಾನು ರಾಯಣ್ಣಾಗ
ರೋಗವಣ್ಣವರ ರಾಯಾನೆಂದು ಹೆಸರು ಆದಾನು ದೇಶದ ಮ್ಯಾಗ
ಜಾತಿಯಿಂದ ರಾಯಣ್ಣ ತಾನು ಕುರುಬ ಆಗಿದ್ದನಾಗ
ಸಂಗವಳ್ಳಿ ವಾಲಿಕಾರಕಿ ಇತ್ತ ಅವರ ವಂಶಕ್ಕಾಗ
ಸಂಗವಳ್ಳಿ ಕುಲಕರ್ಣಿಕಿ ಮಾಡುತ್ತಿದ್ದನು ಬಾಳಣ್ಣಾಗ
ಅಷ್ಟಹೊತ್ತಿಗೆ ಇಂಗ್ರೇಜಿ ದರಬಾರ ಬಂದಿತು ದೇಶದಮ್ಯಾಗ
ಇಂಗ್ರೇಜಿ ಕಾಯದ ಪ್ರಕಾರ ಹುಕುಮು ಕಳಿಸ್ಯಾರು ಬಾಳಣ್ಣಗಾಗ
ಇನಾಮತಿ ಜಮೀನ ಎಲ್ಲಾ ಅಳತಿಮಾಡಿ ಕೊಡೋನಮಗ
ಹುಕುಮು ನೋಡಿ ಕುಲಕರ್ಣಿ ಹೇಳುತ್ತಿದ್ದಾನು ಫಕ್ಕೀರನಾಗ
ತಳವಾರ ಫಕೀರ ಲಗುಮಾಡಿ ಬಾರೋ ತಮ್ಮಾ ಈಗ
ಈಗ ಎಂಥಾ ಇಂಗ್ಲೀಷ ದರಬಾರ ಬಂತೋ ರಾಜ್ಯದಮ್ಯಾಗ
ಸಂಪಗಾಂವಿಗೆ ಲಗುಮಾಡಿ ಹೋಗಿ ಬರಬೇಕೋ ನೀನೀಗ
ಇಷ್ಟೆ ಹೇಳಿ ಬಾಳಣ್ಣ ತಾನು ಲಕೋಟಿ ಕೊಟ್ಟಾನೋ ಕೈಒಳಗ
ಮಧ್ಯಾಹ್ನ ಹೊತ್ತಿಗೆ ಕಛೇರಿ ನಡದಿತ್ತೊ ಭರಪೂರ ಸಂಪಗಾಂವ್ಯಾಗ
ಟೊಣ್ಯಾ ಸುಭೇದಾರನ ಕೈಯಾಗ ಲಕೋಟಿ ಕೊಟ್ಟಾನ್ರಿ ಆಗ
ಲಕೋಟೆ ಒಡೆದು ಸುಭೇದಾರ ಕಾಗದ ಓದಿಕೊಂಡಾನಾಗ
ಜೋಡ ಜೋಡ ಸರಪಳಿ ತಂದು ಚಲ್ಯಾನೋ ಸಂಗೊಳ್ಯಾಗ
ಇಷ್ಟೆ ನೋಡಿ ಬಾಳಪ್ಪ ತಾನು ಹೇಳತಿದ್ದಾನೋ ಫಕೀರಗಾಗ
ತಳವಾರ ಫಕೀರ ತಮ್ಮಾ ಲಗುಮಾಡಿ ಹೋಗೊ ನೀನೀಗ
ಪಂಚರಾದ ರೈತರನ್ನೆಲ್ಲಾ ಕರೆದುಕೊಂಡ ಬಾರೋ ಚಾವಡಿ ಒಳಗ
ಪಂಚರಾದ ರೈತರನ್ನೆಲ್ಲಾ ಕರೆದುಕೊಂಡು ಬಂದಾನ ಆಗ
ಯಾಕೋಯಾಕೋ ಬಾಳಪ್ಪಣ್ಣಾ ಕರಸಿದಿ ಹೇಳೋ ನಮಗ
ಇಷ್ಟೆ ಕೇಳಿ ಬಾಳಪ್ಪ ತಾನು ಹೇಳತಿದ್ದಾನೋ ಪಂಚರಿಗಾಗ
ಎಂಥಾ ಇಂಗ್ಲೀಷ ದರಬಾರ ಬಂತು ರಾಜ್ಯದಮ್ಯಾಗ
ಎರಡೂ ರಕ್ತ ಮಾನ್ಯದ ಹೊಲಾ ಅಳತಿ ಮಾಡಬೇಕ್ರೆಪ್ಪಾ ಈಗ
ಇಷ್ಟೆ ಕೇಳಿ ಪಂಚರಮಾತು ಮುಗಿಸಿ ಎದ್ದಾನು ಮುನಿಗಾಗ
ಮರುದಿವಸ ಮುಂಜಾನೆ ಎದ್ದ ಅಳತಿಮಾಡಾಕ ಬಂದಾರಾಗ
ಜೋಡ ಜೋಡ ಸರಪಳಿಲಿಂದ ಅಳತಿ ಮಾಡತಾರ ಹೊಲದಾಗ
ರಾಯಪ್ಪಣ್ಣನ ಹೊಲಾ ಅಳತಿ ಮಾಡಾಕ ಹತ್ತಾರಾಗ

ಅಳತಿ ಮಾಡಿ ಬಾಳಪ್ಪ ತಾನು ಹೇಳುತ್ತಿದ್ದಾನೋ ರಾಯಣ್ಣಗ
ಎರಡು ರಕ್ತ ಮಾನ್ಯದ ಹೊಲಾ ಯಾಕ ಬೇಕಪ್ಪ ರಾಯಾ ನಿನಗ
ಮೂವತ್ತೈದು ರೂಪಾಯಿ ಕೊಡಬೇಕು ನೀನು ಚಾವಡಿಯೊಳಗ
ಇಷ್ಟು ಕೇಳಿ ರಾಯಣ್ಣ ನಗುತ ಹೇಳುತಾನ ಬಾಳಣ್ಣಗ
ನಮ್ಮ ಅಜ್ಜ ರೋಗಣ್ಣನವರು ಯಾರು ಕೊಟ್ಟಿಲ್ಲ ಬಾಳಣ್ಣ ನಿನಗ
ಅವರಿಬ್ಬರು ಹಾಕ್ಯಾಡಿಕೊಂಡ ಬಂದಾರು ಮಲಪ್ರಭಾ ಹೊಳಿಗೆ
ಕುದರಿ ಹಿಡಿಯಲೇ ರಾಯಾ ಜಳಕಾಮಾಡತೇನಂತಾ ನಾಗ
ಇಷ್ಟೆ ಕೇಳಿ ರಾಯಣ್ಣ ತಾನು ಕುದರಿ ಹಿಡಕೊಂಡ ನಿಂತಾನಾಗ
ಜಳಕಾಮಾಡಿ ಕಲ್ಲಮ್ಯಾಗ ಪಂಜಿ ಬಿಟ್ಟ ಬಂದಾನಾಗ
ಕಲ್ಲಮ್ಯಾಗಿನ ಪಂಜಿ ಸೆಳೆದ ಕೊಡಲೆ ರಾಯಾ ನನಗ
ಇಷ್ಟೆ ಕೇಳಿ ರಾಯಪ್ಪ ತಾನು ಸಿಟ್ಟಿಬಾಳಾದಾನೋ ಅವನಮ್ಯಾಗ
ನಿನ್ನ ಪಂಜಿ ಸೆಳೆಯಾಕ ನಾನು ಸಿಟ್ಟಬಾಳಾದಾನೋ ಅವನಮ್ಯಾಗ
ನಿನ್ನ ಪಂಜಿ ಸೆಳೆಯಾಕ ನಾನು ಮಡಿವಾಳಲ್ಲೋ ಬಾಳ್ಯಾ ಈಗ
ಕಡಿ ಅಂದರ ನೂರಾಳು ಕಡಿಯಾಂವ ನೋಡೋ ಇನ್ನಮ್ಯಾಗ
ಇಂಥಾ ದೋಮ್ಯಾ ಕೆಲಸಾ ಹೇಳಾಕಾ ನಾಚಿಕೆ ಬರಲಿಲ್ಲೇನೋ ನಿನಗ
ಇಷ್ಟ ಕೇಳಿ ಬಾಳಪ್ಪ ತಾನು ಮತ್ತ ಹೇಳತಾನ ರಾಯಾಗಾಗ
ಎಂಥಾ ಹೆಣ್ಣ ದರಬಾರ ಬಂತೋ ರಾಜ್ಯದ ಮ್ಯಾಗ
ಇದನ್ನ ಕೇಳಿ ರಾಯಪ್ಪ ತಾನು ಸಿಟ್ಟುಬಾಳದಾನಾಗ
ಪಂಜಿ ಎಳತಂದು ಒಗೆದು ಬಿಟ್ಟಾನು ಬಾಳ್ಯಾನ ಮಾರಿಮ್ಯಾಗ
ಇಷ್ಟೆ ನೋಡಿ ಬಾಳಣ್ಣ ತಾನು ಸಿಟ್ಟ ಬಾಳ ಆದನೋ ಆಗ

**||ಇಳುವು||**
ಎಂಥಾ ಸೊಕ್ಕಿನ ಕುರುಬ ಹುಟ್ಟಿದಲ್ಲೇ ಸಂಗೊಳ್ಯಾಗ
ಏನು ಅಂದ್ಯೋ ಲಂಡ ಹಾರುವ ಜಿಗದ ಕಡದೇನೋ ರುಂಡವನೀಗ
ಕಣ್ಣು ಕಿಸ್ತ ರಾಯಪ್ಪ ತಾನು ಕತ್ತಿ ಹಿರದಾನು ಮಳಲಿನೊಳಗ
ಬಕ್ಕನೆತ್ತಿ ಬರೆ ಮೈಲೆ ಓಡುತ್ತಿದ್ದನು ಬಾಳ್ಯಾನಾಗ
ಅವರ ಸಂದು ಉಳದೀತ್ರಪಾ ಮಲಪ್ರಭಾ ಹೊಳಿಯಾಗ
ದಾತರಿದಂತಹ ಜಗಳ ಯಾತಕಪ್ಪ ರಾಯಾ ನಿನಗ
|| ಬೆಳಗಾಂವ ಜಿಲ್ಲಾಪೈಕಿ ……. ೧ನೆಯ ಚೌಕ ||

ನಡಿ ತಳವಾರ ಫಕೀರ ತಮ್ಮಾ ಲಗುಮಾಡೀಗ
ಆ ತುಡಗ ರಾಯಾನ ಹೋಗಿ ಕರಕೊಂಡ ಬಾರೀಗ
ಅಪ್ಪಪ್ಪ ರಾಯಪ್ಪಣ್ಣ ಅದಿಯೇನಪ್ಪ ಮುನಿಯಾಗ
ಬಾರೋ ಬಾರೋ ಫಕೀರ ತಮ್ಮಾ ಯಾಕ ಬಂದೀಗ
ಕುಲಕರ್ಣಿ ಬಾಳಪ್ಪನವರು ಕರಕೊಂಡ ಬಾ ಅಂದಾರ ನಿನಗ
ಮುಂದ ಆಗುವಂಥ ವಿಚಿಯಾರ ತಿಳಿಯಲಿಲ್ಲ ರಾಯಣ್ಣಗ

ಮಳ್ಳತನಕ ಬಿದ್ದು ರಾಯಾ ಚಕ್ಕನೆ ಮೇಲಕ್ಕೆದ್ದಾನಾಗ
ಬಿರಿ ಬಿರಿ ಬಂದಾನ ಬಂಟಾ ಸಂಗವಳ್ಳಿ ಚಾವಡ್ಯಾಗ
ಯಾಕೋ ಬಾಳಪ್ಪಣ್ಣಾ ಯಾಕ ಕರಿಸಿದಿ ಹೇಳೋ ನನಗ
ಇಷ್ಟೆ ಕೇಳಿ ಬಾಳಪ್ಪ ತಾನು ಹೇಳತಿದ್ದಾ ರಾಯಣ್ಣಗಾಗ
ಸಂಪಗಾಂವಿಗೆ ಚಾಕರಿ ಬಂದೈತಲೆ ತಮ್ಮಾ ನಿನಗ
ಇಷ್ಟೆ ಕೇಳಿ ಬಾಳಪ್ಪ ಲಕೋಟಿ ಕೊಟ್ಟಾನ ರಾಯಣ್ಣಗಾಗ
ಮಳ್ಳತನಕ ಬಿದ್ದು ರಾಯಾ ಲಕೋಟಿ ತೆಗೆದುಕೊಂಡಾಗ
ಬಿರಿ ಬಿರಿ ಬಂದಾನ ಬಂಟಾ ತನ್ನ ಅರಮನಿಯೊಳಗ
ಬಿಚ್ಚಗತ್ತಿ ಚನಬಸ್ಯಾ ತಮ್ಮಾ ಜೋಕೆಪ್ಪ ಮನೀಕಡಿಗೀಗ
ಸಂಪಗಾಂವಿಗೆ ಚಾಕರಿ ಬಂದೈತಿ ತಮ್ಮಾ ನನಗ
ಡಗಲಿ ಚಣ್ಣಾ ತೊಟ್ಟು ಮ್ಯಾಲೆ ಹಿಡಿಗ್ಯಾವಿ ಧರಿಸಿದನಾಗ
ಹಿಂಬಡಮಟಾ ಶಮನಾ ಬಿಟ್ಟು ಒತ್ತಿಸುತ್ಯಾನ ಮುಂಡಾಸಾಗ
ಕತ್ತಿ ಡಾಲು ಡುಬ್ಬಕ ಹಾಕಿ ಶ್ರೀಂಗಾರಾಗತಾನು ಮನಿ ಒಳಗ
ಸಂಜಿ ಮೂರತಾಸ ಹೊತ್ತಿಂತ ಕಚೇರಿತ್ತೊ ಭರಪೂರಾಗ
ದವಡಿಸಿ ಹೋದಾನು ಬಂಟರ ಸಂಪಗಾವಿ ಕಚೇರ್ಯಾಗ
ಟೋಣ್ಯಾ ಸುಭೇದಾರ ಕೈಯಾಗ ಲಕೋಟಿ ಕೊಟ್ಟ ನಿಂತಾನಾಗ
ಲಕೋಟಿ ಒಡೆದು ಸುಭೇದಾರ ಕಾಗದಾ ಓದಿ ಕೊಂತಾನಾಗ
ಕಾಗದ ಓದಿ ಸುಭೆದಾರ ಕರಕರ ಹಲ್ಲತಿಂದಾನಾಗ
ಅವನ ವಿಚಾರ ಮಾಡಲಿಲ್ಲ ದೂಡಿಬಿಟ್ಟಾರೋ ತುರಂಗದಾಗ
ಅವನ ದೂಡಿದ ಸುದ್ದಿ ಮುಟ್ಟಿತೋ ಸಂಗೊಳ್ಳಿಗಾಗ
ಅಷ್ಟ ಹೊತ್ತಿಗೆ ವೈರಿ ಬಾಳ್ಯಾ ಫಿತೂರಿ ನಡಸ್ಯಾನೋ ಸಂಗೊಳ್ಯಾಗ
ತಳವಾರ ಫಕೀರ ತಮ್ಮಾ ಲಗುಮಾಡಿ ಬಾ ಅಂತಾನಾಗ
ಆ ತುಡುಗ ರಾಯಾನ ತಾಯಿ ಕರಕೊಂಡ ಬಾ ಚಾವಡಿ ಒಳಗ
ಇಷ್ಟ ಕೇಳಿ ಫಕೀರ ತಾನು ದವಡಿಸಿ ಬಂದಾನಾಗ
ಅವ್ವವ್ವ ಕೆಂಚವ್ವ ಅದಿಯೇನವ್ವಾ ಮನಿಯಾಗ
ಬಾರೋ ಬಾರೋ ಫಕೀರ ತಮ್ಮಾ ಯಾಕ ಬಂದೀಗ
ಕುಲಕರ್ಣಿ ಬಾಳಪ್ಪನವರು ಕರಕೊಂಡ ಬಾ ಅಂದಾರು ನಿನಗ
ಮುಂದ ಆಗುವಂಥಹ ವಿಚಾರ ತಿಳಿಯಲಿಲ್ಲರಿ ಕೆಂಚವ್ವಗ
ಬಿರಿಬಿರಿ ಬಂದಾಳ ಕೆಂಚವ್ವ ಸಂಗೊಳ್ಳಿ ಚಾವಡೀಗಾಗ
ಯಾಕೋ ಬಾಳಪ್ಪಣ್ಣಾ ಯಾಕೆ ಕರಸೀದಿ ಹೇಳೋ ನನಗ
ಸಿಟ್ಟಿಲಿಂದ ಬಾಳಪ್ಪ ಹೇಳತಾನ ಕೆಂಚವ್ವಗಾಗ
ನಮ್ಮ ಮೂವತ್ತೈದು ರೂಪಾಯಿ ಕೊಡಬೇಕೀಗ
ಅಷ್ಟಕೇಳಿ ಕೆಂಚವ್ವ ಹೇಳತಾಳ ಬಾಳಣ್ಣಗೀಗ
ನನ್ನ ಮಗಾ ರಾಯಾ ಬಂದನಂತರ ರೂಪಾಯಿ ನಿನಗ
ಅಷ್ಟ ಕೇಳಿ ಬಾಳಪ್ಪ ತಾನು ಸಿಟ್ಟ ಆದಾನೊ ಆಗ
ಡೊಗ್ಗಿಸಿ ಡುಬ್ಬದಮ್ಯಾಗ ಕಲ್ಲ ಹೇರಿಸ್ಯಾನೋ ಕೆಂಚವ್ವಗ

ಬೆಳ್ಳವಡಿಯ ಯಂಕನಗೌಡಾ ಸೆರಿಯ ಬಿಡಿಸ್ಯಾನ ಕೆಂಚವ್ವಗ
ಕೆಂಚವ್ವ ಮೆಲ್ಲಕ ಚಾವಡಿ ಇಳಿದು ಹೇಳಿತಿದ್ದಳೋ ಬಾಳ್ಯಾಗ
ನನ್ನ ಮಗಾ ರಾಯ ಬರಲಿ ಚಂಡಕೋಸತೀನಿ ನಿಂದು ಈಗ
ಅಷ್ಟ ಹೊತ್ತಿಗೆ ಸುಭೇದಾರ ಕೇಳಿದಾನು ರಾಯಾಗಾಗ
ಸಂಪಗಾವ್ಯಾಗ ಮೂರು ದಿವಸ ಅತಲೆ ರಾಯಾ
ನೀನು ಜಮೀನ ಕೊಟ್ಟು ಹೋಗಲೆ ನಮಗಾ
ಕೇಳಿ ರಾಯಪ್ಪ ತಾನು ಕಣ್ಣತುಂಬ ನೀರತಂದಾನಾಗ
ಈ ಊರ ಒಳಗ ಗುರುತಿಲ್ಲ ಅಂತಾನು ಯಾರಿಗೀಗ
ಮೇಲಗಿರಿ ರಂಗನಗೌಡಾ ಕಣ್ಣ ಚಿವಟಿ ಹೇಳ್ಯಾನಾಗ
ಅಷ್ಟ ನೋಡಿ ರಾಯಪ್ಪ ತಾನು ಹೇಳುತಿದ್ದಾನ ಸುಭೇದಾರಗ
ಮೇಲಗಿರಿ ರಂಗನಗೌಡ್ರ ಜಾಮೀನ ಕೊಟ್ಟಾನ್ರಿ ಆಗ
ಸಂಜಿ ಮೂರ ಗಳಿಗಿರತ ಬಿಟ್ಟಾರು ಬಂಟನ್ನಾಗ
ದೀನಂತ ಕಟಂಜನ ಜಿಗಿದು ನಿಂತಾನು ರಸ್ತೆದಮ್ಯಾಗ
ಡಗ್ಗಾಲು ಮಂಡಿ ಊರಿ ಬಂಟಾ ಚೇರಲಬ್ಬಿ ಹೊಡೆದನಾಗ
ಸುಭೇದಾರಾ ನಿನ್ನ ಕರುಳು ಜನಿವಾರಾ ಹಾಕತೀನಿ ಕೊರಳಾಗ
ಸಂಪಗಾಂವಿ ಕಚೇರಿಗೆ ಬೆಂಕಿ ಹಚ್ಚತೀನಿ ಮಧ್ಯಾಹ್ನದಾಗ
ಅಷ್ಟೆ ಹೇಳಿ ರಾಯಪ್ಪ ತಾನು ಹಿಂದಕ ತಿರಗಿದನಾಗ
ದವಡಾಸಿ ಬಂದಾನು ಬಂಟಾ ಸಂಗವಳ್ಳಿ ಸ್ಥಳದಾಗ
ಆರು ತಾಸುರಾತ್ರಿಗೆ ಬಂದಾನು ಊರ ಒಳಗ
ಇನ್ನ ಮಾತ್ರ ನಮ್ಮ ತಾಯಿಗೆ ಭೆಟ್ಟಿ ಆಗಬಾರದೆಂದಾನಾಗ
ಇಷ್ಟೊಂದ ರಾಯಪ್ಪ ಕಣ್ಣತುಂಬ ನೀರ ತಂದಾನಾಗ
ಬಿಚ್ಚಗತ್ತಿ ಚನಬಸಪ್ಪ ತಮ್ಮಾ ಕದಾತಗಿಯಪ್ಪಾ ಈಗ
ಅಷ್ಟೆ ಕೇಳಿ ಚನಬಸ್ಯಾ ಕದಾತಗದ ನಿಂತಾನಾಗ
ಯಾಕೋ ರಾಯಪ್ಪಣ್ಣಾ ಮೂರುದಿನ ತಡಾ ಆತು ನಿನಗ
ಕೇಳಿ ರಾಯಣ್ಣ ತಾನು ಹೇಳುತಿದ್ದಾನು ಚನಬಸ್ಯಾಗಾಗ
ಏನ ಹೇಳಲಿ ತಮ್ಮ ಮಾನ ಕಳದಾರ ಕಚೇರಿಯಾಗ
ದುಃಖದಿಂದ ಚನಬಸ್ಯಾ ತಾನು ಹೇಳಿತಿದ್ದಾನು ರಾಯಾಗಾಗ
ವೈರಿ ಬಾಳ್ಯಾ ನಿಮ್ಮ ತಾಯಿಗೆ ಕಲ್ಲು ಹೊರಿಸ್ಯಾನೋ ಡುಬ್ಬದಮ್ಯಾಗ
ಅಷ್ಟ ಕೇಳಿ ರಾಯಪ್ಪ ಸಿಟ್ಟ ಬಾಳ ಆದಾನ್ರಿ ಬಾಳ್ಯಾನಮ್ಯಾಗ

**||ಇಳುವು||**

ಗಡಗಿಯಮ್ಯಾಲ ಗಡಗಿಯನಿಟ್ಟು ಅಟ್ಟುನ್ನಲೆ ಬಾಳ್ಯಾ
ನಾ ಹೋಗತೀನಿ ನಾಡಮ್ಯಾಲ ಮಂದಿ ಕಟ್ಟತೀನೀಗ
ನೀ ಹೋದ ಬಳಿಕ ನಂದೇನತಿಯಪ್ಪ ಊರ ಒಳಗ
ಹೆಂಡತಿ ಗುಳದಾಳಿ ಹರಕೊಂಡ ಬೆನ್ನ ಹತ್ಯಾನು ಚನಬಸವಣ್ಣ
ದವಡಸಿ ಬಂದಾನು ಬಂಟಾ ಬೆಳ್ಳವಡಿ ಸ್ಥಳದಾಗ

ಅವರ ಸಂದ ಉಳದೀತರೆಪ್ಪ ಬೆಳ್ಳವಡಿ ಸ್ಥಳದಾಗ
ದಾತರಿಲ್ಲದಂತಹ ಜಗಳ ಯಾತಕಪ್ಪ ರಾಯಾ ನಿನಗ
‖ ಬೆಳಗಾಂವಿ ಜಿಲ್ಹಾ ಪೈಕಿ ….. ೨ನೆಯ ಚೌಕ ‖

ದವಡಸಿ ಬಂದಾನ ಬಂಟಾ ಬೆಳ್ಳವಡಿ ಊರ ಒಳಗ
ಬೆಳವಡಿ ವಡ್ಡರಯಲ್ಲಾ ಮುಜರೀ ಸಲಾಮಪ್ಪ ನಿನಗ
ಬಾರೋ ಹೆಚ್ಚಿನ ಬಂಟಾ ಯಾಕ ಬಂದ್ಯೋ ಮಧ್ಯಾಹ್ನದಾಗ
ಮೊದಲಾದ ಮಜಕೂರ ಹೇಳತಿನಲೆ ತಮ್ಮಾ ನಿನಗ
ಕುಲಕರ್ಣಿ ಬಾಳ್ಯಾಗ ನನಗ ವರ್ಮ ಬೆಳದತಿ ಸಂಗೊಳ್ಯಾಗ
ನಾ ಹೋಗತೀನಿ ನಾಡಮ್ಯಾಗ ಮಂದಿ ಕಟ್ಟತೀನೀಗ
ನೀ ಹೋದಬಳಿಕ ನಂದೇನೈತಪ್ಪಾ ಬೆಳ್ಳವಡಿ ಊರಾಗ
ಡಗಲಿ ಚೊಣ್ಣಾ ತೊಟ್ಟ ಹೆಗಲಮ್ಯಾಗ ಸಲಕಿ ಹಾಕ್ಯಾನಾಗ
ಮೆಣಚ ಬಡಗಿ ಕೈಯಾಗ ಹಿಡದ ಬೆನ್ನ ಹತ್ಯಾನ ಯಲ್ಲಪ್ಪಾಗ
ದವಡಸಿ ಬಂದಾನು ಬಂಟಾ ಬೇವಿನಕೊಪ್ಪದ ಸ್ಥಳದಾಗ
ಬೇವಿನಕೊಪ್ಪದ ಭಾಲ್ಕೆ ನಾಯಿಕ ನಮಸ್ಕಾರಪ್ಪಾ ನಿನಗ
ಬಾರೋ ಹೆಚ್ಚಿನ ಬಂಟಾ ಯಾಕ ಬಂದ್ಯೋ ಮಧ್ಯಾಹ್ನದಾಗ
ಮಜಕೂರ ನಿನಗ ಹೇಳತೀನಲೆ ತಮ್ಮಾ ನಿನಗ
ಕುಲಕರ್ಣಿ ಬಾಳ್ಯಾಗ ನನಗ ವರ್ಮ ಬೆಳದೈತಿ ಸಂಗೊಳ್ಯಾಗ
ನಾ ಹೋಗತೀನಿ ನಾಡಮ್ಯಾಗ ಸೈನ್ಯ ಕಟ್ಟತೀನೀಗ
ನೀ ಹೋದಬಳಿಕ ನಂದೇನೈತೆಪ್ಪಾ ಈ ಊರ ಒಳಗ
ನೂರಾಳ ಕಟ್ಟಿಕೊಂಡು ಅಡ್ಲ ಜಿಗದಾನು ರಣದೊಳಗ
ದವಡಾಸಿ ಬಂದೀತು ದುಂಡು ಒಕ್ಕುಂದ ಸ್ಥಳದೊಳಗ
ಜಿಡ್ಡಿಮನಿ ಫಕೀರ ತಮ್ಮಾ ಹೊಂಡಬೇಕಲೇ ನೀನೀಗ
ಅವನ ಮಾತು ಮೀರಲಿಲ್ಲಾ ಹೊಂಟ ಬಂದಾನು ಫಕೀರಾಗ
ದವಡಾಸಿ ಬಂದು ದಂಡು ಬಲಕುಂದದ ತುರಬಂದಾಗ
ಕಾಳೀ ಭೀಮಣ್ಣ ನೀನು ಹೊರಡುತ್ತಲೇ ಬೇಕಲೆ ತಮ್ಮಾ ಈಗ
ಮಾತ ಮೀರಲಿಲ್ಲ ಭೀಮಣ್ಣ ಹೊರಟ ಬಂದಾನಾಗ
ರಣಹಲಗಿ ಹಣಮಂತನ ಕರಕೊಂಡು ಬಂದಾನಾಗ
ದವಡಿಸಿ ಬಂದಿತು ದಂಡು ಬತ್ತವಾಡದ ಸ್ಥಳದಾಗ
ಕಮ್ಮಾರ ಮೀರಾಸಾಬಾ ಹೊಂಡಬೇಕಲೇ ತಮ್ಮಾ ಈಗ
ಮಾತ ಮೀರಲಿಲ್ಲ ಹೊಂಟಬಂದಾನ ಮೀರಾ ಆಗ
ನೂರಾಳು ಕಮ್ಮಾರ ಕರಿದು ಬೆನ್ನ ಹತ್ಯಾನಾಗ
ದವಡಾಸಿ ಬಂದಿತು ದಂಡು ನೇಗಿನಾಳ ಸ್ಥಳದಾಗ
ಅರಮನಿಯ ಯಂಕನಗೌಡಾ ನಮಸ್ಕಾರಪ್ಪಾ ನಿನಗ
ಬಾರೋ ರಾಯಪ್ಪಣ್ಣಾ ಯಾಕ ಬಂದಿ ಮಧ್ಯಾಹ್ನದಾಗ
ಅಷ್ಟ ಕೇಳಿ ರಾಯಣ್ಣ ಹೇಳತಿದ್ದಾನು ಗೌಡರಿಗಾಗ

ಕಿತ್ತೂರ ದೇಶಗತಿ ಹೋಗತತಿ ಮಂದಿ ಕೊಡ್ರಪ್ಪಾ ನನಗ
ಅಷ್ಟು ಕೇಳಿ ಗೌಡ್ರ ತಾವು ಹೇಳತಿದ್ದಾನ ರಾಯಣ್ಣಗಾಗ
ಮಂದಿ ನಮ್ಮ ಕೈಯಾಗಿಲ್ಲಾ ಅಂತಾ ಹೇಳ್ಯಾರು ಗೌಡ್ರಾಗ
ಇದನ್ನು ಕೇಳಿ ರಾಯಣ್ಣ ಸಿಟ್ಟಬಾಳ ಆದಾನ್ರಿ ಗೌಡರಿಗೆ
ದವಡಾ ಬಂದೀತಾ ದಂಡು ಮೂಗಬಸ್ತದ ಸ್ಥಳದಾಗ
ರಜಪೂತ ರಾಮಸಿಂಗಾ ನಮಸ್ಕಾರ್ರೆಪ್ಪಾ ನಿಮಗ
ಬಾರೋ ಹೆಚ್ಚಿನ ಬಂಟಾ ಯಾಕಬಂದ್ರಿ ರಾತ್ರಿಯೊಳಗ
ಮಜಕೂರ ಹೇಳತೀನಲೆ ತಮ್ಮಾ ನಿನಗ

**||ಇಳುವು||**
ನಾ ಹೋಗತೀನಿ ನಾಡಮ್ಯಾಗ ಮಂದಿ ಕಟ್ಟತೀನೀಗ
ನೀ ಹೋದಬಳಿಕ ನಂದೇನೈತೆಪ್ಪ ಊರ ಒಳಗ
ವಾಯು ಹತ್ತಿ ಕಾಲ ಹೋಗ್ಯಾವ ಬಿಟ್ಟಹೋಗಬ್ಯಾಡ ಎಣ್ಣಾ ನನಗ
ಅಷ್ಟು ಹೇಳಿ ರಾಮಸಿಂಗ ಕಣ್ಣ ತುಂಬ ನೀರ ತಂದಾನಾಗ
ಬತ್ತಲಗುದರಿಗೆ ತಡಿ ಹಾಕಿ ಬೆನ್ನ ಹತ್ಯಾನೋ ರಾಯಣ್ಣಗ
ಅವರ ಸಂದ ಉಳದೀತ್ರೆಪ್ಪಾ ಮೂಗ ಬಸ್ತದ ಸ್ಥಳದಾಗ
ದಾತರಿಲ್ಲದಂತಹ ಜಗಳ ಯಾತಕಪ್ಪಾ ರಾಯಾ ನಿನಗ
|| ಬೆಳಗಾಂವ ಜಿಲ್ಲಾಪೈಕಿ ….. ಾನೆಯ ಚೌಕ ||

ಗಟ್ಟುಳ್ಳ ಗಜವೀರ ಸುದ್ದಿಕೇಳ್ಯಾರ ನಾಡಮ್ಯಾಗ
ಕಾಳಿ ಭೀಮಣ್ಣಾ ನೀನು ಕರ್ಣಿ ಹಿಡಿಯಲೇ ಈಗ
ನಡಕಟ್ಟಿ ಭೀಮಣ್ಣ ಕರ್ಣಿ ಹಿಡದಾನು ಆಗ
ದವಡಾಸಿ ಬಂದೀತು ದಂಡು ಗೋದಳ್ಳಿಯ ಸ್ಥಳದಾಗ
ಗೋದಳ್ಳಿಯ ರೈತನು ಕೇಳುತ್ತಿದ್ದಾನು ರಾಯಣ್ಣಾಗ
ಗಟ್ಟುಳ್ಳ ಗಜವೀರನ ಮನಿಯ ತೋರಿಸಿರಪ್ಪಾ ಈಗ
ಅಷ್ಟ ಕೇಳಿ ರೈತರು ಹೇಳಿತಿದ್ದಾರು ರಾಯಣ್ಣಗಾಗ
ಅಷ್ಟ ಕೇಳಿ ಬಂಟನ ದಂಡು ಹಿಂದಕ ತಿರುಗಿತಾಗ
ದಂಡ ಬಂದೀತು ಮುರುಕುಪ್ಪಿಯದಾರಿಯೊಳಗ
ಒಡ್ಡರ ಯಲ್ಲಣ್ಣ ಸಂಗಡ ಕರಕೊಂಡ ಹೊಂಟಾನು ರಾಯಾ ಆಗ
ಮುಂದಿನ ಮಡ್ಡಿಹತ್ತಿ ಕಡಿಮಡ್ಡಿ ಇಳಿತಿದ್ದನಾಗ
ಮೂರಕೊಳ್ಳದ ನಡುವೆ ಹುಡಕಾಕ ಹತ್ಯಾರು ಗಜವೀರನಾಗ
ಬಿದರ ಮೆಳಿಯ ಮಂಚಕೀಯ ಮೇಲೆ ಗಜವೀರ ಮಲಗಿದ್ದಾ
ಹನ್ನೆರಡ ಮಣದ ಚಿಲಕತ್ತಿನಂಗಿ ಇತ್ತ ಮೈ ಒಳಗ
ಬಾರೋ ರಾಯಪ್ಪಣ್ಣ ಗೊತ್ತ ಹಚ್ಚೇನಿ ಗಜವೀರಗೀಗ
ಅಷ್ಟೆ ಕೇಳಿ ರಾಯಣ್ಣ ತಾನು ಮುಂದಕ ಓಡಿ ಬಂದಾನಾಗ
ಮಲಗಿರುವ ಗಜವೀರನ್ನ ಕಣ್ಣ ತುಂಬ ನೋಡುತಿದ್ದನಾಗ

ಏಳೋ ಏಳೋ ಗಜವೀರ ನಮಸ್ಕಾರಪ್ಪಾ ನಿನಗ
ಕೇಳಿ ರಾಯಣ್ಣ ತಾನು ಹೇಳ್ಯಾನ ಗಜವೀರಗಾಗ
ರೋಗಣ್ಣವರ ರಾಯಾ ಹುಡಕುತ್ತ ಬಂದಾನ ನಿಮಗ
ರೋಗಣ್ಣವರ ರಾಯಾ ಸುದ್ದಿ ಕೇಳ್ಯಾನು ಗಜವೀರಾಗ
ಧೀನಂತ ಮಂಚಿಕೆ ಜಿಗಿದು ತೆಕ್ಕಿ ಬಿದ್ದಾನು ರಾಯಣ್ಣಗ
ಯಾಕೋ ರಾಯಪ್ಪಣ್ಣಾ ಏನ ವ್ಯಾಗ ಒಳದೈತಿ ನಿನಗ
ಕೇಳಿ ರಾಯಣ್ಣ ಕಣ್ಣತುಂಬ ನೀರ ತಂದನಾಗ
ಏನ ಹೇಳಲಿ ತಮ್ಮಾ ಮಾನಕಳದಾರ ಕಚೇರಿಯಾಗ
ವೈರಿ ಬಾಳ್ಯಾ ನಮ್ಮ ತಾಯಿಗೆ ಕಲ್ಲುಹೊರಸ್ಯಾನ ಡುಬ್ಬದಮ್ಯಾಗ
ನಾ ಹೋಗತೀನಿ ನಾಡಮ್ಯಾಗ ಸೈನ್ಯ ಕಟ್ತಿತೀನೀಗ
ಇದನ್ನ ಕೇಳಿ ಗಜವೀರ ಹೇಳತಿದ್ದಾನ ರಾಯಣ್ಣಗಾಗ
ಸಂಗವಳ್ಳಿ ಊರಾಗಿನ ಮಣ್ಣು ಹೊರತೀನೀಗ
ರಾತ್ರಿಯೊಳಗ ಸಂಗವಳ್ಳಿ ರೈತರನೆಲ್ಲಾ ಎಚ್ಚರಮಾಡತಿನೀಗ
ದವಡಾಸಿ ಬಂದೀತ ದಂಡ ಬಾಳೆಕುಂದದ ಕೊಳದಾಗ
ಕೊಳ್ಳಕ ಬಂದು ಕೇಳತಿದ್ದಾನ ಗಜವೀರಾ ಆಗ
ಇಷ್ಟ ದಂಡಿನ ಕೈಲೆ ಲಡಾಯಿ ಆಗುದುಲ್ಲೋ ಯಣ್ಣಾ ಈಗ
ಇದ ಕೇಳಿ ರಾಯಣ್ಣ ಮಾರಿ ಕಿಂಕರ ಮಾಡ್ಯಾನಾಗ
ನನ್ನ ಬುದ್ಧಿಯುಳ್ಳ ಒಡ್ಡರ ಯಲ್ಲಣ್ಣಾ ಮುಂದಕ ಬಾರೋ ಈಗ
ಗಟ್ಟುಳ್ಳ ಗಜವೀರ ನನಗ ನಕಲಿ ಮಾಡ್ಯಾನ ತಮ್ಮಾ ಈಗ
ನಾ ಹೋಗತೀನಿ ಮೊಗಲಾಯಿ ಸೀಮಗಿ ದಂಡ ತರತೇನೀಗ
ಅಷ್ಟೆ ಹೇಳಿ ರಾಯಪ್ಪ ತಾನು ಹಿಂದಕ ತಿರಗಿದ್ದನಾಗ
ದವಡಾಸಿ ಬಂದಾನು ಬಂಟಾ ನಂದಗಡದ ಪ್ಯಾಟಿ ಒಳಗ
ಸಾವಕಾರ ಚನಬಸಪ್ಪ ನಮಸ್ಕಾರಪ್ಪ ನಿನಗ
ಬಾರೋ ಹೆಚ್ಚಿನ ಬಂಟಾ ಯಾಕ ಬಂದ್ಯೋ ಮಧ್ಯಾಹ್ನದಾಗ
ಅಷ್ಟ ಕೇಳಿ ರಾಯಪ್ಪ ತಾನು ಹೇಳುತ್ತಿದ್ದಾನು ಸಾವಕಾರಗಾಗ
ದಂಡ ಬರಪೂರ ಕೂಡೇತಿ ಬಾಳೇಕುಂದದ ಕೊಳದಾಗ
ಖರ್ಚಿಗೆ ಕಡಿಮೆ ಆಗೇತಿ ಹೊನ್ನ ಕೊಡಬೇಕ್ರೆಪ್ಪಾ ನನಗ
ಬೇಕಾದಷ್ಟು ಹೊನ್ನ ಐತಿ ತಕ್ಕೊಂಡ ಹೇಗೋ ಬಂಟಾ ಈಗ
ಎರಡೂ ಕೊಡಪಾನ ಹೊನ್ನು ತಂದು ಕೊಟ್ಟಾನು ರಾಯಣ್ಣಗಾಗ

**||ಇಳುವು||**

ಎರಡೂ ಕೊಡಪಾನ ತಂದ ಇಟ್ಟಾನು ದಂಡಿನೊಳಗ
ನಾನು ಬರುವ ತನಕ ಖರ್ಚಿಗೆ ಕೊಡತೇನಿ ನಿಮಗ |
ಮೂರ ದಿವಸ ನನ್ನದಾರಿ ನೋಡಿರಿ ಅಂತಾನು ಆಗ
ಮೂರ ದಿವಸ ಆದನಂತರ ಸತ್ತನಂತ ತಿಳಿದಾಗ
ಅವನ ದಂಡಿಗೆ ಕೈಮುಗದ ಹಿಂದಕ ತಿರುಗಿದನಾಗ

ಅವರ ಸಂದು ಉಳದೀತ್ರೆಪ್ಪಾ ಬಾಳೇಕುಂದರಿ ಸ್ಥಳದಾಗ
ದಾತರಿಲ್ಲದಂತಾ ಜಗಳಾ ಯಾತಕಪ್ಪಾ ರಾಯಾ ನಿನಗ
॥ ಬೆಳಗಾಂವ ಜಿಲ್ಲಾ ಪೈಕಿ ….. ಆನೆಯ ಚೌಕ ॥

ಅಷ್ಟ ಹೇಳಿ ರಾಯಪ್ಪ ತಾನು ಹಿಂದಕ್ಕೆ ತಿರುಗಿದ್ದನಾಗ
ಹರಕ ತೋರಿ ತುಂಡ ತಲಿಯಮೇಲೆ ಹೊತಕೊಂಡನಾಗ
ಮುದುಕನ ವೇಷ ಹಾಕಿ ರಾಯಾ ತಯಾರಾಗತಾನ ಕೊಳ್ಳದಾಗ
ದವಡಾಸಿ ಬಂದಾನು ಬಂಟಾ ಅಪರಾಧಿಯ ಸ್ಥಳದಾಗ
ಅಪರಾಧಿ ಸಂಗಡ ಮುಂದಿನ ಹೊಳಿ ದಾಟ್ಯಾನ ಗಳಗೊತ್ತಿನಾಗ
ಒಂದಿನಾ ಒಪ್ಪತ್ತೀನ್ಯಾಗ ಹೋಗಿ ಇಳದಾನು ಮೊಗಲಾವ್ಯಾಗ
ಆರತಾಸ ರಾತ್ರಿಗೆ ಹೋಗಿ ನಿಂತಾನು ತುರಮಂದ್ಯಾಗ
ಮೊಗಲಾಯಿ ಅಗಸಿಗೆ ತಲೆಗೊಟ್ಟು ಮಲಗಿದ್ದನಾಗ
ಮುಂಜಾನೆ ಮೂರತಾಸ ಹೊತ್ತಿಗೆ ದರಬಾರನಡದಿತ್ತ ಅರಮನ್ಯಾಗ
ತಲಿಯ ಮ್ಯಾಲಿನ ಕೋರಿ ತಗದು ಚಲ್ಯಾನ ತುರಮಂದ್ಯಾಗ
ಡಗಲಿ ಚಣ್ಣಾ ತೊಟ್ಟು ಮುಂಗೈ ಹಿಡಿಗ್ಯಾಂವಿ ಇರಿರಿಸಿನಾಗ
ಗಡ್ಡದಮಟಾ ಶಮನಾ ಬಿಟ್ಟು ಒತ್ತಿ ಸುತ್ಯಾನೋ ಮುಂಡಾಸದಾಗ
ಕತ್ತಿ ಢಾಲು ಕೈಯಾಗ ಹಿಡದ ತಯ್ಯಾರಾದಾನು ತುರಮಂದ್ಯಾಗ
ಮುಂದಿನ ಪಾರದವಾ ಯಾರಂತ ಧೀನಂತ ಜಿಗಿದಿದ್ದಾನಾಗ
ಏಳು ಅಗಸಿ ಜಿಕ್ಕೊಂತ ರಾಯಣ್ಣ ಬಂದಾನ ದರಬಾರದಾಗ
ಕತ್ತಿ ಢಾಲು ಕೈಯಾಗ ಹಿಡಿದುಕೊಂಡು ನಮಸ್ಕಾರಂದಾನರಸನಿಗಿ
ಪರ ನಾಡಿನ ಮನುಷ್ಯಾ ಯಾರ ಹೇಳಲೇ ನೀ ನಮಗ
ಅಷ್ಟ ಕೇಳಿ ರಾಯಪ್ಪ ತಾನು ಹೇಳತಿದ್ದನು ಅರಸನಿಗಿ
ರೋಗಣ್ಣವರ ರಾಯಾ ನಿನ್ನ ಸುದ್ದಿ ಕೇಳಿ ಬಂದೇನೀಗ
ಕಿತ್ತೂರ ದೇಶಗತಿ ಸಲುವಾಗಿ ಮಂದಿ ಕೊಡಬೇಕಪ್ಪಾ ನನಗ
ಏನ ಕಸರತ್ತ ನೋಡಿ ಮಂದಿ ಕೊಡಬೇಕಪ್ಪಾ ನಿನಗ
ಇಷ್ಟೆ ಅನ್ನುದು ನಿಂತಗೊಂಡ ಕೇಳತಿದ್ದ ರಾಯಣ್ಣಾಗ
ಹಚ್ಚಿ ನೋಡ ಲಢಾಯಿ ನಿನ್ನ ಮೀರಿದ ವೈರಿಗೆ ನನಗ
ಕೇಳಿ ಮೊಗಲಾಯಿ ಅರಸ ಹೇಳಿದಾನ ರಾಯಣ್ಣನಾಗ
ಕನಕೂರ ಭರಮ್ಯಾ ಭಾಳ ವೈರಿ ಆಗ್ಯಾನು ನನಗ
ಅವನ ಹೆದರಿ ಏಳಸಾವಿರ ದಂಡ ಸೇರೇತಿ ವಾಡೇದಾಗ
ಅವನ ರುಂಡ ತಂದ ಕೊಟ್ಟರ ಕೊಡತೇನಿ ದಂಡೆಲ್ಲ ನಿನಗ
ಇಷ್ಟೆ ಅನ್ನೋದು ರಾಯಣ್ಣ ನಿಂತಕೊಂಡು ಕೇಳುತ್ತಿದ್ದನಾಗ
ಕನಕೂರ ಭರಮ್ಯಾ ಇರುವ ಸ್ಥಳ ಹೇಳ್ರೆಪ್ಪಾ ನನಗ
ಕೇಳಿ ಅರಸಾ ಆನಂದಾಗಿ ಹೇಳತಿದ್ದಾನ ರಾಯಣ್ಣಗಾಗ
ಕಲ್ಲ ಭಾಂವಿ ಐತಿ ತಮ್ಮಾ ತುಳಸಿಗುಡ್ಡದ ವಾರಿಯೊಳಗ
ಸಾರಿ ಬರತಾನು ಭರಮ್ಯಾ ಮೂರತಾಸ ರಾತ್ರಿಯೊಳಗ

ಹೊಂಕಳಗಂಟಿ ಹುಲಿಯಚರ್ಮಾ ಮೇಲೆ ಮುಂದ ಅವಗ
ಐದನೂರು ದಂಡಿನೊಳಗ ಪಂಜು ಹಿಡಿಯತಾನು ಕೈಯೊಳಗ
ಇಷ್ಟು ಅನ್ನುದು ರಾಯಣ್ಣ ತಾನು ಧ್ಯಾನಿಸಿ ಕೇಳುತ್ತಿದ್ದಾಗ
ಸಂಜಿಗಳಿಗೆ ಹೊತ್ತ ಇರತ ಗುಡ್ಡದ ದಾರಿ ಹಿಡಿದನಾಗ
ದವಡಾಸಿ ಬಂದಾನೋ ಬಂಟಾ ತುಳಸಿಗುಡ್ಡದ ದಾರಿಯೊಳಗ
ಕಲ್ಲಭಾವಿ ಕಂಡಾನ ರಾಯಣ್ಣ ತುಳಸಿ ಗುಡ್ಡದ ದಾರಿಯೊಳಗ
ಸರಾ ಸರಾ ಇಳಿದು ರಾಯಾ ಸುಮ್ಮನೆ ಕುಂತಾನು ಭಾವಿಯೊಳಗ
ಸಾರಿ ಬಂದಾನು ಭರಮಾ ಮೂರು ತಾಸು ರಾತ್ರಿನಾಗ
ಸಾರಿ ಬರುವ ಭರಮನ ಕಣ್ಣತುಂಬ ನೋಡುತ್ತಿದ್ದನಾಗ
ಭಾವಿ ಸನಿಯಾಕ ಬಂದಾನ ರಾಯಣ್ಣ ಚಟ್ನ ಮೇಲಕ್ಕೆದ್ದನಾಗ
ಬಾರೋ ಕನಕೂರ ಭರಮಾ ಸಲಾಮಪ್ಪಾ ನಿನಗ
ಕೋಣಿನ ಸೊಕ್ಕಿನ ಬ್ಯಾಡಾ ತೆಗೆಯಲಿಲ್ಲ ಕಣ್ಣ ಆಗ
ಗುರುತಿಲ್ಲ ಕೂನಿಲ್ಲ ಯಾತರ ಸಲಾಮ ನನಗ
ಇಷ್ಟ ಕೇಳಿ ರಾಯಣ್ಣಗ ಬೆಂಕಿ ಬಿತ್ತೊ ಹೊಟ್ಟೆ ಒಳಗ
ರೋಗಣ್ಣವರ ರಾಯಾನೆಂಬುವ ಶಬ್ದ ಕೇಳಿ ಬಂದೇನಂತಾನಾಗ
ಕಿತ್ತೂರ ಮಲ್ಲಸರ್ಜನ ಹುಲಿಯು ಬಂದಾನು ತಮ್ಮಾ ಈಗ
ರೋಗಣ್ಣವರ ರಾಯಾನೆಂಬುವ ಶಬ್ದಕೇಳಿತ ದಂಡೆಲ್ಲಾಗ
ಚಟ್ಟಣೆ ಸಿಡಿದು ಹೋಗಿ ನಿಂತಿತು ದಂಡೆಲ್ಲ ವಾರಿ ಒಳಗ
ರಾಯಣ್ಣನ ನೋಡಿ ಭರಮ್ಯಾ ನಡಗಾಕ ಹತ್ಯಾನೋ ದಂಡಿನೊಳಗ
ಸುಳ್ಳ ಮೇಲಿನ ಧೈರ್ಯಕ ಹೇಳ್ಯಾನೋ ರಾಯಣ್ಣನಾಗ
ಒಳ್ಳೆ ಬಂದು ಕೂಡಿದಿ ಮೋಜ ಮಾಡು ಮಳಲಿನೊಳಗ
ತನ್ನ ದಂಡಿಗೆಲ್ಲಾ ಭರಮಣ್ಣ ಹೇಳತಿದ್ದಾನಪ್ಪಾ ಆಗ
ಅವನ ಸತ್ತರ ನನ್ನ ಹಿಂಬಾಲಿ ಇರುವಂತಿರಾಗ
ಇಷ್ಟ ಕೇಳಿ ಭರಮನ ದಂಡಿಗೆ ರಾಯಣ್ಣ ಹೇಳಿದನಾಗ
ದಂಡಿತೆವಗಡ ಕಾಳವ್ವನ ಆಣೆ ಆಗೈತಿ ತಮ್ಮಾ ನಿಮಗ
ಯಾರ ಭರವಸೆ ನಮಗ ಏನ ಹೋಗಿ ನಿಂದಿರ್ರಿ ಮಡ್ಡಿಮ್ಯಾಗ
ಇಷ್ಟಮಾತ ಮಾತಾಡುವುದರೊಳಗ ಕತ್ತಿ ಹಿರಿದಾರ ಮಳಲಿನೊಳಗ
ಹಿಡಿ ಬ್ಯಾಡನ ಗಜ್ಜ ಅಂತ ಸೆಳದನಿಂತಾಗ ಭರಮಣ್ಣಾಗ
ಭರಮನ ಕತ್ತಿಯ ಪೆಟ್ಟು ಢಾಲಿನ ಮೇಲಿಟ್ಟಗೊಂಡನಾಗ
ಇದು ಕುರುಬನ ಗಜ್ಜಂತ ಸೆಳೆದ ನಿಂತಾನ ರಾಯಣ್ಣಾಗ
ರಾಯಣ್ಣನ ಕತ್ತಿ ಪೆಟ್ಟಿಗೆ ಢಾಲುಕೊಟ್ಟಾನು ಭರಮ್ಯಾ ಆಗ
ಹಿಡಿ ಬ್ಯಾಡನ ಗಜ್ಜ ಅಂತ ಮತ್ತ ಸೆಳೆದನಿಂತಾನಾಗ
ಧೀನಂತ ರಾಯಣ್ಣ ತಾನು ಹಿಂಬರಕಿ ಜಿಗಿದಾನಾಗ
ಏಳು ಅಕ್ಕಡಿ ನೆಲಾ ಅಳತಿ ಮಡಲೆ ಭರಮ್ಯಾ ಈಗ
ಹಿಡಿ ಕುರುಬನ ಗಜ್ಜಂತ ಮತ್ತು ಸೆಳದ ನಿಂತಾನಾಗ
ಟಣ್ಣಂತ ಭರಮಣ್ಣ ತಾನೂ ಹಿಂಬರಕಿ ಜಿಗಿದಿದ್ದಾಗ

ಮೂರು ಅಕ್ಕಡಿ ನೆಲಾ ರಾಯಣ್ಣ ಅಳತಿ ಮಾಡಿಕೊಂಡನಾಗ
ಅಳತಿ ಮಾಡಿ ರಾಯಣ್ಣ ತಾನು ಕುಲು ಕುಲು ನಗತ್ತಿದ್ದಾಗ
ಚಟ್ಟಿ ಜೋಕಾ ಬೀಸುವತನಕಾ ಮೋಜ ಮಾಡ್ಯಾನೋ ಮಲಳಿನೊಳಗ
ಹೇಳಿಕೇಳಿ ಕಡಿಯತೀನಿ ಭರಮ್ಯಾ ಹುಷಾರಾಗಿರೋ ನಿನೀಗ
ಕಾಲಗೇರೆಯಮೇಲೆ ಸೆಳೆದು ಬಿಟ್ಟಾನು ಡೊಕ್ಕಿಯ ಮ್ಯಾಗ
ಬಕ್ಕಬಾರಲೆ ಬಿದ್ದ ಭರಮ್ಯಾ ಒದ್ದಾಡತಾನ ಮಳಲಿನೊಳಗೆ
ಭರಮನ ಚಂಡಿಕಿ ಹಿಡಿದು ರಾಯಣ್ಣ ಮೇಲಕ್ಕೆ ನೆಗವಿದಾಗ
ಅವನ ಚಂದಕೋದ ತನ್ನ ಥಾಲಿಗೆ ಹಾಕಿಕೊಂಡಾನಾಗ
ಒಳ್ಳೆ ಬಂಟಾ ಅದ್ದರೆ ಮೀರಿ ಹೋಗತೇನಿ ತಮ್ಮಾ ಈಗ
ಮಡ್ಡಿಮ್ಯಾಲೆ ಕುಂತ ಭರಮ್ಯಾನ ದಂಡು ಹೇಳತಿತ್ತ ರಾಯಣ್ಣಗಾಗ

**||ಇಳುವು||**

ಹಿಂಡಿನೊಳಗಿನ ಗಂಡೊಳ್ಳಿ ಕೊಯ್ದು ಚಲ್ಲಿದಿರಪ್ಪಾ ಈಗ
ಮುಂದ ಅನ್ನದ ಮಾರ್ಗಾ ಏನ ಹೇಳತೀರಪ್ಪಾ ನನಗ
ಕೇಳಿ ರಾಯಪ್ಪ ತಾನು ಹೇಳತಿದ್ದಾನು ದಂಡಿಗಾಗ
ಕತ್ತಿ ಮುಟ್ಟಿ ದಂಡೆಲ್ಲ ಆಣಿ ಮಾಡಬೇಕ್ರೆಪ್ಪಾ ಈಗ
ನಿನ್ನ ಮಾತಿನಮೇಲೆ ಎರಡನೆ ಇಲ್ಲೊಯಣ್ಣಾ ಈಗ
ಅದರಂತೆ ಕತ್ತಿ ಮುಟ್ಟಿ ಆಣಿ ಮಾಡಿತು ದಂಡೆಲ್ಲಾಗ
ಅವರ ಸಂದ ಉಳದೀತ್ರೆಪ್ಪಾ ತುಳಸಿಗುಡ್ಡದ ವಾರಿಯೊಳಗೆ
ದಾತರಿಯಲ್ಲದಂತಹ ಜಗಳ ಯಾತಕಪ್ಪ ರಾಯಾ ನಿನಗ
|| ಬೆಳಗಾಂವಿ ಜಿಲ್ಲಾಪೈಕಿ ….. ಜನೆಯ ಚೌಕ ||

ಇಷ್ಟ ಹೇಳಿ ರಾಯಣ್ಣ ತಾನು ದಂಡ ಕರಕೊಂಡ ಬಂದನಾಗ
ದಂಡೆಲ್ಲ ಊರ ಒಳಗ ಒಯ್ಯಬಾರದಂತಾನಾಗ
ಮೊಗಲಾಯಿ ಸೀಮಿ ಹಿಂದ ದಂಡು ಬಿಟ್ಟ ಬಂದಾನಾಗ
ಏಳು ಅಗಸಿ ಜಿಕ್ಕೊಂತ ರಾಯಣ್ಣ ಬಂದನಿಂತಾನ ದರಬಾರದಾಗ
ಭರಮ್ಯಾನ ಚಂಡ ತಂದು ಅರಸನ ಮುಂದನಿಟ್ಟಾಗ
ಭರಮ್ಯಾನ ಚಂಡ ನೋಡಿ ಅರಸಾ ಹಿರಿಹಿರಿ ಹಿಗ್ಗಿದನಾಗ
ನಾನಾಳು ರಾಜ್ಯ ನೀನಾಳಲೆ ಕಲಿ ಬಂಟಾ ನೀನೀಗ
ನಿನ್ನ ರಾಜ್ಯ ಆಳಾಕ ನಾ ಇಲ್ಲೆ ಇರಾಕ ಬಂದಿಲ್ಲೀಗ
ಇಷ್ಟ ಮಾತಾಡಿಕೊಂತ ರಾಯಣ್ಣ ಹೊಕ್ಕಾನ ವಾಡೇದಾಗ
ಕತ್ತಿ ಒರಿಯಂತಹ ಹುಡುಗರನಾರಿಸಿ ತಕ್ಕೊಂಡಾನಾಗ
ಮೂರು ಸಾವಿರ ದಂಡು ಕರಕೊಂಡು ಹೊಂಟಾನು ರಾಯಣ್ಣಾಗ
ನನಗ ವ್ಯಾಳೇ ಆಗತೈತಿ ಅಪ್ಪನಿ ಕೊಡರಿ ಅರಸರಾ
ಅಷ್ಟ ಕೇಳಿ ಮೊಗಲಾವಿ ಅರಸು ಹೇಳತ್ತಿದ್ದಾನಾಗಾ

ರಾಯಣ್ಣಾ ನಿನಗ ಹೊನ್ನ ಕೊಡತೀನಿ ಸಂತೋಷಾಗ ಮನಸ್ಸಿನಾಗ
ನಿನ್ನ ಹೊನ್ನ ತಗೊಳ್ಳಾಕ ನಾ ದಾಸಲ್ಲ-ಡೊಂಬಲ್ಲಾ ಈಗ
ಇಷ್ಟೆ ಕೇಳಿ ಮೊಗಲಾವಿ ಅರಸ ಅಪ್ಪಣೆ ಕೊಟ್ಟಾನ ರಾಯಣ್ಣಗ
ದವಡಾಸಿ ಬಂದೀತು ದಂಡು ಗುಳೇದಗುಡ್ಡದ ವಾರಿಯೊಳಗ
ಅಲ್ಲಿಗಿ ಬಂದು ರಾಯಪ್ಪ ತಾನು ವಿಚಾರ ಮಾಡಾಕ್ಹತ್ಯಾನಾಗ
ಮುಂದ ಕಾಣು ಹಳ್ಳಿ ಶ್ರೀಮಂತರನ್ನ ಸುಲಗಿ ಮಾಡಿರೀಗ
ಹೆಣ್ಣು ಮಕ್ಕಳನ ಮುಟ್ಟಬ್ಯಾಡ್ರಿ ದೋಷ ತಟ್ಟೀತನಮಗ
ಸಿರಿ ಅರಿವಿ ಬಿಡದಂಗ ಸುಲಗಿ ಮಾಡಿರಿ ಸಿರಿವಂತನೀಗ
ಇಷ್ಟ ಹೇಳಿ ರಾಯಣ್ಣ ತಾನು ಹೊಕ್ಕಾನು ಗುಳೇದಗುಡ್ಡದಾಗ
ನೋಡ ನೊಡುದರೊಳಗ ಲೂಟಿ ಮಾಡ್ಯಾರ ಊರೊಳಗ
ನಡು ರಸ್ತೆದೊಳಗ ಸುಮ್ಮನೆ ಹೊಂಟಾನು ರಾಯಣ್ಣಾಗ
ಅಲ್ಲಿ ಒಬ್ಬ ಹೆಣ್ಣ ಮಗಳು ಜೋಗುಳ ಹಾಕಹತ್ತಿದ್ದಳಾಗ
ನನ್ನ ರಾಯಣ್ಣನಂತಹ ಮಗನೆ ಸುಮ್ಮನೆ ಮಲಗಪ್ಪ ಈಗ
ಇಷ್ಟ ಅನ್ನುದ ರಾಯಣ್ಣ ಕೇಳಿ ಅಡರಾಸಿ ಬಂದನಾಗ
ಹೆದರಬೇಡ ಹಡದವ್ವ ನೀನ  ಕದಾತಗಿಯವ್ವಾ ತಂಗಿ ನೀನಾ
ಕಡಿ ಮನಿಯಾನ ಎಮ್ಮಿ ತಂದ ಕಟ್ಯಾನ ಅವರ ಮನಿಯಾಗ
ನಾನಿರುತನಕ ತಾಪತ್ರ ಮಾಡಬೇಡವ್ವ ಮಗಗ
ನಿನ್ನ ಹೊಟ್ಟಿ ತನ್ನಗಿರಲಿ ಹೋಗಿ ಬರತೀನಿ ತಾಯಿ ಈಗ
ಇಷ್ಟಂದ ರಾಯಣ್ಣ ತಾನು ಅಕಿ ಪಾದಕ್ಕ ಎರಗೀದನಾಗ
ಒತ್ತರದಿಂದ ಬಂದು ಓಡಿ ದಂದ ಕೂಡಿಕೊಂತಾನಾಗ
ಬಂಗಾರದ ಸಾಮಾನ ತಂದು ಅವನ ಕೈಯಾಗ ಕೊಡತಾರಾಗ
ಒತ್ತರದಿಂದ ಬಂದೀತ ದಂಡು ನಿಂಗನ ಮಠದ ದಾರಿಯೊಳಗ
ಕಡ್ಡಿ ಬಸವ್ವಾ ತಾನ ಹೊರಬಿದ್ದ ಬಂದಾಳ್ರಿ ಆಗ
ನಿಲ್ಲೋ ರಾಯಣ್ಣ ನಾನು ಆರತಿ ಮಾಡತೇನಿ ನಿನಗ
ಇಷ್ಟ ಅನ್ನುದು ರಾಯಪ್ಪ ಕಿವಿಗೊಟ್ಟು ಕೇಳತಿದ್ದನಾಗ
ಅಷ್ಟ ಕೇಳಿ ರಾಯಪ್ಪ ತಾನು ದಂಡೆಲ್ಲ ತರುಬಿದನಾಗ
ಅವಸರದಿಂದ ಬಸವ್ವ ತಾನು ಆರತಿ ತಂದಾಳ್ರಿ ಆಗ
ತುಂಬಿದ ಆರತಿ ತಗೊಂಡು ಬಂದಾಳು ದಂಡಿನಮುಂದಾ
ಕರಿಯ ಕಂಬಳಿ ಮಡಚಿ ಗದ್ದಗಿ ಮಾಡಿ ಕುಂತಾನರಾಯ
ಕತ್ತಿ ಡಾಲು ತಗದ ರಾಯಾ ಇಟ್ಟಾನು ಗದ್ದಿಗಿ ಮ್ಯಾಗ
ಕತ್ತಿಗಾರುತಿ ಮಾಡಿ ಬಸವ್ವ ಕಪ್ಪ ಹಚ್ಯಾಳು ಢಾಲೀಗಿ
ಹಿಂದುಗಡೆ ಬಸವ್ವನ ಕೂಡ್ರಿಶ್ಯಾನು ಕಂಬಳಿಮ್ಯಾಗ
ತುಂಬಿದ ಆರುತಿ ತಗೊಂಡ ಬೆಳಗತಿದ್ದಾನು ಬಸವ್ವಗಾಗ
ಮಾರುದ್ದ ಮುತ್ತಿನದಂಡ ತಲಿಮ್ಯಾಲ ಹಾಕ್ಯಾನಾಗ
ಕರಿಯಸೀರಿ ತಂದು ಉಡಸಾಕ ಹತ್ಯಾನು ಬಸವ್ವಗಾಗ
ಬುಟ್ಟಿ ತುಂಬ ಹೊನ್ನ ತಂದ ಉಡಿಗಿ ಹಾಕಿದ್ದನಾಗ

ನಿನ್ನ ಮನಸ ಶಾಂತ ಇರಲಿ ಹೋಗಿ ಬರತೀನ ತಂಗಿ
ಇಷ್ಟೆ ಅಂದ ರಾಯಪ್ಪ ಪಾದಕ್ಕ ಎರಗೀದಾ ಮುಂದಾ
ಕಡ್ಡಿ ಬಸವ್ವನ ಕಳಸಾಗ ದಂಡು ತಿರಗೇತ್ರಪ್ಪಾ ಆಗ
ನಿನ್ನ ಮನಿ ಯಾವದು ತಂಗಿ ತೋರಿಸಂತಾನ ರಾಯಣ್ಣಾಗ
ಇದ ಕಡಿಮನಿ ನಮ್ಮ ಮನಿ ಅಂತ ತೋರಿಸಿದಳಾಗ

**||ಇಳುವು||**

ನಿಮ್ಮ ಮನಿಯಂದು ಏನೇನ ಹೋಗೆತೆವ್ವಾ ತಂಗಿ ಈಗ
ಆರುಗಾಲಿ ಸಂದುಕಾ ಬರಿದಾಗೈತಿ ಎಣ್ಣಾ ಈಗಂದೀಗ
ಆರುಗಾಲಿ ಸಂದುಕ ತುಂಬ ಹೊನ್ನ ತುಂಬ್ಯಾನ ರಾಯಣ್ಣಾಗ
ನಿನ್ನ ಆಶೀರ್ವಾದ ಇರಲಿ ಹೋಗಿ ಬರತೀನಿ ತಂಗೆವ್ವಾ ಈಗ
ಅಷ್ಟಂದು ರಾಯಣ್ಣ ತಾನು ಪಾದಕ್ಕ ಎರಗಿದ್ದಾನಾಗ
ಅವರ ಸಂದ ಉಳದೀತ್ರೆಪ್ಪಾ ನಿಂಗನ ಮಠದ ಊರೊಳಗ
ದಾತರಿಲ್ಲದಂತಾ ಜಗಳಾ ಯಾತಕಪ್ಪಾ ರಾಯಾ ನಿನಗ
|| ಬೆಳಗಾವಿ ಜಿಲ್ಲಾ ಪೈಕಿ .... ಇನೆಯ ಚೌಕ ||

ನಿಂಗನ ಮಠದ ದಾರಿಯೊಳಗ ಮೂರುದಿವಸ ಮಿಕ್ಕಿತ್ತಾಗ
ನಮ್ಮ ರಾಯಪ್ಪ ಸತ್ತಾನಂತ ದಂಡು ತಿರಗಾಕ ಹತ್ತಿತ್ತಾಗ
ಅವನ ಬುದ್ಧಿಯುಳ್ಳ ಒಡ್ಡರ ಯಲ್ಲಾ ಸಮಾಧಾನ ಹೇಳತಾನ ದಂಡಿಗಿ
ಭೂಮಿಗಿ ಕಿವಿಯ ಹಚ್ಚಿ ಕಾಲ ಸಪ್ಪಳ ಕೇಳ್ಯಾನಾಗ
ಹೋಗ ಬ್ಯಾಡರಿ ತಮ್ಮಗಳಿರಾ ರಾಯಣ್ಣ ಬಂದ ಅಂತ ಹೇಳ್ಯಾನಾಗ
ಇಷ್ಟು ಅಂದು ಒಡ್ಡರ ಯಲ್ಲಾ ದಂಡಿನೆದುರಿಗಿ ಬಂದಾನಾಗ
ದಂಡಿನೆದುರಿಗಿ ಬಂದು ಯಲ್ಲಣ್ಣ ಕೈಮುಗಿದು ನಿಂತಾನಾಗ
ಬರುವ ಗುರ್ತಾ ಹೇಳತೀನಿ ಕಾಲಸಪ್ಪಳ ಮಾಡಬ್ಯಾಡ್ರೀಗ
ಇಷ್ಟು ಅನ್ನುದು ರಾಯಣ್ಣ ಕೇಳಿ ಕುಲುಕುಲು ನಕ್ಕಾನಾಗ
ನನ್ನ ಬುದ್ಧಿಯುಳ್ಳ ಒಡ್ಡರ ಯಲ್ಲಣ್ಣ ಮುಂದಕ ಬಾರೋ ಈಗ
ಮುಂಡಾಸ ಕೈಯಿಲೆ ತಗಿದು ಯಲ್ಲಣ್ಣಗ ಹಾಕಿದಾನಾಗ
ಬುದ್ಧಿಯುಳ್ಳ ಯಲ್ಲಣ್ಣ ನಿನಗ ಒಪ್ಪತತಿ ಮುಂಡಾಸೀಗ
ದವಡಾಸಿ ದಂಡು ಬಂತೋ ಬಾಳೇಕುಂದದ ಕೊಳ್ಳಕ್ಕಾಗ
ಬಿಚ್ಚಗತ್ತಿ ಚನಬಸ್ಯಾ ತಮ್ಮಾ ಮುಂದಕ ಬಾರೋ ಬಹಾದ್ದೂರಾ
ಮುಂಡಾಸಾದಾನ ಗುಂಡಗಡಗಿ ಕೊಟ್ಟಾನ ಚನಬಸಣ್ಣಗಾ
ಅವರಿಗಿಷ್ಟು ಮಾಡುದೆಲ್ಲಾ ಗಜವೀರ ನೋಡಿಕೊಂತಾನಾ
ಚಟ್ಟನ ಚೀರಿ ಗಜವೀರ ಮುಂಗೈ ಕಡಕೊಂತಾನಾಗ
ಇನ್ನ ಮೂರ ದಿವಸಕ ಜಗಳದ ಮಾರಿ ಬೇಕ ಯಣ್ಣಾ ನನಗ
ಬಾಳೇಕುಂದದ ಗುಡ್ಡಾಕಿತ್ತು ಇಡತೇನಿ ಯಣ್ಣಾ ಈಗ

ಇಷ್ಟ ಕೇಳಿ ರಾಯಣ್ಣಾ ತಾನು ಸಮಾಧಾನ ಹೇಳ್ಯಾನ ಗಜವೀರಗ
ನನ್ನ ರಕ್ತ ಮಾನ್ಯದ ಹೊಲಾ ಜೋಳಾ ಒಕ್ಕಲೆ ತಮ್ಮಾ ಈಗ
ಜೋಳಾ ಒಕ್ಕಿ ಹಗೇಕ ಹಾಕಿ ಹೋಗುನಂತಾನ ರಾಯಣ್ಣಾಗ
ಅಷ್ಟು ಹೊತ್ತಿಗೆ ಗಜವೀರಾ ಕೇಳುತ್ತಿದ್ದಾನು ರಾಯಣ್ಣಾಗ
ಯಾರ ಭರವಸಿ ಯಾರಿಗೆ ಆಣಿ ಮಾಡಬೇಕು ಕಕ್ಕೇರಿಯೊಳಗ
ಕಾಳಿ ಭೀಮಣ್ಣಾ ನೀನು ಕರ್ಣಿ ಹಿಡಿಯಲೇ ತಮ್ಮಾ ಈಗ
ಇದು ಮಾತು ಖರೆಐತಿ ನಡಿರಂತಾನು ರಾಯಣ್ಣಾಗ
ಒತ್ತರದಿಂದ ದಂಡು ಬಂತು ಕಕ್ಕೇರಿಯ ತುರಮಂದ್ಯಾಗ
ಬಿಷ್ಟೆವ್ವನ ಗುಡಿಮುಂದ ಸುಮ್ಮನೆ ನಿಂತಿತು ದಂಡೆಲ್ಲಾಗ
ಅಷ್ಟ ಹೊತ್ತಿಗೆ ದಂಡಿಗೆಲ್ಲಾ ಹೇಳುತಿದ್ದಾನು ಗಜವೀರಾಗ
ಯಾಕೋ ಯಾಕೋ ತಮ್ಮಗಳಿರಾ ಸುಮ್ಮನೆ ನಿಂತಿರುತಾನಾಗ
ಇಷ್ಟ ಕೇಳಿ ರಾಯಪ್ಪ ತಾನು ತಯಾರ ಮಾಡಕ್ಹತ್ಯಾನಾಗ
ಕರಿಯ ಕಂಬಳಿಯ ಮಡಚಿ ಗದ್ದಗಿ ಹಾಕತಿದ್ದಾ ರಾಯಣ್ಣಾಗ
ನಡಕಟ್ಟಿ ರಾಯನ ದಂಡ ತಯ್ಯಾರಾದೀತು ಗುಡಿಯೊಳಗ
ಕತ್ತಿ ಮುಟ್ಟಿ ರಾಯಣ್ಣನ ದಂಡು ಆಣಿ ಮಾಡಾಕ ಹತ್ತಿತಾಗ
ನಿನ್ನ ಮ್ಯಾಲ ಎಳ್ಳಷ್ಟು ಎರಡಿಲ್ಲೊ ಗಜವೀರಾ ನಾನೀಗ

**||ಇಳುವು||**

ಹಿಂಗ ಕತ್ತಿ ಮುಟ್ಟಿ ಆಣಿ ಮಾಡಿತು ದಂಡೆಲ್ಲಾಗ
ಹಿಂದಿನಿಂದ ಗಜವೀರ ತಾನು ಆಣಿ ಮಾಡುತ್ತಿದ್ದನಾಗ
ಇದರಾಗ ಫಿತೂರಿ ಮಾಡಿದವನ ಗುದ್ದಿ ಕೊಲ್ತೇನಿ ನೆತ್ತಿಮ್ಯಾಗ
ಇದರಂತೆ ಕತ್ತಿ ಮುಟ್ಟಿ ಆಣೆ ಮಾಡಲಾದ ಗಜವೇರಾಗ
ಅವರ ಸಂದ ಉಳದೀತ್ರೆಷ್ಟಾ ಕಕ್ಕೇರಿಯ ತುರಮಂದ್ಯಾಗ
ದಾತರಿಲ್ಲದಂತಾ ಜಗಳಾ ಯಾತಕಪ್ಪಾ ರಾಯಾ ನಿನಗ
|| ಬೆಳಗಾಂವಿ ಜಿಲ್ಹಾ ಪೈಕಿ .... ಒನೆಯ ಚೌಕ ||

ಅಷ್ಟೆಮಾಡಿ ರಾಯಣ್ಣ ತಾನು ದಂಡು ಕರಕೊಂಡ ಬಂದಾನಾಗ
ತೀವ್ರದಿಂದ ಬಂದೀತ ದಂಡು ಬಾಳೇಕುಂದದ ಕೊಳದಾಗ
ಬಾಳೇಕುಂದದ ಕೊಳ್ಳಕ ಬಂದು ಹೇಳತಿದ್ದಾನ ರಾಯಣ್ಣಾಗ
ನನ್ನ ಬುದ್ಧಿಯುಳ್ಳ ಯಲ್ಲಣ್ಣ ಹುಷಾರಿರಪ್ಪಾ ದಂಡಿನೊಳಗ
ಮಂಗಳವಾರ ಮಧ್ಯಾಹ್ನಕ್ಕೆ ದಂಡ ಕರಕೊಂಡ ಬಾರೋ
ಅಷ್ಟು ದಂಡಿಗೆ ಕಣ್ಣ ಹಬ್ಬ ಮಾಡಸ್ತೇನಿ ಅಂತಾನೋ
ದಂಡಿಗೆ ಕೈ ಮುಗಿದ ಹಿಂದಕ ರಾಯಣ್ಣ ತಿರಗಿದ್ದನಾಗ
ದವಡಾಸಿ ಬಂದಾನು ಬಂಟಾ ಸಂಗವಳ್ಳಿ ಸ್ಥಳದಾಗ
ತಾನು ಕೂಡ್ರುವ ಕಟ್ಟಿ ನೋಡಿ ಕಣ್ಣತುಂಬ ನೀರತಂದಾನೊ

ತಳವಾರ ಫಕೀರ ತಮ್ಮಾ ತೀವ್ರದಿಂದ ಬಾರೋ
ಬಾಳ್ಯಾನ ಮೂವತ್ತೈದ ರೂಪಾಯಿ ಕೊಡತೇನಿ ಚಾವಡಿಯೊಳಗ
ಕುಲಕರ್ಣಿ ಬಾಳ್ಯಾನ ಕರಕೊಂಡ ಬಾರೋ ಚಾವಡಿಯೊಳಗ
ಇಷ್ಟೆ ಕೇಳಿ ಫಕೀರ ತಾನು ಊರ ಒಳಗ ಹೊಕ್ಕನಾಗ
ಅಪ್ಪಪ್ಪ ಬಾಳಪ್ಪನವರ ಅದಿರೇನ್ರೆಪ್ಪಾ ಮನಿಯಾಗ
ಬಾರೋ ಫಕೀರಾ ಯಾಕ ಕರಿಯಾಕ ಬಂದ್ಯೋ ನನಗ
ಫಕೀರ ಕೇಳಿ ತಾನು ಹೇಳತ್ತಿದ್ದಾನು ಬಾಳಣ್ಣಗಾಗ
ಕಿತ್ತೂರ ಮಲ್ಲಸರ್ಜನ ಹುಲಿಯ ಕುಂತೈತಿ ಚಾವಡಿಯೊಳಗ
ನಿಮ್ಮನ್ನ ಕಂಡಗಳಿಗೆ ಮುರಕೊಂಡ ತಿಂತೈತೀಗ
ನಿಮ್ಮ ಮೂವತ್ತೈದ ರೂಪಾಯಿ ಇಟಕೊಂಡು ಕುಂತಾನೀಗ
ಇದನ್ನು ಕೇಳಿ ಬಾಳಪ್ಪ ತಾ ಉಚ್ಚಿಹೋದಾ ಧೋತರದಾಗ
ಸುಳ್ಳ ಮನಿಯಾಗ ಇಲ್ಲಂತ ಹೇಳೋ ಹೋಗೋ ನೀನೀಗ
ಫಕೀರ ತಾನು ಒತ್ತರದಿಂದ ಓಡಿ ಬಂದಾನ ಚಾವಡೀಗಿ
ಅಂಜಿ ಹೇಳಲ್ಯೋ ಅಳುಕಿ ಹೇಳಲ್ಯೋ ಯಣ್ಣಾ ನಿನಗ
ಅಂಜ ಬ್ಯಾಡಲೇ ತಮ್ಮಾ ನೆಟ್ಟಗ ಹೇಳು ಅಂತಾನಾಗ
ಅಂಜಿ ನಡುಗಿ ಫಕೀರಾ ಖರೇ ಮಾತ ಹೇಳತಿದ್ದಾನಾಗ
ಮನಿಯಾಗ ಅದಾನು ಬಾಳ್ಯಾ ಇಲ್ಲಂತೆ ಹೇಳಂದಾನು ನನಗ
ಇಷ್ಟ ಕೇಳಿ ರಾಯಣ್ಣ ಸುಮ್ಮನಾದನು ಚಾವಡಿಯೊಳಗ
ಬಿರಿಬಿರಿ ಬಂದಾನು ಬಂಟಾ ತನ್ನ ಅರಮನಿಗಿ ಆಗ
ಮಗನ ಮಾರಿ ಕಾಣದ ತಾಯಿ ಆರ ತಿಂಗಳಾತ್ತಾಗ
ಯವ್ವಾ ಕೆಂಚವ್ವ ತಾಯಿ ಕದಾತಗಿಯವ್ವಾ ರಾಯಣ್ಣಗ
ಮಗನ ದನಿಯ ಕೇಳಿ ಕೆಂಚವ್ವ ಕದಾತಗದಾಳಾಗ
ಅವಸರದಿಂದ ಚಕಮಕಿ ಕಡಿದು ದೀಪಾ ಹಚ್ಚೆಳ್ರೆಪ್ಪಾ ಆಗ

**||ಇಳುವು||**

ಯಾಕೋ ರಾಯಣ್ಣ ಇಷ್ಟ ದಿನಾ ತಡಾ ಯಾಕೋ ನಿನಗ
ಇಷ್ಟ ಕೇಳಿ ರಾಯಣ್ಣ ತಾನು ಕಣ್ಣೀಗಿ ನೀರತಂದಾನಾಗ
ಸುಳ್ಳ ತಾಯಿಗಿ ಸಮಾಧಾನ ಹೇಳತಿದ್ದಾನು ರಾಯಣ್ಣಾಗ
ಹಸಿವು ಬಹಳ ಆಗಿತಿತಿ ಅಡಗಿ ಮಾಡ ಅಂತಾನಾಗ
ಇಷ್ಟ ಹೊತ್ತಿಗಿ ವೈರಿ ಬಾಳ್ಯಾ ಪಿತೂರಿ ನಡಿಸ್ಯಾನ ಸಂಗೋಳ್ಯಾಗ
ಅವರ ಸಂದ ಉಳದೀತ್ರೆಪ್ಪಾ ಸಂಗೊಳ್ಳಿಯ ಸ್ಥಳದಾಗ
ದಾತರಿಲ್ಲದಂತಾ ಜಗಳಾ ಯಾತಕಪ್ಪಾ ರಾಯಾ ನಿನಗ
|| ಬೆಳಗಾಂವ ಜಿಲ್ಹಾ ಪೈಕಿ ..... ಲನೆಯ ಚೌಕ ||

ತಳವಾರ ಫಕೀರ ಲಗುಮಾಡಿ ಬಾರೋ ನೀನೀಗ
ತುಡಗ ರಾಯಾ ಒಬ್ಬನೆ ಬಂದು ಸಿಕ್ಕಾನ ಸಂಗೋಳ್ಯಾಗ
ಸಂಪಗಾಂವಿಗೆ ಲಗುಮಾಡಿ ಹೋಗಿ ಬರಬೇಕೀಗ
ಹೇಳಿ ಬಾಳಣ್ಣ ತಾನು ಲಗುಮಾಡಿ ಲಕೋಟಿ ಕೊಟ್ಟಾನ ಕೈಯಾಗ
ಕಟ್ಟ ಒಡೆದು ಸುಭೇದಾರ ಕಾಗದ ನೋಡಿಕೊಂತಾನಾಗ
ಕಾಗದನೋಡಿ ಸುಭೇದಾರ ಮುಂಗೈ ಕಡಕೊಂತಾನಾಗ
ಏಳ ಮಂದಿ ಬಾರಿನ್ನವರ್ನ ಕೊಟ್ಟು ಕಳಿಸ್ಯಾನ ಸುಭೇದಾರಾಗ
ತೀವ್ರದಿಂದ ಕುಲಕರ್ಣಿ ಮನೆಗೆ ಬಂದಾರವರಾ
ಹಲವು ತರದ ಅಡಗಿ ಮಾಡಿ ಉಣಿಸ್ಯಾನ ಅವರೀಗೆ
ಸಂಜಿ ತಾಸೊತ್ತ ಇತ್ತಂತ ಊರಾಗ ತಿರುಗ್ಯಾಡತಿದ್ದರಾಗ
ಊರಾನ ಗಂಡ ಹೆಣ್ಣ ಜನಾ ಮಾತಾಡತ್ತಿದ್ದರಾಗ
ರಾಯಪ್ಪಣ್ಣನ ಹೊಡಿಯಲಾಕ ಬಂದಾರು ಈ ಜನಾ
ಏಳ ಮಂದಿ ಬಾರಿನವರು ಕೂಡಿ ಕೇಳತ್ತಿದ್ದರ ಜನರನ್ನಾ
ಆ ತುಡುಗ ರಾಯಾನ ಹೊಲದ ದಾರಿ ತೋರಿಸರಿ ನಮಗಾ
ದ್ಯಾವಲಾರ್ಪದ ಮಾರ್ಗದೊಳು ಕಳ್ಳಿ ಬೆಳೆದೈತಿ ನೋಡಾ
ಇದ ಈಗ ಸಂಜಿ ಕಡೆ ಹೊಲಕ ಬರತಾನಂತಾರಾಗ
ಇಷ್ಟೆಕೇಳಿ ಏಳು ಮಂದಿ ದವಡಾಸಿ ಬಂದಿದ್ದರಾಗ
ತೀವ್ರದಿಂದಲಿ ಬಂದಾರವರು ದ್ಯಾವಲಾರ್ಪದ ಮಾರ್ಗದಾಗ
ನಡಕಳ್ಳಿಗೆ ಬಂದು ಅವರು ಸುಮ್ಮನೆ ಕುಂತಾರಾಗ
ಅಷ್ಟೊತ್ತಿಗೆ ಕೆಂಚವ್ವ ತಾಯಿ ಅಡಗಿ ತೈಯಾರ ಮಾಡ್ಯಾಳಾಗ
ಅಡಗಿ ಆಗೇತಿ ರಾಯಣ್ಣ ಊಟ ಮಾಡಬಾ ಅಂತಾಳಾಗ
ಅಣ್ಣ ಸಿದ್ದಪ್ಪ ಬಂದರ ಊಟ ಮಾಡತೇನಿ ಹಡದವ್ವಾ
ಕೇಳಿ ಕೆಂಚವ್ವ ತಾನು ಹೇಳತಿದ್ದಾಳು ರಾಯಣ್ಣಗಾ
ಅಣ್ಣ ಸಿದ್ದಪ್ಪ ಅದಾನು ರಕ್ತಮಾನ್ಯದ ಹೊಲದಾಗ
ಬುಟ್ಟಿತುಂಬ ಹಡದವ್ವ ಹೊಲಕ ಹೋಗತೇನಂತಾನಾಗ
ಅವಸರದಿಂದ ಕೆಂಚವ್ವ ಬುಟ್ಟಿ ತುಂಬಿ ಕೊಟ್ಟಾಳಾಗ
ಸಂಜಿ ಗಳಿಗಿ ಹೊತ್ತಿರತ ಹೊಲದ ದಾರಿ ಹಿಡಿದನಾಗ
ತುರ್ತದಿಂದ ಬಂದಾನ ಬಂಟಾ ದ್ಯಾವಲಾರ್ಪದ ಮಾರ್ಗದಾಗ
ಅಲ್ಲಿ ಪಾಂಡವರ ದೇವರನ್ನ ನೋಡಿದಾನಾಗ
ಬುಟ್ಟಿ ಇಳಸಿ ರಾಯಣ್ಣ ಬೇಡಿಕೊಳ್ಳಾಕತ್ಯಾನಾಗ
ನಿಮ್ಮ ವರವ ನನ್ನ ಮೇಲೆ ಆಗಬೇಕಂತಾನಾಗ
ನಮ್ಮ ರೋಗಪ್ಪನವರ ದಯಾ ಇರಬೇಕ ನನ್ನಮ್ಯಾಗ
ಅದರಂತೆ ರಾಯಾ ಬೇಡಿಕೊಂತಾನ ಪಾಂಡವರಿಗಾಗ
ದ್ಯಾವಲಾರ್ಪದ ಮಾರ್ಗ ಬಿಟ್ಟು ಅಡ್ಡಮಾರ್ಗ ಹಿಡಿದನಾಗ
ತುರ್ತದಿಂದ ಬಂದಾನ ರಾಯಣ್ಣ ರಕ್ತಮಾನ್ಯದ ಹೊಲದಾಗ
ರಕ್ತಮಾನ್ಯದ ಹೊಲಕ ಬಂದು ಬುಟ್ಟಿ ಇಳಿಸ್ಯಾನ ಗುಡಸಲದಾಗ

ಅಣ್ಣ ಸಿದ್ದಪ್ಪನ ಕರಕೊಂಡ ಊಟ ಮಾಡತಾನ ಕಣದಾಗ
ಊಟ ಮಾಡಿ ರಾಯಣ್ಣ ತಾನು ಹೇಳತಿದ್ದಾನ ಸಿದ್ದಣ್ಣಗಾಗ
ದಂಡ ಬಹಳ ಕೂಡೇತಿ ಬಾಳೇಕುಂದದ ಕೊಳದಾಗ
ಸಣ್ಣ ದೊಡ್ಡ ಮಂದಿನೆಲ್ಲಾ ಹಚ್ಚಪ್ಪಾ ಯಣ್ಣ ಕೆಲಸಕ್ಕಾ
ಮಂದಿ ಹಚ್ಚಿ ತೆನೆ ಮುರಸಿ ಮಾಡಸಪ್ಪಾ ರಾಸಿನಾ
ಹೆಣ್ಣ ಮಕ್ಕಳ ಬಂದರ ಮರೆಯದ ಕೊಡು ಜೋಡ ಕೂಲಿನಾ
ಬೇಕಾದಷ್ಟ ಗೋದಿ ಬ್ಯಾಳಿ ತಂದಾ ಮಾಡಪ್ಪ ಕಣಾ ಹಬ್ಬಾನಾ

**||ಇಳುವು||**

ಚೆಟ್ಟಾನಿಯಂತಹ ಗಜವೀರ ಇರತಾನ ದಂಡಿನ್ಯಾಗ
ಅಂವಗ ತಿನ್ನಾಕ ಕೋಡೋ ಬುಂದೇ ಬಾಸುರಿನಾ
ಬಿಚ್ಚಗತ್ತಿ ಚನಬಸವಣ್ಣನ ಫಳಾರ ಮರತಿಯೋ
ಅವಾಗ ಫಗರ ತಂದ ಕೊಡೋ ಬೇಡಿದ ಉತ್ತತ್ತಿನಾ
ಅವರ ಸಂದ ಉಳದೀತ್ರೆಪ್ಪಾ ರಕ್ತಮಾನ್ಯದ ಹೊಲದಾಗ
ದಾತರಿಲ್ಲದಂತಾ ಜಗಳಾ ಯಾತಕಪ್ಪಾ ರಾಯಾ ನಿನಗ
|| ಬೆಳಗಾಂವ ಜಿಲ್ಹಾ ಪೈಕಿ .... ೯ನೆಯ ಚೌಕ ||

ಅಷ್ಟ ಹೇಳಿ ರಾಯಣ್ಣ ತಾನು ಹಿಂಣದಕ್ಕ ತಿರುಗಿದ್ದಾನಾಗ
ತುರ್ತದಿಂದ ಬಂದಾನು ಬಂಟಾ ಹುಲಗಲಿ ಹಳ್ಳದ ದಾರಿಯೊಳಗ
ಹವಣಿ ಕೊಡಾ ತಕ್ಕೊಂಡು ಸಿದ್ದಪ್ಪಾ ಒರತಿ ನೀರಿಗೆ ಬಂದಾನಾಗ
ಒರತಿಯೊಳಗ ಕೊಡಾ ಇಟ್ಟ ಅಡರಾಸಿ ಓಡಿ ಬಂದಾನಾಗ
ಓಡಿ ಬಂದು ತಮ್ಮನ ಮುಂದು ಹೇಳತ್ತಿದ್ದಾನ ಸಿದ್ದಣ್ಣಾಗ
ಯಾರೋ ಏಳಮಂದಿ ಜನರು ಕಳ್ಯಾಗ ಕುಂತಾರೀಗ
ಇಷ್ಟ ಕೇಳಿ ರಾಯಣ್ಣ ಸಿಟ್ಟ ಭಾಳ ಆದಾನೋ ತಾನಾ
ಯಾರ ಯಾಕ ಆಗ ಬಲ್ಲರು ಕಣಕ ಹೋಗಪ್ಪಾ ನೀನಾ
ಅಣ್ಣಗ ಹೇಳಿ ರಾಯಣ್ಣ ಹಿಂದಕ ತಿರಗಿದನು ತಾನಾ
ತೀವ್ರದಿಂದ ಬಂದಾನು ಬಂಟಾ ಸಂಗವಳ್ಳಿ ಸುಡಗಾಡಕ್ಕಾ
ಹರಕ ಕೋರಿ ತಕ್ಕೊಂಡು ತೆಲಿಮ್ಯಾಲ ಸುತಕೊಂಡನಾಗ
ಮುದುಕನ ವೇಷ ಹಾಕಿಕೊಂಡು ರಾಯಾ ಸಿಂಗಾರಾದಾನ ಸುಡಗಾಡದಾಗ
ಕಳ್ಳಿಯ ಸಮೀಪ ಬಂದು ರಾಯಾ ಬಾರಿ ನೆಳ್ಳತ್ತಿದ್ದನಾಗ
ಅವರ ಸನಿಯಾಕ ಬಂದು ಬಂಟಾ ಬಲಬಾರೆ ಕೆಮ್ಮುತ್ತಿದ್ದನಾಗ
ಆಹಾ ಅಂತ ಏಳಮಂದಿ ಸರಾಬರಾ ಕತ್ತಿ ಹಿರಿದಾರಾಗ
ಎಲಾ ಬ್ಯಾಡ ಸೂಳೇಮಗನ ಎಷ್ಟ ಹೆದರತಿಲೆ ನಮಗ
ಆ ತಂಡಗ ರಾಯಾ ಬಂದನಂತ ಕಡಿಯತಿದ್ವಿ ನಾವು ನಿನಗ
ಆ ತುಡಗ ರಾಯಾ ಬರುವ ಸುದ್ದಿ ತಿಳಸ್ತಿ ಏನೋ ನಮಗ

ರೋಖ ಐದನೂರು ರೂಪಾಯಿ ಕೊಡತೀವ ನಿನಗ ಈಗ
ಇಷ್ಟ ಕೇಳಿ ರಾಯಪ್ಪ ತಾನು ಹೇಳುತಿದ್ದಾನ ರಾಜೇಸಾಹೇಬಗ
ಆ ತುಡಗ ರಾಯಾ ಇರುವುದು ನನಗೇನ ಗೊತ್ತಪ್ಪ ಈಗ
ನನಗ ತೆಲಿಬಾಗೇತಿ ಬತ್ತಿ ಕೊಡರೆಂತಾನಾಗ
ಏಳಮಂದಿ ಸೇದಿ ಕರಬತ್ತಿ ಕೈಯಾಗ ಕೊಟ್ಟರಾಗ
ಸುಳ್ಳ ಸೇದಿದಂಗ ಮಾಡಿ ಇಟ್ಟ ಬಿಟ್ಟಾನೋ ಕಲ್ಲಿನ ಮ್ಯಾಗ
ಕಲ್ಲಿನ ಮ್ಯಾಲೆ ಗುರ್ತಾಮಾಡಿ ಇಟ್ಟ ಮೇಲಕ್ಕೆದ್ದಾನಾಗ
ರಾಜೇಸಾಹೇಬ ಬಂದ ಮತ್ತು ಕೇಳತಾನ ರಾಯಣ್ಣಗ
ಆ ತುಡಗ ರಾಯಾ ಸಿಕ್ಕರ ಈಗ ಕಡಿತೀವಿ ಗೆಬ್ಬಿಯಮ್ಯಾಗ
ಇಷ್ಟ ಕೇಳಿ ರಾಯಪ್ಪ ತಾನು ಮತ್ತ ಕೇಳತಿದ್ದಾನಾಗ
ಯಾಕ ಆಗವಲ್ಲದರೆಪ್ಪ ತಿರುಗಿ ಬಂದ ಹೇಳತೀನಿ ನಿಮಗ
ಕೆಮ್ಮಿಕೊಂತ ನೆಳ್ಳಿಕೊಂತ ಮುಂದಕ ಬಂದಾನಾಗ
ಒಂದ ಬಾಂದಿನ ಸರಿಗ್ಗೆ ಬಂದು ಹಿಂದಕ ತಿರಿಗಿದ್ದನಾಗ
ತೆಲಿಮ್ಯಾಲಿನ ಕೋರಿ ತೆಗೆದು ಚೆಲ್ಲಿ ಬಿಟ್ಟಾನು ರಾಯಣ್ಣಾಗ
ಹೊಳಿಯ ಒಡಲೊದೊಳಗ ರಾಯಾ ಜಳಕಾ ಮಾಡಾಕತ್ಯಾನಾಗ
ಗುಡಗಿ ಚೆಣ್ಣ ತೊಟ್ಟು ಮ್ಯಾಲೆ ಹಿಡಿಗಾವಿ ಧರಸಿದನಾಗ
ಹಡ್ಡದ ಮಟಾ ಶಮನಾ ಬಿಟ್ಟು ಒತ್ತಿ ಸುತ್ಯಾನ ಮುಂಡಾಸಾಗ
ಕತ್ತಿ ಢಾಲು ಕೈಯಾಗ ಹಿಡಿದು ತೈಯಾರಾಗತಾನು ಹೊಳಿಯಾಗ
ಕಳ್ಳಿ ಸನಿಯಾಕ ಬಂದು ರಾಯಾ ಬಲುಬಾರಾ ಜಿಗದಿದ್ದನಾಗ
ಮುಂಬರುವ ಬಂಟಾ ಯಾಂವ ಅದಿರಿ ಬರ್ರಿ ಅಂತಾನಾಗ
ಇಷ್ಟ ಕೇಳಿ ಏಳು ಮಂದಿ ಮೇಲಕೆದ್ದಾರು ಆಗಿಂದಾಗ
ಮೇಲಕ್ಕೇಳುದರೊಳಗ ಆರ ಮಂದಿನ ಕಡದಾನಾಗ
ಯಾಕೋ ರಾಜೇಸಾಹೇಬ ಬಲುಬಾರೆ ಬೈತಿದ್ದಿ ನನಗ
ಇಷ್ಟ ಕೇಳಿ ರಾಜೇಸಾಹೇಬ ಹೇಳಿಕೊಂತಾನು ರಾಯಣ್ಣಗಾಗ
ದೇವರಾಣಿ ದೊಡ್ಡಪ್ಪಗ ನಿನಗ ಭೇದ ಇಲ್ಲಂತಾಗನಾಗ
ಕೇಳಿ ರಾಯಣ್ಣ ತಾನು ಸಿಟ್ಟಬಾಳ ಆದಾನೊ ರಾಜಾಗ
ನಿನ್ನ ಹೆಣತಿ ಗಂಡಾ ನಾನು ಬತ್ತೀ ಇಟ್ಟೇನಿ ನೋಡೀಗ
ಬತ್ತಿ ನೋಡಿದ ಬಳಿಕ ಬಾಯಿ ಹೋತೋ ಸಾಂಬದಾಗ
ಇವಾರು ಹೆಣಾ ಹೊತ್ತಕೊಂಡ ಹೋಗಬೇಕ ನೀನೀಗ
ಇವಾರು ಹೆಣಾ ಹ್ಯಾಂಗ ನೆಗಿವ್ಯಾವ ಯಣ್ಣಾ ನನಗ

**||ಇಳುವು||**

ಅಂಜಿ ನಡುಗಿ ರಾಜೇಸಾಹೇಬ ಹೇತಕೊಂಡಾನ ಕಚ್ಯಾಗ
ವೈರಿ ಬಾಳ್ಯಾನ ಮನಿಗಿ ಹೋಗಿ ಸುದ್ದಿ ಹೇಳಲೇ ಈಗ
ಮಂಗಳವಾರ ಮಧ್ಯಾಹ್ನ ಬರತಿನ್ಹಂತ್ಹೇಳ ಬಾಳ್ಯಾಗ

ಸುದ್ದಿ ಹೇಳಾಕ ನಿನ್ನೊಬ್ಬನ ಜೀವಂತ ಬಿಡತೀನೀಗ
ಅವರ ಸಂದ ಉಳಿದೀತ್ರೆಪ ದ್ಯಾವಲಾರ್ಪದ ಮಾರ್ಗದಾಗ
ದಾತರಿಲ್ಲದಂತಹ ಜಗಳಾ ಯಾತಕಪ್ಪ ರಾಯ ನಿನಗ
॥ ಬೆಳಗಾಂವ ಜಿಲ್ಹಾಪೈಕಿ …. ೧೦ನೆಯ ಚೌಕ ॥

ಇಷ್ಟ ಹೇಳಿ ರಾಯಪ್ಪ ಹಿಂದಕ ತಿರುಗಿದನಾಗ
ಅಷ್ಟ ಹೊತ್ತಿಗೆ ಯಲ್ಲಣ್ಣ ದಂಡ ಕರಕೊಂಡ ಬಂದಾನಾಗ
ದಂಡಿನೆದುರಿಗಿ ಹೋಗಿ ರಾಯಾ ಕೈಮುಗಿದ ನಿಂತಾನಾಗ
ನಾವು ಬೈಲಿಗೆ ಬೀಳತೀವಿ ಕಾಲ ಸಪ್ಪಳ ಮಾಡಬ್ಯಾಡ್ರೀಗ
ಒತ್ತರದಿಂದ ಬಂದೀತು ದಂಡು ರಕ್ತಮಾನ್ಯದ ಹೊಲದಾಗ
ಗಟ್ಟಿಯುಳ್ಳ ಗಜವೀರಗ ಊಟಕ್ಕ ಕೊಟ್ಟಾ ರಾಯಣ್ಣಾಗ
ಇಂಬಾಗಿ ಮಡ್ಡಿಯ ಮ್ಯಾಲ ಕುಂತ ಊಟ ಮಾಡೀಗ
ಬಿಚ್ಚಗತ್ತಿ ಚವಬಸಣ್ಣ ಫರಾಳ ಮಾಡೋ ಗುಡಿಸಿಲದಾಗ
ಅಷ್ಟ ಹೊತ್ತಿಗೆ ಸಂಗೋಳ್ಯಾಗ ಫಿತೂರಿ ನಡಿಸ್ಯಾನೊ ಬಾಳ್ಯಾ
ಮ್ಯಾದಾರ ಪರಶ್ಯಾನ ಮಗನ ಹುರುಪು ಬಹಳಿತ್ತೊ ಊರಾಗ
ಕುಲಕರ್ಣಿ ಬಾಳ್ಯಾನ ಕಡೆ ವೀಳೆ ಹಿಡದಿದ್ದನಾಗ
ರಾಯಾನ ಚಂಡ ತರತೇನಂತ ವಚನ ಕೊಟ್ಟಾನ ಬಾಳ್ಯಾಗ
ರೋಖ ಐದನೂರ ರೂಪಾಯಿ ತಕ್ಕೊಂಡಾನೋ ಕೈಯೊಳಗ
ಕತ್ತಿ ಢಾಲು ಕೈಲಿ ಹಿಡಿದು ಸಿಂಗಾರಾಗತಾನ ಮನಿಯೊಳಗ
ಒತ್ತರದಿಂದ ಬಂದಾನ ಹಣಮಂತ ರಕ್ತಮಾನ್ಯದ ಕಣಕಾಗ
ಅಷ್ಟೋತ್ತಿಗೆ ರಾಯಾನ ದಂಡ ಊಟಕ ಕುಂತಿತ್ತ ಕಣದಾಗ
ಅಷ್ಟ ಮಂದಿಗೆ ನೀಡಿಕೊಂತ ಒಬ್ಬನೇ ಉಳಿದಾನ ರಾಯಣ್ಣಾಗ
ಕಣಕಿ ಇಕ್ಕಲ ಹತ್ತಿರ ರಾಯಾ ಸುಮ್ಮನೆ ಕುಂತಿದ್ದಾಗ
ತೊಗರಿ ಸಾಲಿನೊಳಗ ಡೊಗ್ಗಿ ಬರತಿದ್ದ ಹನಮಂತನಾಗ
ತೊಗರಿ ಸಾಲ ಅಗಳಾಡುದು ರಾಯಣ್ಣ ಕಣ್ಮುಟ್ಟ ನೋಡಿದನಾಗ
ಸನಿಯಾಕ ಬಂದಗಳಿಗ್ಗೆ ರಾಯಾ ಜುಟ್ಟಲ ಹಿಡಿದಾನ ಹಣಮ್ಯಂದಾಗ
ಜುಟ್ಟಲ ಹಿಡಿದ ಗಳಿಗ್ಗೆ ಹನಮಾ ಹೇಳತಿದ್ದಾನ ರಾಯಣ್ಣಗ
ಹಣಮಂತನ ಹರಕಿ ಕೊಡಲು ಹಿಡಿಯಬ್ಯಾಡೋ ಎಣ್ಣಾ ಈಗ
ನಿನ್ನ ಮಗನಾಗಿ ಇರತೀನಿ ಬಿಟ್ಟ ಬಿಡೋ ರಾಯಣ್ಣಾ ನನಗ
ಇವರು ಗದ್ದಲ ಮಾಡುವದೆಲ್ಲಾ ಗಜವೀರಾ ಕೇಳ್ಯಾನ್ರೀಗ
ಗಟ್ಟಿ ಹಿಡದಿರೋ ರಾಯಣ್ಣ ಗುದ್ದಿ ಕೊಲ್ತೀನಿ ನೆತ್ತಿಮ್ಯಾಗ
ಕೆಟ್ಟ ಹಬಸ್ಯಾನ ದನಿ ಕೇಳಿ ಹೇತಕೊಂಡಾನೋ ಹಣಮಂತಾಗ
ಗಜವೀರ ಬಂದರ ಇವನು ದುಲ್ಲಂತಾನು ರಾಯಣ್ಣಗಾಗ
ಕತ್ತಿ ಢಾಲು ಕಸಕೊಂಡು ಒದ್ದ ಬಿಟ್ಟಾನು ಮುಕಳಿ ಮ್ಯಾಗ
ಓಡಿ ಹೋಗಿ ಬಾಳ್ಯಾನ ಮುಂದ ಹೇಳತಿದ್ದಾನು ಹನುಮಂತಾಗ
ನಮ್ಮ ತಾಯಿ ಹೊಟ್ಟೆ ತನ್ನಗಿತ್ತು ತಿರುಗಿ ಬಂದಾಂಗೋ ನಾನಾ

ನೀನು ರೂಪಾಯಿ ಕೇಳಿದರ ಕೊಡತೇನಿ ತಿರುಗಿ ಈಗ
ಅಷ್ಟೊತ್ತಿಗೆ ರಾಯಣ್ಣನ ದಂಡು ಊಟ ಮಾಡಿತ ಕಣದಾಗ
ಅಮಟೂರ ಬಾಳಪ್ಪಗ ಹೇಳಿ ಕಳಿಸ್ಯಾನು ರಾಯಣ್ಣಾಗ
ಹತ್ತು ಹದಿನಾರ ಎತ್ತಿನ ಹಳೀಬಂಡಿ ಬರಲೆಂತಾನಾಗ
ಇದರಂತೆ ಭೀಮಣ್ಣ ಕರ್ಣಿ ಹಿಡದಾನ ಕಣದಾಗ
ಕರ್ಣಿ ಸಪ್ಪಳ ಕೇಳಿ ಬಂಡಿ ಕೊಳ್ಳಾ ಕಟ್ಯಾರಾಗ
ರಕ್ತಮಾನ್ಯದ ಹೊಲಕ ಬಂದು ಕೊಳ್ಳ ಕಟ್ಯಾರು ಬಂಡೀನಾಗ
ರಕ್ತಮಾನ್ಯದ ಕಣಕ ಬಂದು ಕೊಳ್ಳ ಹರಿದಾನು ಬಂಡಿನಾಗ
ಮುತ್ತಿಕೊಂಡು ದಂಡೆಲ್ಲಾ ಜೋಳಾ ಹೇರಿತು ಬಂಡ್ಯಾಗ
ಒತ್ತರದಿಂದ ಬಂಡೀ ಹೊಡೆದಾರು ಅಮಟೂರ ಬಾಳಪ್ಪನಲ್ಲೀಗಿ
ಗಂಗಿ-ಗೌರಿ ಅನ್ನುವ ಹಗೇದ ಬಾಯಿ ತೆಗದ ಬಿಟ್ಟಾರಲ್ಲಿ
ಮುತ್ತಿಕೊಂಡು ಹಗೆಗಳ ತುಂಬಿ ಬಿಟ್ಟಾರ ತಂದು ತಂದಲ್ಲಿಗಿ
ಜೋಳಾ ತುಂಬಿ ರಾಯಣ್ಣ ತಾನು ಹೇಳತಿದ್ದಾನ ಬಾಳಣ್ಣಗ
ನನ್ನ ಹಡದ ತಾಯಿ ಕೆಂಚವ್ವಗ ಬಹಳ ಜೋಕೆಪ್ಪ ಬಾಳಣ್ಣಾ
ನನ್ನ ತಂದಿ ಭರಮಣ್ಣನ ಶೂರತನಕ್ಕ ಅಂಜಿಕಿಲ್ಲೊ ನನಗಾ

**॥ಇಳುವು॥**

ನಾನು ತಿರುಗಿ ಬರುವುದು ಭರವಸಿ ಇಲ್ಲೋ ನನಗ
ಇಷ್ಟ ಅಂದು ರಾಯಣ್ಣ ಸಂತೋಷದಿಂದ ನೀರ ತಂದನಾಗ
ಇಂಗ್ರೇಜರನ್ನ ಹೊರಗ ಹಾಕಿದಾಗ ಸಮಾಧಾನ ನನಗ
ಮಗನಪ್ಪಿ ಕೆಂಚವ್ವ ದುಃಖ ಮಾಡತಾಳ್ರಿ ಧರಣಿ ಮ್ಯಾಗ
ತಾಯಿಗೆ ಸನಮಂತ ಹೇಳ್ಯಾನ ರಾಯಣ್ಣ ಧರಣಿಯ ಮುಟ್ಯಾಗ
ಅಷ್ಟು ಅಂದು ರಾಯಪ್ಪ ತಾನು ಪಾದಕ ಬಿದ್ದಾನಾಗ
ಅವರ ಸಂದು ಉಳದೀತ್ರಪ್ಪಾ ಅಮಟೂರ ತುರಮಂದಿಯೊಳಗ
ದಾತರಿಲ್ಲದಂತಹ ಜಗಳ ಯಾತಕಪ್ಪ ರಾಯಾ ನಿನಗ
॥ ಬೆಳಗಾಂವ ಜಿಲ್ಹಾ ಪೈಕಿ .... ೧೧ನೆಯ ಚೌಕ ॥

ತಾಯಿ ಪಾದಕ್ಕ ಬಿದ್ದು ರಾಯಾ ದಂಡ ಕರಕೊಂಡು ಹೊಂಟನಾಗ
ಒತ್ತರದಿಂದ ಬಂದೀತು ದಂಡು ಬಾಳೇಕುಂದದ ಕೊಳದಾಗ
ಬಾಳೇಕುಂದದ ಕೊಳ್ಳಕ ಬಂದು ಕೇಳತಿದ್ದಾನು ಗಜವೀರ
ವೈರಿ ಬಾಳ್ಯಾನ ಹೊಲಾ ತೋರಿಸಬೇಕೋ ಯಣ್ಣಾ ಈಗ
ಇಷ್ಟ ಕೇಳಿ ರಾಯಣ್ಣ ತಾನು ಕುಲಕುಲು ನಕ್ಕನಾಗ
ಮೊಗಲಾವಿ ಸೀಮಿ ಹುಡುಗರಿಗೆ ಕೈ ಪಂಜು ಹಚ್ಚಿರಂತಾನಾಗ
ನಡಕಟ್ಟಿ ರಾಯಣ್ಣನ ದಂಡು ತಯ್ಯಾರಾದೀತು ಕೊಳ್ಳದಾಗ
ಕಾಳಿ ಭೀಮಣ್ಣ ನೀನು ಕರ್ಣಿ ಹಿಡಿಯಲೇ ತಮ್ಮಾ ಈಗ

ತೀವ್ರದಿಂದ ಬಂದೀತ ದಂಡು ವೈರಿ ಬಾಳ್ಯಾನ ಹೊಲಕಾಗ
ವೈರಿ ಬಾಳ್ಯಾನ ಹೊಲಾ ಇವನೋಡ್ರಿ ತಮ್ಮಗಳೀರಾ ನೀವೀಗ
ಊರಾನ ಜನರನೆಲ್ಲಾ ಮಾತಾಡಿಸಿ ಬರೋಣ ತಮ್ಮಾ ಈಗ
ಬಿಚ್ಚಗತ್ತಿ ಚೆನ್ನನ ಹಿಂಬಾಲ ಕರಕೊಂತಾನಾಗ
ದವಡಾಸಿ ಬಂದಾನ ಬಂಟಾ ಸಂಗವಳ್ಳಿ ಬೇಲಿಯೊಳಗ
ಅಷ್ಟು ಹೊತ್ತಿಗೆ ರಾಯಣ್ಣನ ದಂಡು ತೈಯಾರಾದೀತ ಹೊಲದಾಗ
ಹತ್ತು ಹದನಾರಕ್ಕಡಿ ಗೂಡು ಬೆಂಕಿ ಹಚ್ಚಿ ಸುಡತಾರಾಗ
ಆ ಉರಿಯ ಬೆಳಕು ಊರಮ್ಯಾಲ ಬಿದ್ದೀತಾಗ
ಊರಾನ ಹೆಣ್ಣು-ಗಂಡು ಜನಾ ಮಾತಾಡಾಕ ಹತ್ತಿದ್ದಿತಾಗ
ಕುಲಕರ್ಣಿ ಬಾಳಪ್ಪನ ಹೊಲದ ಬೆಳಕ ನೋಡ್ರಿ ಈಗ
ಮತ್ತೆ ಮ್ಯಾದಾರ ಪರಸ್ಯಾನ ಮಗನ ಹುರುಪ ಎದ್ದೀತ ಊರಾಗ
ಕತ್ತಿ ಢಾಲು ಕೈಯಾಗ ಹಿಡದ ಜಿಗಿದಾಡತಿದ್ದಾನ ಓಣಿಯೊಳಗ
ತುಡಗ ರಾಯ ಸಿಕ್ಕರ ಹೊಡಿಯತಿದ್ದೇನು ಕೆನ್ನಿಯ ಮ್ಯಾಗ
ಇಷ್ಟ ಅನ್ನುದು ನಿಂತಕೊಂಡ ಕೇಳತಿದ್ದನು ರಾಯಣ್ಣಾಗ
ಬೇಲಿ ಸನಿಯಾಕ ಬರಬಿಟ್ಟು ಧೀನಂತ ಜಿಗದಿದ್ದನಾಗ
ಏನಬರಾ ಕಡದಲೇ ಪರಶ್ಯಾ ಅಂತ ಎದುರಿಗೆ ನಿಂತಾನಾಗ
ಕತ್ತಿ-ಢಾಲು ಒಕ್ಕೊಟ್ಟ ಪರಶ್ಯಾ ಓಡುತ್ತಿದ್ದಾನ ಓಣಿಯೊಳಗ
ಓಡಿಹೋಗುವ ಪರಶ್ಯಾನ ಕಂಡು ಕುಲಕುಲು ನಗುತ್ತಿದ್ದನಾಗ
ಅಷ್ಟೊತ್ತಿಗೆ ಯಲ್ಲಣ್ಣ ದಂಡ ಕರಕೊಂಡ ಬಂದಾನಾಗ
ದವಡಾಸಿ ಬಂದೀತೋ ದಂಡು ಸಂಗವಳ್ಳಿ ತುರಮಂದ್ಯಾಗ
ಡಗ್ಗಾಲಮಂಡಿ ಊರಿ ಗಜವೀರಾ ಚೀರಲಬ್ಬಿ ಹೊಡದಾನಾಗ
ಕೆಟ್ಟದ ಹಬಸ್ಯಾನ ದನಿಕೇಳಿ ಗಡಿಬಿಡಿ ನಡಿಶ್ಯಾನೋ ಬಾಳ್ಯಾ
ರಾಯಾನ ದಂಡ ಬಂತ ಅಂತ ಓಡಿಹೋಗತಾನ ಹಿತ್ತಲದಾಗ
ಕಿಟ್ಟದ ಕುಣಿಯಾಗ ಡೊಗ್ಗಿಕೊಂಡ ಚೆಪ್ಪಾಡಿ ಎಳಕೊಂಡಾನ ಮ್ಯಾಗ
ಗಜವೀರನ ದನಿಕೇಳಿ ಓಡಿಬಂದಾನು ರಾಯಣ್ಣಾಗ
ದಂಡಿನ ಎದುರಿಗೆ ಬಂದು ಕೈಯ ಮುಕ್ಕೊಂಡು ನಿಂತಾನಾಗ
ಈ ಊರೊಳಗ ಬಾಳ್ಯಾನ್ಹೊರ್ತು ವರ್ಮ ಇಲ್ಲ ತಮ್ಮಾ ನಮಗ
ದವಡಾಸಿ ಬಂದೀತ ದಂಡು ವೈರಿ ಬಾಳ್ಯಾನ ಮನೀಗೀಗ
ತಳವಾರ ಫಕೀರಪ್ಪ ಮಲಗಿದ್ನರೀ ಕಟ್ಟಿಮ್ಯಾಗ
ಚಾಡಕೋರ ಮಲಿಗ್ಯಾನು ನೋಡು ಕಟ್ಟಿಮ್ಯಾಗ
ಇಷ್ಟ ಕೇಳಿ ಚನಬಸ್ಯಾ ತಾನು ಧೀನಂತ ಜಿಗದಿದ್ದನಾಗ
ಕಾಲ ಮೆಟ್ಟಿ ಕಾಲ ಹಿಡಿದಿ ಸೀಳಿ ಒಗದಾನೋ ರಸ್ತೆದಾಗ
ಮಗಲಾಯಿ ಸೀಮಿ ದಂಡ ಎಕದಮ್ಮ ಮುಗಿಬಿದ್ದಾರಾಗ
ರಸ್ತೆದಾಗ ನಿಂತು ರಾಯಣ್ಣ ಹೇಳತಿದ್ದಾನ ಸೈನಿಕರಿಗಾಗ
ಹೆಣ್ಣು ಮಕ್ಕಳನ ಮುಟ್ಟಬ್ಯಾಡ್ರಿ ದೋಷ ತಟ್ಟಿತ ನಮಗ
ತೊಟ್ಟಿಲದಾಗಿನ ಗಂಡೆಂಬು ವಂಶ ಚಂಡ ಆಡೀರಿ ಈಗ

ಬಿಳಿ ಅರಿವಿ ಮೊದಲ ಬಿಡದ ಸುಲಗಿ ಮಾಡಿರಿ ಮನಿಯಾಗ
ಅಷ್ಟೊತ್ತಿಗೆ ಯಲ್ಲಣ್ಣ ಬಾಳ್ಯಾನ ಹುಡಕಾಕ ಹತ್ಯಾನಾಗ
ಮನಿಯಲ್ಲಾ ಹುಡುಕಿದನು ವೈರಿ ಬಾಳ್ಯಾ ಸಿಗಲಿಲ್ಲಾಗ
ಹೊರಗ ಬಂದು ರಾಯಣ್ಣ ಮುಂದ ಯಲ್ಲಣ್ಣ ಹೇಳತಿದ್ದನಾಗ
ವೈರಿ ಬಾಳ್ಯಾ ನನಗ ಮಾತ್ರ ಸಿಗವಲ್ಲನೋಯಣ್ಣ ಈಗ
ಹಿತ್ತಲದಾಗ ಸಂಶಯ ಬರತೈತಿ ನೋಡಿ ಬರತೇನಂತಾನಾಗ
ಹಿತ್ತಲದಾಗ ಬರತಾರಂತ ಅಡರಾಸಿ ಬಾಳ್ಯಾ ಎದ್ದಾನಾಗ
ಓಡಿಹೋಗಿ ಬಲಭೀಮನ ಬೆಣ್ಣ ಬಿದ್ದಾನೋ ಬಾಳ್ಯಾ ಆಗ
ಅಷ್ಟೊತ್ತಿಗೆ ಒಡ್ಡರ ಯಲ್ಲಣ್ಣ ಹುಡಕ ಹತ್ಯಾನ ಹಿತ್ತಲದೊಳಗ
ಹಿತ್ತಲದಾಗ ಸಿಗವಲ್ಲ ಬಾಳ್ಯಾ ಇದೇ ಈಗ ಹೋಗ್ಯಾನ ಹೊರಗ
ಹುಷಾರೀರೋ ಯಲ್ಲಣ್ಣ ಹುಡಕ ತೆಗೆಯತೀವ ನಾವೀಗ
ಗಜವೀರನ ಕರಕೊಂಡ ಹೊಂಟಾನ ರಾಯಾ ಹೊರಹೊರಗ
ದವಡಾಸಿ ಬಂದಾರ ಬಂಟರಾ ಬಲಭೀಮನ ಗುಡಿಯೊಳಗ
ಬಲಭೀಮನ ಗುಡಿಗಿ ಬಂದು ಬೇಡಿಕೊಂತಾನೋ ರಾಯಾಣ್ಣಾಗ
ವೈರಿ ಬಾಳ್ಯಾ ಸಿಕ್ಕರ ನಿನಗ ಬಂಗಾರ ಜಡಸ್ತೇನೋ ಈಗ

**||ಇಳುವು||**

ಹಿಂದುಗಡೆ ಗಜವೀರ ಬಂದು ಬೇಡಿಕೊಂತಾನಾಗ
ವೈರಿ ಬಾಳ್ಯಾ ಸಿಕ್ಕರ ಸುಟ್ಟು ತಿಂತೇನಿ ನಿನ್ನ ಗುಡಿಯಾಗ
ಗಜವೀರ ವೀರತನದಿಂದ ಕೂಗಿ ಬೇಡಿಕೊಂತಾನಾಗ
ಗರ್ಜನೆ ಮಾಡಿ ರಾಯಣ್ಣ ಮತ್ತು ಬೇಡಿಕೊಂತಾನ ಬಲಭೀಮಗ
ದೇಶಕ್ಕ ಘಾತಕ್ಕನಾದ ವೈರಿ ಕೊಡೋ ನಮಗೀಗ
ನೀ ದೇವರಾದರ ಎದ್ದು ಪ್ರಸನ್ನಾಗೋ ನಮಗೀಗ
ವೀರ ಮಕ್ಕಳ ನಾವು ಸೂರಿಯಿಂದ ಹೋರಾಡತೇವೀಗ
ಅವರ ಸಂದ ಉಳದೀತ್ರೆಪ್ಪಾ ಬಲಭೀಮನ ಗುಡಿಯೊಳಗ
ದಾತರಿಲ್ಲದಂತಹ ಜಗಳ ಯಾತಕಪ್ಪ ರಾಯಾ ನಿನಗ
|| ಬೆಳಗಾಂವ ಜಿಲ್ಹಾ ಪೈಕಿ ..... ೧೨ನೆಯ ಚೌಕ ||

ಅವರಿಬ್ಬರೂ ಮಾತನಾಡತಾ ತಮ್ಮ ದಂಡಿಗೆ ಬಂದಾರಾಗ
ಬಾಳ್ಯಾ ನನಗ ಸಿಗಲಿಲ್ಲ ಅಂತಾನ ಗಜವೀರ ಗರ್ಜಿಸಿದಾಗ
ದವಡಾಸಿ ಬಂದೀತ ದಂಡು ಬಾಳೇಕುಂದದ ಕೊಳ್ಳಕ್ಕಾಗ
ಬಾಳೆಕುಂದದ ಕೊಳ್ಳಕ ಬಂದ ಸುಮ್ಮನೆ ಮಲಗಿದ್ದ ಯಲ್ಲಪ್ಪಾಗ
ರಾಯಣ್ಣನ ಹಾವಳಿ ಕೇಳಿ ಇಂಗ್ರೇಜಾ ದಂಡು ತೈಯಾರ ಮಾಡ್ಯಾನಾಗ
ಹತ್ತನೂರ ಇಂಗ್ರೇಜಿ ದಂಡು ತೈಯಾರಾದೀತ ಕೊಳ್ಳದಾಗ
ಇಂಗ್ರೇಜಿ ದಂಡ ಬಂದದ್ದು ಗೊತ್ತಿದ್ದಿಲ್ಲೋ ರಾಯಣ್ಣಗಾಗ

ನನಗೊಂದು ಕೆಟ್ಟ ಕನಸಾ ಬಿದ್ದಿತಪ್ಪಾ ಯಣ್ಣಾ ಈಗ
ನನ್ನ ಕೆಟ್ಟ ಕನಸಿನ್ಯಾಗ ಇಂಗ್ರೇಜಾನ ದಂಡ ಬಂದೀತೀಗ
ನನ್ನ ಶೂರ ಯಲ್ಲಣ್ಣ ತಯಾರ ಮಾಡಿರ್‍ಯೋ ದಂಡನೀಗ
ಡಗಲಿ ಚಣ್ಣ ತೊಟ್ಟು ಶಸ್ತ್ರ ಹೆಗಲಮೇಲೆ ಹಾಕ್ಯಾನಾಗ
ಮೆಣಚ ಬಡಗಿ-ಬಂದೂಕಾ ಕೈಯಾಗ ಹಿಡದ ತೈಯಾರಾದನಾಗ
ದವಡಾಸಿ ಬಂದಾನು ಎಲ್ಲಾ ಇಂಗ್ರೇಜಿ ದಂಡಿನೊಳಗ
ನಡು ದಂಡಿನೊಳಗ ಹಾದು ಮುಂದಕ ಪಾರಾದನಾಗ
ದಂಡಿನ ಕಡೆ ಪಡೆ ನಿಂತು ಲೆಕ್ಕಾ ಮಾಡತಾನು ದಂಡೆಲ್ಲಾಗ
ಹತ್ತನೂರಾ ಇಂಗ್ರೇಜಿ ದಂಡು ಲೆಕ್ಕಾ ಮಡಿಕೊಂಡನಾಗ
ಲೆಕ್ಕಾಮಾಡಿ ಯಲ್ಲಣ್ಣ ಓಡಿ ಬಂದಾನ ಒಂದೇ ಉಸರಿನಾಗ
ಓಡಿಬಂದು ರಾಯಣ್ಣನ ಮುಂದ ಹೇಳಿದಾನ ಯಲ್ಲಣ್ಣಾ
ಇಂಗ್ರೇಜಿ ದಂಡು ಒಳ್ಳೆ ಭರಪೂರಾ ಕೂಡೆತಂತಾನಾಗ
ಅದಕ್ಕೊಂದು ಹಂಚಿಕಿ ನಾನು ಬ್ಯಾರೆ ಮಾಡತೀನಂತಾನಾಗ
ತೆಕ್ಕಿ ತುಂಬ ಕಾತಿ ಹಗ್ಗಾ ಕಾತಿ ಹಗ್ಗಾ ಬಗಲಾಗ ಹಿಡಕೊಂದಾ
ಇಂಗ್ರೇಜಿ ದಂಡಿನ ಮುಂದಿನ ಮಡ್ಡಿ ಹತ್ಯಾನ ಯಲ್ಲಣ್ಣಾ
ಮಳಾ ಮಳಾ ಕಾತಿ ಹರಿದು ಬೆಂಕಿ ಹಚ್ಚತಾನ ಕಾತಿಗಾಗ
ಕಂಟಿಗೊಂದು ಕಾತಿಕೊಳ್ಳಿ ಕಟ್ಟಗೊಂತ ಹೋಗತಿದ್ದನಾಗ
ಕಂಟಿಗೊಂದು ಕಾತಿಕೊಳ್ಳಿ ಕಟ್ಟಗೊಂತ ಹೋಗತಿದ್ದನಾಗ
ಕೊಳ್ಳಿ ಕಟ್ಟಿ ಯಲ್ಲಣ್ಣ ಓಡಿ ಬಂದಾನ ದಂಡಿನಾಗ
ಕೊಳ್ಳಿ ಬೆಳಕಾನೋಡಿ ಇಂಗ್ರೇಜಿ ದಂಡ ಮಾತನಾಡತಿದ್ದಿತಾಗ
ರಾಯನ ದಂಡ ಮಾತ್ರ ಅಡಗಿ ಹೋಗೇತಂತಾರಾಗ
ಇಷ್ಟಂದು ಎಕದಮ್ಮ ಕವಾಯತ ಮಾಡತಿದ್ದರಾಗ
ಕೊಳ್ಳಿ ಬೆಳಕಾ ನೋಡಿ ಇಂಗ್ರೇಜಿ ದಂಡು ಮದ್ದು ಸುಡಾಕ್ಹತ್ತಿತಾಗ
ಮುಂದೆ ಮದ್ದಿಗೆ ಇಂಗ್ರೇಜಿ ದಂಡು ಗುಂಡ ಹೊಡೆಯುತಿದ್ದಿತಾಗ
ಅಷ್ಟೊತ್ತಿಗೆ ರಾಯಣ್ಣನ ದಂಡು ಹಿಂದ ಬಂದ ನಿಂತಿತಾಗ
ಇಂಗ್ರೇಜಿ ಹತ್ತಿಲಿದ್ದ ಮದ್ದೆಲ್ಲ ತೀರಿ ಹೋತೋ ಕ್ಷಣದಾಗ
ಅಷ್ಟೊತ್ತಿಗೆ ಯಲ್ಲಣ್ಣ ಹೇಳುತಿದ್ದಾನೋ ದಂಡಿನೊಳಗ
ಯಾಕೋ ತಮ್ಮಗಳಿರಾ ಸುಮ್ಮನೆ ಯಾಕ ನಿಂತೀರೀಗ
ಬಂದೂಕ ಸೀಮಿ ದಂಡು ಏಕದಮ್ಮ ಮುಗಿಬಿದ್ದಾರಾಗ
ಹಸಿದಂಟು ಕಡದಂಗ ಕಡದ ಚೆಲ್ಲ್ಯಾರ ದಂಡೆಲ್ಲಾಗ
ಅಡರಾಸಿ ಗಜವೀರಾ ಬಂದ ಹೇಳತಿದ್ದಾನೋ ರಾಯಣ್ಣಗಾಗ
ಊಟಾ ಆಗಲಿಲ್ಲೋ ರಾಯಣ್ಣಾ ಈ ದಂಡು ಎಲ್ಲಾ ನನಗ
ಇಷ್ಟ ಕೇಳಿ ರಾಯಣ್ಣ ಕುಲುಕುಲು ನಗತಾನಾಗ
ದವಡಾಸಿ ಬಂದೀತ ದಂಡ ಬಾಳೇಕುಂದದ ಕೊಳದಾಗ
ಬಾಳೇಕುಂದದ ಕೊಳ್ಳೊಕ ಬಂದು ಕೇಳತಿದ್ದಾನ ಗಜವೀರಾ
ಸಂಪಗಾಂವಿ ಕಚೇರಿ ಒಂದಾ ಎದಿಮ್ಯಾಗ ಐತೋ ನನಗಾ

ರಾಯಣ್ಣ ಕೇಳಿ ತಾನು ನಕಲ ಮಾಡ್ಯಾನ ಗಜವೀರಗಾಗ
ಸಂಪಗಾಂವಿ ಕಚೇರಿ ಮುರಿಯುವುದಾಗುದೆಲ್ಲಾ ನಮಗ
ಸಂಪಗಾಂವಿ ಕಚೇರಿ ಬಹಳ ಬಂದು ಬಸ್ತ ಐತೀಗ
ಇಷ್ಟ ಕೇಳಿ ಗಜವೀರಾಗ ಹೊಂಚಹಾಕಿಕೊಂಡಾನ ಮನದಾಗ
ಬಿಡು ಬಿಡು ರಾಯಪ್ಪಣ್ಣಾ ಹೆದರಿಕೆ ಹೇಳಬ್ಯಾಡ ನನಗ

**||ಇಳುವು||**

ಸಂಪಗಾಂವಿ ಕಚೇರಿ ಮುರಿಯುವದಿಲ್ಲೇನೊ ನಾನಾ
ಸಂಪಗಾಂವಿ ಕಚೇರಿ ಮುರಯದಿದ್ದರೆ ಶೂರರೇನಾ
ನಾ ಮುರಿಯದಿದ್ದರೆ ನನಗ ಉಡಸರಿ ಶೀರಿಯನಾ
ವೀರ ಗಜವೀರ ಚೀರ್ಯಾನ ಕೇಸರಿಯಂಗ ರಣಧೀರನಾ
ದನಿಗೆ ದನಿ ಬರತೈತ್ಯೋ ಏರೇರಿ ಭೂಮಿ ಮ್ಯಾಗಾ
ತಾಯಿ ಬಲಾ ಇರಲ್ಯೋ ರಾಯಣ್ಣಾ ನಮ್ಮ ಮ್ಯಾಗಾ
ಅವರ ಸಂದ ಉಳಿದೀತ್ರೆಪ್ಪಾ ಬಾಳೇಕುಂದದ ಕೊಳ್ಳದಾಗ
ದಾತರಿಲ್ಲದಂತಹ ಜಗಳ ಯಾತಕಪ್ಪಾ ರಾಯಾ ನಿನಗ
|| ಬೆಳಗಾಂವಿ ಜಿಲ್ಲಾ ಪೈಕಿ ..... ೧೩ನೆಯ ಚೌಕ

ಇಷ್ಟ ಕೇಳಿ ರಾಯಣ್ಣ ದಂಡಿಗೆ ಯುಕ್ತಿಯಿಂದ ಹೇಳಿದಾಗ
ಮೊಗಲಾಯಿ ಸೈನಿಕರಿಗೆ ಕೈಪಂಜ ಹಚ್ಚಿರಂತಾನಾಗ
ನಡಿಕಟ್ಟಿ ರಾಯನ ದಂಡು ತೈಯಾರಾದೀತ ಕೊಳ್ಳದಾಗ
ಕಾಳಿ ಭೀಮಣ್ಣಾ ಕರ್ಣಿ ಹಿಡಿಯಲೇ ತಮ್ಮಾ ನೀನೀಗ
ನಡಕಟ್ಟಿ ದಂಡಿನ ಮುಂದ ಕರ್ಣಿ ಹಿಡಿದಾನ ಭೀಮ್ಯಾ ಆಗ
ದವಡಾಸಿ ಬಂದೀತು ದಂಡು ಸಂಪಗಾಂವಿ ತುರಮಂದ್ಯಾಗ
ಕಾಳಿ ಶಬ್ದಾ ಸಂಪಗಾಂವಿ ಸುಭೇದಾರಾ ಕೇಳತಿದ್ದನಾಗ
ರಾಯಾನ ದಂಡು ಬರಾಕತ್ತೇತಿ ಅಂತ ಸಂಪಗಾಂವಿ ಬಿಡಾಕತ್ಯಾನಾಗ
ತನ್ನ ಕುಟುಂಬ ಸಹಿತವಾಗಿ ಊರ ಬಿಡತಾನ ಸುಭೇದಾರಾಗ
ದವಡಾಸಿ ಬಂದೀತು ದಂಡು ಸಂಪಗಾಂವಿ ಊರೊಳಗ
ಡಗ್ಗಾಲಮಂಡಿ ಊರಿ ಗಜವೀರಾ ಚೀರಲಬ್ಬಿ ಹೊಡದಾನಾಗ
ವೀರ ಹಬಸ್ಯಾನ ದನಿ ಕೇಳಿ ದಡಬಡಿಕಿ ಹುಟ್ಟಿತವರಿಗಾಗ
ಹರಕ ಕೋರಿಯ ಸಿಂಬಿ ಮಾಡಿ ಪಾದಕ್ಕ ಕಟ್ಟಿದ್ದಾನಾಗ
ಸಿಂಹ ಗರ್ಜನಮಾಡಿ ಗಜವೀರಾ ಒದ್ದ ಮುರದಾನ ಕಟಂಜನಾಗ
ಮೂಗಲಾಯಿ ಸೂರರಾ ಎಕದಂ ಮುಗಿಬಿದ್ದಾರ ವಿಸ್ತಾರಾಗಿ
ಮಧ್ಯಾಹ್ನ ಆರು ತಾಸು ಹೊತ್ತಿಗೆ ಬೆಂಕಿ ಹಚ್ಯಾರ ಕಚೇರಿಗಿ
ಸಂಪಂಗಾವಿ ಕಚೇರಿನೆಲ್ಲಾ ಸುಟ್ಟ ಬೂದಿ ಮಾಡಿದರವರಾ
ಅಷ್ಟೊತ್ತಿಗಿ ರಾಯಣ್ಣ ತಾನು ಹುಡುಕುತ್ತಿದ್ದನ ಸುಭೇದಾರನಾ

ಸುಭೇದಾರ ಸಿಗದ ಕಾಲಕ್ಕ ಕತ್ತಿ ಹಿರದಾನ ದಡದಂದಾ
ಜನಾ ಹೋದ ಬಳಿಕ ಇದೊಂದು ಗುರುತು ಇರಲೆಂತಾನಾ
ಕೇಸರಿ ಗರ್ಜಿಸಿದಂಗ ಗರ್ಜಿಸಿ ಉಕ್ಕಿನ ಕಂಬಾ ಕಡಿದನಾ
ಉಕ್ಕಿನ ಕಂಬದಾಗ ರಾಯಣ್ಣನ ಕತ್ತಿ ನಟ್ಟ ಬಂದಿತಾಗ
ಸಂಪಂಗಾಂವಿ ಕಛೇರಿ ಹೊನ್ನ ಎಳದ ತಂದಾನೊ ತುರಮಂದ್ಯಾಗ
ಅಷ್ಟ ಹೊತ್ತಿಗೆ ಗಜವೀರಾ ಮತ ಕೇಳತಾನ ರಾಯಣ್ಣಾಗ
ಬೀಡಿ ಹಳ್ಳಿ ಕಚೇರಿ ಒಂದ ಎದಿಮ್ಯಾಲ ಐತೋಯಣ್ಣಾ ಈಗ
ಇಷ್ಟ ಕೇಳಿ ರಾಯಣ್ಣ ತಾನು ಮತ್ತ ಹೇಳತಾನು ಗಜವೀರಗಾಗ
ಬೀಡಿ ಹಳ್ಳಿ ಕಚೇರಿ ಬಹಳ ಬಂದುಬಸ್ತಿ ಐತಿ ಈಗ
ಈ ವಿಚಾರ ಕೇಳಿ ಗಜವೀರ ಹಾಕಿದ ನಿಂತಕೊಂಡ ಅಕಲಾ
ಬಿಡೋ ರಾಯಪ್ಪಣ್ಣಾ ಬಂತ ನನಗ ಶಕ್ತಿ ಮತ್ತು ಯುಕ್ತಿನಾ
ನಡಿಯೋ ಯಣ್ಣಾ ಮುರದ ಬರೋನ ಬೀಡಿ ಕಚೇರಿನಾಗ
ಇಂಗ್ರೇಜಿಯರಿಗೆ ಬೀಳಲಿನ್ನಾ ನಮ್ಮ ಶಕ್ತಿ ಗುರತವನಾ
ಕಾಳಿ ಭೀಮಣ್ಣನ ಕಾಳಿ ರಣಕಾಳಿಯಾಗಿ ಕೂಗಿತಾಗ
ಕಾಳಿ ದನಿಕೇಳಿ ಬೀಡಿರೈತರ ಮಾತಾಡತಿದ್ದಾರಾಗ
ರಾಯನ ದಂಡು ಬಂದೀತಂತ ಊರ ಬಿಡಾಕ ಹತ್ಯಾರಾಗ
ದವಡಾಸಿ ಬಂದೀತ ದಂಡು ಬೀಡಿ ಊರ ತುರಮಂದ್ಯಾಗ
ಡಗ್ಗಾಲಮಂಡಿ ಊರಿ ಗಜವೀರಾ ಚೀರಲಬ್ಬಿ ಹೊಡದಾನಾಗ
ಕೆಟ್ಟ ಹಬಸ್ಯಾನ ದನಿಕೇಳಿ ಗಡಬಡ ನಡಶ್ಯಾರೋ ಆಗ
ಹರಕೆ ಕೋರಿಯ ಸಿಂಬಿ ಮಾಡಿ ಅಂಗೈಯಿಗೆ ಸುತ್ತಿದ್ದನಾಗ
ಚಟ್ಟನೆ ಚೀರಿ ಗಜವೀರಾ ಗುದ್ದಿ ಮುರಿದಾನೋ ಕಟಂಜನಾಗ
ಮೊಗಲಾಯಿ ಸೀಮಿಯ ಸೈನಿಕರ ಎಕದಂ ಮುಗಿಬಿದ್ದಾರಾಗ
ಎಲಿಗೆ ಸುಣ್ಣಾ ಹಚ್ಚೂದರೊಳಗ ಲೂಟಿ ಮಾಡತಾರ ಊರೊಳಗ
ಬೀಡಿಹಳ್ಳಿ ಕಚೇರಿ ಹೊನ್ನ ಎಳೆದು ತಂದಾರ ತುರಮಂದ್ಯಾಗ
ಅಷ್ಟು ಎಲ್ಲಾ ಹೊನ್ನ ತಕ್ಕೊಂಡು ತೆಲಿಮ್ಯಾಲೆ ಹೊತಕೊಂಡಾರಾಗ
ದವಡಾಸಿ ಬಂದೀತ ದಂಡು ಬಾಳೇಕುಂದದ ಕೊಳದಾಗ
ಬಾಳೇಕುಂದದ ಕೊಳ್ಳಕ ಬಂದು ಕೇಳುತ್ತಿದ್ದಾನ ಗಜವೀರಾ

**||ಇಳುವು||**

ಹಂಗ ಒಬ್ಬರ ನಮ್ಮ ಹೊನ್ನ ಕಲಾಲ ಆಗತೈತೋ ರಾಯಣ್ಣಾ
ಬಾಳೇಕುಂದದ ಮಡ್ಡಿಮ್ಯಾಗ ಕಿಲ್ಲೆ ಕಟ್ಟಿಸೂನಂತನಾಗ
ಅಷ್ಟೊತ್ತಿಗೆ ರಾಯಣ್ಣಗ ಅಪಶಕುನಾಗಿ ತಿಳಿದ ಬಂದೀತಾಗ
ಯಾರ ಬ್ಯಾಡ ಅಂತಾನು ಕಟ್ಟಿಸೂನಂತಾನು ರಾಯಣ್ಣನಾಗ
ಕಿತ್ತೂರ ಅರಸರ ಕೂಡಿ ಬಂದನಾಗಿ ಇಂಗ್ರೇಜರನ ಕಳಸೂನೀಗ
ಕಿತ್ತೂರ ನಾಡೀನ ವೀರರ ನಾವೆಲ್ಲ ಇಂಗ್ರೇಜರನ ದೂಡೂನೀಗ

ಯಾರ ಬ್ಯಾಡ ಅಂತಾರೆಪ್ಪ ನಿನ್ನ ವಿಚಾರದಂಗ್ಹಂದ ಗಜವೀರೀಗ
ಅವರ ಸಂದ ಉಳದೀತ್ರೆಪ್ಪ ಬಾಳೇಕುಂದದ ಕೊಳದಾಗ
ದಾತರಿಲ್ಲದ ಜಗಳಾ ಯಾತಕಪ್ಪ ರಾಯಾ ನಿನಗ
॥ ಬೆಳಗಾಂವ ಜಿಲ್ಹಾಪೈಕಿ …. ೧ಳನೆಯ ಚೌಕ ॥

ಅಷ್ಟೆ ಆದ ಬಳಿಕ ಗಜವೀರಾ ಮತ್ತ ಕೇಳತಾನ ರಾಯಣ್ಣಗಾಗ
ಹಳ್ಯಾಳ ಕಚೇರಿಯೊಂದು ಎದಿಮ್ಯಾಲೈತೋ ಎಣ್ಣಾ ನಮಗ
ಇಷ್ಟ ಕೇಳಿ ರಾಯಣ್ಣ ತಾನು ಮಾರಿ ಕಿಂಕರ ಮಾಡ್ಯಾನಾಗ
ಹಳ್ಯಾಳ ಮೇಲೆ ನಮ್ಮ ಲಢಾಯಿ ಬ್ಯಾಡೋ ತಮ್ಮಾ ಈಗ
ರಾಯಪ್ಪಣ್ಣಾ ಏನ ಬರಾ ಜಿಗದ್ಯೋ ಕೇಸರಿಯಂಗ
ಹೇಳಿದರ ನನ್ನ ದಂಡ ಗಾಬರಿ ಅಗತೈತಂತಾನಾಗ
ಜಿಗಿಯಾಕ ಭೂಮಿತಾಯಿ ಕರುಣಾ ಇತ್ತ ನಮ್ಮ ಮ್ಯಾಗ
ಹತ್ಯಾಳ ದಾಗಿನ ಹೊನ್ನಾ ಹಿಡಿಯಬ್ಯಾಡ ನೀವೀಗ
ಹಿಡಿದರ ಕಕ್ಕೇರಿ ಬಿಷ್ಟವ್ವನ ಆಣೆ ಆಗೇತಿ ನಿಮಗೀಗ
ಮೀನ ಗಂಡಕ ಗುಂಡ ಬಡಿದು ಪಾರಾದೀತೋ ಈಗ
ಇಷ್ಟ ಕೇಳಿ ರಾಯಣ್ಣನ ದಂಡು ಬಂದು ನಿಂತೀತ ಸುತ್ತಮುತ್ತಾ
ರಾಯಣ್ಣನ ಸಂಕಟ ಮಾಡೂದ ನೋಡಿ ಕಣ್ಣೀಗಿ ನೀರ ತಂದಾರಾಗ
ಗಟ್ಟಿಯುಳ್ಳ ಗಜವೀರಾ ಹೆಗಲಮ್ಯಾಲೆ ತಗೊಂಡನಾಗ

**॥ಇಳುವು॥**

ದವಡಾಸಿ ದಂಡು ಬಂದೀತ ಬಾಳೇಕುಂದದ ಕೊಳ್ಳದಾಗ
ಬಾಳೇಕುಂದದ ಕೊಳ್ಳದಾಗ ಡೇರೆ ಹೊದಿಸಿದ್ದನಾಗ
ಬುದ್ಧಿಯುಳ್ಳ ಸೈನಿಕರೆಲ್ಲಾ ವಿಚಾರ ಮಾಡಿರೀಗ
ಯುದ್ಧ ಮಾಡಿ ಮಡಿಯುದು ನಮ್ಮ ಧರ್ಮವೀಗ
ಈ ದೇಶದಿಂದ ಇಂಗ್ರೇಜರನೋಡಿಸುವ ನಮ್ಮ ಗುರಿ ಈಗ
ಎಲ್ಲಾ ರೀತಿಯಿಂದ ಥಾಯಾ ಕಟ್ಟಿರಿ ಮನಸಿನಾಗ
ದುಃಖದಾಗ ರಾಯಾನ ದಂಡ ಸುಮ್ಮನೆ ಕುಂತೀತಿಗ
ಡೇರೆದಾಗ ಅವರ ಸಂದ ಉಳಿದೀತ್ರೆಪ್ಪಾ ಕೊಳ್ಳದಾಗ
ದಾತರಿಲ್ಲದ ಜಗಳಾ ಯಾತಕಪ್ಪಾ ರಾಯಾ ನಿನಗ
॥ ಬೆಳಗಾಂವ ಜಿಲ್ಹಾ ಪೈಕಿ …… ೧೫ನೆಯ ಚೌಕ ॥

ರಾಯಣ್ಣಗ ಗುಂಡ ಬಡದೈತಿ ಅಂತ ಜಾಹೀರಾತ ದೇಶದಮ್ಯಾಗ
ಹದಿನೆಂಟ ನೂರು ಇಂಗ್ರೇಜಿ ದಂಡು ಬಂದೀತ ಕೊಳದಾಗ
ಇಂಗ್ರೇಜಿ ದಂಡು ಬಂದದ್ದು ಗೊತ್ತಿದ್ದಿಲ್ಲೋ ರಾಯಣ್ಣಗಾಗ
ರಾಯಣ್ಣನ ಗೊತ್ತು ಹಚ್ಚಿ ಕೊಲ್ಲಬೇಕಂತಾನ ಇಂಗ್ರೇಜಿ ಆಗ

ಅಷ್ಟೊತ್ತಿಗೆ ಗಜವೀರ ತಾನ ಮತ್ತ ಕೇಳಿದ ರಾಯಣ್ಣಗ
ಮೊಗಲಾಯಿ ಸೈನಿಕರು ಪ್ಯಾಟಿ ನೋಡತೀವ ಅಂತಾರಣ್ಣಾ ಈಗ
ಕಿತ್ತೂರ ಪ್ಯಾಟಿ ನಾನು ತೋರಿಸಿಕೊಂಡ ಬರತೀನೀಗ
ಹೊರಸಿನ ಮ್ಯಾಗ ಮಲಗಿಕೊಂಡ ಹೇಳತಿದ್ದನಾಗ
ಹದಿನೈದು ದಿವಸಕ ನನ್ನ ಕಾಲ ಮಾಯತೈತಿ ತಮ್ಮಾ ಆಗ
ಕಕ್ಕೇರಿ ಬಿಷ್ಟವ್ವನ ಮೂರ್ತಿ ಐತೋ ಅದರಮ್ಯಾಗ
ರಾಯಣ್ಣ ಹೇಳಿದ ಮಾತ ಕೇಳಲಿಲ್ಲರಿ ಗಜವೀರಾಗ
ಬಿಡೋ ರಾಯಪ್ಪಣ್ಣಾ ಹಿಂತಾ ಮಾತ ಹೇಳಬ್ಯಾಡ ನನಗ
ದಕ್ಕಿ ಆದರ ನನಗಾಗಲಿ ಹೋಗಿ ಬರತೀನಿ ಈಗ
ಕಾಳಿ ಭೀಮಣ್ಣಾ ನೀನು ಕರ್ಣಿ ಹಿಡಿಯಲೇ ಈಗ
ಹಳ್ಯಾಳ ಮಾಲ ನಡಕಟ್ಟಿ ಕರ್ಣಿ ಹಿಡದಾನ ಭೀಮಣ್ಣಾಗ
ಕರ್ಣಿ ಶಬ್ದಾಕೇಳಿ ಅವರು ಅತಗೊಂತ ಕುಂತಾರ ಕಚೇರ್ಯಾಗ
ಕಚೇರ್ಯಗಿನ ಜನರೆಲ್ಲಾ ಒಬ್ಬರಕೊಬ್ಬರ ಮಾತಾಡಾಕತ್ಯಾರಾಗ
ರಾಯಣ್ಣನ ದಂಡ ಬರತೈತಿ ಅದಕೇನ ಹಂಚೇಕಿ ಅಂತಾರಾಗ
ಅಷ್ಟೊತ್ತಿಗೆ ಒಬ್ಬ ಮ್ಯಾದಾರ ಕೇಳತಿದ್ದಾನು ಕಚೇರ್ಯಾಗ
ಅವನ ಗುರ್ತಾ ಹೇಳರಿ ನನಗ ಹೊಡೆಯತೇನಂತಾನಾಗ
ಇಷ್ಟ ಕೇಳಿ ಮ್ಯಾದಾರವಗ ರಾಯಣ್ಣನ ಗುರ್ತಾ ಹೇಳಿದ್ದಾರ ಮ್ಯಾದಾರಗ
ಅಷ್ಟ ದಂಡಿನೊಳಗ ಮೂಳಾ ಎತ್ತರ ಇರತಾನು ರಾಯಾ
ಗುಡಿಗಿ ಚೊಣ್ಣ ತೊಟ್ಟು ಮ್ಯಾಲ ಹಿಡಗ್ಯಾಂವಿ ಧರಿಸತಾನಾ
ಕುಡಿ ಕುಡಿ ಹುಬ್ಬಿಗೆ ಗಂಧಾ ಧರಿಸಿರತಾನ ರಾಯಾ
ಅಷ್ಟ ದಂಡಿನಾಗ ಅವನ ಕತ್ತಿ ಮೇಲೆ ಇರತೈತಿ ಇನ್ನಾ
ಅಷ್ಟ ಹೇಳಿ ಜನರೆಲ್ಲರೂ ಮನಿಕಡಿಗಿ ಬಂದದ್ದರಾಗ
ಜೋಡಲಳಗಿ ಬಂದೂಕಬಾರ ಮಾಡ್ಯಾನ ಮ್ಯಾದರಾಗ
ಮಾಳಗಿ ಹತ್ತಿ ಜಿರಗಂಡ್ಯಾಗ ಕುಂತಾನ ಮ್ಯಾದಾರಾಗ
ದವಡಾಸಿ ಬಂದೀತು ದಂಡು ಹಳ್ಯಾಳ ತುರಮಂದ್ಯಾಗ
ಡಗ್ಗಾಲ ಮಂಡು ಊರಿ ಗಜವೀರ ಚೀರ ಲಬ್ಬಿ ಹೊಡದಾನಾಗ
ಕೆಟ್ಟ ಹಬಸ್ಯಾನ ದನಿಕೇಳಿ ದಡಬಡಾ ಕದಾ ಹಾಕ್ಯಾರಾಗ
ಮೊಗಲಾವಿ ಸೈನಿಕರು ಸುತ್ತಮುತ್ತ ಮುಗಿಬಿದ್ದಾರಾಗ
ಕಚೇರಿ ಅಂಗಳದೊಳಗೆ ರಾಯಣ್ಣ ಸುಮ್ಮನೆ ನಿಂತಿದ್ದನಾಗ
ಕುಡಿ ಕುಡಿ ಹುಬ್ಬಿಗೆ ಗುರಿ ಇಟ್ಟ ಕುಂತಾನ ಮ್ಯಾದರಾಗ
ಫಳ್ಳನೆ ಕಣ್ಣ ತಗದ ಮೇಲಕ್ಕೆ ನೋಡ್ಯಾನ ರಾಯಣ್ಣಾಗ
ಮೇಲಕ ನೋಡೂದರೊಳಗ ಹಿಚಕಿ ಬಿಟ್ಟಾನ ಮ್ಯಾದಾರಾಗ
ಕಿವಿಗೆ ಬೆಂಕಿ ಬೀಳುದರೊಳಗ ಧೀನಂತ ಜಿಗಿದಿದ್ದನಾಗ
ಗುಂಡಿನ ಹೊಗಿಯಾಗ ಮ್ಯಾದಾರನ ಚಂಡ ಕೋದಾನ ರಾಯಣ್ಣಾಗ
ಮೀನ ಗಂಡಕ ಗುಂಡ ಬಡಿದು ಪಾರ ಆದೀತೋ ರಾಯಣ್ಣಗಾಗ
ಬಿಚ್ಚಗತ್ತಿ ಚನಬಸ್ಯಾ ತಾನು ಹೇಳತಿದ್ದಾನ ರಾಯಣ್ಣಗಾಗ

ಏನಾರಾ ಗದ್ದಲಾ ಮಾಡಸಿ ಬ್ಯಾಡಂತ ಹೇಳತಿದ್ದನಾಗ
ಶೂರ ಹಬಸ್ಯಾ ಹೇಳಿದರ ಕೇಳಲಿಲ್ಲ ಅವನ ಮಾತಾಗ
ಗದ್ದಲಾ ಮಡೋದಿಲ್ಲೋ ಎಣ್ಣಾ ಹೋಗಿ ಬರತೀವಿ ಅಂತಾರಾಗ
ಮಳ್ಳತನಕ ಬಿದ್ದು ರಾಯಣ್ಣ ಅಪ್ಪಣಿ ಕೊಟ್ಟಾನ ಗಜವೀರಗ
ಬುದ್ಧಿಯುಳ್ಳ ಯಲ್ಲಣ್ಣ ಹುಷಾರಾಗಿರಪ್ಪ ದಂಡಿನೊಳಗ
ಹೊರಸಿನ ಮ್ಯಾಲ ಮಲಗಿರಾಯಣ್ಣ ಕೈಮುಗಿತಾನ ದಂಡಿಗಾಗ
ಮುಂಜಾನೆ ಗಳಗಿ ಹೊತ್ತೇರಿ ಅಪ್ಪಣೆ ಕೊಟ್ಟಾನ ದಂಡಿಗಾಗ
ದವಡಾಸಿ ಬಂದೀತ ದಂಡು ಸಿಂದೀಗಡಂಗಕಾಗ ಗಡಂಗದೊಳಗ
ರಾಯಣ್ಣನ ದಂಡು ಸಿಂದಿ ಕುಡಿದೀತ ಬಲ್ಲಾಂಗ
ದಂಡಿನೊಳಗ ಒಬ್ಬ ಯಲ್ಲಣ್ಣ ಕುಡಿಯಲಿಲ್ಲಾಗ
ಏರ ಬಿಸಲಿಗಿ ರಾಯಣ್ಣನ ದಂಡಿಗಿ ನಿಸೆ ಆದೀತ ಭರಪೂರಾ
ಕಿತ್ತೂರ ಪ್ಯಾಟಿ ನಡು ಪ್ಯಾಟ್ಯಾಗ ಬಂದರಾ ಪೂರಾ
ಬುದ್ಧಿಯುಳ್ಳ ಯಲ್ಲಣ್ಣ ಎಲ್ಲರಿಗೂ ಬುದ್ದಿ ಹೇಳಿದನಾ
ಸಂತಿ ಬೆದರೀತ ಯಣ್ಣಾ ಚೀರಬ್ಯಾಡ ಅಂತಾನವನಾ
ನಿಸೇದ ಒಳಗ ರಾಯಣ್ಣನ ದಂಡು ಕಿತ್ತೂರ ಕಿಲ್ಲೆ ಹತ್ತಿದಾಗ
ಅಷ್ಟರೊಳಗ ಇಂಗ್ರೇಜಿ ದಂಡು ಬೆನ್ನು ಹತ್ತಿದಾಗ
ಕಿಲ್ಲೇದ ಮ್ಯಾಗ ನಿಂತ ಗಜವೀರ ಸುತ್ತಮುತ್ತ ನೋಡಿದನಾಗ
ಸುತ್ತಮುತ್ತ ಇಂಗ್ರೇಜಿ ದಂಡು ನೋಡುತಿದ್ದಾನು ಗಜವೀರಾ
ನಿಸೇದ ಒಳಗ ಗಜವೀರಾ ತಾ ಹೇಳಿದಾನ ದಂಡಿಗಾಗ
ನಾವ ಅಷ್ಟೊರು ಹೋದರೆ ಇಡಲಾಗುವುದಿಲ್ಲ ಈಗ
ಒಬ್ಬೊಬ್ಬ ಹೋಗಿ ನೀವು ಲ‌ಃಮಯಿ ಮಾಡಿ ಬರ್ರೀಗ

**||ಇಳುವು||**

ಇಷ್ಟ ಕೇಳಿ ಒಡ್ಡರ ಯಲ್ಲಣ್ಣ ಕಣ್ಣತುಂಬ ನೀರತಂದಾನಾಗ
ನಮ್ಮ ರಾಯಣ್ಣ ಇದ್ರ ಇಂತಾ ಹೊತ್ತ ಬರತಿದ್ದಿಲ್ಲೋ ನಮಗ
ಆದರಾಗಲಿ ರಾಯಣ್ಣನ ಸ್ಮರಿಸಿ ಮಾಡೂನ ಯುದ್ಧ ಈಗ
ಈಗ ಒಲ್ಲೆವಂದರ ಹ್ಯಾಂಗ ಬಿಸಾಕ ಬರತತಿ ನಮಗ
ಭೂಮಿ ತಾಯಿ ತೋರಲಿ ಶಕ್ತಿ ಬಿಷ್ಟವ್ವ ನೀಡಲಿ ಯುಕ್ತಿನೀಗ
ಕಿತ್ತೂರವರ ಕಣ್ಣ ತೆರದ ಕೊಡಲಿ ಮದ್ದ ಗುಂಡವನೀಗ
ನಾ ಮೊದಲ ಹೋಗತೇನಿ ತಮ್ಮಾ ಲಡಾಯಿ ನೋಡಿರಂತಾನಾಗ
ಅವರ ಸಂದ ಉಳಿದೀತ್ರೆಪ್ಪಾ ಕಿತ್ತೂರ ಕಿಲ್ಲೆದಾಗ
ದಾತರಿಲ್ಲದ ಜಗಳಾ ಯಾತಕಪ್ಪಾ ರಾಯಾ ನಿನಗ
|| ಬೆಳಗಾಂವ ಜಿಲ್ಹಾ ಪೈಕಿ .... ೧೬ನೆಯ ಚೌಕ ||

ದಂಡಿಗೆ ಕೈಮುಗಿದು ಯಲ್ಲಣ್ಣ ಧೀನಂತ ಜಿಗದಿದ್ದನಾಗ
ಏಳನೂರಾಳು ಕಡಕೊಂತ ಯಲ್ಲಣ್ಣ ಹೋಗತಿದ್ದನಾಗ
ಕೈಯ ಸೋತ ಯಲ್ಲಣ್ಣ ಹಿಂದಕ ತಿರಗತಿದ್ದನಾಗ
ಇವನ ಒಬ್ಬನ ಹೊಡೆದರೆ ಗುಳದಾಳಿ ಹರಿತಂತಾರಾ
ಅಷ್ಟೊಂದು ಇಂಗ್ರೇಜಿ ದಂಡು ಏಕದಂ ಮುಗಿಬಿದ್ದಿತಾಗ
ಕಮ್ಮಾರ ಮೀರಾ ಧೀನಂತ ಜಿಗದಿದ್ದನಾಗ
ಎಂಟನೂರ ಇಂಗ್ರೇಜಿ ದಂಡ ಕಡಕೊಂತ ಹೋಗತಿದ್ದನಾಗ
ಕೈಸೋತ ಮೀರಾ ಧೀರಾ ಹಿಂದಕ ತಿರಿಗಿದನಾಗ
ಹಿಂದಕ ತಿರಗಿದ ಗಳಿಗ್ಗೆ ಏಕದಂ ಮುಗಿಬಿದ್ದಾರಾಗ
ಹಣಿ ಪಟ್ಟಿಗೆ ಗುಂಡ ಬಡಿದು ತಿರುಗಿ ಬಿದ್ದಾನ ಸೂರಾ
ಜಿಡ್ಡಿಮನಿ ಫಕೀರ ವೀರಾವೇಶದಿಂದ ಜಿಗಿದಾಡಾಕ್ಹತ್ತಿದ್ದನಾಗ
ಐದನೂರ ಇಂಗ್ರೇಜಿ ದಂಡು ಕಡಕೊಂತ ಹೋಗತಿದ್ದನಾಗ
ಕೈಸೋತ ಫಕೀರ ತಾನ ಹಿಂದಕ ತಿರಗಿದ್ದನಾಗ
ಹಿಂದಕ ತಿರಗಿದ ಗಳಿಗ್ಗೆ ಮುಗಿಬಿದ್ದರಾಗ
ಎದಿಗೆ ಗುಂಡು ಬಡಿದು ತಿರುಗಿದಾನ ಫಕೀರಾಗ
ರಜಪೂತ ರಾಮಸಿಂಗನ ಕುದರಿ ಕುಣದಾಡತೈತಿ ರಣದಾಗ
ರಾಮಸಿಂಗ ದಂಡಿನಕೂಡ  ಲಡಾಯಿ ಮಾಡಾಕ್ಹತ್ಯಾನಾಗ
ಇಂಗ್ರೇಜಿ ದಂಡ ಸಿಟ್ಟಿಗೆದ್ದ ಮುಕ್ಕಿತ ರಾಮಸಿಂಗನಾಗ
ಹನ್ನೊಂದನೂರಾಳಾ ರಾಮಸಿಂಗಾ ಚಂಡ ಕಡಿದನಾಗ
ಐದನೂರ ಇಂಗ್ರೇಜಿ ದಂಡು ಕುದರಿ ತುಳದ ಕೊಂದಿತಾಗ
ಕೈಯ ಸೋತ ರಾಮಸಿಂಗ ಕುದರಿ ತಿರವ್ಯಾನ ಹಿಂದಕಾಗ
ಹಿಂದಕ ಹೊಳ್ಳಿದ ಕೂಡಲೆ ಏಕದಂ ಮುಗಿಬಿದ್ದರಾಗ
ಹಣೆ ಪೆಟ್ಟಿಗೆ ಗುಂಡು ಬಡಿದ ತಿರುಗಿ ಬಿದ್ದಾನ ರಾಮಸಿಂಗಾಗ
ಕುದರಿಗೆ ತೆಕ್ಕಿ ಬಿದ್ದು ಜೋತಾಡತಾನ ರಾಮಸಿಂಗಾಗ
ತಲಿಗೆ ಗುಂಡು ಬಡಿದು ಕುದರಿ ತಿರುಗಿ ಬಿದ್ದೀತ ರಣದಾಗ
ಮೊಗಲಾಯಿ ವೀರ ಸಿಂಹಗಳು ಏಕದಂ ಮುಗಿಬಿದ್ದಾವಾಗ
ಒಬ್ಬೊಬ್ಬರು ನೂರಾಳು ಕಡಕೊಂತ ಕಾದಾಡಾಕ ಹತ್ತಿದರಾ
ನಸೇದ ಒಳಗ ಹೋರಾಡರಯಾರ ವೀರರಾ ದಿಕ್ಕ ತಿಳಿದ್ಹಂಗಾ
ರಾಯಣ್ಣನ ದಂಡ ಸೋಲು ಲಕ್ಷಣ ಕಂಡೀತಾಗ
ಅಷ್ಟ ಹೊತ್ತಿಗೆ ಗಜವೀರನ ನಿಸೆ ಇಳಿದೀತ ಸಂಪೂರ್ಣ
ನಿಸೆದೊಳಗ ಅಪ್ಪಣೆ ಕೊಟ್ಟಿದ್ದೊ ಗೊತ್ತಿದ್ದಿಲ್ಲೋ ಗಜವೀರಾಗ
ತನ್ನ ದಂಡು ಎಲ್ಲೇತಿ ಅಂತ ನೋಡಿಕೊಂತಾನು ಗಜವೀರಾಗ
ಕಿಲ್ಲೆದೊಳಗ ನೋಡುವುದರೊಳಗೆ ಕತ್ತಿ ಹಂದರ ಹಾಕಿತ್ತಾಗ
ವೀರ ಒಡ್ಡರ ಯಲ್ಲಣ್ಣ ನೆನಸಿ ಕಣ್ಣ ತುಂಬ ನೀರ ತಂದಾನಾಗ
ನನ್ನ ರಾಯಣ್ಣ ಕೇಳಿದರ ಏನ ಹೇಳಲಿ ಅಂತಾನಾಗ
ದುಃಖ ಸೈರಿಸಿ ಬಂಟ ತೈಯಾರಾದಾನು ಗಜವೀರಾಗ

ಮಂಡಿ ಊರಿ ಗಜವೀರಾಗ ಗುಂಡು ಜಡಿಯುತ್ತಿದ್ದಾನಾಗ
ಬಂದೂಕ ತಿರುವಿ ಹಿಡಿದು ಇಂಗ್ರೇಜಿ ದಂಡು ಹೊಡಿಯಾಕ ಹತ್ಯಾನಾಗ
ಒಬ್ಬ ಮನುಷ್ಯನ ತಗೊಂಡು ಮತ್ತೊಬ್ಬಗ ಹೊಡಿದಾನಾಗ
ಕಂಟಿಗೆ ಕಟ್ಟಿದ ಕುದುರೆಗಳನು ಗುದ್ದಿ ಕೊಂದಾನ ಟೊಂಕದಮ್ಯಾಗ
ಹನ್ನೆರಡ ಮನದ ಚಿಲಕತ್ತಿನಂಗಿ ಇತ್ತೊ ಮೈಯೊಳಗ
ಇಂಗ್ರೇಜಿ ದಂಡಿಗಲ್ಲ ಹೊಡೆದು ಬಡೆದು ಕೊಂದಾನ ಗಜವೀರಾಗ
ಕತ್ತಿ ಹೊರಿಕಟ್ಟಿ ಇಟಗೊಂಡು ಹೊಂಟಾನು ತೆಲಿಮ್ಯಾಗ
ಒಡ್ಡರ ಯಲ್ಲಣ್ಣ ನೆನಸಿ ದುಃಖ ಮಾಡುತ್ತ ಹೊಂಟಾನಾಗ
ದವಡಾಸಿ ಬಂದಾನೋ ಗಜವೀರಾ ಬಾಳಿಕುಂದದ ಕೊಳ್ಳಕ್ಕಾಗ
ಕೊಳ್ಳಕ್ಕ ಬಂದು ಡೇರೇದ ಹಿಂದ ಸುಮ್ಮನ ಕುಂತಾನ ಗಜವೀರಾಗ
ಅಷ್ಟ ಹೊತ್ತಿಗೆ ರಾಯಣ್ಣಗ ಜಂಪ ಹತ್ತಿತ್ತೊ ಡೇರೆದಾಗ
ಗಜವೀರನ ಕಣ್ಣೀರ ಹೊರಸಿನ ಬುಡುಕ ಹರದಾವಾಗ
ರಾಯಣ್ಣನ ಕತ್ತಿ ಕನಸಿನಾಗ ಹೋಗಿ ಹೇಳ ಹತ್ತಿತಾಗ
ಕಿತ್ತೂರ ಪ್ಯಾಟ್ಯಾಗ ನಿನ್ನದಂಡು ಮಡಿದು ಹೋದಿತೆಂದಿದಾಗ
ಕೇಳಿ ರಾಯಪ್ಪ ತಾನು ಚಟ್ಟನೆ ಮೇಲಕ್ಕೆದ್ದಾನಾಗ
ಬಿಚ್ಚಗತ್ತಿ ಚನಬಸಪ್ಪ ತಮ್ಮಾ ಮುಂದಕ ಬಾರೋ ಈಗ
ನನ್ನ ಕನಸಿನಾಗ ಇಂಗ್ರೇಜಿ ದಂಡು ಬಂದಂತಾಗಿತ್ತಾಗ
ನನ್ನ ದಂಡು ಕಿತ್ತೂರ ಪ್ಯಾಟ್ಯಾಗ ಸೋತಂಗಾಗಿತ್ತಾಗ

**||ಇಳುವು||**

ಇಷ್ಟ ಅನ್ನುದು ಗಜವೀರಾ ಹಿಂದಕುಂತ ಕೇಳತಿದ್ದನಾಗ
ಹೌದು ಹೌದು ರಾಯಣ್ಣ ಸುಳ್ಳಲ್ಲ ಅಂತಾನಾಗ
ಕೇಳಿ ರಾಯಣ್ಣ ಕಣ್ಣತುಂಬ ನೀರತಂದಾನಾಗ
ಕೆಟ್ಟ ಹಬಸ್ಯಾ ಹೇಳಿದರ ಕೇಳಲಿಲ್ಲ ನನ್ನ ಮಾತಾಗ
ನನ್ನ ಯಲ್ಲಣ್ಣ ಇಲ್ಲಿ ಹುಡಕಿದರ ಸಿಕ್ಕಾನೀಗ
ನನ್ನೆದುರಿಗೆ ಲಢಾಯಿ ಮಾಡಿ ಮಡಿಯಲಿಲ್ಲೊ ತಮ್ಮಾ
ಯಲ್ಲಣ್ಣನ ನೆನಸಿ ರಾಯಣ್ಣ ಕಣ್ಣತುಂಬಾ ನೀರತಂದಾ
ಅವರ ಸಂದ ಉಳದೀತರೆಪ್ಪ ಬಾಳಕುಂದದ ಕೊಳ್ಳದಾಗ
ದಾತರಿಲ್ಲದಂತಹ ಜಗಳ ಯಾತಕಪ್ಪ ರಾಯಾ ನಿನಗ
|| ಬೆಳಗಾಂವ ಜಿಲ್ಲಾ ಪೈಕಿ …. ೧೭ನೆಯ ಚೌಕ ||

ರಾಯಣ್ಣ ದಂಡ ಮುಳಗೀತಂತ ಜಾಹಿರಾತೋ ದೇಶದಮ್ಯಾಗ
ನೇಗಿನಾಳದ ಯಂಕನಗೌಡ ತಯಾರ ಆಗಾಗಕ ಹತ್ಯಾನಾಗ
ಕುಂದಾನಪುರದ ನಿಂಗನಗೌಡನ ಬೆನ್ನಕ್ಕ ಕರಕೊಂತನಾಗ
ಅವರಿಬ್ಬರು ಮಾತಾಡಿ ದವಡಾಸಿ ಬಂದಾರಾಗ

ಧಾರವಾಡಕ ಬಂದ ಕೇಳತಿದ್ದಾರ ಇಂಗ್ರೇಜಿ ಸಾಹೇಬಗಾಗ
ತುಡಗ ರಾಯಣ್ಣನ ಹಿಡಕೊಟ್ಟರ ಏನ ಕೊಡತೀರಂತಾರಾಗ
ಏಳನೂರ ಊರ ಇನಾಮ ಹಾಕಿ ಕೊಡತೇನಿ ನಿಮಗ
ಇಷ್ಟ ಕೇಳಿ ವಚನ ತಕ್ಕೊಂಡು ಹಿಂದಕ ತಿರಗಿದರಾಗ
ರಾಯಣ್ಣನ ಹುಡುಕೂತ ನಡದಾರಾಗ ಗೌಡರಾ
ಇತ್ತಕಡೆಗೆ ರಾಯಣ್ಣನ ಚನ್ನಮ್ಮ ಚೀಟಿ ಕಳಿಸಿದಳಾಗ
ಬರಬೇಕಂತ ಕಿತ್ತೂರಿಗೆ ಹೊಂಟಾನೋ ಬಂಟನಾಗ
ಹತ್ಯಾನ ತನ್ನ ಬತ್ತಲೆ ಕುದುರಿ ಕತ್ತಿಯ ಸಹಿತನಾಗ
ಉಳದ ರಾಯಣ್ಣನ ಬಂಟರ ಹತ್ಯಾರವನ ಬೆನ್ನಹಿಂದಾಗ
ಅವರ ಹಂತೇಲಿ ಕೂಡೇತಿ ಲೆಕ್ಕವಿಲ್ಲದ ದಂಡಾಗ
ಚನ್ನಮ್ಮಗ ಆಗೇತಿ ಬಹು ಹರ್ಷ ಬಂಟರನ ನೋಡಿ ಆಗ
ಸುತ್ತ-ಮುತ್ತ ಬೆನ್ನ ಹತ್ತೇತಿ ಇಂಗ್ರೇಜಿನ ದಂಡಾಗ
ಮಲ್ಲಸರ್ಜಾನ ದುಃಖ ಬಂದ ಹೋದೀತ ಮನಸಿನಾಗ
ರಾಯಣ್ಣ ಚಿಂತೀಸ ಬೇಡ ತಾಯಿ ಈ ಲಢಾಯಿದಾಗ
ಎಲ್ಲಾರು ಒಟ್ಟಾಗಿ ಫಿರಂಗ್ಯಾರನ ಹಾಕೂನು ದೇಶದ ಹೊರಗ
ರಾಯಣ್ಣನ ಮಾತಿಗೆ ಚೆನ್ನಮ್ಮ ಆದಾಳ ದುರ್ಗಾದೇವಿಯಾಗ
ನೆನಸಿ ಮಲ್ಲಸರ್ಜಾನ ಕತ್ತಿ ಹಿಡಿದಾಳ ಕೈಯಾಗ
ಊದಿಸ್ಯಾರ ರಣಕಹಳಿ ಬಾರಿಸ್ಯಾರ ನಗಾರಿಯಾಗ
ಭದ್ರಪಡಿಸ್ಯಾರ ಕೋಟೆಯ ಬಾಗಿಲಗಳನಾಗ
ತಯಾರಾದೀತ ಮದ್ದುಗುಂಡು ಆಗಿಂದಾಗ ಕೋಟ್ಯಾಗ
ದಂಡ ನಿಂತೀತ ಕೋಟಿ ಒಳಗ ತಯಾರಾಗ್ಯಾಗಿ
ಒಮ್ಮಿಲೆ ತಗದಾರೋ ಕೋಟೆಯ ಬಾಗಿಲಗಳನಾಗಿ
ಪಶ್ಚಿಮ ದಿಕ್ಕಿಗಿ ರಾಯಣ್ಣ ಸವರ್‍ಯಾಣ ವೈರಿಯು ಚಂಡಗಳನಾಗ
ಉತ್ತರ ದಿಕ್ಕಿಗಿ ಚನ್ನಮ್ಮ ನಿಂತಾಳ ದುರ್ಗಿಯಾಗಿ ಆಗ
ಫಿರಂಗ್ಯಾರ ಹೆಣಗಳ ಬಿದ್ದಾವ ಬಣವಿಯಂಗ ಆಗ
ಕುದರಿ ಬಿದ್ದಾವ ಒಂದರಮ್ಯಾಲ ಒಂದು ದಿಕ್ಕಿಲ್ಲದಂಗ
ರಕ್ತ ಹರಿಯಿತೋ ಮುಂಗಾರಿ ಮಳಿ ನೀರ ಹರದಂಗ
ಕೋಟೆಯಿಂದ ತೋಪಿನಗುಂಡ ಹಾರಿದಾವ ಸಿಡ್ಲಮಿಂಚಿನಂಗಾ
ಥ್ಯಾಕರೆ ಹೇಳತಾನ ಅಂಜಿ ಸೈನಿಕರಿಗೆ ಹಿಂದ ಸರಿಯದಂಗ
ಸಿಂಹ ಗರ್ಜಸಿದಂಗ ರಾಯಣ್ಣ ಗರ್ಜಿಸಿದಾನಾಗ ರಣದಾಗ
ದುರ್ಗಿಯಾಗಿ ಕೂಗಿ ಹೇಳಿದಾಳ ಚನ್ನಮ್ಮ ತನ್ನ ಬಂಟರಿಗಾಗ
ರಾಯಣ್ಣ-ಚನ್ನಮ್ಮರ ಬಂಟರು ಹೋರಾಡ್ಯರ ಸಂಜಿತನಕ
ರಾಯಣ್ಣ ಹೇಳತಾನ ಕಲಿಗಳಿಗೆ ಗೆಲವು ನಮ್ಮದೀಗ
ಹಾರಿಸಿರಿ ಇಂಗ್ರೆಜಿಯರಿಗೆ ತೋಪಗಳ ಬಿಡದೀಗ
ಕ್ಷಣ ಕ್ಷಣಕ ರಾಯಣ್ಣನ ಮಾತಿಗೆ ಕಾವೇರಿತು ರಣಕಾಗ
ಕಿತ್ತೂರ ವೀರರು ಗುರಿಯಿಟ್ಟಾರ ತೋಪಿಂದ ಥ್ಯಾಕರೆಗಾಗ

ಡಂ ಎನ್ನುದರೊಳಗ ಥ್ಯಾಕರೆ ಬಿದ್ದಾನೋ ಭೂಮಿಯ ಮ್ಯಾಗ
ಅವನ ಪ್ರಾಣಪಕ್ಷಿ ಹಾರಿ ಹೋಯಿತ ಗೊತ್ತಿಲ್ಲದಂಗ
ಉಳಿದ ಪಿರಂಗ್ಯಾರ ಸೈನ್ಯ ಓಡಿತೋ ಜೀವದಾಸೆಯಿಂದಾಗ
ಇತ್ತ ಕಿತ್ತೂರ ಕೋಟಿಯೊಳಗ ಮೊಳಗಿತು ಜಯಭೇರಿಯಾಗ

**||ಇಳುವು||**

ಚನ್ನಮ್ಮ ಹರಿಸ್ಯಾಳ ಕಿತ್ತೂರ ಪುತ್ರರನಾಗ
ಕಿತ್ತೂರ ವೀರರಿಗೆ ಮಾನಸನ್ಮಾನ ಮಾಡಿದಳಾಗ
ರಾಯಣ್ಣಗ ಹೇಳತಾಳ ಕಿತ್ತೂರ ಬಿಡಬ್ಯಾಡ ರಾಯಣ್ಣಾ ಈಗ
ದೇಶದ ಭವಿಷ್ಯ ನಿಂತತಿ ನಿನ್ನ ತೆಲಿಯಮ್ಯಾಲೀಗ
ರಾಯಣ್ಣ ಹೇಳತಾನ ಹೋಗಿ ಬರತೀನಿ ತಾಯಿ ತಿರಿಗೀಗ
ಚನ್ನಮ್ಮನಿಂದ ವಚನ ಪಡದ ಹೊಂಟಾನ ನಡುರಾತ್ರ್ಯಾಗ
ಕುದುರಿ ಓಡಿಸುತ ಹೋಗ್ಯಾನ ಬಾಳೇಕುಂದದ ಕೊಳದಾಗ
ಅವರ ಸಂದ ಉಳದೀತರೆಪ್ಪಾ ಬಾಳೇಕುಂದದ ಕೊಳದಾಗ
ದಾತರಿಲ್ಲದಂತಹ ಜಗಳ ಯಾತಕಪ್ಪ ರಾಯಾ ನಿನಗ
|| ಬೆಳಗಾಂವ ಜಿಲ್ಲಾ ಪೈಕಿ ….. ೧೮ನೆಯ ಚೌಕ ||

ರಾಯಣ್ಣ ದಣದ ಮಲಿಗ್ಯಾನ ಹೊರಸಲಮ್ಯಾಲ ಡೇರೆದೊಳಗ
ಹೊತ್ತ ಪುರುದುರೊಳಗ ಬಂದು ಗೌಡರು ಕುಂತ ಹೇಳತಾರ ರಾಯಣ್ಣಗ
ನಿನ್ನ ಮ್ಯಾಗ ಏಟೇಟು ಎರಡ ಇಲ್ಲೊ ಯಣ್ಣ ಈಗ
ಘಟ್ಟದ ಕೆಳಗಿನ ಹುಡುಗರನ ತಂದ ಕೊಡತೇವಿ ನಿನಗ
ಕೇಳಿ ರಾಯಣ್ಣ ಹಿಗ್ಗಿದಾನ ತನ್ನ ಮನದೊಳಗ ಆಗಿಂದಾಗ
ಸೈನ್ಯ ಕೊಡುಸುದುಕ ಘಟ್ಟದ ಕೆಳಗ ಬಂದಾನ ಹಿಂಬಾಲಗ
ಗೌಡ್ರ ಹೇಳತಾರ ವ್ಯಾಳೆ ಆಗತೈತಿ ಜಳಕಾ ಮಾಡೋಣಂತಾರಾಗ
ಮಳ್ಳತನಕ ಬಿದ್ದು ರಾಯಣ್ಣ ಜಳಕಾ ಮಾಡಿರಿ ಅಂತನಾಗ
ನೇಗಿನಾಳಗೌಡ ಕೇಳಿದಾನು ಯಾಕೋ ರಾಯಣ್ಣ ಜಳಕಾ ಮಾಡುದುಲ್ಲೇನೀಗ
ಚಿಂತಿ ಒಳಗ ರಾಯಣ್ಣ ತಾನು ಮೇಲಕ್ಕೆದ್ದಿದ್ದಾನಾಗ
ಡೋರಿ ಬೆಣಚಿ ಹಳ್ಳದ ಬಂಟಾ ಅರವಿ ತಗಿತಿದ್ದಾನಾತ
ಬಾಯೊಳಗ ಕತ್ತಿ ಹಿಡಿದು ಜಳಕಾ ಮಾಡಕ್ಹತ್ಯಾನಾಗ
ನೇಗಿನಾಳ ಗೌಡಾ ಕೇಳ್ಯಾನು ರಾಯಣ್ಣ ಭರವಸಿ ಇಲ್ಲೇನೋ ನಿನಗ
ಹೆಂಗಸೂರ ಜಳಕಾ ಮಾಡುವಾಗ ಹಿಡಿತಾರ ಗುಳದಾಳಿ ಬಾಯಾಗ
ಹಂಗ ನೀನು ಕತ್ತಿ ಹಿಡಕೊಂಡೆಲ್ಲೊ ಬಾಯಾಗ ಈಸುವಾಗ
ಕೇಳಿ ರಾಯಣ್ಣ ಬಾಯಾನ ಕತ್ತಿ ಕೊಡತಾನ ಗೌಡರಿಗಾಗ
ಕತ್ತಿ ಕೊಟ್ಟ ಬಳಿಕ ಗೌಡ ಕುಸಿಯಾದಾನ ಮನಸಿನ್ಯಾಗ
ಜಳಕಾಮಾಡಿ ರಾಯಣ್ಣ ಚೊಣ್ಣಾ ತೊಡಾಕ ಹತ್ಯಾನಾಗ

ಅಷ್ಟೊತ್ತಿಗೆ ಸಿಳ್ಳನೆ ಸೀಟಿ ಹೊಡೆದು ಮುಗಿಬಿದ್ದಾರ ಬಂಟಗಾಗ
ಬಟ್ಟ ಬರೇ ಮೈಲೆ ರಾಯಣ್ಣನ ಬಿಗಿ ಬಿಗಿದು ಕಟ್ಟತಿದ್ದರಾಗ
ಅಷ್ಟಹೊತ್ತಿಗೆ ಗೌಡರು ತಾವು ಮಸಲತ್ತು ಮಾಡಿ ಕುಂತಾರಾಗ
ರಾಯಣ್ಣನ ಕೊರಳ ಮ್ಯಾಗ ಇಟ್ಟಾರ ಹತಿಯಾರ ಆಗಿಂದಾಗ
ಆತಗೊಂತ ಗಜವೀರಾ ತಾನು ಬೆನ್ನ ಹತ್ಯಾನು ರಾಯಣ್ಣಗಾಗ
ಹೊತ್ತ ತಂದಾರ ರಾಯಣ್ಣನ ಹೊರಸಲ ಮ್ಯಾಗ ಧಾರವಾಡಕ
ಇಂಗ್ರೇಜಿ ಸಾಹೇಬನ ಮುಂದೆ ಹೇಳತಾರ ರಾಯಣ್ಣನ ಹಿಡಿದ ಕೌತುಕ
ಹೆಬ್ಬುಲಿ ಬಿದ್ದಾಂಗ ಬಿದ್ದಾನೋ ರಾಯಣ್ಣ ಹೊರಸಲಮ್ಯಾಗ
ಸಾಹೇಬ ಹೇಳತಾನ ಗೌಡರಿಗೆ ಗಲ್ಲ ಹಾಕರಿ ನಂದಗಡದಾಗ
ಇಂಗ್ರೇಜಿ ಸಿಪಾಯಿಗಳು ಹೊತ್ತ ಓದಾರ ನಂದಗಡಕ
ಗಜವೀರ ತಾನು ಮತ್ತ ಕೇಳತಾನ ರಾಯಣ್ಣಗಾಗ
ಈಗ ಅಪ್ಪಣಿ ಕೊಟ್ಟರ ಯಣ್ಣಾ ಗುದ್ದಿ ಕೊಲತೀನಿ ನೆತ್ತಿಮ್ಯಾಗ
ಇಂದಿಗೆ ತೀರಿತು ನಮ್ಮ ಋಣ ದೇಶಕೀಗ ಗಜವೀರಾ
ನೀ ಚಿಂತಿ ಮಾಡಬ್ಯಾಡೋ ನನ್ನ ಸಾವಿಗೆ ತಮ್ಮಾ ಈಗಾ
ಪಿರಂಗ್ಯಾರನ ಹೊಡೆಯುದಕ ಹುಟ್ಟತಾರೋ ಮನಿ ಮನಿಗಿ ವೀರರಾ
ಇಷ್ಟ ಹೇಳಿ ಗೌಡರಿಗೆ ಹೇಳತಾನ ದೇಶದ್ರೋಹಿಗಳು ನೀವೀಗಾ
ನಿಮ್ಮನ ಮುಟ್ಟೊದಿಲ್ಲೋ ಗಾಳಿ, ಬೆಂಕಿ, ನೀರ, ನೆಲಾ, ಪ್ರಾಣಿ ಪಕ್ಷಿಗಳಾ
ನಿಮಗ ಜಾಗವಿಲ್ಲೋ ಸ್ವರ್ಗದಲ್ಲಿ ಗತ್ತಮ್ಯಾಗ ಇರುದಕಾ
ಆಗ ರಾಯಣ್ಣನ ಗಲ್ಲಕ ಕೊಡತಾರ ಗಡದಾಗ\

**||ಇಳುವು||**

ತನ್ನ ಬಂದೂಕ ಹೊಳಸಿ ಎದಿಗಿ ಹೊಡಕೊಂಡಾನ ಗಜವೀರಾಗ
ಬಿಚ್ಚಗತ್ತಿ ಚನಬಸಪ್ಪ ಸೇವಾ ಮಾಡಾಕ ಬಂದಾನಾಗ
ಒಣಾದೊಂದು ಆಲದ ಟೊಂಗಿ ಅವನ ಗೋರಿ ಮ್ಯಾಗ ಊರ್ಯಾನಾಗ
ಸಂಗವಳ್ಳಿ ಮೋದಿನ ಸಾಬ ಸಾರಿ ಹೇಳತಾನ ದೇಶದಮ್ಯಾಗ
ಅವರ ಸುಂದ ಮುಗದೀತರೆಪ್ಪಾ ನಂದಗುಡದ ಗಿಡದ ಬುಡದಾಗ
ದಾತರಿಲ್ಲದಂತಹ ಜಗಳ ಯಾತಕಪ್ಪ ರಾಯಾ ನಿನಗ
|| ಬೆಳಗಾಂವ ಜಿಲ್ಹಾ ಪೈಕಿ ….. ೧೯ನೆಯ ಚೌಕ ||

**ರಚನೆ :** ಮೋದಿನಸಾಬ

**ಕೃತಿ :** ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ

# ೨೮. ಸಂಗೊಳ್ಳಿ ರಾಯಣ್ಣನ ಪದ

ದೇವ ದೇವ ಗುರು ನಾಮನ  ಸ್ಮರಿಸುತ |
ಹೇಳುವೆ ಕೇಳಿರಿ ಮುಂದಿನ ಕಥನವನು |
ವೀರ ಕೇಸರಿ ರಾಯಣ್ಣನ ಚರಿತ್ರವನೊ |
ಜನ್ಮ ಸ್ಥಾನವ ಸಂಗೊಳ್ಳಿ ಗ್ರಾಮವನೊ ||

ಬೆಳಗಾಂವಿ ಜಿಲ್ಹಾ ಸಂಪಗಾಂವಿ ತಾಲೂಕ |
ಸನ್ನ ಹಳ್ಳಿ ಸಂಗೊಳ್ಳಿ ಗ್ರಾಮವನ್ನು |
ತಾಯಿ ಕೆಂಚವ್ವನ ಗರ್ಭದಲಿ ಜನಿಸಿದನೋ |
ಕೀರ್ತಿ ಪಡೆದನೀ ಹಿಂದುಸ್ತಾನವನೊ ||

ಇಂಗ್ರೇಜಿ ಇಂಗ್ಲೀಷರು ಬಂದಾರ ನಾಡಮ್ಯಾಲ |
ನಡಸ್ಯಾರೊ ಆಗ ದರಬಾರವನೋ |
ಈನಾಮ ಜಮೀನ ಮ್ಯಾಲ ಕಾಯ್ದೆಯನೊ |
ಆಗ ಕಳಿಸ್ಯಾರೊ ಕುಲಕರ್ಣಿಗೆ ಹುಕುಮನೊ ||

ತಳವಾರ ಫಕ್ಕೀರಗೆ ಹೇಳ್ಯಾನ ಕುಲಕರ್ಣಿ |
ಕೊಟ್ಟಾನ ಕೈಯಾಗ ಲಕುಟಿಯನೊ |
ತಾಲೂಕ ಕಚೇರಿ ಸಂಪಗಾಂವಿಯನೋ |
ಸುಭೆದಾರಿಗೆ ಕೊಟ್ಟ ಹೊಡೆದ ಮುಜರಿಯನೋ ||

ಕೊಟ್ಟಾಗ ಸರಪಳಿ ತಂದಾನ ತಳವಾರ |
ಇಟ್ಟಾನ ಚಾವುಡ್ಯಗ ತಿಳಿಸಿದನೊ ಪಂಚ |
ರೈತರಿಗೆ ಕುಲಕರ್ಣಿ ಹೇಳಿದನೊ ರಕ್ತ |
ಮಾನೆವ ಮಡಿದರೊ ಅಳತಿಯನೂ ||

ಕುಲಕರ್ಣಿ ರಾಯಪ್ಪಗ ಹೇಳ್ಯಾನ |
ಕೊಡಬೇಕ ಮೂವತ್ತ ಐದು ರೂಪಾಯಿ |
ಹಪತೆಯನೂ ಯಾರು ಕೊಟ್ಟಿಲ್ಲ ರೊಗನ್ನರ |
ರಶವನೊ ಆಗ ಬಂದಾರ ನದಿಯ ದಂಡಿಯನೋ ||

ಜಳಕ ಮಾಡ್ಯಾನ ಆಗ ಬಿಟ್ಟಾನ ಪಂಜಿ |
ಒಗಿಯಲೆ ರಾಯಾ ಹೋಗಿ ಪಂಜಿಯನು |
ತೋಸಿ ಒಗದಾನೊ ಮಾರಿಗಿ ಪಂಜಿಯನೂ |
ಎಂಥ ಸೊಕ್ಕಿನ ಕುರುಬಲೆ ಅಂದಿದನೊ ||

ಏನ ಅಂದಿಲೆ ಮಂಡ ಹಾರವಾ ಹಿರಿದಾನ ।
ವರಿಯಿಂದ ಖಡ್ಗವನೂ ವದ್ದ ಕೆಡದೇನ ।
ತಗದೇನ ರುಂಡವನೋ ಇಷ್ಟ ಕೇಳಿ
ಕುಲಕರ್ಣಿ ಹೌಹಾರಿದನೊ ॥

ಓಡುತ ಬಾಳಪ್ಪ ಬರಮ್ಮೈಯೆ ಬಕತೇಲಿ ।
ಹಿಡಿದಿತ್ತ ಪಂಜಿಯ ರಾಡಿಯನೊ ।
ಆಗ ಗದಬಡಿಸಿ ಹೊಕ್ಕ ಊರವನೋ ।
ಬೆನ್ನತ್ತಿ ತಿರುವಿದನ ರಾಯಪ್ಪನೊ ॥

ಗುಡುಗಿ ಚೆನ್ನ ತೊಟ್ಟ ಹಚ್ಯಾನ ಕ್ಯಾಂವಿ ।
ಮುಂಡಾಸ ಸುತ್ತಿ ಬಿಟ್ಟ ಚಮನವನೋ ।
ಡಾಲ ಹಿಡಿದಾನ ಕೈಯಾಗ ಖಡ್ಗವನೋ ।
ದೇವಾಂಶ ದೇವಿ ವರ ಪಡಿದವನೋ ॥

ಕೊಟ್ಟ ಕುಲಕರ್ಣಿ ಕಳಿಸಿ ಕೊಟ್ಟಿದಾನ ।
ಮೋಸ ಮಾಡಿ ಕೈಯಾಗ ಲಕುಟಿಯನೂ ।
ಸಂಪಗಾಂವಿಗೆ ಹೋಗುವ ಚ್ಯಾಕರಿನೊ ।
ಸುಭೆದಾರಗ ಕೊಡಬೇಕ ಚೀಟಿಯನೂ ॥

ಸುಭೆದಾರನ ಕೈಯಾಗ ಕೊಟ್ಟಾನ ಲಕುಟಿ ।
ಓದಿಕೊಂಡು ಆದಾನ ಕೋಪವನೋ ।
ವಿಚಾರ ಇಲ್ಲದ ಹಾಕ್ಯಾನ ತುರಂಗನೊ ।
ಇನ್ನ ಕೇಳಿರಿ ಮುಂದಿನ ಲೋಕವನು ॥

ತಾಯಿ ಕೆಂಚವ್ವನ ಕರಿಸ್ಯಾನ ಕುಲಕರ್ಣಿ ।
ದುಬ್ಬದ ಮ್ಯಾಲ ಕಲ್ಲ ಹೊರಸಿದನೊ ।
ಈಗ ಕೊಡಬೇಕ ರೂಪಾಯಿ ಹಪತೆಯನೂ ।
ಬೆಳವಡಿ ವೆಂಕನಗೌಡ ಆಗ ಬಿಡಿಸಿದನೂ ॥

ಮರದಿವಸ ಆತ ಹೇಳ್ಯಾನ ಸುಭೆದಾರ ।
ಕೊಡಬೇಕ ಜಾಮೀನ ಬಿಡುವೆನು ।
ಆಗ ರಂಗನಗೌಡ ಜಾಮೀನ ಆಗಿದಾನೊ ।
ಆಗ ಬಂದಾನ ಹೊರಗ ಸಾರಿ ಹೇಳಿದಾನೊ ॥

ಕರಳ ಕತ್ತರಿಸಿ ಹಾಕುವೆ ಜನಿವಾರ ।
ಸುಭೆದಾರಗ ಹೇಳಿದ ರಾಯಪ್ಪನೂ ಆಗ ।

ಹಿಂಬರಕಿ ಜಿಗಿದ ಹನ್ನೆರಡ ಮಾರವನೊ ।
ಮಧ್ಯ ರಾತ್ರಿಗೆ ಬಂದ ಸಂಗೊಳ್ಳಿ ಗ್ರಾಮವನೊ ॥

ಬಿಚ್ಚಗತ್ತಿಯ ಚನ್ನಬಸಪ್ಪನ ಕರಕೊಂಡ ।
ಬಂದಾರ ಬೆಳವಡಿ ಗ್ರಾಮವನೂ ಅಲ್ಲಿ ।
ವಡ್ಡರ ಎಲ್ಲಪ್ಪ ಕೂಡಿದನು ಬಂದ ।
ಹೊಕ್ಕಾರ ಬೆವಿನ ಕೊಪ್ಪವನೊ ॥

ನಾಯಕ ಕೂಡೆರಿ ನಾಲ್ವರೂ ಧಾವಿಸಿ ಬಂದಾರ ।
ಮುಕ್ಕುಂದ ಗ್ರಾಮವನು ಅಲ್ಲಿ ಜೇಡಮನಿ ಫಕ್ಕಿರಪ್ಪ ।
ಕೂಡಿದನೊ ಆಗ ಬಂದಾರ ಬಲಗುಂದ
ಗ್ರಾಮವನೊ ॥

ರಣಹಲಗಿ ಹನುಮಂತ ಕಾಶಿಯ ಭೀಮಪ್ಪ ಬಂದಾರ
ಚಿತವಡಿ ಗ್ರಾಮನೊ ಮೇರೆ ಸಾಹೇಬನ ಕೂಡಿ
ನೇಗಿನಹಾಳವನೊ ಬಂದ ಹೊಕ್ಕಾರ ಮುಗಸ್ತ ಗ್ರಾಮವನೊ ॥

ರಾಮಶಿಂಗ ಆಗ ರಜಪೂತ ಕೂಡ್ಯಾರ ।
ಕೇಳ್ಯಾರ ಗಜವೀರನ ಸುದ್ದಿಯನೂ ।
ಬಂದ ಕೇಳ್ಯಾರ ಗೊದಳ್ಳಿ ಗ್ರಾಮವನೂ ।
ಆಗ ಬಂದಾರ ಮರಕುಂಟಿ ದಾರಿಯನೂ ॥

ವಡ್ಡರ ಎಲ್ಲಪ್ಪನ ಕರಕೊಂಡ ರಾಯಪ್ಪ ।
ಬಂದಾನ ಗುಡ್ಡದ ವಾರಿಯನು ಇಳಿದ ।
ಬಂದಾರು ಸರ್ವರು ಕೊಳ್ಳವನೂ ।
ಮಂಜ ಮುಸಕಿತ್ತೂ ಅದ್ಭುತ ಕೊಳ್ಳವನೂ ॥

ಬಿದಿರಿನ ಮೇಳಿ ಒಳಗ ಮಂಚವ ಮಾಡಿ ।
ಮಲಗಿದ ಗಜವೀರ ನಿದ್ದಿಯನೂ ಆಗ ।
ನೋಡ್ಯಾನ ಮಲ್ಲಪ್ಪ ರಾಯಪನೂ ।
ಕರಡಿ ಹುಲಿಗಳ ಸುತ್ತ ಮುತ್ತು ವಾಸವನೂ ॥

ಹನ್ನೆರಡು ಮಣದ ಚಿಲಕತ್ತಿನಂಗಿ ।
ತೊಟ್ಟಿದ್ದ ಉಕ್ಕಿಂದ ಗಜವೀರನು ಮದ್ಯಮಾಂಸದ
ಅಮಲೇರಿ ಮಲಗಿದನೊ ಆಗ ಕೂಗ್ಯಾಡಿ ।
ರಾಯಪ್ಪ ಎಬಿಸಿದನೂ ॥

ಎದ್ದಾನ ಗಜವೀರ ಹೇಳ್ಯಾನ ರಾಯಪ್ಪ ।
ತಿಳಿಕೊಂಡ ಹಿರಿದಾನ ಖಡ್ಗವನೂ ।
ಹೋಗಿ ಸುಡುವನೂ ಸಂಗೊಳ್ಳಿ ಗ್ರಾಮನೋ ।
ಸಾರಿ ಹೇಳ್ಯಾನ ಪ್ರತಿಜ್ಞೆ ಮಾಡಿದನೊ ॥

**ರಚನೆ :** ಎ.ಜಿ. ನೀಲಗಾರ
**ಕೃತಿ :** ಜಾನಪದ ಝೇಂಕಾರ

## ೧೯. ಸಂಗೊಳ್ಳಿ ರಾಯಪ್ಪನ ಲಾವಣಿ ಪದ

ಎ ಸಿಂಹದಂಥಾ ಸಂಗೊಳ್ಳಿ ರಾಯಾ
ಭೂಮಿಗಿ ಬಿದ್ದಂಗ ಸೂರ್ಯನ ಛಾಯಾ
ನೆತ್ತರ ಕಾವಲಿ ಹರಿಸಿದಾನೊ ಕಿತ್ತೂರ ನಾಡಾಗ
ಭಾಳ ಬಂಟಸ್ತಾನ ಪದವಿ ಇತ್ತ ಅವನ ಹೊಟ್ಟೆಯೊಳಗ
ಸೃಷ್ಟಿಯೊಳಗ ಹುಟ್ಟಿಬಂದ ಶ್ರೇಷ್ಠನಾಗಿ ಹೋಗಿದಾನ
ದುಷ್ಟ ರಾವಣಾಸುರನ ಲಂಕಾ ಸುಟ್ಟಾಂಗ
ಹಿಂಗ ಸಂಪಗಾಂವಿ ಬೀಡಿ ಕಚೇರಿ ಸುಟ್ಟಾನ ಕಲಿಕಿದೊಳಗ॥ ೧ ॥

ಜಾತಿಲಿಂದ ಕುರಬರ ಬೀರಾ, ರೂಪದಲ್ಲಿ ಸೂರ್ಯ ಚಂದ್ರಾ
ಪಂಚ ಪಾಂಡವರೊಳಗ ಭೀಮ ಹುಟ್ಟಿ ಬಂದಾಂಗ
ಗುಡಗ-ಸಿಡ್ಲ-ಮಿಂಚ-ಗದ್ನಿ ಹೊಡದಾಂಗ
ವಯಾ-ವರುಷೆ ಇಪ್ಪತ್ನಾಲ್ಕ ಹನಮಂತ ದೇವರ ಇದ್ದೋ ಬಲಕ
ಗುಣದಲ್ಲಿ ಬಾಳ ನಂಬಿಗಿವಂತ ರಾಮದೇವರಂಗ
ಕತ್ತಿ ಹಿಡಿಯತಿದ್ದೊ ರಣದಲ್ಲಿ ವೀರಭದ್ರದೇವರಂಗ
ರಾಯಣ್ಣನ ದನಿ ಗವಿಯೊಳಗ ಹುಲಿ ಗದ್ನಿ ಹೊಡದಂಗ॥ ೨ ॥

ಏ ಸಣ್ಣಂದಿರತ ಅವನ ಬಣ್ಣ ಚೊಕ್ಕ ಲಿಂಬಿಬಣ್ಣಾ
ಹೋಕ ಹೊಳಕ ಹೋಳಿ ಕಾಮ ದೇವರಂಗ
ಕಕ್ಕೇರಿ ಬಿಷ್ಟೆವ್ವನ ಹಸ್ತ ಅವನ ತೆಲಿಯಮ್ಯಾಗ
ಕಿತ್ತೂರ ಅರಸರ ಪ್ರೀತಿ ಬಾಳ ಹಳಬಕಿ ನೇಮಿಸ್ಯಾರ ರಾಯಪ್ಪಗ
ಹಡಿಯಬೇಕ ಇಂಥ ಮಕ್ಕಳನ ಭೂಮಿಯ ಮ್ಯಾಗ
ಕೆಚ್ಚೆದೆಯ ಕರ್ಣನಂತವನ ರಣದಾಗ
ಇಂಥವರ ಪೂಜ್ಯವಂತರಾಗತಾರ ಲೋಕದೊಳಗ॥ ೩ ॥

ಕುಲಕರ್ಣಿ ಬಾಳಪ್ಪನಕೂಡ ಪಹಿಲೆ ಕದನಹುಟ್ಟಿತಪ್ಪ
ಜಳಕ ಮಾಡುವಾಗ ಮಲಪುರಿ ಹೊಳೆಯಾಗ

ಉಟ್ಟಿರುವ ಧೋತರ ಒಗಿಯಂದೋ ರಾಯಪ್ಪಗ
ರಟ್ಟಿ ಹಿಡಿದ ಮುನಗಸತಾನ ರಾಯಪ್ಪಗ
ಜುಟ್ಟ ಹಿಡಿದ ಎಬ್ಬಸತಾನ ರಾಯಣ್ಣನಾಗ
ಕೊಟ್ಟಿ ಮಾತಾ ಹೇಳಬಾರದೋ ರಾಯಪ್ಪ ನನಗ
ರಾಯಣ್ಣ ಜನಿವಾರ ಹರದ ಒಗದಾನ ಹೊಳಿಯೊಳಗ॥ ೪ ॥

ಏ ಇಷ್ಟೆ ಘಾಸಿಯಾಗಿ ಹಾರುವಾ ನಡಿಗ್ಯಾನಾಗ
ಸಿಟ್ಟಿಗೇರಿ ಮನಿಗಿ ಹೋಗಿ ನಡಿಸ್ಯಾನ ಮೋಸ
ಕುನಸ ಇಟ್ಗೋ ಕುಲಕರ್ಣಿ ಕುರಬನ ಮ್ಯಾಗ
ರಿಪೋರ್ಟ ಬರಿಯತಾನ ಕುಂತ ಚಾವಡ್ಯಾಗ
ಸರಕಾರ ಚಾಕರಿ ಸರಿಯಂಗ ಮಾಡ ಒಲ್ಲ ಊರಾಗ
ದಂಗೆ ದರೋಡಿ ಮಾಡತಾನ ಬಲ್ಲಂಗ
ಬಡಿಲಾಕ ಬರತಾನ ನಮ್ಮ ಮೈ ಮ್ಯಾಗ॥ ೫ ॥

ರಾಯಣ್ಣಜ್ಜ ರೋಗಣ್ಣಗ ಮೂರನೂರ ಕೂರಿಗಿ ಜಮೀನಾ
ಕಿತ್ತೂರ ದೇಸಾಯರ ಕಡೆಯಿಂದ ಗಳಸಿದ ವತನಾ
ಇದಕ ಸರಿಯಾಗಿ ಪಾಳೆಕುಂಡ್ರುಸುದು ಮಾಡರಿ ಹುಕುಮಾ
ಸಿಟ್ಟಿನಿಂದ ರಿಪೋರ್ಟ ಬರದಾನೋ ದುಷ್ಟತಾನಾ
ತಿಳಿಯಗೊಡದ ಬಂದಮಾಡ್ಯಾನ ಕಾಗದವನಾ
ಕಾಗದಾ ಬರದಾನ ಕುಲಕರ್ಣಿ ತನ್ನ ಕೆಡಗಾಲಕತಾನಾ
ರಾಯಪ್ಪನ ಕರದ ಕೊಡತಾನ ಹುಕುಮವನಾ॥ ೬ ॥

ಏ ರಾಯಪ್ಪ ಬಾರಪ್ಪ ನನ್ನ ಕಡೆ ಏನ ತಪ್ಪ
ತಾಯಿ-ಮಕ್ಕಳಂಗ ಇರೂನ ನಾವ ಕಡೆತನಕ
ಏನ ತಪ್ಪ ಮಾಡಿದರ ಒಪ್ಪಿಗೋಬೇಕ ನಮ್ಮ ಮನಕ
ಸಣ್ಣಂಗ ಮಾತಾಡಿ ಕಾಗದಾ ಕೈಯಾಗ ಕೊಡತಾನ
ಸಂಪಗಾಂವಿ ಕಚೇರಿಗೆ ಇದನ ಒಯ್ಯಬೇಕ
ಎಲ್ಲೆಲ್ಲಿ ನಿಂದರದ ಹೋಗಬೇಕ ತುರತದಿಂದ
ಸುಭೇದಾರ ಸಾಹೇಬರ ಕೈಯಾಗ ಕೊಡಬೇಕ॥ ೭ ॥

ಕುಲಕುಲ ನಕ್ಕೊಂತ ರಾಯಪ್ಪ ಕುಲಕರ್ಣಿಗೆ ಹೇಳ್ಯಾನ
ಹಿಂತಾ ಮತ ಹತ್ತ ಹೇಳರಿ ದಿನ ದಿನಕ
ರೀತಿ ಹಿಡದ ನಡೆಯಬೇಕ ಕಡಿಯತನಕ
ತಪ್ಪ ತಡಿ ಮಾಡಿದರ ಗಪ್ಪನ ಇರಾಂವ ನಾನಲ್ಲ
ಜಪ್ಪಿಸಿ ಜಿಗಿಯತೀನ ಮ್ಯಾಗ ಆಕಾಶಕ

ವೈರಿಯ ಕಂಡರ ಜಿಗ್ಯಾಂವ ಹನುಮನಂಗ
ವೈರಿಗಳನ ಕಳಸತೀನ ಯಮಲೋಕಕ॥ ೮ ॥

ಏ ರಿಪೋರ್ಟ ಹಾಕಿದ ಕಿಸಿಯಕ
ರಪಾಟ ಬಂದೋ ಮನೆತನಕ
ಬಾಗಿ ನಮಸ್ಕಾರ ಮಾಡ್ಯಾನ ತಾಯಿಪಾದಕ
ಟಪಾಲ ಒಯ್ಯತೀನಿ ತಾಯಿ ಸಂಪಗಾಂವಿತನಕ
ಹಸವ ಆಗೇತೆವ್ವಾ ದವಡಮಾಡಿ ಎಮ್ಮಿ ಹಿಂಡ
ಸಕ್ಕರಿ ಹಾಕಿ ಹಾಲ ಕೊಡವ್ವ ಕುಡಿಲಾಕ
ಹೊಡಮಳ್ಳಿ ಬರತೀನ ಸಂಜಿ ಆರಕ॥ ೯ ॥

ಬಿಗವಾರಿ ಚೊಣ್ಣಾ ಹಾಕಿದಾನ ರಾಯಾ
ಬಗ್ವಿ ಅಂಗಿ ತೊಟ್ಟಿದಾನ ಮಲಮಲ ಪಟಕಾ
ಕ್ಯಾಮಿ ಎದ್ದಿ ಬಹಳ ಜುಳಕ ಕಾಣತಾನ
ಹನುಮಂತ ಹಾರಿದಂಗ ಲಂಕಾಕ ರಾಯಣ್ಣಾಗ
ತಾಸಿನೊಳಗ ಪಂಚಗಾಂವಿ ಹೊಕ್ಕ ಸುಭೇದಾರರಂತೇಕ
ರಿಪೋರ್ಟ ಒಗದ ನಿಂತಾನ ಸುಮ್ಮಕ
ಹೆಬ್ಬುಲಿ ನಿಂತಂಗ ನಿಂತ ಸಾಹೇಬರ ಹಂತೇಕ॥ ೧೦ ॥

ಏ ಲಕೋಟಿ ಒಡದಾರ ಸಾಹೇಬರಾ
ರಿಪೋರ್ಟದೊಳಗಿನ ಮಜಕೂರಾ
ಓದಿ ನೋಡಿ ಹಲ್ಲ ತಿಂದಾನ ಕರಕರಾ
ಹಿಂಗ ಚಾಕರಿ ಮಾಡು ಧರ್ಮ ಏನ ಹಳಬರಾ
ಮೂರ ನೂರ ಕೂರಿಗಿ ಜಮೀನಕ
ಹುಕುಂ ಆಗೇದ ಸರಕಾರ್ದು ಜೋರ್ದಾರಾ
ಕೊಡದಿದ್ರ ಬಿಡುವದಿಲ್ಲೊ ಕಾಯ್ದೇಶೀರಾ॥ ೧೧ ॥

ಟೊನ್ನಿ ಸುಭೇದಾರ ನಿನ್ನ ಬಂಡತಾನಾ
ನಡಿಯುವದಿಲ್ಲೋ ನನ್ನ ಮುಂದ ಸುಮ್ಮಸುಮ್ಮಕ
ನಾಳೆ ಬಂದ ಕೇಳ ಊರಾಗ ಸೂರ್ಯ ಉದಯಕ
ತಪ್ಪ ಇದ್ದರ ಗಪ್ಪನ ಹಾಕೋ ಲಕಾ ಪಕಾ
ಮೂರ ನೂರ ಕೂರಿಗಿ ಜಮೀನ ನಮ್ಮಜ್ಜ ರೋಗನ್ನಾ
ಲಢಾಯಿ ಮಾಡಿ ಗಳಿಸಿದ್ದಿದೆಯೋ ಜಾತಿ ವತನಾ
ಇಂಗ್ರೇಜಿ ಸರಕಾರ ಕೊಟ್ಟದ್ದು ತೋರಿಸಬೇಕ ಏನಾ॥ ೧೨ ॥

ಏ ಇಷ್ಟೆ ಮಾತ ಕೇಳಿ ಸುಭೇದಾರ ಎದ್ದ
ಪೋಲಿಸರಿಗೆ ಕೊಟ್ಟಿದಾನ ಹುಕುಮವನಾ

ಓದ ಲಕಾಪಕ ಹಾಕರಿ ಈ ಕುರುಬನಾ
ಹ್ಯಾಂಗ ಮಾತಾಡತಾನ ಈ ಕೆಟ್ಟ ಭೀಮಾನಾ
ಅನ್ನ-ನೀರ ಕೊಡಬ್ಯಾಡ್ರಿ ಇಡ್ರಿ ಮೂರದಿನಾ
ಕೈ ಕಾಲಿಗೆ ಹಾಕರಿ ಮೊದಲ ಬೇಡಿಗಳನಾ
ಬರದ ಕೊಟ್ಟ ಕಾಗದಾ ಲೇಕ ಹುಕುಮವನಾ॥ ೧೩ ॥

ಒತ್ತರಮಾಡಿ ಪೋಲಿಸರು ಸುತ್ತಗಟ್ಟಿ ನಿಂತಾರಾಗ
ಕತ್ತಿ ಮಗನ ಸತ್ತ ಹೋದಿ ನಮ್ಮ ಹೊಡತಕ
ಬೇಡಿ ಹಾಕಲಾಕ ಬಂದಾರೋ ಕೈಗೆ ಎಕದಮಕ
ರಾಮಪ್ಪ ಆಗ ಕಣ್ಣ ಕಿಸದ ಆ ಜನರೀಗಾಗ
ಚಣ್ಣ ಹರಿಯುವಂಗ ಒದ್ದೀನಿ ಅಂತಾನವರಿಗಿ
ದೂರ ಸರದ ನಿಂದರ್ರಿ ಬಂದೀರಿ ಸನಿಯಾಕ
ಮುಂದಾಗಿ ನಡೀರಿ ಬರತೀನಿ ನಾನ ಪೋಲೀಸ ಸ್ಥಳಕ॥ ೧೪ ॥

ಏ ಜೇಲಿನೊಳಗ ಹಾಕಿದಾರ ರಾಯಣ್ಣನ
ಕೀಲಿ ಬಂದ ಮಾಡಿದಾರ ಬಂದೂಬಸ್ತಾನ
ಕಾವಲ ಮಾಡತಾರ ಪಾರಾ ಬೆಳತನಕಾ
ರಾಯಪ್ಪನ ಸುದ್ದಿ ತಗದ ಮಾತಾಡತಾರ ನಕ್ಕ
ಸಂಗೊಳ್ಳಿ ಹಳಬ ಬಹಳ ಬಿರಸರಿ ಬಾಳ ಭಾರೀ
ಸರಿ ಒಲ್ಲೋ ಯಾರ್‍ಯಾರಿಗಿ ಹಿಂದಕ ಮುಂದಕ
ಸಾಹೇಬಗ ಆಗೇತಿ ಇವನ ನೋಡ ಬಹಳ ಠಕ್ಕ॥ ೧೫ ॥

ಸಂಜಿ ತನಕ ದಾರಿ ನೋಡ್ಯಾನ ಕುಲಕರ್ಣಿ
ರಾಯಾ ಬರಲಿಲ್ಲಂತ ತಿಳಿದ ಮನದಾಗ
ಹೌಸ ಆದೋ ಕುಲಕರ್ಣಿ ತನ್ನ ಮನಕ
ಕೆಂಚವ್ವನ ಕರಸತಾನೋ ಚಾವಡಿತನಕ
ಹುಚ್ಚಮುಂಡೇ ಪಾಳೇ ಕೊಡಬೇಕ ಇಗಿಂದೀಗ
ಡುಬ್ಬದ ಮ್ಯಾಗ ಕಲ್ಲ ಹೇರಿಸ್ಯಾನ ಹೆಂತಾ ಸೊಕ್ಕ
ಸುದ್ದಿ ಹತ್ತಿ ಚನಬಸಪ್ಪ ಬಂದಾನ ಚಾವಡಿಗಾಗ॥ ೧೬ ॥

ಏ ಕತ್ತಿಮನಗ ಕುಲಕರ್ಣಿ ಎಂತಾ ಸೊಕ್ಕ
ಬಂತ ನಿನಗ ಅಳಗಾಲ ಆಗುವ ಕಾಲ
ಒದ್ದ ಮುರದೇನ ಸೂಳೆಯ ಮಗನ ಹಲ್ಲಾ
ಮುದಕಿ ಡುಬ್ಬದಮ್ಯಾಗ ಹೇರುದೇನ ಕಲ್ಲಾ
ಅನ್ಯಾಯ ಮಾಡಿದವರನ್ನ ನಮ್ಮ ಕಣ್ಣ ನೋಡ್ಯಾವ

ಮಣ್ಣಗೂಡಿ ಹೋಗಿದಾರ ಭೂಮಿಮ್ಯಾಲಾ
ಹಿಂಗ ಅದ್ದೂರಿ ಮಾಡಿದವು ಆಗತಾರ ಅಳಗಾಲಾ॥ ೧೭ ॥

ಹಿಂಗ ಜೇಲಿನೊಳಗ ರಾಯಪ್ಪ ಕೇಳಿ
ಕೂಗಾನ ಏಳತಾರ ಕಾವಲದವರೆಲ್ಲಾ
ಕೂಗಿ ಒಳಗ ನಿಂತ ಹೇಳತಾನ ಪೋಲೀಸರಿಗೆಲ್ಲಾ
ಜೇಲ ಮುರದ ಹೋಗತೀನ ಮಾಡಿರಿ ಕಾವಲಾ
ಬಂದೂಕ ನೆವರಿ ಹಿಡಕೊಂಡ ನಿಂದರ್ರಿ ಮ್ಯಾಲಾ
ಬಲಭೀಮನ ಹೆಸರ ತಕ್ಕೊಂಡ ಮ್ಯಾಲಕ ಹಾರ್‍ಯಾನ
ಕಕ್ಕೇರಿ ಬಿಷ್ಟವ್ವ ಬಂದ ನಿಂತಾಳ ಬೆನ್ನ ಮ್ಯಾಲಾ॥ ೧೮ ॥

ಏ ಎಡಗೈಯಿಂದ ಚಿಲಕ ಹಿಡದ ಬಲಗೈಯಿಂದಾ
ಹಂಚ ಗುದ್ದಿ ಮ್ಯಾಲಬಂದ ನಿಂತದಾನ ಹುಲಿಹಂಗಾ
ನೋಡಿ ಪೋಲಿಸರು ಓಡ್ಯಾಡ್ಯಾರ ಬಲ್ಲಂಗಾ
ಗೋಳಿ ಫಾಯರ ಮಾಡತಾರ ಸಿಕ್ಕಾಂಗಾ
ರಾಯಣ್ಣ ಮ್ಯಾಗ ನಿಂತಕೊಂಡ ಗಾಳಿಹಂಗ ಹಾರ್‍ಯಾನ
ಗಟ್ಟಿ ಉಳ್ಳವರಿದ್ದರ ಬಂದ ಹಿಡಿರ್‍ಯೋ ನನಗ
ಹಿಂಗ ಹೇಳಿ ಕೇಳಿ ಜಿಗದಹೋದಾನ ಆಗಿಂದಾಗ॥ ೧೯ ॥

ತಾಸ ಹೊತ್ತೇರುದರೊಳಗ ರಾಯಣ್ಣ
ಮಲ್ಲೂರಿ ಹೊಳಿಗಿ ಬಂದ ನೋಡ್ಯಾನ ತಿಳಿನೀರ
ಈಶ್ಯಾಡತಾನ ರಾಯಣ್ಣ ತನ್ನ ಮನಸಿಗಿ ಬಂದಾಂಗ
ತಾಸ ವ್ಯಾಳೆ ಈಶ್ಯಾಡಿ ಬಂದ ದಂಡಿಮ್ಯಾಗ
ಕುಂತಕೊಂಡ ಕ್ಯಾವಿ ಹಚ್ಯಾನ ಬಲ್ಲಾಂಗ
ಮೈಮ್ಯಾಗ ಅರವಿ ಹಾಕೊಂಡ ದಂಡಿಮ್ಯಾಗ
ತಳವಾರ ಫಕೀರ ಓಡಿಬಂದೋ ಅವಾಗ॥ ೨೦ ॥

ಏ ಸಲಾಮರೆಪ್ಪಾ ರಾಯಪ್ಪ ಇದ ಬಂದೀರೇನಪ್ಪಾ
ಊರಾಗ ಆದ ಸುದ್ದಿ ಗೊತ್ತಿಲ್ಲರೇನಪ್ಪಾ ನಿಮಗ
ಕುಲಕರ್ಣಿ ಕತಿ ಮಾಡ್ಯಾನ ನಿನ್ನೆ ರಾತ್ರ್ಯಾಗ
ಅವ್ವನ ಚಾವಡಿಗಿ ಕರಿಸಿ ಡುಬ್ಬದಮ್ಯಾಗ ಕಲ್ಲಹೇರಿಸಿ
ಪಾಳೆ ಕೊಡ ಅಂತ ಬೈದೋ ಬಲ್ಲಾಂಗ
ಬಾಹಳ ಬೇದ ಅಬರು ಕಳದೋ ಹಾರವಾ ಮಂದ್ಯಾಗ
ಹ್ಯಾಂಗ ಮಾಡಿದರ ಅಂವಗ ಬಂದಿತೋ ಬುದ್ಧೀಗ॥ ೨೧ ॥

ಅಷ್ಟರೊಳಗ ನಿನ್ನ ಗೆಳೆಯಾ ಸುದ್ದಿ ಕೇಳಿ ಓಡಿ ಬಂದ
ಕಲ್ಲ ತಗಸೀದ ಡುಬ್ಬದ ಮ್ಯಾಲಿಂದ ಆಗಿಂದಾಗ

ಸಿಕ್ಕಂಗ ಬೇಡೋ ಹಾರುವಾನ ಆಗ ಚಾವಡ್ಯಾಗ
ಸುದ್ದಿ ಕೇಳಿ ರಾಯಾ ನಿನ್ನ ಮುರದ ಮುದ್ದಿ ಮಾಡತಾನ
ಹತ್ಯಾರ ತಗೊಂಡ ಹರಿಯಾನ ಹರಿ ಮರಿ ಹರದಂಗ
ದುರಗಿ ಮುಂದ ಬ್ಯಾಟಿ ಕಡದ ಒಗದಂಗ ಒಗಿಯತಾನ
ಹಿಂಗ ಹೇಳಿದಪ್ಪ ಚನಬಸಣ್ಣ ನಿನ್ನೆ ಸಂಜಿದಾಗ॥ ೧೧ ॥

ಏ ಇಷ್ಟ ಮಾತಕೇಳಿ ರಾಯಾಗ ಆ ಕ್ಷಣದಾಗ
ಬಾಣಾ ಹೊಡದಂಗಾತ ಅವನ ಎದಿಯಾಗ
ಚಕ್ರಕ್ವಾಟಿ ಲಡಾಯಿಯೊಳಗ ರಾಯಣ್ಣ
ಅಭಿಮನ್ಯು ಆಗಿ ಜಿಗಿದಾನ ಸಂಗೊಳ್ಳಿಗೆ
ಗುಂಡ ಬಡದ ಹುಲಿ ಸಿಟ್ಟಿಗೇರಿ ಹರಿದಂಗ
ಕಾಲಮೆಟ್ಟಿ ಸೀಳತೀನ ಹಾರುವಾನೀಗ
ಗದ್ನಿ ಹೊಡಿಯತಾನೋ ಹೆಬ್ಬುಲಿಯಂಗ॥ ೧೨ ॥

ಕುಲಕರ್ಣಿ ಬಾಳಪ್ಪ ಕುಂತಿದ್ದಪ್ಪ ಚಾವಡ್ಯಾಗ
ಸುದ್ದಿಕೇಳಿ ಓಡಿಹೋದ ಮನಿ ಒಳಗ
ನಡಗ ಹತ್ತಿ ನಿಂದರ ಒಲ್ಲ ನಡಮನಿಯಾಗ
ಉಚ್ಚಿ ರಾಡಿ ಮಾಡಿಕೊಂಡ ಕಚ್ಚಿ ಒಳಗ
ಹದಿನಾರೆತ್ತಿನ ಇದರ ಗ್ವಾದ್ನಿ ಒಳಗ ಡಬ್ಬಬಿದ್ದಾ
ಮ್ಯಾಗ ದಂಟ ಒಟ್ಟಿಸಿ ಕೊಂಡ ಯಾರಿಗಿ ಕಾಣದಂಗ
ಅವನ ಹೆಣತಿ ಬಂದ ಕುಂತಾಳ ಬಾಗಿಲದಾಗ॥ ೧೪ ॥

ಏ ಬರಾಟ ಬಂದೋ ಊರಾರ
ನೋಡತಾನ ಚಾವಡ್ಯಾಗ
ಕುಲಕರ್ಣಿ ಮನಿಗಿ ಹೋಗಿದಾನ ಆಗಿಂದಾಗ
ಹಾರುವಾನ ಹೆಣತಿ ಕುಂತಿದ್ದಳೋ ಆಗ
ಮನದಾಗ ಮಿಡುಕೂತ ಆಗ ಬಾಗಿಲದಾಗ
ನೀ ನಮ್ಮ ತಾಯಿ ಸರಿ ಹಾರುವಾ ಎಲ್ಲಿ ಹೋಗ್ಯಾನ್ರಿ
ಅಂಜಬ್ಯಾಡ ತಾಯಿ ಹೇಳಬೇಕ ನನಗ॥ ೧೫ ॥

ಹಡದಪ್ಪ ರಾಯಪ್ಪ ಹಕೀಕತ ಹೇಳಪ್ಪ
ಶಾಂತನಾಗಿ ಕುಂಡರಪ್ಪ ಮಂಚದ ಮ್ಯಾಲ
ಕುಡಿಲಾಕ ಕೊಡತೀನ ಸಕ್ಕರಿ ಹಾಲ
ಬೀಳತೀನಿಯಪ್ಪ ನಿನ್ನ ಪಾದದಮ್ಯಾಲ
ಗ್ವಾದನಿಮ್ಯಾಗ ನಿಂತನೋಡ್ಯಾನಂಟದಮ್ಯಾಲ

ಹೊಂಟ ಹೋಗಿದಾನ ಬಾಳ್ಯಾ ಮನಿಯಾಗಿಲ್ಲ
ಏನ ಕೈಗೆ ಸಿಗವಲ್ಲ ಬಾಳ್ಯಾ ನನಗೀಗ॥ ೧೬ ॥

ಏ ಸಿಕಾರಿ ಸಿಗದ ಸಿಂಹನ್ಹಂಗ
ಹೌಸ ಇಲ್ಲೋ ಮನದಾಗ
ಮನಿಗೆ ಬಂದ ಬಿದ್ದಾನ ತಾಯಿ ಪಾದಮ್ಯಾಲ
ಹಡದವ್ವ ಹಾರುವ ಕತಿ ಹೇಳ ನನಗೀಗ
ಸಮಾಧಾನ ಆಗವಲ್ಲದವ್ವ ತಾಯಿ ನನಗ
ನನ್ನ ಕೀರ್ತಿ ಜಗದಾಗ ಹಬ್ಬೇತೀಗ
ಇಂಗ್ರೇಜರನ ಓಡಸ್ತೀನಿ ಮತ್ತ ಬರದಂಗ॥ ೧೭ ॥

ಜಗಳ ಹುಟ್ಟುದು ಬ್ಯಾಡಂತ
ಮುಚ್ಚಿ ಇಟಗೊಂಡಳ ಕೆಂಚವ್ವ
ಬಚ್ಚಿ ಹೇಳವಳ್ಳ ಆಗ ರಾಯಪ್ಪಗ
ಬೆಂಕಿ ಹಚ್ಚಿ ಮಂದಿ ನಿನಗ ಸುಳ್ಳ
ಮೋಜನೋಡಿ ನಗಬೇಕಂತಾರ
ಜಾಜಿ ಮಲ್ಲಿಗಿ ವನಾ ಹಾಳ ಮಾಡಿದಂಗ
ಮಾಡತಾರ ಮಂದಿ ಮಾನು ಲೋಕದೊಳಗ॥ ೧೮ ॥

ಏ ಸಿಟ್ಟಿಗೇರಿದ ರಾಯಪ್ಪಗ
ಎಷ್ಟೇ ಹೇಳಿದರ ಕೇಳವಲ್ಲ
ನಾಟ ಒಲ್ಲದ ತಾಯಿ ಅವಂಗ
ಹಾಲ ಉಕ್ಕಿದಂಗ ಉಕ್ಕತೈತಿ ಮ್ಯಾಗಮ್ಯಾಗ
ಹತ್ಯಾರ ತಕ್ಕೊಂಡ ಕೈಯಾಗ ತಾಯಿಗೆಂತಾನ
ಹೇಳತಾನ ತಾಯಿಗೆ ನಾಡಿನ ಗೋಳವನಾ
ಹಾವಳಿ ಮಾಡಿ ಬರತೀನಿ ಸರಕಾರ ಅಂಜುವಂಗ॥ ೧೯ ॥

ಹದನಾರ ಎತಗೋಳ ಇದರಗ್ಯಾದಿನಿ
ಕಟ್ಟಿದ್ದು ಅಪ್ಪ ಹಗ್ಗ ಹಚ್ಚಿ ಬಿಟ್ಯಾನಾಗ
ರಾವ ತುಂಬಿದ ಇದರ ಯಾರು ಇಲ್ಲದಂಗ
ರಾಮದುರ್ಗ ಪ್ಯಾಟ್ಯಾಗ ಕೈಗೆ ಬಂದ್ಹಾಂಗ
ಎಲ್ಲ ಎತಗೋಳ ಮಾರತಾನ ಬಲ್ಹಾಂಗ
ದೇಶದ ಚಿಂತಿಯೊಳಗ ಮರತಾನ ಮನಿಮಾರಾಗ
ರೂಪಾಯಿ ಎಣಸಿಕೊಂಡ ಹಾಕೊಂಡ ಹಮ್ಮಿನದಾಗ॥ ೨೦ ॥

ಏ ಒತ್ತರಮಾಡಿ ಬಂದಾನಪ್ಪಾ
ಹೊತ್ತ ಮುನುಗುದರೊಳಗ

ಹುಲಿ ಬಂದ ಹೊಕ್ಕಂಗಾತ ಸಂಗೊಳ್ಳ್ಯಾಗ
ಏನ ಬಂಟ ಹುಟ್ಟಿದಪ್ಪಾ ನಮ್ಮೂರಾಗ
ಸಣ್ಣ ದೊಡ್ಡವರು ಗಂಡಸರು ಹೆಂಗಸರಾಗ
ಮಾತಾಡತಾರ ಕುಂತಗೊಂಡ ಕಟ್ಟಿಮ್ಯಾಗ
ರಾಯಣ್ಣ ಅದಾನ ಗಟ್ಟಿಕ ಅವರ ಅಜ್ಜನಂಗ॥ ೨೦ ॥

ಅತ್ತಿಮನಿ ಸೊಸ್ಯಾರ ಜಿತ್ತಲಿಂದ ಮಾತಾಡತಾರ
ಹತ್ತ ಹಡಿಯುದಕಿಂತ ಒಂದ ಮುತ್ತಹಡಿಯಾನ
ನಮ್ಮ ಊರ ಸಂಗೊಳ್ಳಿ ರಾಯಣ್ಣನಂತವನ
ಸಿಸ್ತದಿಂದ ಉಲ್ಲಾ ಮಾಡಿ ಪದಾಮಾಡ್ಯಾರ ಚಂದ
ಹಾಡತಾರ ಗಂಡು ಹೆಣ್ಣು ರಾಯಣ್ಣನಮ್ಯಾಗ
ರಾಯಣ್ಣ ದಂಡಕೂಡಿಸುತ ನಡದಾನ ನಾಡಿನಮ್ಯಾಗ
ಪಿರಂಗ್ಯಾರನ ಹೊಡೆಯತಾನ ಮುಂದಿನ ಸಂದಿನ್ಯಾಗ॥ ೨೧ ॥

ಏ ಕಲ್ಪಿಕದೊಳಗ ಚಿಕ್ಕನಂದಿ
ಕವಿತಾದೊಳಗ ಬಹಳಮಂದಿ
ಪದಗೋಳ ಮಾಡತಾರ ಚಂದಚಂದಾ
ಶ್ಯಾನಾರ ಕೇಳಿರೆಪ್ಪ ಪದಾ ಪ್ರೀತಿಯಿಂದಾ
ಇಲ್ಲಿಗೆ ಆತರೆಪ್ಪ ಒಂದ ಸಂದಾ
ಸಂಗೊಳ್ಳಿ ರಾಯಣ್ಣ ಇಂಗ್ರೇಜರನ ವಧಾಮಾಡಿದ
ಕಿತ್ತೂರ ನಾಡಿಗೆ ಕೀರ್ತಿ ತರುದು ಉಳಿತ ಮುಂದಾ॥ ೨೨ ॥

**ರಚನೆ :** ಚಿಕ್ಕನಂದಿ
**ಕೃತಿ :** ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ

## ೩೦. ಟಿಪ್ಪು ಸುಲ್ತಾನ

ಇಲಿಯಾಗಿ ನೂರು ವರ್ಷ ಬಾಳೂದು ಬ್ಯಾಡಂತ
ಹುಲಿಯಾಗಿ ಮೂರು ವರ್ಷ ಬಾಳೂದು ಪಾಡಂತ
ವೀರ ಟೀಪು ಹೇಳಿದ ಮಾತ
ಅವನಿಗೆ ಒಲದಿದ್ದ ರಂಗನಾಥ ॥
ಹಿಂದು ಮುಸ್ಲಿಂ ಒಂದೇ ಅಂತ
ನೀತಿ ಮಾರ್ಗವ ಅರಿತ
ಪ್ರಜರಲ್ಲಿ ತಾ ಬೆರತ
ಸುಖ-ದುಃಖವನ್ನ ಅರಿತ

ಟೀಪು ಮಾಡಿದ ಪ್ರಜಾಹಿತ
ಅವನಿಗೆ ಒಲದಿದ್ದ ರಂಗನಾಥ॥ ೧ ॥

ರಾಜಕಾರಣ ಧೂರ್ತ
ಸಮರದಲ್ಲಿ ಸಮರ್ಥ
ಭುಜಬಲ ಸಾಮರ್ಥ್ಯ
ದೇಶದಲ್ಲಿ ಪ್ರಖ್ಯಾತ
ದೇಹ ದೇಶ ಭಕ್ತಿ ಭರಿತ
ಅವನಿಗೆ ಒಲಿದಿದ್ದ ರಂಗನಾಥ॥ ೨ ॥

ಕಂಪನಿ ಸರಕಾರ ಬಂತ
ನಮ್ಮ ಸೈನ್ಯ ನಿಮ್ಮಲ್ಲಂತ
ಕರಾರಿಗೆ ಒಪ್ಪಂತ
ಭಾಳ ಒತ್ತಾಯ ತಂತ
ಟೀಪು ಒಪ್ಪುದಿಲ್ಲ ಅಂತ ನಿಂತ
ಅವನಿಗೆ ಒಲಿದಿದ್ದ ರಂಗನಾಥ॥ ೩ ॥

ಇಂಗ್ಲೀಷರೊಡನೆ ಕಾದುತ್ತ
ದೇಶ ರಕ್ಷಣಾ ಮಾಡುತ್ತಾ
ವೀರತನ ತೋರುತ್ತ
ವೈರಿಯನ್ನು ಹಣಿಯುತ್ತ
ಟೀಪು ಕುಣಿಯುತ ನಿಂತ
ಅವನಿಗೆ ಒಲಿದಿದ್ದ ರಂಗನಾಥ॥ ೪ ॥

ದೇಶದ್ರೋಹಿ ಮಾಡಿದ ಘಾತಾ ।
ಮೈಸೂರ ಹುಲಿ ತಾ ಸೋತಾ ।
ಮಕ್ಕಳನ್ನು ಅಡವು ಇಡುತಾ ।
ಖಡ್ಗ ಹಿರಿದು ಕಾದುತ ನಿಂತಾ ।
ಟೀಪು ಪ್ರಾಣ ಬಿಟ್ಟ ಕಾದುತ್ತ ।
ಅವನಿಗೆ ಒಲಿದಿದ್ದ ರಂಗನಾಥ॥ ೫ ॥

ಹಾಡಬೇಕ ವೀರ ಗೀತ
ಮಾಡಬೇಕ ದೇಶ ಹಿತ
ಒಲಿತಾನ ರಂಗನಾಥ
ಇದನ್ನ ಕೇಳು ನೀ ಮತ್ತ
ನುಡಿಯುತ್ತ ನುಡಿಯುತ್ತ ।
ಶ್ರೀರಂಗನಾಥಗೆ ನಮಿಸುತ್ತ॥ ೬ ॥

**ರಚನೆ :** ಎ.ಜಿ. ನೀಲಗಾರ

**ಕೃತಿ :** ಜಾನಪದ ಝೇಂಕಾರ

# ೩೧. ಕ್ರಾಂತಿವೀರ ಬಾಬಾಸಾಹೇಬ

**||ಲಾವಣಿ||**

ಶೂರ ಬಾಬಾ ಸಾಹೇಬ್ನ  ಸತ್ತ್ಯುಳ್ಳ ರಾಜ್ಯವ
ಸೂರೆ ಮಾಡ್ಯಾರೊ ಫಿರಂಗೇರು
ಮೀರಿದ ನರಗುಂದದ ಹೆಸರನ್ನ ಅಳಿಸ್ಯಾರೊ
ಈ ಭೂಮಿ ಮ್ಯಾಗಿಂದ ಫಿರಂಗೇರು
ಕೆಂಪ ಕುಂಪಣಿ ದೊರೆಗಳಿಗೆ ಯಾರು ಸರಿ
ಅವರ ಮೀರಿದ ಮೋಸಕ್ಕ ಹೌಹಾರಿ
ತಮ್ಮ ರಾಜ್ಯವ ಕಳಕೊಂಡು ಕುಂತಾರ್ರಿ
ಇನ್ನ ಬಂತೆಮಗ ವನವಾಸ ಅಂತಾರ್ರಿ
ಕೆಂಪನ್ನ ಮೋರೆಯವರ ರಾಜ್ಯದಾಗ್ರಿ | ಕೆಂಪ ಕುಂಪಣಿ ……

**||ಚಾಲ|||**

ಉತ್ತರದಾಗ ಎದ್ದಿತೊ ಬಂಡ ಮತ್ತ ಅದ ಕಂಡು
ಫಿರಂಗೇರ ದಂಡು ಹೊರಟಿತ್ತೊ ಶಸ್ತ್ರ ಕಸಗೊಂತ
ಊರು ಕೇರಿ ಪ್ಯಾಟಿ ಕ್ವಾಟೆಗಳು ಎಲ್ಲ
ಒಂದು ಉಳಿಲಿಲ್ಲ ಬಿಡದೆ ಹುಡುಕಿದ್ರಲ್ಲ
ಎಲ್ಲಿ ನಿಮ್ಮ ಬಿಲ್ಲು ಬಾಣ ಕಠಾರಿ ಕತ್ತಿ
ಕುಡಗೋಲ ಕೊಡ್ಲಿ ಎಂದೆನುತ
ಸಾರಿ ಇಳಿದು ಬಂದಾರೊ ಧಾರ್ವಾಡಕ
ಇನ್ನು ಈ ಸೀಮ್ಯಾಗ ನಮ್ಮ ಬ್ಯಾಟಿ ಎಲ್ಲೈತಿ
ಎಂದು ಮೂಸಿ ಮೂಸಿ ನೋಡ್ಯಾರೊ
ಇಲ್ಲೆ ಇದೆ ನರಗುಂದ ನಮಗ ದಿಗ್ಬಂಧ
ವೆನುತ ಹಾರ್ಯಾಡಿ ಹಾಡ್ಯಾರೊ
ಪೋಲೀಸ ಸಾಬ ತನ್ನ ಜನರ ಕರದಾನೊ
ಸ್ವಾರನಾಗಿ ಬಂಟ ಹೊಂಟಾನೊ
ಪುಂಡರ ಮನ್ಯಾನಶಸ್ತ್ರ ಹಿರಿದಾನೋ
ಕದ್ದು ಮುಚ್ಚಿಟ್ಟವರ ಪ್ರಾಣ ಹಿಂಡ್ಯಾನೊ
ಏನಂತ ಹೇಳಲಿ ಅವನ ಕಲಿತನ
ಶಕ್ತಿ ಇಲ್ಲೊ ಮಾಡುದಕ ವರ್ಣನ

ಬಂದು ನಿಂದಾರೊ ನರಗುಂದ ಸೀಮ್ಯಾಗ
ಬಿಟ್ಟು ಬಿಡದೆ ನೋಡ್ಯಾರ ಭಾರಿ ದುರ್ಗಕ್ಕ
ಆಶೆಬಿಟ್ಟು ಕುಂತಾರೊ ನೆಲಕ

||ಏರು||

ಭಾಸ್ಕರ ರಾಜನ ಕರೆಯ ಕಳವ್ಯಾರೊ
ಶರಣು ಬಾರೆಂದ್ನಯದಿ ಹೇಳ್ಯಾರೊ
ಮದ್ದು ಗುಂಡು ಕತ್ತಿ ಕಠಾರಿ ಬಿಟ್ಟುಕೊಂಡಂದಾರೊ
ಬಿಡದೆ ಮುಚ್ಚಟ್ರ ಕೇಡೆಂದಾರೊ
ನಿನ್ನ ಧಣೇರ ಮಾತ ಕೇಳೆಂದಾರೊ
ಸೀಮ್ಯಾನ ಕೈದುಗಳನ್ನೆಲ್ಲ ಒಪ್ಪಿಸಿ ಬಿಡಬಾರೊ
ಕುಂತರರಮನ್ಯಾಗ ನಿನಗಾವ ಹಿತವಿಲ್ಲ ‖ ೧ ‖

||ಚಾಲ|||

ಒಗರಿನ ಮಾತಿಗೆ ಸಿಡಿದು ನಿಂತ ಬಾಬಾಸಾಹೇಬ ಸರದಾರ
ಕಿಡಿಕಿಡಿಯಾಗಿ ನುಡಿದಾನ ನಿಮ್ಮ ಸರಕಾರವಿಲ್ಲ ದರಕಾರ
ಆದ್ರ ತಡದು ಗುಡುಗ್ಯಾನ ಆಗ್ಲಿ ನಿಮ್ದೆ ಕಾರಭಾರ
ಹೊಂಟು ಬಿಟ್ಟಾನೆನುತ ಮೌನವೀಗಾಧಾರ
ನಂಜಿನ ಸವಿಕಂಡ ಬಾಬಾಸಾಹೇಬ
ಥೇಟಾಗಿ ಬಂದಾನೊ ಅರಮನಿಗಿ । ಮಂತ್ರಿ
ರಾಘೋಬ್ನ ಕರಸ್ಯಾನೊ ಚಂದಾಗಿ । ಉತ್ತರ
ಏನಂತ ಕಳುಹಿಸಬೇಕಾಗಿ । ಮತ್ತೆ
ಹೋಗಬಾರ್ದು ಅಭಿಮಾನ ಮುಕ್ಕಾಗಿ । ಅಂತ
ಆಲೋಚ್ನೆ ನಡೆಸ್ಯಾರೊ ಹಿರಿದಾಗಿ । ಕೊಟ್ಟ
ಭಾಷೆಯ ತಾಪಕ್ಕ ಗುರಿಯಾಗಿ

||ಏರು||

ಮದ್ದು ತೋಫು ಗುಂಡು ನಮ್ಮವೆಲ್ಲ
ಕತ್ತಿ ಕಠಾರಿ ನಿಮಗ ಕೊಡುದಿಲ್ಲ
ಕೇಳೊ ಕೇಳೊ ಮಾತು ಬೇರಿಲ್ಲ
ಬಂದು ಬಂದೇ ಬಿಡುದು ಜನವೆಲ್ಲ
ಸುಮ್ನೆ ಕೈಗೆ ಸಿಗದೆ ತೊಲಗಲ್ಲ
ಎಂದು ಖಡಾಖಡಿಯಾಗಿ
ಜವಾಬ ಕಳಸ್ಯಾನೊ ಹೊರಗ ನಿಂತ ಸಾಹೇಬಗ

ಸಿಡಿಲಿನಂಥ ಜವಾಬನ್ನ ನೋಡಿ
ಪೋಲೀಸ ಸಾಹೇಬ ಆದ ಕಿಡಿಕಿಡಿ
ಸಿಡಿರು ನುಡಿದಾನ್ಮೀಸಿ ಹುರಿಮಾಡಿ
ಹಿಡಿದು ತರಿಸೇವ ನಿನ್ನ
ಜಡಿದು ಬಿಟ್ಟೇವಿನ್ನ
ಕೆಡೆದು ಕುಡಿಸೇವ ನಿನಗ
ಕತಕತಾ ಕುದಿವ ಸೀಸ | ಕರುಣೆ ಇಲ್ಲಿಲ್ಲ ಲವಲೇಶ
ಹುಲ್ಲುಕಡ್ಡಿ ನೀನು ಬೆಂಕಿಯೊಡನಾಟ
ಯಾಕ ಹುಚ್ಚಾಟ | ಭೂಮಿ ನುಂಗುವ-ಮಾಟವೆಂಥ ಸೆಣಸ್ಯಾಟ
ಇದ್ರ ಬುದ್ಧಿ ನಿನಗ ಏನಾದ್ರ
ಶರಣು ಬಂದು ಬಿಡಬಾರೋ | ಮುಗಿತಲ್ಲೊ ನಿನ್ನ ಅವತಾರ
ಬಿಡದ ಸುದ್ದಿ ಕಲೆಕ್ಟರಗ ತಿಳಿಸ್ಯಾರೊ
ಆಗಿಂದಾಗ ರಾಣಗಿರುವ್ಯಾರೊ
ಫರ್ಮಾನ ಹೊಂಡಿಸಿ ಮ್ಯಾನ್ಸನ್ನ ಕಳುವ್ಯಾರೊ
ಬಾಬಾಸಾಹೇಬ್ನ ಕಟ್ಟಿ ಹಿಡಿತಾರೊ
ಎಂದದಕ ಹೊರಟ ಮ್ಯಾನ್ಸನ್ | ನೆನೆನೆನೆದು ತನ್ನ ಕೆಲಸವ

**||ಚಾಲ|||**

ಒಂದೆ ಉಸುರಿನಿಂದ ಬಂದಾನೊ ರಾಮದುರ್ಗಕ
ರಾವಸಾಹೇಬನ್ನ ಕಂಡಾನೊ ಮ್ಯಾನ್ಸನ
“ಮರಣ ತಪ್ಪಿಸಿಕೊ ಶರಣಾಗಿ  ಹೊರಟ್ಹೋಗೊ
ಧಾರ್ವಾಡಕೆ”ಂದಾನೊ ಮ್ಯಾನ್ಸನ
ತಕ್ಷಣ ಸಮ್ಮತಿಯಿತ್ತಾನೊ ರಾವಸಾಹೇಬ
ಪಿಸಿನಕ್ಕು ಹೊಂಟಾನೊ ಮಾನ್ಯನ
ನರಗುಂದ ದಾರ್‍ಯಾಗ ಬೀಡು ಬಿಟ್ಟಾನಲ್ಲೆ
ಸುರೆಬಾನ ಊರಾಗ ಮ್ಯಾನ್ಸನ
ಹದಿನೆಂಟು ಪೋಲಿಸರ ಬಲವಾದ ಕಾಪಿನ
ಮೇಣೆದಾಗ ಮಲಗ್ಯಾನೊ ಮ್ಯಾನ್ಸನ
ದಾರಿಯ ದಣಿವಿಗಿ ಕಣ್ಣೆಳೆದು ಕೊಂಡಾನೊ
ಗಾಢ ನಿದ್ರ್ಯಾಗಿದ್ದ ಮಾನ್ಸನ

**||ಏರ||**
ನೂರಾರ ಜನರ ಮ್ಯಾಳ ತಂದಾನೊ
ಬಾಬಾಸಾಹೇಬ ಬಂದೆರಗ್ಯಾನೊ
ಪೋಲೀಸರನ ಕಡಿದು ಚಲ್ಯಾನೊ

ಅಬ್ರಕೇಳಿ ಮ್ಯಾನ್ಸನ ಎದ್ದಾನೊ
ಕಿಡಿಕಿಡಿ ಆಗಿ ಸಿಡಿದು ನಿಂತಾನೊ
ಆದ್ರೇನು ಹತ್ತು ಹುಲಿ ಸುತ್ತ। ನಡುವೊಂದು ಕುರಿಯು ಸಿಕ್ಕಬಿದ್ದು
ಸುತ್ತ ಮುತ್ತ ಗುಂಡ ಹಾರಿಸುತ್ತ। ಮ್ಯಾನ್ಸನ ಕೂಗಿದರೇನಾಯ್ತು
"ಹಿಡಿದವನ ಕೆಡಹಿಕೊಚ್ಚುತ್ತ। ನುಚ್ಚು ನೂರು ಮಾಡಿರೆನ್ನುತ್ತ
ಬಾಬಾಸಾಹೇಬ್ನ ಮಾತಕೇಳುತ್ತ। ಮುಗಿಸ್ಯಾರ ಅವರ ರಾತ್ರಿಹೊಡೆದು[ಏರ]
ಮ್ಯಾನ್ಸನ ಸಾಹೇಬ್ನ ರುಂಡ ಹಿಂಡಕೊಂಡ
ಬಂದ್ರು ಮೆರೆಕೊಂತ। ಊರ ಜನರ ನಡುವೆ ಕುಣಕೊಂತ
ವೈರಿ ರುಂಟ ಕಟ್ಟಿ ಅಗಸೀಗಿ ಊರಿಗ್ಹಬ್ಬ ಮಾಡಿಬಿಟ್ಟರವರಂತ॥ ೪ ॥

**॥ಚ್ಯಾಲ॥**

ಮರುದಿನ ಊರಗಸಿ ಮುಚ್ಚಿಸಿ ಬಿಟ್ಟಾನೊ
ಕಾವಲಿಗಿಟ್ಟಾನೊ ಬಂಟರನ
ಯುದ್ಧದ ಸಿದ್ಧತೆ ಬಾಬಾಸಾಬ ನಡೆಸ್ಯಾನೊ
ದರ್ಬಾರ ಕರಸ್ಯಾನೊ ತನ್ನವರನ
ಬಂದಂಥ ಜನರಿಗೆ ತಾಂಬೂಲವಿತ್ತಾನೊ
"ಕಾಯಲಿಕೆ ನರಗುಂದ ಮಾನವನ
ಕಡಿಕಡಿದು ಒಟ್ಟಿರೊ ವೈರಿನ್ನ" ಅಂದಾನೊ
"ಮೆರೆಯಿಸಿರಿ ನಿಮ್ಮ ಅಭಿಮಾನವನ"
ಸಂದೇಹವಿಂದೇಕೆ ಧಣಿಗಳಿಗೆ ಬಂದಿತೊ
ಮುಕ್ಕಿ ನೀರ್ಗುಡಿವೆವೋ ಫಿರಂಗೇರ್ನ"
ಎಂದು ಭೂಮಿ ಮುಟ್ಟಿ ಆಣಿಮಾಡಿ ಗಟ್ಟಿ
ಬಾಬಾಗ ಇತ್ತರೋ ಧೈರ್ಯವನಾ
"ಹೇಡಿಕೇಡಿಗಳಿವರು ಕದನವ ಗೆದ್ದವರೆ?
ಕೊಂಡರೋ ಭೂಮಿಯನತಿ ಮೋಸದಿ
ದಣಿಸಿ ಕುಣಿಸಿ ಬಿಟ್ಟು ರಣಕೆ ದಿಗ್ಬಲಿಕೊಟ್ಟು
ಮೆರೆಯೋಣ"ವೆಂದಾನೋ ಸಂತೋಷದಿ
ಉಕ್ಕುಕ್ಕು ಉತ್ಸಾಹದಿಂದಲಿ ದರುಶನ
ಪಡೆದಾನೊ ಕುಲಸ್ವಾಮಿ ವೆಂಕಟೇಶನ
ಸಾಷ್ಟಾಂಗ ಹಾಕ್ಯಾನೊ ತಾರಿಸೊ ಎಂದಾನೊ
ಕಾರುಣ್ಯದಿಂದಲಿ ರಿಪು ಬಂಧನ
ನರಗುಂದ ಕ್ವಾಟಿ ಸುತ್ತಿ ನೋಡ್ಯಾನೊ
ಶಸ್ತ್ರಾಸ್ತ್ರ ಸಜ್ಜ ಮಾಡ್ಯಾನೊ
ಬಂಟರಿಗೆಲ್ಲ ಮೇಜವಾನಿ ಮಾಡಸ್ಯಾನೊ
ಕಂಡವರ ತೋಫಿನಾರ್ಭಾಟ ಭೂಮಿ ನಡುಗಿ ನಡುಗಿ ಹೋತ್ಯಕಟ ॥

||ಚಾಲ||

ಮ್ಯಾನ್ಸನ ಸಾಹೇಬನ ಹತ್ರ
ಸಿಕ್ಕ ಕಾಗದ ಪತ್ರ ನೋಡಿ ಒತ್ರ
ದಿಂದ ಓದ್ಯಾನೊ ಕುಂತು ವಾಡೇದಾಗ। ಘಾತವಾಯಿತೆಂದಾನೊ ಮನ।
ರಾವಸಾಹೇಬ ಫಿತೂರಾಗ್ಯಾನ
ನಮ್ಮ ಸಂಚನ್ನೆಲ್ಲ ತಿಳಿಸ್ಯಾನ
ಕೇಳಿ ಮ್ಯಾನನಸಾಂಬ ಬಂದಾನ
ನರಗುಂದ ಕ್ವಾಟ್ಯಾಗ ಫಿತೂರಿ ನಡಸ್ಯಾನ
ಬನ್ಯಾಬಾಪು ಕೃಷ್ಣಾಜಿಪಂತನ್ನ
ಮಳ್ಳಮಾಡಿ ಒಡಕೊಂಡಾನ
ಶಗಣಿ ಮದ್ದಿನಾಗ ಕೂಡಿಸ್ಯಾನ ಕ್ವಾಟ್ಯಾನ ಮದ್ದು ಗೊಬ್ಬರ
ಬೇರಿಗೆ ಕೊಡಲಿ ಹಾಕ್ಯಾನ
ಕದನ ಹ್ಯಾಂಗ ನಡೀಬೇಕಿನ್ನ

||ಏರು||

ಹಿಂತೆಗೆಯಬೇಕ ಹ್ಯಾಂಗಿನ್ನ। ಅಂತ ಒಳಗ ಬೆಂದು ನೊಂದಾನ

||ಚಾಲ||

ಕುದಿಕುದಿ ಕುದಿದು ಅಂತಾನ
ಬನ್ಯಾ ಬಾಪು ಕೃಷ್ಣಾಜಿ ಪಂತನ್ನ
ಕಟ್ಟಿ ತರ್ರೀಗ ಬಿಡಬ್ಯಾಡ್ರಿನ್ನ
ಎಂದು ದೂತರ್ನ ಬ್ಯಾಗ ಕಳವ್ಯಾನ
ಕಾಲಮಿಂಚಿ ಹೋಗಿ-ಬಿಟ್ಟಿತ್ತು। ಓಡಿ ಹೋದ್ರೊ ಮಾಡಿ ಮಸಲತ್ತು
ಬಾಬಾಸಾಹೇಬ್ಗ ಬಂದಿತಾಪತ್ತು। ಇನ್ಹ್ಯಾಂಗ ದಾಟಬೇಕು ಕುತ್ತು
ಕುಂತು ಯೋಚಿಸ್ತಾನ ಭಾಳಾಹೊತ್ತು। ಇನ್ನೇನ ಮಾಡಬೇಕು ಗತ್ತು

||ಏರು||

ಕೊನೆಗೆ ನಿರ್ಧಾರಕ್ಕ ಬಂದು ಬಿಟ್ಟಾನ
ಎದುರ್ಸಾಕ ರಣದಾಗ ಫೀರಂಗೇರ್ನ
ಸಡ್ಡ ಹೊಡದು ನಿಂತಾನೊ। ತನ್ನ ದೈವ ಪರೀಕ್ಷಾಕ

||ಚಾಲಾ||
ಅರಮನೆಗೆ ಬಂದಾನ ಬಾಬಾಸಾಹೇಬ

ರಾಣಿನ್ನ ನುಡಿಸ್ಯಾನ ಕೌತುಕದಿ
ಚಿಂತೆಯ ಕಂತ್ಯಾಕ ಜೀವದ ಚಿಂತ್ಯಾಕ
ಈಶ ಸಂಕೇತಕ್ಕ ತಲೆ ಬಾಗಿದಿ,
ನೊಂದು ಬೆಂದ ರಾಣಿ ಕುಂದದೆ ಕೇಳ್ಯಾಳೊ
ನಮಗೇನು ಗತಿಯಿನ್ನು ಮರುಗಿದರೆ?
ಭಾರಿ ಫಿರಂಗೇರ ಕಾಲ್ಕೆದರಿ ಕದನವ
ನಾವಾಗಿ ಬೇಕಾಗಿ ಹೂಡಿದರೆ
ದೇವರ ದಯೆಯಿಂದ ಸಕಲ ಬೆಂಬಲದಿಂದ
ಹೋರಾಟಕಿಳಿದೇನೆ ಮುದ್ದು ಖಣಿ
ಹೇವದಿ ಹೋರಾಡಿ ವೈರಿನ್ನ ಈಡಾಡಿ
ಸಂತೋಷ ತಾರೆಮಗೆ ಶೂರಮಣಿ,
ಎಂದು ತಾವಃ ಮಾತನಾಡ್ಯಾರ
ಮುಂದಿನ ಯೋಚನಿ ಮಾಡ್ಯಾರ

**||ಚಾಲ||**

ಧಾರವಾಡ ದೊರೆಗಳು ಮ್ಯಾನ್ಸನ ಕಗ್ಗೊಲೆಯ
ಸುದ್ದಿಯ ಕೇಳ್ಯಾರೊ ಹೌಹಾರಿ
ಕಿಡಿಕಿಡಿಯಾಗುತೆ ರಾಣಿನ್ನ ಕೇಳ್ಯಾರೊ
ದಂಡನೆ ದ್ರೋಹಿಗೆ ಏನ್ಹೇಳಿರಿ
ರಾಣಿ ದರ್ಬಾರಾದಾಗ ಮಂತ್ರಿಮಂಡಳದಾಗ
ಮಾಡ್ಯಾಳೊ ಸಾರಾಸಾರಾ ವಿಚಾರ
ಕೆಂಗಿಡಿ ಕಾರುತ ಹೇಳ್ಯಾರಾ ರಾಣಿಗಿ
'ನಮ್ಮೊಡಲ ತಾಪವ ನೀವ್ಬಲ್ಲಿರಾ'
ಸೇಡು, ತಾಯೆ, ಸೇಡು ಬೇಕು ಸೇಡು ಮತ್ತೇನಿಲ್ಲ
ಮುರುಕದ ಮಾತೀಗ ಬೇಕಾಗಿಲ್ಲ
ವೀಳ್ಯೆವ ಕೊಡು ಬ್ಯಾಗ ಸೈನ್ಯವ ಕಳುವೀಗ
ದಾಸನ್ನ ದಂಡಿಸಿ ಬರಬೇಕಲ್ಲ.

**||ಯೇರ||**

|ಹೊಂಟಿತೊ ರಾಣಿಯ ಫರ್ಮಾನ | ಮತ್ತ
ಹೊರಟಾರೊ ನರಗುಂದಕಾಗಿನ್ನ | ಕೆಂಪು
ಸೈನಿಕರು ಕರ್ನಲ ಸಾಹೇಬನ | ಮುಂದ
ಸಾಗೂತ ಬಿಟ್ಟಾರ ಬೀಡನ್ನ | ಕಂಡು
ಗುಂಡಿಗೆ ಒಡದಿತೊ ಬಾಬಾನ | ನಿಂತು
ನೋಡ್ತಾನೊ ಬಿಟ್ಟಟ್ಟ ಕಣ್ಕಣ್ಣ

ವೆಂಕಟರಮಣಗೆರಗಿ ಬೇಡ್ತಾನೊ । ತನ್ನ
ಜನರ ಬಿಡದೆ ಕರಸ್ಯಾನೊ । ದಾಳಿ
ಮಾಡಿರೆಂದು ಹುರಿದುಂಬಿಸ್ಯಾನೊ । ರಣ
ಭೇರಿ ಬಿಡದೆ ಹೊಡ್ಸ್ಯನೊ । ಸಿಡಿ
ಲೆರಗಿದಂತೆ ಧುಮಕ್ಯಾನೊ ।

**||ಇಳವು||**
ಫಿರಂಗೇರ್ನ ಕಡಿದು ಹಾಕುವದಕ । ರಣಬಲಿಯನೀಗ ಕೊಡುವುದಕ ||
ಸಾಗಿ ಬರುವ ಸೈನ್ಯ ನೋಡುತಲಿ
ಫಿರಂಗೇರು ಕುದರಿ ತಿರವುತಲಿ
ಬೆನ್ನು ತೋರಿ ಓಡಿ ಓಡುತಲಿ
ಒಡ್ಯಾನೊ ಜಾಲ ಮೋಸದಲಿ

**||ಏರು||**

ಕನ್ನಡದ ಬಂಟರಿಂದ ಕಂಡು
ಮತ್ತ ಹುರುಪುಗೊಂಡ
ಹಿಡಿ ಹಿಡಿ ಕಡಿ ಬಡಿಯೆಂದು
ಅಟ್ಟಿಕೊಂಡು ಬಂದು
ಮತ್ತ ತಡದಾರೊ ಹಳ್ಳದ ದಂಡ್ಯಾಗ

**||ಬದಲಾ||**
ಅಡಗಿದ್ದ ಫಿರಂಗೇರು ಧುಮುಕಿ
ತೋರ್ಯಾರೊ ಮರ್ದುಮಕಿ
ತರತರ ತರ್ರನೆ ತರಿದಾನೊ
ಬಾಬಾಸಾಹೇಬ್ನ ದಂಡ ಕೊಚ್ಚಾರೊ
ಕ್ಷಣದಾಗ ಮುಗಿಸಿಬಿಟ್ಟಾರೊ
ಬಂಡಿನ ಜನರು ಸಾರಿ ಬಂದಾರೊ
ಕತ್ತಿ ಕಠಾರಿ ಬಿಟ್ಟು ಕೊಟ್ಟಾರೊ
ಪ್ರಾಣದಾನ ನೀಡಿರೆಂದಾರೊ
ಸ್ವಾಭಿಮಾನ ಬಿಟ್ಟನಿಂದರೊ
ಹೆಂಡ್ರು ಮಕ್ಕಳ್ನ ಬಿಡದೆ ನೆನಿಸ್ಯಾರೊ ಹುಲ್ಲುಕಡ್ಡಿ ಕಚ್ಚಿನಿಂದಾರೊ

**||ಚಾಲ||**

ದಂಡಿನ ದುರ್ಗತಿ ಕಂಡ ಬಾಬಾಸಾಹೇಬ
ಮಮ್ಮಲ ಮರುಗ್ಯಾನೊ ಮನದಾಗ

ಕೊಟ್ಟ ಭಾಷೆಗೆ ತಪ್ಪಿ ವಂಚಕನಾದೆಯೊ
ಡಂಬಳ ಭೀಮರಾಯನೆಂದಾನೊ
ಕ್ವಾಟ್ಯಾಗ ಇರುತನಕ ಗಂಡುಗಲಿಗಳು ನಮ್ಮ
ಬಂಟರು ಕೈಬೀಸಿ ಕಾದಲಿಲ್ಲ
ನಂಬಿದ ನನ್ನನ್ನ ಹಳ್ಳಕ್ಕ ನೂಕಿದರು
ತಾವಂತು ದಡವನ್ನೆ ಕಾಣಲಿಲ್ಲ
ನಾನಿನ್ನ ಭಕ್ತನು ಎನ್ನಾಪರಾಧವನು
ಮನ್ನಿಸಿ ಕಾಪಾಡೊ ಮುರವೈರಿಯೆ
ಎಂದು ತಿರುಗಿಸಿ ತೇಜಿ ಧಾವಸ್ಯಾನೊ ಕ್ವಾಟಿಗಿ
ಬಂದರೇನಗಸಿಯು ತೆರೆಯಲಿಲ್ಲ
ನಿಂದರದೆ ಫರಾರಿ ಆದನಲ್ಲ

**||ಇಳುವು||**

ಯುದ್ಧದ ಸುದ್ದಿಕೇಳಿ ಹೌಹಾರಿ
ಕುಸಿದುಬಿದ್ದಾಳೊ ರಾಣಿ ಸಾವಿತ್ತರಿ
ಮತ್ತು ಅತ್ತಿನ್ನಕರೆದು ಕೇಳ್ಯಾಳೊ
ದಾರಿ ನಮಗ ಏನಂತ್ರಿ
ಸೊಸಿನ ಮೈದಡವಿ ಮುಪ್ಪಿನ ಮುದಕಿ ಹೇಳ್ಯಾಳೊ
ಹೀಂಗ ಮೋಸಮಾಡಬಾರದಿತ್ತು
ಕಡಿದು ಹಾಕಿ ಹೋಗಬೇಕಿತ್ತು
ಇನ್ನೇನು ನಮಗ ಸಂಪತ್ತು
ಬಾಬಾಸಾಹೇಬನಿಲ್ಲದೀ ಹೊತ್ತು
ಹೊಂಟಾರೆ ಹೋಗುನ ಮಗಳೆ
ಅವನ ಹುಡಿಕ್ಯಾಡುತೀಗಳೆ

**||ಚಾಲ|||**

ಘೋರಾಂಧಕಾರದಲಿ ಸಾರಿ ಹೊಂಟಾರವರು
ಹೆಂಗಳೆಯರಿಬ್ಬರು ಕೆಚ್ಚಿನಲಿ
ಎಡವಿ ಮುಗ್ಗರಿಸುತ್ತ ಕಲ್ಮುಳ್ಳ ತುಳಿಯುತ್ತ
ಕಂಗಾಲಾದರೊ ವಿಧಿವಶದಲಿ
ಬೆಳಗಾಗ ಬಂದರೂ ಸುಳಿವೇಸಿಗಲಿಲ್ಲ
ಭಂಡ ಬಾಳೇಕಿನ್ನು ಈ ಜಗದಲಿ
ನಾವೇಕೆ ಸಿಕ್ಕೇವೊ ಎಂದೆನುತ ಹಾರ್‍ಯಾರೊ
ಮಲಪೆಯ ತುಂಬಿದ ಮಡುವಿನಲಿ

ಕನ್ನಾಡ ಸತಿಯರು ಇನ್ನೆಂತು ತಾಳುವರೊ
ಅಪಮಾನ ವೈರಿಯ ಬಂಧನದಲಿ॥ ೯ ॥

ಇತ್ತ ಫಿರಂಗೇರು ಸಾಗಿ ಮುನ್ನುಗ್ಗ್ಯಾರು
ತೆರದಿದ್ದ ನರಗುಂದದಗಸೀಗಿ
ಹೊಡಿಬಡಿ ಕಡಿಬಡಿಯೆಂದು ಧಾವಿಸಿಬಂದಾರು
ಬಾಬಾಸಾಹೇಬನ ಅರಮನಿಗಿ
ಹಕ್ಕಿಹಾರಿತಲ್ಲ ಪಾರಾಗಿ ಹೊಯ್ತಲ್ಲ
ದೂರದಿ ಕಂಡರು ದುರ್ಗವನು
ನಿಂದರದೆ ಹಾರ್‍ಯಾರು ಕ್ವಾಟ್ಯಾಗ ಹುಡುಕಿದರು
ಬಾಬಾಸಾಹೇಬನು ಸಿಗಲೇ ಇಲ್ಲ
ಭೂಮಿಯ ಋಣ ಇಂದು ತೀರಿಹೋಯ್ತಿಂದು
ಪಾರಾಗಿ ಹೋಗುವೆ ಇನ್ನೆಲ್ಲಿಗೆ
ಇಲ್ಲಿಲ್ಲದಿದ್ದರೂ ಮತ್ತೆಲ್ಲಿಹೋದರು
ಹಿಡತಂದುಹಾಕೇವು ನಿನ ಗಲ್ಲಿಗೆ
ಎಂದು ಕರ್‍ನಲಸಾಬ ಮನಸು
ಮಾಡ್ಯಾನೊ ಊರಸುಲಗಿಗಿ। ಸೈನಿ
ಕರ್‍ನ ಬಿಟ್ಟು-ಬಿಟ್ಟಾನೊ ಹಾದಿಹಾದೀಗಿ।

**॥ಏರು॥**

ಘುಡುಘುಡುನೆ ಹರಿದು-ಬಂದಾರೊ ಹತ್ತ
ತ್ತರಂತೆ ಗುಂಪುಗ್ಯಾರೊ। ಕೇರಿ
ಕೇರಿಗಳನ ಶೋಧಿಸ್ಯಾರೊ। ಕತ್ತಿ
ಕಠಾರಿ ಜಪ್ತಮಾಡ್ಯಾರೊ। ಕೊಡ್ಲಿ
ಕುಡುಗೋಲ ಬಿಡದಾದರೊ। ಊರ
ಜನರು ಹೌಹಾರ್‍ಯಾರೊ। ಮನಿ
ಮಾರೀಗಿ ಎರವಾದರೊ। ಕಣ್
ಕಣ್ಣ ಬಿಟ್ಟು ನಿಂದಾರೊ
ಫಿರಂಗೇರ ಅಟ್ಟಹಾಸಕ್ಕ। ನರಗುಂದ ನಡುಗಿ ಹೋಯ್ತದಕ
ತುಂಬಿದ ಪ್ಯಾಟಿ ಭರದಿ ಹೊಕ್ಕಾರೊ
ಸರಾಫಗಟ್ಟಿ ಬಿಡದೆ ಸುಲಿದಾರೊ
ಮುತ್ತು ಮಾಣಿಕ ಬಳಿದೊಯ್ದಾರೊ
ಸಾರಿ ಕಂಚಗಾರೋಣಿ ಸೂರಿ-ಮಾಡ್ಯಾರೊ
ಮನ್ಯಾನ ಹಾಲು ಬೆಣ್ಣೆ ಬಿಡದಾದರೊ
ಕಾಳುಕಡಿ ತುಂಬಿ ಸಾಗಸ್ಯಾರೊ

ಜವಳಿ ಸಾಲೆಲ್ಲ ಖಾಲಿಮಾಡ್ಯಾರೊ
ಖಜ್ಜೂರಿ ಸಕ್ಕರಿಬೆಲ್ಲ। ಮೆದ್ದು ಹುಡದಿ ಹಾಕಿ ಬಿಟ್ರಲ್
ಕೊಂಡೊಯ್ಯಲಾಗಲಿಲ್ಲ ಎಲ್ಲ। ಈಡಾಡಿ ಚಲಿ ಬಿಟ್ರಲ್ಲ
ಊರಿಗೂರೆ ತೊಳೆದು ಹೋದ್ರಲ್ಲ। ರಾಕ್ಷಸರೊ ಮನುಜರೇನಲ್ಲ

**||ಇಳುವು||**

ವೆಂಕಟೇಶ ದೇವರ ಮೂರ್ತಿ ಆಗೇದೊ ಭಿನ್ನಾ
ಗೋವಿಗೆಚೂರಿ ಹಾಕೋರೋ ಇನ್ನಾ
ಎಂಬೊ ಕಣಿ ನಿಜವೊ ಎಂಬುದನ್ನಾ
ಮನಗಾಣಿಸಿಕೊಟ್ಟು ಹೋದಾರೊ। ಕಟುಕರೊ ಫಿರಂಗೇರಿವರೊ॥ ೧೦ ॥

**||ಚಾಲ||**

ಇತ್ತ ಫಿರಂಗೇರು ಬಾಬಾಸಾಹೇಬನ
ಶೋಧವ ಮಾಡುತ್ತ ತಿರುಗ್ಯಾರೊ
ತೊರಗಲ್ಲ ದೂರ್‍ಯಾಗ ಹೆಡೆತುಳಿದ ಹಾವಾಗಿ
ಹರಿದಾಡುತಿದ್ದವನ ಕಂಡಾರೊ
ಬೆನ್ನಟ್ಟಿ ಮುತ್ತ್ಯಾರೊ ಬಿಡದೆ ಗುಂಡ್ಹಾಕ್ಯಾರೊ
ಗುಂಡಿಗೆ ಬಿದ್ದವನ ಹಿಡಿದಾರೊ
ವೈರಿ ಸಿಕ್ಕನೆಂದು ಕುಣಿಕುಣಿದು ಕುಣಿದಾರೊ
ಬಿಡದೆ ಬೆಳಗಾವಿಗೆ ಕಳಿಸ್ಯಾರೊ
ಹಿಡದೊಯ್ದು ಬೆಳಗಾವಿ ಕ್ವಾಟ್ಯಾಗ
ವಿಚಾರ್ಣೆ ನಡೆಸ್ಯಾರೋ। ಮತ್ತ
ಗಲ್ಲಿನ ಶಿಕ್ಷೆ ಮಾಡ್ಯಾರೊ। ಇರದ
ಶೂಲಕ್ಕೇರಿಸ ಬೇಕಂತಾರೊ। ಫಾಸಿ
ಕೊಡುವ ದಿನ ಬಂತಲ್ರೊ। ಆದ್ರ
ಬಾಬಾಸಾಹೇಬ ಸಿಗಲಿಲ್ಲೊ। ಕೆಲಸ
ಮುಗಿಸಿ ಬಿಟ್ಟವೆಂದಾರೊ। ಸುಮ್ನೆ
ಜನರ ಮಂಕ ಮಾಡ್ಯಾರೊ।
ಕಳ್ಳರಂತೆ ಬಂದು ಮಳ್ಳ ಜನರ ಮೋಸ
ಮಾಡಿ ರಾಜ್ಯ ವಾಳ್ತಾರೊ !॥ ೧೧ ॥

**ರಚನೆ :** ಶ್ರೀ ದ.ಲ. ಕೆರೂರ, ಎಂ.ಎಂ. ಹುಬ್ಬಳ್ಳಿ
**ಕೃತಿ :** ಕ್ರಾಂತಿವೀರ ಬಾಬಾ ಸಾಹೇಬ

# ೩೨. ನರಗುಂದ ಬಾಬಾಸಾಹೇಬ

ಚಂದದಿಂದ ನರಗುಂದ ಬಾಬಾ ಸಾಹೇಬ
ರಾಜ್ಯವಾಳಿ ||
ಕುಂದದಂಥ ಬೆಳ್‌ಜಸದೊಳೆಸೆವನಾ
ಸ್ವಾಭಿಮಾನಶಾಲಿ|| ೧ ||

ಜನತೆಯಲ್ಲಿ ಸೌಜನ್ಯ ಜನಿಯಿಸುವ
ವಿದ್ಯೆ ಮೊಳಿಯಿಸಿದನು
ಮನವನಲರಿಸುವ ಚಲುವ ಕಳೆಯ
ಬಳ್ಳಿಯನು ಬೆಳೆಯಿಸಿದನು|| ೨ ||

ಅಂದು ಬ್ರಿಟಿಶರರೊಂದೊಂದೇ ರಾಜ್ಯಗಳ
ನುಂಗಿ ನೊಣೆಯುತಿರಲು |
ಬಂಧುರತೆಯ ನರಗುಂದ ಕೋಟೆಯನು
ಬೇಧಿಸಲ್ಕೆ ಬರಲು|| ೩ ||

ಶ್ರೇಷ್ಠ ತೋಟ ಹಾಳಾಗುವಾಗ
ಮರ್ಕಟನ ಮುಖದ ಕಾಯಿ |
ಹುಟ್ಟುವಂತೆ ಖಲರೊಗೆದು ಬಿಡಿಸಿದರು
ನಾಡ ಬಾಯಿ ಬಾಯಿ|| ೪ ||

ನಾಡಕೇಡಿಗಳು ಕೂಡಿಸಿದರು ಮದ್ದಿನಲಿ
ಸಗಣಿಯನ್ನು
ಓಡಲಿಲ್ಲ ದೊರೆ ಧೀರತನದೊಳೆದುರಿಸಿದ
ಬಂದುದನ್ನು|| ೫ ||

ಮೀರಿ ಹೋರಿ ವೈರಿಯನು ಹಣ್ಣುಗಾಯ್
ನೀರುಗಾಯಿ ಮಾಡಿ
ವೀರಸ್ವರ್ಗ ಏರಿದರು ಬಾಬಾ ಸಾಹೇಬ
ಕ್ರಾಂತಿ ಹೂಡಿ|| ೬ ||

**ರಚನೆ :** ಎ.ಜಿ. ನೀಲಗಾರ
**ಕೃತಿ :** ಜಾನಪದ ಝೇಂಕಾರ

# ೩೩. ಮುಂಡರಗಿ ಭೀಮರಾಯ

ಚೆನ್ನಪಟ್ಟಣದೊಳು ಹೊನ್ನೆ ಭರತಪುರ
ಪುಣ್ಯ ಶಹರ ದಿಲ್ಲಿಯೊಳಗ |
ಹೆಸರಿಗೆ ಕಿಲ್ಲೇವು ಕಟ್ಟೇಸಿದವರಿಗೆ
ಕೋಟಿ ಪಾಲಿಗೆ ಸಾಟಿ ಉಂಟೆ
ಹೊಸ ಕೀಟಕ ಭೀಮರಾಯ ದೊರೆಯೆ
ಧೀರ ಕುಂಪಣಿ ಸರದಾರ ಟೈಲರ
ಸಾಹೇಬಗ್ಯಾರ ಸರಿಯೋ ಧರೆಯೊಳಗ ||

ಎಲ್ಲಿ ಹಮ್ಮಿಗಿ ಎಲ್ಲಿ ದೇಸಾಯಿ
ಎಲ್ಲಿ ಮದ್ದು ಗುಂಡು | ಠಾಣಾ ಪೋಲಿಸ ಬಂದ ನಗುತ
ಕರಸೀದ ಶಾನುಭೋಗರನು ಹೋಗುತ
ತೋರಿಸು ಮದ್ದುಗುಂಡು ಎಮಗೆಂಬುತಾ
ದೇಸಾಯಿ ಒಳಗೆ ಬಂದರು ಬಹು ತುರ್ತಾ
ಮೆಲ್ಲಕೆ ಇವರು ಕೊಲ್ಲಲಿಕ್ಕೆ ಬಂದರೆಂದು
ಓಡ್ಯಾನು ದೇಸಾಯಿ ಅಳುತ
ಧೀರ ಕುಂಪಣಿ ಸರದಾರ ಟೈಲರ
ಸಾಹೇಬಗ್ಯಾರ ಸರಿಯೋ | ಧರಿಯೊಳಗ|| ೧ ||

ಬಿಡುಬಿಡು ದೇಸಾಯಿ ಹಿಡಿಹಿಡಿ ಕತ್ತಿ
ನಡಿನಡಿ ಕುದುರೆಯನು ಏರು
ಇರುತಲಿ ಬಂಟರನು ಕರಿಸಿದನು
ಹಮ್ಮಿಗಿಪುರ ಆ ಕ್ಷಣಕೆ ಹೊಕ್ಕನು
ಶಾನುಭೋಗನ ಕಿವಿ ಮೂಗು ಕೊಯ್ಸಾನು
ಬಂದ ಸವಾರನ ಕಡಿದು ಬಡಿದು
ಧಮ್ ಧುಡುಕು ಮಾಡಿದನು
ಧೀರ ಕುಂಪಣಿ ಸರದಾರ ಟೈಲರ
ಸಾಹೇಬಗ್ಯಾರಿಲ್ಲ ಸರಿಯೋ | ಧರೆಯೊಳಗ|| ೨ ||

ಭೀಮರಾಯ ಕೊಪ್ಪಳಕೆ ಬಂದಾನೆಂದು
ಆಗ ಬರೆದನು ಸುಭೇದಾರಾ
ಲಿಂಗಸೂರ ಛಾವಣಿ ಇತ್ತೊ ಸಾವಿರ
ತುರ್ತಿನ ಮಂದಿ ತಂದ ಸರದಾರ
ಕೊಪ್ಪಳ ಸುತ್ತ ಕುದರೆ ವ್ಯಾಪಾರ
ನಾಲ್ಕು ಕಡೆ ತೋಪು ತಯ್ಯಾರಾ

ಹೂಡಿ ಹೊಡೆದನೋ ನೆಲೆ ಇಲ್ಲದ ಗುಂಡು
ಕಿಲ್ಲೆ ಮಾಡಿದನು ಚೂರು ಚೂರಾ
ಧೀರ ಕುಂಪಣಿ ಸರದಾರ ಟೈಲರ
ಸಾಹೇಬಗ್ಯಾರ ಸರಿಯೋ l ಧರೆಯೊಳಗ॥ ೩ ॥

ಕಿತ್ತ ಕತ್ತಿ ಕೈ ಎತ್ತಿ ಸುತ್ತಮುತ್ತ
ಕೇಳತಾನ ಭಂಟರನ
ಭೀಮರಾಯ ಹೊಡೆದ ರಣಶೂರ
ತಡೆಯದೆ ಹಾರುತಿದ್ದವು ಶಿರಾ
ಹರಿಯುತೈತೋ ಕೆಂಪು ನೆತ್ತರಾ
ಒಮ್ಮೆ ಗುಂಡು ಹಾರಿತೋ ಸಾವಿರಾ
ಹಮ್ಮಿಗಿ ದೇಸಾಯಿ ಭೀಮರಾಯ ದೊರೆ
ಅದೆ ಕ್ಷಣಕ ಸಂಹಾರಾ
ಧೀರ ಕುಂಪಣಿ ಸರದಾರ ಟೈಲರ
ಸಾಹೇಬಗ್ಯಾರ ಸರಿಯೋ l ಧರೆಯೊಳಗ॥ ೪ ॥

**ರಚನೆ :** ಎ.ಜಿ. ನೀಲಗಾರ
**ಕೃತಿ :** ಜಾನಪದ ಝೇಂಕಾರ

## ೩೪. ಮೈಲಾರಗಿ ಮಹದೇವಪ್ಪ

ಕಾಂತನ ಕಳಕೊಂಡ ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹದೇವ ಮೈಲಾರ
ಕರಿನಾಡಿನ ಕರವೀರಕೇಸರಿಯ ನೆನಪಿರಲಿ ಎನ್ನುತ ನಿರಂತರ
ಬರೆದನು ಲಾವಣಿಕಾರನು ಹರಡಿದ ಹಾಡಲಿ ನಾನಾ ತರ
ತುಂಟರ ತುಂಟನು ಭಂಟರ ಭಂಟನು ಸಾತ್ವಿಕದೊಳು ಸರದಾರ
ದಿಟ್ಟನ ಹೆಸರನು ಹುಟ್ಟಿದ ಕೂಸಿಗೆ ಇಟ್ಟರೆ ತೀರದುಪಕಾರ

**॥ಇಳವು॥**

ರಾಣಿಬೆನ್ನೂರ ತಾಲೂಕಿನೊಳಗೆ ಐತಿ ಸಣ್ಣ ಹಳ್ಳಿ
ಘನಹಳ್ಳಿ ಎಂಬುದು ಮೋಟೆಬೆನ್ನೂರ ಎಂಬಲ್ಲಿ
ಜನಿಸಿದನು ನಮ್ಮ ವೀರರ ವೀರನು ಅಲ್ಲಿ

**॥ಏರು॥**

ಬಿತ್ತಿ ಜಗತ್ತಿಗೆ ಅನ್ನವ ಇಕ್ಕುವ ರೈತರೊಳು ಹುಟ್ಟಿದ ಗಂಭೀರ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹದೇವಣ್ಣ ಮೈಲಾರ ‖ ೧ ‖

ಸಣ್ಣವನಿರುತಿರೆ ಶಾಲೆಗೆ ಹೋದರೆ ಸ್ವಾತಂತ್ರ್ಯ ವೀರರ ಚರಿತೆಯನು
ಬಣ್ಣದ ಮಾತಿಗೆ ಕಣ್ಣನು ಎತ್ತದೆ ಓದುವ ಆಸೆಯನಿಟ್ಟಿದ್ದನು
ಆಹಾ ಸ್ವಾತಂತ್ರ್ಯ ಮಹಾಸ್ವಾತಂತ್ರ್ಯ ಸ್ವಾತಂತ್ರ್ಯ ಮರುಗಿಸಿತು ಅವನನ್ನು
ಮಹಾದೇವಣ್ಣನ ನಾಡಿಯ ರಕ್ತವು ಪರಿಸಿತು ಆ ಮಹಾ ಮಂತ್ರವನು
ಆರ್ಯಕಾಲದ ಭಾರತ ಸಿರಿಯನು ಮನದೊಳು ನೆನೆಯುತ ಮರುಗಿದನು
ಭಾರತ ಭಾಗ್ಯದ ಮಹಾತ್ಮಾಗಾಂಧಿಯ ಸ್ವಾತಂತ್ರ್ಯ ಕೂಗನು ಕೇಳಿದನು

**||ಇಳವು||**

ಕಡುಹರುಷದಿ ಶಾಲೆಗೆ ಶರಣು ಹೊಡೆದನಾ ಭಂಟ
ಬಾಡಿದ್ದ ಭಾರತದ ಸ್ವಾತಂತ್ರ್ಯ ಪಣವನು ತೊಟ್ಟ
ಕುಡಿಮೀಸೆಯ ತೀಡುತ ಶಾಂತಿ ಕಾಳಗಕೆ ಹೊಂಟ

**||ಏರು||**

ಸತಿಸಿದ್ಧಮ್ಮನ ಕೂಡಿಕೊಂಡು ತಾ ಸಾಬರಮತಿ ಕಂಡ ಮಹಾತ್ಮರ
ಶಾಂತಿ ಸಮರದೊಳು ಗುಂಡಿನೇಟಿನೊಳು ಮಡಿದ
ಮಹದೇವಣ್ಣ ಮೈಲಾರ ‖ ೨ ‖

ಗಾಂಧಿಯ ದೀಕ್ಷೆಯ ಹೊಂದುತ ಹಿಂದುಸ್ಥಾನದ ಜನಗಳ ಮೂಲಹಿತ
ಖಾದಿಯ ಕೈಗಾರಿಕೆಯ ಕಾರ್ಯದೊಳು ಹಳ್ಳಿಗರ್ಹಿತವೆಂದವನರಿತ
ಉಪ್ಪಿನ ಸತ್ಯಾಗ್ರಹದೊಳು ಗಾಂಧಿಯ ಒಪ್ಪಿದ ಶಿಷ್ಯನು ಎಂದೆನಿಸುತ್ತ
ಹೊತ್ತ ಕೀರ್ತಿಯ ಕರ್ನಾಟಕದ ಮೊದಲನೆ ವೀರನು ಎಂದೆನಿಸುತ್ತ
ಸಹನೆಶೀಲತೆಯ ಶೂರ ಶಿಖಾಮಣಿ ಹುಟ್ಟಿದ ಸೀಮೆಯ ನೆನೆಯುತ್ತ

**||ಇಳುವು||**

ಬಂದೊಡನೆ ಕೂಗಿದನು ಭಾರತ ವೀರರೆ ಏಳಿ
ಖಾದಿಯ ತೊಡುತಲಿ ಸುಖದಿಂ ಬಾಳಿ
ಎಂದ್ಹೇಳುವ ಮಾತನು ಎಲ್ಲಾ ಜನಗಳು ಕೇಳಿ

**||ಏರು||**

ರಿತ್ತಿಯ ಬದಿ ಕೊರಡೂರ ಸಾಹುಕಾರರ ಸಹಾಯ ಸಿಕ್ಕಿತು ಭರಪೂರ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹದೇವಣ್ಣ ಮೈಲಾರ‖ ೩ ‖

ಒಳ್ಳೆಯ ಮಾತಿನೊಳು ಹಳ್ಳಿಯ ಜನರಿಗೆ ಕಲಿಸಿದ ನೋಲುವದಾವಪರಿ
ಕೊಳ್ಳುವ ಜನರಿಗೆ ಉತ್ತಮ ಖಾದಿಯ ನೇಯಿಸಿದ ಸ್ವತಹದ ಕೈಮಾಸಿರಿ
ಉತ್ತಮ ಮಹದೇವಣ್ಣನ ಕೀರ್ತಿ ಹರಡಿತು ಸುತ್ತ ಹತ್ತಹರದಾರಿ
ಸತ್ಯಾಗ್ರಹದೊಳು ಎತ್ತಿದಕೈ ಜನಪ್ರೇಮವು ಬೆಳದಿತು ಮಿತಿಮೀರಿ
ಮಲಸರ್ಜನ ಜಗಜಟ್ಟಿಯಂತೆ ಮೈಕಟ್ಟು ಇತ್ತು ಪೈಲ್ವಾನ ಸರಿ
ಬಲದೊಳು ಭೀಮನು ಕಳೆಯೊಳು ಕಾಮನು ಛಲತೊಟ್ಟರೆ ಅಭಿಮನ್ಯ ಸರಿ

||ಇಳುವು||

ದರವೊಂದು ಕಾಂಗ್ರೆಸ್ಸಿನ ಕೆಲಸದೊಳು ಬಲು ಹುರುಪು
ಸರಕಾರದ ಬೆದರಿಕೆಗೆ ಹಾಕಲಿಲ್ಲ ಅಂವ ಸೊಪ್ಪ
ನೀರು ಬರುತಿಹೆ ಕಣ್ಣಿಗೆ ಬಂದರೆ ಆತನ ನೆನಪು

||ಏರು||

ಸತ್ಯ ಅಹಿಂಸೆಯ ಬಿತ್ತಿದ ಬೀಜವ ಕರ್ನಾಟಕದೊಳು ಸುಕುಮಾರ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹದೇವಣ್ಣ ಮೈಲಾರ|| ೪ ||

ದೇಶ ಹಿತದ ಖರೆ ದಾಸನೆಂದು ಸಹವಾಸ ಮಾಡಿದರು ಜನಮಸ್ತು
ಬಂಧು ದೇಶಭಕ್ತ ಹೊಸಮನಿ ಸಿದ್ದಪ್ಪನವರದು ಮಹದೇವನೊಳು ಪ್ರೀತಿ ಬಹಳಿತ್ತ
ಅಷ್ಟರೊಳಗೆ ಮತ್ತೊಂದು ಕಾಂಗ್ರೆಸ್ ರಣಗಾಳಿಯ ಕೂಗು ಕೇಳಿಸಿತು
ಆಗಸ್ಟ್ ೯, ೧೯೪೨ ಚಲೇಜಾವ್ ಚಳವಳಿ ಠರಾವದು ಪಾಸಾಯಿತು

||ಇಳವು||

ಕೂಗಿದನು ನಮ್ಮ ಮಹದೇವಣ್ಣನು ಹಾಕಿದ ಖಾಸಿಯ ಪಣತೊಟ್ಟು
ಸಾಗಿರಿ ವೀರರೆ ಶಾಂತಿಯ ಕಾಳಗ ಮಾಡಲು ಸಿಕ್ಕೀ ನಮಗೀ ಹೊತ್ತು
ಕಟ್ಟಿಕೊಂಡ ಸಣ್ಣದೊಂದು ಟೋಳಿಯನು ಮಹದೇವ ಭಂಟ
ಹೊತ್ತು ಸಾಧಿಸಿ ನೂರಾರು ಚಾವಡಿ ಸುಟ್ಟ
ಇಷ್ಟಲ್ಲದೆ ಸರಕಾರಿ ಹಣ ಲೂಟಿಗೆ ಹೋದ

||ಏರು||

ಶರ್ತಮಾಡಿದ ನೂರಾರು ಪೋಲಿಸ್ ಬಂದೂಕ ಕಸಿದ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹದೇವಣ್ಣ ಮೈಲಾರ|| ೫ ||

ಸುಸ್ತನು ಮಾಡದೆ ರುಸ್ತುಂ ನೆಗಳೂರ ಹಪ್ತೆಯ ಹೊಡೆದನು
ತೀವ್ರದಿ ಮುತ್ತಿತು ಸರಕಾರ ವಾರಂಟ ತೆಗೆಯಿತು ಸಿಕ್ಕಲ್ಲಿ ಹಿಡಿಯಬೇಕೆನುತಲಿ

ಇತ್ತ ಕೇಳಿ ತನ್ನ ಪತ್ತೆ ಹತ್ತದಂತೆ ವೇಷವ ಬದಲಿಸಿ ಧೈರ್ಯದಲಿ
ಹೊತ್ತು ಮಾಡದಲೆ ಬಾಳಾ ಹೊನ್ನತ್ತಿಯ ಹಪ್ತೆಯ ಹೊಡಿದನು ಜೋರಿನಲಿ
ಮತ್ತೆ ಹೊರಟ ಹೊಸರಿತ್ತಿಯ ಹಪ್ತೆಯ ಹಣವನು ಹೊಡೆಯಬೇಕೆನ್ನುತಲಿ
ಶಿಸ್ತಿನಿಂದ ಹತ್ತಾರು ವೀರಭಟರಿದ್ದರು ಆತನ ಸಂಗದಲ್ಲಿ

**||ಇಳುವು||**

ತವಕದಲಿ ಹೊರಟು ಹೂಡಿದನು ಜೋಡೆತ್ತಿನ ಬಂಡಿ
ಅಪಶಕುನ ತೋರಿ ನಡುದಾರಿಗೆ ಬಿದ್ದಿತು ಬಂಡಿ
ಅಪಶಕುನವ ಲೆಕ್ಕಿಸದ್ಹೊಡೆದನು ರಿತ್ತಿಗೆ ಗಾಡಿ

**||ಏರು||**

ಘಾತ ಕಾಣುತಿದೆ ಈ ದಿನ ಪಯಣವು ಬೇಡೆಂದು ಹೇಳುವ ಸ್ನೇಹಿತರ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹದೇವಣ್ಣ ಮೈಲಾರ|| ೬ ||

ಕೊಂಚ ಮನಕೆ ದಯೆ ಬಾರದ ವಿಧಿಯು ಕರೆದೊಯ್ದಿತು ತಾ ಸರಿಯಾಗಿ
ಹೊಂಚು ಹಾಕಿ ಪೋಲೀಸರು ಪ್ರಾಣವ ತೆಗೆಯಲು ಕುಳಿತಿದ್ದರು ಏಕಾಗಿ
ನೋಡುವ ಪೋಲೀಸರಾಟದ ಸುಳಿವನು ಗೆಳೆಯರಿಗೆ ಹೇಳಿದನವ ಕೂಗಿ
ಮಾಡಿರಿ ಮಡಿಯಿರಿ ಹಿಂದಕೆ ಓಡದೆ ಭಾರತದೇಶದ ಹಿತಕಾಗಿ
ಚನ್ನಿಗ ವೀರನು ಶಾಂತಿಯಿಂದ ಮುನ್ನುಗ್ಗಿದ ಪೋಲೀಸರೆದುರಾಗಿ
ಕನಿಕರ ಇಲ್ಲದೆ ಕದ್ದು ಕುಂತ ಒಬ್ಬ ಪೋಲಿಸ ಗುಂಡಿಟ್ಟ ಬಲವಾಗಿ

**||ಇಳುವು||**

ಹಾ ಎನ್ನುವುದರೊಳಗಾಗಿ ಗುಂಡು ಎದೆಯಲಿ ಹೋಗಿ ಪಾರಾಗಿತ್ತು
ಗಾಯ ಕಂಡು ಜನರು ಕಣ್ಣೀರ್ಹಾಕಿದರು ಅತ್ತು
ಮಹದೇವ ಮಹಿಮೆಯ ಕೇಳಿರಿ ಜನ ಮನವಿತ್ತು

**||ಏರು||**

ನಾಟಿದ ಗುಂಡಿನ ಏಟಿಗೆ ಮಣಿಯದೆ ಮಾಡಿದ ಕಾಳಗ ಘನವೀರ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹದೇವಣ್ಣ ಮೈಲಾರ|| ೭ ||

ನಿಷ್ಠಾವಂತ ಮಹದೇವನು ನಿಂತನು ಗಾಯದಿ ರಕ್ತವು ಸೋರುತಲಿ
ಅಷ್ಟರಲಿ ಮತ್ತೊಂದು ಬರ್ಚಿ ಬಂದು ನೆಟ್ಟಿತು ಎದೆಯೊಳು ಜೋರಿನಲಿ
ಕಿತ್ತು ಬರ್ಚಿಯನು ತಾಳಲಾರದೆ ಬಿದ್ದನು ಆ ಕ್ಷಣ ಭೂಮಿಯಲಿ
ಬಿಟ್ಟನು ಪ್ರಾಣವ ಗಾಂಧಿಯ ತತ್ವದ ವಂದೇ ಮಾತರಂ ಎನ್ನುತಲಿ

ಮಡದಿ ಸಿದ್ಧಮ್ಮನು ದುಃಖ ಮಾಡುತಲಿ ಕಾಂತನೆ ಪೋದಿಯಾ ಎನ್ನುತಲಿ
ಆಡಿದ ಮಾತನು ನಡೆಸು ರಮಣನೆ ಕರೆಹೋಗ ನಿನ್ನ ಸಂಗಡದಲಿ

**||ಇಳುವು||**

ಗಳಸಿದನು ಕೀರ್ತಿಯನು ಅಂತ್ಯದ ತನಕ
ಕಳಕೊಂಡಿತು ಭಾರತ ತನ್ನಯ ಕೊರಳಿನ ಪದಕ
ಕಳಕಳಿಯ ಸಮ್ಮಸಾಹೇಬರು ಮಾಡಿದ ತಕ್ಕ

**||ಏರು||**

ಅತ್ತರೆ ಬಾರನು ಸತ್ತರೆ ಬಾರನು ಮತ್ತೆಲ್ಲಿಗೆ ಆ ಶೂರ
ಶಾಂತಿ ಸಮರದೊಳು ಗುಂಡಿನೇಟಿನೊಳು ಮಡಿದ
ಮೈಲಾರ ಮಹದೇವಣ್ಣ ‖ ೮ ‖

**ರಚನೆ :** ರಾಣಿಬೆನ್ನೂರ ಸಮ್ಮಸಾಬ
**ಕೃತಿ :** ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೩೫. ಕ್ರಾಂತಿವೀರ ವಾಲಿ ಚನ್ನಪ್ಪ

ಕ್ರಾಂತಿ ವೀರ ವಾಲಿ ಚನ್ನಪ್ಪನವರ ಕಥಿ
ಪ್ರೀತಿಲಿಂದ ಕೇಳರಿ ಕುಂತ ಜನರ
ಸ್ವಾತಂತ್ರ್ಯ ಸಲುವಾಗಿ ಆತ್ಮದ ಪರಿವಿಲ್ಲದ ದುಡದ
ಕೀರ್ತಿಪಡೆದ ಭಾರತಾಂಬೆ ಕುವರ
ಸಂಪಗಾಂವಿ ಊರಲ್ಲಿ ಜನ್ಮ ತಾಳಿದರ
ಸಂಣಂದಿರತ ಶೌರ್ಯ ಧೈರ್ಯವಂತರಿವರ
ಸೊಪ್ಪ ಹಾಕಲಿಲ್ಲ ಗಂಡುಗಲಿ ನಾಡಿನವರ
ಕೆಂಪಮೋತಿ ಜನರನ್ನು ಗಾಬ ಮಾಡಿದರ
ಮಾಡಬೇಕು ಇಲ್ಲವೆ ಮಡಿಬೇಕು ಅಂದ ಗಾಂಧೀಯವರ
ಮಾತ ದೃಢವಾಗಿ ನಡಿಸಿದರ
ಭಂಡ ಇಂಗ್ಲೀಷರ ಕೂಡ ತರತರದ ವೇಷ ಹಾಕಿ
ಮೋಸಮಾಡಿ ಚಳವಳಿ ಹೂಡಿದರ
ಬೆಳಗಾಂವಿ ಜಿಲ್ಲೆ ಬಾಗೇವಾಡಿ ಊರಲ್ಲಿ
ಗೆಳೆಯರ ಕೂಡುಕೊಂಡ ಮೊದಲ ಕಾರ್ಯ ನಡಸಿದರ
ಬೆಳಗಾಗುದರೊಳಗ ಹನ್ನೊಂದುಮೈಲ ತಾರ
ಕಂಬಕಿತ್ತ ತಂತಿ ಕತ್ತರಿಸಿದರ
ಮುಂದ ಒಂದು ತಿಂಗಳ ತನಕ

ಒಂದೊಂದ ವಾರದ ತನಕ
ಇಬ್ಬಿಬ್ರ ಸತ್ಯಾಗ್ರಹ ಮಾಡುತ
ಪೋಷ್ಟಡಬ್ಬಿ ಬಾಂವ್ಯಾಗ ಒಗೆಯುತ
ಐದುಸಾವಿರ ಕಿಮ್ಮತ್ತಿನ ಸಾಲಿ ಸುಟ್ಟಬಿಟ್ಟ ಕ್ಷಣದಲ್ಲಿ
ಏನು ಉಳಿಯುದಂತೆ ತಾರ ತಂತಿ ಕಂಬ ಕಡಿಯುದ ನಡದೇ ಇತ್ತ

ಗುರ್ತ ಹತ್ತದ್ಹಾಂಗ ಫೌಜದಾರ ಡ್ರೆಸ್‌ಹಾಕಿ
ಬೆತ್ತ ಹಿಡಕೊಂಡ ತಿರಗ್ಯಾಡವರ ಸ್ವಾತಂತ್ರ್ಯ ಸಲುವಾಗಿ
ಅಕ್ಟೋಬರ ೨೨ ಆ ದಿನ ಸಂಪಗಾಂವಿಯಲ್ಲಿ
ಪೋಲೀಸರ ಬಂದೂಕ ಕಸಿದುಕೊಂಡರ
ಕಣ್ಣಿಗೆ ಖಾರಪುಡಿ ಎಸೆದ ಗುಂಡ ಹಾರಿಸಿದರ
ಕೇಳಲೆ ತಮ್ಮ ಕೆಲಸವನು ಸಾಧಿಸಿದರ

ಸಣ್ಣ ಕೆಲಸಗಳಿಗೆ ಅಣ್ಣ ಮನಸ ಹಾಕಲಿಲ್ಲ
ತಾಲೂಕ ಕಚೇರಿ ಮ್ಯಾಲ ದಾಳಿ ಮಾಡಿದರ
ಏನು ಹೇಳುದೇನು ಅದನ ಪೂರ್ವ ತಯ್ಯಾರ ಮಾಡಿ
ಪೋಲೀಸರಿಗೆ ತಿಳಿಯದಂತೆ ನಡಸಿದರ
ಧಾರವಾಡದಿಂದ ಆರು ಲಾರಿ ಪೋಲೀಸರು ಬಂದಿದ್ದರ
ಕಚೇರಿ ಕಾವಲಕ್ಕೆ ತಯ್ಯಾರ
ಪೂರ ತಿಳಿಕೊಂಡು ಹೊಂಗಲಕ್ಕೆ ಬಂದು ಅಲ್ಲಿ
ಪೋಷ್ಟ ಆಫೀಸ ಸುದ್ಧ ನಷ್ಟಪಡಿಸಿದರ

ಹೇಳಿದರ ತೀರುದಿಲ್ಲ ಇವರ ಕೆಲಸ
ಕೇಳಿದವರಿಗೆ ಸಂತೋಷ ಮನಕ್ಕೆ ವೀರಾವೇಶ
ಇಂಥವರಿದ್ದಾಗ ಆಗುವುದು ಮಹಾಕೆಲಸ
ಸೇನಾಪತಿ ಎನಿಸಿಕೊಂಡಾರ
ಕನ್ನಡನಾಡಿನ ವೀರ ಚೆನ್ನದುಂಗುರ
ಚನ್ನಪ್ಪಣ್ಣ ವಾಲಿ ಅಂತ ಇವರ ಹೆಸರ
ಕ್ರಾಂತಿಕಾರರ ಪದ ಸ್ವತಃ ರಚಿಸಿ ಹೇಳಿದ
ಹುಲಕುಂದ ಭೀಮ ನಾಡೊಳು ಜಾಹೀರ

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೩೯. ಲೋಕಮಾನ್ಯ ತಿಲಕರು

ಶ್ರೇಷ್ಠವಾದ ರಾಷ್ಟ್ರೀಯ ಮುಖಂಡರು
ಲೋಕಮಾನ್ಯ ಟಿಳಕರೆಂಬುವರು

ಮೊದಲಿಗೆ ಅಂಜತಿದ್ರು ಜನರು
ಜೇಲ ಅಂದ್ರ ಅಪಮಾನ ಅಂತಿದ್ರು

ಮೊದಲಿಗೆ ಇವರು ಜೇಲಿಗೆ ಹೋದವರು
ಜನರಲ್ಲಿಯ ಅಂಜಿಕೆ ತಗದವರು

ಜೇಲಿನಲ್ಲಿ ಗೀತಾ ಬರದವರಿವರು
ಆರು ವರ್ಷ ತುರಂಗ ಭೋಗಿಸಿದರು
ಜೇಲ ಅಂದ್ರ ಸ್ವರ್ಗ ಅಂತ ತಿಳಿದವರು
ಅವರ್‍ನ ಕಂಡ ಹೋದ್ರು ಎಲ್ಲ ಜನರು
ಸ್ವರಾಜ್ಯದ ಹಾದಿಯ ತೋರಿಸಿದರು
ತಮ್ಮ ಕೀರ್ತಿ ಕಾಯಂ ಉಳಿಸಿದರು

ಭೀಮಸಿಂಗ ಸಖಿ ಹೇಳಿದರು
ಟಿಳಕರ ವೃತ್ತಾಂತ ತಿಳಿಸಿದರು

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೪೦. ಮಹಾತ್ಮಾ ಗಾಂಧೀಜಿ

ಮಾನವರಾಗಿ ಜನಿಸಿ ಮಹಾತ್ಮರೆನಿಸಿಕೊಂಡ್ರ |
ಮೋಹನದಾಸ ಗಾಂಧಿಜಿಯವರು |
ತನುಮನಧನಗುಣ ಪ್ರಾಣ ಸಹೀತ ನಮ್ಮ ದೀನರಾಗಿ |
ವಿನಿಯೋಗಿಸಿದರು|| ಪ ||

ಪೊರ ಬಂದರದಿ ಕರಮಚಂದನ ಸತಿ ಪುತಳಾಬಾಯಿವರ |
ಸುತರಿವರು !
ಎರಡನೇ ತಾರೀಖ ಅಕ್ಟೋಬರ ಹದಿನೆಂಟನೂರಾ |
ಅರವತ್ತೊಂಬತ್ತರಲ್ಲಿ ಉದಯಾದರು ||
ಚಾಲ್ಯ ಸ್ವಭಾವ ಲಜ್ಜಾ ಶೀಲ ಸಂಕೋಚದ್ದು ಶಾಲೆಯಲ್ಲಿ |

ಕಾಲಿಟ್ಟರಿವರು ।
ಮೂಲಸತ್ಯದ ಮೇಲೆ ನಂಬಿಕಿತ್ತ ಖಾಲಿ ಮಾತಿಗೆ ।
ಬೆಲೆಕೊಡದವರು ॥
ಪರೀಕ್ಷೆಯ ಕಾಲಕ್ಕೆ ಎರಡ್ನೇದವರ್ದು ನೋಡಂತ ಸೊನ್ನಿಲೆ ।
ತೋರಿಸಿದರಮಾಸ್ತರರು ।
ಸರಬಾರದ್ದಕ್ಕಾಗಿ ಸುಮ್ಮನೆ ಕೂತಲ್ಲೆ ಮೂರ್ಖನೆಂದು ।
ಬೈದರು ಗುರುವರ್ಯರು ॥

**||ಚಾಲ||**

ಹರಿಶ್ಚಂದ್ರ ನಾಟಕ ನೋಡ ಹೋಗಿ ಭಾರಿ ಮನಸಿನ ।
ಮೇಲೆ ಪರಿಣಾಮವಾಗಿ ॥
ಖರೆ ಮಾತನಾಡುವ ಗುರಿಯಾಗಿ । ಸರಳ ಜೀವನ ।
ಸಾಗಿತು ಮುಂದಾಗಿ ॥

**||ಏರು||**

ಮನಿಯ ಹಿರಿಯರು ಕಸ್ತೂರಬಾರವರಕೂಡ ಸಂಣಂದಿರತ ।
ಲಗ್ನ ಮುಗಿಸಿದ್ದರು
ಹದಿನಾಲ್ಕನೇ ವರುಷಕ ಮ್ಯಾಟ್ರಿಕ್ ಪಾಸಾಗುವುದರೊಳಗ ।
ಗಾಂಧಿಯವರ ತಂದೆಯವರು ತೀರಿಕೊಂಡರು ।
ಮುಂದೆ ಇಂಗ್ಲಂಡಕ್ಹೋಗಿ ಬ್ಯಾರಿಷ್ಟರಾಗುವ ಹಂಬಲಿಟ್ಟ ।
ತಾಯಿಯವರಿಗೆ ತಿಳಿಸಿದರು ॥
ಮದ್ಯ ಸಿಗರೇಟ ಮಾಂಸ ಪರಸ್ತ್ರೀ ಮುಟ್ಟಬಾರದಂತ ತಾಕೀತ ।
ಮಾಡಿ ಕಳಿಸಿದರು ಮಾತೆಯವರು ।
ಅದರಂತೆ ಆಚರಿಸಿ ಬಂದ ತೊಂದರೆ ಸಹಿಸಿ ವಿದ್ಯಾಭ್ಯಾಸವನ್ನು ।
ಸಾಗಿಸಿದರು ॥
ಪರಭಾಷೆಯಲ್ಲಿದ್ದ ಸರ್ವ ಧರ್ಮ ಗ್ರಂಥಗಳನ ಪರಿಪೂರ್ಣ ।
ಓದಿ ಸಾರ ತಿಳಕೊಂಡರು ।
ಪರೀಕ್ಷೆ ಮುಗಿಸಿಕೊಂಡು ತಿರಿಗಿ ಬರುದರೊಳು ಮಾತೆಯವರು ।
ಮೃತಪಟಿದ್ದರು.

**||ಚಾಲ||**

ಜಾತಿ ಬಾಂಧವರು ಬಹಿಷ್ಕಾರ ಹಾಕಿ ನೀತಿಗೆಟ್ಟಾನ ಮಾಡಬಾರದಂದ್ರ ಬಳಕಿ
ಪರರಾಷ್ಟ್ರಕ್ಹೋದ್ರ ಜಾತಿಗೇನ ಧಕ್ಕಿ ಧೈರ್ಯ ತಂದಕೊಂಡ್ರು
ಶಾಂತಿ ಮಾರ್ಗ ಹುಡುಕಿ ॥

**||ಏರು||**

ಮುನ್ನ ದಕ್ಷಿಣಾಫ್ರಿಕೆಗೆ ಖಟ್ಲೆ ನಡಸಿಲಿಕ್ಕೆ ಹೋಗಿ |
ವರ್ಣ ದ್ವೇಷಕಾಗಿ ಹೋರಾಡಿದರು|| ೧ ||

ಅನ್ಯಾಯದ ವಿರುದ್ಧ ಸತ್ಯಾಗ್ರಹ ಹೂಡುವ ಯುಕ್ತಿಯನ್ನು | ತಗದಾರ ಸ್ವತಾ |
ಜನ ಜಂಗುಳಿಯನ್ನು ಘನ ಸಂಘಟಿಸಿ ಮನವಲಿಸುವ | ಹಂಚಿಕಿ ತುರ್ತಾ ||
ನೋಡಿ ನೋಡಿ ವಿಚಾರ ಮಾಡಿ ಮಾಡಿ ಕಡೆಗೆ ಪ್ರತಿಜ್ಞಾ |
ಮಾಡುವರು ಖಚಿತಾ |
ಆಡಿದಂತೆ ಕೃತಿ ಮಾಡಿ ತೋರಿಸಿ ರೂಢಿಯೊಳಗ ಆದ್ರ | ಪ್ರಖ್ಯಾತಾ ||
ಸತ್ಯ ಅಹಿಂಸಾವ್ರತ ನಿತ್ಯ ಧ್ಯೇಯವಾಗಿ ಪ್ರಾರ್ಥನೆ |
ಮಾಡಿ ಓದುವರಗೀತಾ |
ಮತ್ತೆ ಸ್ವಾತಂತ್ರ ಬೀಜಾ ಬಿತ್ತಿ ಮೃತ್ಯುದೊಳು |
ಇತಿಹಾಸ ಪ್ರಸಿದ್ಧವಾಗಿಹನೇತಾ ||

**||ಚಾಲ||**

ಯಾರ್‍ಯಾರಿಗೆ ಹೆದರಲಿಲ್ಲ ಚೂರಾ ತುರಂಗದವರಿಗೆ ತವರೂರಾ ||
ಪಾರತಂತ್ರ ಬಿಡಿಸಿದ ಧೀರಾ ಸ್ವರಾಜ್ಯ ಕೊಡಿಸಿ ಹೋದ್ರ ಪೂರಾ ||

**||ಏರು||**

ಧನ್ಯ ಧನ್ಯ ಜಗಮಾನ್ಯರಾದರೆಂದು ಹುಲಕುಂದ | ಭೀಮಕವಿ ಸಾರಿದರು|| ೨ ||

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೩೮. ಮಹಾತ್ಮಾ ಗಾಂಧಿ - ೧

ಎಂದು ಮರಿಯಲಾರೆ ಮಹಾತ್ಮಾಗಾಂಧಿ ನಿನ್ನ
ಹಿಂದೂಸ್ತಾನದ ತಂದಿ |
ಸತ್ಯ ಅಹಿಂಸಾ ಸುತ್ತರಾಜ್ಯೇದ ಮ್ಯಾಲ
ಜೈಭೇರಿ ಹೊಡಿಸಿದಿ ಜಗದಿ ||

ಮೂರು ಲೋಕದಲ್ಲಿ ಮೀರಿದಂತಾವ ನಿನ್ನ
ಸರಿಯಗಾಣೆನು ಗಾಂಧಿ |

ರೈತರ ಸಲುವಾಗಿ ಹಗಲು ರಾತ್ರಿ ನೀನು
ಬಿಡವು ಇಲ್ಲದೆ ದುಡದಿ ॥

ಸತ್ಯಾಗ್ರಹಿಗಳ ಸಂಘ ಕಟ್ಟಿಕೊಂಡ
ಆಂಗ್ಲರನ ಓಡಿಸಿದಿ ।
ನಾಲ್ವತ್ತೇಳನೆ ಇಸ್ವಿ ಆಗಸ್ಟ್ ಹದಿನೈದಕ್ಕ
ಸ್ವಾತಂತ್ರ್ಯ ತಂದಿ ಜಲದಿ ॥

ಸತ್ಯ ಶಾಂತಿಗಾಗಿ ಹಟಾತೊಟ್ಟ ನೀನು
ಉಪವಾಸ ವ್ರತಾ ಹಿಡದಿ ।
ಹಟಾ ಹಿಡಿದ ನೀನು ಹರಿಜನರನ್ನು
ಮುಂದ ತಂದ್ಯೋ ಗಾಂಧಿ ॥

ದ್ವಾಪಾರ ಯುಗದ ಕೃಷ್ಣನ ಅವತಾರ
ಕಲಿಯುಗದಲಿ ಪಡದಿ ।
ವಾಲ್ಮೀಕನಂಬೊ ನಥುರಾಮ ಗೋಡಸೇನ
ಗುಂಡಿಗಿ ಗುರಿಯಾದಿ ॥

ಚಳವಳಿಯಲ್ಲಿ ಮಿಗಿಲಾತ ತಿಗಡೊಳ್ಳಿ
ಬಲಭೀಮ ಕೊಟ್ಟ ಬುದ್ಧಿ ।
ನಿತ್ಯನೇಮ ನಿಮ್ಮ ಸ್ತುತಿ ಮಾಡುವ
ಮರಿಕಲ್ಲಗ ಒಲದಿ ॥

**ರಚನೆ :** ಮರಿಕಲ್ಲಕವಿ
**ಕೃತಿ :** ಮರಿಕಲ್ಲಕವಿಯ ಗೀಗೀ ಪದಗಳು

## ೩೯. ಮಹಾತ್ಮ ಗಾಂಧಿ - ೨

ಕೇಳಿರಿನೀವೆಲ್ಲ ಗಾಂಧಿಯಕಥೆಯ ।
ತಾಳಿರಿಹರುಷವ ತೊರೆಯುತ ವ್ಯಥೆಯ ॥
ಜಯ ಜಯ ಗಾಂಧಿ ಮಹಾತ್ಮಗಾಂಧಿ ।
ಜಯ ಜಯ ಗಾಂಧಿ ಮಹಾತ್ಮಗಾಂಧಿ॥ ೦ ॥

ಪೋರಬಂದರಿನ ರಾಜಕೋಟೆಯೊಳು ।
ಧೀರಗಾಂಧಿಯು ಬನಿಯರ ಕುಲದೊಳು ॥
ಜನಿಸಲು ಮೋಹನದಾಸನೆಂಬನಾಮ ।

ಜನನಿ ಜನಕರಿಡೆ ಹೊಂದುತ ಪ್ರೇಮ॥ ೧ ॥
ಜಯ ಜಯ ಗಾಂಧಿ ಮಹಾತ್ಮಗಾಂಧಿ (ಎರಡುಸಲ)

ಚಿಕ್ಕವಯಸಿನಿಂದ ಮೋಹನದಾಸನು ।
ಚೊಕ್ಕತನಕೆ ಬಹುಬೆಲೆ ಕೊಡುವವನು ॥
ಅಕ್ಕರೆಯಿಂದಲಿ ದೇವಿ ಪುತಲಿಬಾಯಿ ।
ನಕ್ಕುನಲಿಯುತಲಿ ಸಲಹಲು ತಾಯಿ॥ ೨ ॥
ಜಯ ಜಯ ಗಾಂಧಿ ॥

ತಂದೆ ಕರಮಚಂದ ವಿದ್ಯೆಯ ಕೊಡಿಸಿದ ।
ಅಂದದೊಳೊಳ್ಳೆಯ ಗುಣಗಳ ತೊಡಿಸಿದ ॥
ಬಾಲಕತನದಲಿ ಕುಮಾರ ಮೋಹನ ।
ಶಾಲೆಯೊಳಗೆ ಪಡೆದನು ಅತಿಜ್ಞಾನ॥ ೩ ॥
ಜಯ ಜಯ ಗಾಂಧಿ ॥

ಹರಿಶ್ಚಂದ್ರನ ನಾಟಕನೋಡಲು ।
ಉರುತರ ಸತ್ಯವನೋಡುತ ಮೆಚ್ಚಲು ॥
ಬಾಳಿನ ಪರಿಯಂತ ಅವನೊಲುತಾನು ।
ಬಾಳಲು ನಿರ್ಧರಿಸಿದ ಮೋಹನನು॥ ೪ ॥
ಜಯ ಜಯ ಗಾಂಧಿ ॥

ದಾಸನು ಮೆಟ್ರಿಕ್ ಪರೀಕ್ಷೆ ಮುಗಿಸಲು ।
ಆಶಿಸಿದನು ಹೆಚ್ಚು ವಿದ್ಯೆಯ ಕಲಿಯಲು ॥
ಅಗ್ರಜತಮ್ಮನ ಆಸೆಯಸಲಿಸಲು ॥
ವ್ಯಗ್ರನಾಗದೆ ವಿದೇಶಕೆ ಕಳಿಸಲು॥ ೫ ॥
ಜಯ ಜಯ ಗಾಂಧಿ ॥

ಹದಿನಾಲ್ಕು ವರುಷ ಆಗಲು ಮದುವೆಯ ।
ಮುದದಲಿ ಕಸ್ತೂರಿಬಾಯಿಯ ಜೊತೆಯಲಿ ॥
ಮಾಡಲು ಸತಿಯಳ ಮಾತೆಯ ಸನಿಹದಿ ।
ದೂಡುತ ವಿದೇಶದೆಡೆ ನಡೆದಿಹನು॥ ೬ ॥
ಜಯ ಜಯ ಗಾಂಧಿ ॥

ಮಾತೆಗೆ ವಿದೇಶದೆಡೆಯಲಿ ಕೊಟ್ಟನು ।
ಮಾತನು ಮಾಂಸವ ಮದ್ಯವ ಮುಟ್ಟೆನು ॥
ಎನ್ನುತ ಹೋಗಿಹ ಮೋಹನದಾಸನು ।

ಭಿನ್ನಭೇದಲಿ ಕುಲಜನ ದೂಷಿಸೆ॥ ೭ ॥
ಜಯ ಜಯ ಗಾಂಧಿ ॥

ಕುಲಛಲಶೀಲವು ಕೆಟ್ಟಿತು ನಮ್ಮಯ ।
ಕುಲದಲಿ ಸೇರಿಸಲಾರೆವು ಸುಮ್ಮನೆ ॥
ಕಳಿಸಲಿಬೇಡರಿ ವಿದೇಶಕೆನ್ನುವ ।
ತಿಳಿಗೇಡಿಗಳನು ತಾ ಮನ್ನಿಸದೆ॥ ೮ ॥
ಜಯ ಜಯ ಗಾಂಧಿ ॥

ಮೋಹನದಾಸನು ಲಂಡನ್ ನಗರಕೆ ।
ಆಹಾನಡೆದನು ದಾಟುತ ಸಾಗರ ॥
ಮೂರು ವರ್ಷದಲಿ ವ್ಯಾಸಂಗ ಮಾಡುತ ।
ಬ್ಯಾರಿಸ್ಟರ್ ಪಡೆದನು ಕಾಲದೂಡತ॥ ೯ ॥
ಜಯ ಜಯ ಗಾಂಧಿ ॥

ಬಗೆಬಗೆ ಧರ್ಮದ ಗ್ರಂಥಗಳನ್ನು ।
ನಗುಮೊಗದಿಂದೋದಿನವುಗಳನು ॥
ಕೊನೆಯಲಿ ಗೀತೆಯ ನಚ್ಚುತ, ಸಂತತ ।
ಅನುಸರಿಸಿದ ಜೀವನ ಪರಿಯಂತ॥ ೧೦ ॥

ಜಯ ಜಯ ಗಾಂಧಿ ॥
ಶಾಖಾಹಾರದಿ ಬಾಳನು ನಡೆಸಿದ ।
ಬೇಕುಗಳೆಂಬುದ ಪರಿಮಿತಗೊಳಿಸಿದ ॥
ಬ್ರಹ್ಮಚರ್ಯವನು ಸಾಧಿಸತನುದಿನ ।
ಬ್ರಹ್ಮತನದಿ ನಡೆಯಲ್ಮನಮಾಡಿದ॥ ೧೧ ॥
ಜಯ ಜಯ ಗಾಂಧಿ ॥

ಭಾರತದೇಶಕೆ ಹಿಂತಿರುಗಲು ಘನ ।
ಭಾರದುಃಖದ ಸುದ್ದಿಗಳವನಾ ॥
ಮಾತೆಯುಮಡಿದಿಹ ಕುಲಜನರೆಲ್ಲರು ।
ಜಾತಿಯಿಂದ ಹೊರಹಾಕಿದಬಲ್ಲುಲಿ॥ ೧೨ ॥
ಜಯ ಜಯ ಗಾಂಧಿ ॥

ಮನೆತನಕಷ್ಟಗಳೊಂದೇ ಅಲ್ಲವು ।
ದಿನದಿನದಲಿ ನಮ್ಮ ದೇಶದೊಳೆಲ್ಲವು ॥
ಪರಕೀಯರಾದ ಆಂಗ್ಲರು, ನಮ್ಮನು,

ಗರುವದಿ ಘಾಸಿಸುತಾಳ್ದರು ನಮ್ಮನು॥ ೧೩ ॥
ಜಯ ಜಯ ಗಾಂಧಿ ॥

ಎಲ್ಲಾ ಕಚೇರಿ ಆಡಳಿತದಲಿ ।
ಲ್ಲಂತೆ ಆಂಗ್ಲರು ಭಾರತದಲ್ಲಿ ॥
ಬಹುತರ ಘಾತಕತನ ತೋರುತಲಿ ।
ಅಹಿತವಮಾಡುತ ವಿಷಕಾರುತಲಿ॥ ೧೪ ॥
ಜಯ ಜಯ ಗಾಂಧಿ ॥

ಸಿರಿವಂತರು, ವರಜಮಿನುದಾರರು ।
ಅರಸರು ವಿದ್ಯಾಬುದ್ಧಿಯುಳ್ಳವರು ॥
ಪರಕೀಯರಾಸೆಯ ನೆರವೇರಿಸಲು ।
ಅರಿಯದಬಡವರ ತೊತ್ತಳದುಳಿಯಲು॥ ೧೫ ॥
ಜಯ ಜಯ ಗಾಂಧಿ ॥

ಎತ್ತನೋಡಿದರು ಭಾರತದಲ್ಲಿ ।
ಮತ್ತೆ ಕಾಣುತಿದೆ ಬಡವರನಿಲ್ಲಿ ॥
ಯಾರು ರಕ್ಷಿಸದೆ, ತಮ್ಮ ತಮ್ಮ ಸೌಖ್ಯಕೆ ।
ಸೂರೆಗೊಳ್ಳುವರು, ಸಿರಿಯಂ ಮುಖ್ಯದೆ॥ ೧೬ ॥
ಜಯ ಜಯ ಗಾಂಧಿ ॥

ಪರಿಶೋಕವ ತುಂಬಿರ್ಪುದುದಂ ।
ತಾಪದಿನೋಡಿದ ಮೋಹನದಾಸಂ ॥
ನಿರಾಸೆಹೊಂದದೆ ಜನರಲಿ ಜಾಗ್ರತೆ ।
ತ್ವರೆಯಿಂ ಮೂಡಿಸಿದನು ಮತೆ-ಮತ್ತೆ॥ ೧೭ ॥
ಜಯ ಜಯ ಗಾಂಧಿ ॥

ಇದೇ ಸಮಯದಿ ಆಫ್ರಿಕದಿಂದಲಿ !
ಒದಗಿತುಕರೆ ಮೋಹನದಾಸರಿಗೆ ॥
ಶೇಕಬ್ದುಲ್ಲಾಶೇಟರ ಕಡೆಯಿಂ ।
ಶೋಕಮೊಕದ್ದಮೆ ಬಿಡಿಸಲ್ಬಿಡೆಯಿಂ॥ ೧೮ ॥
ಜಯ ಜಯ ಗಾಂಧಿ ॥

ನಡೆದನು ಆಫ್ರಿಕದೇಶದೊಳಲ್ಲಿ ।
ಬಿಡಿಸಿದ ಶೇಟರ ಬಹುಪರಿಯಲಿ ॥
ಕೆಟ್ಟಮೊಕದ್ದಮೆಯನು ಸರಿಪಡಿಸಿದ ।

ದಿಟ್ಟತನದ ಸತ್ಯದಮೇಳದಲಿ॥ ೧೯ ॥
ಜಯ ಜಯ ಗಾಂಧಿ ॥

ಆ ದೇಶದಲಿ ಭಾರತೀಯರಿಗೆ ।
ಸಾಧಿಸಿಬಿಳಿಯರು ವಿಧವಿಧದಿಂ, ಢಗೆ ॥
ತಲೆಗಂದಾಯವ ಹೇರುತಘನತರ ।
ಗುಲಾಮರಂತೆ ಆಳುತಲಿವರಾ॥ ೨೦ ॥
ಜಯ ಜಯ ಗಾಂಧಿ ॥

ಕಷ್ಟದಿಶಿಲುಕಿಸಿ ಮೋಜನು, ನೋಡ್ವದು ।
ದುಷ್ಟರಪರಿಯಿದ ಮೋಹನ ನೋಡುತ ॥
ಗಟ್ಟಿಮನಸಿನಿಂದ ಭಾರತೀಯರನು ।
ಒಟ್ಟುಮಾಡಿ ನಡೆಸಿದ ಚಳವಳಿಯನು॥ ೨೧ ॥
ಜಯ ಜಯ ಗಾಂಧಿ ॥

ಚಳವಳಿ ಸರಕಾರವಿರುದ್ಧ ನಡೆಸಲು ।
ಬಿಳಿಯರು ಬೆದರದೆ ಆಡಳಿತ ನಡೆಸಲು ॥
ಕೊನೆಗೆಬಿಳಿಯರು ತಗ್ಗಿ ಕುಗ್ಗುತಲಿ ।
ಮನಮಾಡಿಹರಾ ಕ್ರಾಂತಿವೀರರು॥ ೨೨ ॥
ಜಯ ಜಯ ಗಾಂಧಿ

ಇಷ್ಟವನಡೆಸಲು ಮೋಹನದಾಸನು ।
ಇಷ್ಟು ಮಾಡಲು ಆಫ್ರಿಕದೇಶಕೆ ॥
ಎರಡುಬಾರಿಯೂ ಹೋದನು ದಯದಿಂ ।
ಸಿರಿಸಂಪದನವನು ನೀಡಲುನಯದಿಂ॥ ೨೩ ॥
ಜಯ ಜಯ ಗಾಂಧಿ ॥

ತೊರೆಯು ತಲಾ ಸಿರಿಕಾಣಿಕೆಯನ್ನು ।
ತಿರುಗಿಬರುವಾಗ ಭಾರತಕಿನ್ನು ॥
ಪೇಳಿದನಾಸಿರಿ ಬಡವರಿಗೀಯಿರಿ ।
ತಾಳಿರಿ ಸಂತಸಮೆನ್ನುತ್ತವರನು॥ ೨೪ ॥
ಜಯ ಜಯ ಗಾಂಧಿ ॥

ಸತಿಗೆ ಶಾಂತಿಯನು ಹೇಳುತಲಾತನು ।
ಖತದಿಂ ನಮ್ಮಯದೇಶಕೆ ಬಂದನು ॥
ಇಲ್ಲಿಯಜನಕಿಹ ಕಷ್ಟವನೋಡುತ ॥

ಮಲ್ಲಮನದಲಿ ದೃಢತೆಯ ಮಾಡುತ॥ ೧೫ ॥
ಜಯ ಜಯ ಗಾಂಧಿ ॥

ಟಿಳಕರ ಕೆಚ್ಚನು, ಬಿಪಿನರ, ಲಾಲರ ।
ತಿಳಿವನು ಗೋಖಲೆಯವರಾ ಶೀಲದ ॥
ತಾ, ಸಹಕಾರವ ಪೊಂದುತ ದೇಶದಿ ।
ಸೂಸುವಧೈರ್ಯದಿ ಚಳವಳಿನಡೆಸಿದ॥ ೧೬ ॥
ಜಯ ಜಯ ಗಾಂಧಿ ॥

ಇದಕಿಂ ಮೊದಲೇ ಕಾಂಗ್ರೆಸಪಕ್ಷವು ।
ಮುದದಿಂ ಸ್ಥಾಪನೆ ಗೊಂಡಿರಲದನು ॥
ಅದಕೆನಾಯಕನು, ತಾನಾಗುತಲಿ ।
ಅದರಲಿ, ತಿದ್ದಿದ ನೂತನದಲ್ಲಿ॥ ೧೭ ॥
ಜಯ ಜಯ ಗಾಂಧಿ ॥

ಪ್ರತಿಯೊಂದನ್ನು ತಿಳಿಸುತ ಸರಕಾರ ।
ದತಿನೀತಿಯನು ಖಂಡಿಸುತೀತನು ॥
ಚಳವಳಿಹೂಡುತ, ತನ್ನ ಮಾತನು ।
ಫಳಿಲನೆ, ನಡೆಯಿಸಿಕೊಳ್ಳುವ ಚತುರನು॥ ೧೮ ॥
ಜಯ ಜಯ ಗಾಂಧಿ ॥

ಉಪ್ಪಿನ ಚಳವಳಿ ನೀಲಿಯಚಳವಳಿ ।
ತಪ್ಪದೆ, ತೊಲಗಿರಿ ಎನ್ನುವ ಚಳವಳಿ ॥
ಮಾಡುತ ಸ್ವರಾಜ್ಯಗಳಿಸಿದನಾತನು ।
ನೋಡದೆ, ನಡೆದನು ಮುಂದಿನ ಕಥೆಯನು॥ ೧೯ ॥
ಜಯ ಜಯ ಗಾಂಧಿ ॥

ಭೂಮಿಯೊಳಿಲ್ಲಿ ಜನಿಸಿದನಾವೆಲ್ಲ ।
ಈ, ಮನೆ ನೆಲಜಲ ಬೆಳಕುಗಳೆಲ್ಲ ॥
ಸಮನಾಗಿಕೊಳ್ಳಿರಿ ನೀವೆಂದಾತನು ।
ವಿಮಲಬುದ್ಧಿವಾದ ಹೇಳಿದನಾತನು॥ ೨೦ ॥
ಜಯ ಜಯ ಗಾಂಧಿ ॥

ಸತ್ಯಸಮಾನತೆ, ನ್ಯಾಯ ಶೀಲವನು ।
ನಿತ್ಯಪಡೆಯಲು ವ್ಯರ್ಥಕಾಲವನು ॥
ಕಳೆಯದೆ ಎಲ್ಲರು ಒಂದೇ ಎಂಬ ।

ಬೆಳೆಯಲಿ ಭಾವನೆ, ನಿಮ್ಮೊಳು ತುಂಬ॥ ೨೦ ॥
ಜಯ ಜಯ ಗಾಂಧಿ ॥

ಈ, ಸ್ವರಾಜ್ಯವ, ಪಡೆಯಲ್ಕಾತನು ।
ವಾಸಿಸಿದನು ಬಹು ಸೆರೆಮನೆಗಳನು ॥
ಉಪವಾಸ ವೃತಗಳನೆಷ್ಟೋಮಾಡುತ ।
ಕಪಟವಿರಹಿತ ಮೋಹನನಾತ॥ ೨೧ ॥
ಜಯ ಜಯ ಗಾಂಧಿ ॥

ಶೋಕಗಳೆನಿತೋ ಪೊಂದುತಲಾತನು ।
ನಾಕಸ್ವರಾಜ್ಯವ ನಮಗಿತ್ತಿಹನು ॥
ಈ ಕಾರಣದಿಂದಾತನಿಗೆಂದರು ।
ಶೋಕರಹಿತಘನ ಮಹಾತ್ಮಗಾಂಧಿ॥ ೨೨ ॥
ಜಯ ಜಯ ಗಾಂಧಿ ॥

ರಾಷ್ಟ್ರಪಿತನೆ, ನಿನ್ನೀವರ ಚರಿತೆಯ
ರಾಷ್ಟ್ರದಲೆನಿತೋ, ಜನಹಾಡುವರು
ನನ್ನಯೋಗ್ಯತೆಯೋ? ನಿನ್ನ ಹಾಡಲು ।
ಇನ್ನೊಮ್ಮೆ ನೀ ಬಾ, ಈ ಭುವಿನೋಡಲು॥ ೨೪ ॥
ಜಯ ಜಯ ಗಾಂಧಿ ॥

ಎಂದು ಹಾಡುವನು ನರಸಿಂಹಗುಪ್ತನು ।
ಅಂದದ ಶಂಕರಲಿಂಗನ ಭಕ್ತನು ॥
ಬಳಿಚಕ್ರ ಪುರದವನೀತಗೆ ಸತ್ಯವ ।
ತಿಳಿಸಾಲುಬಾರೈ ಮತ್ತೊಮ್ಮೆ ನಿತ್ಯವ
ಜಯ ಜಯ ಗಾಂಧಿ ॥

**ಸೂಚನೆ :** ಜಯ ಜಯ ಗಾಂಧಿ ಮಹಾತ್ಮ ಗಾಂಧಿ ॥
ಜಯ ಜಯ ಗಾಂಧಿ ಮಹಾತ್ಮ ಗಾಂಧಿ॥ ೦॥
ಈ ಎರಡು, ಅಡಿಗಳನ್ನು ಪ್ರತಿಯೊಂದು ನುಡಿಗೂ ಹಿಮ್ಮೇಳದವರು 'ಲಾವಣಿ'ಯಲ್ಲಿ ನುಡಿಯಬೇಕು.

**ರಚನೆ :** ನರಸಿಂಹಗುಪ್ತ ಬಳಿಚಕ್ರ
**ಕೃತಿ :** ಜನಪದ ಗೀತೆಗಳು

# ೪೦. ಗಾಂಧೀ ಲಾವಣಿ

ನಮಿಸುವೆ ಗಣಪತಿ । ನುತಿಸುವೆ ಭಾರತಿ ।
ಮತಿಗೆ ಮಂಗಲವ ನೀಡೆನುತ । ಮತಿಗೆ ಮಂಗಲವ ನೀಡೆನುತ ।
ಕರಮುಗಿಯುವೆ ಕರ್ನಾಟಕ ಮಾತಾ॥ ೧ ॥

ಭಾರತ ಜೀವನ । ಭಾರತ ಪಾವನ ।
ಭಾರತ ರಾಜ್ಯ ತಪೋಧನನ । ಭಾರತ ರಾಜ್ಯ ತಪೋಧನನ ।
ಅರವಿಂದನ ವಂದನ ಮಾಡುವೆನಾ॥ ೨ ॥

ಸ್ಮರಿಸಿ ಹಾಡುವೆನು । ಗುರುವರ ಗಾಂಧಿಯ ।
ಚರಿತವ ಹಾಲ್-ಸಕ್ಕರಿ ಬೆರೆತ ॥
ನೆರೆದಿಹ ಸಭೆಗಿದು ನವರಸಭರಿತ॥ ೩ ॥

ಸೃಷ್ಟಿ ಭಾಗದೊಳು ಹುಟ್ಟಿದ ಗಾಂಧಿಯು ।
ಕೆಟ್ಟಗುಣವ ಹೊಡೆದಟ್ಟಲುತಾ ॥
ನಿಜ ಭಾರತ ಮಾತೆಯ ಪ್ರೇಮಸುತ॥ ೪ ॥

ಭರತಖಂಡವಿದು । ಪರಿಪರಿ ಕಷ್ಟದಿ ।
ಪರದಾಸ್ಯದಿ ಬಳಲುವದನ್ನಾ ॥
ನೆರೆತಿಳಿದ ಗಾಂಧಿ ಗುಣಸಂಪನ್ನ॥ ೫ ॥

ಧರೆಯ ಕಷ್ಟವನು । ಸಿರಿಯ ನಷ್ಟವನು ।
ಬರಿಗೈಭಾರತಿ ತಾಪವನಾ ॥
ಕಣ್ದೆರೆದು ನೋಡಿ ಮರುಗಿದ ಮುನ್ನಾ॥ ೬ ॥

ವಂದೇ ಮಾತರಂ । ಎಂದು ಭಾರತಿಗೆ ।
ವಂದಿಸಿ ವರವನು ಬೇಡಿದನು ॥
ದೇಶೋದ್ಧಾರಕೆ ಮನ ಮಾಡಿದನು॥ ೭ ॥

ಗೀತೆಯ ಧರ್ಮದ । ನೀತಿಯ ನುಡಿದನು ।
ಓತು ಹೇಳಿದನು ಧರ್ಮರತಿ ॥
ಲೋಕಾತಿಶಾಯಿ ಗುಣ ಪರಿಪೂರ್ತಿ॥ ೮ ॥

ಭಾರತ ಕಷ್ಟ । ನಿವಾರಣೆ ಮಾಡಲು
ಸ್ವಾರಾಜ್ಯಕೆತಾನಡಿಗಲ್ಲ ॥
ಮಡಗಿದ ಸತ್ಯದ ತಳಹದಿ ಮೇಲಾ॥ ೯ ॥

ಸತ್ಯವ ನುಡಿವುದು । ಸತ್ಯದಿ ನಡೆವುದು ।
ಸತ್ಯದಿ ವಿಶ್ವದ ಸಂಸ್ಥಿತಿಯು ॥
ನಿಜ ಸತ್ಯದೊಳಿದೆ ದೇಶೋನ್ನತಿಯು॥ ೧೦ ॥

ಭಾರತ ಪುತ್ರರೆ । ಮಿತ್ರೆ ಬಾಂಧವ ।
ಮಾತೃಭಗಿನಿ ನಿಜ-ಸಹೋದರರೆ ॥
ವರಭಾರತಸೇವಾತತ್ಪರರೆ ॥ ೧೧ ॥

ಕೃಷಿಕರೆ ರಸಿಕರೆ । ಕಲಿಕಗಳೆ ಬಲಿಗಳೆ ।
ಶ್ರೀಮಂತರೆ ನೀವೆದ್ದೇಳಿ ॥
ದೇಶದ ಕೊರಗನು ಕಿವಿಯಿಂಕೇಳಿ॥ ೧೨ ॥

ಸತ್ಯವೆ ಜೀವನ । ಸತ್ಯವ ದೇವನ ।
ಸತ್ಯವೇ ಮುಕ್ತಿಯ ಮಂದಿರವು ॥
ಸತ್ಯಾಗ್ರಹವೊಂದೆ ಮಹಾಬಲವು॥ ೧೩ ॥

ಸತ್ಯದಿ ಬೆಳಗುವ । ಸತ್ಯದಿ ಮುಳುಗುವ ।
ಸತ್ಯದಿ ಸಕಲ ಚರಾಚರವು ॥
ಸ್ಥಿರ ಸತ್ಯದೊಳಿದೆ ನಿಮ್ಮಯ ಬಲವು॥ ೧೪ ॥

ಹಿಂಸೆಗೆ ಸರಿಸಮ । ಪಾಪವದಿಲ್ಲಿವು ।
ಹಿಂಸೆಗೆ ನರಕದ ಬಾಗಿಲವು ।
ಜನ-ಹಿಂಸೆಗಳಿಂದಿಗಿಲ್ಲವು ಜಯವು॥ ೧೫ ॥

ಜರ್ಮನಿ ಗಿರ್ಮನಿ । ಹಿಟ್ಲರ ಗಿಟ್ಲರ ।
ಬ್ರಿಟಿಷ ಗ್ರಿಟಿಷ ರಾಜ್ಯದ ಗೆಲುವು ॥
ಜನ-ಹಿಂಸೆಹೊಳಿಲ್ಲವು ಶಾಶ್ವತವು॥ ೧೬ ॥

ಶಾಂತಿಯ ಯುದ್ಧವು । ಶಾಂತಿಯ ಆಯುಧ ।
ಶಾಂತಿಯೇ ನಮ್ಮ ಮಹಾಶರವು ॥
ನಿಜ ಶಾಂತಿಯೇ ಸ್ವಾರಾಜ್ಯದ ಗೆಲುವು॥ ೧೭ ॥

ರಾಟಿಯೆ ಬಾಣವು । ರಾಟಿಯೆ ಪ್ರಾಣವು ॥
ರಾಡಿಯೆ ಟ್ಯಾಂಕೂ ಕ್ರೂಝರವು ॥
ನಲ್ವತ್ತು-ಕೋಟಿ ಹಿಂದೂ ಬಲವು॥ ೧೮ ॥

ಖಾದಿಯೆ ಭಾರತ । ರಕ್ಷಣಾ ಕವಚವು ।
ಖಾದಿಯೆ ಬಾಂಬಿನ ಬರ್ಭರವು ॥
ಪರದೇಶದ ಬಾಯಿಗೆ ಗೊಬ್ಬರವು॥ ೧೯ ॥

ಮುಟ್ಟದಿರುವ । ಹಿಂದೂ ಬಾಂಧವರನು ।
ಮುಟ್ಟಿ ಪಾಪವ ಕಳಕೊಳ್ಳುವುದು ॥
ದೇಶೋದ್ಧಾರದ ಸನ್ಮಾರ್ಗವಿದು॥ ೨೦ ॥

ಸತ್ಯ ಅಹಿಂಸಾ । ವೃತವನು ಪಾಲಿಸಿ ।
ಶಾಂತಿ ಸಮರವನು ಹೂಡುವದು ॥
ಸ್ವಾರಾಜ್ಯಗಳಿಕೆಯ ಮಾರ್ಗವಿದು॥ ೨೧ ॥

ಸ್ವಾತಂತ್ರ್ಯದ ಸಂ । ಗ್ರಾಮದೊಳೆಲ್ಲರು ।
ಆತುರ ಭಾವದಿಕೂಡುವದು ॥
ಆತ್ಮಾರ್ಪಣವಾದರು ಮಾಡುವುದು॥ ೨೨ ॥

ರಸಿಯಾ-ಜರ್ಮನಿ ಯುದ್ಧವಿಲ್ಲದವು ।
ಬೇಕಿಲ್ಲವು ಶಸ್ತ್ರಾಸ್ತ್ರಗಳು ॥
ನೆಲನೀರು ಬೈಲಿನೊಳು ಗುಡುಗುಗಳು॥ ೨೩ ॥

ಸಾಯಲಿ ಬೀಳಲಿ । ಸ್ವಾತಂತ್ರ್ಯವನೆ ।
ಗಳಿಸುವದೊಂದೆ ಮಾರ್ಗವಿದು ॥
ಸತ್ಯಾಗ್ರಹವೊಂದೇ ನಿಯಮವಿದು॥ ೨೪ ॥

ಕರ್ಮದ ಗೀತೆಯ । ಧರ್ಮದ ನೀತಿಯ ।
ಮರ್ಮವಪೇಳಿದ । ಧರ್ಮಪಿತಾ ।
ಪರಮಾತ್ಮ ನುಡಿದ ಭಗವದ್ಗೀತಾ॥ ೨೫ ॥

ಗಾಂಧಿಯೆ ವೇದವು । ಗಾಂಧಿಯೆ ಬೋಧವು ।
ಗಾಂಧಿಯೆ ಸಾಧು ಸದ್ಗುರುವು ॥
ನಿಜ ಗಾಂಧಿಯೆ ವಿಶ್ವಜಗದ್ಗುರುವು॥ ೨೬ ॥

ಗಾಂಧಿಯೆ ತೀರ್ಥವು । ಗಾಂಧಿಯೆ ಕ್ಷೇತ್ರವು ।
ಗಾಂಧಿಯೆ ಸುರನಂದನ ವನವು ॥
ಗುರುಗಾಂಧಿಯೆ ರಾಟೆಯ ಸುರತರವು॥ ೨೭ ॥

ಗಾಂಧಿ ಸುಭಾಸ | ಜವಾಹರನೇಹರು |
ವಂದನವನು ನಾ ಮಾಡುವೆನು |
ಪದ ಬಂಧವನಿಲ್ಲಿಗೆ ಮುಗಿಸುವೆನು ॥ ೧೮ ॥

ಜಯಭಾರತಿ | ಬೆಳಗುವೆನಾರತಿ |
ಜಯಮಂಗಲವನು ಕೊಡು ನಮಗೆ ॥
ನಮ್ಮ ಭಾರತ ರಾಜ್ಯದ ಸಂಸ್ಥಿತಿಗೆ॥ ೧೯ ॥

ವಂದಿಪೆ ಜನನಿ | ಸುಜಲ ಫಲ ಮಲಯಜ |
ಗಾಂಧಿಸಸ್ಯ ಶಾಮಲೆ ನಿನಗೆ ॥
ಬೆಳದಿಂಗಳ ಬಿಳಿಎಲೆ ತಿಳಿಯನಗೆ॥ ೨೦ ॥

ಗಾಂಧಿ ಸುಭಾಸ ಜವಾಹಿರ ಘೋಷ | ರವೀಂದ್ರರ ಪಡೆದಮ್ಮಾ ನಿನಗೆ
ಇಂದ್ರರ ಪಡೆದಮ್ಮ ನಿನಗೆ ॥
ಯೋಗೀಂದ್ರರ ಹಡೆದಮ್ಮ ನಿನಗೆ॥ ೨೧ ॥

ವಿಂಧ್ಯ ಹಿಮಾದ್ರಿನ | ಗಂಗಳ ನಡುವಿನ |
ಪುಣ್ಯಭೂಮಿ ಪಾದಂಗಳಿಗೆ ॥
ಬೆಳಗುವೆನಾರತಿ ಶುಭ ಮಂಗಳೆಗೆ॥ ೨೧ ॥

ಜಯಿಸಲಿ ಸ್ವಾತಂತ್ರ್ಯದ ಸಮರದಲಿ |
ಶಾಂತಿಯ ವಾದ್ಯವು ನಾದಮಯ ॥
ಗುರುಗಾಂಧಿಯ ತತ್ವಕೆ ಜಯವಿಜಯ॥ ೨೨ ॥

**ರಚನೆ :** ನಲವಡಿ ಶ್ರೀಕಂಠಶಾಸ್ತ್ರಿ
**ಕೃತಿ :** ರಾಷ್ಟ್ರಗೀತಾವಳಿ

## ೪೧. ಸಂತ ವಿನೋಭಾ

(ಧಾಟಿ : ಪ್ರಭೋ ಆನಂದದಾತ)

ಬಾಬಾ ಬಾಬಾ ಸಂತ ವಿನೋಬಾ | ಸಂತ ವಿನೋಬಾ |
ಭಾವೆ ಬಾಬಾ॥ ಪ ॥

ಎಪ್ಪತ್ತೆರಡ ವರುಷದ ಮುಪ್ಪಿನವನೆ ಬಾ |
ಇಪ್ಪತ್ತೆರಡ ಭಾಷಾ ಅರಿತವ ನೀ ಬಾ |
ತಪ್ಪದೆ ಶಾಂತಿ ಮಂತ್ರ ಬೋಧಿಸುತ ನೀ ಬಾ॥ ೧ ॥

ಬಡತನ ಭೂತನು ಬಿಡಿಸುತ ನೀ ಬಾ ।
ದುಡಿಯುವ ಬಡವರಿಗೆ ಹೊಲಾ ಕೊಡಿಸುತ ನೀ ಬಾ ।
ಬಡವ ಶ್ರೀಮಂತರ ಕೂಡಿಸುತ ನೀ ಬಾ॥ ೨ ॥

ಗ್ರಾಮದಾನ ಯಜ್ಞವ ನಡಿಸುತ ನೀ ಬಾ ।
ಗ್ರಾಮ ಸ್ವರಾಜ್ಯವ ಮಾಡಿಸೂತ ನೀ ಬಾ ।
ಗ್ರಾಮದ ಏಳ್ಗೆಗಾಗಿ ದುಡಿಯುವ ನೀ ಬಾ॥ ೩ ॥

ಅರ್ಥಶಾಸ್ತ್ರವನು ಅರಿತಂವ ನೀ ಬಾ ।
ಸ್ವಾರ್ಥದ ಗುರಿಯನು ಮುರಿಯಂವ ನೀ ಬಾ ।
ತುರ್ತ ಭೀಮೇಶನ ಪದದೊಳು ನೀ ಬಾ॥ ೪ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೪೨. ಸುಭಾಸಚಂದ್ರ ಬೋಸ-೧

ಸೌಖ್ಯ ಸೂತ್ರ ಸ್ವಾತಂತ್ರ್ಯ ಬೇಕಾದರೆ ನಾವೆಲ್ಲರು
ಏಕಾಗಬೇಕ ಬಿಟ್ಟ ಭೇದ-ಭಾವನ
ಇನ್ನ ಸಾಕಮಾಡಬೇಕ ನಮ್ಮ ಸ್ವಾರ್ಥ ಗುಣ
ನೀವು ಏಕಚಿತ್ತದಿಂದ ಕೇಳ್ರಿ ಎಲ್ಲ ಜನ
ಸೌಖ್ಯ ಭೋಗ ತ್ಯಾಗಮಾಡಿ ಏಕನಿಷ್ಠೆಯಿಂದ ಇದ್ದ
ಲೋಕಮಾನ್ಯ ಸುಭಾಸರ ಚರಿತ್ರೆಯನ ಹೇಳುವೆ ಪೂರ್ಣ
ಬ್ರಿಟಿಶರೆಂಬುವ ಆನೆಗಳ ಮೆಟ್ಟಲಿಕ್ಕೆ ಸಿಂಹ ಆಗಿ
ಹುಟ್ಟಿ ಬಂದ ಪೃಥ್ವಿಯೊಳು ಸರದಾರ
ಇವರ ದೃಷ್ಟಿಯಿಂದ ರಾಷ್ಟ್ರ ಅತಿ ಉದ್ಧಾರ
ನರಶ್ರೇಷ್ಠನಾಗಿ ಮೆರೆದ ಗುಣ ಗಂಭೀರ
ದುಷ್ಟರಿಗೆ ಸೇರಲಿಲ್ಲ ಶ್ರೇಷ್ಠರಲ್ಲಿ ಭಕ್ತಿ ಮನವ
ಇಟ್ಟು ದುಡಿಯುವಂಥ ದಿಟ್ಟ ದುರಧೀರ ಧೈರ್ಯದ ಶಿಖರ
ಪಾರತಂತ್ರದಲ್ಲಿ ಬಿದ್ದು ಬೋರಿ ಬಳಲುವಂಥ ನಮ್ಮ
ಭಾರತಾಂಬೆ ನೋಡಿ ರುದ್ರದೇವರ
ಕ್ರೂರ ಚೋರರನ್ನು ನಾಶಮಾಡುವುದಕ್ಕೋಸ್ಕರ
ಈ ಧರಣಿಯೊಳು ಜನಿಸಿ ಬಂದ ಜಯವೀರ
ಸುಭಾಸಚಂದ್ರಬೋಸ ಎಂಬ ಶೋಭಿಸುವ ನಾಮದಿಂದ
ಪೃಥ್ವಿಯೊಳು ಪ್ರಬಲಾದ ನರೇಂದ್ರ ಸುಂದ್ರದ ಗಾತ್ರ

ದೇಶದದೊಳು ಲೇಸಾದ ಬಂಗಾಲ ಇಲಾಖಾ ಪೈಕಿ
ಶೃಂಗಾರದ ಕಟಕವೆಂಬುವ ಸಣ್ಣ ಊರ
ಅಲ್ಲಿ ಬೋಸ ಎಂಬುವ ರಾಜ ಮನೆತನದವರ
ಸದ್‌ವಾಸನಾದ ಜಾನಕೀನಾತ ಬಾಬುರಾಯರ
ಅಟ್ಟಸಿರಿ ಸಂಪತ್ತಿನ ಶ್ರೇಷ್ಠ ಜಾನಕಿನಾಥರಿಗೆ
ಒಟ್ಟಿಗೆಂಟು ಮಂದಿ ಇದ್ದರ ಸುಕುಮಾರರ ಸದ್ಗುಣವಂತರ

**||ಚ್ಯಾಲ||**

ಎಂಟು ಮಂದಿ ಗಂಡು ಮಕ್ಕಳಲ್ಲಿ ಸುಭಾಸರೇ ಹುಲಿ ಛತ್ರಪತಿ ಜಿನ್ನ
ಉಗ್ರಮೂರ್ತಿ ಕ್ಷಾತ್ರ ತೇಜದಿಂದ ಉಕ್ಕತಿತ್ತ ವದನ
ರೂಪದಲ್ಲಿ ಪ್ರತಿ ಮನ್ಮಥ ವೈಶ್ಯ ನರನಂತ ಕೆಂಪ ಕಿಡಿಗಣ್ಣ
ಎರಡು ಚಕ್ರ ಹಸ್ತದಲ್ಲಿ ರಾಜಪೂಜಿತದಿ ಚರಣ
ಬಲಪಾದ ಬೆರಳಿನಲ್ಲಿ ಪದ್ಮ ಸಾಮುದ್ರಿಕೆ ನೇಮ ಹೇಳತದ ಪೂರ್ಣ
ಪದ್ಮದ ಲಕ್ಷಣ ಕೀರ್ತಿ ಪ್ರಕಾಶದ ಕಿರಣ

**||ಪದ್ಯ||**

ನ್ ಹದಿನೆಂಟನೂರ ತೊಂಬತ್ತೇಳನೇ ಇಶ್ವಿಯಲ್ಲಿ
ಜಾನೇವರಿ ತಾರೀಖ ಇಪ್ಪತ್ತಮೂರನೇ ದಿವಸ
ಕಟಕ ಗ್ರಾಮದಲ್ಲಿ ಶುಭ ಶೋಭನಾಂಗಿಯರು
ಶುಭಗೀತೆಯನ್ನು ಪಾಡುತ್ತ
ತೊಟ್ಟಿಲಲ್ಲಿ ವೀರಮುದ್ರೆ ಚಾರುಗಾತ್ರ ಸೂರ್ಯನಂತೆ ಒಪ್ಪುವ
ಸುಭಾಸ ಬೋಸರನ್ನು ತೊಟ್ಟಿಲಲ್ಲಿ ಶಯನಮಾಡಿಸಿ ಹೆಸರನ್ನು ಇಟ್ಟರು
ಮಂಗಲಾಂಗಿಯರೆಲ್ಲ ಮಹಾನಂದದಿಂದ ಗೀತೆಯನ್ನು ಅನ್ನುತ್ತಿದ್ದರು
ಆ ಗೀತೆ ಯಾವುದೆಂದರೆ -
ತೂಗೀರೆ ಕೂಸಿನ ತೂಗೀರೆ ಈಶನ
ತೂಗೀರೆ ಸುಭಾಸ ಬೋಸರನ
ತೂಗೀರೆ ವಂಶವ ಬೆಳೆಸುವ ಕುವರನ
ತೂಗೀರೆ ಸುಜ್ಞಾನ ರಾಶಿಯನ
ದಿನಕರ ರೂಪದ ತನು ಗೌರವರ್ಣದ
ಜನಪ್ರಿಯ ತರುಳನ ತೂಗೀರೆ
ಜಾನಕಿನಾಥನ ತನುಜಾತ ಕಂದನ
ವನಜಾಕ್ಷಿಯರು ಬಂದು ತೂಗೀರೆ
ತಿಳಿಯುಳ್ಳ ರುದ್ರನ ಕಳೆಯುಳ್ಳ ಸಂಗನ
ಇಳೆಯೊಳು ಜನಸಿದ ತೂಗೀರೆ

ಸುಳಿಯ ಬಾಳೆಯಂಥ ಎಳೆಯ ಕೋಮಲ ಕಾಯ
ನಳಿನಾಕ್ಷಿನಂದನ ತೂಗೀರೆ

**||ಏರು||**

ಮಂದಗಮನೆ ಮುತ್ತೈದಿಯರು ಚಂದದಿಂದ ಜೋಗುಳ ಹಾಡಿ
ನಂದದಿಂದ ಸುಭಾಸರೆಂಬ ನಾಮಕರಣ
ಹೀಂಗ ಅಂದ ಅಂದ ಸಕ್ರಿ ಹಂಚಿ ಸರ್ವ ಜನ
ವೃಂದದಿಂದ ಸೇರ್‍ಯಾರ ತಮ್ಮ ಗ್ರಹಗಳನ
ಸೌಖ್ಯ ಭೋಗ ತ್ಯಾಗಮಾಡಿ ಏಕನಿಷ್ಠೆಯಿಂದ ಇದ್ದ
ಲೋಕಮಾನ್ಯ ಸುಭಾಸರ ಚರಿತ್ರೆಯನ ಹೇಳುವೆ ಪೂರ್ಣ|| ೧ ||

ಮುಂದೆ ಆರು ವರ್ಷದೊಳು ತಂದೆ ಹೇಳಿದಂಥ ಮಾತು
ಒಂದು ಮೀರಲಿಲ್ಲ ಸಾಲಿಗೆ ಹೋಗುವರು
ಶೀಘ್ರ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದರು
ಚಿತ್ತ ಚಲಿಸಲಿಲ್ಲ ಕಲಕತ್ತಾಕ ತೆರಳಿದರು
ಸನ್ ಹತ್ತೊಂಬತ್ತನೂರ ಹದಿನೇಳನೆ ಇಶ್ವಿಯಲ್ಲಿ
ಮ್ಯಾಟ್ರಿಕ್ ಪರೀಕ್ಷೆ ಪಾಸಾದ ಮಹಾಪಂಡಿತರು
ಪಟ್ಟಣದಲ್ಲಿ ವಾಸ ಇದ್ದೂ ದುಷ್ಟಚಟ ಒಂದು ಇಲ್ಲ
ನಿತ್ಯನೇಮದಿಂದ ಪಾಠ ಕಲಿಯುವರು
ಸಾಧು ಶ್ರೇಷ್ಠರಲ್ಲಿ ನಿಷ್ಠೆಯಿಂದ ದುಡಿಯುವರು
ಮುಂದೆ ಇಂಟರ್‌ದಲ್ಲಿ ಪೈಲಿ ನಂಬರ ಆಗಿದ್ದರು
ವಾರಿಗೆ ಗೆಳೆಯರಲ್ಲಿ ಕ್ರೂರರಿಗೆ ಸೇರಲಿಲ್ಲ
ವೀರವಾಣಿಯಿಂದ ನೀತಿ ಹೇಳುವರು ದೇಶೋದ್ಧಾರಕರು
ಹಿಮಾಲಯದಲ್ಲಿ ಇರುವ ರಾಮಕೃಷ್ಣ ಆಶ್ರಮದ
ಉತ್ಸವಕ್ಕೆ ಹೋಗುತ್ತಿದ್ದರ ಕೆಲ ಜನರು
ನೋಡಬೇಕು ಎಂಬ ಇಚ್ಛೆಯಿಂದ ಸುಭಾಸ ಬೋಸರು
ಜನಜಂಗುಳಿಯ ಕೂಡಿಕೊಂಡು ಸಾಗಿದರು
ರಾಮಕೃಷ್ಣ ಆಶ್ರಮದಲ್ಲಿ ಸ್ವಾಮಿ ವಿವೇಕಾನಂದರು
ಪ್ರೇಮದಿಂದ ಸಂಭಾಷಣೆ ಮಾಡಿದರು ನಲಿದಾಡಿದರು

**||ಪದ್ಯ||**

ಸ್ವಾಮಿವಿವೇಕಾನಂದರು ಮಾಡಿದ ವ್ಯಾಖ್ಯಾನದಲ್ಲಿ
ಮುಖ್ಯ ಪ್ರಶ್ನೆ ಒಂದು ರತ್ನಸ್ವರೂಪದ್ದು
ಅದು ಯಾವುದೆಂದರೆ -
ಭಾರತಮಾತೆಯ ಕರೆಯನ್ನು ಕೇಳುವವರು

ಇಲ್ಲಿ ಯಾರಾದೂ ಇರುವರೋ ಎಂಬುದೊಂದು
ಹಿಮಾಲಯದ ಗಿರಿ ಶಿಖರಗಳ ಸಾಧನೆಯ
ಪಾಠ ಹೇಳಲು ನಿಮ್ಮನ್ನು ಕರೆಯುತ್ತೇವೆ
ಬರಲಿಚ್ಛೆಯುಳ್ಳವರು ಬರಬೇಕು ಎಂಬುದ ಕೇಳಿ
ಎಳೆ ಯುವಕನಾದ ಸುಭಾಸನ ಮನಸ್ಸು ಆನಂದಮಯವಾಗಿತ್ತು
ಅನುಭವ ರಸ ಹೃದಯದಲ್ಲಿ ತುಂಬಿತ್ತು

**||ಚ್ಯಾಲ||**

ಸಂಸಾರ ವಾಸನ ಆಳದ ಮಿಥ್ಯವೆಂದು ತಿಳಿದ ಸತ್ಯ ಸಾಧನ
ಮಾನವ ಜನ್ಮಕ್ಕೆ ಮುಖ್ಯ ದಿವ್ಯ ಸುಜ್ಞಾನ
ಹೀಗಂತ ನಿಶ್ಚಯಮಾಡಿ ಸುಭಾಸರು ನೋಡಿ ಹಿಮಾಲಯವನ್ನ
ಗವಿಯಲ್ಲಿ ವಾಸಮಾಡಿ ನಡಸಿದ ದೇವರ ಧ್ಯಾನ
ಭಾರತಮಾತೆಯ ಶಾಂತಿ ಆಗುವಂಥ ಶಕ್ತಿ ನೀಡೋ ಭಗವಾನ
ಭಾರತ ಉದ್ದಾರ ಸಲುವಾಗಿ ಹೋಗಲಿ ಪ್ರಾಣ

**||ಏರು||**

ಕಾಡು ಮೃಗದ ಭೀತಿ ಇಲ್ಲ ಜೋಡ ಅವರಿಗೆ ಯಾರು ಇಲ್ಲ
ನೋಡ್ರೆಪ್ಪ ಸುಭಾಸರ ಧೈರ್ಯವನ
ನಾವು ಪ್ರೌಢರಾಗಿ ತಿರಗತೇವ ಸುಮ್ಮ ಸುಮ್ಮನೆ
ನಮ್ಮ ಹೇಡಿತನ ಕಾಡತೈತಿ ಒಂದೇಸವನ
ಸೌಖ್ಯ ಭೋಗ ತ್ಯಾಗಮಾಡಿ ಏಕನಿಷ್ಠೆಯಿಂದ ಇದ್ದ
ಲೋಕಮಾನ್ಯ ಸುಭಾಸರ ಚರಿತ್ರೆಯನ ಹೇಳುವೆ ಪೂರ್ಣ|| ೧ ||

ರಾಷ್ಟ್ರಪತಿ ಸುಭಾಸರ ನಿಷ್ಠಾನೋಡಿ ವಿವೇಕರು
ಬಟ್ಟಕಚ್ಚಿದಾರ ಬಹು ಕಾಂತಾಗಿ
ಹಸ್ತ ಇಟ್ಟ ಆಶೀರ್ವಾದ ನೀಡಿ ಚೆಂದಾಗಿ
ಬಾಳಾ ದೃಷ್ಟಿ ಗತಿ ಅಂತ ಹೇಳತಾರ ಕೂಗಿ
ದೃಷ್ಟಿ ತಗದ ವಿವೇಕರಿಗೆ ಸಾಷ್ಟಾಂಗ ಹಾಕಿ ಸುಭಾಸರು
ಕಷ್ಟದೂರ ಆಯಿತೆಂದು ಶಿರಬಾಗಿ ನಯದಿಂದ ನಲಿಗಿ
ಮುಖ್ಯ ಎರಡು ವಾಕ್ಯಗಳು ವಿವೇಕರು ಹೇಳಿದರು
ತಕ್ಕದಲ್ಲ ತಪಾಚರಣೆ ಚಿಕ್ಕವರಿಗೆ
ನೀನು ಮೂರ್ಖನಲ್ಲ ತರ್ಕಜ್ಞಾನಿ ಮೊದಲಿಗಿ
ನಿಂತ ಲೋಕಸೇವಾ ಮಾಡಬೇಕ ಒಳಿತಾಗಿ
ಕುಹಕ ಬುದ್ಧಿ ಪರಕೀಯರನ್ನು ನೂಡಿ ಹೊರಗೆ ಹಾಕಬೇಕು
ಸೌಖ್ಯ ಆಗತದ ಸದಾ ಸರ್ವರಿಗೆ ಜಯ ಜಯವಾಗಿ

ಭಾರತಾಂಬೆ ಘೋರ ತಾಪ ದೂರ ಮಾಡುವ ಸಲುವಾಗಿ
ಧರೆಯೊಳು ಬಂದೆ ನರರೂಪಾಗಿ
ನೀನು ನರನಲ್ಲ ದೇವಪ್ರಭು ವರಯೋಗಿ
ಜಯಲಕ್ಷ್ಮಿ ಬರತಾಳ ನಿನ್ನ ಬೆಂಬಲಾಗಿ
ವಿವೇಕರ ಮಾತ ಕೇಳಿ ಮನೆಗೆ ಬಂದ ಸುಭಾಸರು
ವಿದ್ಯಾಭ್ಯಾಸ ನಡಿಸ್ಯಾರ ಜೋರಾಗಿ ಜಾಗ್ರತವಾಗಿ

**||ಪದ್ಯ||**

ಮುಂದೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿದ್ದಾಗ ಅಲ್ಲಿಯ ಪರೀಕ್ಷಾ ತೀರಿಸಿ
ಪ್ರಿನ್ಸಿಪಾಲ ಪಾಶ್ಚಾತ್ಯ ಒಬ್ಬ ಪ್ರೊಫೆಸರ್ ಆಡಿದ ಮಾತು ಯಾವದೆಂದರೆ,
ಭಾರತೀಯರಂದರ ನಾಯಿ ಇದ್ದ ಹಾಗೆ
ಅವರನ್ನು ರಕ್ಷಿಯಂತೆ ನಡೆಸಿಕೊಳ್ಳಬೇಕು ಎಂಬುವ
ಭಾವನೆಯುಳ್ಳವನಾಗಿದ್ದ
ಆ ಭಾವನೆಗೆ ಅನುಸಾರವಗಿ ಅವನು ಸುಭಾಸರನ್ನು ಅವಮಾನಿಸುತ್ತಿದ್ದ
ಅವಮಾನ ಸಹಿಸಲಾರದೆ ನಾನು ಭಾರತ ನಾಯಿಯಲ್ಲ
ನಿಮ್ಮಂಥ ಪರಕೀಯರನ್ನು ಹೋಡೆದೋಡಿಸುವ ಸಿಂಹ ಎಂದಾಕ್ಷಣಕ
ಪ್ರಿನ್ಸಿಪಾಲ ಸುಭಾಸರನ್ನು ಕಾಲೇಜು ಬಿಟ್ಟು ಹೊರಗೆ ಹಾಕಿದನು
ತಪ್ಪಿಗೆ ಒಪ್ಪಿಗೆಯನ್ನು ಕೊಟ್ಟು ಶರಣ ಮಾಡಿದರೆ
ಒಳಗೆ ಕರೆದುಕೊಳ್ಳುತ್ತಿದ್ದನು ಅದಕ್ಕೆ ಸುಭಾಸರು ಒಪ್ಪಲಿಲ್ಲ

**||ಚ್ಯಾಲ||**

ಆಮೇಲ ಸರ್ ಅಸತೋಷ ಎಂಬುವ ಧರ್ಮಗುರು
ಮುಖರ್ಜಿಯವರು ಮಾಡಿದಾರ ಯತ್ನ
ಸ್ಕಾಟಿಶ್ ವಿಶ್ವವಿದ್ಯಾಲಯದಲ್ಲಿ ಕೊಡಿಸಿದಾರ ಸ್ಥಾನ
ಬಿ.ಎ. ಪಾಸಾಗಿ ಆಯ್.ಸಿ.ಎಸ್.ಗಾಗಿ ಹೋಗಿ ಇಂಗ್ಲಂಡಕ್ಕೆ ಪಡೆದ ಸನ್ಮಾನ
ಆಯ್.ಸಿ.ಎಸ್. ಪದವಿಗೆ ರಾಜಿನಾಮೆ ಕೊಟ್ಟ ಪೂರ್ಣ
ಭಾರತ ಸಂಗ್ರಾಮದ ಹಾವಳಿ ಊದತಿತ್ತ ಕಾಳಿ ತಾಳಿ ಸ್ವಾಭಿಮಾನ
ಚಳವಳಿ ನಡಸಿದನು ಆಳದ ಪ್ರಪಂಚದ ವ್ಯಸನ

**||ಏರು||**

ಗಾಂಧೀ ಸೂತ್ರಧಾರರಾಗಿ ಹಿಂದುಸ್ಥಾನ ಸಂಚರಿಸಿ
ಮಂದಿಗೆಲ್ಲ ಮಾಡಿದಾರ ಸದ್‌ಬೋಧವನ
ಹೀಗಂದ ಹುಲಕುಂದ ಶಿವಲಿಂಗನ ವಚನ
ಮಹಾನಂದ ಮೂರ್ತಿ ಸುಭಾಸರ ಗೀತೆಯನ

ಸೌಖ್ಯ ಭೋಗ ತ್ಯಾಗ ಮಾಡಿ ಏಕನಿಷ್ಠೆಯಿಂದ ಇದ್ದ
ಲೋಕಮಾನ್ಯ ಸುಭಾಸರ ಚರಿತೆಯನು ಹೇಳುವೆ ಪೂರ್ಣ॥ ೩ ॥

**ರಚನೆ :** ಹುಲಕುಂದ ಶಿವಲಿಂಗಸ್ವಾಮಿ
**ಕೃತಿ :** ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

## ೪೩. ಸುಭಾಸಚಂದ್ರ ಬೋಸ - ೧

ಸುಂದರಮೂರ್ತಿ ಸುಭಾಸಚಂದ್ರ ಹುಟ್ಟಿ ಬಂದ ಮುಂದೆ
ಮಂದಮತಿ ಇಂಗ್ಲೀಷರನ್ನ ಕಾಡಾಕ
ರಾಜಿಯಿಂದ ಹೋಗತಿದ್ದರ ಒತ್ತಿ ದೂಡಾಕ
ನಮ್ಮ ಹಿಂದುಸ್ಥಾನ ಸ್ವಾತಂತ್ರ್ಯ ಬೇಡಾಕ
ಬುದ್ಧಿಗೇಡಿ ಬ್ರಿಟಿಶರನ್ನು ಗುದ್ದಿಕೊಂತ ಬಿದ್ದ ರಕ್ತ
ಹದ್ದು ನಾಯಿ ನರಿಗಳಿಗೆ ನೀಡಾಕ
ರಣವಾದ್ಯ ಹೊಡದ ಯುದ್ಧವನ್ನು ಮಾಡಾಕ
ಅಷ್ಟಪುತ್ರ ಸೌಭಾಗ್ಯ ಶ್ರೇಷ್ಠ ಪ್ರಭಾವತಿ ತಾಯಿ
ಹೊಟ್ಟೆಯಿಂದ ಹುಟ್ಟಿಬಂದ ಧರಣಿಯಲ್ಲಿ
ಸೂರ್ಯಕೋಟಿ ಬೆಳಕ ಬಿದ್ದಾಂಗ ಆತ ಮನೆಯಲ್ಲಿ
ಹೆಸರು ಇಟ್ಟು ಕರೆದಾರ ಶುಭದಿನದಲ್ಲಿ
ಭೋಗಭಾಗ್ಯದ ಆಶೆಯಿಲ್ಲ ತ್ಯಾಗ ಬುದ್ಧಿ ಉಳ್ಳವನು
ಯೋಗಾಭ್ಯಾಸ ಮಾಡಿದ ಬಾಲ್ಯದಲ್ಲಿ
ಅನುರಾಗದಿಂದ ಆಡುತ್ತಿದ್ದ ಮಿತ್ರರಲ್ಲಿ
ಹುಟ್ಟಿದಂದಿನಿಂದ ಮುಂದೆ ಇಪ್ಪತ್ತಮೂರು ವರ್ಷಕ್ಕೆ
ಪಾಸಾದ ಆಯ್.ಸಿ.ಎಸ್. ಪರೀಕ್ಷೆಯಲ್ಲಿ
ಸರಸ್ವತಿ ವಾಸ ಇತ್ತ ಅವರ ಹೃದಯದಲ್ಲಿ
ಬಾಳ ಚಮತ್ಕಾರ ಆಗಿ ಹೋಯ್ತೀ ಧರಣಿಯಲ್ಲಿ
ಮಹಾತ್ಮಾಗಾಂಧಿಯವರಿಂದ ಸ್ವಾತಂತ್ರ್ಯ ಸಂಗ್ರಾಮದ ಕಹಳೆ
ಚೀರಿ ಸಾರತ್ತಿತ್ತ ಇಡೀ ರಾಷ್ಟ್ರದಲ್ಲಿ
ನೋಡಿ ಗಾಂಧೀಜಿಯವರ ಬಳಿಗೆ ಹೋದ್ರು ಅರ್ಥಿಯಲಿ
ಮಹಾತ್ಮ ಗಾಂಧಿಯವರ ತತ್ವ ಸತ್ಯವೆಂದು ತಿಳಿದುಕೊಂಡು
ನಿತ್ಯದಲ್ಲಿ ಸಂಚಾರ ಮಾಡುತಲಿ
ದೇಶಭೃತ್ಯನಾಗಿ ಶಿಸ್ತಿನಿಂದ ದುಡಿಯುತಲಿ
ಸನ್ ಹತ್ತೊಂಭನೂರಾ ಇಪ್ಪತ್ತನಾಲ್ಕರಲಿ
ಕಲಕತ್ತಾ ಮಹಾನಗರಸಭೆಯ ಚೀಫ್ ಆಫೀಸರ ಆಗಿ
ಚಳವಳಿಯಲ್ಲಿ ಹೋರಾಡುತಲಿ
ಮನೋವೃತ್ತಿ ಬದಲಾಗಲಿಲ್ಲ ಎಲ್ಲೆಲ್ಲಿ

ಮುಂದೆ ಆರುತಿಂಗಳದೊಳು ಕೆಂದಮಾರಿ ಇಂಗ್ಲೀಷರು
ಸುಂದ್ರ ಸುಭಾಸರನ್ನು ಹಿಡಿಯಬೇಕು ಪಹಲಿ
ಹೀಂಗಂದ ಮುಂದ ನಿಂತ ಒಗದ್ರು ಬಲೆ
ಬಂಗಾಲದಲ್ಲಿ ಆದ ಕ್ರಿಮಿನಲ್‌ನಲ್ಲಿ
ಲಾ ಅಮೆಂಡಮೆಂಟ್ಸ ಆರ್ಡಿನನ್ನ ಪ್ರಕಾರ
ಹಿಡದು ವೋದು ಹಾಕಿದ್ರು ಜೇಲಿನಲ್ಲಿ
ಆನಂದದಿಂದ ನಗತಿದ್ರ ಕಿಲಿಲಿಲಿಲಿ

||ಚ್ಯಾಲ||

ಹಿಡಿದಾರ ಮಾಡಿ ಬಂದೋಬಸ್ತ ಇಲ್ಲಿ ಬ್ಯಾಡ ಅಂತ ಬ್ರಹ್ಮದೇಶಕ್ಕ
ಮಂಡಾಲೆ ಜೇಲಿನೊಳು ಒಯ್ದು ಇಟ್ಟಾರೊ ಮಾಡಿ ರಿಕ್ಕ
ಸುಭಾಸರ ಶರೀರ ಆತೋ ಕ್ಷೀಣ ಉಳಿಯಲಿಲ್ಲ ತ್ರಾಣ
ಚೈನ ಇಲ್ಲದಕ್ಕ ರಾಜಯಕ್ಷಯೋಗ ಆತಿ ಮಂಡಾಲೆ ಹವಾ ತಡಿಯದಕ
ಬರಬರತ ಬದಲ ಅತಿ ಚೆನ್ದ ಕುಂದುಹೋತಿ ಬಣ್ಣ ಕಾಡು ಕಾಲಕ
ದೇಹದ ಆಸೆಯಿಲ್ಲ ದೇವಸ್ಮರಣೆ ಹಗಲಿ ಬೆಳತನಕ

||ಏರು||

ಹುಟ್ಟಿದ ಮ್ಯಾಲ ಮರಣ ಎಂದೂ ಬಿಟ್ಟದ್ದಲ್ಲ
ಬೆನ್ನಹಿಂದೆ ಗಟ್ಟಿಯಾಗಿ ನಿಂತೈತಿ ಒಯ್ಯಾಕ
ಎಳ್ಳಷ್ಟು ಚಿಂತಿಮಾಡೋದಿಲ್ಲ ಸಾಯಾಕ
ಈ ರಾಷ್ಟ್ರ ಉದ್ಧಾರ ಆಗುವತನಕ ಇರಬೇಕ
ಬುದ್ಧಿಗೇಡಿ ಬ್ರಿಟಿಶರನ್ನು ಗುದ್ದಿಕೊಂತ ಬಿದ್ದ ರಕ್ತ
ಹದ್ದು ನಾಯಿ ನರಿಗಳಿಗೆ ನೀಡಾಕ
ರಣವಾದ್ಯ ಹೊಡೆದ ಯುದ್ಧವನ್ನು ಮಾಡಾಕ|| ೧ ||

ಬಾಲ ಸುಭಾಸ ಬೋಸರಿಗೆ ಜೇಲಿನಲ್ಲಿ ರಾಜಯಕ್ಷರೋಗ
ಆದಿತೆಂಬ ಸುದ್ದಿ ಕೇಳ್ಯಾರ
ದೇಶಭಕ್ತರೆಲ್ಲ ಉಗ್ರಕೋಪ ತಾಳ್ಯಾರ
ಹೋಗಿ ಮುಂದೆ ನಿಂತ ಸರಕಾರಕ್ಕೆ ಹೇಳ್ಯಾರ
ಸಧ್ಯ ಈಗ ಸುಭಾಸರನ್ನ ಜೇಲಿನಿಂದ ಬಿಡಬೇಕ
ಬಿಡದಿದ್ದ ಮಾಡತೀವ ಸತ್ಯಗ್ರಹ
ಹೀಂಗ ಹೋಗಿ ಕೂಗತಾರ ಕೋಟ್ಯಾವಧಿ ಜನರ
ಗದ್ದಲಬಿದ್ದ ಸರಕಾರಕ್ಕೆ ಬುದ್ಧಿ ಬಂದು ಜೇಲಿನೊಳಗ
ಇದ್ದ ಸುಭಾಸರನ್ನು ಅವರಿಗೆ ಅಪ್ಪಣೆ ಕೊಟ್ಟಾರ
ಒಂಭತ್ತು ತಿಂಗಳ ಇದ್ದು ಜೇಲ ಭೋಗಿಸಿದ್ದು ಒಳ್ಳೆಯ ಹುರುಪಾಗಿ

ಹೊರಬಿದ್ದ ಬಂದಮ್ಯಾಲೆ ಹಚ್ಚಿದ್ದ   ಚಳವಳಿ ಬ್ಯಾಗಿ
ದೇಶಭಕ್ತರ ಮೇಲೆ ಗೋಳಿಬಾರ ಆದ ಅತ್ಯಾಚಾರ ಸುದ್ದಿ ಬಂತ ಸಾಗಿ
ಕೇಳಿ ಸುಭಾಸರು ಕುಂತ್ರು ಬಹಳ ಸಿಟ್ಟಾಗಿ

||ಏರು||

ದುಷ್ಟಗುಣದ ಬ್ರಿಟಿಶರನ್ನು ಬಿಟ್ಟು ಇನ್ನು ಫಲ ಇಲ್ಲ
ಮೆಟ್ಟಿ ತುಳಿಯಬೇಕ ಪಾತಾಳಕ
ಕಾಲಕಟ್ಟಿ ಕುಟ್ಟಿ ಅಟ್ಟಬೇಕ ಇಂಗ್ಲಂಡಕ
ಇಷ್ಟು ನಿಷ್ಠುರ ಆಡಿದರ ಸಿಟ್ಟ ತಡಿಯದಕ
ಬುದ್ಧಿಗೇಡಿ ಬ್ರಿಟಿಶರನ್ನು ಗುದ್ದಿಕೊಂತ ಬಿದ್ದ ರಕ್ತ
ಹದ್ದು ನಾಯಿ ನರಿಗಳಿಗೆ ನೀಡಾಕ
ರಣವಾದ್ಯ ಹೊಡೆದ ಯುದ್ಧವನ್ನು ಮಾಡಾಕ॥ ೧ ॥

ಸ್ವಚ್ಛವಾಗಿ ಸುಭಾಸರು ಬಿಚ್ಚಿ ಹೇಳತಾರ ನಿಂತ
ಲುಚ್ಚಾ ಬ್ರಿಟಿಶರನ್ನು ಹಚ್ಚಿ ಹೊಡೀಬೇಕ
ಮಣ್ಣ ಮುಚ್ಚಿ ಕಿಚ್ಚಿನೊಳಗ ಹಾಕಿ ಸುಡಬೇಕ
ಹೀಂಗ ನಿಶ್ಚಯಿಸಿ ನಿಂತಾರ ಸಂಗ್ರಾಮಕ
ಕೆಚ್ಚೆದೆಯ ವೀರರೆಲ್ಲ ನಿಚ್ಚಳಾಗಿ ಕ್ರಿಯಾ ಮಾಡಿ
ಕಿಂಚಿತ್ ವಂಚನೆಯಿಲ್ಲ ಒಕ್ಕೂಟಕ್ಕ
ಬಂದು ಕೂಡ್ಯಾರ ಆಗ ಸುಭಾಸರ ಲಷ್ಕರಕ್ಕ
ಹಿಂಡ ಹಿಂಡಾಗಿ ತಿರಗುವರ ಲಂಡ ಭಂಡಕೋರರನ್ನು
ಕಂಡಕಂಡಲ್ಲೆಲ್ಲ ಹಿಡಿದ ಕೊಲಬೇಕ
ನಿಂತ ಗುಂಡಹಾಕಿ ಚೆಂಡ ಕಡದ ಕೊಲಬೇಕ
ದೇಹ ತುಂಡ ತುಂಡ ಆಗುವಂತೆ ಕಡಿಬೇಕ
ರಂಡಿಮುಂಡ್ಯಾರಂತೆ ಭಯಗೊಂಡ ನಿಲ್ಲುವ ಕಾರಣೇನು?
ಪುಂಡರಾಗಿ ದಂಡಯಾತ್ರೆ ಮಾಡಬೇಕ
ರಣಮಂಡಲದಿ ನಿಂತ ಹೋರಾಡಬೇಕ
ಶ್ರೇಷ್ಠ ಭಾರತ ಸಿರಿಯ ನಷ್ಟ ಮಾಡಿದಂಥ
ಮಹಾದುಷ್ಟ ಆಂಗ್ಲೇಯರನ್ನು ಓಡಿಸಬೇಕ
ಕೈಕಟ್ಟಿ ಬಿಟ್ಟ ಮ್ಯಾಲ ಹೊರಸಬೇಕ
ಒಳ್ಳೆ ದಿಟ್ಟತನದಿಂದ ಯುದ್ಧ ಮಾಡುದಕ
ಲಕ್ಷಾವಧಿ ಲಷ್ಕರ ನಡುವೆ ನಿಂತ ಸಿಂಹನಂತೆ
ಗುಡುಗ ಹೊಡಿತಾನ ಅಳತಿಲ್ಲ ಅದಕ
ಕೇಳಿ ನಡಗ ಹುಟ್ಟಿತಾಗ ಇಂಗ್ಲಂಡಕ
ಸಾರು ಅಂಥ ಶಬ್ದಗಳು ಪೂರ ಕೇಳಿ ಇಂಗ್ಲೀಷರು

ವೈರಿ ಇದ್ದ ಸುಭಾಸರನ್ನು ಹಿಡಿಬೇಕ
ಹದ್ದುಪಾರಮಾಡಿ ದೂರ ಓದ ಇಡಬೇಕ
ಸುತ್ತ ಪಾರ ಇಟ್ಟ ಆಹೋರಾತ್ರಿ ತಿರಗಬೇಕ
ಕಲ್ಯಾಣ ನಿಲ್ದಾಣದಲ್ಲಿ ಬಲೆ ಒಗದ ಬಂಗಾಲದ
ಹುಲಿ ಹಿಡಿದ ಒಯ್ದರಾಗ ತುರಂಗಕ
ಬಾಳ ಕಷ್ಟ ಆದೀತ ಆಗ ಭಾರತ ಜನಕ

**||ಪದ್ಯ||**

ಸತ್ಯವಂತರಿಗೆ ಸಾವಿರಾರು ವಿಘ್ನಗಳು ಎಂಬುವ ಮಾತು ಸುಳ್ಳಲ್ಲ
ಹತ್ತೊಂಬತ್ತನೂರಾ ಮೂವತ್ತಮೂರರಲ್ಲಿ ಸುಭಾಸರಿಗೆ ಒದಗಿತ್ತ ಸಾಮಾನ್ಯದ ಕಾಲ
ಪುನಃ ರಾಜಯಕ್ಷ್ಮರೋಗಾಗಿ ಶರೀರಕ್ಕೆ ಚೈನ ಇಲ್ಲ
ಇಷ್ಟ ಆದರೂ ವೀರಪುರುಷ ಸುಭಾಸರು ಧೈರ್ಯ ಬಿಡಲಿಲ್ಲ

**||ಚ್ಯಾಲ||**

ರೋಗ ಪರಿಹಾರಗೊಸ್ಕರಕ್ಕಾಗಿ ಯುರೋಪ ಖಂಡಕ್ಕ ಹೋಗಿ ವಾಸ ಮಾಡಂತ
ಹೀಂಗ ಹುಕುಂ ಆದೀತು ಪರತ
ಯುರೋಪ ಖಂಡಕ್ಕ ಒಯ್ದಾರ ಔಷದೋಪಚಾರ ನಡಸಿದಾರ ಪೂರ್ತಿ
ರೋಗ ಹೋಗಿ ಆದಾರು ಸ್ವಸ್ಥ
ಹಗಲಿರುಳು ಭಾರತದ ಚಿಂತಿ ಮನದೊಳು ಭ್ರಾಂತಿ ವಾಸ ಏಕಾಂತ
ದೇವರಲ್ಲಿ ಇಟ್ಟ ಏಕಚಿತ್ತ
ಭಾರತೀಯ ಸಮರವೆಂಬ ಸಾರ ತುಂಬಿ ವಿಚಾರ
'ಇಂಡಿಯನ್ ಸ್ಟ್ರಗಲ್' ಎಂಬ ಗ್ರಂಥ

**||ಏರು||**

ಚಂದವಾದ ಇತಿಹಾಸ ಮುಂದೆ ನಾನು ಹೇಳತೇನಿ
ಬೆಳಸಿದ್ರ ಆಗತದ ಬೆಳತನಕ
ಹುಲಕುಂದವಾಸ ಶಿವಲಿಂಗನ ಕೌತುಕ
ಸುಭಾಸ ಬೋಸ ವೀರ ಭಾರತದ ಮಾಣಿಕ
ಬುದ್ಧಿಗೇಡಿ ಬ್ರಿಟಿಶರನ್ನು ಗುದ್ದಿಕೊಂತ ಬಿದ್ದ ರಕ್ತ
ಹದ್ದು ನಾಯಿ ನರಿಗಳಿಗೆ ನೀಡಾಕ
ರಣವಾದ್ಯ ಹೊಡೆದ ಯುದ್ಧವನ್ನು ಮಾಡಾಕ|| ೩ ||

**ರಚನೆ :** ಹುಲಕುಂದ ಶಿವಲಿಂಗಸ್ವಾಮಿ
**ಕೃತಿ :** ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

# ೪೪. ಶೂರ ಸುಭಾಸ ಚಂದ್ರ

ಎಂಥ ವೀರ ಕ್ರಾಂತಿಕಾರ। ಶೂರ ಸುಭಾಶ್ಚಂದ್ರ ಧೀರ॥ ಪ ॥
ಹದಿನೆಂಟನೂರ ತೊಂಬತ್ತೇಳನೇ ಇಸ್ವಿಯಲ್ಲಿ ಜನಿಸಿ ಬಂದ।
ಬಂಗಾಲ ಪ್ರಾಂತದಲಿ।
ಪ್ರೆಸಿಡೆನ್ಸಿ ಕಾಲೇಜು ವಿದ್ಯಾರ್ಥಿಯಾಗಿದ್ದ ಜಾನಕಿನಾಥನ।
ಜ್ಞಾನ ಕುವರ॥ ೧ ॥

ಯುರೋಪಿಯನ್ನ ಪ್ರಿನ್ಸಿಪಾಲ ಓಟನ್ನ ಹೆಸರಿನವ ಭಾರತ।
ಜನರನ್ನ ದೂರವುದನ್ನು ನೋಡಿ।
ಭಾರಿ ಸಿಟ್ಟಿಗೆದ್ದ ಕರ್ ಕರ್ ಹಲ್ಲತಿಂದ ಜೋರಿಲಿಂದ ಅವನ।
ಮಾರಿಗ್ಹೊಡಿದ॥ ೨ ॥

ಆಯ್.ಸಿ.ಎಸ್. ಆಗಿ ಅಧಿಕಾರ ವಹಿಸಲಿಲ್ಲ ತಾಯಿ ನಾಡಿನ।
ಸೇವೆ ಜೀವನಾಧಾರ।
ಸಾವಿನ ಭಯವಿಲ್ಲ ಸದಾ ಜೇಲಿನಲ್ಲಿ ಭವಾನಿ।
ಪ್ರಾಥನಾ ನಿರಾಹಾರಿ॥ ೩ ॥

ಪಾರಾ ಇದ್ದವರ ಮಾರಿ ತಪ್ಪಿಸಿ ಪಾರ ಆದನೋ।
ಭಾರತ ಗಡಿ ದಾಟಿ।
ಜೀಯಾ ಉದ್ದೀನ ಪಠಾಣ ವೇಷ ಹಾಕಿ ಪರಿಪರಿಯಿಂದ।
ಅವರನ ಫಸಾಸಿ ಹೋದ॥ ೪ ॥

ಝೂಂಸಿ ರಾಣಿದಲ ಆಝಾದ ಹಿಂದ ಫೌಜ ಸ್ವತಂತ್ರ ಸರಕಾರ।
ಬ್ಯಾಂಕ ಸ್ಥಾಪನೆ ಮಾಡಿ।
ರೊಕ್ಕದ ಸುರಿಮಳಿ ತಕ್ಕಡಿ ತುಲಭಾರ ರಕ್ತದ।
ತಿಲಕವೆ ಸಾಕ್ಷಿ ಅದಕ॥ ೫ ॥

ಒಂಭತ್ತ ಸರಕಾರ ಮನ್ನಣೆ ಪಡಕೊಂಡ ಅಂದಮಾನ।
ನಿಕೋಬಾರ ಸ್ವತಂತ್ರ ಮಾಡಿಕೊಂಡ।
ಪತ್ರಿಕಾ ಪ್ರಸಿದ್ಧಿ ಪ್ರಚಾರ ಶಾಖೆಯ ವಿಸ್ತಾರಗೊಳಿಸಿ।
ಪ್ರಖ್ಯಾತನಾದ॥ ೬ ॥

ಸತ್ತನೆಂಬ ಸುದ್ದಿ ಸುತ್ತುಕಡೆ ಅದ ಮಿಥ್ಯವೆಂದು।
ಮಹಾತ್ಮಜಿ ಹೇಳಿದ್ದಾ।
ಮತ್ತೊಮ್ಮೆ ನಿಮಗ ದರ್ಶನ ಕೊಡಲಿ ಎಂದು ಪ್ರತ್ಯಕ್ಷ।
ಹುಲಕುಂದ ಭೀಮ ಹೇಳಿದ॥ ೭ ॥

**ರಚನೆ :** ಹುಲಕುಂದ ಭೀಮಕವಿ

**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೪೫. ಶೂರ ಸುಭಾಸ ಬೋಸ್

ಭಾರತಾಂಬೆ ಪಾರತಂತ್ರ ದೂರ ಮಾಡಲಿಕ್ಕೆ ಹೊರಟ ವೀರನಿಗಂದು
ಪರರಾಷ್ಟ್ರದೊಳಗ ನಿತ್ಯಪೂಜೆ ।
ವಾರಂಟ ಪಾರಾದವರಿಗೆ ನೀರ ಹಚ್ಚಿ ಪಾರ ಆದ ಶೂರ ।
ಸುಭಾಸಶ್ಚಂದ್ರಭೋಸ ನೇತಾಜಿ ॥
ಅನ್ಯಾಯಕ್ಕ ಸಹನಿಲ್ಲ ತನ್ನ ದೇಹ ಪರಿವಿಲ್ಲ ಧನ್ಯ ಧನ್ಯ
ಜನಿಸಬಹುದ ಬಂಗಾಲದಲ್ಲಿ ।
ಸಣ್ಣಂದಿರತ ಶರೀರವೆಲ್ಲಾ ಸಣ್ಣ ಆತ ಜೇಲಿನಲ್ಲಿ ।
ಸಣ್ಣ ವ್ಯಕ್ತಿ ಅಲ್ಲ ಶ್ರೇಷ್ಟ ಗಂಡಗಲಿ ॥
ಪರತಂತ್ರ ದೇಶದ ಭ್ರಾಂತಿ ತುರಂಗ ವಾಸದ ಕ್ರಾಂತಿ ।
ವಿದ್ಯಾ ಅಭ್ಯಾಸ ಚಿಂತಿ ಬಾಲಕನಲ್ಲಿ ।
ಯುರೋಪಿಯನ್ನ ಪ್ರಿನ್ಸಿಪಾಲ ಓಟನ್ಂಬು ಹೆಸರಿನವ ।
ಕಲಸತಿದ್ದ ಪ್ರೆಸಿಡೆನ್ಸಿ ಕಾಲೇಜದಲ್ಲಿ ॥
ಹಿಂದು ಜನರಿಗೆ ಅವನಿಂದಾ ಮಾಡುದ ಕಂಡು ಸಹನ ।
ಆಗಲಿಲ್ಲ ಸುಭಾಶ್ಚಂದ್ರರಲ್ಲಿ ।
ವಿದ್ಯಾರ್ಥಿಗಳ ಗುಂಪುಗೂಡಿ ತಾತ್ಕಾಲಿಕ ಸಂಪಹೂಡಿ ।
ದೇಹ ದಂಡನ ಮಾಡಿರವಂಗ ಕ್ಷಣದಲ್ಲಿ ॥
ಅದೇ ಸಿಟ್ಟಿಹಿಡಿದ ಭೋಸರನ್ನ ಹದ್ದಪಾರ ಮಾಡಿದರು ।
ಬಂದ ಆತ ಎರಡವರುಷ ತನಕ ಸಾಲಿ ।
ಮಂದಿ ಆಗ್ರಹದಿಂದ ಬಂದ ಮುಂದೆ ಕಾಲೇಜಕ್ಹೆಸರ ಹಚ್ಚಿ ।
ವಿದ್ಯಾಪೀಠದ ಪರೀಕ್ಷೆ ಪಾಸಾದರಲ್ಲಿ ।
ತಾಯಿ ತಂದಿ ಮಾತ ಕೇಳಿ ಆಯ್.ಸಿ.ಎಸ್. ಕಲಿಲಕ್ಕೆ ಹೋಗಿ
ತೇರ್ಗಡೆ ಹೊಂದಿದಿಪ್ಪತ್ಮೂರ ವಯಸ್ಸಿನಲ್ಲಿ ।
ಮಾಯದ ನೌಕರಿಗೆ ಮರುಳ ಆಗಲಿಲ್ಲ ರಾಜಿನಾಮೆ ಕೊಟ್ಟ ಬಂದ ।
ಬಿದ್ರ ಚಳವಳಿಯಲ್ಲಿ ॥

**||ಚಾಲ||**

ದೇಶಗೌರವ ಸುಭಾಶ್ಚಂದ್ರಭೋಸ ।
ದೇಶಬಂಧು ದಾಸ । ಇಬ್ಬರು ಜೋಡಿ ॥
ಕೆಲಸ ನಡಸಿತಿದ್ರ ಕೂಡಿ ಕೂಡಿ ॥
ಕಲಕತ್ತೆಗೆ ಪ್ರಿನ್ಸ ಆಃಪವೆಲ್ಸ ।

ಬರುವ ದಿವಸ । ಮಸಲತ ಮಾಡಿ ।
ಬಹಿಷ್ಕಾರ ಹಾಕ್ಯಾರ ಸಭೆ ಗೂಡಿ ॥
ಆರ ತಿಂಗಳ ಕಾರಾಗ್ರಹವಾಸ । ಬರದಾರ ಮರುದಿವಸ ।
ಹಾಕಿದರು ಬೇಡಿ ।
ತಗೊಂಡ್ಹೋದರು ಜೇಲಿನ ಕಡಿ ॥
ತುರಂಗ ಬಿಟ್ಟ ಹೊರಬಿದ್ದ ತರುಣರು ನೂರಪಟ್ಟ ।
ಜೋರ ಇಟ್ರ ಮುಂದ ಹೆಜ್ಜಿ
ಮಂದ ಪಕ್ಷದವರ ಕೂಡ ಬಂದು ಹೊಂದಿಕೊಳ್ಳಲಿಲ್ಲ ।
ಶೀಘ್ರ ತತ್ವ ಉಗ್ರಪಕ್ಷ ಬಹದ್ದೂರರ ।
ಸಂಹೇಹವಿಲ್ಲದೆ ಸಂಘಟನೆ ಮಾಡುವವರು ಸ್ವರಾಜ್ಯ ಪಕ್ಷ ।
ಸ್ಥಾಪಿಸಿದರು ಗಂಭೀರರು ॥
ಫಾರರ್ವಡೆಂಬ ಪತ್ರಿಕೆಯ ಸಂಪಾದಕರು ತಾವಾಗಿ ।
ಅದರಿಂದ ಮಾಡತಿದ್ರ ಪ್ರಚಾರ ।
ಎರಡ ಸಾರೆ ಕಾಂಗ್ರೆಸ ಅಧ್ಯಕ್ಷಾಗಿ ಆರಿಸಿ ಬಂದ್ರ ಗೌರ್ಮೆಂಟದಿತ್ತ
ಇವರ ಮೇಲೆ ನದರ ॥
ಮೂವತ್ತೆರಡನೇ ಇಸ್ವಿಯಲ್ಲಿ ದುಂಡು ಮೇಜಿನ ಪರಿಷತಿನಿಂದ ।
ನಿರಾಶರಾಗಿ ಮರಳಿ ಬಂದ್ರ ಗಾಂಧಿಯವರ ॥
ಆವಾಗ ಸುಭಾಸರಿಗೆ ಆಮಂತ್ರಮಣ ಕೊಟ್ಟ ಕರೀ ಕಳಿಸಿ ।
ತುರಂಗ ಕಟ್ಟಿದ್ರ ನೀಚ ಸರಕಾರಾ ॥
ಇಪ್ಪತ್ತ ವರುಷದೊಳಗ ಇವರ್ನ ಹತ್ತಸಾರೆ ಜೇಲಗಟ್ಟಿ ।
ಹದ್ದಪಾರ ಮಾಡಿದ್ದರು ಬ್ರಿಟಿಷರಾ ।
ನೂರಾ ಎಂಟ ಸೇರ ತೂಕ ಕಡಿಮಿ ಆದ್ರು ಬಿಡಲಿಲ್ಲ ಕರುಣ ।
ಇಲ್ದ ಕುಲಗೇಡಿ ಭದ್ಮಾಸರಾ ॥
ಸೆರೆಮನೆಯೊಳಗಿದ್ದವರು ಸಹಿತ ಯುರೋಪಿಯನ್ರ ಕಾಯ್ದೆ ಮುಂದ
ವಿಮಾನದಿಂದ ಕಲಕತ್ತೆಗೆ ಬಂದ್ರ ಸುಭಾಶ್ಚಂದ್ರರಾ ।
ಬರುದರೊಳಗ ತಂದಿಯವರು ತೀರಿಕೊಂಡ ಸುದ್ದಿ ಕೇಳಿ ।
ಹೌಹಾರಿ ಹಾಕಿದರು ಕಂಣೀರಾ ॥

**||ಚಾಲ||**

ನಿಂತಲ್ಲೆ ಮತ್ತೆ ಪೋಲಿಸರ ಮುತ್ತಿಗಿ ಹಾಕಿದರ । ಇಲ್ಲದೆ ದಯ ಕರುಣ
ತಡಮಾಡದೆ ಬಿಡಿಶಾರ ಹಿಂದುಸ್ತಾನಾ ॥
ಆರೋಪ ಹೊರಿಸಿದರ ಪುರಾವೆ ಇಲ್ಲ ಬರೇ ಒಂದೇ ಅಮಲ ।
ಎಷ್ಟು ಮೂರ್ಖತನಾ ।
ತುಂಬಿ ತುಳುಕುತ್ತಿದ್ದುವ ದುರ್ಗುಣಾ ॥
ಹದಿನೆಂಬನೂರ ಹದಿನೆಂಟ ರೆಗ್ಯೂಲೇಶನ್ ಪ್ರಕಾರ ಬಂಧನ ।

ಇವೇ ಮುಖ್ಯ ಬಾಣಾ।
ಜೇಲಿಗಟ್ಟಿ ಮಾಡತಿದ್ರ ಸಂಣಾ ॥

**||ಏರು||**

ಸಂಣ ಆದರು ಕೂಡಾ ತಣ್ಣಗ ಕೂಡ್ರವರಲ್ಲ ಹೊರಗ ಬಂದ।
ಹಾರಸತಿದ್ರ ಧಡಲ್ ಬಾಜಿ॥ ೨ ॥

ಬ್ರಿಟಿಷ ಸಾಮ್ರಾಜ್ಯಶಾಹಿ ನಾಮಶೇಷ ಮಾಡುವಂಥಾ।
ನೇಮ ಹಿಡಿದಿದ್ದ ಆ ಬ್ರಹ್ಮಚಾರಿ।
ಕುಟಿಲ ಕಾರಸ್ಥಾನ ಅನ್ಯಾಯಗಳನ್ನೆಲ್ಲ ನಷ್ಟ ಮಾಡುದು।
ಒಂದ ಶ್ರೇಷ್ಟ ಗುರಿ ॥
ಬಿಸಿ ಬಿಸಿ ರಕ್ತದ ಹೊಸ ಹೊಸ ತರುಣರಿಗೆ ಉಪದೇಶ।
ಮಾಡುವಂಥ ಕ್ರಾಂತಿಕಾರಿ।
ಮುಸಗುಡುವಂಥ ಬಿಳಿ ಆನಿಗಳಿಗೆ ಎಲ್ಲಾ ಅಂಕುಶ।
ಇದ್ದಾಂಗ ಸುಭಾಶ್ಚಂದ್ರ ಧೊರಿ ॥
ಕಲಕತ್ತೆಯಲ್ಲಿ ಹಾಲ್‌ವೆಲನ ಪುತ್ಥಳಿ ತಗದ ಹಾಕಲಕ್ಕೆ।
ಚಳವಳಿ ನಡದಿತ್ತ ಅತಿ ಮಿತಿ ಮೀರಿ।
ಪೋಲೀಸರ ಬಂದ ಇವರ ಮೇಲೆ ಮುತ್ತಿಗಿ ಹಾಕಿ।
ಜೇಲಿಗಟ್ಟಿದ್ರ ಮತ್ತೊಂದ ಸಾರಿ ॥
ಬರೇ ತುರಂಗವಾಸ ಶರೀರೆಲ್ಲ ಕರಿಗ್ಹೋತ ಯಾರ್‍ಯಾರು।
ಹೋಗಿಲ್ಲ ಇವರ ಸರಿ।
ಸೆರೆಮನೆಯೊಳಗ ದುರ್ಗಾದೇವಿ ಆರಾಧನ ಬಾರಿ ಬಾರಿಗಿ।
ಇರತಿದ್ರ ನಿರಾಹಾರಿ ॥
ಇರುವ ಮನಿಸುತ್ತ ಪಾರಾ ಇಟ್ಟಿದ್ದರು ವಾರಂಟ ತಗದಿದ್ರ।
ಮತ್ತೊಂದ ಬಾರಿ।
ಜಾನೇವರಿ ಇಪ್ಪತ್ತಾರ ನಾಲ್ವತ್ತೊಂದನೆ ಇಸ್ವಿಯಲ್ಲಿ।
ಮಾಯವಾದರು ದಾಟಿ ಗುಲಾಮಗಿರಿ ॥

**||ಚಾಲ||**

ಕಂಣಿಗೆ ಕಾಣುವ ಜಗತ್ತೆಲ್ಲ ಮಿಥ್ಯೆ ವಿಚಾರ ಧ್ಯೇಯ ಸತ್ಯ। ನಷ್ಟವಾಗುದಿಲ್ಲಾ ॥
ಹಿಗೆಂತ ಸಾರ್‍ಯಾರ ನಾಡಮ್ಯಾಲಾ ॥
ವಿಚಾರ ಬೆನ್ನಹತ್ತಿ ವ್ಯಕ್ತಿಯು ಸತ್ತ ವಿಚಾರ ಉಳಿದ ಮತ್ತೆ ಆಗುದು ಪ್ರಬಲಾ
ಅನುಕರಣ ಮಾಡುರ ಸಾವಿರಾರ ಜನರೆಲ್ಲಾ ॥
ಪದದ ಮೊದಲನೇ ಅಧ್ಯಾಯ ಇಲ್ಲಗಿ ಮುಗೀತ ಮುಂದಿನ ಚರಿತ ಭೀಮೇಶ ಬಲ್ಲಾ
ಕವಿ ಮಾಡಿ ಹೇಳಾವ ಸರ್ವೆಲ್ಲಾ ॥

**||ಏರು||**

ಸಿರಿಗನ್ನಡದಲ್ಲಿ ಮೆರೆವ ಹುಲಕುಂದದ ।
ಸರಸ ಜನ ಪದದ ಸರಗೆಜ್ಜ॥ ೩ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೪೬. ಜವಾಹರಲಾಲರು

ಜಗತ್ತಿನಲ್ಲಿ ಶಾಂತಿಯುಗದ ಪುರುಷರು ಹಗಲಿರುಳೆನ್ನದೆ ದುಡಿಯುವರು ।
ಆಗರ್ಭ ಶ್ರೀಮಂತ್ರ ತ್ಯಾಗಿ ಧೈರ್ಯವಂತ್ರ ಆಗಲಿ ಹೋದ್ರ ।
ಭಾರತ ಮಂತ್ರಿವರ್ಯರು॥ ಪ ॥

ಭಾರತ ದೇಶದ ಬಂಧ ವಿಮೋಚನಕ ಭಾರಿ ಕಷ್ಟನಷ್ಟ ಸೋಸಿದರು ।
ತಾರುಣ್ಯವೆಲ್ಲಾ ತುರಂಗದೋಳು ಕಳದ ಧೀರತನದಿಂದ ಮುಂದೆ
ಸಾಗಿದರು ॥
ಬ್ರಿಟಿಶ್ ಸರಕಾರದ ಲಾಠಿ ಹೊಡತಕ್ಕೆ ಏಟು ಮಣಿಯಲಿಲ್ಲ ಪಂಡಿತರು ।
ಕಠಿಣ ಪ್ರಸಂಗಗಳಲ್ಲಿ ಕಾಲದೆಗೆಯದೆ ಧಿಟ್ಟತನದಿ ಮುಂದೆ ಸಾಗಿದರು ॥
ರಾಷ್ಟ್ರಸೇವೆ ಮಾಡಿ ಕಾಂಗ್ರೇಸ ಅಧ್ಯಕ್ಷರಾಗಿ ಎಷ್ಟೋ ।
ಗೊತ್ತುವಳಿ ಮಂಡಿಸಿದರು ।
ರಾಷ್ಟ್ರಪಿತಾ ಮಹಾತ್ಮಾ ಗಾಂಧಿಜಿಯವರ ಪಟ್ಟದ ಶಿಷ್ಯರಾಗಿ
ನಡಕೊಂಡು ॥

**||ಚಾಲ||**

ರಾಷ್ಟ್ರಧ್ವಜದ ಮೇಲಶೋಕ ಚಕ್ರ ಇಟ್ಟಾ ।
ರಾಷ್ಟ್ರಸಭೆಯಲ್ಲಿ ಮಾಡಿಕೊಂಡ್ರ ಶ್ರೇಷ್ಠಾ ॥
ಮಹಾ ಮಹಾ ಮುತ್ಸದ್ದಿಗಳನ ಬಿಟ್ಟಾ ।
ಮಹಾತ್ಮ ಮುಳ್ಳಿನ ಕಿರೀಟ ಇವರ ತಲಿಯ ಮೇಲಿಟ್ಟಾ ॥
ಹಿಂದುಸ್ತಾನದ ಪ್ರಧಾನ ಮಂತ್ರಿ ಪದವಿ ಕೊಟ್ಟಾ ।
ಗಾಂಧಿಜಿಯವರು ಹೋದ್ರ ಕೈ ಬಿಟ್ಟಾ ॥

**||ಏರು||**

ನಿರ್ಗತಿಕ ಭರತಖಂಡ ಪ್ರಗತಿಗೊಯ್ಯುವದಕ್ಕ ।
ಬಗಿ ಬಗಿ ಯೋಜನೆ ನಡಸಿದರು॥ ೨ ॥

ಪಂಚವಾರ್ಷಿಕ ಯೋಜನೆ ಪ್ರಪಂಚಕ್ಕೆಲ್ಲಾ ಘನ ।
ಉಪಯೋಗವಾಗುವಂತೆ ಯೋಚಿಸಿದರು ।
ಹಂಚಿಕೆಯಿಂದಲಿ ಫ್ರೆಂಚ ಮುಂತಾದಂಥ ।
ವಸಾಹತುಗಳನ್ನ ಮುಕ್ತಗೊಳಿಸಿದರು ॥
ಯುದ್ಧದ ಬೇಗೆಗೆ ಭುಗಿಲ್ ಎನ್ನುತ್ತಿದ್ದಾಗ ।
ಬಾಂಡುಂಗ ಪರಿಷತ್ತ ಸಜ್ಜಗೊಳಿಸಿದರು ।
ಮುದ್ದಾಂ ಜನತಾ ಚೀನಕ ಖುದ್ದ ದರ್ಶನ ಕೊಟ್ಟ ।
ಜನರಲ್ಲಿದ್ದಂಥ ತಪ್ಪು ಭಾವನಾ ದೂಡಿದರು ॥
ಯುರೋಪ ಮತ್ತು ರಶಿಯಾದಲ್ಲಿ ಪ್ರವಾಸ ಕೈಕೊಂಡು ।
ಹಿಂದುಸ್ತಾನಕ ಕೀರ್ತಿಯನ್ನು ತಂದುಕೊಟ್ಟರು ।
ಪರರಾಷ್ಟ್ರದೊಳಗಿನ ಮುಖಂಡರನ ಭಾರತಕ್ಕೆ ।
ಬರಮಾಡಿಕೊಂಡು ಸತ್ಕರಿಸಿದರು ॥

**||ಚಾಲ|**

ಭಾರತಕ್ಕೆ ಎಲ್ಲರು ಬೇಕು ।
ಭಾರತವು ಎಲ್ಲರಿಗೆ ಬೇಕು ॥
ಎಲ್ಲಾ ರಾಷ್ಟ್ರಕ್ಕೆ ಯುದ್ಧದ ಭೀತಿ ಸಾಕು ।
ಸಲೆ ಶಾಂತಿ ಮಾರ್ಗದಿ ನಡಿ ಬೇಕು ॥
ಜಿನೇವಾ ಪರಿಷತ್ತಿನಲ್ಲಿ ತಗಿದ ತೂರು ।
ಮಾನ ಜನ್ಮದ ಮೂಲಭೂತ ಹಕ್ಕು ॥

**||ಏರು||**

ಆಗದಂಥ ಕಾರ್ಯಗಳನ ಸಾಗರ ಬಿದ್ದ ನೀಗಿಸುವರು ।
ಯೋಗ್ಯತಾವಾನರು ನಮ್ಮ ನೆಹರುರವರು
ಹತ್ತ ಹದಿನೈದ ವರುಷ ಮಸ್ತುಖಟಪಟ ಮಾಡಿ ।
ಯುಕ್ತಿಲಿಂದ ಕಾರಭಾರ ನಡೆಸಿದರು ।
ಸತ್ತು ಕಡೆ ರಾಷ್ಟ್ರಗಳು ಇತ್ತ ಹೊರಳಿ ನೋಡುವಂತೆ ।
ಉತ್ತಮ ತತ್ವಕೆ ಅಂಟಿಕೊಂಡಿಹರು ॥
ಹಿಂದುಸ್ತಾನದೊಳಗಿನ ಕುಂದು ಕೊರತೆಗಳು ಬಂದ ಆದಾಗ ।
ಶಾಂತಿ ಹೊಂದುವರು ।
ಸುಂದರ ಭಾರತ ನಂದನವನಾ ಮಾಡುದೊಂದೆ ।
ಅವರ ಹೃದಯದ ಉಸಿರು ॥

ಜಾತ್ಯಾತೀತ ನೀತಿವಂತ ರಾಷ್ಟ್ರಕಟ್ಟಲಿಕ್ಕೆ ಆತುರ।
ಪಡುವಂಥ ಖ್ಯಾತಿವಂತರು।
ಮಾತನಾಡಿದಂತೆ ಕೃತಿ ಸತತ ಸಾಗಲೆಂದು ಪ್ರೀತಿಲಿಂದ।
ಸಾರುವಂಥ ಸಾತ್ವಿಕರು ॥

**||ಚಾಲ||**

ಮಾನವ ಕೋಟಿಗೆ ಜ್ಞಾನದ ಶಿಖರಾ।
ಅನುಭವಿಕ ರಾಜಕಾರಣ ಮುಕುರಾ।
ವರ್ಣನ ಮಾಡಲಿಕ್ಕೆ ಇಲ್ಲ ಅಕ್ಷರಾ।
ಪೂರ್ಣ ಅರುಣೋದಯದ ಭಾಸ್ಕರಾ ॥
ದೀನ ದಲಿತರ ಉದ್ಧಾರ ಗೋಸ್ಕರಾ।
ಹೊಣೆ ಹೊತ್ತ ಕಾಂಗ್ರೆಸ ಸರಕಾರಾ ॥

**||ಏರು||**

ಜಾಗ ಹುಲಕುಂದದೊಳಗ ಕವಿ ಹೇಳಿದ ಭೀಮ ಸಿಂಗ।
ತೂಗಿದಂಗ ಬಂಗಾರ ಪಕ್ಕ ಸೇರು॥ ೩ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೪೭. ಲಾಲಬಹದ್ದೂರ ಶಾಸ್ತ್ರೀಜಿಯವರು

ಕಾಲ ಚಕ್ರದ ಲೀಲಾ ಪುರುಷರು ಲಾಲ ಬಹದ್ದೂರ ಶಾಸ್ತ್ರೀಯವರು।
ಶೀಲ ಸಚ್ಚರಿತ್ರೆಯ ಮೂಲ ನಾಯಕರು ಅಗಲಿ ಹೋದ್ರ।
ಭಾರತ ಮಂತ್ರಿವರ್ಯರು॥ ಪ ॥

ಬಡತನದಲ್ಲಿ ಶಿಕ್ಷಣ ಪಡೆದು ಪ್ರವೀಣರಾಗಿ ಧೃಡದಿಂದ ದೇಶಕ್ಕೆ ದುಡಿದವರು।
ಕಡು ವೈರಿಗಳ ಕೂಡ ಬಿಡದೆ ಧೈರ್ಯದಿಂದ ಹಿಡಿದ ಕಾರ್ಯವನ್ನು ನಡಿಸಿದ್ದರು ॥
ಗಾಂಧಿ ತತ್ವವನ್ನು ಹೊಂದುಗೂಡಿಸಿಕೊಂಡ ರಾಜಕಾರಣ ದುರಂಧರು ॥
ಹಿಂದುಸ್ಥಾನವನು ಮುಂದುವರಿಸಿಕೊಂಡು ಚಂದದಿಂದ ಕೆಲಸ ಸಾಗಿಸಿದರು ॥
ವಿನೋಬಾಜಿಯವರ ಅನುಮತಿ ಪಡಕೊಂಡ ಅನ್ಯ ರಾಷ್ಟ್ರದಲ್ಲಿ ಕ್ರಾಂತಿ ಎಬ್ಬಿಸಿದರು।
ಕೊನೆಗೆ ಶಾಂತಿ ಮಾರ್ಗವನ್ನು ಅನುಸರಿಸಿ ಮನಮುಟ್ಟಿ ದುಡಿದರು ಮಹನೀಯರು ॥

**||ಚಾಲ||**

ಹದಿನೆಂಟು ತಿಂಗಳದಲ್ಲಿ ।
ಸುಧಾರಣೆ ಮಾಡಿದರು ಇಲ್ಲಿ ॥
ಹಿಂದುಸ್ತಾನದ ಕೀರ್ತಿ ಜಗದಲ್ಲಿ ।
ತಂದ ಕೊಟ್ಟ ಹೋದ್ರ ಕ್ಷಣದಲ್ಲಿ ।

**॥ಏರು॥**

ಸೋಲನರಿಯದ ವಿಶಾಲ ಹೃದಯದ ಮೇಲ್ತರಗತಿಯ ಪ್ರಧಾನರು॥ ೧ ॥

ಭಯಗೊಂಡ ಪ್ರಪಂಚ ಹೊಯ್ದಾಡು ಕಾಲಕ್ಕ ಧೈರ್ಯಗೆಡಲಿಲ್ಲ ಶೌರ್ಯವಂತರು ।
ಜೈ ಜವಾನ ಜೈ ಕಿಸಾನ ಅಂತ ಆಹಾರ ಅಭಾವ ಪ್ರಶ್ನಕ್ಕಣಿಯಾದರು ॥
ಜಗತ್ತಿಗೆಲ್ಲಾ ಶಾಂತಿ ಪಾಠ ಕಲಿಸಿದರು ಅಂತರಾಷ್ಟ್ರೀಯ ಮುಖಂಡರು ।
ಯುಗದ ನೊಗ ಕಿತ್ತೊಗೆದ ವೀರರು ಹಗೆಗಳಲ್ಲಿ ಸ್ನೇಹ ಬೆಳೆಸಿದರು ।
ಸಾದಾ ಜೀವನ ಸಾತ್ವಿಕ ಆಹಾರ ಸೋಮವಾರ ಒಪ್ಪತ್ತ ವ್ರತ ಸಾರಿದರು ।
ಹೃದಯದಿಂದ ವೈರಿಗೆದೆಯುವ ಕಲೆಯಲ್ಲಿ ಸದಾಯುಕ್ತಿಯಿಂದ ನಡೆದವರು ॥

**॥ಏರು॥**

ಶಾಸ್ತ್ರೀಯವರು ನಿಷ್ಕಾಮ ಕರ್ಮಯೋಗಿ ।
ಆಸ್ತಿ ಮಾಡಲಿಲ್ಲ ಸಾಯುವವರಿಗಿ ।
ಅಹಿಂಸಾ ಮೂರ್ತಿ ಸ್ವಾರ್ಥತ್ಯಾಗಿ ।
ಮಹತ್ಮಾಜಿ ಪರಮ ಶಿಷ್ಯರಾಗಿ ॥

**॥ಏರು॥**

ಹುಲಕುಂದ ಭೀಮೇಶ ಅಂದ ನಮ್ಮ ರಾಷ್ಟ್ರಕ
ಹಾನಿಯಾಯಿತು ಭರಪೂರಾ॥ ೨ ॥

**ರಚನೆ :** ಹುಲಕುಂದ ಭೀಮಕವಿ
**ಕೃತಿ :** ಸರ್ವೋದಯ ಗ್ರಾಮೀಣ ಜನಪದ ಗೀತೆಗಳು

## ೪೮. ಶ್ರೀಮತಿ ಇಂದಿರಾಗಾಂಧಿ (೧೯೭೫)

ಭಾರತದೇಶದ ಮುಂದಾಳಾಗಿ । ಗಾಂಧಿ ನೆಹರು ಸಂಗಮವಾಗಿ ।
ತಂದ ಸ್ವರಾಜ್ಯ ಮುಂದುವರಿಸಿದ ನೆಹರೂ ಪುತ್ರಿಯರೂ ।

ಹಿಂದಿನ ಕುಂದುಕೊರತೆ ನೀಗಿ | ಇಂದಿನ ಪ್ರಧಾನ ಮಂತ್ರಿಯಾಗಿ |
ಮುಂದಾಳಾಗಿ ಆನಂದಬೀರಿದ ಇಂದಿರಾಜಿಯವರು|| ೧ ||

ಸುಂದರ ಆನಂದ ಭವನದಲ್ಲಿ | ಹತ್ತೊಂಬತ್ತು ನೂರಾ ಹದಿನೇಳರಲ್ಲಿ |
ಹತ್ತೊಂಬತ್ತನೇ ನವ್ಹಂಬರದಲ್ಲಿ ಜನಿಸಿದರಿವರು |
ಇಂದಿರಾ ಎಂಬ ಹೆಸರನ್ನಿಟ್ಟು | ನಾಯಡು ಅವರು ಸಂತಸಪಟ್ಟು |
ಭಾರತಕಣ್ಮಣಿ ಎಂದು ಜೋಗುಳ ಹಾಡಿ ಹರಿಸಿದರು|| ೨ ||

ಮದನ ಮೋಹನ ಮಾಲವಿಯವರು | ಗೋಪಾಲಕೃಷ್ಣ ಗೋಖಲೆಯವರು |
ಆನಿಬೆಸೆಂಟ ಆದಿಯಾಗಿ ಅನಸಾರಿ ಡಾಕ್ಟರರು ||
ಚಿತ್ತರಂಜನದಾಸ ಸಪ್ರು | ಮಹಾತ್ಮಾಗಾಂಧಿ ಆಂಡ್ರೂಸರವರು |
ವರಿಷ್ಠ ವ್ಯಕ್ತಿ ವಿಶಿಷ್ಟ ಶಕ್ತಿ ಎಂದು ಭವಿಷ್ಯ ನುಡಿದಿಹರು|| ೩ ||

**||ಚಾಲ||**

ಪ್ರೀತಿಯ ಪುತ್ರಿ ನೆಹರೂರ | ರಾಷ್ಟ್ರನಾಯಕರ |
ಏಕೈಕರಾಗಿ ಜನಿಸಿದರು | ಅತಿಪ್ರೀತಿಪಾತ್ರರಾಗಿಹರು|| ೧ ||

ದಿನನಿತ್ಯದ ಅಭ್ಯಾಸ ಮುಗಿಸಿ | ತಂದೆಯೊಡಗೂಡಿ
ಭಾರತವನೆಲ್ಲ ಸುತ್ತಿಹರು | ಅನುಭವ ಪಡೆದಿಹರು|| ೨ ||

ನೈತಿಕದ ಆತ್ಮಬಲ | ರಾಜಕೀಯ ಹಂಬಲ |
ದೈವಬಲದಿ ಆರಿಸಿ ಬಂದಿಹರು | ಕಾಂಗ್ರೆಸ ಅಧ್ಯಕ್ಷರಾಗಿಹರು|| ೩ ||

**||ಏರು||**

ಭಾರತ ಪ್ರಧಾನ ಮಂತ್ರಿಯೆಂದು ಹತ್ತೊಂಬತ್ತು ನೂರಾ ಅರವತ್ತ |
ಆರರಲ್ಲಿ ಆರಿಸಿಕೊಂಡಿತು ಕೇಂದ್ರ ಸರ್ಕಾರ|| ೧ನೆಯ ಚೌಕ ||
ಮಳೆಯ ಹನಿ ನಿಂತರು ಸಹಿತ | ಮರದ ನೀರು ಬೀಳುವಂತೆ |
ಫಿರಂಗೆಯರ ದುಷ್ಟಗುಣಗಳು ಮತ್ತೆ ತಲೆಯೆತ್ತಿ ||
ಆಳುವಪಕ್ಷದ ವಿಭಜನೆಯಾಗಿ | ಆಡಳಿತಪಕ್ಷ ತಾನೊಂದಾಗಿ |
ಒಡೆದ ಪಕ್ಷ ಇನ್ನೊಂದಗಿ ವಿಘ್ನ ಹೂಡಿಹರು|| ೧ ||

ಅಳ್ಳೆದೆಯಾಗದೆ ಹೆದರದೆ | ಕುಗ್ಗದೆ ಬಗ್ಗದೆ ಹಿಂದೆ ಸರಿಯದೆ |
ಧೀರೋದಾತ್ತರಾಗಿ ಇವರು ಮುಂದೆ ನಡೆದಿಹರು |
ಹಳೆಯಪಕ್ಷವೆ ಚುನಾವಣೆಯಲಿ | ಕಳ್ಳ ಚಾಯನಾ ಆಕ್ರಮಣದಲಿ |
ಬಾಂಗ್ಲಾದೇಶದ ಹೋರಾಟದಲಿ ಭಾಗವಹಿಸಿದರು|| ೨ ||

ಎನಿತೂ ಸೋಲಿನ ಭಯವಿಲ್ಲದಲೆ | ಹಿಡಿದ ಹಟವ ಸಾಧಿಸುವಲ್ಲಿ |
ಆತ್ಮದ ಬಲ ಒಂದರಿಂದಲೆ ಗೆಲವು ಪಡೆದಿಹರು ||
ಹಳೆಯರೂಢಿ ವಿಷಮತೆ ಹೀರಿ | ದೀನದಲಿತರ ಭಾಗ್ಯವ ತೊರೆದು |
ಸಮಾಜವಾದಿ ರಾಷ್ಟ್ರವ ಮಾಡಲು ಪಣವನು ತೊಟ್ಟಿಹರು|| ೩ ||

**||ಚಾಲ||**

ಕಳ್ಳಸಂತೆಯ ಕೂಡಿದ ಹಣ | ಲಂಚಗುಳಿತನ
ಸುಳ್ಳು ಹೇಳಿ ಮೋಸ ಮಾಡುವರನು | ಸುಳಿದಾಡಿ ಹಿಡಿದು ಸೆರೆಗಟ್ಟಿ|| ೧ ||

ಸೇವೆಯಲಿ ಅಂಜಿಕಿಲ್ಲದವನ | ಕಳಿಸಿ ಮನೆಗವನ |
ದುರ್ಬಲ ಜನತೆಗನುದಿನ | ಪೀಡಿಸುವ ನೀಚ ಜನರನ್ನು|| ೨ ||

ಮಾಡಿ ಮರ್ಧನ ಕೊಳಚೆ ನಿರ್ಮೂಲನ | ಕಲಿಸುವ ಸ್ವಾವಲಂಬನ |
ನಾಗರಿಕ ಹಕ್ಕು ರಕ್ಷಿಸಿ | ನಿರ್ಗತಿಕ ಜನಕೆ ನೆರವಾಗಿ|| ೩ ||

**||ಏರ||**

ಅಲ್ಪ ಸಂಖ್ಯಾತ ದಲಿತರನ್ನು ದೀನ ದುರ್ಬಲ ದೈವವನ್ನು |
ನಿರಾಶ್ರಿತ ನಿರ್ಗತಿಕರಿಗೆ ಬಾಳಿನಾಸಾರಾ|| ೨ನೆಯ ಚೌಕ ||
ಸಿರಿವಂತರು ಮುಚ್ಚಿಟ್ಟ ರೊಕ್ಕ | ಸರಕಾರ ತೆಗೆಸಲು ಪೇಚಿಗೆ ಬಿತ್ತ |
ಕರೆಯಿಸಿ ಕೇಳ್ಯಾರ ಸರ್ವರಿಗೆಲ್ಲ | ಗಳಿಕೆಯ ಸರಿಲೆಕ್ಕ |
ತೋರಿಸಲಾಗದ ಕೂಡಿದ ರೊಕ್ಕ | ಬೆಳ್ಳಿಬಂಗಾರ ಮುಚ್ಚ್ಯಾರಚೊಕ್ಕ |
ಎದುರುಕಾಣದ ಆಸ್ತಿಮಾತ್ರ ಸರ್ಕಾರಕ ತೋರ್ಸಿದರು|| ೧ ||

ಭಾರತದೇಶಕ್ಕ ಆಪತ್ಕಾಲ | ಆಗುವದೆಂದು ಕೋಲಾಹಲ |
ತುರ್ತುಪರಿಸ್ಥಿತಿ ಘೋಷಿಸಿ ರಾಷ್ಟ್ರದ ಹಿತವನು ಮಾಡಿದರು |
ಮೂರುತಿಂಗಳ ಅವಧಿಯೊಳಗೆ | ನೂರಾರು ಕಾಯ್ದೆ ಅಮಲಿಗೆ ತಂದು |
ಇಪ್ಪತ್ತಂಶದ ಆರ್ಥಿಕ ತತ್ವದಿ ವಿಪತ್ತು ಓಡಿಸಿದರು|| ೨ ||

ಸಿರಿವಂತರಿಗೆ ಭೂ ಮಿತಿ ಮಾಡಿ | ನಗರದ ಆಸ್ತಿಯ ಲೆಕ್ಕವ ಇಟ್ಟು |
ಭೂಸುಧಾರಣೆ ಕಾಯ್ದೆ ಮಾಡಿ | ರೈತರಲಿ ಆಸ್ಥೆ ವಹಿಸಿದರು ||
ಸಹಕಾರಿ ಸಂಘ ಸಂಸ್ಥೆಯ ಬೆಳೆಸಿ | ಬಳಕೆಯ ಅವಶ್ಯಕತೆ ಪೂರೈಸಿ |
ಕಡಿಮೆ ದರದ ಅಂಗಡಿ ತೆರೆದು ಕಾಳನು ಹಂಚಿದರು|| ೩ ||

**||ಜಾಲ||**

ಭಾರತ ಪ್ರಧಾನ ಮಂತ್ರಿಯಾಗಿ | ಜನತೆಯ ತಾಯಿಯಾಗಿ |
ತಾಯ್ನೆಲದ ಗುಣವೆ ತಾನಾಗಿ | ಸರ್ವರಲಿ ಬೆರೆತು ಒಂದಾಗಿ|| ೧ ||

ದುರ್ಬಲರಿಗೆ ಶಕ್ತಿ ದೇವತೆಯಾಗಿ | ವಿಧಿಲಿಖಿತ ಬದಲಿಸಿ |
ತಾ ಬರೆದ ಭವಿಷ್ಯ ಬೆಳಕಾಗಿ | ದೇಶದ ಪರ್ವಶಕ್ತಿಯೆನಿಸಿ|| ೨ ||

ಜನತೆಯ ಸುಖದ ತಾಯಾಗಿ | ಸ್ವಾರ್ಥವನು ನೀಗಿ |
ಈ ಜಟಿಲ ಕಾರ್ಯದಲಿ ಜಯಪಡೆದು | ಹಗಲಿರುಳು ಶಾಂತಿ ನಮಗಾಗಿ|| ೩ ||

**||ಏರ||**

ಮಾನ್ಯ ಪ್ರಧಾನಿ ಜನಿಸಿ ಇಂದು ಐವತ್ತೆಂಟು ವರುಷವಾಯ್ತು |
ಅವರಿಗೆ ಆಯುರಾರೋಗ್ಯ ಬೇಡಿ ಹಾಡ್ಯಾರ ವಾಲಿ ಶರಣರು ||| ೩ನೆ ಚೌಕ ||

**||ಖ್ಯಾಲಿ||**

ಬಡಭಾರತ ಬಡತನವ ಓಡಿಸುವ ದೃಢತೆಯ ಹಿಡಿದಿಹರು |
ಭಾರತ ಒಡೆತನ ಪಡೆದಿಹರು |
ನುಡಿದಂತೆ ನಡದೇ ತೋರ್ಸಿದರು |
ಕಳ್ಳವ್ಯಾಪಾರದಿ ಗಳಿಸಿದ ರೊಕ್ಕ | ಒಳ್ಳೆಯ ಕಾರ್ಯಕ್ಕೆ ಬಾರದಕ್ಕ |
ಬೆಳ್ಳಿ ಬಂಗಾರ ಕೇಳ್ಯಾರ ಲೆಕ್ಕ | ಮುಚ್ಚಿಟ್ಟ ನಿಧಿಯ | ಒಯ್ದಾರ ಚೊಕ್ಕ|| ೧ ||

ಸಿರಿವಂತರದು ಬೆಳೆದಿದೆ ಹೊಟ್ಟಿ | ಬಡವರಿಗಿಲ್ಲ ಹೊಟ್ಟೆ ತುಂಬ ರೊಟ್ಟಿ |
ಆರ್‌ಸಿಸಿ ಮೇಲ್ಮನಿ ಕಟ್ಟಿಸ್ಯಾರ ಗಟ್ಟಿ | ಬಡವರು ನಿಂತಾರ ಗುಡಿಸಲು ಕಟ್ಟಿ|| ೨ ||

ಲಂಚತಿನ್ನುವ ನೌಕರರ ನೋಡಿ | ಹೊಂಚುಹಾಕಿ ಕಳಿಸ್ಯಾರ ಮನಿಕಡಿ |
ವಂಚಕ ವ್ಯಾಪಾರಿ ಗಳಿಸಿದ ಬಡ್ಡಿ | ದುಡ್ಡ ಒಯ್ದಾರ ಸಿಆಯ್‌ಡಿ|| ೩ ||

ಸರ್ವಜನರ ವಿಷಯಮತೆಯನು ನೋಡಿ | ಸರಿಯಾಗಿ ಯೋಚಿಸಿ
ಕಾಯ್ದೆ ಮಾಡಿ |
ಕಾಯ್ದೆಗೆ ಮೀರಿ ನಡೆದರೆ ಬೇಡಿ | ವಾಲಿ ಶರಣರು ತಿಳಿಸ್ಯಾರ ಹಾಡಿ|| ೪ ||

**ರಚನೆ :** ಶರಣಪ್ಪ ವಾಲಿ
**ಕೃತಿ :** ಶರಣ ಸಂಸ್ಕೃತಿ

# ೪೯. ಸಿರಸಿಂಗಿ ಲಿಂಗರಾಜರು

ಹರಿಶ್ಚಂದ್ರ ಶಿಬಿಚಕ್ರವರ್ತಿ ಕರ್ಣ ಮಹಾದಾನಿಗಳಾಗಿ ಹೋದ್ರಾ ಅಮರಾ ।
ಎಲ್ಲಾ ದಾನಿಗಳ ಮರಿಸಿದ ತ್ಯಾಗವೀರ ಅರಸ ಸಿರಸಂಗಿ ಲಿಂಗರಾಜರಾ ॥ ಪಲ್ಲವಿ ॥

ಸಿರಸಿಂಗಿ ರಾಜ್ಯ ಸ್ಥಾಪನೆ ಮಾಡಿದ ವಿಠ್ಠಪ್ಪಗೌಡನೆಂಬುವ ಹುಲಿ ।
ಸಿರಸಂಗಿ ಹೆಸರ ಅಳಿಯದಾಂಗ ಮಾಡಿದ ಅರಸ ಲಿಂಗರಾಜ ಭೂಮಿಯಲಿ ॥
ಪುಣ್ಯ ಕ್ಷೇತ್ರ ಸಿರಸಿಂಗಿ ತಾಣದಿ ಕಾಳಮ್ಮದೇವಿ ನೆಲಸಿದಳಲ್ಲಿ ।
ರಾಜ್ಯಲಕ್ಷ್ಮಿ ಕಾಳಮ್ಮನ ವರದಿಂದ ಮೆರಿತದ ದಶದಿಕ್ಕಿನಲಿ ॥
ಧೀರ ಶೂರ ಗಂಭೀರ ಗುಣದಿಂದ ರಾಜ್ಯವಾಳಿದಾರ ಪ್ರೀತಿಯಲಿ ।
ಅರಸ ವಿಠ್ಠಪ್ಪಗೌಡ ಜಾಯಪ್ಪನವರೆಗೆ ರಾಜ್ಯ ಬೆಳೆತ ವಂಶವೃದ್ಧಿಯಲಿ॥ ೧ ॥

॥ಚ್ಯಾಲ॥ಅರಸ ಜಾಯಪ್ಪ ದೇಸಾಯರ । ಹಾಸಿಗೆ ಹಿಡಿದಾರ । ಜಡ್ಡ ಜೋರಾಗಿ ।
ಶಿವ ಅಂದ ಹೋದ್ರ ಅಸು ನೀಗಿ ।
ರಾಜ್ಯಕ ಬಿತ್ತ ಅಂಧಕಾರ । ದುಃಖ ಸಾಗರ । ಶೋಕದ ಬೇಗಿ ।
ಸಿರಸಿಂಗಿಯ ಸೂರ್ಯ ಹೋದಾನೋ ಮುಳುಗಿ ॥
॥ಏರು॥ಗಂಡನ ಅಗಲಿದ ಗಂಗೂತಾಯಿ ತಾ । ಕುಂತಾಳ ಆಗಿ ಬೇಜಬರಾ ।
ಹರಿಶ್ಚಂದ್ರ ಶಿಬಿಚಕ್ರವರ್ತಿ ಕರ್ಣ ಮಹಾದಾನಿಗಳಾಗಿ ಹೋದ್ರ ಅಮರಾ ।
ಎಲ್ಲಾ ದಾನಿಗಳ ಮರಸಿದ ತ್ಯಾಗವೀರ ಅರಸ ಸಿರಸಂಗಿ ಲಿಂಗರಾಜರಾ॥ ೨ ॥

ವಾಡಿಕೆಯಂತೆ ರಾಜ್ಯಕ ಒಡೆಯನ ಹುಡುಕುತಿದ್ಲ ಗಂಗಮ್ಮ ತಾನಾ ।
ಸಡಗರದೊಡೆಯನ ಶೋಧಿಸಿ ಬೇಸತ್ತಾ ಸಾರಿದಾಳ ಡಂಗೂರವನಾ ॥
ಕನ್ನಡ ರಾಜ್ಯದ ಚನ್ನಾದ ಮಕ್ಕಳ ತನ್ನಿರೆಂದ ಹೇಳ್ಯಾಳ ಪುನಃ ।
ತಮ್ಮ ಮಕ್ಕಳ ಮಹಾರಾಜರಾಗಲೆಂದ ಕೂಡಿದಾರ ರಾಜ್ಯದ ಜನಾ ॥
ಸಮಸ್ತ ಶಿಶುಗಳ ಪರೀಕ್ಷಿಸಿದಾಗ ಮನಸೆಳೆದ ಗುಣ ಸಂಪನ್ನಾ ।
ಸಿಂಹದ-ಮರಿ ಇದು ಸಿಂಹಾಸನಕಧಿಕಾರಿ ಯೋಗ್ಯ ಅಂತ ಹೇಳಿದ ಪ್ರಜಾ ಜನಾ ॥
ವನಶಿಗ್ಲಿ ರೈತ ಘೂಳಪ್ಪನ ಮಗ ಅವನ ಹೆಸರ ಇತ್ತ ರಾಮಣ್ಣಾ ।
ಹೆಸರ ಬದಲ ಮಾಡಿ ಲಿಂಗರಾಜರಂತಾ ಪುನಃ ಮಾಡಿದಾರ ನಾಮಕರಣಾ

**॥ಚ್ಯಾಲ॥**

ಹದಿನೆಂಟ ನೂರಾ ಎಪ್ಪತ್ತೆರಡನೇ ಸಾಲ । ಜೂನ ತಿಂಗಳ ।
ಶುಭಧಿನದಂದಾ । ದತ್ತಕ ಮಾಡಿದಾರ ಆನಂದಾ ।
ಅಪ್ಪಾಸಾಹೇಬ ಅಂತ ತಾಯಿ ಪ್ರೀತಿಲಿ । ತುಂಬ ಬಾಯಲಿ ।
ಕರೆಯೊಳ ಬಹು ಚಂದಾ । ಎಲ್ಲಾರ ಪ್ರೀತಿಯ ಕಂದಾ ॥

**॥ಏರು॥**

ಕನ್ನಡ ನಾಡಿನ ಕಡುಗಲಿ ಲಿಂಗರಾಜ ಬೆಳೆದು ಬಂದ ಭೂಪ ಗಂಭೀರಾ।
ಹರಿಶ್ಚಂದ್ರ ಶಿಖಿಚಕ್ರವರ್ತಿ ಕರ್ಣ ಮಹಾದಾನಿಗಳಾಗಿ ಹೋದ್ರ ಅಮರಾ।
ಎಲ್ಲಾ ದಾನಿಗಳ ಮರಿಸಿದ ತ್ಯಾಗವೀರ ಅರಸ ಸಿರಸಂಗಿ ಲಿಂಗರಾಜರು॥ ೩ ॥

ಸರಳಸ್ವಭಾವದ ತರುಳ ಲಿಂಗರಾಜ ಕೊಲ್ಹಾಪೂರದಲ್ಲಿ ಪಡೆದ ಶಿಕ್ಷಣಾ।
ಮನೆತನದಲ್ಲಿ ಒಳಜಗಳ ಹತ್ತಿ ಅಂದೇ ಶಿಕ್ಷಣಕ ಹೊಡೆದಾರ ಶರಣಾ॥
ಜಾಯಪ್ಪದೇಸಾಯ್ರ ಕಿರಿಯ ಹೆಂಡತಿ ಉಮಾದೇವಿ ನಡಿಸ್ಯಾಳ ಕದನಾ।
ಸಾಧ್ವಿಶಿರೋಮಣಿ ಗಂಗಾದೇವಿಯವರು ನೋಡಲಾರದೆ ಮುಚ್ಯಾಳ ಕಣ್ಣಾ॥
ತಾಯಿ ತೀರಿದ ಮ್ಯಾಲ ಚಿಕ್ಕಮ್ಮ ಉಮಾದೇವಿ ವಹಿಸಿಕೊಂಡ್ಲ ಅಧಿಕಾರವನ್ನಾ।
ಲಿಂಗರಾಜರನ್ನ ಕಿತ್ತಒಗೆದ ಸುಳ್ಳ ಮಾಡಬೇಕಂದ್ಲ ದತ್ತಕವನ್ನಾ॥
ಚಂಡಿಯಾಗ ಶನಿಯಾಗಿ ಬೆನ್ನಹತ್ತಿ ಕಾಡಿದಾಳ ಲಿಂಗರಾಜರನ್ನಾ।
ಮುಂಬೈ ಹಾಯಕೋರ್ಟಿಗೆ ನ್ಯಾಯ ಹೂಡಿದಾಳ ಸುಳ್ಳಮಾಡಬೇಕಂದ್ರ ಸಿಂಹಾಸನಾ॥

**॥ಚಾಲ॥**

ಲಿಂಗರಾಜರಂತೆ ತೀರ್ಪಾತ। ಅಧಿಕಾರ ಕೈಗೆ ಬಂತ।
ಹರುಷದಿ ಮನಾ ತುಂಬಿ ತುಳಿಕಿಶ್ಯಾರ ನಾಡ ಜನಾ।
ಪ್ರಜರಿಷ್ಟ ಕೈಗೂಡಿತ। ದೇವರ ಚಿತ್ತ। ಆತ ಪ್ರಬಲಾ।
ಲಿಂಗರಾಜರ ಹೆಸರ ನಾಡಮ್ಯಾಲಾ॥

**॥ಏರು॥**

ಧರ್ಮದ ಮೂರುತಿ ಬಡವರ ತಾಯಿ ತಂದಿ ಅನಿಸಿಕೊಂಡ್ರ ದೊರಿ ಲಿಂಗರಾಜರಾ।
ಹರಿಶ್ಚಂದ್ರ ಶಿಬಿಚಕ್ರವರ್ತಿ ಕರ್ಣ ಮಹಾದಾನಿಗಳಾಗಿ ಹೋದ ಅಮರಾ।
ಎಲ್ಲಾ ದಾನಿಗಳ ಮರಿಸಿದ ತ್ಯಾಗವೀರ ಅರಸ ಸಿರಸಂಗಿ ಲಿಂಗರಾಜರಾ॥ ೪ ॥

ಪರಶುರಾಮನ ಪ್ರತಿ ಅವತಾರ ಲಿಂಗರಾಜ ಪವಿತ್ರ ಮನದಿ ರಾಜ್ಯವಾಳಿದಾ।
ಬೇಡಿದವರಿಗಿ ಇಲ್ಲ ಎಂದೂ ಅನ್ನಲಿಲ್ಲ ತುಂಬು ಮನಸಿನಿಂದ ಕೊಡುತಿದ್ದಾ॥
ಗೋದಾನ ಭೂದಾನ ಬಡವರ ಕಲ್ಯಾಣ ಅನ್ನಛತ್ರ ಊರೂರಿಗೊಂದಾ।
ಕಾಶಿ-ರಾಮೇಶ್ವರ ಪುಣ್ಯಕ್ಷೇತ್ರದಲ್ಲಿ ಧರ್ಮಛತ್ರಗಳ ಕಟ್ಟಿಸಿದಾ॥
ಇದ್ದ ಎರಡು ಮಕ್ಕಳು ಸತ್ತ ಹೋದರೂ ಚಿಂತಿಸಲಿಲ್ಲ ಎಳ್ಳಷ್ಟು ಸುದ್ದಾ।
ನಾಡಿನ ಮಕ್ಕಳೇ ತನ್ನ ಮಕ್ಕಳಂತ ಲಿಂಗರಾಜ ಮನಸಿಗೆ ತಿಳಿದಿದ್ದಾ॥
ದಾನಪತ್ರವನ್ನು ಮುಂಚಿತವಾಗಿ ಬರೆದ ಕೋರ್ಟಿನಲ್ಲಿ ಅದನಿಟ್ಟಿದ್ದಾ।
ಹತ್ತೊಂಬತ್ತನೂರು ಆರನೆ ಆಗಸ್ಟ್‌ದಲ್ಲಿ ಆನಂದದಿಂದ ಕಣ್ಣ ಮುಚ್ಚಿದ್ದಾ॥

**॥ಚ್ಯಾಲ॥**

ಶಿಕ್ಷಣ ಸಂಸ್ಥೆಗೆ ಮೀಸಲಾಗಿ । ಸಂಸ್ಥಾನ ಖುದ್ದಾಗಿ ।
ಕೊಟ್ಟ ಹೋದ್ರ ನಿತ್ಯ ತಂದೆಯಾಗಿ । ನಾಡು ಮರೆಯಲಾರದೆಂದಿಗಿ ।
ಕೆ.ಎಲ್.ಇ. ಸಂಸ್ಥಾ ಸ್ಥಾಪನೆಯಾಗಿ । ನಾಡ ತುಂಬ ಬೆಳಗಿ ।
ಲಿಂಗರಾಜರಿಂದಾಗಿ ಕಾಲೇಜ ಆದವು ಊರ ಊರಿಗಿ ॥

**||ಏರು||**

ಖ್ಯಾತ ಬನಹಟ್ಟಿ ಕವಿ ಗಂಗಾತನಯ ಅಪ್ಪಣ್ಣ ಹೇಳಿದ ಈ ಸಾರಾ ।
ಹರಿಶ್ಚಂದ್ರ ಶಿಬಿ ಚಕ್ರವರ್ತಿ ಕರ್ಣ ಮಹಾದಾನಿಗಳಾಗಿ ಹೋದ್ರ ಅಮರಾ ।
ಎಲ್ಲಾ ದಾನಿಗಳ ಮರಿಸಿದ ತ್ಯಾಗವೀರ ಅರಸ ಸಿರಸಂಗಿ ಲಿಂಗರಾಜರಾ ॥

**ರಚನೆ :** ಅಪ್ಪಣ್ಣ ಜಂಬಗಿ, ಬನಹಟ್ಟಿ
**ಕೃತಿ :** ಲಿಂಗರಾಜು ವಿಜಯ ಕಾವ್ಯ ಹಾಗೂ ಕೆಲವು ಲಾವಣಿಗಳು

## ೫೦. ಆಗಬಾರದು ಬಾಳು-ಕೀಳು

ಗಿಡ ಬಳ್ಳಿಗಿಂತ ಕೀಳೇನ ನಮ್ಮ ಬಾಳು? ।
ಮಾವು-ಬೇವಿನಕಿಂತ ಕಡಿಯೇನ ಬಾಳು? ।
ಕೇಳಿಕೊಳ್ಳತಾರಃ ಲಿಂಗರಾಜರು ತಮಗಃತಾವು ।
ಗಿಡಬಳ್ಳಿಗಿಂತ ಕೀಳೇನ ನಮ್ಮ ಬಾಳು? ॥

ತಿಳಿಗೇಡಿ ಹುಡುಗ ಎಸೆದಾಗ ಕಲ್ಲೊಂದು ।
ತಡಮಾಡದೆ ಕೊಟ್ಟಿತು ಎರಡ ಹಣ್ಣು ಗಿಡವೊಂದು ।
ಬೀಸಿದ ಕಲ್ಲು ತಾಗಿದರೆ ಉರುಳಿ ತಾ ಬಂದು ।
ಬಡಿದರೆ ಸಿಟ್ಟೇಕೆ ಇಷ್ಟು ನನ್ನ ಮನಕಿಂದು? ॥

ಕೇಳಿಕೊಳ್ಳತಾರ ಲಿಂಗರಾಜರು ತಮಗಃತಾವು ।
ಗಿಡ-ಬಳ್ಳಿಗಿಂತ ಕೀಳೇನ ನಮ್ಮ ಬಾಳು ॥

ತಾಕಿತು ಕಲ್ಲು ದೇಸಾಯರ್ಗೆಯೆಂದು ।
ತೋಟದ ಆಳು ಬಂದು ಮನನೊಂದು ।
ತುಂಟ ಮಗನೆಂದು ಬಡಿತಾನ ಹಿಡತಂದು ।
ಉಪ್ಪಂಡ ಮನಿಗೆ ಬಗಿದಲ್ಲೊ ಎರಡೆಂದು ॥

ಆಳು-ಮಗನ ಪರದಾಟ ಕಂಡು ।
ದೇಸಾಯರು ಹೇಳತಾರ ಖಂಡತುಂಡು ।

ಇನ್ಮ್ಯಾಲೆ ಬಡಿದರೆ ಮಗನ್ನ ಕೇಳೇನಿಕಂಡು ।
ನಾಳೆ ಬಾ ವಾಡೇಕ ಹುಡುಗನ್ನ ಕರಕೊಂಡು ॥

ವಾಡೇದ ಸಭಾದಾಗ ಕೇಳತಾರ ಲಿಂಗರಾಜರು ।
ಗಿಡ ಬಳ್ಳಿಗಿಂತ ಕೀಳೇನ ನಮ್ಮ ಬಾಳು? ।
ಮಾವು ಬೇವಿನಕಿಂತ ಕಡಿಯೇನ ಬಾಳು ? ।
ಕೂಡಿದ ಮಂದಿಗೆ ಕೇಳತಾರ ಲಿಂಗರಾಜರು ।
ಹಸುಗೂಸು ಹಸಗೊಂಡು ಹಂಬಲಿಸಿ ಅತ್ತಾಗ ।
ಹಾತೊರೆದು ತಾಯಿ ಮೊಲೆಹಾಲನಿತ್ತಂಗ ।
ಅರೆಮರುಳ ಎಸೆದ ಕಲ್ಲೊಂದಕ್ಕಾಗ ।
ಮಾಮರವು ಕೊಟ್ಟಿತು ಎರಡ ಹಣ್ಣಾಗ ॥

ತಾಕಿದರೆ ಉರುಳಿ ಆ ಕಲ್ಲು ನನಗಂದು ।
ನಾನೇನು ಕೊಡಬೇಕು ಈ ಹುಡುಗನಿಗಿಂದು ।
ಕೂಡಿದ ಮಂದ್ಯಾಗ ಕೇಳತಾರ ಲಿಂಗರಾಜರು ।
ಗಿಡ ಬಳ್ಳಿಗಿಂತ ಕೀಳೇನ ನಮ್ಮಬಾಳು? ॥

ಊರ ಮುಂದಿನ ವಾಡೇದ ತೋಟ ।
ಮಾವು-ನಿಂಬೆ-ಕಂಚಿ ಬಾಳೆಯತೋಟ ।
ಎರಡು ಎಕರೆಗೆ ಮಿಕ್ಕಿದರೂ ಅಷ್ಟ ॥
ಉಂಬಳಿ ಕೊಡಬೇಕ ಹುಡುಗಗ ಹಕ್ಕ ಬಿಟ್ಟ ॥

ಆಗಬಾರದು ಬಾಳು-ಗಿಡಬಳ್ಳಿಗಿಂತ ಕೀಳು ।
ಮಾವು-ಬೇವಿನಕಿಂತ-ಕಡಿಯೇನ ನಮ್ಮಬಾಳು ॥

**ರಚನೆ :** …………. ?
**ಕೃತಿ :** ಲಿಂಗರಾಜು ವಿಜಯ ಕಾವ್ಯ ಹಾಗೂ ಕೆಲವು ಲಾವಣಿಗಳು

## ೫೧. ಸಖೀ ಗೀತ

ತ್ಯಾಗವೀರ ಸಿರಸಂಗಿ ಲಿಂಗರಾಜರ ನಾಮಸ್ಮರಣೆಯ ಮಡೂನೂ ಬಾ ।
ಅವರಂತೆ ನಡೆಯುದು ಕಲಿಯೋಣು ಬಾ ।
ಜಗದೊಳು ಮಾನವರಾಗೂನು ಬಾ ।
ತ್ಯಾಗವೀರ ಸಿರಸಿಂಗಿ ಲಿಂಗರಾಜರ ನಾಮಸ್ಮರಣೆಯ ಮಾಡೂನು ಬಾ॥ ೧ ॥

॥ ಅಂತಾ ॥ ರಾಜ್ಯಭೋಗ್ಯದ ತ್ಯಾಗ ಮಾಡಿದ । ಭಾರ್ಗವನಂತೆ ಮಹಾದಾನಿ ಎನಿಸಿದ ।
ಜಗದೊಳು ಅಳಿಯದೆ ಧರ್ಮವೀರ ಯೋಗಿಯ ನೆನಿಯೂನು ಬಾ ।

ಜಗದೊಳು ಮಾನವರಾಗೂನು ಬಾ ।
ತ್ಯಾಗವೀರ ಸಿರಸಂಗಿ ಲಿಂಗರಾಜರ ನಾಮಸ್ಮರಣೆಯ ಮಾಡೂನು ಬಾ ॥॥ ೨ ॥

॥ ಅಂತಾ ॥ ಒಬ್ಬ ಮಗನ ತಂದಿಯಾಗದೆ ಜಗದೊಳು ನಾಡಿನ ಮಕ್ಕಳಿಗೆಲ್ಲ ತಂದಿಯಾಗಿ ।
ಲೋಕ ಕಲ್ಯಾಣ ಉಪಕಾರಿಯಾದ ಲಿಂಗರಾಜರ ನೆನಿಯೂನು ಬಾ ।
ಜಗದೊಳು ಮಾವನರಾಗೂನು ಬಾ ॥
ತ್ಯಾಗವೀರ ಸಿರಸಂಗಿ ಲಿಂಗರಾಜರ ನಾಮಸ್ಮರಣೆ ಮಾಡೂನು ಬಾ ॥ ೩ ॥

॥ ಅಂತಾ ॥ ಕನ್ನಡನಾಡಿನ ಪುಣ್ಯ ಪುರುಷನ । ಉನ್ನತ ಧ್ಯೇಯ ಸಾಧಿಸಿದವನ ।
ಕನ್ನಡ ತಾಯಿಯ ಪುಣ್ಯ ಪುತ್ರನಿಗೆ ವಂದನೆ ಮಾಡೂನು ಬಾ ।
ಜಗದೊಳು ಮಾನವರಾಗೂನು ಬಾ ।
ತ್ಯಾಗವೀರ ಸಿರಸಂಗಿ ಲಿಂಗರಾಜರ ನಾಮಸ್ಮರಣೆಯ ಮಾಡೂನು ಬಾ ॥ ೪ ॥

॥ ಅಂತಾ ॥ ಪರಶುರಾಮನ ಪ್ರತಿ ಅವತಾರದವನ । ಪ್ರತಿ ನಿತ್ಯ ಮಾಡಿರಿ ಆತನ ಸ್ತವನ ।
ಆ ಚಂದ್ರಾರ್ಕ ಉಳಿದ ಬೆಳಗಿದ ಮಹಾಲಿಂಗರಾಜರ ನೆನಿಯೂನು ಬಾ ।
ಜಗದೊಳು ಮಾನವರಾಗೂನು ಬಾ ।
ತ್ಯಾಗವೀರ ಸಿರಸಿಂಗಿ ಲಿಂಗರಾಜರ ನಾಮಸ್ಮರಣೆಯ ಮಾಡೂನು ಬಾ ॥ ೫ ॥

॥ ಅಂತಾ ॥ ಖ್ಯಾತ ಬನಹಟ್ಟಿ ಕವಿ ಗಂಗಾತನಯಾ । ಅಪ್ಪಣ ತೋರಿದ ಆತನ ಹೃದಯಾ ।
ನಾಡಿನ ನಂದಾದೀಪವೆನಿಸಿದ ದಿವ್ಯ ಜ್ಯೋತಿಯ ನೆನಿಯೂನು ಬಾ ।
ತ್ಯಾಗವೀರ ಸಿರಸಂಗಿ ಲಿಂಗರಾಜರ ನಾಮಸ್ಮರಣೆಯ ಮಾಡೂನು ಬಾ ॥*॥ ೬ ॥

**ರಚನೆ :** ಅಪ್ಪಣ್ಣ ಜಂಬಗಿ, ಬನಹಟ್ಟಿ
**ಕೃತಿ :** ಲಿಂಗರಾಜು ವಿಜಯ ಕಾವ್ಯ ಹಾಗೂ ಕೆಲವು ಲಾವಣಿಗಳು

## ೫೨. ಶಿವಾ ಮುನಿದ ಬೆಸ್ಯಾರ ದಿನ

ಸಿರಸಿಂಗಿ ದೇಸಾಯ್ರು ವರತನ ಬಿಟ್ಟು ಹೋದ್ರು ತಮ್ಮ ಸಂಸ್ಥಾನ
ಚಂದ್ರಮನಂತ ಚಲುವರ ಮೌಲ್ಯ ಶಿವಾ ಮುನಿದ ಬೆಸ್ಯಾರ ದಿನ ॥

ಏನು ಹೇಳಲಿ ದುಃಖ ಬರತೈತಿ ದೊರೆಗಳ ಮನದ ಅಕ್ಕರತಿ
ಲೋಡಲೆಜಿಮಾ ತಾಲೀಮ ಕಾನ್ಯಾಗ ಶಿವಪೂಜೆ ಬಹಳ ಪ್ರೀತಿ
ಚಲುವಿಕೆ ಚಿತ್ರಾಯ ಬರದೈತಿ ಕೈಕಾಲು ಬಾಳಿ ದಿಂಡಗತಿ
ಕಾಮನಂಗವರು ಇಬೂತಿ ಹಚ್ಚತಾರ ಸದರಿಗೆ ಒಪ್ಪು ಸೊರ್ರ್ಪತಿ
ಸಿಪಾಯಿ ಸಿಲೆದಾರಿ ಬಹುಬರತಿ ಚಬಕ ಸ್ವಾರ ಕುದುರಿಯ ಹತ್ತಿ
ಕುದರಿಯ ಮುಂದ ಹೊಗಳುವ ಮಾದಿಗರಂತಾರ ದೊರಿಗಳ ಕೀರ್ತಿ
ಸುತ್ತಲು ರಾಜ್ಯದ ದೇಶ್ಗತಿ ಎಲ್ಲಾರಿಗಿಂತ ಅವರು ಚಡತಿ

ಯಾರೊಬ್ಬರಂತಾರ ಏನ ದೊರಿಯವರ ಪೂರ್ವದ ಪುಣ್ಯ ಹೆಚ್ಚೈತಿ
ಹಿಂಗಂತ ಹೋದರು ಬೇಲೂರಿಗೆ ತಟ್ಟಿತು ವಿಗ್ನವನ
ಉರಿ ಬಡಿದು ಬಿಗದಾವು ಬೆನ್ನ ಬಾಯಿ ಇಸಾ ಕಯಿಯಾಯಿತಿನ್ನ
ಸದಾ ಶಿವಪ್ಪ ಕೇಳೊ ಇನ್ನ ನನ್ನ ಜೀವಕಿಲ್ಲೊ ಸಮಾದಾನ
ತಿರುಗಿ ಬಂದ್ರು ಅವರು ಮರುದಿನಾ ದೊರಿಗುಳಿಗೆ ಇಲ್ಲೊ ಸಮಾದಾನ ||
ಸಿರಸಿಂಗಿ ದೇಸಾಯ್ರು ವರತನ ಬಿಟ್ಟು ಹೋದ್ರು ತಮ್ಮ ಸಂಸ್ಥಾನ
ಚಂದ್ರಮನಂತ ಚಲುವರ ಮ್ಯಾಲ ಶಿವಾ ಮುನಿದ ಬೆಸ್ಯಾರ ದಿನ || ೧ ||

ಒಂದು ದಿನ ಸಿರಸಿಂಗಿ ಊರಾಗ ಅಪ್ಪಾ ಸಾಹೇಬ್ರು ಕುಳಿತಿದ್ರು ಸದರಿನ್ಯಾಗ
ಮೋಸಮಾಡಿ ವಿಷಾ ಹಾಕಿದಾರ ದೂದ ಪೇಡೆ ಸಕ್ಕರಿಯಾಗ
ಪಳಾರ ಮಾಡ್ಯಾರ ರಾತ್ರಿಯಾಗ ದೊರಿ ಮಲಗಿದ್ರ ಮಂಚದ ಮ್ಯಾಗ.
ಕನಸು ಬಿದ್ದಿತವರ ಮನಸಿಗೆ ಟಾವಿಕೆ ದೊರಿ ತಿಳಿದ ತನ್ನ ಮನಸಿಗೆ
ಸಿಪಾಯ ಬಾಗೋಜಪ್ಪ ಹಿಂಗ ತಿಳಿದು ಕಸಾರ್ಕಿ ಬಂದೈತ್ರಿ ದೊರಿ ನಿಮಗ
ಹ್ಯಾವ ತೋರಿಸ್ಯಾರ ಗಂಟಲದಾಗ ಉಗಳಿಸಿದ ಹೆಸಿಕೆ ಮ್ಯಾಲ
ಹಿಂಗಂತ ಹೋದರೊ ಹೂಲಿಕಟ್ಟಿಗೆ ಸಿದ್ಧೇಶ್ವರ ಇರುವ ದೇವರಿಗೆ
ಬೇಡಿಕೊಂಡ್ರೊ ಮನೆಯ ದೇವರಿಗೆ ಸಾಹಿತ್ಯ ಕೊಟ್ರೊ ಬ್ರಾಹ್ಮಣರಿಗೆ
ಅಲ್ಲಿ ಚಡವಾತೊ ದೊರಿಗಳಿಗೆ ಎಂಟಾನೆಂಟು ದಿನ ಮಲಗಿ
ಜಗ ಬದಲು ಮಾಡಬೇಕು ದೊರಿಗೆ ಅಂತಾವೊದಾರೋ ಬೆಳಗಾಂವಿಗೆ
ದೊರಿ ಹೇಳತಾರೊ ತಮ್ಮ ಮಂದಿಗೆ ಒಯ್ಯಬ್ಯಾಡ್ರೊ ನನ್ನ ಬೆಲೂರಿಗೆ
ಸಿಪಾಯ ಬಾಗೋಜಪ್ಪ ಹಿಂಗ ತಿಳಿದ ಲಗು ಮಾಡಿ ಗಾಡಿ ತರಿಸಿದ
ಗಾಡಿಯ ಒಳಗ ಮಲಗಿದ್ದ ದೊರಿ ನವಲಗುಂದ ಊರಿಗೆ ತಾ ಬಂದ ||
ಸಿರಸಿಂಗಿ ದೇಸಾಯ್ರು ವರತನ ಬಿಟ್ಟು ಹೋದ್ರು ತಮ್ಮ ಸಂಸ್ಥಾನ
ಚಂದ್ರಮನಂತ ಚಲುವರ ಮ್ಯಾಲ ಶಿವಾ ಮುನಿದ ಬೆಸ್ಯಾರ ದಿನ ||೨ ||

ಬಾಯಿ ಸಾಹೇಬ್ರು ಹೇಳತಾರೊ ಬಾಗೋಜಪ್ಪಗ ಕೇಳರಿ ನೀವು ನನ ಮಾತ
ಎಲ್ಲಿ ಇದ್ದಲ್ಲಿ ವೈದ್ಯಗಾರನ ಈ ವ್ಯಾಳಕ ತರಿಸರಿ ತುರತ
ಬಾಗೋಜಪ್ಪ ತಾ ಬುದ್ಧಿವಂತ ವೈದ್ಯಗಾರನ ತರಿಸ್ಯಾನ ತುರಿತ
ವೈದ್ಯಗಾರನು ತಿಂದು ಹೋದನು ರೂಪಾಯಿ ಮುನ್ನೂರ ಅರವತ್ತ
ಔಷದ ಮಾಡಿಸುತ್ತ ಅಲ್ಲಿ ವರುಷವಾಯ್ತು ದೊರಿ ಬೇಸತ್ತ
ಎಂತ ಬೇನೆ ಇದು ಯಾರಿಗೆ ಟಾವಿಕೆ ತಿಳಿಯವಲ್ಲದು ಇದರಿಂದ
ಬುದವಾರ ದಿನ ಹರ್‍ಯಾಗ ಕರೆಸಿಕೊಂಡಾರೊ ತಮ್ಮ ಗುರುಗಳನ
ಎರಡು ಆಕಳ ಅಚ್ಚೇರ ಬಂಗಾರ ದಾನ ಕೊಟ್ಟರು ಐಗುಳಿಗೆ
ಕುಲಾಯಿ ಕುಂಚಿಗೆ ಹುಡುಗರಿಗೆ ರೊಕ್ಕ ರೂಪಾಯಿ ಕೊಟ್ರು ಬಡವರಿಗೆ
ಮುತ್ತಿನಂತಹ ಒಂದು ಹತ್ತು ಕೂಸಿಗೆ ಕೊಟ್ರು ಪುನ್ನೆದ ಐಗುರು ಸ್ವಾಮಿಗೆ
ಉಪ್ಪನ್ನ ಕೊಟ್ರೊ ಮಠದವರಿಗೆ ಒಂದೊಂದು ಬಳಿವಿಲೆ ಎಲ್ಲರಿಗೆ
ಬುಧವಾರ ಮೂರು ತಾಸು ರಾತ್ರಿಯ ಮ್ಯಾಲ ಕರಿಸಿಕೊಂಡಾರೊ ತಮ್ಮ ಮಡದಿಯನ್ನ

ದೊರಿ ಅಂತಾರ ತಾ ಸಮರಂತ ಏನ ಮುನಿದಿ ನೀ ಭಗವಂತ
ಜೀವದ ರಾಣಿ ಕಿಲಿಕೈಯಾ ಹಿಡಿ ನೀ ಕೊಡಬ್ಯಾಡ ಯಾರಿಗೆ
ತಾ ಮಲಗು ಅರಮನೆ ಕೋಲಿ ದೊರಿ ನೋಡತಾರ ಸುತ್ತೆಲ್ಲಾ
ಮೇಲ ಉಸಲಗಟ್ಟಿತೊ ತೀರಾ ದೊರಿ ಮಾಡತಾರ ಎತ್ತಾರಾ
ಬಾಯಿ ಸಾಹೇಬರು ಕುಂತಾರೊ ಹಂತಿಲೆ ನೀರು ಚಲ್ಲತಾರೊ ಕಣ್ಣೀಲೆ
ಕುದರಿ ಬಿಟ್ರು ಅವರು ಸಿರಸಿಂಗಿಗೆ ಕಾರ್ಕೂನ ಕಳಿವ್ಯಾರೊ ತುರ್ತಿಲೆ
ಗೌಡ ಶಾನಬವರು ರೈತರು ಹಳಬರು ವತ್ರ ಮಾಡಿ ಹೋದರು ಅದೇ ದಿನಾ
ನಿತ್ರಾಣಕ ಬಿದ್ದಿದ್ರು ಅಪ್ಪಾಸಾಹೇಬ್ರು ಎದ್ದು ಹೇಳುವಂತ ತ್ರಾಣವಾಗಲಿಲ್ಲ
ಗಾತ ಮಾಡಿ ಹೋದ್ರು ಅಪ್ಪಾಸಾಹೇಬ್ರು
ಬೇಸ್ತ್ಯಾರ ಮೂರು ತಾಸು ಹೊತ್ತೇರಿತು ಜೀವ ಬಿಟ್ಟು ಅವರಿನ್ನ ॥
ಸಿರಸಿಂಗಿ ದೇಸಾಯ್ರು ವರತನ ಬಿಟ್ಟು ಹೋದ್ರು ತಮ್ಮ ಸಂಸ್ಥಾನ
ಚಂದ್ರಮನಂತ ಚಲುವರ ಮ್ಯಾಲ ಶಿವ ಮುನಿದ ಬೆಸ್ತ್ಯಾರ ದಿನ ॥ ೩ ॥

ಬೆಸ್ತ್ಯಾರ ದಿನ ಹರಿಯಾಗ ಸುದ್ದಿ ಹರಡಿತ್ತು ಸುತ್ತ ನಾಡಿಗೆಲ್ಲ
ಸುದ್ದಿ ಕೇಳಿದವರು ಎದೆಬಾಯಿ ಬಡಕೊಂಡು ಬಿದ್ದಾರೊ ತಂದಿಲ್ಲ ದರಣಿಯ ಮ್ಯಾಲ
ಅಗಾದ ಹತ್ತು ಹಳ್ಯಾಗ ಗೋಳಿಕ್ಯಾರ ಅವರ ಮನಿಯಾಗ
ಬೆಳ್ಳೇರಿ ಶಿಗ್ಲ ಉಕ್ಕಲಿ ಅಕ್ಕ ತಂಗಿಯಾರ ಬಂದಾರ ಆಗ
ಅಕ್ಕ ತಂಗಿಯರಿಗೆ ದುಃಖ ದುಂದ ಏನು ಹೇಳಲಿ ನಿಮ್ಮ ಮುಂದ
ಚಪ್ಪನ್ನ ದೇಶಕ್ಕ ಒಪ್ಪುವ ದವಲತ ಕೊಟ್ಟ ಹೋಗ್ಯಾರ ಯಾರ ಕೈಯಾಗ
ಇಂಗ್ರೇಜಿ ಸಾಹೇಬರು ಆವಾಗ ಸುದ್ದಿ ಕೇಳ್ಯಾರೊ ಬೆಳಗಾಂವಿಯಾಗ
ಬತ್ತಲಗುದರಿ ಒತ್ತರ ಮಾಡಿ ಹತ್ತಿ ಬಂದ್ರೊ ಮರುಗಳಿಗ್ಯಾಗ
ಸರುವ ಸಿಂಗಾರ ಕುದುರಿಗೆ ಮಾಡಿ ಚಾಬಕ ಸೋರ ಬೋರ್ಯಾಡಿ
ಕುದುರಿ ಹಿಡದಾರ ಮುಂದ ಮುಂದ ಜೋಡ ಕುದರಿ ಅಳತಾವ ಮುಖಬಾಡಿ
ಕುದರಿ ಕಣ್ಣಿನ ನೀರು ನೋಡಿ ಜನ ಅಳತೈತಿ ಹೊರಳಾಡಿ
ಊರ ಹೊರಗ ಹೊಂಟಿತೋ ವಿಮಾನ ಸುತ್ತಗಟ್ಟಿ ಅಳತೈತಿ ಜನ ॥
ಸಿರಸಿಂಗಿ ದೇಸಾಯ್ರು ವರತನ ಬಿಟ್ಟು ಹೋದ್ರು ತಮ್ಮ ಸಂಸ್ಥಾನ
ಚಂದ್ರಮನಂತ ಚಲುವರ ಮ್ಯಾಲ ಶಿವಾ ಮುನಿದ ಬೆಸ್ತ್ಯಾರ ದಿನ ॥ ೪ ॥

ನಗಾರಿ ನೌಬತ್ತ ಹೊಡೆಸುತ್ತ ಡೆಂಕಿ ನಿಶಾನಿ ಹಿಡಿಸುತ್ತ
ಬಿರದಿನ ಕಾಳಿ ಅವರ ಮುಂದ ಮುಂದ ಸಂಬಳದವರು ನಡವುತ್ತ
ದೊರಿಗುಳ ಇಳಿವ್ಯಾರ ತಡಿಯಾಗ ಬಾಯಿ ಸಾಹೇಬ್ರು ಹೊಕ್ಕಾರು ಒಳಿಯಾಕ
ತೆಕ್ಕಿಹಾದ ಮಹಾದುಃಖ ಮಾಡತಾರ ಮುನಿಗೆದ್ದರು ಚಿಂತಿ ಮನದಾಗ
ಬಂದು ಬಳಗ ಎಲ್ಲರೂ ಕೂಡಿ ಬಾಯಿ ಸಾಹೇಬರ್ನ ಸಮಾದಾನ ಮಾಡಿ
ಬಹುಮಂದಿ ಎಲ್ಲರೂ ಕೂಡಿ ದೊರಿಗುಳನ ಮಣ್ಣಮರೆ ಮಾಡಿ
ರೊಕ್ಕ ರೂಪಾಯಿ ದಾನ ಮಾಡಿ ತಿರಿಗಿ ಬಂದರವರು ಅರಮನಿಗೆ
ಅಲ್ಲಿ ಗೈಬು ಸಾಹೇಬು ಜೋಡು ಹುಸೇನು ಸಾಹೇಬು ಕವಿ ಮಾಡಿ

ಮೇಲೆ ಆಗಿದ್ದಿಲ್ಲಾ ಅವ ದಿನ ಏನು ಮುನಿದು ಸ್ವಾಮಿ ಬಗವಾನ ||
ಸಿರಸಂಗಿ ದೇಸಾಯ್ರು ವರತನ ಬಿಟ್ಟು ಹೋದ್ರು ತಮ್ಮ ಸಂಸ್ಥಾನ
ಚಂದ್ರಮನಂತ ಚಲುವರ ಮ್ಯಾಲ ಶಿವ ಮುನಿದ ಬೆಸ್ಯಾರ ದಿನ || ೫|| ೫ ||

**ರಚನೆ :** ಗೈಬುಸಾಬ ಮತ್ತು ಹುಸೇನ ಸಾಬ
**ಕೃತಿ :** ಲಿಂಗರಾಜು ವಿಜಯ ಕಾವ್ಯ ಹಾಗೂ ಕೆಲವು ಲಾವಣಿಗಳು

## ೫೩. ಶ್ರೀ ಲಿಂಗರಾಜ ಸರದೇಸಾಯಿ ಸಿರಸಿಂಗಿ

ಪೃಥ್ವಿಯೊಳಗೆ ಜನಿಸಿದವಗೆ ಮೃತ್ಯು ಬೆನ್ನು ಹತ್ತಿಹುದು |
ವ್ಯರ್ಥವಿದು ಜನ್ಮ ಹುಟ್ಟಿ ಸಾರ್ಥಕವೇನು |
ಅನರ್ಥವಾಗುವದೊಂದು ದಿನ ತಪ್ಪಿಹದೇನು |
ಪಾರಮಾಥಕ್ಕಾಗಿ ಹತ್ತು ಪುರನಿತ್ತ ಪುಣ್ಯೇನು |
ಹತ್ತೊಂಬತ್ತು ನೂರಾ ಆರು ಆಗಷ್ಟ ಇಪ್ಪತ್ತಮೂರು |
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು |
ಸ್ವರ್ಗ ಸ್ವಾಧೀನಾದ ಲಿಂಗಭೂಪ ಸಿರಸಂಗೀಶನು|| ಪಲ್ಲವಿ ||

ಹತ್ತೂರಪೇಕ್ಷಿತ ಜೀವ ಮೃತ್ಯು ಜನಕೆ ಸಿಗುವದಲ್ಲಾ |
ಮೃತ್ಯುಹರನ ಭಕ್ತರುದ್ಧಾರಕ್ಕೆ ಜನಿಸಿದನು |
ಅಜನು ಚಿತ್ತದಿಂದ ರೂಪವನ್ನು ತಿದ್ದಿ ಮಾಡಿದನು |
ಮಿರ್ಜಿ ಸಂಸ್ಥಾನ ಶಿಗ್ಲಿ ಗ್ರಾಮದಲ್ಲಿ ಜನಿಸಿದನು |
ದತ್ತದಿಂದಾ ದತ್ತಕ್ಕಾಗಿ, ಹತ್ತು ಹಳ್ಳಿಗೊಡೆಯನಾಗೈವತ್ತು |
ಸಾವಿರುತ್ಪನ್ನಕ್ಕಾಗಧೀಶನಾದಾನು |
ಸರದೇಶಗತ ನವಲಗುಂದ ಸಂಸ್ಥಾನಿಕನು || ೧ ||

ಫಕ್ತ ದೈವದಿಂದ ಇವರು ದತ್ತಕ್ಕಾದ್ದದಂತ ಸಂಕ್ಷಿಪ್ತ ಕಥೆಯನು |
ಹೇಳುವೆನು ಅರಿಯದಾತನು |
ಶಿಗ್ಲಿ ರೈತಾ ಘೂಳಪ್ಪನ ಪುತ್ರ ಭಕ್ತಕುಲದವನು |
ಮಾತಾಪಿತೃರರಿತಿದ್ದಿಲ್ಲೀ ಸಂಸ್ಥಾನವನು |
ಸ್ವಸ್ಥ ಉಂಡು ತಾನು ರಸ್ತೆಯಲ್ಲಿ ಆಡುವವನು |
ಎತ್ತಿಬಂದು ಜಾಯಸತಿಯರ ಪುತ್ರನಾದನು |
ಇಂತಾ ಕಥೆಯ ಹೇಳುವೆ ಕೇಳೀರೀಗ ಸಭಿಕರಿನ್ನು ||

ರೂಪದಿ ವಿರೂಪಾಕ್ಷ ವೈರಿ | ಕೋಪದಿ ಪಾಪಿಗಳ ವೈರಿ |
ತಾಪದಲ್ಲಿ ಅಗ್ನಿಯ ಸ್ವರೂಪನಿದ್ದನು |
ಭೂಪ ಶಾಂತಿಯಲ್ಲಿ ಚಂದ್ರ ದಾತೃದಲ್ಲಿ ಕರ್ಣನು |

ಶಕ್ತಿ ಭೀಮ ಯುಕ್ತಿ ವಾಮ ವಚನದಲ್ಲಿ ರಾಮನು ।
ದೀಪಲಿಂಗ ಧಾರಣರ ತಾಪವನ್ನು ಲೋಪಮಾಡಿ ।
ಭೂಪಾದ್ವೀಪಾಂತರಲ್ಲಿ ಧೂಪನಿದ್ದನು ।
ಇಂಥಾ ಕರ್ಪೂರೊಡೆಯು ದೇಶದಲ್ಲಿ ಎಲ್ಲಿ ಸಿಕ್ಕಾನು ॥

ದೊರೆಯ ವರ್ಣನೆಯನ್ನು ನಾನು ಸ್ಮರಣೆಯಿಂದ ಮಾಡುವೆನು ।
ಕರುಣದಿಂದ ಕೇಳಿರೆಂದು ಬೇಡಿಕೊಂಡೇನು ।
ಹರಳು ಒಡೆದು ಹೋಗ ಗೆಜ್ಜೆಯಂತೆ ಬಾಯಿ ತೆರೆದೇನು ।
ಅರಸು ತಾನೆಂಬ ಅಹಂಕಾರ ದೂರ ಮಾಡಿದನು ।
ಅರಿಯದವಗೆ ಅರಸಾಗಿ ಸಿರಿಯು ಭಾಗ್ಯವಂತನಾಗಿ ।
ಮೂವತ್ತು ವರ್ಷ ದೇಶಗತನಾಳಿದನು ।
ಪುರುಷರಲ್ಲಿ ತನ್ನ ಹೆಸರು ಮುಂದೆ ತಂದನು ॥

ಸತ್ಯದಲ್ಲಿ ಹರಿಶ್ಚಂದ್ರ, ಅಸತ್ಯವನ್ನು ನುಡಿದವರಿಗೆ ।
ಮೃತ್ಯುವಾಗಿ ಮೈಯದೊಗಳು ಸುಲಿಸಿಬಿಟ್ಟಾನು ।
ದುಷ್ಟ ಕೃತ್ಯ ಪಾಪ ಕರ್ಮವನ್ನು ದೂರ ಮಾಡಿದನು ।
ತನ್ನ ಹತ್ತರಲ್ಲಿ ಸತ್ಯವಂತನಿರಿಸಿಕೊಂಡಾನು ।
ಧಾತ್ರಿಪಾಲನ ಕೀರ್ತಿ ಜಗತ್ತಿನಲ್ಲಿ ವ್ಯಾಪಿಸಿಹುದು ।
ವೀರಶೈವ ಸಭೆದಲ್ಲಿ ಸಾರುವದನ್ನು ।
ದಾನವೀರ ಪುಣ್ಯವಂತ ಲಿಂಗಭೂಪನು ॥

**॥ಏರು॥**

ಮಾತು ಕೇಳಿ ಪೃಥ್ವಿ ದೂರದಲ್ಲಿ ನಿಂತ ಬೃಹಸ್ಪತಿ ।
ರಸನಾಂತ್ಯದಲ್ಲಿ ಸರಸ್ವತಿ ।
ದ್ರೌಪತಿ ಸರಿ ಭಾಗೀರಥಿ ಬಾಯಿ ಮೇಲೆ ಪ್ರೀತಿ ।
ರೂಪದಲ್ಲಿ ಧನ್ಯರತಿ ಸತಿ ।
ಹಗಲಿರುಳು ರನ್ನದಾ ಹರಳು ಮಾಳ್ಪೆನಾ ಸ್ತುತಿ ।
ದೇವ ಮುನಿದ ನಮ್ಮ ಮೇಲತಿ ॥

ಸೂರ್ಯನುದಯದಿಂದಿ ತಾನು ಸೂರ್ಯಾಸ್ತನಾಗುವತನಕಾ ।
ಆರ್ಯರಲ್ಲಿ ಶ್ರೇಷ್ಠ ವೀರಶೈವ ಜನರಿನ್ನು ।
ಕಾರ್ಯದಕ್ಷರಾಗಲಿಲ್ಲವೆಂಬ ಚಿಂತಿಕಾಲನ್ನು ।
ಧೈರ್ಯದಿಂದಾ ವಹಿಸಿ ಈಶ್ವರಾಜ್ಞೆಗೈದಾನು ।
ಹತ್ತೊಂಬತ್ತು ನೂರಾ ಆರು ಆಗಸ್ಟ್ ಇಪ್ಪತ್ತಮೂರು ।
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನಾದ ಲಿಂಗಭೂಪ ಸಿರಸಂಗೀಶನು ॥

ಅವರಾದಿ ವಿಠ್ಠಪ್ಪಗೌಡ ಇರುವನಿವರ ಮೂಲಪುರುಷ |
ಸರಿಯ ತಮ್ಮನ ಕೂಡ ಕಲಹ ಮಾಡಿ ಹೊರಟಾನು |
ವಿಜಾಪುರ ಬಾದಾಶಹನಲ್ಲಿ ಸ್ವಾರನಾದನು |
ವಿಜಯನಗರದರಸು ಬಾದಶಹನ ಶತ್ರುವಿದ್ದನು |
ಕೇಳಿರಿಲ್ಲಿ ಸಭಿಕರೆಲ್ಲಾ ತಾಳಿಕೋಟಿ ಹತ್ತರಲ್ಲಿ |
ಕಾಳಗಾಗಿ ಅಲ್ಲಿಆದಿಲಶಹಾ ಗೆದ್ದಾನು |
ರಾಮರಾಜ ಸೋತು ಸತ್ತು ಮಣ್ಣುಗೂಡಿ ಹೋದನು |
ತಾಳಿಕೋಟ ಕಾಳಗದಲ್ಲಿ ಅಲ್ಲಿಆದಿಲಶಹಾ ತಾನು |
ವಿಠೂಗೌಡನ ಶೂರತನವ ಕಂಡು ಕೊಂಡನು |
ಅರಸು ಮೆಚ್ಚಿ ಅರ್ಧರಾಜ್ಯವನ್ನು ಕೊಟ್ಟು ಬಿಟ್ಟಾನು |
ನವಲಗುಂದ ರಾಜ್ಯ ಮೂರುಲಕ್ಷ ವರಹ ಉತ್ಪನ್ನು |
ಜಾಗೀರ್ಹಾಕಿ ಕೊಟ್ಟ ಮೇಲೆ ಪುತ್ರ ಪೌತ್ರಾದಿಗಳು |
ಸೌಖ್ಯದಿಂದ ಕಾಲಕಳೆದರ್ಹೇಳಲಿನ್ನೇನು |
ಮೈಸೂರಲ್ಲಿ ಪ್ರಬಲನಾದ ಹೈದರಲ್ಲಿಯ ಮಗನು ||

ಮೈಸೂರೀಶಾ ಟೀಪು ದೊರೆಯು ಸೈನ್ಯದೊಡನೆ ಬಂದು
ನವಲಗುಂದ ಸಂಸ್ಥಾನ ವಶವ ಮಾಡಿಕೊಂಡಾನು |
ತನ್ನ ರಾಜ್ಯದೊಳಗೆ ಸೇರಿಸಿಲ್ಲಿಯ ಒಡೆಯನ್ನಟ್ಟಿದನು |
ಸರದೇಸಾಯಿ ವೃತ್ತಿ ಕಳೆದಕೊಂಡ ಕೂತಾನು |
ಟೀಪು ಉರಿಯುವುದನ್ನು ಕಂಡು ನೈಝಾಮೇಂಗ್ಲ ಪೇಶ್ವಾಯವರು |
ಐಕ್ಯಮತದಿಂದ ಕಾದೆ ಟೀಪು ಮಡಿದನು |
ತ್ರಿರಾಜರ್ ಹಂಚಿಗೊಂಡರ್ ಟೀಪುಗೆದ್ದ ಭೂಮಿಯನು ||

ನವಲಗುಂದ ಸಂಸ್ಥಾನ ಪೇಶ್ವೆಯವರ ಸ್ವಾಧೀನವಾಗಿ |
ಯುದ್ಧದಲ್ಲಿ ಆದ ಖರ್ಚಿಗೆ ವತ್ತಿ ಹಾಕಿದರು |
ಜಾಯದೇಸಾಯರೆಂಬುವವರು ಅರ್ಜಿಕೊಟ್ಟಾರು |
ಪರತ ಸಂಸ್ಥಾನ ಬಿಡಲಿಕ್ಕೆ ಕೇಳಿಕೊಂಡಾರು |
ವತ್ತಿಯಿಂದ ಬಿಡಿಸಿ ನಿಮ್ಮ ಸಂಸ್ಥಾನ ಕೊಡುವೆವೆಂದು
ಹತ್ತು ಪುರವ ಹೊಟ್ಟೆ ಖರ್ಚಿಗಾಗಿ ಕೊಟ್ಟರು |
ಅಷ್ಟರಲ್ಲಿ ಪೇಶ್ವೆಯರ್ಹೋಗಿ ಇಂಗ್ರಜಿಯವರು ಬಂದರು ||

ಹೊಟ್ಟೆ ಖರ್ಚಿಗಾಗಿ ಪೇಶ್ವೆಕೊಟ್ಟ ಹತ್ತು ಗ್ರಾಮಗಳಿಗೆ |
ಧಿಟ್ಟರಾಗಿ ತಾವು ಕಾಲ ಕಳೆದರೈವರು |
ಒಟ್ಟ ಹನ್ನೊಂದು ತಲೆಯವರಾದ ಜಾಯದೇಸಾಯರು |
ಹುಟ್ಟಿದೊಬ್ಬ ಮಗನು ಹೆಂಡರಿರಲು ಮರಣವಾದಾರು |
ಮುಂದೆ ಮಗನು ತೀರಲಾಗಿ ಹಿಂದೆ ಉಳಿದ ಬಾಯಿಯವರು

ನಾನು ನೀನು ಒಡೆಯರೆಂದು ನ್ಯಾಯವಾಡಿದರು ।
ತಮ್ಮ ತಮ್ಮ ಪಕ್ಷದವರು ದತ್ತಕೆಂದು ನುಡಿದರು ॥

**||ಏರು||**

ಇಬ್ಬರಲಿ ಕಲಹ ತಪ್ಪದಲಿ ನಡಿತು ಹೆಚ್ಚುತಾ ।
ಬುದ್ಧಿವಂತರ್ ಕೇಳಿ ಸಮ್ಮತಾ ।
ಇಬ್ಬರು ಕೂಡಿ ಬಂದರು ನೋಡಿ ಜಾಹೀರಾತಾ ।
ಸರಿಕಂಡನು ಮಗನಂತಾ ।
ಆತುರದಿ ಜನರು ಬಂದು ಭರದಿ ಗ್ರಾಮ ತುಂಬುತಾ ।
ಐಶ್ವರ್ಯದೊಡನೆ ಜರಗುತಾ ॥

ಪಾಸ ಕಂಡರ ಸಂಸ್ಥಾನಕ್ಕೀಶನನ್ನು ಮಾಡುವರಂಥಾ
ದೇಶದಲ್ಲಿ ಸರ್ವಜನರು ವಾರ್ತೆ ಕೇಳಿದರು ।
ದಿವ್ಯಭೂಷಣಾದಿಗಳಿಂದ ಅಶ್ವವನ್ನೇರಿ ಬಂದಾರು ।
ಶಿಗ್ಲಿಯೊಳಗೆ ಇವರ ತಂದೆ ಬಡವರಿದ್ದರು ।
ಹತ್ತೊಂಬತ್ತು ನೂರಾ ಆರು ಆಗಸ್ಟ ಇಪ್ಪತ್ತುಮೂರು
ಭಾದ್ರಪದ ಶುದ್ಧಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು |||| ೩ ॥

ಬಂದ ಉಮೇದವಾರರೊಳಗೆ ಅಂದಗಂಡ ರಾಮಪ್ಪನು ।
ರಾಮಪ್ಪನು ಇಂದುವಿನಂತೆ ಚಂದ್ರಶೇಖರ ಪಾಸಕಂಡಾನು ।
ದತ್ತಪುತ್ರ ಬರಿದು ಇಟ್ಟ ಹೆಸರು ಲಿಂಗಭೂಪನು ।
ದಿವ್ಯವೈಭವದಿಂದ ಸಂಸ್ಥಾನಕ್ಕೊಡೆಯನಾದನು ।
ಹಿರಿಯ ಅಣ್ಣನ ಕೂಡ ಬಂದು ಸಿರಸಿಂಗಿಯೊಳಗೆ ।
ಬಂದು ದೂರದಲ್ಲಿ ಮಠದೊಳಗೆ ಇಳಿದಿದ್ದನು ।
ಇವರ ಪೂರ್ವದಲ್ಲಿಯ ಹೆಸರು ರಾಮಪ್ಪನು ॥

ಗಂಗಾಬಾಯಿ ಸಾಹೇಬರದು ಲಿಂಗಭೂಪನ ಮೇಲೆ
ಪ್ರೇಮ ಅಂಗಜಾತನಂಥ ಸಿರಸಂಗೀಶನು ।
ರಾಜಪುತ್ರ ಶಾಲೆಯ ಕೊಲ್ಹಾಪುರದಿ ಕಲಿಯುತಿದ್ದನು ।
ರಾಜಭಾಷೆ ಇಂಗ್ಲೀಷ ಕನ್ನಡಾದಿ ಮರಾಠಿಯನ್ನು ।
ಕಲಿಯುತಾತ ಇರುವುವಲ್ಲಿ ಪ್ರೀತಿ ತಾಯಿ ತೀರಲಾಗಿ
ಉಮಾಬಾಯಿ ಸಾಹೇಬರು ದ್ವೇಷದಿಂದಿನ್ನು ।
ಕಲಿಸಿದಾನು ಸಿದ್ಧರಾಮಪ್ಪನೆಂದು ದುಷ್ಟನು ॥

ಋಷಿ ದತ್ತಕ ಸುಳ್ಳೆಂದು ಹುಸಿ ಮಾತು ।
ಆಡುತ್ತ ದ್ವೇಷದಿಂದ ವಾಸಿಸಿದಳು ಸಿರಸಂಗಿಯಲ್ಲಿ ।
ಸುದ್ದಿ ಕೇಳಿ ಈಶ ಕೊಲ್ಹಾಪುರದಿ ಹೊರಡುತಲಿ ।
ಭರದಿ ಸಿರಸಂಗಿಗೆ ಬಂದ ತೀವ್ರದಲಿ ।
ಗ್ರಾಮದಲ್ಲಿ ಬರುವವನ ನೇಮದಿಂದಾ ನೂಕಿದಳು ।
ಕಾಮನಂಥಾ ತಿರುಗಿದಾಸರಿಲ್ಲದಲ್ಲಿ ।
ದೇವ ತನ್ನ ಮೇಲೆ ಮುನಿದನೆಂಬ ಚಿಂತೆಯಲಿ ॥

ಕೈಯಲ್ಲಿ ದುಡ್ಡು ಇಲ್ಲಾ ಜನರ ಸಹಾಯವಿಲ್ಲ
ನ್ಯಾಯಕ್ಕೆ ಆಸರಿಲ್ಲಾ ನಿಂತ ಅಂತರಲ್ಲಿ ।
ಇವರನ್ನಾರು ಕೇಳುವರು ಬಾಯಿಯ ದುರದಲ್ಲಿ ।
ಯಾವ ಆಸರರಿಂದ ನಿಂತಾರು ವೈರದಲ್ಲಿ ।
ನದೇವೋ ನ ನಧರ್ಮಾಯನೆನ್ನುತ ಭೂವರ ।
ನಿರ್ಧಾರನಾಗಿ ಬಾ ನಿಲ್ಲುತಲ್ಲಿ ।
ಪರಸಗಡದ ಪರಪ್ಪ ಧೈರ್ಯ ಹೇಳುತಲಿ ॥

ಮೂರು ಕೋರ್ಟಿನ ವರೆಗೆ ನ್ಯಾಯ ।
ಧೀರತನದಿಂದ ನಡಿಸಿದಾನು ।
ಸಿದ್ಧರಾಮ ಚರಮೂರ್ತಿ ಹತವಾದಾನು ।
ಸಂಸ್ಥಾನದ ಸಿಲ್ಕೆಲ್ಲಾ ಅಯ್ಯನ ಸ್ವಾಧೀನು ।
ಕಾಗಿ ಹಿರಿಯತನದಂಥವನು ಮಾಡಿ ಬಿಟ್ಟಾನು ।
ಸಿಕ್ಕಂತೆ ವೆಚ್ಚಮಾಡಿ ಲೆಖ್ಖಿಲ್ಲದ್ಹಾಳು ಮಾಡಿ ।
ಬಳಿದುವಾಡೆ ದುಡ್ಡೆಲ್ಲಾ ತೊಳೆದು ಬಿಟ್ಟಾನು ॥

ಸಿದ್ಧರಾಮ ಸತ್ತಮೇಲೆ ಬುದ್ಧಿವಂತಳಾಗಿ ಬಾಯಿ ।
ಇದ್ದ ಮಗನಗೂಡ ರಾಜಿ ಆಗುತಲಿ ।
ಮತ್ತು ಸಿದ್ಧವಾಗಿ ದತ್ತಪತ್ರ ಕೋರ್ಟಿನಲ್ಲಿ ।
ವಾಡೆ ಸಂಪೂರ್ಣ ಸಿಕ್ಕತವನ ತಾಬೇದಲ್ಲಿ ।
ತಾಯಿ ತಾ ಹತ ತನ್ನ ಕೈಯಿಂದ ಒಂದು ಹಳ್ಳಿ ।
ಹೊಟ್ಟೆ ಖರ್ಚಿಗಾಗಿ ಕೊಟ್ಟಾ ಮಹಾಕಲಿ ।
ವಾಡೆ ಕಟ್ಟಿಸಿಟ್ಟ ತಾಯಿಯನ್ನು ಬೇವೂರಲ್ಲಿ ॥

**॥ಏರು॥**

ಅತಿ ಕಷ್ಟ ಕಾಡಿತು ಅರಿಷ್ಟಾ ಗೆದ್ದ ರಾಜೇಂದ್ರಾ ।
ಖಾಲಿ ವಾಡೆಕ್ಕಾದ ತಾ ಇಂದ್ರ ।
ಖರ್ಚಿಗಿ ಹಣಾ ಇಲ್ಲದಾಗಿ ಗ್ರಾಮದಲಿ ಬಂದಾ ।

ಕುಡಿಯಲಿಕ್ಕೆ ತಂಬಿಗಿಲ್ಲ ಒಂದಾ ।
ತುರ್ತಕ್ಕೆ ದುಡ್ಡ ಕಳಿಸುವದಕ ಪತ್ರ ತಾ ಬರೆದಾ ।
ಇಂಗಳೇಶ್ವರದ ಗೌಡ ಕಳಿಸಿದಾ ॥

ವಾಡೆ ಹೊಕ್ಕು ನೋಡಿದನು ಮಾಡದಲಿ ಇಲಿಯ ಹಿಕ್ಕಿ ।
ಕೋಠಿಯಲ್ಲಿ ಕಾಲಿ ಚೀಲು ಒಂದೂ ಉಳಿದಿಲ್ಲಾ ।
ಭೋಜನಾಲಯದಲ್ಲಿ ಪಂಕ್ತಿ ಚಾಪಿ ಸಹ ಕಂಡಿಲ್ಲಾ ।
ಹಂಡೆ ಭಾಂಡೆ ತಗಡು ತುಣಕು ಮಣ್ಣು ಪಾತ್ರೆ ಇಲ್ಲಾ ।
ಔಷಧಕ್ಕೆ ಕಾಳು ಇಲ್ಲ ವಿಷಕ್ಕೆ ದುಡ್ಡು ಇಲ್ಲಾ ।
ಕಸಕ್ಕ ಬಾರಿಗಿಲ್ಲಾ ಬೀಸುವ ಕಲ್ಲಾ ।
ನಾಶಮಾಡಿ ಬಿಟ್ಟು ಸಿದ್ಧರಾಮ ಸತ್ತನಲ್ಲಾ ॥

ನಳನ ಸತಿಯ ಬಿಡಿಸಿ ರಾಮಚಂದ್ರನಡವಿಗಟ್ಟಿ ।
ಹರಿಶ್ಚಂದ್ರನ ಹೊಲಿಯರಲ್ಲಿ ದುಡಿಯಲಿಟ್ಟಾನು ।
ಬಲಿ ಚಕ್ರವರ್ತಿಯನ್ನು ಭೂಮಿಯಲ್ಲಿ ತುಳಿದಾನು ।
ವಿಧಿಯಂಥ ಕುಕ್ಷಿಯನ್ನು ನಾನು ಎಂದೂ ಕಾಣೆನು ।
ಹತ್ತೊಂಬತ್ತು ನೂರಾ ಆರು ಆಗಸ್ಟ ಇಪ್ಪತ್ತು ಮೂರು ।
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನಾದ ಲಿಂಗಭೂಪ ಸಿರಸಂಗೀಶನು ॥ ೪ ॥

ದೇವಲೋಕದಿಂದ ಇಳಿದ ಜೀವನಿದು ಭುವನದಲ್ಲಿ
ಭಾವ ಮೂಡಿ ತೋರಿ ಅಡಗಿ ಇಹದಲ್ಲಿ ।
ಸ್ವಭಾವದಲ್ಲಿ ಕಮಲಾಕ್ಷ ಜಿಹ್ವದಲ್ಲಿ ।
ಸರಸ್ವತಿ ಮಚ್ಚನಿದ್ದು ತೊಡೆಯಲ್ಲಿ ।
ನಾವು ನೀವು ನೋಡಿದೆವು ಸುಳ್ಳು ಮಾತು ಒಂದು ಇಲ್ಲ
ಸರಿಯ ಮಾತು ಶಿವನ ಭಕ್ತಿ ಮನದಲ್ಲಿ ।
ಎನ್ನ ಕಿವಿಯ ಕೊಯ್ಯಬೇಕು ಸುಳ್ಳು ಕಂಡಲ್ಲಿ ॥

ಸತಿಯರನ್ನು ಬಿಟ್ಟು ಪರಸ್ತ್ರೀಯರನ್ನು ನೋಡಲಿಲ್ಲ ।
ಹಿತದ ಮಾತು ಬೋಧಿಸಿದನು ಜನರಲ್ಲಿ ।
ಹೆತ್ತ ತಂದೆಗೊಂದು ಮನೆಯ ಕಟ್ಟಿಸಿಟ್ಟಿದಲ್ಲಿ ।
ಗೋರಾ ಜನರಗೂಡ ಗೆಳೆತನ ನೇಮದಲ್ಲಿ ।
ಹತ್ತೊಂಭತ್ತು ವಯಾದಲ್ಲಿ ಸಂಸ್ಥಾನ ತಾಬೇಯಾಗಿ ।
ಚಿತ್ತದಿಂದ ದೇಶಗತ ಪಾಲಿಸುತಲಿ ।
ವಸೂಲಿಪ್ಪತ್ತೈದು ಸಾವೀರಿತ್ತು ಪೂರ್ವದಲ್ಲಿ ॥

ಬೆಳ್ಳೇರಿ ಹೊಂಗಲ ಚಿಕ್ಕ ಉಳ್ಳಿಗೇರಿ ಹೂಲಿಯಕಟ್ಟಿ ।
ಹಳ್ಳದ ದಂಡಯಲಿರುವ ಕುರುವಿನಕೊಪ್ಪಾ ।
ಬೆಳ್ಳಗ್ಡುಳ್ಳಗರಿಯಲಾರದಂಥ ಗೋವಿನಕೊಪ್ಪ ।
ಒಳ್ಳೆ ಬಾಳ್ವೆಯುಳ್ಳ ಹೊಸಬಾಳ ಕೆಂಚನಕೊಪ್ಪ ।
ನಳ್ಳ ಸಿರಸಂಗಿ ನೆರೆಹಳ್ಳಿ ಕಲ್ಲಾಪುರ ಧೊರಿ ।
ನವಲಗುಂದ ಪರಸಗಡ ಚಾವರಾತ ಭೂಪಾ ।
ವರ್ಷ ಮತ್ತೆಯಾಗುವದು ಸತ್ಯಬಾವಿಯ ಕೂಪಾ ॥

ತಾಯಿ ನ್ಯಾಯದಲ್ಲಿ ತನ್ನ ಪಕ್ಷ ಹಿಡಿದ ।
ಪಂತನಿಗೆ ಹತ್ತು ನಂಬರೀನಾಮು ಹಚ್ಚಿ ಕೊಟ್ಟಾನು ।
ಸಾಲಿ ಕಲಿಯುವಾಗ ಹಸ್ತ ನೋಡಿದ ವಿಷ್ಣುಪಂತನು ।
ರಾಜನಾಗುವಂಥ ಲಕ್ಷಣಾತ ಹೇಳಿದ್ದನು ।
ಭವಿಷ್ಯ ಮಾತು ನಿಶ್ಚಯಾಗಿ ವರ್ಷಾ ಇನ್ನೂರು ರೂಪಾಯಿ ।
ಹರ್ಷದಿಂದ ಸಾಯುತನಕಾ ಸಂಬಳ ಕೊಟ್ಟಾನು ।
ವಚನಕೊಟ್ಟಂತೆ ಪಾರುಮಾಡಿ ದೇಹ ಬಿಟ್ಟಾನು ॥
ಯುಕ್ತಿಯಿಂದಾ ದೇಶಗತದುತ್ಪನ್ನದ ಬೆಳಿಸಿದಾನು ।
ರೈತಕೀಯ ತರ್ಮ ಆಕಾರ ಏರಿಸಿಟ್ಟಾನು ।
ಖರಾಬ ನಂಬರ ಕಿರ್ದಿ ಮಾಡಿ ಲಾವಣಿ ಸಾಗಿಸಿದನು ।
ಮೂರು ಊರಲ್ಲಿ ಸ್ವಂತ ಕಮತಾ ನಡಿಸುತಿರ್ದನು ।
ಮೂರು ಕೆರೆಯ ಕಟ್ಟಿಸಿ ತಾ ಮೂರು ಲಕ್ಷ ಖರ್ಚು
ಮಾಡಿ ಬಿಡಿ ನೀರಿನಿಂದ ಕಬ್ಬ ಬೆಳೆಸುತ್ತಿದ್ದನು ।
ಮತ್ತು ಆರುತಿಂಗಳತನಕಾ ನಡ್ಸಿ ದಾಲಿಗಾಣ ॥

ಬಂಟ ತಾನು ಒಂಟಿಯನ್ನು ರೆಂಟಿಗಾಗಿ ಸಾಕಿದನು ।
ಎತ್ತು ಕೋಣೆಂಭತ್ತುಗಳನು ಕಮತಕಿಟ್ಟಾನು ।
ತಗ್ಗು ದಿನ್ನೆಗಳನು ಸಾಫ ಮಾಡಿ ಸಾಗು ಮಾಡಿದನು ।
ಠೇವು ಖಾತೆ ಇಟ್ಟು ಬಡ್ಡಿಯಂತೆ ಸಾಲ ಕೊಟ್ಟಾನು ।
ಬೇರೆ ಬೇರೆ ಖಾತೆ ಇಟ್ಟು ಕಾರಕೂನರನ್ನು ನೇಮಿಸಿಟ್ಟು ।
ಒಟ್ಟ ಉತ್ಪನ್ನ ಒಂದು ಲಕ್ಷ ಕಟ್ಟಿ ಇಟ್ಟಾನು ।
ದಿವಾರಾತ್ರಿಯಲ್ಲಿ ನಿದ್ರೆ ಇಲ್ಲಾ ದುಡಿಯುತಿರ್ದನು ॥

**॥ಏರು॥**

ಜೋಗುಳ ಬಾವಿ ದರಸಾಲ ಲಲಾವ ಸಾವಿರಕ್ಕ ।
ಕಾಳಿದೇವಿ ಜಾತ್ರೆಗಿಟ್ಟು ಸುಂಕಾ ।
ಗುಡ್ಡದಲ್ಲಿ ಕಟ್ಟಿಗಿದ್ದಲ್ಲಿ ಮೇಲೆ ಇವರ ಹಕ್ಕಾ ।

ಜಂಗಲ ಖಾತೆಯಿಂದಾ ಬೇರೆ ರೊಕ್ಕಾ ।
ಮಾವಿನತೋಫಿನುತ್ಪನ್ನ ತಪ್ಪದೊರುಷಕ್ಕ ।
ಕಮತದ ಮೇಲೆ ಒಳೆ ಲೆಕ್ಕಾ ॥

ತಾಕಿ ಜಮೀನ ಮೇಲೆ ರೈತರ ಹಕ್ಕ ತೆಗೆದುಹಾಕಿ
ಜಾತ ಇನಾಮು ಸನದು ತಾನು ಪಡೆದುಕೊಂಡಾನು ।
ಸೂಜಾತ ಲಿಂಗವಂತ ಜಂಗಮಕ್ಕೆ ಪ್ರಿಯನು ।
ಈ ಭೂತಳದಲ್ಲಿ ಕ್ರೀಡೆಯನಾಡಿ ಮಾಯವಾದಾನು ।
ಹತ್ತೊಂಭತ್ತು ನೂರಾ ಆರು ಆಗಸ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು ॥ ಋ ॥

ಖರ್ಚಿನ ಬಾಬ ಹೇಳತೀನಿ ವೆಚ್ಚಕ್ಕೆಯೆಣೆಯಿಲ್ಲ
ಬಚ್ಚಿಟ್ಟ ತಿಜೋರಿ ಸೂರಿ ಮಾಡಿದರು ।
ಹುಟ್ಟಿದೂರ ಭೆಟ್ಟಿಗಾಗಿ ಹೋಗಲಿಚ್ಛಿಸಿದರು ।
ರಿತ್ತಿ ಸ್ವಾರಿ ನೆವದಿಂದ ಸಿಗ್ಲಿಗ್ಹೊರಟಾರು ।
ಸುತ್ತ ಮುತ್ತಲಿನ ಊರ ತೃಪ್ತಿಗೊಳಿಸಿದರು ।
ಪ್ರೀತಿಯಿಂದ ವಸ್ತ್ರವನ್ನು ಹೊರಿಸಿಬಿಟ್ಟಾರು ।
ಅರವತ್ತು ಸಾವಿರ ಹಣ ತೂರಿಬಿಟ್ಟಾರು ॥

ನ್ಯಾಯ ಹಿಡಿದ ತಾಯಿ ಉಮಾಬಾಯಿಯವರು
ತೀರಿದರೆ ಸಾರ್ಥಕ್ಕೆ ಆರು ಸಾವಿರ ದಾನಕೊಟ್ಟಾರು ।
ಬೆನಕ ಚತುರ್ಥಿಯುತ್ಸವ ಮಾಡುತ್ತಿದ್ದಾರು ।
ಸಕಲ ಸಂಸ್ಥಾನ ಗಾನದಾರರು ಬರುತಿದ್ದರು ।
ನೇಮಣೂಕ ಇದ್ದಂತೆ ಬ್ರಾಹ್ಮಣ ಜಂಗಮರಿಗೆ
ಪಂಚದಿವ್ಯ ಮೃಷ್ಟಾನ್ನವ ಉಣಿಸುತ್ತಿದ್ದರು ।
ಘನಯಾತ್ರೆ ಖರ್ಚು ದರಸಾಲ ಮಾಡುತ್ತಿದ್ದರು ॥

ದಾಸೋಗಿತ್ತು ಲಿಂಗಾಂಗರೇಸುಮಂತಿ ಬಂದರು
ಉಪವಾಸ ಬೀಳುತ್ತಿದ್ದಿಲ್ಲಲ್ಲ ವಸ್ತಿ ಕೊಟ್ಟವರು ।
ಸೀದಾ ಒಯ್ಯುವರು ಬ್ರಾಹ್ಮಣ ದಾರಿಕಾರರು ।
ಕೋಠಿ ಮೇಲೊಬ್ಬ ಕಾರಕೂನನ್ನಿಟ್ಟು ಬಿಟ್ಟಾರು ।
ನೂರಾರು ಗೋವುಗಳು ನೇಮದಿಂದ ಕರೆಯುವವು
ಬಂದವರಿಗೊಂದು ತಂಬಿಗಿ ಹಾಲು ಕೊಟ್ಟಾರು ।
ಬೇರೆ ಖೋಲಿ ಕಟ್ಟಿಸಿಯೊಬ್ಬನಲ್ಲಿ ಇರಿಸಿದ್ದರು ॥

ಕಾಶೀ ಯಾತ್ರೆಗಾಗಿ ತನ್ನ ದಾಸಿ ದಾಸರಾ
ಶ್ರೀ ತರುಮೇಶನನ್ನು ನೋಡಲು ಸಮೇತ ಹೊರಟರು ।
ಕಾಶೀ ತೀರ್ಥವನ್ನು ಒಯ್ದು ರಾಮೇಶಗೆರಿದರು ।
ರಾಮೇಶ್ವರನ ಮಳಲ ಪುನಃ ಗಂಗೆಯಲ್ಲಿ ಬಿಟ್ಟಾರು ।
ಕಾಶಿಯಾತ್ರೆಯೊಂದು ಮುಗಿಸಿ ವಿಶ್ವನಾಥನ ಹೆಸರಿನಿಂದ ।
ದೇಶಗತ ಭೂಮಿಗತ ಭೂಮಿ ಒಂದು ಇನಾಮು ಕೊಟ್ಟಾರು ।
ಲಾವಣಿ ವಸೂಲ ಮಾಡಿ ವರ್ಷಾ ಕಾಶಿಗೆ ಕಳಿಸಿಕೊಡುವರು ॥

ದೇಶಗತ ನೇಮವನ್ನು ಖಾಸ ನಾನು ಹೇಳುವೆನು
ಜ್ಯೇಷ್ಠ ಬಾಯಿಸಾಹೇವರು ಉಕ್ಕಲಿಯವರು ।
ಹೀಂಗ ವಂಶ ಪರಂಪರೆಯಾಗಿನಹಿಡ ಬಂದಾರು ।
ಸಂತಾನಾಗದಕ್ಕ ಆರು ಮಂದಿ ಹೆಂಡರಾದಾರು ।
ಉಕ್ಕಲಂಕಲಗಿ ಹಿರಿಸಂಗ ಶಿರಹಟ್ಟಿ ಇವರೈದು
ಮಂದಿ ಅಂತರ ಪಟದಿಂದಾ ಮದುವೆ ಮಾಡಿಕೊಂಡಾರು ।
ಪಂಚಕಳಸ ಹೂಡಿ ಲಗ್ನವಾದ ಕಲಬುಳಿಗಿಯವರು ॥

ಪಂಚಗುರು ಪಂಚಪೀಠಾ ಪಂಚಗೋತ್ರಾ ಪಂಚಸೂತ್ರಾ
ಪಂಚಮ ಸಾಲಿ ಲಿಂಗಾಂಗ ಮುಖ್ಯರು ।
ಅಷ್ಟಾವರಣಕ್ಕೆ ಹೊಂದಿದವರು ಒಂದೇ ಕುಲದವರು ।
ಹಲವು ದಂಧೆಯಿಂದ ಜಾತಿವರ್ಗ ಮಾಡಿಕೊಂಡಾರು ।
ಅನ್ನ ನೀರು ಮುಟ್ಟದಂಥಾ ಅನ್ಯಮತಸ್ಥರಿಂದಾ
ಮಂಗಲಸೂತ್ರ ಧಾರಣ ಬಿಟ್ಟು ಬಿಟ್ಟಾರು ।
ಶಾಸ್ತ್ರಶೋಧ ಮಾಡಿಸಿದ್ಧವೆಂದು ಕಂಡುಕೊಂಡಾರು ॥

**||ಏರು||**

ಇಂಗ್ಲಂಡದರಸು ಎಡ್ವರ್ಡ ಬಾದಶಹಾ ರಾಜಧಾನಿ ಲಂಡನ್ನ
ಚಕ್ರವರ್ತಿಯಾದ ಹಿಂದುಸ್ತಾನ ।
ಮಹಾರಾಣಿ ಪುತ್ರ ಬಹುಮಾನಿ ಏರಿದನು ಒಂದರಲ್ಲಿ ಸಿಂಹಾಸನಾ ।
ದಿಲ್ಲಿಯಲ್ಲಿ ಉತ್ಸವದ ಖೂನಾ ।
ದರಬಾರ ಸೇರಿಸಿ ಬರಪೂರ ಇಂಡಿಯಾ ಮುನ್ನೂರುವರಿಸಂಸ್ಥಾನಾ ।
ಸಭೆಗಿತ್ತು ಇವರಿಗೆಂತೌತಣಾ ॥

ಪಾಶ್ಚಮಾತ್ಯ ಜನರ ಕೂಡಾ ನಿಶ್ಚಯವಾಗಿ
ಸ್ನೇಹವಿಟ್ಟು ನಿಶ್ಚಿಂತನಾಗಿ ಸ್ವರ್ಗವಾಸಿಯಾದಾನು ।
ಸಮಾನರಲ್ಲಿ ಯಶಸ್ಸು ಪಡೆದುಕೊಂಡಾನು ।
ಹತ್ತೊಂಭತ್ತು ನೂರಾ ಆರು ಆಗಸ್ಟ್ ಇಪ್ಪತ್ತು ಮೂರು

ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗಸ್ವಾಧೀನಾದ ಲಿಂಗಭೂಪ ಸಿರಸಂಗೀಶನು ॥ ೬ ॥

ಹಳ್ಳಿಯಲ್ಲಿ ವಾಸಿಸುವದು ಒಳ್ಳೇಯದಲ್ಲವೆಂದು ತಿಳಿದು
ಜಿಲ್ಹೆಯಾದ ಬೆಳಗಾಂವಿಯಲ್ಲಿ ಇದ್ದರು ।
ಜಿಲ್ಲಾ ಕಲೆಕ್ಟರ ನಾಮದಾರ ಕಮೀಶನರು ।
ರಾವಬಹದ್ದೂರ ಅರಟಾಳ ಇಲಾಖೆ ಸಾಹೇಬರು ।
ರಾಜಧಾನಿಕರೆಲ್ಲಾ ಮೇಜವಾನಿ ಮಾಡಿಸುತ್ತ ।
ಒಂಟಮುರಿಗ ಶ್ರೀಮಂತರೊಟ್ಟುಗೂಡುವರು ।
ತಲ್ಲೂರ ಯಜಮಾನ ನೇಮದಿಂದ ಸಂಗಡಿರುವರು ॥

ಬೆಳಗಾವಿ ಲಷ್ಕರ ನಡುವೆ ನಾಲ್ಕು ಎಕರೆ ಭೂಮಿ ।
ಕೊಂಡು ಹೊಳೆಯುವಂಥ ಬಂಗ್ಲೆಯನ್ನು ಕಟ್ಟಿಸಿರುವರು ।
ಮೇಲು ಮಾಡೆ ಅಶ್ವಶಾಲೆಯನ್ನು ಸಿದ್ಧಗೊಳಿಸಿಹರು ।
ಇಂದ್ರವನದಂತೆ ಪುಷ್ಪ ವೃಕ್ಷ ಹಚ್ಚಿಸಿರುವರು ।
ಸುತ್ತು ಮುತ್ತು ಕಂಪೌಂಡ ಉತ್ತರಕ್ಕೆ ಮಹಾದ್ವಾರ ।
ಮಧ್ಯದಲ್ಲಿ ಕೂಪವನ್ನು ತೋಡಿಸಿರುವರು ।
ಎಪ್ಪತ್ತೈದು ಸಾವಿರ ರೂಪಾಯಿ ಖರ್ಚು ಮಾಡಿದರು ॥

ಡಿ.ಪಿ. ಗುರುಸಿದ್ಧಾಖ್ಯ ಮತ್ತು ಅರಟಾಳ ಸಾಹೇಬರು
ಕಲ್ಪಿಸಿದ ಫಂಡಿನವರು ಸಹಾಯ ಕೊಟ್ಟಾರು ।
ಅಮ್ಮಣಗೇರಿಯೆಂಬ ಗ್ರಾಮವನ್ನು ಖರೀದಿ ಕೊಂಡಾರು ।
ತಮ್ಮ ಖುಷಿಯಿಂದ ಫಂಡಿಗಾಗಿ ಹಚ್ಚಿಕೊಟ್ಟಾರು ।
ಜೀವಂತನಿರುವಾಗ್ಗೆ ಅಮ್ಮಣಗೇರಿ ಉತ್ಪನ್ನ ಫಂಡಿನವರು ।
ಬೇರೆ ವಸೂಲಿ ಮಾಡಿಕೊಳ್ಳುವರು ।
ದೇಶಗತದಿಂದಾ ಪರಭಾರೆ ಮಾಡಿಬಿಟ್ಟಾರು ।
ಧಾರವಾಡ ಮಹಾಸಭಾಕ್ಕಾರು ಸಹಸ್ರಕೊಟ್ಟು
ಮೈಸೂರು ಇಲಾಖೆಕ್ಕೆ ಎರಡು ಸಾವೀರ ।
ಯುವರಾಜ ದರ್ಶನಕ್ಕೆ ಮುಂಬಯಿ ಸ್ವಾರಿ ಹೋದಾರು ।
ಶ್ರೀಮಂತೋಂಟಮುರಿ ಮಲ್ಲಪ್ಪಣ್ಣಾ ವಾರದರು
ಬೋರ್ಡಿಂಗ ಸಭೆಗೈದು ಮೂರು ಸಾವಿರ ಹಣವು ।
ಧೀರ ಮನಸಿನಿಂದ ಕೊಟ್ಟು ಬಂದಾರು ।
ಧೈರ್ಯ ಎಷ್ಟೆಂತ ಹೇಳಲಿಯ್ಯೊ ಕಾರ್ಯದಕ್ಷರು ॥

ದುರ್ಮುಖಿ ನಾಮ ದುಷ್ಕಾಳದಿ ಗೋರಾಬಾಳ
ಬಸಿದೋಣಿ ಸಿರಸಂಗಿ ಹೂಲಿಕಟ್ಟಿ ಬಡಜನರು ।

ಆಜು ಬಾಜು ಇರುವ ಸಣ್ಣ ಸಣ್ಣ ಹಳ್ಳಿಯವರು ।
ಕೂಳು ಇಲ್ಲದಾಗಿ ಬಾಯಿ ಬಿಡುವುದನ್ನು ಕಂಡಾರು ।
ದೂರದಿಂದ ಹರಿದು ಬಂದ ದೊಡ್ಡದೊಂದು ಹಳ್ಳಾಕಟ್ಟಿ ।
ಮೂರು ಮೈಲು ಅರಣಿಯನ್ನು ಹಾಕಿಸಿರುವರು ।
ಆರು ವರ್ಷ ಬಿಡದೆ ಕಾಮಗಾರಿ ಮಾಡಿಸಿರುವರು ।
ಮೂರು ಮೈಲು ನೀರು ಕಟ್ಟಿ ಯಂತ್ರದಿಂದಾ ನೀರು ಬಿಟ್ಟು ।
ಭತ್ತ ಕಬ್ಬು ಪೈರುಗಳನ್ನು ಬೆಳೆದುಕೊಂಡಾರು ।
ಕೆರೆಯ ಕೆಳಗೆ ಒಂದು ಬಂಗ್ಲೆಯನ್ನು ಕಟ್ಟಿಸಿರುವರು ।
ಪ್ಲೇಗ ರೋಗ ತಗಲಿದಾಗ ಅಲ್ಲಿ ಹೋಗಿ ನಿಲ್ಲುವರು ।
ಮೂರು ಲಕ್ಷ ಹಣದಿಂದ ಧೀರರು ಸ್ವತಃ ನಿಂತು ।
ನೋಡತಕ್ಕ ಕೆರೆಯನ್ನು ಕಟ್ಟಿಸಿರುವರು ।
ಹುಣಸಿ ಪಕ್ಕ ಮಾಡಿ ಹಣವನ್ನು ವೆಚ್ಚ ಮಾಡಿದರು ॥

**॥ಏರು॥**

ಕುಲದವನು ವಿದ್ಯೆ ಕಲಿತವನು ಸಿಕ್ಕರವ ಮಗನು ।
ಬಿ.ಎ. ಆಗಲಿಲ್ಲ ಒಬ್ಬವನು ।
ಉಕ್ಕಲೀ ಬಾಯಿ ಹೊಟ್ಟೇಲೆ ಹುಟ್ಟಿದೊಬ್ಬ ಮಗನು ।
ಹರುಷೆಷ್ಟು ಹೇಳಲಯ್ಯೊ ನಾನು ।
ಸವದತ್ತಿ ಪೇಟೆಯಾ ಸುತ್ತಿ ಹಂಚಿ ಸಕ್ಕರೆಯನು ।
ಪುತ್ರೋತ್ಸವದ ವರ್ಣನವನು ॥

ಹತ್ತು ದಿವಸ ಜೀವದಿಂದ ಇತ್ತ ಕೂಸು ।
ಊರ ಊರ ಪತ್ರ ಬರೆದು ಮನುಷ್ಯರನ್ನು ಕಳಿಸಿಕೊಟ್ಟಾರು ।
ಎತ್ತಿನಂಥ ಕೈ ಇಳವಲಿಲ್ಲಾ ದಾನ ಮಾಡಿದನು ।
ಶಿಲ್ಕ ಇದ್ದಷ್ಟು ಹಣವೆಲ್ಲಾ ಹಂಚಿ ಬಿಟ್ಟಾನು ।
ಹತ್ತೊಂಭತ್ತು ನೂರಾ ಆರು ಆಗಸ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನಾದ ಲಿಂಗಭೂಪ ಸಿರಸಂಗೀಶನು ॥ ೭ ॥

ಸಾರ್ವಜನಿಕ ಮಹಾಸಭಾ ಪೂರ್ವದಲ್ಲಿ
ಬಸವರಾಜಾ ನೆರವೇರಿಸಿದ್ದನೆಂದು ಹೇಳುತ್ತಿರುವರು ।
ಧಾರವಾಡ ಜನರು ಪ್ರಥಮದಲ್ಲಿ ನಿರ್ಮಿಸಿದರು ।
ಪೂರ್ವಿಪಾಲಯ ಲಿಂಗೇಂದ್ರ ಅಧ್ಯಕ್ಷರು ।
ಸರ್ವಜನರ ಮಧ್ಯದಲ್ಲಿ ಸೂರ್ಯನಂತೆ ಒಪ್ಪಿದಾನು ।

ಧೈರ್ಯದಿಂದ ಭಾಷಣವನ್ನು ಸೂಚಿಸಿರುವರು ।
ಮಹಾಸಭಾ ಚರಿತ್ರದಲ್ಲಿ ಇದನು ಛಾಪಿಸಿರುವರು ॥

ಎಕ್ಕೋಣಿ ಶೇ ಪಾಚ ಯಕಣಾತೀಸ
ಡಿಸೆಂಬರಕ್ಕೇಕಾಗಿ ಬೆಂಗಳೂರ ವೀರಶೈವರು ।
ಎರಡನೆ ಮಹಾಸಭೆಯನ್ನು ತಾವು ನಿಶ್ಚೈಯಿಸಿದರು ।
ಸಭೆಗಧ್ಯಕ್ಷರಾಗಲಿಕ್ಕೆ ಕೇಳಿಕೊಂಡಾರು ।
ಶ್ರೀಮಂತ ಒಂಟಮುರಿ ಶ್ರೀಮಂತ ವಾರದ ।
ರಾವಬಹಾದ್ದೂರರಟಾಳರೊಲ್ಲೆಂದರು ।
ಸಭಾ ಸೆಕ್ರೆಟರಿ ನಂಜುಂಡ ಡಾಕ್ಟರರು ॥

ನವ್ಹಂಬರವರೆಗೆ ಸಭಾ ನಾಯಕರಿಲ್ಲದಾಗಿ
ಚೇರಮನ್ ಸಭಿಕರು ಬೇಡಿಕೊಂಡಾರು ।
ಸಭಾಧೀಶನಾಗಲಿಕ್ಕೆ ವಿನಯ ಮಾಡಿಕೊಂಡಾರು ।
ಅನಿರ್ವಾಹ ಅಧ್ಯಕ್ಷ ವಹಿಸಿಕೊಂಡಾರು ।
ಒಡೆಯನಾಗಲಿಕ್ಕೆ ರಾಜ ಒಡಂಬಡಲು ।
ಸಹಾಯಕರಿಗೆ ಧನದ ಕುಂಭ ಕಂಡ ಬಡವನಂತೆಯಾದಾರು ।
ಧನ್ಯರಾದೆವೆಂದು ಮಾನ್ಯರನ್ನು ಕರಿಸಿಕೊಂಡಾರು ॥

ಸ್ವಾರಿದೇಹರಕ್ಷಕರು ಪಾಕಸ್ವಾದೀನೀಕರೆಲ್ಲಾ
ಪಾರಮಾರ್ಥ ಕಾರ್ಯಕ್ಕಾಗಿ ಸಾಗಿ ಪೋದಾರು ।
ಅಣ್ಣಿಗೇರಿ ಸ್ಟೇಶನಕ್ಕೆ ರೈಲು ಹತ್ತಿಕೊಂಡಾರು ।
ಹುಬ್ಬಳ್ಳಿ ಹಾವೇರಿ ಬ್ಯಾಡಗಿ ರಾಣೇಬೆನ್ನೂರು ।
ಬೆಂಗಳೂರ ದೊಡ್ಡ ದೊಡ್ಡ ನಿಲ್ವನೆಯ ಗ್ರಾಮದವರು ।
ದರ್ಶನಕ್ಕೆ ಐದಿದ್ದರು ।
ಪುಷ್ಪ ಮಾಲೆಯಿಂದ ಅಪ್ಪಿಕೊಂಡು ಸಾಗಿ ಪೋದಾರು ॥

ಪುಣ್ಯ ಕಾಲದಲ್ಲಿ ಅಗ್ರಗಣ್ಯರೆಲ್ಲಾ ವಿನಯದಿಂದ
ಮಾನ್ಯನಂ ನಿರೀಕ್ಷಿಸುತ್ತಾ ನಿಂತು ಕೊಂಡಾರು ।
ಸೂರ್ಯನುದಯ ಕಾಲದಲ್ಲಿ ಗಾಡಿಯನ್ನಿಳಿದರು ।
ಕಮೀಶನ್ನರಾದ ಬಹುಮಾನ್ಯ ಪುಟ್ಟಣಾಖ್ಯರು ।
ಸರ್ವಸಭಾ ಜನರೆಲ್ಲ ಗರ್ವಹರಣರಾಗಿ ತಾವು ।
ಹರುಷವಾಯಿತೆಂದುಕೊಂಡು ಎದುರುಗೊಂಡರು ।
ಈ ವೈಭವಕ್ಕೆ ದೇವತೆಯರು ಪುಷ್ಪ ಕರೆದರು ॥

ಬೆಂಗಳೂರ ಮಹನೀಯರು ಲಿಂಗಭೂಪರನ್ನು
ಮತ್ತು ಸಂಗಡಿರುವ ತಲ್ಲೂರ ಶ್ರೀಮಂತರು ।

ರಾವಬಹದ್ದೂರ ಅರಟಾಳ ರುದ್ರಗೌಡರು ।
ಸರ್ವ ಮಂಡಳಿಯ ಮೆರವಣಿಗೆಯನ್ನು ತೆಗೆದರು ।
ಇಷ್ಟೆಂದು ಹೇಳಲಾರೆ ಕೃಷ್ಣನಾಲೋಚಿತನ ।
ನೈಷ್ಠಿಯಿಂದ ಬಂಗ್ಲೆಯಲ್ಲಿ ಇಳಿಸಿಕೊಂಡರು ।
ಈ ಸೃಷ್ಟಿಯಲ್ಲಿ ಕಾಣರಿಂಥಾ ಪುಣ್ಯವಂತರು ॥

ಮೂರು ದಿವಸ ಸಭಾದಲ್ಲಿ ಧೀರರು ಸ್ವಮುಖ
ಲೆಕ್ಚರಿಯನು ಕೊಟ್ಟರಲ್ಲಿ ಘಾಬರ್‍ಯಾದರು ।
ಪೂರ್ವ ಪುಣ್ಯದಿಂದ ಕಂಡೆವೆಂದು ಹೊಗಳಿಕೊಂಡರು ।
ಜನರ ಸಂಘವೆಂಬ ನಕ್ಷತ್ರಕ್ಕುಡುರಾಜರು ।
ಬೃಹಸ್ಪತಿಯ ಮುಖಕ್ಕೆ ಕಾಳಿದಾಸ ರಸನೆ ಸರಸ್ವತಿಯು
ಸ್ವರದಲ್ಲಿ ಮಾಯವಾದರು ।
ವಕ್ರ ತುಂಡ ತಾನು ಜ್ಞಾನದಲ್ಲಿ ಮುಳುಗಿಕೊಂಡಾರು ॥

**॥ಏರು॥**

ಮೈಸೂರ ಸೀಮೆ ಕಾರಭಾರ ಮಾಳ್ಪ ಪೂರ್ಣಯ್ಯ ಸಭೆಗೆ ಬಂದಿದ್ದಾ ।
ಭಾಷಣ ಕೇಳಿ ಬೆರಗಾದಾ ।
ಮಹಾರಾಜ ಅರಸು ಚಾಮರಾಜ ವಾರ್ತೆ ಕೇಳಿದಾ ।
ಭೆಟ್ಟಿಗಾಗಿ ಕರಿಸಿಕೊಂಡಿದ್ದಾ ।
ರಾಜಮಂದಿರಾ ಉತ್ತರದ ಪ್ರಜೆಯ ನೋಡಲುಮ್ಮೇದಾ ।
ಪರವಾನಿಗೆಯನು ಕೊಡಿಸಿದಾ ॥

ಮೇಘರಾಜಾ ಪುಷ್ಪ ಕರೆದಾ ವಾಯುರಾಜಾ ವಾಸನಾದಾ ।
ಅಗ್ನಿದೇವಾ ಶಾಂತಿಯನ್ನು ತಾಳಿಕೊಂಡಾನು ।
ಸೂರ್ಯಕಿರಣವನ್ನು ಮಂಜಿನಲ್ಲಿ ಇಳಿಸಿಬಿಟ್ಟಾನು ।
ಚಂದ್ರಶಾಂತಸ್ವರೂಪ ನೋಡಿ ಕ್ಷಯವಾದನು ।
ಹತ್ತೊಂಭತ್ತು ನೂರಾ ಆರು ಆಗಸ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು ॥ ೮ ॥

ಹಿಂದು ಸಭಾ ಡ್ರೆಸ್ ಬೇರೆ ನಿಲುವಂಗಿ ಪಾಗೋಟಿ
ಶ್ವೇತ ಶೆಲ್ಲೆ ಮೈಯ ಮೇಲೆ ಹಾಕಿಕೊಳ್ಳುವರು ।
ಚರ್ಮ ಜೋಡು ಮೆಟ್ಟು ಛತ್ರಿಯನ್ನು ಹಿಡಿಸಿಕೊಳ್ಳುವರು ।
ಸಾದಾಧಡಿ ಧೋತರ ಉಟ್ಟು ಉಲ್ಪಿ ಬಡಿಗಿ ಹಿಡಿಯುವರು ।
ಜೋಡು ಎತ್ತು ಹೂಡಿದಂಥಾ ಡಮಣಿಯಲ್ಲಿ ಕೂಡ್ರುವರು ।

ಸಂಗಡಿರುವರು ಉಕ್ಕಲೀ ಭೀಮರಾಯರು ।
ಆಪ್ತ ಜನರೆಲ್ಲಿವರ ಮೇಲೆ ಪ್ರೀತಿ ಇದ್ದರು ॥

ರಾಜಧಾನಿ ಸಿಸ್ತ ಬೇರೆ ಶರ್ಟ ಫಾರ್ಸಿಕೋಟಗಳು
ಪಲ್ ಪಾಯ್ಮೋಜ ಹಾಕಿಕೊಂಡು ಬೂಟು ಮೆಡುವರು ।
ಪಾಟ್ಲೋನುಟ್ಟುಕೊಂಡು ಜರದ ಮಂದಿಲ ಸುತ್ತಿಕೊಳ್ಳುವರು ।
ಕಟ್ರಾ ಬಿಗಿಸಿ ಬತ್ತಲಕುದುರೆಯನ್ನು ಹತ್ತುತ್ತಿದ್ದರು ।
ವಿಕ್ಟೋರಿಯ ರಥ ಟಾಂಗೆಕಶ್ವಗಳನ್ನು ಹೂಡಿಕೊಂಡು ।
ವಾಸಮಾಡುತಿದ್ದರೀ ಶ್ರೀಮಂತರು ।
ಮನಸಿಗೆ ಬಂದದ್ದರ ಮೇಲೆ ಕೂಡ್ರುವರು ॥

ಆದರ ಸತ್ಕಾರವಿತ್ತು ಅತಿಥಿ ಸನ್ಮಾನವಿತ್ತು ಆನರೇಬಲ್
ಬಹುಮಾನ ಪಡಕೊಂಡನು ।
ಸುಭೇದಾರ ಹಕ್ಕು ಎರಡನೇ ವರ್ಗ ಮ್ಯಾಜಿಸ್ಟ್ರೇಟರು ।
ಕೋರ್ಟ ನ್ಯಾಯ ಮಾಡುವವರು ಇವರು ಸಬ್‌ಜಜ್ಜರು ।
ಇಂಗ್ರೇಜಿ ಹದ್ದಿನಿಂದಾ ವಾದಿ ಪ್ರತಿವಾದಿಯರು ।
ಬೇಕಂತ ನ್ಯಾಯವನ್ನು ಹಾಕಿಕೊಳ್ಳುವರು ।
ಅನ್ಯಾಯವಾಗುವದಿಲ್ಲ ಪಾಂಡು ಪುತ್ರನೆಂದು ತಿಳಿದರು ॥
ಹತ್ತು ಹಳ್ಳಿಯೊಳಗೆ ಇರುವ ರೈತ ಜನರ ಕ್ಷೇಮವನ್ನು
ಪ್ರೀತಿಯಿಂದ ಕೇಳಿ ಸಂತೋಷವಾಗುತಿದ್ದರು ।
ಅಂಗರಹಿತ ಕುರುಡ ಕುಂಟ ಬಡ ಜನರನು ।
ಬೇರೆ ಶಾಲೆ ಕಟ್ಟಿ ಡೋಲನಿಟ್ಟು ಪಾಲಿಸಿದನು ।
ರಾಜ ಪೇಚಿನಲ್ಲಿ ಸಿಕ್ಕ ನಿರಪರಾಧಿಯನ್ನು ತಾನು ।
ಪೂಜ್ಯ ಬುದ್ಧಿಯಿಂದಾ ಹೇಳಿ ಬಿಡಿಸುತ್ತಿದ್ದನು ।
ಲಂಚ ತಿನ್ನುವಂಥ ಪಾಪಿಯನ್ನು ಪಾತ್ತಲಕ್ಕಿದನು ॥

ಬಸವರಾಜನೆಂದು ನಾನು ವಸುದಿಯಲ್ಲಿ ಸಾರುತಿದ್ದೆ
ಮಂತ್ರಿಯಲ್ಲ ಸ್ವತಃ ಈತಾ ರಾಜನಿದ್ದನು ।
ಕರ್ಣನಲ್ಲ ತಂದೆ ತಾಯಿಯಲ್ಲ ಜನಿಸಿದಾತನು ।
ಧರ್ಮರಾಜನೆನ್ನಲಿಕ್ಕೆ ಬಂಧು ಇಲ್ಲದಾತನು ।
ಬಳಿಚಕ್ರನಲ್ಲ ನಿವ ನಿಗರ್ವಿಯಾದಲ್ಲಿ ಕ್ಲೈವನಲ್ಲಾ ಪರದೇಶ ನೌಕರನು
ಶಿವಾಜಿಯೆಂದೆ ಇದ್ದಿದ್ದಿಲ್ಲ ವಿದ್ಯಾಹೀನನು ॥

ಪ್ರಬಲನಾದ ಬಾದಶಹ ಅಕಬರನೆನ್ನಲಿಕ್ಕೈ ಸತಿಯು
ಪರಜಾತಿಯವಳಾಗಲಾರನು ।
ಹರಿಶ್ಚಂದ್ರನೆಂದೆ ನೀತನಿಗಿದ್ದಿದ್ದಿಲ್ಲ ಮಗನು ।

ಹೊನ್ನು ಹೆಣ್ಣು ಮಣ್ಣು ಮೂರು ತಾ ಅಳಿತಾತನು ।
ಮುವತ್ತೆರಡು ವರ್ಷತನಕಾ ಮಾಡಿ ಹೋದ ಕ್ರೀಡೆಯನ್ನು ।
ಘಳಿಗೆ ತಾಸಿನಲ್ಲಿ ನಾನು ಹೇಳಲಾರೆನು ।
ಅಳಿದು ಬಿಟ್ಟ ಕಾಯಾ ಉಳಿಸಿದನು ಕೀರ್ತಿಯನು ॥

**॥ಏರು॥**

ಸುಜನರಿಗೆ ಆಶ್ರೀತಾ ಧರೆಗೆ ತವರ ಮನೆಯಾಗಿ ।
ಉಪಕಾರ ಮಾಡಿದನು ಸಾಗಿ ।
ಭವದಲ್ಲಿ ಜನಿಸಿ ಬಂದ್ನಲ್ಲ ಸಾರ್ಥಕನಾಗಿ ।
ಮಹಾಪುರುಷ ಪ್ರಪಂಚಕ ಯೋಗಿ ।
ಲಿಂಗೇಂದ್ರನಲ್ಲ ದೇವೇಂದ್ರ ಕರುಣಕನಾಗಿ ।
ಕಣ್ಣಾರೆ ಜಗಕೆ ತೋರಿಯಡಗಿ ।
ಸತಿ ಸುತ ಸುಖಮಾತ್ರ ಅತಿ ಮಾತ್ರ ಕಾಣಲಿಲ್ಲ
ಪಾರಮಾರ್ಥದಲ್ಲಿ ಹೊತ್ತು ಕಳೆದು ಬಿಟ್ಟಾನು ।
ಯೋಗ್ಯ ಸ್ಥಾನ ನೋಡಿ ದಾನವನ್ನು ಕೊಡುತ್ತಿದ್ದನು ।
ಭಾಗ್ಯದಾಶೆಯಿಲ್ಲ ದೂರದೃಷ್ಟಿ ಲಿಂಗಭೂಪನು ।
ಹತ್ತೊಂಬತ್ತು ನೂರಾ ಆರು ಆಗಸ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನಾದ ಲಿಂಗಭೂಪ ಸಿರಸಂಗೀಶನು ॥ ೯ ॥

ಭಾಗೀರಥಿ ಬಾಯಿಯವರು ಮಹಾಪತಿವ್ರತೆಯರು
ನಿತ್ಯ ಪುರುಷನ ಪಾದ ತೊಳೆದು ನೀರು ಕುಡಿಯುವರು ।
ಪತಿಯ ಎಂಜಲಿಲ್ಲದ ವಿನಃ ಉಗುಳು ಸಹ ನುಂಗರು ।
ಪತಿಯ ಮುಂದೆ ದೇಹವನ್ನು ತ್ಯಾಗಮಾಡಿದರು ।
ಸೀತಾ ಮಂಡೋದರಿ ಅರುಂಧತಿ ದ್ರೌಪತಿ
ಪ್ರೀತಿಯಿಂದ ಇವರಲ್ಲಿ ವಾಸ ಮಾಡಿದರು ।
ಅಹಿರಸಂಗ ತಿಮ್ಮನಗೌಡ ಇವರ ಅಗ್ರಜರು ॥

ಅವರಸಂಗ ಬಾಯಿಯವರು ದೈವದಿಂದ
ಗರ್ಭಿಣಿಯಾಗಿ ಸಿರಸಂಗಿಯ ಸ್ಥಾನಾಂತರಾಗಲೆಂದರು ।
ವಿಜಾಪುರದಲ್ಲಿ ಪ್ರಸವದ ಕಾಲ ನಿಶ್ಚಯಿಸಿದರು ।
ವಿಧಿಯು ಎತ್ತ ಹೋಗಲು ಬೆನ್ನು ಹತ್ತುವದ್ಯಾರು ಕಂಡಾರು ।
ತಿಕ್ಕೋಟಿ ಉಕ್ಕಲಿಗೌಡಾ ಇಂಗಳೇಶ್ವರ ರಾಯನಗೌಡಾ
ಇಂಡಿ ಗುರಪ್ಪನವರು ತಂದಾರು ।
ಸಕ್ತ ಅವ್ವನವರ ಸರ್ಬಾರೆಯನ್ನು ಸ್ವಂತ ಮಾಡಿದರು ॥

ಐಶ್ವರ್ಯೇನು ಹೇಳುವುದು ಈಶ್ವರಿತ್ತ ಧನಿಕತನಾ
ಅಶ್ವವಾಹನೀಗಳೆಲ್ಲಾ ಸಂಗಡಿದ್ದರು ।
ದಾಸೀ ದಾಸರೇಸು ಮಂಡಿ ಪಾಕ ಸಾಧನೀಕರು ।
ಶಹಾಪೂರ ಪೇಟೆಯಲ್ಲಿ ಮನೆಯ ಬಾಡಗಿ ಹಿಡಿದರು ।
ನೂರಾರು ಜನಕ್ಕಿಂತ ಹೆಚ್ಚಿತ್ತು ಸರಬರಾಯ
ವಿಜಾಪುರದಲ್ಲಿ ಭರದಿವಾಸ ಮಾಡಿದರು ।
ಸರ್ವಜನರಿಗೆಲ್ಲ ಗೊತ್ತಿದ್ದದ್ದು ಯಾರು ಅರಿದವರು ॥

ಅಪ್ಪಾ ಸಾಹೇಬ ದೊರೆಗಳವರು ಎಪ್ಪತ್ತು ಸಾವಿರ
ನೋಟ ತಪ್ಪದಿಂದ ತೆಗೆದುಕೊಂಡು ಸ್ವಂತ ಬಂದಾರು ।
ಪುತ್ರೋತ್ಸವಕ್ಕೆ ಖರ್ಚಿಗವರು ಸಿದ್ಧವಾದರು ।
ದಾಸೋಗಿಟ್ಟಂತೆ ವನದಲ್ಲಿ ಧರ್ಮರಾಯರು ।
ಕರ್ಪುರಂಥ ದೊರೆಯ ಮುಖ ಕಪ್ಪಾಗು ಕಾಲಕ್ಕೆ
ಎದ್ದು ಬಂದಲ್ಲದ್ದು ಬಡಿದು ಖಿನ್ನವಾದರು ।
ಸತಿಯ ಚಿಂತೆಯಿಂದ ಭ್ರಾಂತರಾಗಿ ಆಶೆನಳಿದರು ॥

ಭಾಗೀರಥಿಬಾಯಿಯರಿಗೆ ಆಗಿತ್ತೆಂಟು ತಿಂಗಳ ಗರ್ಭಿ
ಶನಿ ಹನ್ನೊಂದು ಸ್ಥಾನಕ್ಕೈದನು ।
ಆಗ ನೇತ್ರ ಧೂತರನ್ನು ಕಳಿಸಿ ಕರಿದು ವೈದನು ।
ಭೋಗ ಏನ ಹೇಳಲಯ್ಯೋ ಬ್ರಹ್ಮ ಹಾಗೆ ಬರೆದಾನು ।
ಹುಟ್ಟಿದಾರಭ್ಯದಿಂದ ಕಟ್ಟಕಡೆಯಾಗುತನಕಾ
ಕಷ್ಟದಲ್ಲಿ ಕಾಲಕಳೆದು ಖ್ಯಾತಿ ಹೊಂದಿದನು ।
ಸೌಖ್ಯವಿದ್ದರೆಷ್ಟು ಕೀರ್ತಿ ಫಳಿಸುವಾ ಹೇಳಲಾರೆನು ॥

ವೀರಶೈವ ಸಂಘಕ್ಕೆಲ್ಲ ಗುಂಪು
ಕೊಡಲಿಕ್ಕೆ ವ್ಯಾಪಾರ ಮಾರ್ಗವೆಂದು ತಿಳಿದಿದ್ದರು ।
ಬಹು ಜನರೆಲ್ಲಾ ಆಗಲೆಂದಾ ಶೇರದಾರರು ।
ಈ ಸಂಪರ್ಕದಿಂದ ಪ್ರೀತಿ ಹೆಚ್ಚಲೆಂದಾರು ।
ದೊಡ್ಡ ದೊಡ್ಡ ಗ್ರಾಮಕ್ಕೊಂದು ಅಂಗಡಿಯ ಸ್ಥಾಪಿಸಿ
ದೊಡ್ಡದೊಂದು ಕಂಪನಿ ಕಲ್ಪಿಸಿದರು ।
ಸದಾಕಾಲದಲ್ಲಿ ಚಿಂತಿಸುತ್ತ ಕುಳಿತಿದ್ದರು ॥
ಕಲ್ಪಿಸಿದ ಹೇತುವನ್ನು ಸ್ವಲ್ಪಕಾಲದಲ್ಲಿ ತಾನು
ಬಲ್ಲಜನರ ಕೂಡಿಕೊಂಡು ಸ್ಥಾಪಿಸಿದನು ।
ಬೆನಕನಕೊಪ್ಪ ಬಾಪುಗೌಡ ಹೊಂಗಲ ಹವಾಲದಾರನು ।
ಶೇಗುಣಿಸಿ ಭೀಮನಗೌಡ ತಾಳಿಕೋಟಿ ಗುರಪ್ಪಣ್ಣಾ

ಏಳು ಮಂದಿ ತುರ್ತ ಶೇರ ಹಾಕಿಸಿಟ್ಟಾನು ।
ವಿಜಾಪುರದ ಅಂಗಡಿ ಪ್ರಥಮದಲ್ಲಿ ಸುರುವು ಮಾಡಿದನು ॥

||ಏರು||

ವಿಜಾಪುರದಲ್ಲಿ ಏಳೂರ ಗೌಡರ ಅಂಗಡಿ ।
ಇಟ್ಟಾನ ಇವರನ್ನೆಲ್ಲ ಕೂಡಿ ।
ಕಂಪನಿ ತೆಗೆದ ಮಹಾಜ್ಞಾನಿ ಪಾಯಾಹಾಕಿ ನೋಡಿ ।
ಬರಲಿಲ್ಲ ಮಾತು ಕೈಗೂಡಿ ।
ಅಷ್ಟರೊಳಗೆ ಆಯ್ತು ನೋಡು ಬೆಳಗ ಶಿವನ ಪಾದ ಕೂಡಿ ।
ಕಂಪನಿ ಆಯ್ತು ಅಡತಿ ಅಂಗಡಿ ॥

ತುರ್ತುಕಡಿಮೆ ಬಿದ್ದರಕಮು ಭರ್ತಿ ಮಾಡತೀನಿ ಅಂತಾ
ಶರ್ತಿನಿಂದ ಸುರುವಾತ ಮಾಡಿದ್ದನು ।
ಸಿದ್ದಿಗ್ಹೋಗಲಿಲ್ಲ ನಟ್ಟು ನಡುವೆ ಕೈಬಿಟ್ಟನು ।
ಹತ್ತೊಂಬತ್ತು ನೂರಾ ಆರು ಅಗಷ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನಾದ ಲಿಂಗಭೂಪ ಸಿರಸಂಗೀಶನು ॥ ೧೦ ॥

ಬೆಳ್ಳೇರಿ ವಸೂಲಿಗಾಗಿ ಏಳು ದಿವಸ ಹೋಗಿ ನಿಂತ
ಕಾಳಬಂದು ಒದಗಿತಯ್ಯಾ ಊಟದಲ್ಲಿ ।
ಅನ್ನ ಜೀರ್ಣವಾಗಲಿಲ್ಲ ಹೊಟ್ಟೆಯುಬ್ಬತಲಿ ।
ಕೈಕಾಲು ತಲೆಶೂಲಿ ಹಾಕಿ ಮಲಗುತಲಿ ।
ನಳಿನಳಿ ಅಂತಾ ತಿರುಗಿ ಬಳಲುತ ಬಂದಾರು
ತಿಂಗತಿಂಗಳಲ್ಲಿ ಬೇನೆ ಹೆಚ್ಚುತಲಿ ।
ಕ್ಷಯರೋಗವಾಗಿ ಮಾಯ ಬಲಿ ಒದಗುತಲಿ ॥

ದೇಶಿವೈದ್ಯರಿಂದ ಬೇನೆ ವಾಸಿಯಾಗಲಿಲ್ಲಾ
ಗೋವೆಯ ಡಾಕ್ಟರರಿಂದಾ ಕಷಾಯ ತೆಗೆದುಕೊಂಡಾರು ।
ಮಿರ್ಜಿ ಜಮಖಂಡಿ ವೈದ್ಯರು ನಿಲುವ ನಿಂತರು ।
ನಿತ್ಯ ನಿತ್ಯ ಬೇನೆ ಹಚ್ಚಿ ಕೃಶವಾದರು ।
ಅಕ್ಟೋಬರ ತಿಂಗಳಿಂದಾ ಅಗಸ್ಟ ತಿಂಗಳತನಕಾ
ಹದಿನೈದು ತಿಂಗಳ ಬೇನೆ ತಾಳಿಕೊಂಡರು ।
ವಾಂತಿ ಶೌಚಾದಿ ಕ್ಷೀಣವಾಗಿ ಧೈರ್ಯಗುಂದಿದರು ॥

ಬೇನೆಯ ಸ್ವರೂಪವನ್ನು ತಿಳಿದುಕೊಂಡು
ಅಂತ್ಯಕಾಲ ಒದಗಿತೆಂದು ಮರಣ ಪತ್ರ ಬರೆದು ಇಟ್ಟಾರು ।

ಸಾವು ಎರಡು ತಿಂಗಳಿರತ ಬರಹ ಸುರುವು ಮಾಡಿದರು ।
ಮೃತ್ಯು ಪತ್ರ ಬರೆದು ಪೆಟ್ಟಿಗೆಯಲ್ಲಿ ಮುದ್ರೆ ಹಾಕಿದರು ।
ಬೆಳಗಾಂವಿ ಅಧಿಕಾರಿಯಾದ ಕಲೆಕ್ಟರರ ಸ್ವಾಧೀನಕ್ಕೆ
ಸ್ವತಃ ಹೋಗಿ ಪೆಟ್ಟಿಗೆ ಕೊಟ್ಟು ಬಂದಾರು ।
ಸ್ಥಾನಾಂತರ ಆಗಲಿಕ್ಕೆ ಬೆಳಗಾಂವಿ ಬಿಟ್ಟರು ॥
ನವಲಗುಂದದಲ್ಲಿ ಹೋಗಿ ಒಂದು ತಿಂಗಳಿದ್ದರಯ್ಯಾ
ಕೆರಿಗಾಗಿ ರೈತರ ಭೂಮಿ ತಕ್ಕೊಂಡಿದ್ದರು ।
ಅಲ್ಲಿ ಕರಿಸಿ ಇಚ್ಛಾ ಜಮೀನವನ್ನು ಕೊಟ್ಟು ಬಿಟ್ಟರು ।
ಪುರವಣಿ ಉಯಿಲ್ ಒಂದು ಬರೆದು ಮೃತ್ಯು ಪತ್ರ ಮುಗಿಸಿದರು ।
ರಾವಸಾಹೇಬ ದೇವಣಾರ್ಯ ನವಲಗುಂದ ಸುಭೇದಾರ
ಅಂತಕಾಲದಲ್ಲಿ ಅವರ ಹತ್ತರಿದ್ದರು ।
ಟ್ರೇಝುರಿ ಕೀಲಿಯನ್ನು ಅವರ ಸ್ವಾಧೀನಕ್ಕೆ ಕೊಟ್ಟರು ॥

ಮರಣ ಕಾಲದಲ್ಲಿ ತಾನು ಕರಿಸಿಕೊಂಡನು
ಪ್ರಿಯಮಿತ್ರ ರಾವಬಹಾದ್ದೂರ ಅರಟಾಳ ಸಾಹೇಬರನ್ನು ।
ನವಲಗುಂದ ಸುಭೇದಾರ ಸಿದ್ದಪ್ಪಣ್ಣನನ್ನು ।
ರಾಯನಗೌಡ ಪಾಟೀಲ ಇಂಗಳೇಶ್ವರ ಹತ್ತರಿದ್ದಾನು ।
ಚೌತಿ ಗುರುವಾರ ದಿವಸ ಐದುಗಳಗಿ ಹೊತ್ತು
ಏರಿ ಸ್ವರ್ಗ ಸೋಪಾನ ಕಣ್ಣು ತೆರೆದು ನೋಡಿದನು ।
ಹರನ ಸ್ಮರಣೆಯಿಂದಾ ಮೇಲಕ್ಕೇರಿ ಮಾಯವಾದನು ॥

ತಾರಿನಿಂದ ಮರಣವಾರ್ತೆ ಸಂಸ್ಥಾನಕ್ಕೆಲ್ಲಾ ತಿಳಿಸಿ
ದಿಕ್ಕದಿಗಂತಕೆಲ್ಲಾ ಹರಿಸಿಬಿಟ್ಟರು ।
ಪಾಹರೆ ಮಾಂಡಲಿಕ ರಾಜರೆಲ್ಲಾ ಬಂದು ಮಾಡಿದರು ।
ಮುಂಬಯಿ ಕನ್ಯಾಕುಮಾರಿ ಜನರು ಹೌಹಾರಿದರು ।
ವ್ಯಾಪಾರ ಕಚೇರಿಯಲ್ಲಾ ಬಂದ ಮಾಡಿ ದುಃಖದಲ್ಲಿ
ಸರ್ವ ಜನಾಂಗ ಮುಳುಮುಳುಗಿ ಎದ್ದಾರು ।
ದೇವರನ್ಯಾಯ ಮಾಡಿದ್ದಕ್ಕೆ ಯಾರೇನು ಮಾಡ್ಯಾರು ॥

**॥ಏರು॥**

ನವಲಗುಂದ ಸುಭೇದಾರ ಬಂದು ಪ್ರೇತಯೆರಿಸಿದಾ ।
ಪೂರ್ವಜನರ ಕೂಡ ಕಲಿಸಿದಾ ।
ದಾನ ಧರ್ಮ ಜಾತಿಯ ಕರ್ಮ ಪ್ರಕಾರ ಮಾಡಿದಾ ।
ದ್ವಿಸಹಸ್ರ ಖರ್ಚಿಗಿಟ್ಟಿದ್ದಾ ।

ಸಾಯುವ ಮುಂದ ಅಳುವದ ಬಂದ ಮಾಡಿ ತಾ ಹೋದಾ ।
ಶಿವನಾಮ ಸ್ಮರಿಸಿ ದೇಹ ಒಗೆದಾ ॥

ಶರಣನಾದ ಲಿಂಗದೊರೆಯು ಮರಣ ಪತ್ರದಲ್ಲಿ
ತನ್ನ ಜನ್ಮ ಗೃಹದಲ್ಲೊಬ್ಬನನ್ನು ದತ್ತಕ ಮಗನು ।
ಮಾಡಿಕೊಂಡನೆಂಬ ಸಂಶಯ ಸೇರಿ ಸರ್ವರನ್ನು ।
ಅಂತ ತಿಳಿಯಲಾರದಾತ ಲೇಖಿ ಬರೆದು ಇಟ್ಟಾನು ।
ಹತ್ತೊಂಭತ್ತು ನೂರಾ ಆರು ಅಗಸ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನಾದ ಲಿಂಗಭೂಪ ಸಿರಸಂಗೀಶನು ॥ ೧೧ ॥

ದೇಹ ಸ್ಥಾಪನೆಯಾದ ಮೇಲೆ ಮೃತ್ಯು ಪತ್ರ ಮುದ್ರಿಸುವದಕೆ
ಹಿತದ ಜನರು ಜಿಲ್ಹೆಯಲ್ಲಿ ಹೋಗಿ ನಿಂತರು ।
ಉಯಿಲ್ ಮಹಿಮ ತಿಳಿದುಕೊಳ್ಳಲಿಕ್ಕೆ ಹಂಗು ದೊರಿದರು ।
ರಾವಬಹದ್ದೂರವರು ಅರ್ಜಿಕೊಟ್ಟು ಪೆಟ್ಟಿಗೆ ತೆಗಿಸಿದರು ।
ಮೆಹರ್ಬಾನ ಕಲೆಕ್ಟರವರು ಮೊಹರು ಒಡೆದು ನೋಡಿದರು ।
ಮಹಾರಾಷ್ಟ್ರ ಭಾಷೆಯಲ್ಲಿ ಬರೆದಿದ್ದರು
ದೇವ ಬರಹವನ್ನು ರಜಿಸ್ಟರ ಮಾಡಿಸಿದರು ॥

ಹಿಂದಕ್ಕೆ ದ್ವಾಪಾರದಲ್ಲಿ ಗಾಂಧಾರಿ ಗರ್ಭದೊಳಗೊಂದು
ಕುಂಭದಲ್ಲಿ ನೂರಾವೊಂದು ಮಕ್ಕಳಿದ್ದರು ।
ಬ್ರಹ್ಮನಂದನ ನಾರದ ಸ್ತ್ರೀರೂಪವಾದನು ।
ಕೃಷ್ಣನಿಂದಾ ಆಗಿ ಅರವತ್ತು ಸಂವತ್ಸರು ।
ಎಂದು ನಾವು ಕಥೆಯನ್ನು ಇಂದಿನವರೆಗೆ ಕೇಳುವೆವು ।
ಪ್ರತ್ಯಕ್ಷವಾಗಿ ಕಂಡಿಲ್ಲ್ಯಾರ್ಯಾರು ।
ಇದು ಒಂದೇ ನೋಡಿದೆವು ಎಂಥಾ ಮಹಾತ್ಮರು ॥

ಶ್ರೇಷ್ಠನಾದ ಲಿಂಗಭೂಪನ ಹೊಟ್ಟೆಯೊಳಗಿನ ಕುವರರನ್ನು
ಹಸ್ತದಿಂದಾ ತೆಗೆದು ದಸ್ತಿನಲ್ಲಿ ಇಟ್ಟರು ।
ಜಿಲ್ಲಾ ಅಧ್ಯಕ್ಷ ಒಡೆದು ನೋಡಿ ಘಾಬರ್‍ಯಾದರು ।
ಮುವತ್ತೈದು ಲಕ್ಷ ಕುವರರನ್ನು ಹೆತ್ತಿದ್ದರು ।
ಇಷ್ಟೇ ಅಲ್ಲ ಲಿಂಗಿಗಳು ಸೃಷ್ಟಿಯೊಳಗೆ ಹುಟ್ಟುವವರು ।
ಭಂಟ ರಾಜಗ ಆಗುವವರು ನಂದನರು ।
ಇಂಥಾ ಲೇಖವನ್ನು ಬರೆದಿದ್ದಿಲ್ಲ ಹಿಂದೆ ಯಾರ್‍ಯಾರು ॥

ದಕ್ಷವಾದ ಮಾತು ಈಗ ಪಕ್ಷವಿಲ್ಲದೆ ಹೇಳುವೆನು
ಲಕ್ಷಕೊಟ್ಟು ಕೇಳಿರೀ ಸಭೀಕರು ।

ಲಕ್ಷಕ ಲಕ್ಷ ಕೊಟ್ಟರೂ ಸಿಗರಿಂಥಾ ಮಹನೀಯರು ।
ವೈಭವ ಭಿಕ್ಷಾ ಕೊಟ್ಟಿದ್ದನ್ನು ಯಾರು ಕೇಳಿರುವರು ।
ಸಾಕ್ಷಾತ ಪರಶಿವನು ಅರ್ಧಾಲಕ್ಷ ಉತ್ಪನ್ನ ಭೂಮಿ
ಪಕ್ಷವಿಲ್ಲದೆ ತಾವು ಭಿಕ್ಷಾ ಕೊಟ್ಟರು ।
ವಿದ್ಯಾ ಲಕ್ಷಕೊಟ್ಟು ಕಲಿತು ಹೇಳಿರಾತನ ಹೆಸರು ॥

ಮೃತ್ಯು ಪತ್ರ ಮಹಿಮೆಯನ್ನು ಸತ್ಯ ನಾನು ಹೇಳುವೆನು
ಪಂಚರೇಳು ಜನರನ್ನು ನೇಮಿಸಿದರು ।
ರಾವ ಬಹದ್ದೂರರಟಾಳ ದೊರಿ ಹಿರಿಯವರು ।
ರಾವಸಾಹೇಬ ರೇವಣಾರ್ಯ, ಘಾಳಿಯವರು ।
ಬೀ.ಪ. ರೇಣಾಪುರ ಮತ್ತು ತಿಕ್ಕೋಟಿಯ ತಿಮ್ಮನಗೌಡರು
ಇಂಗಳೇಶ್ವರ ರಾಯನಗೌಡ ಅಣ್ಣನವರು ।
ಅತಿ ಸಂಭಾವಿತ ಉಕ್ಕಲಿಯ ಭೀಮರಾಯರು ॥

ಬುದ್ಧಿವಂತರೇಳು ಜನರು ಮುದ್ದಿಯಾಗಿ ವಿಚಾರಿಸಿ
ಅಧ್ಯಕ್ಷ ಬೆಳಗಾಂವಿ ಜಿಲ್ಹೆ ಕಲೆಕ್ಟರರು ।
ಸಿದ್ಧ ಮಾಡಿದಂಥ ಮಾತಿಗಿವರು ತುತ್ತ ಕೊಡುವವರು ।
ಕಾರಭಾರಿಯನ್ನು ಪಂಚರಿಂದ ನೇಮಿಸುವರು ।
ನೌಕರ ಚಾಕರ ಖರ್ಚು ಹಕ್ಕು ಬಾಬು ಹೋಗಲಾಗಿ
ಶಿಲ್ಕು ಉಳಿದ ದುಡ್ಡನ್ನೆಲ್ಲ ಕೂಡಿ ಇಡುವರು ।
ವರ್ಷ ಅಂತ್ಯದಲ್ಲಿ ಲಿಂಗಾಯತ ಫಂಡಿಗೆ ಕೊಡುವರು ॥

**॥ಏರು॥**

ತನ್ನ ಬಂಧು ಬಳಗದವರಿಗೊಂದು ಕೊಟ್ಟ ಅರಲಕ್ಷ ।
ಉಳಿದದ್ದು ಎಲ್ಲಾ ನೀಡಿ ಭಿಕ್ಷಾ ।
ಮನದಲ್ಲಿ ಇದ್ದ ಮಾತು ಕೈಲೆ ಬರೆದ ನವದಕ್ಷಾ ।
ವಿದ್ಯೆ ಹೆಚ್ಚಲೆಂಬ ಅಪೇಕ್ಷಾ ।
ಕಲ್ಯಾಣ ಕಲಿತ ಪಾಷಾಣದಂತೆ ಇವರ ಕುಕ್ಷ ।
ಶಿವನಿಂದ ತಾ ಪಡೆದ ತಾ ಮೋಕ್ಷ ॥

ಶ್ರೀಮಂತ ಸತಿಯಳಾದ ಸುಂದ್ರಾಬಾಯಿ ಸಾಹೇಬರಿಗೆ
ಮಹಿನಾ ನೂರು ರೂಪಾಯಿ ಪೋಟಿಗಿಟ್ಟಾನು ।
ಸಂಸ್ಥಾನದಿಂದ ನೇಮಿಸಿದ ರಕ್ಷಕರನ್ನು ।
ಯಾತ್ರೆ ಖರ್ಚಿಗಾಗಿ ಹಣವನು ಮಂಜೂರಿಟ್ಟನು ।
ಹತ್ತೊಂಭತ್ತು ನೂರಾ ಆರು ಅಗಸ್ಟ ಇಪ್ಪತ್ತುಮೂರು

ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು ॥ ೧೨ ॥

ದೇಶಗತ ಮನೆತನದ ವಂಶದವನು ಅಲ್ಲಿ ನಾನು
ಬೇಸಾಯ ನಂದನನು ದತ್ತಕಾದೇನು ।
ಖಾಸ ಹೊಟ್ಟೇ ಮಕ್ಕಳಿಲ್ಲ ಒಂದೇ ಕುಟುಂಬ ನಾನು
ದೇಶ ರೂಢಿಯಂತೆ ದತ್ತಕ ಮಗನ ಆಸೆ ಬಿಟ್ಟೆನು ।
ಹಿಂದೆ ಉಳಿದ ಕುಟುಂಬಕ್ಕೆ ನಂದನರ ಕೊಳ್ಳಲಿಕ್ಕೆ
ಬಂದ ಮಾಡಿ ಅಧಿಕಾರ ತೆಗೆದು ಹಾಕಿದೆನು ।
ಸಾಯುವ ಮುಂದ ಹೇಳಿದನೆಂದು ನೊಂದಕೊಂಡರೆ ಸುಳ್ಳದೇನು ॥

ಒಂಭತ್ತು ತಿಂಗಳದೊಳಗೆ ಶಂಭುವಿನ ದಯದಿ
ಕುಟುಂಬದಲ್ಲಿ ಗಂಡು ಮಗು ಎನಗೆ ಜನಿಸಿದಲ್ಲಿ ।
ಐದು ವರ್ಷ ತನಕಾ ಕುಟುಂಬ ತಾಬೇದಲ್ಲಿ
ನಂತರಧ್ಯಕ್ಷ ಕೊಳ್ಳಿ ತನ್ನ ಸ್ವಾಧೀನದಲ್ಲಿ ।
ಬುದ್ಧಿವಂತ ಕೊಂಕಣಿಯ ಬ್ರಾಹ್ಮಣನ
ಶಿಕ್ಷಣೇಯ ಕನ್ನಡ ಮರಾಠಿ ಕಲಿಯುತಲಿ ।
ತೇರ್ಗಡೆಯಾಗುತನಕಾ ಇಂಗ್ಲೀಷ ವಿದ್ಯೆಯಲ್ಲಿ ॥

ಹಿಂದುಸ್ತಾನದಲ್ಲಿ ಬೇಕಾದ್ದೊಂದು ಭಾಗದಲ್ಲಿ ।
ಇಟ್ಟು ಕಂದನಿಗೆ ಕೊಡಲೆಂದು ಶಿಕ್ಷಣೆಯನ್ನು
ಧರ್ಮರೀತಿಯಂತೆ ಅನ್ನೋದಕ ವ್ಯವಸ್ಥೆಯನ್ನು ।
ಜಿಲ್ಹಾಧೀಶ ಮಾಡಲೀ ಅಪೇಕ್ಷೆಯನ್ನು ।
ದೇಶಾಂತರಕ್ಕೆ ವಿದ್ಯಾಭ್ಯಾಸಗೋಸ್ಕರವಾಗಿ
ಏಸು ಕಾಲದಿ ಕಳಿಸಬಾರದೆಂದೆನು ।
ಸುಜ್ಞಾನನೆಂದಮೇಲೆ ಮದುವೆಯನ್ನು ಮಾಡಲೆಂದನು ॥

ಹಿಂದಿನ ಶರೀರ ಸಂಬಂಧಗಳಿಂಗೇಶ್ವರ
ತಿಕ್ಕೋಟಿ ಉಕ್ಕಲಿ ಗ್ರಾಮೀಣಿಯರನ್ನು ।
ಕೇಳಿ ಕಂದನಿಗೆ ತೆಗೆಯುವುದು ಕನ್ಯೆಯನ್ನು
ಅವರ ಮರ್ಜಿಯಂತೆ ಮಾಡಿರೆಂದೆ ಲಗ್ನವನ್ನು ।
ಸುಜ್ಞಾನ ಮೇಲೆ ಮೇಲೆ ಸಂಸ್ಥಾನನಾಳುವಂಥ
ಸುಜ್ಞಾನಾದರೆ ತಾಬೆ ಕೊಡಲೆಂದನು ।
ಲಿಂಗವಂತ ಫಂಡಿಗಾಗಿ ಕೊಟ್ಟು ಶಿಲ್ಕು ಹಣವನ್ನು ॥

ಪುತ್ರಿಯಳು ಹುಟ್ಟಲು ಅವಳ ಆಪ್ತರ ಸಮ್ಮತಿಯಂತೆ
ಜ್ಯಾತಿಯಲ್ಲಿ ವಿದ್ಯಾವಂತ ವರವನ್ನು ।

ನೋಡಿ ಐದು ಸಾವಿರುತ್ಪನ್ನ ವೃತ್ತಿಯನ್ನು ।
ನೀಡಿ ಲಗ್ನಮಾಡಿ ಕೊಡಿರೆಂದು ಅವಳನ್ನು ।
ತನುಜೆಯಳ ಉದರದಲ್ಲಿ ಜನಿಸಿದಂಥ ಕುವರನನ್ನು
ದೇಶಗತಕೊಡೆಯನನ್ನು ಮಾಡಿದರೆಂದೆನು ।
ಸಜ್ಞಾನಾಗುತನಕಾ ಶಿಲ್ಕು ಹಣ ಫಂಡಿಗಿಟ್ಟೇನು ॥

**॥ಏರು॥**

ಕುವರೀ ಕುವರ ಕೂಡಿ ಜನಿಸಿದರ ಕುವರ ಮಾಲಕನು ।
ಮಗಳಿಗೆ ಕೊಟ್ಟ ವೃತ್ತಿಯನು ।
ಆ ಪುತ್ರನಾಗಲು ಪುತ್ರ ದತ್ತ ದತ್ತಕ ಮಗಳ ಮಗನು ।
ಸಂಸ್ಥಾನಕ್ಕೆ ಒಡೆಯನು ।
ಮಗಳ ವಂಶ ಆದರೆ ನಷ್ಟಾಂಶ ಮಗನು ಮಾಲಕನು ।
ಹೀಗಿರುವದಯ್ಯ ಸ್ವಮನು ।
ಸಂಸ್ಥಾನದಲ್ಲಿ ನಿಶ್ಚಿಂತರಾಗಿ ಉಣ್ಣುವಂಥ ಪೋಟ
ಇನಾಮದಾರರನೇಕರನ್ನು ।
ಅವರ ಸನದ ನೋಡಿ ನಡಿಸಲೆಂದೆ ವತನಿಯನು ।
ಹೆಚ್ಚಗಿರುವಂಥಾ ಸಾಮಾನೆಲ್ಲಾ ಮಾರಲೆಂದನು ।
ಹತ್ತೊಂಭತ್ತು ನೂರಾ ಆರು ಅಗಷ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು ॥ ೧೩ ॥

ಸಿರಸಂಗಿ ಸವದತ್ತಿ ಮತ್ತು ನವಲಗುಂದ ವಾಡೆಗಳನು
ದುರಸ್ತ ಇಟ್ಟು ಉಳಿದ ಜಾಗಾ ಮಾರಲೆಂದನು ।
ಬೆಳಗಾಂವಿ ಬಂಗಲೆಕ್ಕ ಇಟ್ಟು ಒಂದು ಆಳನ್ನು ।
ತಿಂಗಳಾ ಹನ್ನೆರಡು ರೂಪಾಯಿ ಕೊಟ್ಟು ಪಗಾರವನ್ನು ।
ಕನ್ನೂಲ ಮಾಧುಬಾಯೆನಗೆ ಖರ್ಚಿಗಾಗಿ ಕೊಟ್ಟ
ಹಣವು ಬಿನ್ ಜಿಖೇರಿಯಿಂದ ಮುಟ್ಟಿಸೆಂದನು ।
ಅವನಿಗೆ ಎರಡು ಸಾವಿರ ರೂಪಾಯಿ ಬಕ್ಷೀಸವನ್ನು ॥

ಸೋದರಳಿಯನಾದ ಅಂಣು ಬಸವಂತ ಇವರಿಗೆ
ಮೊದಲಿನಿಂದ ವಿದ್ಯೆಯನ್ನು ನಾನು ಕಲಿಸಿಹೆನು ।
ಅವರು ಬಿ.ಎ. ಆಗುವತನಕಾ ಕೊಟ್ಟು ಆದ ಖರ್ಚನ್ನು ।
ಅವರ ಲಗ್ನಕ್ಕೆ ನಾಲ್ಕು ಸಾವಿರ ರೂಪಾಯಿಯನ್ನು ।
ಬ್ರಾಹ್ಮಣ ಕಾರಕೂನರನ್ನು ಕಡಿಮೆ ಮಾಡಿ

ಪಂಚರಿಂದಾ ನೂರು ರೂಪಾಯಿಯ ಕಾರಬಾರಿಯನ್ನು
ನೇಮಿಸಿದ್ದಂತೆ ನಡಿಸಲೆಂದೆ ಸಂಸ್ಥಾನ ॥

ತಿಕೋಟಿ ಗಂಗವ್ವಮ್ಮಾ ಅನೇಕ ವರ್ಷ ನನ್ನಲ್ಲಿದ್ದು
ಬೇನೆಯಲ್ಲಿ ಸಕ್ತ ಸಂರಕ್ಷಣೆಯನ್ನು ।
ಮಾಡಿದರಾದ ಕಾರಣವರಿಗೆ ಸ್ತ್ರೀಧನವನ್ನು ।
ಮೊದಲು ಕೊಟ್ಟ ಬಂಗಾರವವರಿಗೆ ಬಿಟ್ಟು ಬಿಟ್ಟೆನು ।
ಜೀವಂತ ಇರುವತನಕಾ ತಿಂಗಳ ಎಂಟು ರೂಪಾಯಿ
ಇದ್ದಲ್ಲಿ ಮುಟ್ಟಿಸೆಂದು ಬರೆದಿಹೆನು ।
ಬಸಮ್ಮನಿಗೆ ತಾಹಾತಾರು ರೂಪಾಯಿಯನ್ನು ॥

ಸಿಗ್ಗಿ ಮುದಿಯಪ್ಪನಿಗೆ ಸಾಲಪಟ್ಟಿ ಕಮತಮನಿ
ನಾಲ್ಕು ಎತ್ತು ಸಾಮಾನು ಕೊಟ್ಟಿರುವೆನು ।
ಇಲ್ಲಿ ಬಿನ್ ಪಗಾರದಿಂದ ಕಮತಾಮಾಡಿಸಿರುವನು ।
ಕರಿಬಸವ ತನುಜಾ ಸಿಗ್ಗಿ ಮಲ್ಲಪ್ಪಗಿನ್ನು ।
ಹುಟ್ಟಿನಿಂದಾ ರಕ್ಷಿಸೇನಿ ಕೊಟ್ಟು ಬಿಟ್ಟೆ ವಿಜಾಪುರ
ಇಟ್ಟ ಅಂಗಡಿಯ ಪಾಲವಿದ್ದದ್ದನ್ನು ।
ಇವನ ತಂದೆಗಿತ್ತ ಐದು ಸಾವಿರ ರೂಪಾಯಿಯನ್ನು ॥

**॥ಏರು॥**

ಹೊಟ್ಟೆಯ ಮಗನು ಹುಟ್ಟದಿದ್ದರಿದನು ಕೊಟ್ಟೆ ದಾನವನು ।
ಪಂಚರಿಂದ ಸಾಗಿ ಸಂಸ್ಥಾನು ।
ಹೀಗೆ ಬರೆದು ತಿಳಿದನವರಿದು ಲಿಂಗಭೂಪನು ।
ತಲೆ ಶುದ್ಧವಿತ್ತು ಕೇಳಿನ್ನು ಜಗದಲ್ಲಿ
ದಾನಕೊಡುವಲ್ಲಿ ಸಿಗನು ಇಂಥವನು ।
ಪಾಲಿಸಿದ ಹತ್ತು ಪುರವನ್ನು ॥

ಅಂಬೆಯ ತೊಡೆಯ ತಲೆಗಿಂಬು ಮಾಡಿಕೊಂಡ ದೇವಾ
ಅಂಬುಜಾಕ್ಷ ನೀಯಲೆಂದೆ ಮೋಕ್ಷವನು ।
ಸಾಂಬ ರಹಿತ ಮಾಡಲೆಂದೆ ಜರಾಮರಣವನು ।
ಹತ್ತೊಂಭತ್ತು ನೂರಾ ಆರು ಅಗಷ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು ॥ ೧೪ ॥

ಭವಿಷ್ಯತ್ತು ಜೋತಿಷ್ಯ ಮತ್ತು ಸಾಮಗ್ರಿಕಾದಿಗಳೆಲ್ಲಾ
ಸಹವಿದ್ಯೆ ಸಕಲ ಗುಣ ಸಂಪನ್ನನು ।

ವೇದಶೃತಿ ಆಗಮಾದಿಗಳ ಪಾರಾಯಣನು ।
ಗಾನ ವಿದ್ಯೆಯಲಿ ಸಂಪೂರ್ಣ ಬಲ್ಲಿದನು ।
ತೆಲಗು ತಮಿಳ ಅರವು ಆಂಗ್ಲ ಕನ್ನಡ ಹಿಂದು
ಸಂಸ್ಕೃತ ಬಲ್ಲವ ಭಾಷೆಯನು ।
ಮಹಾರಾಷ್ಟ್ರ ವಿದ್ಯೆಯಲಿ ಪ್ರವೀಣನು ॥

ತ್ರಿಕಾಲ ಶಿವಪೂಜೆ ನಕುಲ ಸಹದೇವ ವಿದ್ಯೆಯಲಿ
ಅಕಲ ಅನಂತನು ಮಹಾತ್ಮನು ।
ಸಕಲ ಸಿದ್ಧಾಂತಿ ದುಷ್ಟರಿಗೆ ತಾ ವ್ಯಾಘ್ರನು
ಅಮಲ ಭರಪೂರ ಪ್ರತ್ಯಕ್ಷ ನರಯಮನನು ।
ಶ್ರೀಶೈಲ ಕಾವಡಿಯು ವರ್ಷಾ ಕಳುಹಿಸುವವನು
ಕಾಡಸಿದ್ಧೇಶ್ವರ ಕುಲದೇವನು ।
ಸಿದ್ಧಗಿರಿ ಮಹಾಸ್ವಾಮಿಗಿವ ಶಿಷ್ಯನು ॥

**॥ಏರು॥**

ಇದ್ದನಿವ ಸರಳಾ ಕನ್ನಡದಿ ಹರಳಾ ಭುವನದಿ ಜನಿಸಿದನು
ಧರ್ಮಾನುಜ ಪಾರ್ಥ ವೀರನು ।
ವಿದ್ಯದ ಸದನ ರೂಪದಲ್ಲಿ ಮದನ ಗಣಾಧೀಶ್ವರನು ।
ಶಿವಲೋಕದಿಂದ ಇಳಿದನು ।
ಶಿವನಾಜ್ಞೆಧರಿಸಿ ಸರ್ವಜ್ಞ ಲೀಲನಾಡಿದನು ।
ತೀರದೆಷ್ಟು ಹೇಳಲಾರಿದನು ॥

ಸಮಾಜ ಸುಧಾರಕರೆ ಉಮಾ ಮಹೇಶ ತಾನು
ಕಮಲಾಕ್ಷನನ್ನು ಕಳುಹಿಸಿಕೊಟ್ಟನು ।
ಅಮಿತ ಮಹಿಮ ಅಖಿಳಾಂಡ ಸ್ವರೂಪನು ।
ಹತ್ತೊಂಭತ್ತು ನೂರಾ ಆರು ಅಗಸ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು ॥ ೧೫ ॥

ದಾನ ಕೊಟ್ಟ ಆಸ್ತಿಯು ಅಜ್ಞಾನ ನಾತೆಯಿಂದ
ಸಂಸ್ಥಾನವಾಗಿ ಸರಕಾರಿ ಸ್ವಾಧೀನು ।
ಧೂಮೆ ಸಾಹೇಬ ಬಂದು ಹೇರಿಸಿದ ಖಜೀನಿಯನ್ನು ।
ಬಾಯಿ ಸಾಹೇಬರಿಗೆ ಆಗಲಿಲ್ಲಾ ಇದ ಸಹನ ।
ತನ್ನ ಅಣ್ಣ ಕಲ್ಲನಗೌಡನನ್ನು ದತ್ತಕನಾಗಿ ಮಾಡಿ
ಮರಣ ಕಾಲದಲ್ಲಿ ವಚನ ಕೊಟ್ಟಿದ್ದನು ।
ಎಂದು ನುಡಿಸಿದರು ಬಾಯಿಯವರು ನ್ಯಾಯವನು ॥

ದೇಶಗತ ಭೂಮಿ ತನ್ನ ಖಾಸಗತವಾದದ್ದೆಂದು
ಮುಲಕೀನಾತೆಯಿಂದ ಸರಟಿಫಿಕೇಟು ಬೇಡಿದರು ।
ಎದುರದಾರರಾದರಪ್ಪ ಕೇಳ್ ಫಂಡಿನವರು ।
ಹಾಯಕೋರ್ಟಿನವರು ಫಂಡಿನವರ ತಾಬೇ ಕೊಟ್ಟಾರು ।
ದಿವಾಣಿ ಮಾರ್ಗದಿ ತಾವು ದಾವೇ ತಂದರಿದಕ್ಕಾಗಿ
ಸಿದ್ಧಗಿರಿ ಸ್ವಾಮಿಯವರು ಸಹಾಯ ಮಾಡುವರು ।
ಜಜ್ಜ ಕೋರ್ಟಿನಿಂದ ದತ್ತಕ ಕಾಹೀಮ ಆದರು ॥

ಫಂಡಿನ ಮುಖ್ಯಸ್ಥರಾದ ಸಂಸ್ಥಾನ ಟ್ರಸ್ಟಿಯವರು
ಹಾಯಕೋರ್ಟಿಗಪೀಲ ಮಾಡಿ ಕೆಲಸ ನಡಿಸಿದರು ।
ಆರು ತಿಂಗಳ ಹಿಂದೆ ಫಂಡಿನಂತೆ ಹುಕುಂ ಪಡೆದರು ।
ಪುಣ್ಯವಂತ ಬರೆದ ಲೇಖೀ ಸಿದ್ಧಮಾಡಿದರು ।
ಅತ್ತ ಮಗನ ಕೈಯಲ್ಲೊಂದು ಹೆತ್ತ ತಂದೆಯು ದುಡ್ಡು ಕೊಡನು
ಸತ್ಯವಂತ ಶೀಲರಿವರು ಎಂಥ ಬಹುಳಾರು ।
ಸೂರ್ಯ ಚಂದ್ರರಿರುವತನಕಾ ತಮ್ಮ ಕೀರ್ತಿ ಉಳಿಸಿದರು ॥
ಸೊಲ್ಲಾಪುರ ಸಭಾದಲ್ಲಿ ಸಾರ್ವತ್ರಿಕ ಜನರು
ಕೂಡಿ ಕೈಲಾಸವಾಸಿ ಲಿಂಗರಾಜರನ್ನು ಸ್ಮರಿಸಿ
ಯಾವತ್ತರು ಮಾಡಿದರು ದುಃಖವನ್ನು
ಪುಟ್ಟಣ್ಣ ಶೆಟ್ಟರಿದ್ದರದಕ ಅಧ್ಯಕ್ಷರು ।
ತ್ರಿಸಷ್ಟಿ ಪ್ರಮಥರೊಳು ನೈಷ್ಠಿಯಿಂದಾ ಕೂಡಿಸಿದರು
ಒಟ್ಟು ಅರವತ್ತು ನಾಲ್ಕು ಮಂದಿಯನ್ನು ।
ಪ್ರಮಥನಾದ ಕೇಳಿರಿಹದಲ್ಲಿ ಲಿಂಗೇಂದ್ರನು ॥

ದೋಣಿ ತೀರದಲ್ಲಿ ಭೂಮಿ ಏನು ಹೇಳಲಯ್ಯೋ ನಾನು
ಕ್ಷೋಣಿಯಲ್ಲಿ ಇಲ್ಲದಂಥಾ ಕ್ಷಾರವುಳ್ಳದ್ದು ।
ಮನಗೂಳಿ ಉಕ್ಕಲಿ ಎರಡು ಜೋಡಿ ಎಂದು ಗೊತ್ತು ಇದ್ದದ್ದು ।
ಪರಮಾನಂದದೇವರು ಎರಡು ಊರು ನಡುವೆ ಇರುವುದು ।
ರಾಮರಾಜ್ಯನಾದಂಥ ಕಾಮನನ್ನು ಸುಟ್ಟಂಥ ಯಮನಿಂದ
ಭೂಮಿ ನಿರ್ಮಾಣ ಆಗಿರುವದು ।
ಅಂಥ ಲಿಂಗಕ್ಕೆ ಎನ್ನ ಹೃದಯ ಗ್ರಾಹ್ಯವಾದದ್ದು ॥
ತಾಳಿಕೋಟಿ ಕಂಠಿ ಸ್ವಾಮೀ ಗೋತ್ರಕ್ಕೆ ಹೊಂದಿದವನು
ಹೇಳುವೆನು ಆತನಿಗೆ ನಾನು ಶಿಷ್ಯನು ।
ಮೂಲ ಕುಂಟೋಜಿಯ ಬಸವೇಶ್ವರ ಭಕ್ತನು ।
ಉಕ್ಕಲಿಯ ಪರಮಾನಂದ ಗ್ರಾಮದಾತನು ।
ಶಬ್ದ ದೋಷ ತೆಗೆದು ಹಾಕಿ ಇದ್ದ ಸಾರ ತಿಳಿದು

ಕೊಂಡು ಬುದ್ಧಿವಂತ ಕೊಟ್ಟ ಮೌಲ್ಯ ಧನವನ್ನು ।
ತಪ್ಪು ತಗೆಯಲಿಕ್ಕೆ ಅಲ್ಲ ನಾನು ಕವಿಗಾರನು ॥

**||ಏರು||**

ಕೊಟ್ಟ ಸಾಮ್ರಾಜ್ಯ ಹೊಂದಿ ಸಾಯುಜ್ಯ ಸ್ವರ್ಗನಾಥನಲ್ಲಿ ।
ದಯವಿರಲಿ ದೇವರಿವರ ಮೇಲೆ ।
ಜಯ ಜಯ ಲಿಂಗ ಮಹಾರಾಯ ಕೂಡಿ ಪುಣ್ಯದಲಿ ।
ಸ್ವರ್ಗದಿಂದ ಬಂದಂಥ ಪುಷ್ಪಮಾಲೆ ।
ನವಲಗುಂದ ಸಾರ್ಥಕನಾದ ಪ್ರಾಣ ಕಡೆಯಲ್ಲಿ ।
ಬಸವ ತನುಜ ಹೀಂಗ ಹೇಳುತಲಿ ॥

ಭೀಮನಗೌಡನ ಪ್ರೀತಿಯಲ್ಲಿ ನೇಮದಿಂದ ಇರುವೆನು
ಕಾಮಧೇನು ಅಗಲಿಹೋದಾ ಸುಮ್ಮನೆ ಕೂತೆನು ।
ಸೋಮಧರನು ಕಾಯಲೆಂದು ನಾನು ಬೇಡಿಕೊಂಡೆನು ।
ಹತ್ತೊಂಭತ್ತು ನೂರಾ ಆರು ಅಗಸ್ಟ ಇಪ್ಪತ್ತು ಮೂರು
ಭಾದ್ರಪದ ಶುದ್ಧ ಚೌತಿಗೆ ಐಕ್ಯವಾದನು ।
ಸ್ವರ್ಗ ಸ್ವಾಧೀನನಾದ ಲಿಂಗಭೂಪ ಸಿರಸಂಗೀಶನು ॥

**ರಚನೆ :** ಅಯ್ಯಪ್ಪ ಇಂಡಿ, ಉಕ್ಕಲಿ ತಾ॥ ಬಸವನ ಬಾಗೇವಾಡಿ
**ಕೃತಿ :** ಲಿಂಗರಾಜು ವಿಜಯ ಕಾವ್ಯ ಹಾಗೂ ಕೆಲವು ಲಾವಣಿಗಳು

## ೫೪. ಶಾಸಕರಾದ ದಿ. ಸುರಪೂರ ಮಲ್ಲಪ್ಪಣ್ಣ

ನೆರೆದು ಕುಳಿತಿರುವಂಥ ನನ್ನ ಹಿರಿಯರಿಗೆಲ್ಲ ಮಾಡಿ ನಮನ ।
ಸರಳ ಶೈಲಿಯಲ್ಲಿ ಬರೆದಂಥ ಕವನ
ಸರಸವಾಗಿ ಸಾರುವೆನು । ಹರುಷದಿಂದ ಹಾಡುವೆನು ।
ಸುರಪೂರ ಮಲ್ಲಪ್ಪಣ್ಣನವರ ವರಕೀರ್ತಿಯನಾ॥ ೧ ॥

ಸುರಪೂರ ಕರಿಬಸಪ್ಪ ಎನ್ನುವ । ಹೊತ್ತು ತಿರುಗಿ ಮಸಾಲಿ ಮಾರುವ ।
ವೃತ್ತಿ ಮಾಡುತ ಧರ್ಮಪತ್ನಿ ದಾನಮ್ಮನ ॥
ಬೆರೆತು ಭೀಮಾನದಿಯ ತೀರ । ರಹವಾಸಿಯಾಗಿ ಭೂಯಾರ ।
ವೀರಶೈವರಾಗಿ ನಿತ್ಯಕಾಯಕ ಮಾಡುವರು॥ ೨ ॥

ವಿಭೂತಿ ಧರಿಸಿ ಹಣೆಯಲ್ಲಿ । ಕೆಂಪು ವಸ್ತ್ರ ಕೊರಳಲ್ಲಿ ।
ಶಿರದಿ ರುಮಾಲ ಸುತ್ತಿಧರಿಸಿ ಕಸಿಯ ಅಂಗಿಯನು ।

ಬೆರೆತು ಶಿವ-ಪಾರ್ವತಿಯಂತೆ | ಧರೆಗೆ ಬಂದ ದೇವರಂತೆ |
ಗುರುಲಿಂಗ ಜಂಗಮ ಪೂಜೆಯ ಮಾಡಿ ಸೇವೆಯನು॥ ೩ ॥

ಸರಸವಾಗಿ ಸಂಸಾರದೊಳಗ | ಹರುಷದಿಂದ ಇರುತಿರುವಾಗ |
ವರುಷ ಹಲವು ಗತಿಸುದರಾಗ ಆರು ಮಕ್ಕಳು |
ಪಾರಮಾರ್ಥ ಪ್ರಪಂಚ ಮಾಡಿ | ಸತಿ ಸುತರ ಒಂದುಗೂಡಿ
ಸುಖ ಭೋಗದ ಐದನೇ ಸುತನೆ ಮಲ್ಲಪ್ಪಣ್ಣನವರು॥ ೪ ॥

**॥ಇಳುವು॥**

ಚಿಕ್ಕ ಹಳ್ಳಿಯಲ್ಲಿ ದಕ್ಷತೆಯಿಂದಲಿ ಮಕ್ಕಳ ಶಿಕ್ಷಣವನ್ನು
ಬೆಳೆಸುವದಕೆ ಇತ್ತು ಬಡತನ ॥ ೧ ॥

ರಕ್ಷಣೆ ಮಾಡುತ ಸ್ವಲ್ಪ ಗಳಿಕೆಯಲಿ ಪ್ರಾಥಮಿಕ ಅಭ್ಯಾಸವನು |
ಮುಗಿಸುತ ವ್ಯವಹಾರವನು ॥ ೨ ॥

ಚೊಕ್ಕ ಹೃದಯದಿಂದ ತಕ್ಕವ್ಯಾಪಾರಕೆ ಬೆಳೆಸಿ ತಮ್ಮ ಬುದ್ಧಿಯನು
ಓಡಿಸಿದರು ಬಡತನವನ್ನು ॥ ೩ ॥

**॥ಚಾಲ॥**

ಜನಮನವನೊಲಿಸಿ ಅನುದಿನ | ಇಟ್ಟು ನಿಷ್ಠೆಯನು |
ಒಟ್ಟಿನಲಿ ಮೆಚ್ಚಿ ಶಾಂತೇಶನು | ಕರೆಸಕೊಂಡ ಇಂಡಿಗೆ ಅವರನು ॥ ೧ ॥

ದಿನದಿನಕೆ ಬೆಳೆಸಿ ಕೀರ್ತಿಯನು | ದಕ್ಷತೆಯ ಧೋರಣವ |
ತಾಲೂಕ ಜಿಲ್ಲೆ ಸಂಪೂರ್ಣ | ಅಭಿವೃದ್ಧಿಯನು ಸಾಧಿಸಿದರು॥ ೨ ॥

ಕಿರಾಣಿಯಲ್ಲದೆ ಅಡತ ಅಂಗಡಿ | ಮಾಡಿ ನಿರ್ಮಾಣ |
ಯಾಂತ್ರಿಕ ಕಬ್ಬಿಣ ಎಣ್ಣೆಯಗಾಣ | ಸರ್ವವಿಧದ ವ್ಯಾಪಾರವನು॥ ೩ ॥

**॥ಏರ॥**

ಲಕ್ಷ್ಯಗಟ್ಟಲೆ ರೊಕ್ಕಗಳಿಸಿ | ಲೆಕ್ಕವಿಲ್ಲದೆ ಮನೆಕಟ್ಟಿಸಿ |
ಲಕ್ಷ್ಮೀಪುತ್ರರಾದರು ಸುರಪೂರ ದೊಡ್ಡ ಮನೆತನ ॥ ೧ನೆಯ ಚೌಕ ॥
ಬೆಳೆದ ಬಳಗದ ಒಲುಮೆಯಿಂದ ಗಳಿಸಿ ಎಲ್ಲರು ಹೊಲಮನೆಗಳನು |
ಹಳ್ಯಾಗ ಅವರು ಬೆಳೆಸಿದರುತ್ತಮ ಬೇಸಾಯವನು॥ ೧ ॥

ಬೆಳೆದ ಪ್ರಭಾವಕೆ ಎಳೆದು ಬಂದು ಸಿರಿವಂತರ ಬೀಗತನ |
ಒಳ್ಳೇತನದಿ ಹೊಳೆಯುತ ಮಕ್ಕಳು ಮರಿಮಕ್ಕಳನು|| ೨ ||

ಎಲ್ಲಾ ಬಲ್ಲಿದ ಮಲ್ಲಪ್ಪಣ್ಣನವರಲಿ ಸಲಹಾಕೇಳಿ ಸರ್ವಜನಾ |
ತಾಲೂಕ ಜಿಲ್ಲಾ ಅಧಿಕಾರಿಗಳು ಸ್ನೇಹದಿ ಬಂದು ಮನೆಯತನ|| ೩ ||

**||ಇಳುವು||**

ಜೇವೂರ ಹೇಮಗಿರಿ ಶಿವಲಿಂಗಮ್ಮ ಹಿರಿಯಧರ್ಮಪತ್ನಿಯಿಂದ |
ಗುರುಶಾಂತನೆಂಬ ವರಕುವರ || ೧ ||

ವ್ಯವಹಾರದಿ ಚತುರತನದಲಿ ಜನಮನವನೊಲಿಸಿ ಆಗಿಹರು |
ವಿಜಾಪುರ ಮುನ್ಸಿಪಾಲ್ಟಿ ಮೆಂಬರ|| ೨ ||

ನವಯುಗ ನವನಾಗರಿಕ ನೆವದಲಿ ಬಂದಿಹರು ದ್ವಿತೀಯ ಪತ್ನಿಯವರು
ಶ್ರೀಮಂತ ಮನೆತನ ಆತನೂರ|| ೩ ||

**||ಚಾಲ||**

ಎರಡನೆಯ ಪುತ್ರನೋರ್ವನು | ಈಶ್ವರನೆಂಬವನು |
ಎಂ.ಎ. ಪದವಿ ಪಡೆದಿಹನು | ಪ್ರೊಫೆಸರನಾಗಿ ಇರುವನು

ಕುಶಾಗ್ರಬುದ್ಧಿ ಅಣ್ಣಾ ಅವರು | ವಂಶ ಪರಂಪರೆಯ |
ವ್ಯಾಪಾರವನು ನಡೆಸಿಹರು | ಬಜಾರಕೆ ಸುರಪೂರ ಖ್ಯಾತ ಹೆಸರು ||

ವ್ಯಾಪಾರದ ಪ್ರಗತಿ ಹೊಂದಿಹರು | ನಿಪುಣರೆನಿಸಿದರು |
ಗ್ರಾಹಕರ ಜೊತೆಗೆ ಸಹಕಾರ | ಎಲ್ಲರ ಪ್ರೀತಿ ಗಳಿಸ್ಯಾರು |

**||ಏರ||**

ಹಳ್ಳಿಯಿಂದ ದಿಲ್ಲಿಯತನಕ ಒಳ್ಳೆಯವಸ್ತು ಅಗ್ಗದಿ ಮಾರಿ |
ಎಳೆದು ಗಿರಾಕಿ ಬೆಳೆಸಿಕೊಂಡರು ವ್ಯಾಪಾರವನು|| ೨ನೆಯ ಚೌಕ ||

ಧೋರಣೆ ಕಟ್ಟಿ ವ್ಯವಹಾರದಲಿ | ಮೀರದ ಮಾರವಾಡಿ ಭಾಟರಲ್ಲಿ |
ಧೂರ್ತರಾಗಿ ಸರ್ವರನೆಲ್ಲ ಕೂಡಿಸಿ ಬಿಟ್ಟಿಹರು ||
ಪ್ರಾಮಾಣಿಕ ವ್ಯವಹಾರ ಬೆಳೆಸಿ | ದೂರನತನಕ ಹೆಸರು ಗಳಿಸಿ |
ಕರ್ನಾಟಕದ ತುಂಬೆಲ್ಲಾ ಉಳಿಯಿತು ಸುರಪೂರದ ಹೆಸರು|| ೧ ||

ಪೂರ್ವಜನ್ಮದಿಂದ ಬಂದ । ಚಾಣಾಕ್ಷತೆಯ ದೃಷ್ಟಿಯಿಂದ ।
ಸಾರ್ವಜನಿಕ ಪ್ರಗತಿ ಮಾಡಲು ಮನಸ್ಸು ಮಾಡಿದರು ॥
ವ್ಯಾಪಾರದಿಂದ ಹಣವನು ಪಡೆದು । ಸಮಾಜದಲ್ಲಿ ಮುಂದುವರೆದು ।
ಸ್ವಾರ್ಥತ್ಯಾಗಮಾಡಿ ರಾಜಕೀಯರಂಗ ಸೇರಿದರು॥ ೨ ॥

ಸರ್ವರ ಶಿಕ್ಷಣ ಪ್ರಗತಿಯ ಬಯಸಿ । ಸೇರಿ ವಿಜಾಪುರದಿ ನೆಲೆಸಿ ।
ಲಿಂಗಾಯತ ವಿದ್ಯಾವರ್ಧಕ ಸಂಘವ ಕಟ್ಟಿದರು ॥
ಮೀರಿದ ಕಾರ್ಯಮಾಡಿತೋರಿಸಿ । ಶಿಕ್ಷಣ ಸಂಸ್ಥೆ ಕಟ್ಟಿ ನಿಲ್ಲಿಸಿ ।
ರಾಜ್ಯಕೇಂದ್ರ ದೂರದತನಕ ಅಣ್ಣಾವರ ಹೆಸರು॥ ೩ ॥

**||ಇಳುವು||**

ಅಧಿಕಾರದ ಆಶೆ ತೊರೆದರೂ । ಅಧಿಕಾರವೇ ಬೆನ್ನು ಹತ್ತಿತ್ತು ।
ವಿಧಾನ ಸಭೆಗೆ ಆರಿಸಿತು॥ ೧ ॥

ಮುಂದುವರಿದ ಮೇಧಾವಿ ಬುದ್ಧಿವಂತ । ಮೈಸೂರು ಮುಂಬಯಿ ಪ್ರಾಂತ
ಆರಿಸಿದರು ಶಾಸಕರು ಅಂತ॥ ೨ ॥

ಉದಾರಹೃದಯ ಮುಂಧೋರಣೆಯ ಆದರ್ಶ ವ್ಯಕ್ತಿಯಂತ ।
ಕೇಂದ್ರದಲಿ ಮಂತ್ರಿಯಾಗಿ ಸಹಿತ॥ ೩ ॥

**||ಚಾಲ||**

ಉಪರಾಷ್ಟ್ರಪತಿ ಜತ್ತಿಯವರು । ಮುಖ್ಯಮಂತ್ರಿಗಳು ।
ರಾಜಕಾರಣದ ತೊಡಕನು ಕುರಿತು । ಅಣ್ಣಾ ಅವರ ಸಲಹೆ ಕೇಳುತ॥ ೧ ॥

ಎರಡು ದಶಕ ಅವರು ಸೇವೆಯಲಿ । ದೀನದಲಿತರಲಿ ।
ತನು-ಮನದಿ ಕಾರ್ಯ ಮಾಡುತ್ತ । ನಿಮ್ನರನು ಮೇಲೆ ಎತ್ತುತ್ತ ॥
ಈಗಿನ ಪ್ರಧಾನಿ ಗಾಂಧಿಯವರು । ತೆಗೆದ ಕಾಯ್ದೆ ಆಗಲೇ ।
ಅಣ್ಣಾ ಅವರ ಮನದಿ ನಾಟಿತ್ತ । ಮಾಡಿಕೊಂಡಿದ್ದರು ರಕ್ತಗತ ॥

**||ಏರ||**

ಉಚ್ಚ ಶಿಕ್ಷಣ ಪಡೆಯದಿದ್ದರೂ । ಸರ್ವಭಾಷೆಯಲ್ಲಿ ಅವರು ।
ಸ್ವಚ್ಛ ಮಾತನಾಡುವರು ಇಂಗ್ಲೀಷ ಭಾಷೆಯನು॥ ೩ನೆಯ ಚೌಕ ॥

ರಾಷ್ಟ್ರವಿಸ್ತರಣಾ ಯೋಜನೆಯಲ್ಲಿ । ತೀರ ಹಿಂದುಳಿದ ಹಳ್ಳಿಯಲ್ಲಿ ।
ಬೇಡಿದಷ್ಟು ಧನಸಹಾಯ ಮಾಡಿಕೊಟ್ಟಿಹರು ॥

ರಾಷ್ಟ್ರೀಯ ಪಕ್ಷಗಳೆಷ್ಟೋ ಇದ್ದರೂ | ರಾಷ್ಟ್ರಹಿತದ ಪಕ್ಷಕ್ಕವರು |
ಶ್ರೇಷ್ಠತೆ ಕೊಟ್ಟು ಪಕ್ಷಾಂತರದಿ ಹೊಂದಿ ನಿಂತಿಹರು ||

ರಾಷ್ಟ್ರೀಯ ಕಾರ್ಯಕರ್ತರಲ್ಲಿ | ರಾಜಕೀಯ ರಂಗದಲ್ಲಿ |
ಸದವಕಾಶ ನೋಡಿ ಸಲಹೆಯ ಪಾತ್ರವಾಡುವುದು ||

ಮುಖ್ಯಮಂತ್ರಿ ಆಯ್ಕೆಯಲ್ಲಿ | ದಕ್ಷಧೋರಣೆ ವಿಚಾರದಲ್ಲಿ |
ಚತುರ ಚಾಣಾಕ್ಷ ಮಲ್ಲಪ್ಪಣ್ಣನವರು ||

ಶ್ರೇಷ್ಠ ಮುಕುಟದೊಳಗಿನ ಒಂದು | ವಿಶಿಷ್ಟ ರತ್ನದ ಹರಳು ಎಂದು |
ರಾಷ್ಟ್ರದಲ್ಲಿ ಪ್ರಕಟವಾಗಿ ಕೀರ್ತಿ ಗಳಿಸಿದ ||

ಸ್ಪಷ್ಟ ನಿಷ್ಠುರ ಸ್ವತಂತ್ರವಾದಿ | ಶ್ರೇಷ್ಠ ತಾತ್ವಿಕ ವಿಚಾರವಾದಿ |
ದೇಶಕ್ಕಾಗಿ ದೇಹವನ್ನೇ ಮುಡುಪಾಗಿಟ್ಟವರು|| ೩ ||

**||ಇಳುವು||**

ಸರಳ ಹೃದಯದಿ ಸದ್ಭಾವದಿ ಶರಣಮಾರ್ಗವನು ತುಳಿದವರು |
ಸ್ವಾರ್ಥತ್ಯಾಗಿಯಾಗಿ ನಡೆದವರು|| ೧ ||

ದೇಹದ ಮೋಹದ ಭಾವನೆಯಿಲ್ಲದೆ ದೇಶಕ್ಕಾಗಿ ದುಡಿದವರು |
ಸಿರಿವಂತಿಕೆ ಸೊಕ್ಕಳಿದವರು|| ೨ ||

ವರುಷಕಾಲ ನೆಲಹಿಡಿದ ಶರೀರದಿ ಸ್ವಾರ್ಥಭಾವ ಮರೆತವರು |
ಸರ್ವರ ಹಿತವ ಬಯಸುವರು|| ೩ ||

ಕರ್ನಾಟಕದಲಿ ಕೇಸರಿ ಅನಿಸಿ ಇಹಲೋಕವ ಮರೆತವರು |
ಸದಾ ಅಮರರಾಗಿ ನಿಂತಿಹರು|| ೪ ||

**||ಚಾಲ||**

ಎಪ್ಪತ್ತೈದನೇ ಇಸ್ವಿ ನವ್ಹಂಬರ | ವಿಜಾಪುರ ಶಹರ |
ವಿವಿಧ ಅಧಿಕಾರಿ ವರ್ಗದವರು | ಹತ್ತು ಸಾವಿರ ಜನ ಕೂಡಿಹರು|| ೧ ||

ಸುರಪುರ ಆತ್ಮಕ್ಕೆ ಅವರು | ಚಿರಶಾಂತಿಯ ಬೇಡಿಹರು |
ಮೆರೆಸಿ ಇಂಡಿಗೆ ಬಂದಿಹರು | ಜನ್ಮಭೂಮಿ ಅಂತ್ಯ ಸಂಸ್ಕಾರ|| ೨ ||

ಇಂಡಿ ಕೋರ್ಟು ಕಚೇರಿ ಅಂಗಡಿ ಮುಚ್ಚಿ ಸರ್ವರು
ಸಾವಿರಾರು ಜನರು ನೆರೆದಿಹರು ಕಣ್ಣೀರ ಮುಡಿಯುತ ನಿಂತಿಹರು‖ ೩ ‖

**||ಏರ||**

ಎಷ್ಟು ಹೇಳಿದರೂ ತೀರದು ಎಂದು ಆತ್ಮಕೆ ಶಾಂತಿ ಸಿಗಲಿ ಎಂದು ।
ಸೃಷ್ಟಿ ಕರ್ತಗೆ ಬೇಡಿ ವಾಲಿ ಶರಣನ ಕವನ‖ ಆನೆಯ ಚೌಕ ‖
ಸಾಲುಟಗಿ ಮೇಳ ನಾಲ್ವರು । ಬಸಯ್ಯ ಹಾಡುವರು ।
ಹಿಮ್ಮೇಳ ನಿಂಗಪ್ಪರೇವಣಸಿದ್ಧರು । ಎಲ್ಲರೂ ಒಂದೆ ಊರವರು ‖

**ರಚನೆ :** ಶರಣಪ್ಪ ವಾಲಿ
**ಕೃತಿ :** ಶರಣ ಸ್ಮೃತಿ

## ೫೫. ಸರದಾರ ಡಾ. ನಾಗೂರರ ಆದರ್ಶ ಧರ್ಮಪತ್ನಿ ದಿ. ಸುಶೀಲಮ್ಮನವರು

ಸರದಾರ ನಾಗೂರರ ಧರ್ಮಪತ್ನಿ ಸತ್‌ಶೀಲ ಸುಶೀಲಮ್ಮನವರು ।
ಧೀರತನದ ಸಂಸಾರ ಸಾಗರದ ಹಿರಿಯ ದಾರಿಯನೆ ತೋರಿಹರು

ಸತ್ಯವಾನ ಸತಿ ಸಾವಿತ್ರಿಯಂತೆ ಪತಿಪ್ರೀತಿಯಲಿ ನಿಂದವರು ।
ಸತ್ಯನ್ಯಾಯ ನಿಷ್ಪಕ್ಷಪಾತದ ತತ್ವದಲ್ಲಿ ಸದಾ ತತ್ಪರರು

ತರುಣರ ಮನ ತಿರುಗಿಸುವ ಶಕ್ತಿ ಸಾಮರ್ಥ್ಯವುಳ್ಳ ಸರದಾರರು ।
ನಿರ್ಭಯ ನಿರ್ದಾಕ್ಷಿಣ್ಯ ನಿಷ್ಠುರ ಮಾತಿನಲ್ಲಿ ಅತಿ ಚತುರರು ‖
ನಿರಾಶೆ ನೀತಿವಂತರು । ದುರಾಶೆಯವನು ದೂಷಿಪರು ।
ಸತ್ಯತನವನತಿ ಪ್ರೀತಿಪರು । ಸರದಾರ ಬಿರುದ ಧರಿಸಿಹರು ‖
ಧೈರ್ಯದಿಂದ ಸರಿಯಾದ ದಾರಿಗೆ ತರುಣರನ್ನು ಹುರಿಗೊಳಿಸುವರು ।
ಸರದಾರ ಬಸವರಾಜರು

ರೀತಿ ನೀತಿ ಕೃತಿ ಮಾತಿನಲ್ಲಿ ಶಾರದೆಯ ಪುತ್ರರೆಂದೆನಿಸಿಹರು ।
ಮತಿಗೆ ಮೆಚ್ಚಿ ಮೈಸೂರ ಕೋರ್ಟಿನ ನ್ಯಾಯಾಧೀಶರ ಪುತ್ರಿಯರು ।
ಹತ್ತೊಂಬತ್ತು ನೂರಾ ಐವತ್ತಾರರಲಿ ಸರದಾರರ ಕೈ ಹಿಡಿದಿಹರು ।
ನಿತ್ಯನೇಮ ಸತ್ಪಥದಿ ಆದರಾತಿಥ್ಯದಲ್ಲಿ ಕಡುಜಾಣೆಯರು ‖
ಪಾರಮಾರ್ಥಕೆ ಪ್ರಪಂಚ ಕೂಡಿಸ ಸಂಸಾರ ಸಾರುವ ಸವಿದವರು ।
ಸಾರ್ವಜನಿಕ ಕಾರ್ಯದಲಿ ಸರಿಯಾಗಿ ಬೆರೆತು ಬಲ್ಲಿದರೆನಿಸಿಹರು ‖
ಸುಶೀಲ ಸುಗುಣವಂತರು । ಶಶಿಕಾಂತಿ ಹಸನ್ಮುಖದವರು ।

ಸುಸಂಸ್ಕೃತ ಸುವಿಚಾರಿವರು | ಹೆಸರಾದ ಸುಶೀಲದೇವಿಯರು |
ತನು ಎರಡಾದರೂ ಮನ ಬೆಸುಗೆಯ ಘನ ಸವಿ ಸೌರಭವನು ಸವಿದವರು
ನಾಗೂರ ಸತಿಪತಿದ್ವಯರು

**ರಚನೆ :** ಶರಣಪ್ಪ ವಾಲಿ
**ಕೃತಿ :** ಶರಣಸ್ಮೃತಿ

## ೫೮. ಶ್ರೀ ಸಿಂಪಿ ಲಿಂಗಣ್ಣ

ಮೆರೆವ ಮುತ್ತನು ತೆರೆದು ತೋರ್ವತೆರ ವರದ ಸಿಂಪಿ ಲಿಂಗಣ್ಣನವರು |
ಭಾರತ ರಾಷ್ಟ್ರದ ರಾಷ್ಟ್ರಪತಿಗಳಿಂದ ಶ್ರೇಷ್ಠ ಪ್ರಶಸ್ತಿಯ ಪಡೆದವರು॥ ೧ ॥

ಹತ್ತೊಂಬತ್ತು ನೂರಾ ಐದರಲ್ಲಿ ಚಡಚಣ ಗ್ರಾಮದಲಿ ಜನಿಸಿಹರು |
ಹೆತ್ತ ತಾಯಿತಂದೆ ಮರಣಹೊಂದಿ ಶಾರದೆಯ ಹಸ್ತದಲಿ ಇತ್ತಿಹರು॥ ೨ ॥

ಪ್ರಾಥಮಿಕ ಶಿಕ್ಷಣದಲ್ಲಿ ಪ್ರಥಮ ಸ್ಥಾನ ಆರನೆ ಇಯತ್ತೆಗೆ ಬಂದಿಹರು |
ಪ್ರಾಮಾಣಿಕತನ ನಿಬಂಧ ವಿಷಯದಿ ಶಿಕ್ಷಣಾಧಿಕಾರಿ ಬೆರಗಾದರು॥ ೩ ॥

**||ಚಾಲ||**

ಮುಲ್ಕೀಪರೀಕ್ಷೆ ಇಪ್ಪತ್ತೆರಡರಲಿ | ಮೇಲ್ಮೆಯ ಸ್ಥಾನ ಜಿಲ್ಲೆಯಲಿ |
ಬಲ್ಲಬಲ್ಲ ನಾಡಕವಿಗಳಲಿ | ಮೇಲೆಂದು ಸರ್ವರ ಬಾಯಿಯಲಿ |
ಶಾಲೆ ಬಿಟ್ಟರು ಮನೆಗೆಲಸದಲಿ | ನೇಯುವರು ಸೀರೆ ಓದುತಲಿ |

**||ಏರ||**

ಬಾಲ್ಯದಲ್ಲೇ ಸಾಹಿತ್ಯತಲೆಯಲಿ ಗ್ರಂಥಾಲಯ ಸಹ ತೆಗೆದಿಹರು॥ ೧ನೆಯ ಚೌಕ ॥

'ಮುದ್ದು'ಕೈ ಬರಹದ ಸುದ್ದಿ ಪತ್ರಿಕೆಯಲಿ ಕನ್ನಡ ಕವಿತೆಯ ಬರೆಯುವರು |
ಎದ್ದು ನೇಮದಲಿ ಮಿಂದು ಬಾವಿಯಲಿ ಬಂದು ಬರಹದಲೇ ತೊಡಗುವರು ॥
ವರುಷದಲ್ಲೇ ಟ್ರೇನಿಂಗ ಪಡೆಯಲು ಸರ್ವರಲ್ಲಿ ಇವರ್‍ನ ಆರಿಸಿಹರು |
ಹರುಷದಲ್ಲಿ ಸಾಹಿತ್ಯ ಶಕ್ತಿಗೆ ಹೊಸಕಳೆ ಮೆರುಗನು ಪಡೆದಿಹರು ॥
ಶಿಕ್ಷಕರಾಗಿ ಭತಗುಣಕಿಯ ಜನ ಮನ ಮೆಚ್ಚುಗೆಯನು ಪಡೆದಿಹರು |
ಉಕ್ಕೇರಿ ಸಾಹಿತ್ಯ 'ಜನಜೀವನ' ಮೊದಲಾದ ನಾಟಕವ ಬರೆದಿಹರು ॥

**||ಚಾಲ||**

ನಾಟಕ ಆಡಿಸಿ ನಾಯಕ ಕಲೆಕ್ಟರರು । ಅದರ ರಚನೆಗಾಗಿ ಹೊಗಳಿದರು ।
ರಾಜಕೀಯ ಅನ್ಯಾಯ ತೋರಿಹರು । ರಾಜದ್ರೋಹಿ ಕತೆಯ ಬರೆದಿಹರು ।
ರಾಷ್ಟ್ರೀಯ ಲಾವಣಿ ರಚಿಸಿದರು । ಶಿಕ್ಷೆಯೆಂದು ಇಂಗಳೇಶ್ವರ ಕಳಿಸಿದರು ।

||ಏರ||

ಇಷ್ಟಾದರು ಸಹ ಕಷ್ಟದಲ್ಲಿಯೆ । ರಾಜನಿಷ್ಠರ ಕತೆ ಬರೆದಿಹರು॥ ೨ನೆಯ ಚೌಕ ॥
ಹಲಸಂಗಿಗೆ ವರ್ಗಾಗಿ ಚೆನ್ನರ ಮಧುರ ಸಾಹಿತ್ಯವ ಪಡೆದಿಹರು ।
'ಮಲ್ಲಿಗೆದಂಡೆ' 'ಗರತಿಯಹಾಡು' 'ಮಿಲನ' ಕಾವ್ಯವನು ರಚಿಸಿದರು ॥
ಭಾಷಾಪ್ರಭುತ್ವ ನೈಜಪ್ರತಿಭೆಯ ಗಣ್ಯವ್ಯಕ್ತಿಯೆಂದೆನಿಸಹರು ।
ಆಶುಕವಿತೆಯ ಸ್ಪರ್ಧೆಯಲ್ಲಿ ಸಹ ಪ್ರಥಮ ಸ್ಥಾನವ ಪಡೆದಿಹರು ॥
'ಪವಿತ್ರ ಜೀವನ' ಕೃತಿಯನು ಕಂಡು ಕಾಲೇಜ ಶಿಕ್ಷಕರಾದವರು ।
ಇವರನು ನೋಡಿ ಟ್ರೇನಿಂಗ ಕಾಲದಿ ಪ್ರತಿಭೆಗೆ ಬೆರಗಾಗಿ ನಿಂತಿಹರು ॥

||ಚಾಲ||

ಕನ್ನಡ ಶಿಕ್ಷಣ ಗಣಿತದಲ್ಲಿ । ಉನ್ನತ ನಾಲ್ಕು ಜಿಲ್ಲೆಯಲ್ಲಿ ।
ಸನ್ ಇಸ್ವಿ ನಾಲ್ವತ್ತೆರಡರಲಿ । ಟ್ರೇನಿಂಗ ಮುಗಿಸಿ ಶಾಲೆಯಲಿ ।
ಸನ್ ನಾಲ್ವತ್ಮೂರನೇ ಇಸ್ವಿಯಲ್ಲಿ । ಶ್ರೀ ಅರವಿಂದರ ಮಾರ್ಗದಲಿ ।

||ಏರ||

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಹೊಸ ಹೊತ್ತಿಗೆಯನು ಬರೆದಿಹರು॥ ೩ನೆಯ ಚೌಕ ॥
ಸನ್ ನಾಲ್ವತ್ತಾಲ್ಕರಲಿ ರಬಕವಿ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿಹರು ।
ಜನಪದ ಸಾಹಿತ್ಯ ಸವಿಸೌರಭವನು ಜನಜನತೆಗೆ ಉಣಬಡಿಸಿಹರು ॥
ಶ್ರೀ ಭಗವಾನ್ ಅರವಿಂದರ ತತ್ವವ ಕನ್ನಡದಲಿ ತಿಳಿಬರೆದವರು ।
ಸರಳಶೈಲಿಯ ವಿಚಾರ ಸರಣಿ ಧ್ಯೇಯ ಧೋರಣೆಗೆ ಮೆಚ್ಚಿಹರು ॥
ಕರ್ನಾಟಕ ವಿಶ್ವವಿದ್ಯಾಲಯವು ಪಠ್ಯಪುಸ್ತಕವೆಂದು ಆರಿಸಿಹುದು ।
'ಗರತಿಯಬಾಳು' 'ಪವಿತ್ರ ಜೀವನ' ಬಿ.ಎ. ತರಗತಿಗ್ಹಚ್ಚಿಹರು ॥

||ಚಾಲ||

ತಕ್ಕ 'ಸ್ವರ್ಗದೋಲೆ' ರಚಿಸಿದರು । ಮುಖ್ಯ ವಿದ್ಯಾಲಯಕ್ಹಚ್ಚಿದರು ।
ಸಮಾಜ ಶಿಕ್ಷಣಕೆ ಅಧಿಕಾರಿ । ಆಗಿ ಸೇವೆಯನು ಮಾಡಿದರು ।
ಮುಖ್ಯಸ್ಥರಾಗುತ ಮೈಸೂರು । ಶಿಕ್ಷಣ ಬೋರ್ಡಿಗೆ ಸದಸ್ಯರು ।

||ಏರ||

ಮೂವತ್ತೈದು ವರ್ಷ ಸೇವೆ ಸಲ್ಲಿಸಿ ಶಿಕ್ಷಕವೃತ್ತಿಯ ಮುಗಿಸಿಹರು॥ ಆನೆಯ ಚೌಕ ॥
ಎಲ್ಲರಲ್ಲಿ ಬಲ್ಲ ಶಿಕ್ಷಕರಿವರೆಂದು ಬಾಬು ರಾಜೇಂದ್ರ ಪ್ರಸಾದರು ।
ದಿಲ್ಲಿಯ ಭವನದಿ ರಾಷ್ಟ್ರಪ್ರಶಸ್ತಿಯ ಪಡೆದಿಹ ಗುರುವರ ನೋಡಿದರು ॥
ಬಹುಮುಖ ಪ್ರತಿಭೆಯ ಕನ್ನಡ ಲೇಖಕ ಜನಪದ ಕವಿಯೆಂದೆನಿಸಿದರು ।
ಬಹುಮಾನಿತ ಶ್ರೀ ಸಿಂಪಿಯವರು ಈಗ ಎಪ್ಪತ್ತಾರಕೆ ಬಂದಿಹರು ॥
ಶ್ರೀ ಅರವಿಂದ ಗ್ರಂಥಮಾಲೆಯ ನೂರಾರು ಕೃತಿಗಳ ತಂದಿಹರು ।
ಸರಕಾರವು ಸಹ ಪ್ರತಿಭೆಗೆ ತಿಂಗಳ ಹಣವನು ಕೊಡುತಿದೆ ಐನೂರು ॥

**॥ಚಾಲ॥**

ಸದೃಢ ಕ್ರಾಂತಿ ಶರೀರ । ಸೂಕ್ಷ್ಮನೋಟ ತೀಕ್ಷ್ಣ ಕಿವಿಯವರು ।
ಗಾಂಧಿತಲೆಯ ಖಾದಿ ತೊಡುವವರು । ಆಧುನಿಕ ಚೈನಿ ಅರಿಯದವರು ।
ಎದ್ದು ವ್ಯಾಯಾಮ ಜಳಕ ತಣ್ಣೀರ । ತಮ್ಮ ಬಟ್ಟೆ ತಾವೆ ತೊಳೆಯುವರು ॥

**॥ಏರು॥**

ಕಸವಗೂಡಿಸಿ ಕಟ್ಟಿಗೆಯನು ಸಹ ತರುಣರಂತೆ ಜಿಗಿದೊಡೆಯುವರು
॥ ಆನೆಯ ಚೌಕ ॥

(ಖ್ಯಾಲಿ : ದಾಡಿ ಏಳು ಕೊಳ್ಳದಲಿ ಇರುವ ...... ಎಂಬಂತೆ)
ಶ್ರೀ ಭಗವಾನ್ ಅರವಿಂದರ ತತ್ವದ ಅರ್ಥವ ಅರಿತವರು ।
ಶ್ರೀಮಹಾಮಾತೆಗೆ ಅರ್ಪಿತರು ।
ಶ್ರೀಮಾನ್ ಸಿಂಪಿಲಿಂಗಣ್ಣನವರು॥ ಪಲ್ಲ ॥
ಭಕ್ತಿಭಾವ ಕರ್ತವ್ಯ ನಿಷ್ಠರು । ಶಕ್ತಿ ಮಾತೆಯ ಮೂರ್ತಿವಂತರು ।
ರಕ್ತದ ಕಣದಲಿ ಶಕ್ತಿ ಪಡೆದವರು । ನಕ್ಕುನಗಿಸುವಾ ಹಾಸ್ಯರಸಿಕರು॥ ೧ ॥

ಧ್ಯಾನ ಮೌನ ಪ್ರಾರ್ಥನೆ ಗೈವವರು । ಜ್ಞಾನದಿಂದ ತತ್ವವ ತಿಳಿದವರು ।
ತನುಮನದಿಂದನುಭವ ಪಡೆದವರು । ಮಾನವ ಪ್ರಗತಿಯ ಮಾರ್ಗದರ್ಶಕರು॥ ೨ ॥

ಇಂಥವರಿಂದಲೆ ನಾಡಿಗೆ ಕೀರ್ತಿಯು । ಇಂಥವರಿಂದಲೆ ಜನಜಾಗೃತಿಯು ।
ಇವರಿಗಾಯುರಾರೋಗ್ಯ ಕೊಡಲಿ ಎಂದು । ಬೇಡಿಕೊಳ್ಳುವರು ವಾಲಿ ಶರಣರು॥ ೩ ॥

**ರಚನೆ :** ಶರಣಪ್ಪ ವಾಲಿ
**ಕೃತಿ :** ಶರಣಸ್ಮೃತಿ

## ೫೭. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣರು

ಕನ್ನಡ ನಾಡ ಸಾಹಿತಿ | ಶಾರದೆಯ ಕೃತಿ | ಹಿಂದಿನ ಸ್ಥಿತಿ |
ಇಂದಿನ ಪ್ರಗತಿ | ಬೆಳೆಸುವ ಶಕ್ತಿ | ನಾಡ ತುಂಬ ಜ್ಯೋತಿ |
ಬೆಳಗ ಹತ್ತೈತಿ | ಅದರ ಪ್ರಖರತೆಗೆ ನೀನೇ ಆಧಾರ ನೀನೆ ಆಧಾರ|| ಪ ||

ಐದಕ್ಷರ ನಿನ್ನಯ ಹೆಸರ | ಕೀರ್ತಿ ಸದಾ ಅಮರ | ಸಾಹಿತ್ಯ ಶೃಂಗಾರ |
ನಿನ್ನ ಸಾಕ್ಷಾತ್ಕಾರ | ತೋರು ಅವತಾರ | ತೋರು ಅವತಾರ|| ೧ ||

ನಿನ್ನ ಶಕ್ತಿ ವಿವಿಧ ವಿನ್ಯಾಸ | ಮಧುರಮಂದಹಾಸ | ಹಿಂದಿನಿತಿಹಾಸ |
ತೋರುವ ಸಾಹಸ | ಜನತೆಗತಿ ಹರುಷ | ದೇವಿ ನಿನ್ನ ಧ್ಯಾಸ |
ಆಗಿ ನಿನ್ನ ದಾಸ | ಸತತ ನಿಂತಿಹರು | ಸತತ ನಿಂತಿಹರು|| ೨ ||

ಕೃಷ್ಣ ನವತಾರ | ಹುಟ್ಟಿ ಬಂದಿಹರು | ಶಾರದೆಯ ಕುವರ |
ಶಾಂತಿಸಾಗರ | ಹೃದಯ ವಿಸ್ತಾರ | ಲುಂಗಿ ಧರಿಸುವರು |
ಜೆಪಿ ಗಾಂಧಿ ಶಿಖರ | ನಾರಾಯಣರ | ಜಿ. ನಾರಾಯಣರು|| ೩ ||

ಕನ್ನಡ ನುಡಿಯ ಆನಂದ | ಮಂದಾರ ಮಕರಂದ | ಹೃದಯ ಅರವಿಂದ |
ರಸದಲಿ ಮಿಂದು | ಮಧುರ ರಸಗಂಧ | ನಾಡ ಮಮಕಾರ |
ಕನ್ನಡ ಹರಿವ ಜಲಧಾರ | ಭೂಮಿ ಫಲಪೂರ | ಹಾಡು ಝೇಂಕಾರ|| ೪ ||

ಇನಿಯ ಇಂಚರ | ಸಾಹಿತಿಯನುಸಾರ | ಮಾಡಿ ಪ್ರಸಾರ |
ಮೇಳ ನಾಲ್ವರ | ವಾಲಿ ಶರಣರ | ಸಾಲೊಟಗಿಯವರು | ಸಾಲೊಟಗಿಯವರು|| ೫ ||

**ರಚನೆ :** ಶರಣಪ್ಪ ವಾಲಿ
**ಕೃತಿ :** ಶರಣಸ್ಮೃತಿ

## ೫೮. ಎಂ.ಎಂ. ಕಲಬುರ್ಗಿಯವರು

ಸ್ವಾಗತ ಮಾಳ್ಪೆವು ಆಗಮಿಸಿದ ಕಲಬುರ್ಗಿ ಮಲ್ಲಿನಾಥರಿಗೆ |
ಡಾಕ್ಟರೇಟ ಪದವೀಧರರಿಗೆ || ಪ ||

ಹಿಂದಿನ ಕನ್ನಡ ಲೇಖ ಶಿಲಾಲಿಪಿ ಸಂಶೋಧಕ ತಜ್ಞರಿಗೆ |
ಮೇಧಾವಿಯೆನಿಪ ಮಾನ್ಯರಿಗೆ || ಅ.ಪ. ||

ಮಾಧ್ಯಮಿಕ ಓದನು ಸಿಂದಗಿಯಲ್ಲಿ ಮುಗಿಸಿ ।
ಬುದ್ಧಿವಂತರಾಗಿ ಬಿ.ಎ. ಪ್ರಥಮತೆಗಳಿಸಿ
ಧಾರವಾಡದಿಂದ ಎಂ.ಎ. ದಲ್ಲಿ ರ್‍ಯಾಂಕ ಉಳಿಸಿ । ಶಿಕ್ಷಣ
ಶಿಕ್ಷಣದಿ ಸಾಗಿ ಸಂಶೋಧನೆಯಲ್ಲಿ ಸಿದ್ಧಿ ಪಡೆದ ಮಾನ್ಯರಿಗೆ ।
ಸ್ವಾಗತಿಪೆವು ಸನ್ಮಾನ್ಯರಿಗೆ ॥ ೧ ॥

ಕರ್ನಾಟಕ ಮಹಾವಿದ್ಯಾಲಯದಲ್ಲಿ ಕನ್ನಡ ಪಂಡಿತರೆನಿಸಿ ।
ಕನ್ನಡ ಅಧ್ಯಾಪನವನು ಮಾಡುತ ಬೇಗನೆ ಹೆಸರನು ಗಳಿಸಿ ।
ವಿಶ್ವವಿದ್ಯಾಲಯದಲ್ಲಿ ಅಡಿಯಿರಿಸುತ ಮುನ್ನಡೆದು । ಕರ್ನಾಟಕ ।
ಕರ್ನಾಟಕ ವಿ.ವಿ. ಕನ್ನಡಪೀಠದ ತಜ್ಞ ಪ್ರೊಫೆಸರರಿಗೆ ।
ಸುಸ್ವಾಗತ ಮಾಳ್ಪೆವು ನಿಮಗೆ ॥ ೨ ॥

ಅರುಣೋದಯದಿಂ ಸರಸಿಜಸಮೂಹಕೆ ಹರುಷವಾದ ತೆರದಲ್ಲಿ ।
ಹರುಷಾಗಿದೆ ನಮ್ಮೆಲ್ಲರಿಗೆ ।
ಗೀಗೀ ಮೇಳದ ನಾಲ್ವರೂ ಒಂದಾಗಿ ಸ್ವಾಗತಿಪರು ಸಂಭ್ರಮದಿ ।
ಒಲವಿಟ್ಟು ಬಂದ ಮಾನ್ಯರಿಗೆ ॥

ರಚನೆ : ಶರಣಪ್ಪ ವಾಲಿ
**ಕೃತಿ :** ಶರಣಸ್ಮೃತಿ

# ಹಾಸ್ಯ

## ೧. ತುಂಟ ತುಂಟರಿಗೆ ಗಂಟುಬಿದ್ದರ

ಬೀಗನ ಮನಿಗಿ ಬೀಗ ಹೋದನೋ
ಅಕ್ಕನ ಮಾತಾಡಿಸಿ ಬರಬೇಕಂತ ।

ತುಂಟ ತುಂಟರಿಗೆ ಗಂಟುಬಿದ್ದರ
ಗರದಿ ಆಗತದ ಗಮ್ಮತಾ ॥ ಪಲ್ಲ ॥

ಅಕ್ಕನ ಗಂಡ ಭಾಳ ಜೀನ ಇದ್ದನೋ
ಅವನಿಗಿಂತ ಹೇಣತಿ ನಿಗಳಾ ।

ಒಪ್ಪತ್ತ ಉಂಡವರು ಉಪ್ವಾಸ ಮಾಡತಿದ್ರು
ಎರಡ್ಹೊತ್ತ ಉಣ್ತಿದ್ದಿಲ್ಲ ಕೂಳಾ ॥

ಒಂದಿನ ಅಂತಾನ ಗಂಡ ಹೇಣ್ತಿಗೆ
ನನ್ನ ಮಾತ ಕೇಳ ಸತಿಯಳ ।

ಹೋಳಿಗಿ ಉಣ್ಣೊಹಾಂಗ ಆಗ್ಯೆತಿ ಮನಸಾ
ಹುಕೀ ಬಂದು ಜೀವದಾಗ ಭಾಳ ॥

ಗಂಡ ಹೇಣ್ತಿದು ಆಯ್ತೊಂದು ಮನಸಾ
ಯಾಕಾಗವೊಲ್ಲದಂದಳು ಪುರುಷಾ ।

ಇಂದ ಬ್ಯಾಡ ನಾಳೀನ ದಿವಸ ನಾವು
ಮಾಡಿಕೊಂಡ ತಿನ್ನೋಣು ಅನ್ನರಸಾ ॥

ಮರುದಿನ ಮುಂಜಾನೆದ್ದು ಗಳಗ್ಯಾಗ ಕೈಹಾಕಿ
ಗೋದಿ ತಗದಾಳೊಂದು ಅದ್ದನ ।

ಅದ್ದನ ಹೂರಣ್ಹಾಕಿ ಹೋಳಿಗಿ ಮಾಡಿ
ಮ್ಯಾಲ ಅಟ್ಟಾಳೊ ಅಕ್ಕಿ ಅನ್ನ ॥

ಉಪ್ಪು ಎಣ್ಣಿ ಬೆಲ್ಲ ಉದ್ದರಿ ಆಗತದ
ತುಪ್ಪ ಅಯ್ತಿ ನಮ್ಮ ಮನೀದಿನ್ನ ।

ಅಂಗಡಿಯವರದಿಷ್ಟು ಸಾಲ ಆಗತದ
ಕೊಟ್ಟಾಗ ತಗೋತಾರ ಅವರು ರಿಣ ॥

ಜಳಕಂತ ಗಂಡ ಹಳ್ಳಕ ಹೋದರ
ಬೀಗ ಬಂದ ಸಾಧಿಸಿ ಅದೇ ದಿನ ।

ಬೀಗನ ನೋಡಿ ಮಜುರಿ ಮಾಡಿದಾ
ಹಾದ್ಯಾಗಾಯ್ತೊ ಅವನ ದರ್ಶನ ॥

**||ಇಳುವು||**

ಬೀಗ ತಿಳಿದ ತನ್ನ ಮನಸಿಗಿ
ದಾಡಿ ತಂದ ನಮ್ಮ ಹೋಳಗಿಗಿ ||
ಮುಂಚೆ ಓಡಿ ಬಂದ ಮನಿಗಿ
ಮುಚ್ಚಿದ ಮಾಡಿದ ಹೋಳಿಗಿ ||
ನಿಮ್ಮ ತಮ್ಮ ಬಂದ ನಮ್ಮೂರಿಗಿ
ಎಲ್ಲಿ ಕುಂತಿತ್ತು ಕಾಳಾಗಿ ||

**||ಏರು||**

ಅಯ್ಯೋ ಖೋಡಿ ಇದು ಯಾಕ ಬಂತಂತ
ತಲಿಕಟ್ಟಿ ಮಲಗ್ಯಾಳ ಬ್ಯಾನಿಯಂತ |

ತುಂಟ ತುಂಟರಿಗೆ ಗಂಟುಬಿದ್ದರ
ಗರದಿ ಆಗತದ ಗಮ್ಮತ|| ೧ ಚೌಕ ||

ಬೀಗನ ಮನೀಗಿ ಬೀಗ ಬಂದರ
ಕುಡಿಯಂತ ಕುಡಲಿಲ್ಲ ಮುಕ್ಕ ನೀರ |

ಅಕ್ಕ ಅನೂವಾಕಿ ತಲಿಕಟ್ಟಿ ಮನಗ್ತಾಳ
ಸಾಯುವ ಹಾಂಗ ಆಗಿ ಜೇರ ||

ಬೀಗನ ಮುಂದ ಬೀಗ ಹೇಳತಾನ
"ನೋಡೊ ಬೀಗ ನಮ್ಮ ತಾಪತರಾ

ಮೂರ್ದಿವಸಾಯ್ತು ಕೂಳ್ ನೀರ ಕಂಡಿಲ್ಲ
ದಿಕ್ಕಿಲ್ಲ ರೊಟ್ಟೀ ಮಾಡವರಾ" ||

ಹೂರಣ ಕಲ್ಲ ಹೊರಗ್ಯಾಕ ಇಟ್ಟದ
ಇದರದು ಏನು ಚಮತ್ಕಾರ |

ಮನೆಯೆಲ್ಲ ಹಿಡಿದದ ದುಂದಕಾರ ಕಮರಿಂದು
ಖಚಿತ ಮಾಡ್ಯಾರ ಹೋಳಗಿ ಇವರ ||

**||ಇಳುವು||**

ನನ್ನ ಕಳಿಸಿಕೊಟ್ಟು ತಿನ್ನುವ ಬಗಿ
ಇವರ ಮನಸಿನ ಬೇತ ಹೀಂಗಾಗಿ ||
"ಬೀಗಾ ಹೋಗೋ ನಿನ್ನ ಊರೀಗಿ
ಇಲ್ಲದಿದ್ದರ ಉಪವಾಸ ಮರುಗೀ" ||

**||ಏರು||**

"ಹೋಗೂದು ಹೋಗತೀನಿ ತಲಬ ಆಗೇದ
ಚುಟ್ಟ ತಂಬಾಕರೆ ಸೇದೋಣು ತಾ"|
ತುಂಟ ತುಂಟರಿಗೆ ಗಂಟುಬಿದ್ದರ
ಗರದಿ ಆಗತದ ಗಮ್ಮತ || ೧ ಚೌಕ ||

" ಮನೀ ತಂಬಾಕೆಲ್ಲ ಮೊನ್ನೇ ಮಾರಿದೆವು
ತಂಬಾಕಿಲ್ಲ ಈಗಿನ ಹೊತ್ತ |

ಅಂಗಡಿಗ್ಹೋಗಿ ಉದ್ರಿ ತಂದೇನಂದ್ರ
ಅಂಗಡೆವರಿಲ್ಲ ನಮ್ಮ ಪತ್ತಾ ||

ಎಮ್ಮಿ ಈದ ಮ್ಯಾಲೆ ಒಮ್ಮೇ ಬಂದೀದಿ ಖರೆ
ನಮ್ಮ ಉಪಾಯವಿಲ್ಲದ ಮಾತಾ |

ಮಜ್ಜೀಗಿ ಆಗ್ಯಾವ ನುಚ್ಚ ಇದ್ದರ
ಉಣಿಸುದಿತ್ತು ಹೀಂಗ ನಮ್ಮ ಬೇತ" ||

ಇಷ್ಟು ಕೇಳಿ ಬೀಗಿ ಹೊಂಟು ಹೋಗ್ಯಾನೊ
"ಏಳೇಳು ಪೀಡಾ ಹೋಯಿತಂತ |

ಹಸಿವಾದ ಕೈಲೆ ಬಿಸಿ ಅಡಿಗಿ ತಾರ
ಲಗು ನೀಡಬಾರ ಪಂಚಾಮೃತ" ||

**||ಇಳುವು||**

ಗಂಡಂತಾನ " ಹೀಂಗಲ್ಲ ಠೀಕ
ಇಬ್ಬರು ಕಣ್ಣ ಕಟ್ಟಿ ಉಣಬೇಕ ||
ನೀ ಬಾಯಾಗ ತುತ್ತ ಮಾಡಿ ಹಾಕ
ನಿಮಗುಣಿಸ್ತೀನಿ ನುಂಗ ಸಾಕ್ಸಾಕ" ||
ತೋಡಿಮಾಡಿ ಕುಂತಾರ ಉಣಲಾಕ
ಕಣ್ ಕಟಿಗೊಂಡು ಆ ಕ್ಷಣಕ ||

**||ಏರು||**

ಹೊಳ್ಳಿ ಬೀಗ ಬಂದು ಮಾಳೀಗಿ ಏರಿದ್ದ
ಹೋಗಿದ್ದಿಲ್ಲ ಬೆಂಡಲ ಮತ್ತ ।
ತುಂಟ ತುಂಟರಿಗಿ ಗಂಟು ಬಿದ್ದರ
ಗರದಿ ಆಗತದ ಗಮ್ಮತ॥ ೩ ಚೌಕ ॥

ಮೊದಲಿಗೆ ತುತ್ತ ಮಾಡಿ ಹೇಣತಿ
ಒಯ್ದಾಳ ಗಂಡನ ಬಾಯೀಕಡಿ ।

ಹಗರ ಇಳಿದು ಬಂದು ಆ ತುತ್ತ ತಗೊಂಡಾನ
ಮಾಳಿಗಿ ಬೀಗ ಇವನ ಕಡಿ ॥

ಹೇಣತಿ ಅಂತಾಳ ಮನದಾಗ "ನನಗಂಡ
ಹಸಿದು ಭಾಳ ನುಂಗತೈತಿ ಖೋಡಿ ।

ಯಾವಾಗನ ತುತ್ತು ನಾ ಅವಗ ಹಾಕ್ತೀನಿ
ನನಗೊಂದು ತುತ್ತ ಹಾಕಲಿಲ್ಲ ಮಾಡಿ" ॥

ಗಂಡ ತಿಳಿದಾನ ತನ್ನ ಮನಸೀಗಿ
" ಎಲ್ಲಾ ತಾನೇ ತಿಂತಾಳ ರಂಡಿ ।"

ಅಡ್ಡಬಾಯಿ ಹಾಕಿ ಎಡ್ಡು ಕಡಿ ಹೊಡೆದನ
ಗಡ್ಡ ಮೀಸಿ ಎಲ್ಲಾ ಸೋರ್ಯಾಡಿ ॥

**||ಇಳುವು||**

ಉಂಡು ತಿಂದು ಬಿಟ್ಟಾನ ಥರಿ
ಏನೋ ಗಾತಾಯ್ತು ಲಗು ಕಣ್ತೆರಿ ॥
ಬೀಗಂತಾನ ಗುಲಾಮ ಭಾರಿ
ಹೋಗಿ ಬರ್ತೀನು ಕುಶಾಲ ಇರ್ರೀ ॥

**||ಏರು||**

ಸಂಕದ ಊರಾಗ ಬಲಭೀಮನ ದಯದಿಂದ
ಹೋಳಿಗೆ ಉಂಡಾರ ನಗನಗತ ।
ತುಂಟ ತುಂಟರಿಗಿ ಗಂಟು ಬಿದ್ದರ
ಗರದಿ ಆಗತದ ಗಮ್ಮತ ॥ ೪ ಚೌಕ ॥

***ರಚನೆ :*** ಸಂಕದ ಕವಿ

***ಕೃತಿ :*** ಜೀವನ ಸಂಗೀv

## ೧. ಎಮ್ಮಿಪದ

ಅಣ್ಣ ತಮ್ಮರಿಗೆಲ್ಲಾ ಚೆನ್ನಾಗಿ ಹೇಳುವೆನು
ಸುಮ್ಮನ ಕುಂತ ನೀವು ಕೇಳಬೇಕ
ಸದ್ದೆ ಬಂದೇನ ನಿಮಗೊಂದ ತಿಳಿಸುದಕ
ಇದನ್ನ ನೆನಪೆಟ್ಟು ನಡಿಬೇಕ್ರಿ ಕಡಿತನಕ ॥
ಹುಂಡೆ ಗಳಸೊ ಆಸೆಕಾಗಿ ಹೆಂಡರ ಕೈಯ್ಯಾಗ ಹಿರೇತನಾ
ಎಂದೆಂದು ಕೊಡಬ್ಯಾಡ್ರಿ ಕಡಿತನಕ ॥
ಪ್ರೀತಿ ಮಾತ ಹೇಳಿ ಕೆಡವತಾರ ಮಾಯದ ಮಡಕ ॥

ಗಂಡಾಹೇಣ್ತಿ ಇದ್ದಾರಿಬ್ರು ಮೂರಬಟ್ಟಿ ಬಡತನ ಬಾಳ್ವೆ
ತಕ್ಕ ಮಟ್ಟಿಗಿ ಹೆಚ್ಚಾಗಿಲ್ಲ ಖರ್ಚ ಮಾಡೋದಕ
ಗಂಡ ಹವಣಸತಿದ್ದ ಹಾಲೂ ಹೈನಾ ಉಣ್ಣುದಕ
ಎಮ್ಮಿ ತಂದಾನಂತಾನ ರೂಪಾಯಿಲ್ಲ ಹಂತೇಕ ॥
ಸಾಲ ಆದ್ರು ಸೆಂಟ ಹೋತು ಹೊಂಟ ಹ್ವಾದ ಸಾವಕಾರ ಮನಿಗೆ
ಮುನ್ನೂರ ರೂಪಾಯಿ ಬೇಕ್ರಿ ನನಗ ಎಮ್ಮಿತರಾಕ
ಅಸಲು ಬಡ್ಡಿತಂದು ಮುಟ್ಟಸತೇನು ಸುಗ್ಗಿಕಾಲಕ್ಕ ॥

ಸಾಹುಕಾರ ಹಂತೆ ಸಾಲಾ ತಗದ ಲಗೂಮಾಡಿ ಓಡಿಬಂದ
ಹುರಿಪಿಲಿಂದ ಹುಡಕಿ ತಂದ ಎಮ್ಮಿ ಮಣಕ
ಹೊಸಾ ಹಗ್ಗಾ ಹಂಗಡಾ ಮಾಡಿದಾನ ಮೂರ್ನಾಲ್ಕ
ಬ್ಯಾರೆ ಗೂಟಾ ನಿಲ್ಲಿಸಿದಾನ ಕರಾ ಕಟ್ಟುದಕ ॥
ಹೇಣತಿಗಿ ಹೇಳತಾನ ಗಂಡ ಹೊಲಕ್ಕ ಹೋಗತೇನ ಉಂಡ
ಎಮ್ಮಿಗಿ ಮನಗಂಡ ಹುಲ್ಲ ತರೋದಕ
ನಾನು ಬರೋದರೊಳಗ ಎಮ್ಮಿನೀನು ಹಿಂಡಿ ಇಡಬೇಕ ॥

ಗಂಡಗ ಅಂತಾಳ ಹೇಣ್ತಿ ಲಗೂ ಮನಗಿ ಯಾಕ ಬರತಿ
ಹೊಲದಾಗ ಮಂಗ್ಯಾ ಮುಕರತಾವ ಮೆಣಸಿನ ಗಿಡಕ
ಇಷ್ಟ ಹೇಳೋದರಾಗ ಗಂಡ ಹ್ವಾದ ಹೊಲಕ
ಎಮ್ಮಿ ಹಿಂಡಕೊಂಡ ಕುಂತಾಳ ಸವನೆಲಕ ॥
ಕುಬ್ಬ ಹಾಲ ಕುಡದಾಳ ಉಟ್ರಾಸ್ಯೆಲ ಮಾಡ್ಯಾಳ
ಶಸ್ತಾಗಿ ಕಚ್ಚಿ ಹಾಕ್ಯಾಳ ಆ ಕ್ಷಣಕ
ಎದ್ದ ಊಟಾ ಬೈಟ ಹೊಡಿತಾಳ ಹಾಲ ಕಪ್ಪಸೋದಕ ॥

**ಒಂದನೇ ಚಾಲ**

ಹೊಲದಿಂದ ಗಂಡ ಬಂದ ಹೊಂಟ
ಹುಲ್ಲಹೊರಿ ದಂಟ ತಂದ ವಗದಾನು ।
ಕಾಲಿಗಿ ನೀರ ಹೇಣ್ತಿಗಿ ಕೇಳ್ಯಾನು ॥

ತಂದ ಕೊಟ್ಟಾಳಾಗ ಬಿಸಿನೀರ
ತೊಳದ ಅವಸರ ಒಳಗ ಬಂದಾನು ।
ಹಂಬಲಿಸಿ ಹಾಲ ಬೇಡ್ಯಾನು ॥

**ಎರಡನೇ ಚಾಲ**

ಗಂಡಗ ಅಂತಾಳ ಆವಾಗ
ಏನ ಹುಚ್ಚ ಹಿಡದಿತ್ತೊ ನಿನಗ ।

ಎಂಥಾ ಎಮ್ಮಿ ತಂದೀದಿ ಮನಿಯಾಗ
ಹನಿಹಾಲ ಇಲ್ಲೊ ಮಲಿಯಾಗ ॥

**॥ಏರ॥**

ಸಿಟ್ಟಿಗೆದ್ದ ಹೊಂಟ ಗಂಡ ಇನ್ನ ಎಂಟದಿನಾ ನೋಡಿ
ಪ್ಯಾಟಿಗಿ ಓದ ಹಚ್ಚತೇನ ಮಾರಾಟಕ ।
ತಿನ್ನ ಉಣ್ಣೋದಿಲ್ಲ ನನ್ನ ದೈವಾನಕ ॥
ಹುಂಡೆ ಗಳಸೊ ಆಸೆಕಾಗಿ ಹೆಂಡರ ಕೈಯ್ಯಾಗ ಹರೇತನಾ
ಎಂದೆಂದು ಕೊಡಬ್ಯಾಡ್ರಿ ಕಡಿತನಕ ।
ಪ್ರೀತಿ ಮಾತ ಹೇಳಿ ಕೆಡವತಾರ ಮಾಯದ ಮಡಕ ॥॥ ೧ ॥

ಗಂಡನ ಮನಸ ಒಡಿಸ್ಯಾಳ ನಾರಿ ಎಮ್ಮಿಯಾಕ ಮಾರತೇರಿ
ಇಟಗೊಂಡ ನೋಡೋಣ ಅಂದ್ಲ ಇನ್ನೊಂದ ಸೂಲಾ
ಹಿಂಗ ಕಟ್ಟ ಮಾಡಾಕಿಲ್ಲಾ ಹಗಲೆಲ್ಲಾ
ಲಕ್ಷಣಸುಳಿ ಚೊಲೋ ಎತಿ ಇಂಥಾ ಎಮ್ಮಿ ಸಿಗಾಕಿಲ್ಲಾ ॥
ಪಾಲಿಗಿ ಬಂದದ್ದ ಪಂಚಾಮೃತ ಮನ್ಯಾಗಿರಲಿ ಮೇಕೊಂತ
ಮತ್ತೊಂದ ಎಮ್ಮಿ ತರೋಣ ಸುಗ್ಗಿ ಆದಮ್ಯಾಲಾ
ಹಿಂಗ ಗಂಟಬಿದ್ದ ಹೇಳತಾಳ ಹಗಲೆಲ್ಲಾ ॥

ದಿನಂಪ್ರತಿ ಹಾಲ ಮಸರ ಹೊಡದ ಹೊಡದ ಆದ್ಲ ತಯ್ಯಾರ
ಕುಸ್ತಿ ಹುಡಗನಂಗ ಬಣ್ಣಬಂತ ಮಾರಿಮ್ಯಾಲ

ಈಕಿ ಸೊಕ್ಕನೋಡಿ ನಕ್ಕಾರು ಊರ ಜನರೆಲ್ಲಾ
ಈ ಮಸಲತ್ತ ಗಂಡಗ ಏನೂ ತಿಳಿಯಾನಿಲ್ಲಾ ॥
ನಮ್ಮ ನಸಿಬ ಬಾಳ ಕೆಟ್ಟ ಎಮ್ಮಿ ತಂದಿ ಗಂಟಕೊಟ್ಟ
ಒಂದಿನಾ ಹೈನಾ ನೀನು ಉಣಲಿಲ್ಲಾ
ನಿನ್ನ ಸಲವಾಗಿ ಮರಗತೇನ ಹಗಲೆಲ್ಲಾ ॥

ಬೋಧ ಕೇಳೋದಕ್ಕ ಗಂಡ ಹ್ವಾದ ಸಾಧೂರ ಮಠಕ ಉಂಡ
ಭಕ್ತಿಲಿಂದ ಬಿದ್ದ ಸಾಧೂರ ಪಾದದ ಮ್ಯಾಲಾ
ಬಿಚ್ಚಿ ಹೇಳತಾನ ಮನಿಯಾಗ ನಡದದ್ದೆಲ್ಲಾ
ನನಗ ಇಲ್ಲಿ ತನಕಾ ದ್ಯಾಸಕ್ಕಿದು ಬರಲಿಲ್ಲಾ ॥
ಶೋಧ ಮಾಡಿ ಸಾಧು ಆಗ ಭೂತಗಾಳಿ ಮಂತ್ರಊದಿ
ಚೀಟಿವಂದ ಬರದ್ದಾನ ತತ್ಕಾಲಾ
ನೆಲವಿಗೆ ಓದ ಕಟ್ಟಂತ ಹೇಳ್ಯಾನ ಅಕಲಾ ॥

ನೆಲವಿಗೆ ಚೀಟಿ ಕಟ್ಟ್ಯಾನ ಓದ ಹೊಲಕ ಹ್ವಾದ ಮುಂಜಾನೆದ್ದ
ಈಕಿ ಎಮ್ಮಿ ಹಿಂಡಿ ಓದ ಇಟ್ಟ ನೆಲವಿನ ಮ್ಯಾಲಾ
ಅಡಗಿ ಅಂಬಲಿ ಕಸಾ ಮುಸರಿ ದಗದ ಮೊದಲಾ
ಎಲ್ಲಾ ಹ್ವಾರೆ ಮುಗಿಸಿದಾಳ ಸುಸ್ತ ಮಾಡಿಲ್ಲಾ ॥
ತಗೊಂಡಾಳ ಸಕ್ರಿ ಚೀಟ ಕ್ವಾಣಿ ಹೊಕ್ಕಾಳ ಲಗೂಟ
ಕೈ ಓದ ಇಟ್ಟ ಹಾಲಿನ ಸ್ವಾರಿಮ್ಯಾಲಾ
ಮಂತ್ರದ ಶಕ್ತಿ ಗಟ್ಟಿಮುಟ್ಟಿ ಹಿಡಿದೀತಾಗ ಬಿಡಲಿಲ್ಲ ॥

**ಒಂದನೇ ಚಾಲ**

ಮನದಲ್ಲಿ ಮಾಡ್ಯಾಳ ಗಡಿಬಿಡಿ ನೋಡ್ಯಾಳ ಜಗ್ಗ್ಯಾಡಿ
ಹಿಡದೀತ ರಿಕ್ಕ ಮುಕ್ಕಽ
ಏನ ಬಂತ ನನ್ನ ಹಣೆಬಾರಕ ॥

ಹಿಂಗ್ಯಾಕ ಹಿಡದೀತ ನನಗ ಇದ ಏನ ಸೋಜಿಗ
ಹಾಲಮಸರ ಮಜ್ಜಿಗಿ ಒಯ್ಯಾಕ ।
ಆಕಿ ಗೆಳತಿ ಬಂದಾಳ ಆ ಕ್ಷಣಕ ॥
ಮುಂದಕೂತು ಬಾರ ಗೆಳತೆವ್ವ ಹಿಡದಽತಿ ಈ ನೆಲವ
ನಿಲಬ್ಯಾಡ ಸುಮ್ಮಽಕ
ನೆರವಾಗ ನನ್ನ ಬಿಡಸೋದಕ ॥

**ಎರಡನೇ ಚಾಲ**

ಮತ್ತಷ್ಟು ಕೊಡತೇನಿ ಮಸರ ಮಜ್ಜಿಗಿ
ಹಾಲ ತುಪ್ಪ ಮತ್ತ ತಿತಿಮತಿಗಿ ||

ಹೋಗಿ ನಿಂತಾಳೊ ಆಕಿ ಎದುರೀಗಿ
ಎರಡು ಕೈಯ್ಯ ಹಚ್ಚ್ಯಾಳೊ ನೆಲವೀಗಿ ||

ಹತ್ತಂಡಿ ಆತ ಕೈಯ್ಯ ನೆಲವೀಗಿ
ಸಿಕ್ಕೊಂಡಿನಿ ಅಂತಾಳ ಹೈನಕಾಗಿ ||

**||ಏರ||**

ಹಿಂದುಗಡೆ ಬಂದಾಕಿ ದಂಗಬಡದ ನಿಂತಾಳ
ನಾನು ಹೊಲಕ ಹೋಗೋದಿತ್ತ ಹಕ್ಕಲಾ ಬಿತ್ತೋದಕ
ಗಂಡ ಮುಂಜಾನೆದ್ದು ಮುಂದ ಹ್ವಾದ ಗಳೆ ಹೂಡೋದಕ
ಅಂವಗ ಊಟಾ ಒಯ್ಯಬೇಕ ನಾನು ಮಧ್ಯಾಹ್ನಕ ||
ಹುಂಡೆ ಗಳಸೊ ಆಸೆಕಾಗಿ ಹೆಂಡರ ಕೈಯ್ಯಾಗ ಹಿರೇತನಾ
ಎಂದೆಂದು ಕೊಡಬ್ಯಾಡ್ರಿ ಕಡಿತನಕ |
ಪ್ರೀತಿ ಮಾತ ಹೇಳಿ ಕೆಡವತಾರ ಮಾಯದ ಮಡಕ |||| ೧ ||

ಜಗ್ಗ್ಯಾಡಿ ಕೈಸೋತ ನಿಂತಾರಿಬ್ಬರೂ ಆತಗೋತ
ಚಿಂತಿ ಮಾಡತಿದ್ರ ಮನದಾಗ
ನಾವು ನಗ್ಗೀಡಾಗೋದು ಬಂತ ಸದ್ದೆ ಜನದಾಗ
ಅಷ್ಟರೊಳಗ ಐನಾರ ಬಂದ ಬಾಗಲದಾಗ ||
ಕಜ್ಜಾಯ ಭಿಕ್ಷಾ ನೀಡ್ರಿ ಈಗ ಯಾರದೇರಿ ಮನಿಯಾಗ
ಮಧ್ಯಾಹ್ನದ ಹೊತ್ತ ಹಸಿವಿ ಆಗೇದ ನನಗ
ಇಬ್ರೂ ಕದ್ದೀಲಿ ಕರದ ಹೇಳತಾರ ಆ ಜಂಗಮಗ ||

ಊರೆಲ್ಲ ತಿರಗಿದರ ಸೇರ ಜ್ವಾಳಾ ಸಿಗೋದಿಲ್ಲ
ಈ ಹಾಲಸ್ವಾರಿ ಇಳಿಸಿ ಕೊಡ ನಮಗ
ಜಳಕಾ ಮಾಡಿಸಿ ಹುಗ್ಗಿ ಮಾಡಿ ನೀಡತೇವ ನಿನಗ
ಜೋಳಿಗಿ ತುಂಬಾ ಜೋಳದ ಭಿಕ್ಷಾ ಹೋಗುವಾಗ ||
ಹುಗ್ಗಿ ಜೋಳದ ಆಸೆಕಾಗಿ ಜೋಳಗಿ ಬೆತ್ತಾ ಮೂಲ್ಯಾಗಿಟ್ಟ
ಅರಿವಿ ಕಳದ ಹೋಗಿ ಹೊಕ್ಕ ಕ್ವಾಣ್ಯಾಗ
ಎರಡು ಕೈಯ್ಯ ಹಾಕಿದಾನ ಹಾಲ ಸ್ವಾರಿ ಮ್ಯಾಲ ||

ಆ ಮಳ್ಳ ಅಯನಾರಗ ಇವರ ಮಳ್ಳತನಾ ತಿಳೀಲಿಲ್ಲ
ಒಳಗ ಯಾಕ ಬನ್ನಿ ಗಂಡಸರಿಲ್ಲದ ಮನಿಯಾಗ
ಎಂಥಾ ಬುದ್ಧಿ ಕೊಟ್ಟ್ಯೋ ಸ್ವಾಮಿ ಶಂಕರಾ ನನಗ
ಅಲ್ಲೆ ಜೋತ ಬಿದ್ದನಿಂತ ಅವರ ಮಗ್ಗಲದಾಗ ॥
ಎಮ್ಮಿಕರಾ ಅಡ್ಡ್ಯಾಡತಿತ್ತ ಅರಿವಿ ತಿನ್ನೋದು ಕಲಿತಿತ್ತ
ಅಡಬಡಿಸುತ್ತ ಬಂತ ಅವರ ಕಾಲಾಗ
ಅದು ಸೀರಿ ಜಗ್ಗಿ ನೆಕ್ಕತಿತ್ತ ಅವರ ತೊಡಿಮ್ಯಾಲ ॥

ಚಿಂತಿ ಇಲ್ಲೋ ಅಯ್ಯಾ ನಿನಗ ಹೊತ್ತ ಬಂದಃತಿ ನಮಗ
ಭ್ರಾಂತಿ ಆಗೇತೇನೋ ನಿಂದ ನಮ್ಮಮ್ಯಾಗ
ಅತ್ತೆ ದೂರಸರಿ ಮೈಗೆ ಮೈ ಹತ್ತವಾಂಗ
ಹಿಂಗ ಬರೀ ಬತ್ಲೆ ನಿಂತ್ರು ಕತ್ತಲ ಮೂಲ್ಯಾಗ ॥
ಅತ್ತ ಹೊಳ್ಳ ಇತ್ತ ಹೊಳ್ಳ ಅಷ್ಟರೊಳಗೆ ಗಂಡ ಬಂದ
ಏನ ಮಾಡಾತೀ ಅಂತ ಹೊಕ್ಕ ಕ್ವಾಣ್ಯಾಗ
ದಿಟ್ಟಿಸಿ ನೋಡ್ಯಾನ ಅತಿ ಸಿಟ್ಟಿನೊಳಗ ॥

ಅತ್ತ ಜಗ್ಗ ಇತ್ತ ಜಗ್ಗ ಮೂರು ಮಂದಿ ಜಗ್ಗಿ ಜಗಿ
ತಬ್ಬಿಬ್ಬಾಗಿ ನಿಂತಿದಾರ ಅಡಿಗಿ ಕ್ವಾಣ್ಯಾಗ
ಗಂಡ ಹುಡಕತಿದ್ದ ಬಡಿಗಿ ಬಾರಕೋಲ ಅತಿಬೇಗ
ಕಟಿಗಿ ವಡ ವಳಿಕಿ ಎರಿತಿತ್ತ ಒಳಿಯೊಳಗ ॥
ಹೊಳ್ಳಿ ನೋಡಿದಾಗ ಗಂಡಕೊಳ್ಳಿ ಕೈಯಾಗ ತಗೊಂಡ್ಹೋಗಿ
ಒಳಿತಾಗಿ ಎಳದ ಅವರ ಬೆನ್ನಮ್ಯಾಗ
ಅದು ಸಿಕ್ಕಾ ಹೊಡದಂಗಾತು ಎಂದು ಮಾಜದಂಗ

**ಒಂದನೇ ಚಾಲ**

ಬಡಗಿ ತಗೊಂಡ ಹಣದಾನ ಕುಬ್ಬ ಬಾತಿತವರ ದುಬ್ಬ
ಶಸರ ಉಳಿಲಿಲ್ಲಾ ।
ಎಸರ್ಹಾತತಾರ ಮ್ಯಾಲ ಮ್ಯಾಲ ॥
ಮೂರು ಮಂದಿ ಮಾಡ್ಯಾರ ಹಾಯ್ ಹಾಯ್ ಬಂದಿತವಗ ದಯಾ
ಚೀಟಿ ಬಿಚ್ಚಿ ಬಿಟ್ಟ ತಾತ್ಕಾಲಾ ।
ಅಡ ಬಡಸಿ ಬಿದ್ದಾರವನ ಕಾಲಾ ॥
ನಮ್ಮ ಕಡೆ ಆಗೇತಿ ತಪ್ಪ ಮಾಡರಿ ಮಾಫ
ನೆಂಪ ಉಳೀತ ಕಡಗಿನ ಕಾಲಾ ॥
ಇಂಥಾ ಕೆಲಸ ಎಂದೂ ಮಾಡೋದಿಲ್ಲಾ ॥

**ಎರಡನೇ ಚಾಲ**

ಹೋಗಂತ ಅಪ್ಪಣಿ ಕೊಟ್ಟಾನು ಸ್ವಾಮೀಗಿ
ಭಿಕ್ಷಕ್ಕ ಬರುದಿಲ್ಲರಿ ನಾನು ಈ ಊರಿಗಿ ॥
ಕರದ ಹೇಳ್ಯಾವ ನೆರಮನಿ ಯಜಮಾನರಿಗಿ
ಬುದ್ಧಿ ಕಲಸರಿ ನಿಮ್ಮ ಹೆಂಗಸರಿಗಿ ॥

**॥ಏರ॥**

ಬಂಟ ಗಂಡಸರಿಗೆ ಪಂಟ ಹೇಳಿ ಹೆಂಗಸರು
ಕೈಗಂಟ ಮಾಡತಾರ ಚೈನಿ ಹೊಡಿಯೋದಕ
ತಿಗಡೊಳ್ಳಿ ಮರಿಕಲ್ಲ ಮಾಡಿದ ಕವಿ ಠೀಕ
ಗುರು ಬಲಭೀಮದಾನ ಅವನ ಸಾಯಕ್ಕ ॥
ಹುಂಡೆ ಗಳಸೊ ಆಸೆಕಾಗಿ ಹೆಂಡರ ಕೈಯ್ಯಾಗ ಹಿರೇತನಾ
ಎಂದೆಂದು ಕೊಡಬ್ಯಾಡ್ರಿ ಕಡಿತನಕ ।
ಪ್ರೀತಿ ಮಾತ ಹೇಳಿ ಕೆಡವತಾರ ಮಾಯದ ಮಡಕ ॥॥ ೩ ॥

***ರಚನೆ :*** ಮರಿಕಲ್ಲಕವಿ
***ಕೃತಿ :*** ಮರಿಕಲ್ಲಕವಿಯ ಗೀಗೀ ಪದಗಳು

## ೩. ಬಸರಿದ್ದೀನ್ಹೆಸರಿನ್ನೇನಿಡೂನ ?

**೧ ನೆಯ ಚೌಕ**
ಸತಿಪತಿ ಕೂಡಿ ಜೋಡಿ । ಹಿತದಿಂದ ಮಲಗಿದಾಗ
ಗೊತ್ತಮಾಡಿ ಹೇಳ್ಗಂಡಾ ಹ್ಯಾಂಗ್ಮಾಡೂನ ?

ನಿಮ್ಮುಂದ ಮಾತೊಂದು । ಬಿಚ್ಚಿ ಮುಚ್ಚಿ ಹೇಳ್ತೀನು
ಬಸರಿದ್ದೀನ್ಹೆಸರಿನ್ನ ಏನಿಡೂನ ? ॥

ಗಂಡ ಹಿಗ್ಗಿ ನಕ್ಕ ನಗಿ । ಸುಳ್ಳ ತಗಿ ಗಾಳಿಮಾತ
ನನ್ಮುಂದ ಹೇಳಬ್ಯಾಡ ಇಂಥಾ ಹೊಯ್ಕ ।

ಔ ಶಿವನೆ ಎಂಥಾ ಮಾತ | ತಿಂಗಳ ಮ್ಯಾಲ ಒಂದಿನ ಆಯ್ತು
ಮಂದೀ ಹಾಂಗ ಹೇಳಕ್ಕೆಲ್ಲ ನಾ ಸುಮಕ ||

ಕುರುಬರಂಥ ಅರಬರಂಡಿ | ಜರಬದಿಂದ ಬೇದ್ವೇಳ್ತೀನು
ಅರಬೀ ಸಾಹಿತ ಮಾಡ ಕೂಸೀಗಿ ಮೆತ್ತಗ್ಹಾಸುದಕ ||

ಕೆಟ್ಟ ತೊಟ್ಲ ಕಟ್ವಾಂವಲ್ಲ | ನಿತ್ತ ತೂಗು ಅಳುವಾಗ
ಬಿಟ್ಟ ಹೊರಗ ಹೋದರೊದ್ದು ಮುರದೇನು ಸೊಣಕ ||

ಖುಷಿಯಿಂದ ಕೂತ ಕೊಂಡು | ಹೆಣ್ತೀ ಮುಂದ ಹೇಳ್ತಾನ
ಮಕ್ಕಳ  ಮಾರಿ ಇದ್ದಿದ್ದಿಲ್ಲ ಇಂದಿನ ತನಕ |

ಇನ್ನ ಮಾತ್ರ ದೇವರು ಕೊಟ್ಟ | ಸಂಶಾಯಿಲ್ಲ ಎಳ್ಳಷ್ಟ
ನೆಡತನ ಮಾಡಬೇಕು ನಮ್ಮ ತಕ್ಕಾ ||

**||ಇಳುವು||**

ಹೆಣತ್ತೇಳತಾಳ ಓಡಾಡಿ | ವರ ನೋಡಿ ಬಾರ ತಿರುಗಾಡಿ ||
ಮುಚ್ಚೆ ಹುಚ್ಚ ನಂಥವ ನೀ ಖೋಡಿ | ಕೋರಿ ಹರ್ಕರ ನೆಡತನ ಮಾಡಿಗೀಡಿ
ಅಳಿಯಾಗ ಹಾಕಬೇಕು ಖಡಿ ತೋಡಿ | ಸೀರಿ ಕುಬಸ ನಿನಗ ಧೋತ್ರ ಜೋಡಿ

**||ಏರು||**

ಯಾತರಾಗ ಏನೂ ಇಲ್ಲ ಖಾತ್ರಿ ಮಾತ್ರ ಬೀಗರು ಬೇಕು |
ರಾತ್ರೀ ಹಗಲ ಕೂಡಿ ನಾವು ಮದವೀ ಮಾಡೂನ |
ನಿನ್ಮುಂದ ಮಾತೊಂದು | ಬಿಚ್ಚಿ ಮುಚ್ಚಿ ಹೇಳ್ತಿನು
ಬಸರಿದ್ದೀನ್ಹೇಸರಿನ್ನೇನಿಡೂನ ||

**೨ ನೆಯ ಚೌಕ**

ಅಬ್ರುಗೇಡಿ ರಂಡಿ ನೀನು | ಖಬರ್ಹಾರಿ ಮಾತನಾಡಬ್ಯಾಡ
ಇಬ್ರೂ ಕಾರಭಾರ ಮಾಡಿದ್ರ ಮನೀ ಸಾಗೀತ ಹ್ಯಾಂಗ |

ಒಂದ ಬೇಕು ಒಂದಿಲ್ಲ | ಇಂದ ಮನ್ಯಾಗ್ಹಡೆದರ
ಸೂಲಗಿತ್ತಿ ಶೋಧ ಮಾಡ ಮುಚ್ಚ ಹೋಗ ||

ಚೊಚ್ಚಿಲ ಮಗ ಹುಟ್ಟಿದರ | ಗಚ್ಚಿಲೆ ಬಚ್ಚಲ ಮುಚ್ಚಬೇಕ
ಹುಚ್ಚಿಯೇನು ಕೂಸೀಗಿ ನೀರಾ ಹನಿಸೂದು ಹ್ಯಾಂಗ |

ಕೊಡ ಹರವಿ ಇಡೂ ಜಾಗ । ಸನೀದಾಗ ಮಾಡಬೇಕ
ಉಳ್ಳದ್ವಾಂಗ ಸುರಳೀ ಸುತ್ತಿ ಸಿಂಬಿ ಇಡಬೇಕ ॥

ಸಣ್ಣ ನೂಲಿನ ಎಣ್ಣೀ ಅರಬೀ । ತಣ್ಣಗಾದರ ಕಡಿದಾಡೀನು
ನುಣ್ಣಗೊರಿಸಿ ಕೂಸಿನ ಮೈಯ ಚೊಕ್ಕ ಇಡಬೇಕ ।

ಖುಷಿಯಿಂದ ಕೂತುಕೊಂಡು । ಅಕ್ಕರತಿ ಬಂದು ಎತ್ತಿಕೊಂಡು
ಹೌಸದಿಂದ ಮುದ್ದ ಕೊಟ್ಟು ಜೋಗುಳ ಪಾಡಬೇಕ ॥

**॥ಇಳುವು॥**

ತೊಟ್ಲ ಕಟ್ಟುವ ಜಾಗ ವೈನಿಲ್ಲ । ಪಡಸಲಿಗಿ ಕುಲಾಬಿ ವಂಕಿಲ್ಲ ॥
ರೊಕ್ಕ ಕೊಟ್ಟಿದ ಕಂಬಾರ್ಗ ಹಾಸಿಲ । ವ್ಯಾಳ್ಯಾಕ ಮಾಡಿ ಕುಡುವೊಲ್ಲ ॥
ರೊಕ್ಕ ಹೋದರ ಹರಕತ ಇಲ್ಲ । ಸಂತಿಗ್ಹೋಗಿ ತರ್ತೀನಿ ನಿರ್ವಾಹಿಲ್ಲ ॥

**॥ಏರು॥**

ತಿಂಗಳ ಬಸರಾ ಕೇಳಿಕೊಂಡು । ಗುಂಗ ಭಾಳ ಸೇರ್ಯಾದವ್ವ
ಮಂಗನಾಂಗ ಮಾತನಾಡತಾನ ಮಾಡಲಿನ್ನೇನ ।
ನಿನ್ನ ಮುಂದ ಮಾತ ಒಂದು । ಬಿಚ್ಚಿ ಮುಚ್ಚಿ ಹೇಳ್ತೀನು
ಬಸರಿದ್ದೀನ್ಹೆಸರಿನ್ನೇನಿಡೂನ ॥

**೩ ನೆಯ ಚೌಕ –**

ಏಸ್ದಿನಾ ನೋಡಿದರ । ಧ್ಯಾಸೆಲ್ಲ ಕೂಸಿನ ಮ್ಯಾಲ
ಆಶಾ ಇಲ್ಲ ನನ್ನ ಮ್ಯಾಲ ಪುನಃ ಪುರುಷ ।

ನೆರಿ ಹೊರಿ ಓಣಿ ಓಣಿ । ಫೇರಿ ಹಾಕಿ ನೋಡಿ ಬಾರ
ಧೀರೆ ಆಗತಾದ ತಂದು ಇಡು ಹೊರಸ ।

ಇಂದ ನಿಂತು ಸಂತೀಗ್ಹೋಗಿ । ಮಾಹಿತ ಮಾಡಿ ಸಾಹಿತ್ತಗೊ
ಬೆಲ್ಲ ಅಕ್ಕಿ ಲಕ್ಕ ಚಕ್ಕ ಎಲಿ ಕಾಚಾ ।

ಖಾರೀಖ್ಹೊಬ್ರಿ ಆರಿಸಿ ತಗೊ । ಫೋರಾದ್ರ ಪೂರಯಿಸೀತು
ಬ್ಯಾರೆ ಒಂದು ಪುಡಿ ಕಟ್ಟು ಬೇಕು ಬತ್ತಾಸಾ ॥

ಅಕಲ ಗಡಿಗಿ ಎಲ್ಲಾ ಇಳುವಿ । ಹುಡುಕಿ ತಗಿ ಒಡಕ ಗಡಗಿ
ಬುಡಕಿಡೂ ಅಗಟಗೀಗಿ ಆದೀತಾಯಾಸ ।

ಕುಳ್ಳ ನೋಡಿ ಕೊಂಡು ತಗೊ । ಘಳ್ಳಾದ್ರ ಪಾಡಲ್ಲ
ಮಳ್ಳನಾಂಗ ಮಾಡಬ್ಯಾಡ ಎಂಥ ಗಂಡಸ ॥

**||ಇಳುವು||**

ಕಣ್ಣಿನೊಳಗ ಹಚ್ಚುವ ಕಾಡಿಗಿ । ಹಿಡಿದಿಡಬೇಕಂತ ಮುಂಚಾಗಿ
ನೆರೆಮನಿಗಿ ಹೋಗಿದ್ದ ಸಿಂಪಿಗಿ । ಕಾಡಿಗ್ಗಿಡಿದ ಕಟ್ಲಾಕ ಹೊರಸಿಗಿ
ಅವಸರಕ ಬರಬೇಕ ಶಾವಾಗೀ । ತುಪ್ಪದರ ಮ್ಯಾಗ ಒಂದು ಮಗಿ ॥

**||ಏರು||**

ಹಿಂದ ಮುಂದ ಅಣ್ಣ ತಮ್ಮರು । ಬಂಧು ಬಳಗ ಯಾರಿಲ್ಲ
ಹೇಳಬೇಕ ನನ್ನ ಗೆಣತಿಗಿ ಬಾಣತೀ ಸಾಮಾನ ।

ನಿಮ್ಮಂದ ಮಾತ ಒಂದು । ಬಿಚ್ಚಿ ಮುಚ್ಚಿ ಹೇಳತೀನು
ಬಸರಿದ್ದೀನ್ಹೆಸರಿನ್ನೇನು ಇಡೂನ ॥

**೪ ನೆಯ ಚೌಕ-**
ಮತ್ತ ಬೇಕ ಸುತ್ತಗೆಜ್ಜಿ । ಹತ್ತು ಕೊಟ್ಟರಾಗತಾವ
ಅತ್ತೀ ಹತ್ತರಿಟ್ಟೀದೇನ ಇಪ್ಪತ್ತ ।

ಉಡದಾರ ಉಣ್ಣೀ ಖಡಿ । ಬಂಗಾರ ಪುತಳೀ ಸರ
ಮತ್ತೇನು ಬೇಕ್ಹೇಳ ಇದರ ಹೊರತ ॥

ಅಡದಂಡಿಗಿ ಅಳ್ಳೊಳ್ಳಿ । ಜುಲಪೀ ಹೂವ್ವ ಹಲಪೀಗುಳ್ಳ
ಕಡಿಮಿ ಆದರಿಲ್ಲ ಸನಮತ್ತ ।

ಮಣಿಗಾರ ಮನೀಗ್ಹೋಗಿ । ಎಣ್ಣಿ ಮಣಿ ತಗೊಂಬಾ
ಸರಗಿ ಮುರಗಿ ಸಣ್ಣತಾಯಿತ ॥

**||ಇಳುವು||**

ಕೂಸೀಗ್ಹಾಲ ಹಾಕುವ ಥಾಲೀ ಮಿಳ್ಳಿ । ಸಣ್ಣ ಬಟ್ಟಲದಾಗ ಮಗ ಉಳ್ಳಿ ।
ತವರ ಮನಿದು ತರಹೋಗ ಮಳ್ಳಿ । ಆಯಿಮುತ್ಯಾಂದು ಮಗ ಹೆಸರ್ಹೇಳ್ಳಿ ॥
ಅಕಿಸುತ್ತ ನಡಿಸಿದಾನ ಹೊಳಿ । ಅಂದಿಗಿಂದಗಿ ಲಗು ಹೋಗ ನಾಳಿ ॥

**||ಏರು||**

ಹಡಿಯೂ ದಿನ ಸನೀ ಬಂತು । ಎಂಟೇ ತಿಂಗಳ ಮುಂದುಳೀತು
ಕೆಟ್ಟಗಿಟ್ಟ ಹಡೆದೀ ನಿನ್ನ ಚೆಟ್ಟಾ ಎತ್ತೀನ ।
ನಿನ್ನ ಮುಂದ ಮಾತ ಒಂದು । ಬಿಚ್ಚಿ ಮುಚ್ಚಿ ಹೇಳ್ತೀನು
ಬಸುರಿದ್ದೀನ್ನೆಸರಿನ್ನ ಏನಿಡೂನ ॥

**೫ ನೆಯ ಚೌಕ-**

ಜೋಡ್ನಿ ಎಲ್ಲಾ ಕೂಡ್ಸೂದ್ರೊಳಗ । ದೀಡು ತಿಂಗಳಾಯಿತಪ್ಪ
ತಡದು ಹೊರಗ ಆದಳಲ್ಲಿಂದ ।

ಗಂಡನ ಮುಂದ ಹೇಳ್ತಾಳ । ಸನಿಯಾಕ ಬರುಗುಡವೊಲ್ಳು
ಇದು ಇಲ್ಲಿ ಕೇಳು ನನ್ನ ಮಾತೊಂದ ॥

ಹೆಣ್ಣು ಮಗಳು ಹುಟ್ಟಿದರ । ಬಣ್ಣದ ಒನಕಿ ಸಣ್ಣದು ಬೇಕ
ಗುಳ್ಳೆಪಿಲ್ಲೆ ಹೇಳಿ ಬಾರ ಹೋಗಿ ಇಂದ ।

ಹೆಣ್ಣು ಒಯ್ದು ಮಣ್ಣಾಗ್ಹಾಕು । ನೀನೂ ಹೋದ್ರ ಹರಕತ್ತಿಲ್ಲ
ಉಳಸ್ಯಾಡಿ ಹೊಡದಾನ ಅಲ್ಲಿಂದ ॥

ಕಡಿದಾಡಿ ಬಡಿದಾಡಿ ಗಂಡ । ಹರ್‍ಯಾಗೆದ್ದು ಅಡವೀಗಿ
ಹೊಲಕ ಹೋಗ್ಯಾನ ಹ್ವಾರೇಕ ।

ಹ್ವಾರೇ ಮಾಡಿ ಬರೂದರೊಳಗ । ನೀರ ಬೂದಿ ತೊಯಿಸಿಟ್ಟು
ಹೊಲಿಯ ತಗದಾಳಪ್ಪ ಎಲ್ಲಾ ಪಾಕ ॥

**||ಇಳುವು||**

ನೀ ನನ್ನ ಬಡಿಯಬಾರದಿತ್ತ । ಕೂಸೀಗಿ ಪೆಟ್ಟ ಪೂರಸ್ತ
ಹೆಣ್ಣಲ್ಲ ಗಂಡ ಹುಟ್ಟಿತ್ತ । ಥೇಟ ಹೋಲೀಕಿ ನಿನ್ನಾಂಗೆ ಇತ್ತ
ಗಂಡ ಅಳತಾನ ಭೋರಾಡಿ ಕುಂತ । ಮೊದಲೇ ದೇವರು ಕುಡಬಾರದಿತ್ತ ॥

**||ಏರು||**

ಜನವಾಡದೂರಾ ನೆನದಾನ ಪೀರಾ । ಗುರುಹರ ಮತಿ ಕೊಟ್ಟ
ನಾನಾಸಾಬ ಮಾಡ್ಯಾನ ಕವಿ ಇದನಾ ।
ನಿನ್ನ ಮುಂದ ಮಾತೊಂದು ಬಿಚ್ಚಿ ಮುಚ್ಚಿ ಹೇಳ್ತೀನು
ಬಸರಿದ್ದೀನ್ನೆಸರಿನ್ನ ಏನಿಡೂನ ॥

***ರಚನೆ :*** ನಾನಾಸಾಬಕವಿ

***ಕೃತಿ :*** ಜೀವನ ಸಂಗೀತ